ಚಲನ ಚಿತ್ರವಾಗುತ್ತಿರುವ ಕಾದಂಬರಿ

ಸತ್ಯವಾನನಿಲ್ಲದ ಸಾವಿತ್ರಿ



ಪದ್ಮಾ ಶ್ರೀಧರ್

ಭಾಗೀರಥಿ ಪ್ರಕಾಶನ : 17

ಸತ್ಯವಾನನಿಲ್ಲದ ಸಾವಿತ್ರಿ

ಪದ್ಮಾ ಶ್ರೀಧರ್

ಭಾಗೀರಥಿ ಪ್ರಕಾಶನ
190 (ಮಹಡಿ ಮೇಲೆ), 3ನೇ ಅಡ್ಡರಸ್ತೆ,
2ನೇ ಮುಖ್ಯ ರಸ್ತೆ, ಹನುಮಂತನಗರ,
ಬೆಂಗಳೂರು - 560 019.

Sathyavananillada Savithri -A novel by Mrs. Padma Sridhar and published by Bhagirathi Prakashana, 190, First Floor, 3rd Cross, 2nd Main, Hanumanthanagar, Bangalore -560 019.

ಮುದ್ರಣ : 1997

ಪುಟಗಳು: 256

ಬೆಲೆ ರೂ. **60-00**

ಅಕ್ಷರ ಜೋಡಣೆ:
ಇಂಪ್ರೆಸಿವ್ ಗ್ರಾಫಿಕ್ಸ್ ಆ್ಯಂಡ್ ಡಿಸೈನ್ಸ್
ಬೆಂಗಳೂರು - 560 085. Ph.: 6602129

ಮುದ್ರಕರು:
ಲೇಸರ್ ವ್ಯೂ
ಬೆಂಗಳೂರು - 560 085. Ph.: 6602129

ಲೇಖಕಿಯ ಮಾತು

ಸ್ವಾರ್ಥ, ಸ್ನೇಹ, ತ್ಯಾಗ ಇತ್ಯಾದಿ ಮಾನವನಿಗೆ ಸಹಜವಾದ ಗುಣಗಳು. ಒಬ್ಬ ತಾಯಿಯ ಹೊಟ್ಟೆಯಲ್ಲಿ ಹುಟ್ಟಿ, ಒಂದೇ ಮನೆಯಲ್ಲಿ ಬೆಳೆದರೂ, ಬೆಳೆದಂತೆ ಗುಣ, ಸ್ವಭಾವಗಳು ಬದಲಾಗುತ್ತವೆ. ಇದಕ್ಕೆ ಅವರವರ ಅದೃಷ್ಟವೂ ಕಾರಣವಾಗಬಹುದು. ಈ ನಿಟ್ಟಿನಲ್ಲಿ ಒಂದು ಕಥಾವಸ್ತುವಿನ ಸುತ್ತ ಪಾತ್ರಗಳನ್ನು ರಚಿಸಿ ಕಲ್ಪನೆಯ ಹಂದರಲ್ಲಿ ಬೆಳೆಸಿ ಬರೆದಿರುವ ಕಾದಂಬರಿ *ಸತ್ಯವಾನನಿಲ್ಲದ ಸಾವಿತ್ರಿ*.

ಕನ್ನಡಪ್ರಭ ದಿನಪತ್ರಿಕೆಯಲ್ಲಿ ದೈನಿಕ ಧಾರಾವಾಹಿಯಾಗಿ ಪ್ರಕಟಗೊಂಡ ಈ ಕಾದಂಬರಿ ಓದುಗರ ಮೆಚ್ಚುಗೆಯನ್ನು ಗಳಿಸಿ, ಚಲನಚಿತ್ರ ನಿರ್ಮಾಪಕರ ಗಮನವನ್ನೂ ಸೆಳೆದುದು, ನನ್ನ ಪರಿಶ್ರಮಕ್ಕೆ ದೊರೆತ ಪ್ರತಿಫಲ. ಕನ್ನಡಪ್ರಭದಲ್ಲಿ ಪ್ರಕಟಿಸಿದ ಸಂಪಾದಕ ಶ್ರೀ ವೈಎಸ್‌ಕೆ ಅವರಿಗೆ ನನ್ನ ಕೃತಜ್ಞತೆಗಳು.

ಕಾದಂಬರಿಯನ್ನು ಈಗ ಪುಸ್ತಕ ರೂಪದಲ್ಲಿ ತರುವ ಹೊಣೆಯನ್ನು ಹೊತ್ತಿರುವ ಲೇಖಕ - ಪ್ರಕಾಶಕ ಶ್ರೀ ರಾಜಾಚೆಂಡೂರ್‌ರವರಿಗೆ ನನ್ನ ಕೃತಜ್ಞತೆಗಳು. ಆಕರ್ಷಕ ಮುಖಪುಟವನ್ನು ಚಿತ್ರಿಸಿಕೊಟ್ಟ, ಅರುಂಧತಿ ಆಚಾರ್ಯ ಅವರಿಗೂ, ಈ ಪುಸ್ತಕದ ಪ್ರಕಟಣೆಯಲ್ಲಿ ಪಾಲ್ಗೊಂಡ ತಂತ್ರಜ್ಞರೆಲ್ಲರಿಗೂ ಹಾಗೂ ಭಾಗೀರಥಿ ಪ್ರಕಾಶನದ ಬಳಗದವರೆಲ್ಲರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

282, 3ನೇ ಅಡ್ಡರಸ್ತೆ,
ನವಿಲು ರಸ್ತೆ, ಕುವೆಂಪುನಗರ
ಮೈಸೂರು - 570 023

ತಮ್ಮ ವಿಶ್ವಾಸಿ
ಪದ್ಮಾ ಶ್ರೀಧರ್

ಅರ್ಪಣೆ

ನನ್ನ ಹಿರಿಯರು
ತಂದೆ, ದಿ|| ವೆಂಕಟಸುಬ್ಬಯ್ಯನವರಿಗೆ,
ತಾಯಿ, ದಿ|| ಜಯಲಕ್ಷ್ಮಮ್ಮನವರಿಗೆ,
ಹಾಗೂ,
ಮಾವ, ದಿ|| ಭಾರತೀ ಕೃಷ್ಣಪ್ಪನವರಿಗೆ,
ಅತ್ತೆ, ದಿ|| ಶಂಕರಮ್ಮನವರಿಗೆ,
ಶ್ರದ್ಧಾಂಜಲಿಯೊಂದಿಗೆ.

ಪದ್ಮಾ ಶ್ರೀಧರ್
ಮೈಸೂರು

ಸತ್ಯವಾನನಿಲ್ಲದ ಸಾವಿತ್ರಿ

ಸಣ್ಣದನಿಯಲ್ಲಿ ಹಾಡನ್ನು ಹೇಳಿಕೊಂಡು ಹೂಗಳನ್ನು ಆರಿಸಿ ದಾರದಲ್ಲಿ ಕಟ್ಟುತ್ತಿದ್ದ ಸಾವಿತ್ರಿಯ ಕೈಗಳು ಹೆಜ್ಜೆಯ ಸಪ್ಪಳವನ್ನು ಕೇಳಿ ಸ್ಥಗಿತಗೊಂಡವು. ಕಿಟಕಿಯ ಕಡೆಗೆ ತಿರುಗಿ "ಯಾರು?" ಎಂದು ಕೇಳಿದಳು.

"ನಾನು ಮುಕುಂದ, ಸುಕನ್ಯ ಇಲ್ವಾ?" ಮುಕುಂದ ಕೇಳಿದ.

"ಇಲ್ಲ. ಎಲ್ಲೋ ಹೋಗಿದಾಳೆ ಅಮ್ಮ ಇದಾರೆ ಬನ್ನಿ" ಎಂದು ನುಡಿದು "ಅಮ್ಮಾ...." ಎಂದು ಕುಳಿತಲ್ಲೇ ದನಿ ಏರಿಸಿ ಕರೆದಳು.

"ಏನೇ..." ಎಂದು ಆಕೆ ಒಳಗಿನಿಂದಲೇ ಆಡಿದ್ದು ಹೊರಗೆ ನಿಂತಿದ್ದವರಿಗೆ ಕೇಳಿಸಿತ್ತು. ಮುಕುಂದ ಮುಂದೆ ಬಂದು ಕಾಲಿಂಗ್‌ಬೆಲ್ ಒತ್ತಿದ್ದ. ಬಾಗಿಲು ತೆಗೆದ ಸುಭದ್ರಮ್ಮ ಮುಕುಂದನನ್ನು ಕಂಡು ಸಂಭ್ರಮದಿಂದ "ಬನ್ನಿ...ಬನ್ನಿ" ಎಂದಳು ಸೆರಗಿಗೆ ಕೈ ಒರೆಸುತ್ತಾ.

"ನಾನು ಬರ್ತೀನಿ ಅಂತ ಸುಕನ್ಯಂಗೆ ಹೇಳಿದ್ದೆ..." ಮುಕುಂದ ಅತ್ತಿತ್ತ ನೋಡುತ್ತಾ ಹೇಳಿದ್ದ.

"ಹುಂ. ಹೌದು ಹೇಳಿದ್ಲು. ಇಲ್ಲೇ ಮಾರ್ಕೆಟ್ಟಿಗೆ ಹೋಗಿದಾಳೆ. ಈಗ ಬಂದು ಬಿಡ್ತಾಳೆ ಕೂತ್ಕೊಳ್ಳಿ." ಆಕೆ ಒಳಕ್ಕೆ ಕರೆದಳು.

ಮುಕುಂದನ ಹಿಂದೆ ನಿಂತಿದ್ದ ಅವನ ಸ್ನೇಹಿತ ಅತ್ತ ಇತ್ತ ಮತ್ತೊಮ್ಮೆ ನೋಡಿದ. ಕಿಟಕಿಯಲ್ಲಿ ಕಂಡ ಚೆಲುವೆ ಮತ್ತೆ ಕಾಣಲಿಲ್ಲ. ಅವರಿಬ್ಬರೂ ಹೊರಗೆ ನಿಂತು ಮಾತಾನಾಡುತ್ತಿರುವಷ್ಟರಲ್ಲಿ, ಸುಕನ್ಯ ಬಂದಳು.

ಮುಕುಂದನನ್ನು ಕಂಡು ಮುಗುಳ್ನಗುತ್ತಾ ಅತೀ ಸಂತೋಷವನ್ನು ವ್ಯಕ್ತಪಡಿಸಿ, "ಹಾಯ್ ಮುಕುಂದ್" ಎಂದಿದ್ದಳು. ಸುರೇಶ ಅವಳನ್ನೇ ಬೆರಗಾಗಿ ನೋಡಿದ.

"ಎಷ್ಟು ಹೊತ್ತಾಯ್ತು ಬಂದು? ಕಾಯಿಸಿದೆ ಅಂತನ್ನಿಸುತ್ತೆ.. ಸಾರಿ...." ಎಂದು ರಾಗವಾಗಿ ನುಡಿದು ಕ್ಷಮಾಪಣೆ ಕೋರಿದಳು.

"ಇಲ್ಲ...ಇದೇ ತಾನೇ ಬಂದೆವು. ಇವನು ನನ್ನ ಸ್ನೇಹಿತ ಸುರೇಶ ಗೊತ್ತಲ್ಲ.." ಮತ್ತೊಮ್ಮೆ ಪರಿಚಯಿಸಿದ.

"ನಮಸ್ಕಾರ" ಎಂದ ಸುರೇಶ ಕೈ ಮುಗಿದು.

ಕೈ ಮುಗಿದು, 'ಬನ್ನಿ ಒಳಗೆ' ಎಂದು ಕರೆಯುತ್ತಾ ಸುಕನ್ಯ ಮುಂದಾಗಿ ಮನೆಯೊಳಗೆ ಹೋದಳು. ಇಬ್ಬರೂ ಅವಳ ಹಿಂದೆ ನಡೆದರು. ಅತಿ ಚಿಕ್ಕದೂ ಅಲ್ಲದ, ಅಷ್ಟೇನೂ ದೊಡ್ಡದೂ ಅಲ್ಲದ ಮನೆ ನೀಟಾಗೇನಿರಲಿಲ್ಲ. ಹಾಲಿನಲ್ಲಿ ಹಾಕಿದ್ದ ಕುರ್ಚಿಗಳ ಮೇಲೆ ಇಬ್ಬರೂ ಕುಳಿತರು. ಸುರೇಶ ಕಿಟಕಿಯಲ್ಲಿ ಕಂಡ ಚೆಲುವೆ ಮತ್ತೆ ಕಂಡಾಳೇನೋ ಎಂಬ ಹಂಬಲದಿಂದ ಅತ್ತಿತ್ತ ಆಗಾಗ್ಗೆ ನೋಡುತ್ತಲಿದ್ದ.

ಸುಕನ್ಯ ಎರಡು ಕಪ್‌ಗಳಲ್ಲಿ ಕಾಫಿಯನ್ನು ಒಂದು ಪ್ಲೇಟ್‌ನಲ್ಲಿ ಬಿಸ್ಕತ್ತುಗಳನ್ನೂ ತಂದಿತ್ತಳು. ಮುಕುಂದ ಮೆಲ್ಲಗೆ ಮಾತಿಗೆ ಆರಂಭಿಸಿದ.

"ನಾನು, ನಾಳೆ ಹಳ್ಳಿಗೆ ಹೋಗ್ತಾ ಇದೀನಿ. ನನ್ನ ಜತೆಯಲ್ಲಿ ನೀನೂ ಬಂದರೆ, ...ಮನೆಯವರನ್ನೆಲ್ಲಾ ನೋಡಿದ ಹಾಗಾಗುತ್ತೆ."

"ತಡೀರಿ ಅಮ್ಮನ್ನ ಕೇಳ್ತೀನಿ" ಸುಕನ್ಯ ಒಳಗೆ ಹೋಗಿ ತಾಯಿಗೆ ಮುಕುಂದ ಹೇಳಿದ ವಿಷಯ ತಿಳಿಸಿದಳು. ಆಕೆಯೂ ಅವಳೊಡನೆ ಹೊರಗೆ ಬಂದಳು. ಮುಕುಂದ ಮತ್ತೊಮ್ಮೆ ಅದೇ ವಿಷಯವನ್ನು ಹೇಳಿದ.

"ನಾಳೇನೇ...? ನಾಳೇನೇ ಬೇಡ. ಮೊದಲು ನೀವು ನಿಮ್ಮ ಮನೆಯವರೊಡನೆ ಮಾತನಾಡಿ... ಮೊದಲು ಅವರುಗಳು ಒಪ್ಪಲಿ"

"ನನಗೆ ಮತ್ತೆ ರಜ ಸಿಗಬೇಕಲ್ಲ."

"ಹಾಗಲ್ಲ. ನಿಮ್ಮ ಮನೆಯವರು ಸಂಪ್ರದಾಯಸ್ಥರು ಅಂತ ಅಂತೀರಿ ಅವರು

ಒಪ್ಪದೇ ಮೊದಲಿಗೇ ನಿಮ್ಮ ಜತೆಯಲ್ಲಿ ಬರುವುದನ್ನು ಅವರು ಇಷ್ಟಪಡದಿರಬಹುದು"

"ನೀವು ನಾಳೆ ಹೋಗಿ, ಮುಂಚಿತವಾಗಿ ಮಾತನಾಡಿ. ನಾವು ನಾಡಿದ್ದು ನಿಮ್ಮ ಹಳ್ಳಿಗೆ ಬರ್ತೀವಿ.. ಆಗಬಹುದಲ್ಲಾ. ನೀವೇನಂತೀರಿ ಸುರೇಶ್?" ಸುಕನ್ಯ ಯಾವ ಅಳುಕಿಲ್ಲದೇ ಪ್ರಶ್ನೆಯೊಂದಿಗೆ ಪರಿಹಾರವನ್ನು ಸೂಚಿಸಿದ್ದಳು.

ಸುರೇಶ ತಲೆ ಆಡಿಸಿ, "ಇದು ಒಂದು ತರಹಕ್ಕೆ ಸರಿ ಅನ್ನಿಸುತ್ತೆ ಕಣಪ್ಪಾ" ಎಂದಿದ್ದ ಮುಕುಂದನ ಕಡೆ ತಿರುಗಿ.

"ಹಾಗಂತೀರಾ...?" ಮುಕುಂದ ಪೆದ್ದಾಗಿ ಕೇಳಿದ್ದ.

"ಹೌದು. ಅದೇ ಸರಿ. ಮುಂದಾಗಿ ನೀವು ಹೋಗಿ. ಎಲ್ಲಾ ವಿಷಯ ಮಾತನಾಡಿ. ನಾಡಿದ್ದು ನಾವುಗಳು ಬರ್ತೀವಿ" ಸುಭದ್ರಮ್ಮ ನುಡಿದಳು.

ಒಂದು ಇತ್ಯರ್ಥವಾದ ಮೇಲೆ ಮುಕುಂದ, ಸುರೇಶ ಅಲ್ಲಿಂದ ಹೊರಟರು. ಸುರೇಶ ಮತ್ತೊಮ್ಮೆ ಸುತ್ತಲೂ ನೋಡಿದ. ಕಿಟಕಿಯಲ್ಲಿ ಕಂಡ ಚೆಲುವೆ ಎಲ್ಲೂ ಕಂಡು ಬರಲಿಲ್ಲ. ನಿರಾಸೆಯಿಂದ ಸ್ನೇಹಿತನೊಡನೆ ಹೆಜ್ಜೆ ಹಾಕಿದ.

ರಸ್ತೆಯಲ್ಲಿ ಇದ್ದಕ್ಕಿದ್ದಂತೆ ಮುಕುಂದ ಕೇಳಿದ.

"ನೀನೂ ಬಾ. ನನ್ನ ಜತೆಯಲ್ಲಿ ಹಳ್ಳಿಗೆ.. ಏನಂತೀಯಾ?".

"ನಾನಾ? ಈಗೇಕೆ?"

"ಒಬ್ಬನೇ ಹೋಗೋಕ್ಕೆ ಬೇಜಾರು. ಅಲ್ಲದೆ ಸುಕನ್ಯನೂ ಬರಲ್ಲ ಎಂದಳು."

"ಯಾಕೆ! ಮದುವೆ ವಿಷಯ ಮಾತನಾಡಕ್ಕೆ ಹೆದರಿಕೇನಾ?" ನಕ್ಕ.

"ಹುಂ. ಒಂಥರಾ ಹೆದರಿಕೇನೇ. ಮನೆಯಲ್ಲೊಂದು ಮುದಿ ಹುಲಿ ಇದೆ. ವಿನಾಕಾರಣ ಗುರ್ ಅಂತಿರುತ್ತೆ..... ಎಲ್ರೂ ಅದಕ್ಕೆ ಹೆದರ್‍ತಾರೆ."

"ಓ ತಾತಾನಾ?... ಅವರನ್ನೇ ಮೊದಲು ಒಂದ್ಮಾತು ಕೇಳಿ ಲವ್ ಮಾಡಿದ್ರೆ ಅವರು ಗುರ್ ಅಂತಿರಲಿಲ್ಲ." ತಮಾಷೆ ಮಾಡಿದ.

"ಸರಿ, ಸರಿ. ಅವರನ್ನು ಕೇಳಿದ್ದಿದ್ರೆ, ನಮ್ಮ ಆನಂದನಿಗೆ ಮಾಡಿದ ಹಾಗೇ ನನಗೂ ಮಾಡ್ತಿದ್ರು...." ಬೇಸರದ ಧ್ವನಿಯಲ್ಲಿ ನುಡಿದ ಮುಕುಂದ.

"ನಿಮ್ಮ ಆನಂದನಿಗೆ ಏನಾಯ್ತೋ ನನಗೆ ತಿಳೀದು. ಆದರೆ ಲವ್ ಮಾಡುವ ಮೊದಲೇ ಇದನ್ನೆಲ್ಲ ಯೋಚಿಸಬೇಕಿತ್ತಲ್ಲಾ?"

"ಅದೆಲ್ಲ ಹಾಗೇ ಯೋಚಿಸಿ ಮಾಡುವ ಕೆಲಸವಲ್ಲ. ನೀನೂ ಯಾರನ್ನಾದ್ರೂ

ಲವ್ ಮಾಡಿದ್ದಿದ್ರೆ ನಿನಗೆ ತಿಳೀತಿತ್ತು."

ಸುರೇಶನ ಕಣ್ಮುಂದೆ ಕಿಟಕಿಯಲ್ಲಿ ಕಂಡ ಚೆಲುವೆಯ ಮುಖ ತೇಲಿ ಬಂತು. ಅವಳ ಬಗ್ಗೆ ಕೇಳೋಣವೆಂದುಕೊಂಡ. ಆದರೆ ಮುಕುಂದ ಮತ್ತೆ ಮಾತನಾಡಿದ್ದ.

"ನೀನು ನಮ್ಮ ಹಳ್ಳಿ, ಮನೆ, ಮನೆಯವರನ್ನು ನೋಡಿದ ಹಾಗಾಗುತ್ತೆ. ಎಷ್ಟು ವರ್ಷದಿಂದ ಸ್ನೇಹಿತರಾಗಿದೀವಿ. ನಮ್ಮೂರಿಗೆ ನೀನು ಬಂದೇ ಇಲ್ಲ.

"ನೀನು ಕರೆದಿರಲಿಲ್ಲ. ನಾನು ಬಂದಿರಲಿಲ್ಲ. ಈಗ ನಿನ್ನ ಕೆಲಸವಾಗ ಬೇಕಾಗಿದೆ. ಅದಕ್ಕೇ ಕರೀತಿದಿಯಲ್ವಾ?"

"ಏನಾದ್ರೂ ಅಂದ್ಕೊ. ಬರ್ತೀಯೋ ಇಲ್ವೋ?"

"ಓ. ಕೇ. ಅಮ್ಮನ್ನ ಒಂದ್ಮಾತು ಕೇಳಿ ತಿಳಿಸ್ತೀನಿ. ಅವರುಗಳು ಎಲ್ಲಾದರೂ ಹೋಗುವ ಪ್ಲಾನ್ ಇದ್ದರೆ ನಾನು ಬರಕ್ಕಾಗಲ್ಲ"

"ನಡೀ ಈಗಲೇ ನಿನ್ನ ಮನೆಗೆ ಹೋಗಿ ಮಾತನಾಡ್ಡೋಣ."

"ಅಂತೂ ತುಂಬಾ ಅವಾಂತರದಲ್ಲಿದ್ದೀಯ ನೀನು...."

"ಎರಡು ವರ್ಷದಿಂದ ತಡೆದೂ ತಡೆದೂ ಈಗ ಒಂದು ತೀರ್ಮಾನಕ್ಕೆ ಬಂದಿದೀನಿ. ಈಗಲೂ ನಿಧಾನ ಮಾಡುವುದೇಕೆ ಅಂತ..."

"ವೆರಿಗುಡ್..."

"ಸರಿ. ನಮ್ಮ ತಾತನಿಗೆ ಎಲ್ಲಾ ಹೇಳಿ ನೀನೇ ಕನ್ವಿನ್ಸ್ ಮಾಡಬೇಕು."

"ನಿನ್ನ ಪರವಹಿಸಿ ನಾನು ಮಾತನಾಡಬೇಕಾ?"

"ತಾತ ಹೊಸಬರ ಹತ್ತಿರ ಚೆನ್ನಾಗಿ ಮಾತನಾಡ್ತಾರೆ. ನಮ್ಮನ್ನೆಲ್ಲ ಕಂಡರೆ ಅಸಡ್ಡೆ..."

"ಒಂದು ವೇಳೆ ಅವರು ನನ್ನ ಮಾತನ್ನು ಒಪ್ಪದಿದ್ದರೆ....?"

"ಪ್ಲೀಸ್ ಅಪಶಕುನ ನುಡಿಬೇಡ. ಅವರು ಒಪ್ಪಲಿ ಅಂತ ಹಾರೈಸು. ಒಪ್ಪುವಂತೆ ಮಾತನಾಡು. ನಾನು ಸುಕನ್ಯಂಗೆ ಮಾತು ಕೊಟ್ಟು ಬಿಟ್ಟಿದೀನಿ."

"ಚೆನ್ನಾಗಿದೆ ನಿನ್ನ ಮಾತು ನನ್ನನ್ನ ಕೇಳಿ ಮಾತು ಕೊಟ್ಟೆಯಾ? ಹೋಗಲಿ ಸ್ನೇಹಿತ ಅಂತ ಭರವಸೆ ಕೊಡ್ತೀನಿ. ನಾನು ಅವರೊಡನೆ ಮಾತನಾಡ್ತೀನಿ. ಆದರೆ ಎಡವಟ್ಟಾದರೆ ನನ್ನನ್ನ ಬೈಯಬೇಡ."

"ಇಲ್ಲ. ನನಗೆ ನಿನ್ನ ಮೇಲೆ ನಂಬಿಕೆ ಇದೆ. ನೀನು ಕೈ ಹಾಕಿದ ಕೆಲಸ ಆಗೇ ಆಗುತ್ತೆ."

"ಓ. ಕೆ. ನಿನ್ನ ಕೆಲಸ ಮಾಡಿಕೊಟ್ಟರೆ ನನಗೇನು ಲಾಭ?"

"ಸುಕನ್ಯಳ ತಂಗಿ ಒಬ್ಬಳಿದ್ದಾಳೆ. ತುಂಬಾ ಚೆನ್ನಾಗಿದ್ದಾಳೆ. ಅವಳನ್ನು ನಿನಗೆ ಪ್ರಪೋಸ್ ಮಾಡಿಸ್ತೀನಿ...."

ಸುರೇಶ ಹ್ಹಾ...ಹ್ಹಾ...ಹ್ಹಾ... ಎಂದು ನಕ್ಕ. ಕಿಟಕಿಯಲ್ಲಿ ಕಂಡ ಚೆಲುವೆಯೇ ಸುಕನ್ಯಳ ತಂಗಿ ಇರಬೇಕೆಂದುಕೊಂಡ. ಅವನ ಮನ ಹಿಗ್ಗಿತ್ತು.

"ನಿನಗಿಷ್ಟವಿಲ್ಲದಿದ್ದರೆ ಬೇಡ. ಬಲವಂತವೇನಿಲ್ಲ. ಮೊದಲು ನನಗೆ ಸಹಾಯ ಮಾಡು. ಆಮೇಲೆ ಏನು ಬೇಕಾದ್ರೂ ಸಹಾಯ ಮಾಡ್ತೀನಿ.... ಸ್ನೇಹಿತರು ಅಂದರೆ ಅಷ್ಟಾದ್ರೂ ಬೇಡವೇ?"

ಸುರೇಶ ಉತ್ತರಿಸಲಿಲ್ಲ. ಏನೋ ಯೋಚಿಸುತ್ತಿದ್ದ.

ಮಗನೊಡನೆ ಮನೆಗೆ ಬಂದ ಅವನ ಸ್ನೇಹಿತನನ್ನು ವಿಶ್ವಾಸದಿಂದ ಮಾತನಾಡಿಸಿದರು ಸುರೇಶನ ತಾಯಿ ಪಂಕಜಮ್ಮ. ಊಟದ ಹೊತ್ತಾದುದರಿಂದ ಅವನನ್ನು ಊಟಕ್ಕೆ ಎಬ್ಬಿಸಿದರು. ಮುಕುಂದನಿಗೆ ಅದು ಅಪರೂಪವೇನಲ್ಲ. ಅವರಿಬ್ಬರೂ ಸ್ನೇಹಿತರಾದಾಗಿನಿಂದ್ಲ ಆಗಾಗ್ಗೆ ನಡೆದು ಬಂದದ್ದೇ... ಉಪಚಾರ ಮಾಡಿಸಿಕೊಳ್ಳದೇ ಊಟಕ್ಕೆ ಕೂರುತ್ತಿದ್ದ. ಹೋಟೆಲ್ಲಿನ ಊಟಕ್ಕಿಂತ ಮನೆಯ ಊಟದ ರುಚಿ ಹೆಚ್ಚೆಂದು ಅವನಿಗೆ ತಿಳಿದಿತ್ತು. ಊಟ ಮುಗಿಯುತ್ತಾ ಬಂದಿತ್ತು. ಮುಕುಂದ ಏನೂ ಆಡದ್ದನ್ನು ಕಂಡು ಸುರೇಶನೇ ನುಡಿದ.

"ಅಮ್ಮ. ಮುಕುಂದ ನಾಳೆ ಹಳ್ಳಿಗೆ ಹೊರಟಿದ್ದಾನೆ. ನನ್ನನ್ನು ಬಾ ಅಂತ ಕರೀತಿದಾನೆ. ಹೋಗಿ ಬರ್ಲಾ?"

"ಹೋಗ್ಬೇಕು ಅಂತ ಆಸೆ ಇದ್ದರೆ ಹೋಗ್ಬಾ...."

"ನಿಮಗೆಲ್ಲೂ ಹೋಗುವ ಪ್ರೋಗ್ರಾಂ ಇಲ್ಲವಲ್ಲ? ಹೇಗೂ ಎರಡು ದಿನ ಹಬ್ಬದ ರಜವಿದೆ. ನಾನು ಎರಡು ಮೂರು ದಿನ ಆದ್ಮೇಲೆ ಬರ್ತೀನಿ."

"ಪರವಾಗಿಲ್ಲ. ಹೋಗಿ ಬಾ." ಆಕೆ ವಿಶ್ವಾಸದಿಂದ ನುಡಿದರು. ಮುಕುಂದ ಸ್ವಲ್ಪ ಗೆಲುವಾದ. ಅಲ್ಲಿಂದ ಹೊರಟಾಗ ಪಂಕಜಮ್ಮನ ಕಾಲುಗಳಿಗೆ ಬಾಗಿ ನಮಸ್ಕಾರ ಮಾಡಿ ಆಶೀರ್ವಾದ ಪಡೆದ.

"ಏನಯ್ಯಾ ಬಹಳ ಮಸ್ಕಾ ಹೊಡೀತಿದೀಯಾ?" ಸುರೇಶ ರೇಗಿಸಿದ.

"ಹಿರಿಯೋರ ಆಶೀರ್ವಾದವಿದ್ದರೆ ಎಲ್ಲಾ ಸುಗಮವಾಗಿ ನೆರವೇರುತ್ತೆ ಅಂತ ತಿಳಿದೋರು ಹೇಳ್ತಾರೆ. ಅದಕ್ಕೆ...."

"ತಪ್ಪೇನಿಲ್ಲ. ಒಳ್ಳೆ ರೂಢಿನೇ.... ನಾಳೆ ಎಷ್ಟು ಹೊತ್ತಿಗೆ ಹೊರಡೋಣ?"

"ನಾಳೆ ರಾತ್ರಿಯ ಬಸ್ಸಿಗೆ ಹೊರಟು ಬಿಡೋಣ. ನಾಡಿದ್ದು ಬೆಳಿಗ್ಗೆ ಹಳ್ಳಿ ಸೇರ್ತೀವಿ. ಬರ್ಲ್ಲಾ ನಾನು?" ಸ್ನೇಹಿತನಿಗೆ ಹೇಳಿ ಹೊರಟ ಮುಕುಂದ.

ಸುರೇಶ ಒಳಗೆ ಬಂದು ಬಾಗಿಲನ್ನು ಮುಚ್ಚಿ ಪತ್ರಿಕೆಗಳನ್ನು ಹಿಡಿದು ತನ್ನ ರೂಮಿಗೆ ಬಂದ. ಬಟ್ಟೆ, ಬದಲಾಯಿಸಿ, ಪೇಪರು ಹಿಡಿದು ಮಂಚದ ಮೇಲೆ ಮಲಗಿ ಕಾಲ ಮೇಲೆ ಕಾಲು ಹಾಕಿ ಕಣ್ಣು ಮುಚ್ಚಿದ. ಮನಸ್ಸು ಬೇರೇನನ್ನೋ ಚಿಂತಿಸುತ್ತಿತ್ತು.

* * *

ಮಾರನೆಯ ರಾತ್ರಿ ಗೆಳೆಯರಿಬ್ಬರೂ ಶಿವಮೊಗ್ಗಕ್ಕೆ ಹೋಗುವ ಬಸ್ಸನ್ನು ಹತ್ತಿದರು. ಬೆಳಗಿನ ಝಾವದಲ್ಲಿ ಬಸ್ಸು ಊರನ್ನು ಸೇರಿದಾಗ ಸುರೇಶ ಕಣ್ಣುಬಿಟ್ಟ. ಮುಕುಂದನಿಗೆ ಆತಂಕದಿಂದ ನಿದ್ದೆ ಬಂದಿರಲಿಲ್ಲ. ಬಸ್ಸಿನಿಂದ ಇಳಿದು, ಬಸ್ಸ್ ಸ್ಟ್ಯಾಂಡ್ ಹೋಟೆಲ್ಲಿನಲ್ಲಿ ಸುಮಾರಾಗಿದ್ದ ಬಿಸಿ ಕಾಫಿಯನ್ನ ಕುಡಿದು ತೀರ್ಥಹಳ್ಳಿಗೆ ಹೊರಡಲಿದ್ದ ಬಸ್ಸನ್ನು ಏರಿದರು.

ನೋಡುತ್ತಿದ್ದಂತೆಯೇ ಸೂರ್ಯ ಬೆಟ್ಟದ ಮರೆಯಿಂದ ಮೇಲೇರುತ್ತಿದ್ದ. ಸೂರ್ಯೋದಯದ ಹೊಂಬೆಳಕಿನಲ್ಲಿ ಕಂಡು ಬರುತ್ತಿದ್ದ ಮಲೆನಾಡಿನ ಪ್ರಕೃತಿ ಸೌಂದರ್ಯವನ್ನು ವೀಕ್ಷಿಸುತ್ತಾ ಕುಳಿತಿದ್ದ ಸುರೇಶನನ್ನು ಮುಕುಂದ ಮಾತಿಗೆ ಎಳೆದ.

"ನಮ್ಮ ಹಳ್ಳಿಯ ಬಸ್ಸನ್ನೇರುತ್ತಿದ್ದಂತೆಯೇ ಮೌನವಾಗಿ ಬಿಟ್ಟೆಯಲ್ಲಾ. ತಾತನ ಹತ್ತಿರ ಹೇಗೆ ಮಾತಾಡ್ತೀಯಾ ಮತ್ತೆ?"

"ನಿಮ್ಮ ತಾತನ ಬಗ್ಗೆ ಚಿಂತಿಸುತ್ತಿಲ್ಲ ನಾನು. ಮಲೆನಾಡಿನ ಸೌಂದರ್ಯವನ್ನು ಕಣ್ಣಿನಲ್ಲಿ ತುಂಬಿಕೊಳ್ಳುತ್ತಿದೀನಿ. ಎಷ್ಟು ಸೊಗಸಾಗಿದೆ. ಅಲ್ವಾ?"

"ನೀನು ಮೊಟ್ಟ ಮೊದಲ ಬಾರಿಗೆ ನೋಡುತ್ತಿದೀಯ, ನಿನಗೆ ಸೊಗಸು ಅಂತನ್ನಿಸುತ್ತೆ. ನಮಗೆ ಸರ್ವೇ ಸಾಮಾನ್ಯ ಎನಿಸಿ ಬಿಟ್ಟಿದೆ."

"ಅದು ನಿಜ ಅನ್ನು. ನೀನು ಹುಟ್ಟಿ ಬೆಳೆದದ್ದು ಇಲ್ಲೇ ತಾನೇ.."

"ಅದಕ್ಕೆ ಬೇಜಾರಾಗಿ ಹಠ ಮಾಡಿ, ಬೆಂಗಳೂರು ಸೇರಿದ್ದು ನಾನು"

"ನೀನು ಏನೇ ಅನ್ನು. ಇಲ್ಲಿಯ ಈ ವಾತಾವರಣ ಬೆಂಗಳೂರಿನಲ್ಲಿ ಎಲ್ಲಿದೆ. ನಾನು ಹೇಳುವುದನ್ನು ನೀನು ಕೇಳುವುದಾದ್ರೆ. ನೀನು ಯಾವುದಾದರೂ ಮಲೆನಾಡಿನ ಸುಂದರಿಯನ್ನು ಮದುವೆಯಾಗಿ, ಇಲ್ಲೇ ಏಕೆ ಸೆಟ್ಲ್ ಆಗಬಾರದು! ಕೊಳೆತು ಹೋಗುವಷ್ಟು ಆಸ್ತಿ ಇದೆ ಅಂತೀಯಾ?"

"ನೀನೊಬ್ಬ ಬಾಕಿ ಇದ್ದೆ ನನಗೆ ಉಪದೇಶ ಮಾಡೋಕೆ... ಹೇಗೂ ಬರುತ್ತಾ ಇದೀಯಲ್ಲ. ನೀನು ಇಲ್ಲಿನ ಸುಂದರಿ ಯಾರನ್ನಾದರೂ ಸೆಲೆಕ್ಟ್ ಮಾಡ್ಕೋ.... ಮದುವೆ ಮಾಡಿಸುವ ಜವಾಬ್ದಾರಿ ನನ್ನದು. ಮಾತ್ರ ಈ ಸುಂದರಿಯರ ಸಹವಾಸವೇ ಬೇಡ. ಸುಕನ್ಯಳೇ ಸಾಕು. ಅವಳೇನು ಕಮ್ಮಿ ಆಗಿದಾಳೆ?"

'ಸುಕನ್ಯಗಿಂತ ಅವಳ ತಂಗಿ ಚೆನ್ನಾಗಿದಾಳೆ' ಎಂದು ಹೇಳಬೇಕೆಂದುಕೊಂಡರೂ, ಸ್ನೇಹಿತನ ಮನಸ್ಸನ್ನು ನೋಯಿಸಬಾರದೆಂದು ಸುಮ್ಮನಾದ.

"ಹಾಗಲ್ಲ ನಿಮ್ಮ ತಾತಂಗೂ ಸಂತೋಷವಾಗ್ತಿತ್ತು. ಈಗ, ಹೀಗೆ ನನ್ನ ರಾಯಭಾರ ಬೇಕಾಗುತ್ತಿರಲಿಲ್ಲ."

"ತಾತನಿಗೋಸ್ಕರ ನಾನು ತ್ಯಾಗ ಮಾಡಬೇಕಾಗಿಲ್ಲ. ನನ್ನ ಇಚ್ಛೆ ನನ್ನದು. ತಾತಂಗೆ ಏನು ಹೇಳಿದರೂ ಸಂತೋಷವೇನೂ ಆಗಲ್ಲ. ಅವರೇ ನಿಂತು ಮಾಡಿದ ಮದುವೆ ಆನಂದನದು. ಆದರೇನು? ಅವರೇನೂ ಸಂತೋಷವಾಗಿಲ್ಲ."

"ಯಾಕೆ? ಏನು ನಡೀತು?" ಎಂದು ಸುರೇಶ ಕೇಳಲಿಲ್ಲ. ಮುಕುಂದ ಸುಮ್ಮನಾದ.

ಮುಂಗೂದಲನ್ನು ಮನಸ್ಸಿಗೆ ಬಂದಂತೆ ಕತ್ತರಿಸಿಕೊಂಡು, ಸ್ವಲ್ಪ ಹೆಚ್ಚೇ ಎನಿಸುವಷ್ಟು ಪೌಡರನ್ನು ಮುಖಕ್ಕೆ ಬಳಿದುಕೊಂಡು, ಲಿಪ್‌ಸ್ಟಿಕ್ ಉಪಯೋಗಿಸಿ ಅತಿ ಕೆಂಪು ಎನಿಸುವಷ್ಟು ಕೆಂಪಗಿನ ತುಟಿಯ ಸುಕನ್ಯ ಅವನಿಗೆ ಮೆಚ್ಚುಗೆ ಆಗಿರಲಿಲ್ಲ. ತನ್ನ ಸ್ನೇಹಿತನ ಮಡದಿಯಾಗುವವಳು ತನಗೇನು ಎಂಬಂತೆ ಉದಾಸೀನನಾಗಿದ್ದ. ತೋಳಿಲ್ಲದ ರವಿಕೆ ಧರಿಸಿ, ಕೈ ಬಾಯಿ ಅಲ್ಲಾಡಿಸುತ್ತಾ, ನಗುತ್ತಾ ವಯ್ಯಾರದಿಂದ ಜೋರಾಗಿ ಮಾತನಾಡುತ್ತಿದ್ದ ಸುಕನ್ಯಳಿಗಿಂತ ಯಾವ ಅಲಂಕಾರವೂ ಇಲ್ಲದೇ ಕೆದರಿದ ಮುಂಗೂದಲ ಚೆಲುವೆ ಅವನ ಮನಸ್ಸನ್ನಾಕರ್ಷಿಸಿದ್ದಳು.

ಅಕ್ಕನಿಗಿಂತ ತೀರಾ ಭಿನ್ನವಾಗಿದ್ದ ಸರಳ ಸುಂದರಿ ತನಗೆ ದೊರಕುವಂತಾದರೆ ತಾನು ಅತ್ಯಂತ ಸುಖಿ ಎಂದುಕೊಂಡು ತನ್ನಲ್ಲೇ ಮುಗುಳ್ನಕ್ಕ. ಮುಕುಂದನಾಡುತ್ತಿದ್ದ ಮಾತುಗಳ ಮೇಲೆ ಗಮನವಿರಲಿಲ್ಲ.

ಬಸ್ ನಿಲ್ದಾಣದಲ್ಲಿ ಬಸ್ಸು ನಿಂತ ಮೇಲೆ ಇಬ್ಬರೂ ದೊಡ್ಡ ರಸ್ತೆಯಲ್ಲಿ ಸ್ವಲ್ಪ ದೂರ ನಡೆದು, ಬಲಕ್ಕೆ ತಿರುಗಿದ ಒಂದು ಕವಲುದಾರಿಯಲ್ಲಿ ಮುಂದುವರೆದರು. ಕಾಲು ಹಾದಿಯ ಅಕ್ಕ ಪಕ್ಕ ಯಾವ ಮನೆಯೂ ಇರಲಿಲ್ಲ. ಮತ್ತೆ ಸ್ವಲ್ಪ ದೂರ ನಡೆದು ಮನೆಯನ್ನು ತಲುಪಿದರು. ವಿಶಾಲವಾದ ಆವರಣದಲ್ಲಿ ವಿಶಾಲವಾಗಿ

ಎತ್ತರವಾಗಿ ಕಟ್ಟಿದ್ದ ಹಂಚಿನ ಮನೆಯನ್ನು ಬೆರಗಾಗಿ ನೋಡಿದ ಸುರೇಶ್. ಮನೆಯನ್ನು ಹೊತ್ತು ನಿಂತಿದ್ದ ಜಗುಲಿಯ ಮೇಲಿನ ಕಂಭಗಳು, ಕಂಭಗಳಿಗೆ ಬಳಿದ ಕೆಂಬಣ್ಣ, ಮುಂಬಾಗಿಲಿಗೆ ಇಳಿಬಿಟ್ಟಿದ್ದ ತೋರಣದ ಹಸಿರು, ಮನೆ ಮುಂದೆ ಬಿಡಿಸಿದ್ದ ಸುಂದರವಾದ ರಂಗೋಲಿಯ ಶುಭ್ರವರ್ಣ ಅವನನ್ನು ಸ್ವಾಗತಿಸಿದವು. ಮನಸ್ಸಿಗೆ ಹಿತವೆನಿಸಿತು.

ಅವರವರ ಕೆಲಸದಲ್ಲಿ ಮಗ್ನರಾಗಿದ್ದವರೆಲ್ಲಾ, ಮುಕುಂದನ ಆಗಮನವನ್ನು ತಿಳಿದೊಡನೆ ಅವನನ್ನು ಎದುರುಗೊಳ್ಳಲು ಜಗುಲಿಯಲ್ಲಿ ಬಂದು ಸೇರಿದ್ದರು. ಜೊತೆಯಲ್ಲಿ ನಿಂತಿದ್ದವನ ಗುರುತು ಇರಲಿಲ್ಲವಾದ್ದರಿಂದ ಎಲ್ಲರೂ ಹಾಗೇ ನಿಂತಿದ್ದರು. ಮುಕುಂದ ಸ್ನೇಹಿತನ ಕೈ ಹಿಡಿದು ದಾರಿ ಮಾಡಿಕೊಂಡು ಒಳಗೆ ಬಂದ. ಅವನ ಹಿಂದೆ ಎಲ್ಲರೂ ಒಳಗೆ ಬಂದರು.

"ಮೊದಲು ಯಾರಾದ್ರೂ ಒಂದು ಲೋಟ ಒಳ್ಳೆ ಬಿಸಿ ಕಾಫಿ ತಂದುಕೊಡಿ. ಆಮೇಲೆ ನಿಮ್ಮೆಲ್ಲರ ಮಾತನ್ನು ಕೇಳ್ತೀನಿ. ನಾನೂ ಆಡ್ತೀನಿ. ಇವನು ನನ್ನ ಸ್ನೇಹಿತ ಸುರೇಶ ಅಂತ. ಬೆಂಗಳೂರಿನಲ್ಲಿ ನನ್ನ ಜೊತೆಯಲ್ಲಿ ಓದುತ್ತಿದ್ದವನು."

ಸುರೇಶ ಎಲ್ಲರಿಗೂ ಕೈ ಮುಗಿದು ನಮಸ್ಕಾರ ಎಂದ. ಎಲ್ಲರೂ ಒಂದು ತರಹ ಸಂಕೋಚದಿಂದ ಅವನನ್ನೇ ನೋಡಿದರು. ಮುಕುಂದನ ತಾಯಿ ಜಾನಕಮ್ಮ ಕೆಲವೇ ಕ್ಷಣಗಳಲ್ಲಿ ಬಿಸಿ ಬಿಸಿ ಕಾಫಿ ತಯಾರಿಸಿ ಹೊಗೆಯಾಡುತ್ತಿದ್ದ ಕಾಫಿಯನ್ನು ತಂದಿತ್ತರು.

"ಹಳ್ಳಿ ಮನೆ, ಕಾಫಿ, ಹೇಗಿರುತ್ತೋ ಏನೋ.." ಸಂಕೋಚದಿಂದ ಆಕೆ ನುಡಿದಳು.

"ಇನ್ನು ಹೇಗಿರುತ್ತೆ? ಹೊಗೆ ವಾಸನೆ ತುಂಬಿಕೊಂಡಿರುತ್ತೆ. ಆದರೆ ಇವನದು ಹೊಂದಿಕೊಂಡು ಹೋಗುವ ಸ್ವಭಾವ. ಹೊಗಳಿಕೊಂಡು ಕುಡೀತಾನೆ."

ಸುರೇಶ ನಕ್ಕ. ಕಾಫಿ ಕುಡಿದು ರುಚಿ ನೋಡಿದ.

"ಹಾಗೇನಿಲ್ಲಮ್ಮ. ಕಾಫಿ ತುಂಬಾ ಚೆನ್ನಾಗಿದೆ. ಬೆಂಗಳೂರಿನ ಕಾಫಿಗೆ ಈ ರುಚಿಯೇ ಬರೋಲ್ಲ ನೋಡಿ...."

"ಅದು ನಿನ್ನ ದೊಡ್ಡ ಗುಣ. ಮುಕುಂದ ಹೇಳುವಂತೆ ಇದು ಎಷ್ಟಾಗಲೀ ಹಳ್ಳಿ ಸಂಸಾರ. ನಿನಗೇನು ಬೇಕಾದರೂ ಸಂಕೋಚಪಟ್ಟುಕೊಳ್ಳದೇ ಕೇಳಪ್ಪಾ"

"ಓ...ಧಾರಾಳವಾಗಿ. ನಾನೂ ನಿಮ್ಮ ಮಗನ ಹಾಗೇನೇ"

ಆಕೆಯ ಹೃದಯ ತುಂಬಿ ಬಂತು. "ಪ್ರಯಾಣ ಮಾಡಿ ಆಯಾಸವಾಗಿರುತ್ತೆ. ಒಂದು ಘಳಿಗೆ ಸುಧಾರಿಸಿಕೊಂಡು ಸ್ನಾನ ಮಾಡಿ. ತಿಂಡಿ ತಿನ್ನೋರಂತೆ. ಬೇಗ ಬೇಗ ಅಡಿಗೆ ಮಾಡಿ ಬಡಿಸಿ ಬಿಡ್ತೀನಿ."

"ನೀವು ಯಾವ ಧಾವಂತಾನೂ ಪಟ್ಕೋಬೇಡಿ. ನಿಮಗೆಲ್ಲಾ ಹೇಗೋ ನನಗೂ ಹಾಗೇನೇ ಆಗುತ್ತೆ... ಮುಕುಂದ ಎಲ್ಲರ ಪರಿಚಯಾನೇ ಮಾಡಿಸ್ಲಿಲ್ಲ" ಅವನ ಕಡೆ ತಿರುಗಿದ.

"ಕಾಫಿ ಕುಡಿದ ಮೇಲೆ ಶಕ್ತಿ ಬಂತು ನೋಡು. ಇವರು ನಮ್ಮ ತಾಯಿ ಜಾನಕಮ್ಮ. ನಮ್ಮ ತಂದೆ ನರಸಿಂಹ ಭಟ್ಟರು,... ನಮ್ಮ ಚಿಕ್ಕಪ್ಪ ನಾರಾಯಣ ಭಟ್ಟರು. ಅವರ ಪತ್ನಿ ಸರಸ್ವತಮ್ಮ.." ಸುರೇಶ ವಿನಯದಿಂದ ಎಲ್ಲರಿಗೂ ಮತ್ತೊಮ್ಮೆ ಕೈ ಮುಗಿದು ನಮಸ್ಕಾರ ಎಂದ.

"ಇವಳು ವಿಮಲ. ಇವಳು ಮಧುಮತಿ, ನನ್ನ ತಂಗಿಯರು. ಕಾಲೇಜಿನಲ್ಲಿ ಓದುತ್ತಿದ್ದಾರೆ....ಆಂ.. ರಾಜೇಂದ್ರ ಎಲ್ಲಿ?"

"ತೋಟಕ್ಕೆ ಹೋಗಿದಾನೆ. ತಾತನ್ನ ಮಾತನಾಡಿಸಿಕೊಂಡು ಬಾ" ಚಿಕ್ಕಮ್ಮ ನುಡಿದಾಗ, ಮುಕುಂದ ಇದ್ದಕ್ಕಿದ್ದಂತೆ ಗಂಭೀರನಾದ.

"ಅವರ ಕಣ್ಣು ಮುಂಚಿನಂತೆ ಸರಿಯಾಗಿ ಕಾಣಲ್ಲ. ಬೆಳಕಿಗೆ ಬಂದರೆ ಕಣ್ಣು ಚುಚ್ಚುತ್ತೆ ಅಂತ ಹೆಚ್ಚಿಗೆ ಹೊರಕ್ಕೆ ಬರೋಲ್ಲ." ತಂದೆ ನುಡಿದರು.

ಸುರೇಶ ತಾನೇ ಮುಂದಾಗಿ "ಬಾ ಹೋಗೋಣ" ಎಂದ. ಮುಕುಂದ ವಿಧಿಯಿಲ್ಲದೇ ಅವನನ್ನು ತಾತನ ರೂಮಿಗೆ ಕರೆದುಕೊಂಡು ಹೋದ.

ಆರಾಮ ಕುರ್ಚಿಯಲ್ಲಿ ಕಣ್ಣು ಮುಚ್ಚಿ ಒರಗಿ ಕುಳಿತಿದ್ದ ತಾತ ಬಾಗಿಲ ಕಡೆ ತಿರುಗಿ "ಯಾರು?" ಎಂದು ಕೇಳಿದರು.

"ನಾನು ತಾತ ಮುಕುಂದ....ನನ್ನ ಜತೆ ನನ್ನ ಸ್ನೇಹಿತನೂ ಬಂದಿದಾನೆ. ಇವರು ಅಪ್ಪಣ್ಣಭಟ್ಟರು ನಮ್ಮ ತಾತ." ಪರಿಚಯ ಮಾಡಿಸಿದ.

"ನಮಸ್ಕಾರ ತಾತನಿಗೆ" ಎಂದ ಸುರೇಶ ವಿಧೇಯತೆಯಿಂದ.

"ಚೆನ್ನಾಗಿರಪ್ಪಾ" ಹರಸಿದರು. "ಯಾವಾಗ ಬಂದ್ರಿ?" ಕೇಳಿದರು.

"ಈಗ್ತಾನೇ ಬರ್ತಾ ಇದೀವಿ."

"ಕಾಫಿ ತಿಂಡಿ ಮುಗಿಸ್ಕೊಂಡು ಬಾ. ನಿನ್ನ ಹತ್ತಿರ ಸ್ವಲ್ಪ ಮಾತಾಡಬೇಕು" ಮುಕುಂದ ಸುರೇಶನ ಮುಖ ನೋಡಿದ.

"ಈಗಲೇ ಅದೇನು ಹೇಳಬೇಕೋ ಹೇಳಿಬಿಡಿ. ಕಾಫಿ ಕುಡಿದಾಗಿದೆ. ಸ್ನಾನ ತಿಂಡಿ ಎಲ್ಲಾ ಆಮೇಲೆ" ಬೇಸರದ ಧ್ವನಿಯಲ್ಲಿ ಹೇಳಿದ.

"ನಿನಗೆ ಹಾಗೇನೇ....ಪಟ್ಟಣಕ್ಕೆ ಹೋದಮೇಲೆ ಮಾತಿನ ರೀತೀನೇ ಬದಲಾಗಿ ಹೋಗಿದೆ. ಸುಮ್ಮನೇ ನಾನು ಹೇಳಿದಷ್ಟು ಕೇಳು."

ಸ್ನೇಹಿತನೆದುರು ಹೆಚ್ಚಿಗೆ ಅನ್ನಿಸಿಕೊಳ್ಳಲು ಇಷ್ಟವಿಲ್ಲವಾದ್ದರಿಂದ 'ನಾವು ಬರ್ತೀವಿ' ಎಂದು ಹೇಳಿ ಹೊರಟ. ತಾತ ಮುಕುಂದನೊಬ್ಬನೊಡನೇ ಮಾತ್ರ ಮಾತನಾಡಬೇಕೆಂದಿದ್ದಾರೆ ಎಂದು ಸುರೇಶ ಭಾವಿಸಿದ. ಮುಕುಂದನ ಜೊತೆ ಹೊರಗೆ ಬಂದ. ತೋಟದಿಂದ ವಾಪಸ್ಸಾದ ರಾಜೇಂದ್ರ ಎದುರಾದ. ಕೈಯಲ್ಲಿ ಬಾಳೆ ಎಲೆ ಕಟ್ಟು ಹಿಡಿದಿದ್ದ. 'ಏನೋ ಮುಕುಂದ ಯಾವಾಗ ಬಂದೆಯೋ' ಒರಟಾಗಿ ಕೇಳಿ, ಸುರೇಶನ ಕಡೆ ತಿರುಗಿ "ನಿನ್ನ ಸ್ನೇಹಿತಾನಾ?" ತಾನೇ ಕೇಳಿದ.

ಮುಕುಂದ ಹಲ್ಲು ಕಡಿದು, 'ಹಳ್ಳೀಬುದ್ಧಿ' ಎಂದು ಗೊಣಗಿದ. ಸುರೇಶ.... "ಇವನು ನನ್ನ ತಮ್ಮ ರಾಜೇಂದ್ರ....ಹಳ್ಳೀಲಿ ಇದ್ದೂ ಇದ್ದೂ ನಾಗರೀಕತೆ ಅಂದ್ರೆ ಏನೂ ಅಂತಾನೇ ತಿಳೀದು ಇವನಿಗೆ."

ಸುರೇಶ ಮುಗುಳ್ನಗುತ್ತಾ 'ಹಲೋ' ಎಂದ. ರಾಜೇಂದ್ರ ನಕ್ಕಂತೆ ಮಾಡಿ ಮುಕುಂದನ ಮೇಲೆ ಕಿಡಿ ಕಾರಿ,ಬಾಳೆ ಎಲೆಗಳ ಕಟ್ಟನ್ನು ಕೆಳಗೆ ಎಸೆದ. ಹೆಗಲ ಮೇಲಿನ ಟವಲ್ಲನ್ನು ಕೈಗೆತ್ತಿಕೊಂಡು ಟಕ್ ಎಂದು ಕೊಡವಿ ಗೊಣಗುತ್ತಾ ಒಳನಡೆದ.

ಮುಕುಂದ ಸುರೇಶ ರೂಮಿನೊಳಗೆ ಕಾಲಿಡುತ್ತಿದ್ದಂತೆಯೇ ವಿಮಲ ಮಧು ಹೊರಗೆ ಹೊರಟರು..

'ವಿಮಲ ಇನ್ನೊಂದು ಕಪ್ ಕಾಫೀ ....ಇಲ್ಲಿಗೇ' ಎನ್ನುತ್ತಾ ಮುಕುಂದ ಸಿಗರೇಟು ಪ್ಯಾಕನ್ನು ಹೊರತೆಗೆದ. ಸುರೇಶನಿಗೂ ನೀಡಿದ. ಸುರೇಶ ಅಚ್ಚರಿಯಿಂದ ಕೇಳಿದ "ಇದೇನೋ ನಿಮ್ಮ ಮನೇಲೂ ಸೇದ್ತೀಯಾ?"

"ನಮ್ಮಪ್ಪ,ಚಿಕ್ಕಪ್ಪ ಬೀಡಿ ಸೇದ್ತಾರೆ. ತಾತಾ ತಂಬಾಕು ಹಾಕ್ಕೋತಾರೆ. ಅದೇ ತರಹ ತಾನೇ."ಅಷ್ಟರಲ್ಲಿ ವಿಮಲ ಕಾಫಿ ಕಪ್‌ಗಳೊಂದಿಗೆ ಬಂದಳು. ಇಬ್ಬರಿಗೂ ಕಾಫಿ ನೀಡಿ ನುಡಿದಳು.

"ಕಾಫಿ ಕುಡಿದು ನೀರು ಹಾಕ್ಕೋಬೇಕಂತೆ. ಇವತ್ತು ಹಬ್ಬ. ಎಣ್ಣೆ ತಂದು ಒತ್ತಲಾ?"

"ಹೂಂ. ಜಾಸ್ತಿ ಬೇಡ. ಶಾಸ್ತ್ರಕ್ಕೆ ಒಂದು ಬೊಟ್ಟು...."

"ಆಯ್ತಪ್ಪಾ....."ಎನ್ನುತ್ತಾ ವಿಮಲ ಓಡಿ ತಕ್ಷಣವೇ ಎಣ್ಣೆಯ ಬಟ್ಟಲಿನೊಂದಿಗೆ ಬಂದಳು.

"ಅಮ್ಮ ನೋಡಿದರೆ ಹಾಗಲ್ಲ ಹೀಗಲ್ಲ ಅಂತಾಳೆ.ಬೇಗ ಒತ್ತು"

ರೇಗಿದ. ಅವಳು ಅವನ ನೆತ್ತಿಗೆ ಒಂದು ಹನಿ ಎಣ್ಣೆಯನ್ನು ಇಟ್ಟಂತೆ ಮಾಡಿ ಸುಮ್ಮನೇ ನಿಂತಳು.

"ಏನು ಸುಮ್ನೇ ನಿಂತೆ. ಅವನೂ ನಿನ್ನ ಅಣ್ಣನ ತರಹಾನೇ ಅವನಿಗೂ ಇಡು"ಸುರೇಶ ಸಂಕೋಚಗೊಂಡ.

"ಪರವಾಗಿಲ್ಲ ಇಲ್ಲಿ ಕೊಡಿ.ನಾನೇ ಇಟ್ಟುಕೊಳ್ತೀನಿ." ಎಂದ. ವಿಮಲ ಅವನ ಕೈಗೆ ಬಟ್ಟಲನ್ನಿತ್ತು ನಾಚುತ್ತಾ ನಿಂತಳು. ಅವನಿಗೆ ಮರೆತು ಹೋದ ಪದ್ಧತಿಯಾದರೂ, ಒಂದು ಬೊಟ್ಟು ಎಣ್ಣೆಯನ್ನದ್ದಿ ತನ್ನ ನೆತ್ತಿಗೆ ಸವರಿಕೊಂಡ, ವಿಮಲ ಎಣ್ಣೆ ಬಟ್ಟಲನ್ನೆತ್ತಿಕೊಂಡು ಓಡಿದ್ದಳು. ಇಬ್ಬರೂ ಸಿಗರೇಟನ್ನು ಮುಗಿಸುವ ಹೊತ್ತಿಗೆ ವಿಮಲ ಮತ್ತೆ ಬಂದಳು.

"ತಿಂಡಿ ಆಗಿದೆ.......ತಿಂದು ಸ್ನಾನ ಮಾಡ್ತೀರೋ, ಸ್ನಾನಮಾಡಿ ತಿಂತೀರೋ ಅಮ್ಮ ಕೇಳಿಕೊಂಡು ಬಾ ಅಂದಳು."

"ಅಮ್ಮಂಗೆ ಯಾವಾಗ ಇಷ್ಟು ಒಳ್ಳೆ ಬುದ್ಧಿ ಬಂತು?ತಲೆಗೆ ಎಣ್ಣೆ ಒತ್ತಿಕೊಂಡು ಯಾರಾದ್ರೂ ತಿಂತಾರಾ? ಮತ್ತೆ ಕೇಳಿಕೊಂಡು ಬಾ"

"ಹೋಗಲಿ ಬಿಡಿ, ನಾವು ಸ್ನಾನ ಮಾಡಿಯೇ ತಿಂತೀವಿ"ಸುರೇಶ ನುಡಿದ. ಅವಳು ಕೂಡಲೆ ಆ ಕಡೆ ಹೋದ ಕೂಡಲೇ, "ಪರವಾಗಿಲ್ಲ ಕಣೋ ಚೆನ್ನಾಗಿ ಆಟ ಆಡಿಸ್ತೀಯಾ...."ಗೇಲಿ ಮಾಡಿದ.

"ನಿಂಗೇನು ಗೊತ್ತು? ನಾಲ್ಕು ದಿನ ಇಲ್ಲಿರು. ನೀನೂ ಹೀಗೆ ಆಡುಕ್ಕೆ ಶುರು ಮಾಡ್ತೀಯಾ....ನಾನು ಬೆಂಗಳೂರಿನಿಂದ ಅಪರೂಪಕ್ಕೆ ಬರ್ತೀನಿ ಅಂತ ಈ ರಿಯಾಯಿತಿ...... ಇಲ್ಲದಿದ್ರೆ ಈ ಮಹಾನವಮಿ ಹಬ್ಬ ಬಂತು ಅಂದ್ರೆ ಸರಿ. ನಮ್ಮ ಮನೆ ಊಟ ಸಾಯಂಕಾಲ ನಾಲ್ಕು ಗಂಟೆಗೆ. ಮನೆಯ ಆಳುಕಾಳುಗಳಿಗೆಲ್ಲಾ ಬಡಿಸೀ ಬಡಿಸೀ ನಮ್ಮ ಅಮ್ಮ ಚಿಕ್ಕಮ್ಮ ಚಿಕ್ಕಪ್ಪ ಎಲ್ಲಾ ಸುಸ್ತಾಗ್ತಾರೆ. ಇವತ್ತು ನೋಡು ವಂತೆ......"

"ಹಾಗಾದ್ರೆ ಬೇಗ ಸ್ನಾನಮಾಡಿ ಹಳ್ಳಿ ಸುತ್ತಾಡಿ ಬರೋಣ."

"ನೀನು ಬೇಕಾದ್ರೆ ಹೋಗಿ ಬಾ. ನನಗೆ ಬೇಜಾರು. ನಾನು ಮನೆಯವರ ಹತ್ತಿರ ಎಲ್ಲಾ ವಿಷಯವನ್ನೂ ಮಾತನಾಡಬೇಕು."

"ಹಾಗಾದ್ರೆ ನನ್ನ ರಾಯಭಾರ ಬೇಡ ಅನ್ನು"

"ನೀನು ತಾತನ ಹತ್ತಿರ ಮಾತನಾಡು" ಸುರೇಶ ನಕ್ಕ.

ಇಬ್ಬರೂ ಸ್ನಾನ ಮುಗಿಸಿ, ತಿಂಡಿ ತಿಂದು ಕಾಫಿ ಕುಡಿದರು. ಸುರೇಶ ಬಟ್ಟೆ ಬದಲಾಯಿಸಿ ಹಳ್ಳಿ ನೋಡಲು ಹೊರಟ. ಮುಕುಂದ ರೇಗಿಸಿದ.

"ಈ ಹಳ್ಳಿಗೇಕೆ ಇಂತಹ ಒಳ್ಳೆಯ ಬಟ್ಟೆ? ಕೆಸರು, ಕೊಳೆ. ಒಂದು ಪಂಚೆ ಉಟ್ಟು ಬನಿಯನ್‌ಲೇ ಹೋಗಿ ಬಾ. ಯಾರೂ ನಗೋಲ್ಲ."

"ಇವತ್ತು ಹಬ್ಬ. ಹಳ್ಳಿಯವರೂ ಟ್ರಿಂ ಆಗಿ ಡ್ರೆಸ್ ಮಾಡಿಕೊಂಡಿರ್ತಾರೆ. ಆಡಿಕೊಂಡು ನಗ್ತಾರೆ ಅಷ್ಟೇ....." ರಾಜೇಂದ್ರ ಬಾಯಿ ಹಾಕಿದ.

ಸುರೇಶ ಏನನ್ನೂ ಆಡದೆ ಚಪ್ಪಲಿ ಮೆಟ್ಟಿ ಹೊರಟ. ಮುಕುಂದ ಅಡಿಗೆ ಮನೆ ಹೊಕ್ಕ. ತರಕಾರಿ ಹೆಚ್ಚುತ್ತಿದ್ದ ಚಿಕ್ಕಮ್ಮನ ಬಳಿ ಕುಳಿತ.

"ಇಲ್ಲೇನು ಕುಳಿತೆ? ನಿನ್ನ ಸ್ನೇಹಿತ ಎಲ್ಲಿ?"

"ಅವನು ತಿರುಗಾಡಲು ಹೊರಟಿದ್ದಾನೆ. ನಾನು ನಿನ್ನ ಹತ್ತಿರ ಒಂದು ಮುಖ್ಯವಾದ ವಿಷಯವನ್ನು ಮಾತನಾಡಬೇಕಿತ್ತು."

"ನನ್ನ ಹತ್ತಿರಾನಾ?ಏನಾಗಬೇಕಿತ್ತು ಈಗ?" ಮುಕುಂದ ತಡವರಿಸುತ್ತಾ ಪಿಸುದನಿಯಲ್ಲಿ ಪ್ರಾರಂಭಿಸಿದ.

"ನಮ್ಮ ಆಫೀಸಿನಲ್ಲಿ ಕೆಲಸ ಮಾಡುವ ಸುಕನ್ಯ ಎನ್ನುವವಳನ್ನು ಮದುವೆ ಮಾಡ್ಕೋಬೇಕು ಅಂತ ಅಂದ್ಕೊಂಡಿದೀನಿ..., ನಾಳೆ ಅವಳ ತಾಯಿಯೊಡನೆ ಇಲ್ಲಿಗೆ ಬರ್ತಾಳೆ. ನೀವೆಲ್ಲಾ ಒಪ್ಪಬೇಕು. ತಾತನ್ನೂ ಒಪ್ಪಿಸಬೇಕು."

"ಒಂದು ಸುಳಿವೂ ಕೊಡದೆ ದಿಢೀರನೇ ಮದುವೆ ಮಾತನ್ನಾಡ್ತಿಯಲ್ಲ. ತಾತ ಒಪ್ಪದಿದ್ದರೇ.....?"

"ಅದಕ್ಕೇ ಹೇಳಿದ್ದು. ನಿನ್ನನ್ನೇ ನಂಬಿದೀನಿ.ನೀವುಗಳು ಒಪ್ಪಿಸಬೇಕು."

"ಎಂತಹ ಇಕ್ಕಟ್ಟಿಗೆ ಸಿಕ್ಕಿಸ್ತೀಯಲ್ಲೋ ಮುಕುಂದಾ. ಹೂಂ. ನೋಡೋಣ. ಮೊದಲು ಅವರುಗಳು ಬರಲಿ."

"ಅವರುಗಳ ಎದುರಿಗೆ ಏನೂ ರಾದ್ಧಾಂತವಾಗಬಾರದು."

"ಹಬ್ಬ ಕಳೆದ ಮೇಲೆ ಅವರುಗಳನ್ನು ಬರಹೇಳಬೇಕಾಗಿತ್ತು."

"ರಜ ಸಿಗಬೇಕಲ್ಲ...ತಾತನ್ನ ಒಪ್ಪಿಸುವ ಭಾರ ನಿಮ್ಮಗಳದ್ದು." ಮತ್ತೊಮ್ಮೆ

ನುಡಿದು ತಾಯಿಯ ಬಳಿಗೆ ಬಂದ. ಅಮ್ಮ ಯಥಾಪ್ರಕಾರ ಸಮಾರಾಧನೆ ಅಡಿಗೆ ಮಾಡುವುದರಲ್ಲಿ ನಿರತಳಾಗಿದ್ದಳು.

"ಒಬ್ಬಳೇ ಯಾಕೆ ಕಷ್ಟಪಡ್ತೀಯಾ? ಅಡಿಗೆಯವರನ್ನಾದರೂ ಕರೆಸಬಾರದೆ?" ಅನುಕಂಪದಿಂದ ಕೇಳಿದ.

"ಒಬ್ಬಳೇ ಎಲ್ಲಿ ಮಾಡ್ತೀನಿ ಸರಸೂ, ನಾರಾಯಣ ಜತೆಗಿದಾರಲ್ಲ. ಇದೇ ಅಭ್ಯಾಸವಾಗಿ ಹೋಗಿದೆ. ಕಾಫಿ ಬೇಕೆ? ನಿನ್ನ ಸ್ನೇಹಿತ ಎಲ್ಲಿ?"

"ಅವನು ತಿರುಗಾಡಿಕೊಂಡು ಬರ್ತೀನಿ ಅಂತ ಹೋಗಿದಾನೆ..... ವಿಮಲಂಗೆ ಈಗ ಎಷ್ಟು ವರ್ಷ....?"

"ಹತ್ತೊಂಭತ್ತು......ನಿನ್ನ ಸ್ನೇಹಿತಂಗೆಷ್ಟು?"

"ಅವನು ನನ್ನ ವಯಸ್ಸಿನವನು. ಅವನು ವಿಮಲನ್ನ ಮಾಡಿಕೊಳ್ಳಲ್ಲ. ಆ ಮಾತನ್ನು ಯಾರೂ ಆಡಬೇಡಿ."

"ಯಾಕೆ? ಒಂದ್ಮಾತು ಕೇಳೋಣ ಏನೀಗ?"

"ಬೇಡ ಅಂದ್ನಲ್ಲ.ಅವನು ನನ್ನ ಸ್ನೇಹಿತ. ಹಾಗೇ ಇರಲಿ. ಸಂಬಂಧ ಬೆಳೆಸುವುದು ಬೇಡ. ಬೇರೆ ಯಾವುದಾದ್ರೂ ನೋಡಿದ್ರಾಯ್ತು."

"ಮತ್ತೇಕೆ ಕೇಳಿದೆ ಈಗ?"

"ಸುಮ್ಮನೆ ಕೇಳಿದೆ ತಪ್ಪಾ?"ರೇಗಿದ.

"ತಪ್ಪೇನಿಲ್ಲ. ಮಾತು ಮಾತಿಗೂ ರೇಗ್ತೀಯಲ್ಲಾ ಮಕ್ಕಳು'ಅಂದ್ರೆ ಅಷ್ಟು ಸಲುಗೆಯೂ ಬೇಡವೆ?"

"ಸರಿ....ಸಲುಗೆ ಬೇಕು" ನಕ್ಕಂತೆ ಮಾಡಿದ. ಅವನ ನಗುಮುಖ ನೋಡಿ ಆಕೆ ಸಮಾಧಾನಗೊಂಡಳು.

"ಮುಕುಂದ ನನ್ನದೊಂದು ಮಾತನ್ನು ನಡೆಸಿ ಕೊಡ್ತೀಯಾ?ಆನಂದನ್ನ ನೋಡಬೇಕೆನಿಸಿದೆ. ಹೋಗಿ ಕರೆದುಕೊಂಡು ಬರ್ತೀಯಾ?"

"ಇಷ್ಟು ವರ್ಷಗಳಲ್ಲಿ ಬರದಿದ್ದವನು,ನಾನು ಕರೆದರೆ ಈಗ ಬರ್ತಾನಾ" ಅನುಮಾನ ವ್ಯಕ್ತ ಪಡಿಸಿದ..

"ಹಾಗೆನ್ನಬೇಡ,ನೀನೂ ನಿನ್ನ ಸ್ನೇಹಿತ ಇಬ್ಬರೂ ಹೋಗಿ ಕರೆಯಿರಿ. ಬಂದರೂ ಬರಬಹುದು."

"ಬರದಿದ್ದರೆ ಬೇಜಾರು ಮಾಡಿಕೊಳ್ಳಬಾರದು"

'ಹಾಗಾದ್ರೆ ಈಗಲೇ ಹೋಗಿ ಬರ್ತೀಯಾ?'ಮುಕುಂದ ಹೊರಟ. ರಾಜೇಂದ್ರನ ಬೈಕನ್ನೇರಿದ. ಕಾಲುದಾರಿಯಲ್ಲಿ ನಡೆದು ಹೋಗುತ್ತಿದ್ದ ಸುರೇಶನನ್ನೂ ಕೂರಿಸಿಕೊಂಡು, ಐದಾರುಮೈಲಿಗಳ ಆಚೆ ಇದ್ದ ಆನಂದನ ಮನೆಗೆ ಬಂದ. ಮನೆಯಲ್ಲಿ ಯಾರೂ ಇದ್ದಂತಿರಲಿಲ್ಲ.ಮನೆಯ ಆಳು ಹೇಳಿದ.

"ಎಲ್ಲಾ ಶಾಂತಮ್ಮನ ಮನೆಗೆ ಹೋಗವ್ರೆ ನೆನ್ನೆ ರಾತ್ರೀನೇ ಹೊರಟ್ರು"

"ಮನೆಯಿಂದ ತಮ್ಮ ಬಂದಿದ್ರು, ಅಮ್ಮನ್ನ ನೋಡೋಕೆ ಹೋಗ್ಬೇಕಂತೆ ಅಂತ ಆನಂದಪ್ಪನಿಗೆ ಹೇಳಿ ಬಿಡು....ಹೇಳ್ತೀಯಾ?"ಅವನು ತಲೆ ಆಡಿಸಿದ. ಇಬ್ಬರೂ ವಾಪಸ್ಸು ಹೊರಟರು. ಮುಕುಂದನಿಗೆ ಬೇಸರವಾಗಿತ್ತು. ಹತ್ತು ವರ್ಷದಿಂದ, ಮುಕುಂದ ಊರಿಗೆ ಬಂದಾಗಲೆಲ್ಲಾ,ಅಮ್ಮ ಏನಾದರೂ ನೆವ ಮಾಡಿ ಅವನನ್ನು ಆನಂದನ ಮನೆಗೆ ಕಳಿಸುತ್ತಿದ್ದಳು. ಆನಂದನಂತೂ ಎಂದೂ ಬಂದಿರಲಿಲ್ಲ. ಆದರೆ ಅವನು ಸೌಖ್ಯವಾಗಿದ್ದಾನೆಂದು ತಿಳಿದು ಅಮ್ಮ ಸಂತೋಷಗೊಳ್ಳುತ್ತಿದ್ದಳು. ಆದರೆ ಇವತ್ತು ಅವನು ಸಿಕ್ಕಿರಲಿಲ್ಲ. ಶಾಂತಿಯ ಮನೆಗೆ ಹೋಗಿದ್ದಾನೆಂದು ತಿಳಿದರೆ ಸಮಾಧಾನಗೊಳ್ಳುತ್ತಾಳೆ ಎಂದುಕೊಂಡ.

ವಾಪಸ್ಸು ಬರುವ ಹೊತ್ತಿಗೆ ತಂದೆ ಪೂಜೆ ಮುಗಿಸಿದ್ದರು.ಎಲ್ಲರಿಗೂ ಮಂಗಳಾರತಿಯ ನಂತರ ತೀರ್ಥ ಪ್ರಸಾದವನ್ನು ಕೊಟ್ಟರು. ನಂತರ ಸ್ವಲ್ಪ ಹೊತ್ತಿನಲ್ಲಿ ಎಲ್ಲರಿಗೂ ಎಲೆ ಹಾಕಿ ಊಟಕ್ಕೆ ಕರೆದರು. ತಾತ ಪ್ರತ್ಯೇಕವಾಗಿ ಕೂತಿದ್ದರು. ಚಿಕ್ಕಪ್ಪ ಚಿಕ್ಕಮ್ಮನೇ ಬಡಿಸಿದರು. ಆ ವಯಸ್ಸಿನಲ್ಲಿಯೂ ಗಟ್ಟುಮುಟ್ಟಾಗಿರುವ ತೋರುತ್ತಿದ್ದ ತಾತ ಚೆನ್ನಾಗಿ ಊಟ ಮಾಡಿದರು.. ನಾಲ್ಕು ಹೋಳಿಗೆಯನ್ನು ತುಪ್ಪದೊಂದಿಗೆ, ಹಾಲಿನೊಂದಿಗೆ ಬೆರೆಸಿ ತಿಂದರು. ಸುರೇಶ ಚಕಿತನಾಗಿದ್ದ. ಬಲವಂತದಿಂದ ಬಡಿಸಿದ್ದ ಎರಡನೆಯ ಹೋಳಿಗೆಯನ್ನು ಮುಗಿಸುವಷ್ಟರಲ್ಲಿ ಅವನಿಗೆ ಸಾಕಾಗಿತ್ತು. ಮುಕುಂದ ತನ್ನ ಆಲೋಚನೆಗಳಲ್ಲಿ ಮುಳುಗಿ ಹೋಗಿದ್ದವನು ಸರಿಯಾಗಿ ಊಟವನ್ನು ಮಾಡಿರಲಿಲ್ಲ.

ಸರಸ್ವತಿ ಅಡಿಗೆ ಮನೆಯಲ್ಲಿ ಮುಕುಂದ ಹೇಳಿದ್ದ ವಿಷಯವನ್ನು ಜಾನಕಿಗೆ ತಿಳಿಸಿದ್ದಳು. ಆಕೆಗೆ ಆತಂಕ ಪ್ರಾರಂಭವಾಗಿತ್ತು. ಆನಂದ ಒಂದು ಹಗರಣ ಮಾಡಿ ದೂರ ಹೋಗಿದ್ದ. ಇನ್ನು ಇವನೇನು ಮಾಡ್ತಾನೋ.....ಈ ಮಕ್ಕಳಿಗೆ ಬುದ್ಧಿ ಹೇಳುವವರ್‍ಯಾರು? ತಾತನಿಗೆ ತಿಳುವಳಿಕೆ ಹೇಳುವವರ್‍ಯಾರು? ಅವರು ಬದುಕಿರುವವರೆಗೂ ಈ ಮನೆಯಲ್ಲಿ ಮದುವೆಯ ಮಾತು ಬರದಿದ್ದರೇ ಚೆನ್ನಾಗಿತ್ತೆನ್ನಿಸಿತ್ತು,

ಭಾರಿ ಊಟ ಮುಗಿಸಿ, ಎಲ್ಲರೂ ಕೈತೊಳೆದು ತೂಕಡಿಸಲಾರಂಭಿಸಿದ್ದರು. ತಾತ ಮಲಗಿದ್ದರು.ಮುಕುಂದ ಹೇಳಿದ್ದಂತೆ ಮನೆಯ ಆಳುಕಾಳುಗಳಿಗೆ ಅನ್ನ ತೋಡಿ ತೋಡಿ ಬಡಿಸಿದ್ದನ್ನು ಕಂಡು ಸುರೇಶ ಬೆರಗಾದ. ಬೆಂಗಳೂರಿನ ನಾಜೂಕಿನ ಊಟವೆಲ್ಲಿ? ಹಳ್ಳಿಯ ಈ ಸಮಾರಾಧನೆ ಎಲ್ಲಿ? ರುಚಿಯಾಗಿದ್ದ ಅಡಿಗೆಯನ್ನು ಮನೆಯ ಆಳುಕಾಳುಗಳು ಉಂಡಿದ್ದೇ ಉಂಡಿದ್ದು. ಹೊಸ ಬಟ್ಟೆ ಕೊಡಿಸಿ ಮನೆಯ ಮಕ್ಕಳಂತೆ ಆದರದಿಂದ ಹಬ್ಬದ ದಿನ ಉಪಚರಿಸುತ್ತಿದ್ದ ಈ ರೀತಿ ಅವನಿಗೆ ಹೊಸದು.

ಉಳಿದವರು ಯಾವಾಗ ಊಟ ಮುಗಿಸಿದರೊ, ಸುರೇಶ ಮುಕುಂದ ಒಂದು ಗಡದ್ದು ನಿದ್ದೆ ಮುಗಿಸಿ ಎದ್ದರು. ಮತ್ತೊಮ್ಮೆ ಎಲ್ಲರಿಗೂ ಕಾಫಿ ಆಯಿತು. ಟಿ. ವಿ. ಯಲ್ಲಿ ಬರುತ್ತಿದ್ದ ಯಾವುದೋ ಸಿನಿಮಾವನ್ನು ನೋಡುತ್ತಿದ್ದ ವಿಮಲ ಮದು ಅವರುಗಳನ್ನು ನೋಡಿ ಎದ್ದು ನಿಂತರು. ರಾಜೇಂದ್ರ ಮಾತ್ರ ತನ್ನ ಪಾಡಿಗೆ ತಾನು ಕುಳಿತಿದ್ದ. ಮುಕುಂದ ಅವನನ್ನು ಕೆಕ್ಕರಿಸಿ ನೋಡಿ ಹೊರ ನಡೆದ.ಸುರೇಶ ಅವನ ಹಿಂದೆ ನಡೆದ.

"ನಾಳೆ ಬೆಳಿಗ್ಗೆ ಅವರುಗಳು ಬಂದೇ ಬಿಡ್ತಾರೆ. ತಾತನ ಹತ್ತಿರ ಇನ್ನೂ ಮಾತನ್ನೇ ಆಡಿಲ್ಲ....."

"ಹೂಂ ನಾನೂ ಅದನ್ನೇ ಯೋಚಿಸುತ್ತಿದ್ದೆ. ನೀನೇ ಯಾಕೆ ಹೋಗಿ ಅವರೊಡನೆ ಮಾತನ್ನಾಡಬಾರದು?"

"ನೀನೂ ಬಾ....ಇಬ್ಬರೂ ಆಡೋಣ"

"ಅವರು ಏನಾದ್ರೂ ಅಂದರೆ ನನಗೆ ಸಹಿಸೋಲ್ಲ. ಎಲ್ಲಾ ಕೆಟ್ಟು ಹೋಗುತ್ತೆ. ನೀನೊಬ್ಬನೇ ಸರಿ. ಅದಕ್ಕೇ ತಾನೇ ನಿನ್ನನ್ನು ಕರೆತಂದಿರುವುದು."

"ಸರಿಯಪ್ಪಾ ಪ್ರಯತ್ನ ಮಾಡ್ತೀನಿ. ನೀ ಏನ್ಮಾಡ್ತೀಯಾ?"

"ಅಡಿಗೆ ಮನೇಲಿರ್ತೀನಿ. ಅಮ್ಮ ಪಾಪ ಬೆಳಗ್ನಿಂದ ಒದ್ದಾಡಿ ಕೆಲಸ ಮಾಡಿದಾಳೆ. ಅವಳಿಗೆ ಅಯ್ಯೋ! ಎನ್ನುವವರು ಯಾರಿಲ್ಲ"

"ಆದರೂ ನಿಮ್ಮ ಮನೇಲಿ ಎಲ್ಲರೂ ಹೊಂದಿಕೊಂಡಿದಾರಪ್ಪಾ."

"ಇದೆಲ್ಲಾ ನಮ್ಮ ಅಮ್ಮನ ದೊಡ್ಡ ಗುಣ, ನಮ್ಮ ಚಿಕ್ಕಮ್ಮನೂ ಒಳ್ಳೆಯವಳೇ.....ಆದರೂ ಕೆಲವು ಸಲ ಕೋಪ ಬಂದು ಬಿಡುತ್ತೆ ಅವರಿಗೆ"

"ಅವರ ಮಕ್ಕಳು ಎಲ್ಲಿ?ಕಾಣಲಿಲ್ಲ?"

"ಅವರಿಗೆ ಮಕ್ಕಳಿಲ್ಲ. ಅದೇ ಚಿಂತೆ ಅವರಿಗೆ"

"ಓ......" ಎಂದ ಸುರೇಶ.....ಇನ್ನೇನೂ ಹೇಳಲು ತೋಚದೇ

ತಾತನ ರೂಮಿನಲ್ಲಿ ಇಣುಕಿದ ಸುರೇಶ."ಯಾರು?"ಎಂದರು ಬಾಗುತ್ತಾ..

"ನಾನು ಮುಕುಂದನ ಸ್ನೇಹಿತ. ಮಾತನಾಡಿಸೋಣ ಅಂತ ಬಂದೆ."

"ಏನಪ್ಪಾ? ಏನಿರುತ್ತೆ ಮಾತು ಈ ಮುದುಕನ ಹತ್ತಿರ?"

"ಏನಾದರೂ ಸರಿ. ನೀವು ಹಿರಿಯವರು, ಈ ಹಳ್ಳಿಯವರು,..... ನಿಮ್ಮ ಹತ್ತಿರ ಮಾತನಾಡಿ ತಿಳಿದುಕೊಳ್ಳುವುದು ಸಾಕಷ್ಟಿರುತ್ತೆ."

"ಸುಳ್ಳು. ನಿನ್ನ ಮಾತನ್ನು ನಂಬುವುದಿಲ್ಲ ನಾನು. ಬೇರೆ ಏನೋ ವಿಷಯ ಇದೆ. ನನಗೇನೂ ತಿಳಿಯೋಲ್ಲ ಅಂದ್ಕೊಬೇಡ" ಸುರೇಶ ಅಂಜಿದರೂ ತೋರ್ಪಡಿಸಿಕೊಳ್ಳದೇ ವಿಧೇಯನಂತೆ ಅವರ ಬಳಿ ಬಂದು ನಿಂತು ನುಡಿದ.

"ನಾಳೆ ಬೆಂಗಳೂರಿನಿಂದ ನಮ್ಮ ಕಡೆಯವರು, ತಾಯಿ ಮಗಳು ಇಲ್ಲಿಗೆ ಬರುತ್ತಾರೆ..."

"ಹುಂ. ಅದಕ್ಕೆ? ನಮ್ಮ ಮನೆಗೆ ಬರೋರು ಹೋಗೋರು ಇದ್ದೇ ಇರ್ತಾರೆ. ಅದರಲ್ಲೇನು?"

"ಅವರು ಮುಕುಂದನಿಗೆ.... ಹೆಣ್ಣು ಕೊಡುವ ಮಾತನಾಡಲು ಬರುತ್ತಿದ್ದಾರೆ" ತಡವರಿಸಿದರೂ ನುಡಿದೇ ಬಿಟ್ಟ.

"ಆಂ...ಯಾರು? ಏನಿದು ಕುತಂತ್ರ?" ಒರಟಾಗಿ ಕೇಳಿದರು.

"ಕುತಂತ್ರ ಏನಿಲ್ಲ. ಮುಕುಂದ ಹುಡುಗೀನ ನೋಡಿ ಒಪ್ಪಿದಾನೆ. ನಾಳೆ ಮದುವೆ ಮಾತನಾಡಲು ಬರುತ್ತಿದಾರೆ ಅಷ್ಟೇ.."

"ಏನಿದು ತಮಾಷೆ! ಇದನ್ನು ಹೇಳುವುದಕ್ಕೆ ಇಲ್ಲಿಗೆ ಬಂದೆಯಾ?"

"ತಮಾಷೆ ಏನಿಲ್ಲ ತಾತಾ....ಎಲ್ಲಾ ಹೇಳಿ ಬಿಡ್ತೀನಿ. ಆ ಹುಡುಗಿ ನನ್ನ ಸಂಬಂಧದವಳು. ಮುಕುಂದ ಅವಳನ್ನು ಮೆಚ್ಚಿದ್ದಾನೆ...."

"ಇದರಲ್ಲಿ ನಿಂದೇನಯ್ಯಾ ಮಧ್ಯಸ್ಥಿಕೆ." ತಾತನ ಒರಟು ಮಾತಿಗೆ ಬೇಸರವಾದರೂ ಸುರೇಶ ನುಡಿದ.

"ಹೇಳಿದ್ನೆಲ್ಲ ಹುಡುಗಿ ನಮ್ಮ ಸಂಬಂಧದವಳು. ಇಬ್ಬರ ಪರಿಚಯವಾಗಿ ಸ್ನೇಹ ಕೂಡಾ ಇದೆ. ಅದಕ್ಕೇ ಮದುವೆ ವಿಷಯ ಮಾತನಾಡಿ..."

"ಮದುವೆ ಆದಮೇಲೆ ಬಂದು ಹೇಳಿದ್ರೂ ಆಗ್ತಿತ್ತು ಕಣಯ್ಯಾ..."

ಮಧ್ಯದಲ್ಲೇ ವ್ಯಂಗ್ಯವಾಗಿ ತಾತ ನುಡಿದಾಗ ಸುರೇಶನಿಗೆ ರೇಗಿತು. ಆದರೂ ಸಹಿಸಿಕೊಂಡು ವಿನಯವನ್ನು ಪ್ರಕಟಿಸುತ್ತಾ.

"ಅದ್ಹೇಗೆ ಆಗುತ್ತೆ? ನೀವು ಹುಡುಗೀನ ನೋಡಬೇಡವೆ! ಒಪ್ಪಬೇಡವೆ? ಹಿರಿಯೋರು ನಿಮ್ಮ ಆಶೀರ್ವಾದವಿಲ್ಲದೆ ಮದುವೆ ನಡೆಯುತ್ಯೆ?"

"ಸಾಕು. ನಿಮ್ಮ ಬೂಟಾಟಿಕೆ ಮಾತು. ಅವನೆಲ್ಲಿ ಕರಿ. ಅವನಿಗೆಷ್ಟು ಧೈರ್ಯ? ಮನೆಯವರಿಗೆ ತಿಳಿಯದಂತೆ ಯಾರದೋ ಸ್ನೇಹ ಮಾಡಿ...."

"ಯಾರದೋ ಅಲ್ಲ. ಮುಕುಂದ ಮದುವೆಯಾಗುವವಳು ಅವಳು."

"ಇರು. ಮದುವೆ ನಡೆದರೆ ತಾನೆ...? ಆಮೇಲೆ ಆ ಮಾತು."

"ಯಾಕೆ ನಿಮಗೆ ಒಪ್ಪಿಗೆ ಇಲ್ಲವೆ?"

"ಇಲ್ಲ. ಖಂಡಿತಾ ಇಲ್ಲ. ಹಿರಿಯವನು ಅಂತ ನಾನಿನ್ನು ಬದುಕಿದ್ದೀನಿ. ಈ ಮನೇಲಿ ನಾನು ನೋಡಿ ಒಪ್ಪಿದ ಹುಡುಗಿಯನ್ನೇ ಮದುವೆಯಾಗಬೇಕು ಅವನು. ನನ್ನ ಮಾತು ನಡೆಯಬೇಕು" ಹಠದ ಧ್ವನಿಯಿತ್ತು ಮಾತಿನಲ್ಲಿ.

"ಅವನು ನಿಮ್ಮ ಮೊಮ್ಮಗ ಅವನೂ ಹೀಗೇ ಹಠ ಮಾಡಿದರೆ!"

"ಮಾಡಿದರೆ? ಈ ಮನೆಯಲ್ಲಿ ಅವನಿಗೆ ಜಾಗವಿಲ್ಲ. ನನ್ನ ಆಸ್ತಿಯಲ್ಲಿ ಪಾಲು ಇಲ್ಲ. ಅಷ್ಟೇ..."

"ನೋಡಿ ತಾತಾ...ನನಗೆ ಅದೆಲ್ಲ ತಿಳಿಯದು. ಇಬ್ಬರೂ ಒಬ್ಬರನ್ನೊಬ್ಬರು ಪ್ರೀತಿಸಿದಾರೆ. ನೀವು ಒಪ್ಪಿ ಅವರಿಬ್ಬರ ಮದುವೆಯಾದರೆ ಇಬ್ಬರೂ ಸಂತೋಷವಾಗಿರ್ತಾರೆ. ಇಲ್ಲದಿದ್ದರೆ ನಿಮ್ಮ ಆಶೀರ್ವಾದವಿಲ್ಲದೇ ಕೊರಗ್ತಾರೆ. ಅವರು ಸುಖವಾಗಿರಲಿ ಅಂತ ನಿಮಗೆ ಆಸೆ ಇಲ್ಲವೆ?"

"ನನ್ನ ಮಾತು ಕೇಳಿದರೂ ಸುಖವಾಗಿರ್ತಾನೆ"

"ಆದರೆ ಅದು ನಿಮ್ಮ ಬಲವಂತದ ಮದುವೆ ಆಗುತ್ತದೆ. ಅವನು ಹೇಗೆ ಸುಖವಾಗಿರ್ತಾನೆ?"

"ಪದ್ಧತಿ ಪ್ರಕಾರ, ಹಿರಿಯವರು ನೋಡಿ ಒಪ್ಪಿದ ಮದುವೆ ಮಾಡಿಕೊಂಡರೆ ಬಲವಂತೆ ಹೇಗೆ ಆಗುತ್ತದೆ? ಸುಖವಾಗಿರಲು ಅಂತ ತಾನೇ ನಾವೂ ಅವನಿಗೆ ಹೇಳುವುದು?"

"ಎಲ್ಲರೂ ಒಪ್ಪಿದ್ದಾರೆ. ನಿಮ್ಮ ಒಪ್ಪಿಗೆ ಮಾತ್ರ ಬೇಕು... ಹಿರಿಯವರು ನೀವು. ನಿಮ್ಮ ಒಪ್ಪಿಗೆ ನೀಡಿ ನಿಮ್ಮ ಹಿರಿತನವನ್ನು ಉಳಿಸಿಕೊಳ್ಳಿ"

"ಹೊರಗಿನಿಂದ ಬಂದವನು, ನನಗಿಂತ ಚಿಕ್ಕವನು, ನನ್ನ ಮನೆಯಲ್ಲೇ ನನಗೆ ಹಿರಿತನದ ಪಾಠವನ್ನು ಹೇಳಿಕೊಡಬೇಕಾಗಿಲ್ಲ. ಮನೆಗೆ ಬಂದ ಅತಿಥಿ ಅಂತ ಸುಮ್ಮನಿದೀನಿ. ನೀನಿನ್ನು ಹೋಗಬಹುದು" ಎಂದು ತಾತ ಖಂಡಿತವಾಗಿ ನುಡಿದಾಗ ಸುರೇಶನಿಗೆ ಅವಮಾನವಾದಂತಾಯಿತು. ಆದರೂ ಮತ್ತೆ ಆಡಿದ.

"ನಾನು ಮುಕುಂದನ ಆಪ್ತ ಸ್ನೇಹಿತ. ಅವನಿಗೆ ಈ ವಿಷಯದಲ್ಲಿ ಸಹಾಯ ಮಾಡ್ತೀನಿ ಅಂತ ಮಾತು ಕೊಟ್ಟಿದ್ದರಿಂದ ನಿಮ್ಮ ಹತ್ತಿರ ಇಷ್ಟು ಮಾತನ್ನಾಡ ಬೇಕಾಯ್ತು. ನಿಮ್ಮ ಮನಸ್ಸಿಗೆ ನೋವಾಗಿದ್ದರೆ ಕ್ಷಮಿಸಿಬಿಡಿ. ನಾಳೆ ಅವರುಗಳು ಇಲ್ಲಿಗೆ ಬರುತ್ತಿದ್ದಾರೆ. ಮುಂಚಿತವಾಗಿ ತಿಳಿಸುವುದು ಒಳ್ಳೆಯದು ಅಂತ ಹೇಳಿದೆ ಅಷ್ಟೆ"

"ಯಾಕೆ? ಅವನಿಗೇನಾಗಿದೆ? ಅವನೇಕೆ ಬರಲಿಲ್ಲ? ಅವನೇ ಬಂದು ಆಡ ಬಹುದಾಗಿತ್ತಲ್ಲ?"

"ಅವನು ನಿಮಗೆ ಗೌರವ ಕೊಡ್ತಾನೆ. ಅದಕ್ಕೇ ಹಿಂಜರಿದಿದ್ದಾನೆ. ನಾನು ಆಡಿದ್ದೆಲ್ಲಾ ಮುಗಿಯಿತು. ಇನ್ನು ನಿಮ್ಮ ಇಷ್ಟ. ನಾನಿನ್ನು ಬರ್ತೀನಿ" ಹೊರಟವನು "ನಿಂತ್ಕೋ" ಎಂದ ಅವರ ಮಾತಿಗೆ, ತಡೆದು ನಿಂತ.

"ನನ್ನ ಮೊಮ್ಮಕ್ಕಳು ಯಾರೂ, ಎಂದೂ ಇಷ್ಟು ಹೊತ್ತು ನನ್ನ ಹತ್ತಿರ ಧೈರ್ಯದಿಂದಾಗಲೀ, ತಾತ ಎಂಬ ಪ್ರೀತಿಯಿಂದಾಗಲೀ ಮಾತಾಡಿಲ್ಲ. ನೀನು ಇಷ್ಟು ಮಾತಾಡಿದೆ ಎಂದು ನನಗೇನೂ ಬೇಜಾರಿಲ್ಲ. ಆದರೆ ಇದು ನಮ್ಮ ಮನೆ ಮದುವೆ ವಿಷಯ, ನಮಗೆ ಸೇರಿದ್ದು. ಯಾರ ರಾಯಭಾರವೂ ಬೇಕಿಲ್ಲ. ನಾನೇ ಇತ್ಯರ್ಥ ಮಾಡಿಕೊಳ್ತೇನೆ"

ಅವಮಾನದಿಂದ ಸುರೇಶನ ಮುಖ ಕೆಂಪಾಯಿತು. "ಇದೆಂತಹ ಮುದುಕ? ಅದಕ್ಕೇ ಮುಕುಂದ ಹೆದರಿದಾನೆ. ಇರು ಅವನಿಗೆ ಬುದ್ಧಿ ಕಲಿಸ್ತೀನಿ" ಎಂದುಕೊಂಡು.

"ಹೌದು. ನಿಮ್ಮ ಮನೆಯ ವಿಚಾರದಲ್ಲಿ ತಲೆ ಹಾಕಲು ನನಗ್ಯಾವ ಅಧಿಕಾರವೂ ಇಲ್ಲ. ನನ್ನ ತಪ್ಪನ್ನು ಕ್ಷಮಿಸಿಬಿಡಿ" ಎಂದ.

"ಸರಿ. ಕ್ಷಮಿಸಿದೀನಿ. ಹೇಗೂ ಊರಿಗೆ ಬಂದಿದೀಯಾ. ಎರಡು ದಿನ ಆರಾಮ ವಾಗಿ ತಿಂದುಂಡು, ತಿರುಗಾಡಿಕೊಂಡು ಮಜಾ ಮಾಡಿ ಊರಿಗೆ ವಾಪಸ್ಸು ಹೋಗು.... ಈಗ ಅವನನ್ನು ಕಳಿಸು. "ಸುರೇಶ ಕೆಟ್ಟ ಮುಖ ಮಾಡಿ ಹೊರಬಂದ. ಹೊರಗೆ

ಯಾರೂ ಕಾಣಲಿಲ್ಲ. ಧೈರ್ಯವಾಗಿ ರೂಮಿಗೆ ಬಂದ. ಅವನಿಗಿಂತ ಮುಂಚಿತವಾಗಿ ಬಂದು ಕೂತು ಸಿಗರೇಟು ಸೇದುತ್ತಿದ್ದ ಮುಕುಂದ ಅವನೆಡೆ ನೋಡಿ ನಕ್ಕ.

"ಆಯ್ತೇನಯ್ಯಾ ವಾಯುಭಾರ? ಹಣ್ಣೋ ಕಾಯೋ....?" ಸುರೇಶ ನಗಲಿಲ್ಲ.

"ನಿಮ್ಮ ತಾತ ಒಪ್ಪುವ ತರಹ ಕಾಣುವುದಿಲ್ಲಪ್ಪ" ನಡೆದ ಮಾತುಕತೆಯನ್ನು ವಿವರಿಸಿ ಹೇಳಿದ. ಮುಕುಂದನಿಗೂ ಬೇಸರವಾಯಿತು.

"ಸಾರಿ. ಸುರೇಶ ನನ್ನಿಂದ ನಿನಗೆ ಅವಮಾನವಾಯಿತು. ಹೊರಗಿನವರ ಮಾತನ್ನಾದರೂ ಕೇಳಬಹುದೇನೋ ಅಂದುಕೊಂಡಿದ್ದೆ"

"ಪರವಾಗಿಲ್ಲ. ಹೋಗಲಿಬಿಡು. ನನ್ನ ತಾತ ಬದುಕಿದ್ದರೂ ಹೀಗೇ ಆಡುತ್ತಿದ್ದರೇನೋ....ಈಗ ನೀನೇನು ಮಾಡ್ತೀಯಾ? ನಾಳೆ ಬೆಳಿಗ್ಗೆ ಅವರುಗಳು ಬಂದೇ ಬಿಡ್ತಾರಲ್ಲ"

"ಬರಲಿ. ಒಂದು ದಿನ ಇಲ್ಲಿದ್ದು ಹೊರಡ್ತಾರೆ. ನಾನೂ ಅವರ ಜತೆ ಹೊರಟು ಬಿಡ್ತೀನಿ. ಮದುವೆ ಮಾತನ್ನೇ ಆಡುವುದು ಬೇಡ."

"ಮತ್ತೆ.... ಆಮೇಲೆ?"

"ನೋಡೋಣ....ಅದನ್ನು ಬೆಂಗಳೂರಿನಲ್ಲಿ ಯೋಚಿಸಬಹುದು. ನಾನು ಈಗಲೇ ಹೋಗಿ ಚಿಕ್ಕಮ್ಮನಿಗೆ ತಿಳಿಸ್ತೀನಿ. ನಾಳೆ ಅವರುಗಳೆದುರಿಗೆ ಏನೂ ರಂಪವಾಗುವುದು ಬೇಡ." ಮುಕುಂದ ಸಪ್ಪೆ ಮುಖ ಮಾಡಿದ.

"ಸಾರಿ ಮುಕುಂದ. ನಾನು ನಿಮ್ಮ ತಾತನ್ನು ಒಪ್ಪಿಸ್ತೀನಿ ಅಂತ ಜಂಭ ಪಟ್ಟುಕೊಂಡಿದ್ದೆ"

"ನನಗೆ ಗೊತ್ತಿತ್ತು ಹೀಗೆ ಅಂತ. ಆನಂದನ ಬಗ್ಗೇನೂ ಹೀಗೇ ಒರಟಾಗಿ ಮಾತನಾಡಿ ಅವನನ್ನು ಈ ಮನೆಯಿಂದ ಹೊರ ಹಾಕಿದರು. ಈಗ ನನ್ನನ್ನೂ ಅದೇ ದಾರಿಗೆ ತಳ್ತಿದಾರೆ... ನನ್ನಿಂದ ಬೇಸರವಾಗಿದ್ದರೆ, ಇದೊಂದು ಕೆಟ್ಟ ಕನಸು ಅಂತ ಮರೆತು ಬಿಡು... ಪ್ಲೀಸ್" ಎಂದು ವ್ಯಥಿತನಾಗಿ.

ರಾತ್ರಿಯ ಹೊತ್ತು ತಾತ ಊಟ ಮಾಡುತ್ತಿರಲಿಲ್ಲವಾದ್ದರಿಂದ ಅವರು ಹೊರಗೆ ಬರಲಿಲ್ಲ. ಉಳಿದವರು ಊಟ ಮಾಡಿದರು. ಮುಕುಂದ ಚಿಕ್ಕಮ್ಮನೊಡನೆ ಹೇಳಿದ.... "ನಾಳೆ ಅವರುಗಳು ಬಂದಾಗ ಯಾರೂ ಏನೂ ತಿಳಿಯದವರಂತೆ ಸುಮ್ಮನಿದ್ದು ಬಿಡಿ. ಈ ಮಾತನ್ನು ಎತ್ತಲೇ ಬೇಡಿ. ನಾನು ಮದುವೆಯಾದರೆ ಅವಳನ್ನೇ ಮದುವೆಯಾಗುವುದು. ಇಲ್ಲದಿದ್ದರೆ ಹೀಗೇ ಇದ್ದು ಬಿಡ್ತೀನಿ. ತಾತ ಎರ್ರಾಬಿರ್ರಿ ಮಾತನಾಡಿ

ಅವರಿಗೆ ಅವಮಾನ ಮಾಡುವುದು ಬೇಡ. ಅವರುಗಳು ನನ್ನ ಮಾತಿಗೆ ಒಪ್ಪಿ ಬರುತ್ತಿದಾರೆ..."

ಸರಸ್ವತಿ ಮಂಕಾದಳು. ಇದೇನು ಹೀಗೆ ಮಾತನಾಡ್ತಿದಾನೆ ಎಂದುಕೊಂಡು "ಏನಾಯ್ತೋ ತಾತನ ಹತ್ತಿರ ಮಾತನಾಡಿದೆಯಾ?" ಕೇಳಿದಳು.

"ಹುಂ. ಅವರು ಒಪ್ಪುವಂತೆ ಕಾಣಲ್ಲ"

"ಸರಿ. ನಿನಗೂ ಯಾಕೆ ಅವಳೇ ಆಗಬೇಕು ಅಂತ ಹಠ? ನೋಡೋಣ ನಾಳೆ ಕಳೆದು ಹೋಗಲಿ. ಆಮೇಲೆ ಅವರ ಹತ್ತಿರ ಮತ್ತೆ ಮಾತನಾಡೋಣ."

"ನೀವುಗಳು ಏನು ಬೇಕಾದ್ರೂ ಮಾಡಿಕೊಳ್ಳಿ. ನಾನು ನಾಡಿದ್ದೇ ಊರಿಗೆ ಹೊರಟು ಹೋಗ್ತೀನಿ."

"ಅವಳೇ ನಿನ್ನ ಹೆಂಡತಿ ಅಂತ ನಿನ್ನ ಹಣೆಯಲ್ಲಿ ಬರೆದಿದ್ದರೆ ಹಾಗೇ ಆಗುತ್ತೆ. ಚಿಂತೆ ಏಕೆ? ನಾಳೆ ಹೇಗೂ ವಿಜಯದಶಮಿ. ವಿಜಯ ನಿನ್ನ ಕಡೆಗೆ ಇದ್ದರೂ ಇರ ಬಹುದು."

"ಯಾರು ಏನೇ ಹೇಳಲಿ, ಮಾಡಲಿ, ವಿಜಯ ನನ್ನ ಕಡೆಗೇ...."

"ಆನಂದನೂ ಹೀಗೇ ಯದ್ವಾತದ್ವಾ ಮಾತನಾಡಿ ಸಂಬಂಧಾನೇ ತೊರೆದು ಕೊಂಡು ಹೋದ. ನೀನು ಜಾಣ ಅಂತ ಅಂದುಕೊಂಡಿದ್ದೆ."

"ನಾವೂ ಜಾಣರಾಗಿರಬೇಕಾದರೆ, ಈ ತಾತನಿಂದ ದೂರವಾಗಲೇ ಬೇಕು"

"ನೀವುಗಳು ಮೊಮ್ಮಕ್ಕಳು. ಹೀಗೆ ಮಾತನಾಡ್ತೀರಿ. ನಿನ್ನ ತಂದೆ, ಚಿಕ್ಕಪ್ಪ ಹೇಗೆ ಅನುಭವಿಸಬೇಕು ನೀನೇ ಯೋಚಿಸು."

"ನಿಮ್ಮ ಕಾಲದಲ್ಲಿ ಈ ಸಮಸ್ಯೆ ಬಂದಿರಲಿಲ್ಲ."

"ಒಂದೊಂದು ಕಾಲದಲ್ಲಿ ಒಂದೊಂದು ತರಹದ ಸಮಸ್ಯೆ. ಅದನ್ನು ಎದುರಿಸಿ ಇಷ್ಟು ಮುಂದೆ ಬಂದಿದೀವಿ."

"ಅದೆಲ್ಲಾ ನಿಮಗೇ ಇರಲಿ ಚಿಕ್ಕಮ್ಮ. ನನಗೆ ಇದೆಲ್ಲ ಅರ್ಥವಾಗಲ್ಲ"

"ಸರಿ. ಹೀಗೆ ಮನಸ್ಸು ಕೆಡಿಸಿಕೊಂಡರೆ ಹೇಗೆ? ಬೆಳಿಗ್ಗೆ ಅವರುಗಳು ಬರಲಿ. ಬರುತ್ತಿದ್ದ ಹಾಗೇ ನಿನ್ನ ಮುಖ ನೋಡಿ ಏನೋ ನಡೆದಿದೆ ಅಂತ ಅವರುಗಳು ಅಂದುಕೋಬಾರದು. ಹೋಗಿ ಮಲಕ್ಕೋ ಎಲ್ಲಾ ಸರಿ ಹೋಗುತ್ತೆ."

ಆ ರಾತ್ರಿಯೂ ಮುಕುಂದ ನಿದ್ದೆ ಇಲ್ಲದೇ ಹೊರಳಾಡಿದ. ಸುರೇಶನಿಗೂ ಬೇಸರವೆನಿಸಿತ್ತು. ಬೆಳಗಾಗುವುದನ್ನೇ ಕಾದಿದ್ದು ಇಬ್ಬರೂ ಶಿವಮೊಗ್ಗಕ್ಕೆ ಹೊರಟರು.

ಇವರು ಬಸ್‌ಸ್ಟ್ಯಾಂಡ್‌ಗೆ ಬರುವ ಹೊತ್ತಿಗೆ ಬೆಂಗಳೂರಿನ ಬಸ್ಸು ಬಂದು ಸೇರಿತ್ತು.

ಅತ್ತಿತ್ತ ನೋಡುತ್ತಾ ಯಾರನ್ನೋ ಅರಸುವಂತೆ ನೋಡುತ್ತಿದ್ದ ಸುಕನ್ಯಳನ್ನು ಮೊದಲು ಗುರುತಿಸಿದವನು ಸುರೇಶ. ಅವಳ ಪಕ್ಕ ನಿಂತಿದ್ದ ಚೆಲುವೆಯನ್ನೇ ನೋಡಿದ. ಮನಸ್ಸು ಉಲ್ಲಾಸಗೊಂಡಿತು. ಹಿಂದಿನ ದಿನದ ಬೇಸರವೆಲ್ಲ ಒಂದೇ ಘಳಿಗೆಯಲ್ಲಿ ಮಾಯವಾಗಿ ಹೋಯ್ತು. "ಮುಕುಂದ ನೋಡು... ಅಲ್ಲಿ ನಿಂತಿದಾರೆ." ಕೈ ಮಾಡಿ ತೋರಿಸಿದ. ಮುಕುಂದನೂ ಆ ಕಡೆಗೆ ತಿರುಗಿ ಕೈ ಬೀಸಿದ.

"ಸಧ್ಯ ಅವರಮ್ಮನ್ನ ಕರೆದುಕೊಂಡು ಬಂದಿಲ್ಲ. ತಂಗೀನ ಕರೆದುಕೊಂಡು ಬಂದಿದಾಳೆ ಒಳ್ಳೇದೇ ಆಯ್ತು." ಎಂದ ತಾನೂ ಹಾಯಾಗಿ.

"ನೋಡಿದ್ಯಾ. ನಿಮ್ಮ ಚಿಕ್ಕಮ್ಮ ಹೇಳಿದ್ರಲ್ಲಾ ಹಾಗೇ ವಿಜಯದಶಮಿಯ ಮೊದಲ ಹೆಜ್ಜೆ...." ಎಂದು ನಗುತ್ತಾ ಇಬ್ಬರೂ ಅವರಿದ್ದೆಡೆಗೆ ನಡೆದರು.

ಸುಕನ್ಯ ಇಬ್ಬರನ್ನೂ ಸೇರಿಸಿ ಒಟ್ಟಿಗೆ "ಹಲೋ" ಎಂದಳು. "ಇವಳು ನನ್ನ ತಂಗಿ ಸರಳಾ" ಎಂದು ಸುರೇಶನಿಗೆ ಪರಿಚಯಿಸಿದಳು. ಸರಳ ಮುಗುಳ್ನಕ್ಕು ಅವನ ವಂದನೆಗೆ ಪ್ರತಿವಂದನೆ ಸಲ್ಲಿಸಿದಳು. ಆ ದಿನ ಕಿಟಕಿಯಲ್ಲಿ ಕಂಡ ಚೆಲುವೆ ಈ ದಿನ ಎದುರಿಗೇ ನಿಂತಿದ್ದಳು. ಮತ್ತೊಮ್ಮೆ ದೀರ್ಘವಾಗಿ ಅವಳನ್ನೇ ನೋಡಿದ. ಸರಳ ಹೆಸರಿಗೆ ತಕ್ಕಂತೆ ಸರಳವಾಗಿದ್ದರೂ, ಸುಂದರವಾಗಿದ್ದಳು. ಸುಕನ್ಯೆಯ ಅಲಂಕಾರ ಅತಿ ಕೃತಕವಾಗಿ ಕಂಡಿತು.

"ಮುಕುಂದನಿಗೆ ಸರಿಯಾಗಿದ್ದಾಳೆ. ಇವನೂ ಷೋಕಿ ಮನುಷ್ಯ. ಸಂಪಾದಿಸಿದ ಹಣದಲ್ಲಿ ಅರ್ಧವನ್ನೆಲ್ಲ ಗಂಡ ಹೆಂಡತಿ ತಮ್ಮ ಅಲಂಕಾರಕ್ಕೆ ಖರ್ಚು ಮಾಡ್ತಾರೆ" ಎಂದುಕೊಂಡು ತನ್ನಲ್ಲೇ ನಕ್ಕ.

"ಕಾಫಿ ಗೀಫಿ ಕುಡಿತೀರೋ, ಅಥವಾ ಸೀದಾ ಮನೆಗೆ ಹೋಗೋಣವೋ"

"ಕಾಫಿ ಬೇಕು ಮುಕುಂದ" ಎಂದು ಸುಕನ್ಯ ರಾಗವಾಗಿ ನುಡಿದಾಗ ಮುಕುಂದ "ಸರಿ, ಸರಿ.... ನಡೀರಿ" ಎಂದ. ಎಲ್ಲರೂ ಎದುರಿಗಿದ್ದ ಹೋಟೆಲ್ಲಿಗೆ ಬಂದರು. ಬಿಸಿ ಬಿಸಿ ಕಾಫಿ ಗಂಟಲಿನಲ್ಲಿ ಇಳಿದೊಡನೆ ಎಲ್ಲರೂ ಚುರುಕಾದರು. ಟ್ಯಾಕ್ಸಿಯನ್ನು ಗೊತ್ತು ಮಾಡಿಕೊಂಡು ತೀರ್ಥಹಳ್ಳಿಯ ರಸ್ತೆಯಲ್ಲಿ ಹೋಗತೊಡಗಿದರು. ಸುಕನ್ಯ ಮುಕುಂದರದೇ ಹೆಚ್ಚಿನ ಮಾತುಗಳು. ಸರಳ ಸುರೇಶ ಮೂಕ ಪ್ರೇಕ್ಷಕರು.

ಟ್ಯಾಕ್ಸಿ ಮನೆ ಮುಂದೆ ನಿಂತೊಡನೆ, ಕಿಟಕಿಯಿಂದ ಇಣುಕಿ ನೋಡಿದ ವಿಮಲ

ಒಳಗೆ ಹೋಗಿ ವರ್ತಮಾನ ತಿಳಿಸಿದಳು. ಎಲ್ಲರೂ ಒಳ ಬಾಗಿಲಿನಲ್ಲೇ ನಿಂತು ಇವರುಗಳ ಕಡೆ ನೋಡತೊಡಗಿದರು.

ಸುಕನ್ಯಂಗೆ ಮುಜುಗರವೆನಿಸಿತು. "ಥೂ ಹಳ್ಳಿ ಜನ" ಎಂದು ಗೊಣಗಿಕೊಂಡಳು. ಮುಕುಂದ ಮುಂದೆ ನಡೆದ. ಸುರೇಶನ ಹಿಂದೆ ಆ ಹುಡುಗಿಯರು, ಒಳಗೆ ಬಂದರು.

ಒಳಗೆ ನಿಂತು ಮುಕುಂದ ಒಂದು ಸಲ ಎಲ್ಲರ ಕಡೆಗೂ ನೋಡಿದ. ತಾತ, ಹಾಗೂ ಅವನ ತಂದೆ ಅಲ್ಲಿರಲಿಲ್ಲ. ತಾಯಿ ಅಡಿಗೆ ಮನೆ ಬಾಗಿಲಿನಲ್ಲಿ ನಿಂತಿದ್ದಳು. ಅವರ ಹಿಂದೆ ಚಿಕ್ಕಮ್ಮ, ಚಿಕ್ಕಪ್ಪ ರೂಮಿನ ಬಾಗಿಲಿನ ಬಳಿ ನಿಂತಿದ್ದರು. ರಾಜೇಂದ್ರ ಕಿಟಕಿಗೊರಗಿ ನಿಂತಿದ್ದ. ವಿಮಲ, ಮಧು ಅವನ ಪಕ್ಕದಲ್ಲಿ ನಿಂತಿದ್ದರು. ಮುಕುಂದ ಅಮ್ಮನ ಕಡೆ ತಿರುಗಿ ಹೇಳಿದ.

"ಅಮ್ಮ... ಇವಳು ಸುಕನ್ಯ.... ಅವಳು ಇವಳ ತಂಗಿ ಸರಳಾ"

ಜಾನಕಮ್ಮ ವಿಶ್ವಾಸದಿಂದ, 'ಬನ್ನಿ' ಎಂದು ಕರೆದಾಗ ಇಬ್ಬರೂ ನೆಮ್ಮದಿಯಿಂದ ಕೈ ಮುಗಿದು 'ನಮಸ್ಕಾರ' ಎಂದರು.

"ಚಿಕ್ಕಮ್ಮ ಇವರು ಇವತ್ತು ಇಲ್ಲಿರ್‍ತಾರೆ. ಇವರಿಬ್ಬರ ಯೋಗ ಕ್ಷೇಮ ನಿಮಗೆ ಸೇರಿದ್ದು..." ಎಂದು ಹೇಳಿ ಅಲ್ಲಿ ನಿಲ್ಲದೇ ರೂಮನ್ನು ಸೇರಿಕೊಂಡ. ಸುರೇಶ ಪೆಚ್ಚಾದ. ಮುಕುಂದನ ವರ್ತನೆ ಬೇಸರವನ್ನುಂಟು ಮಾಡಿತು. ಅವನನ್ನೇ ನಂಬಿ ಬಂದವಳು. ಅವಳನ್ನು ಇಲ್ಲಿ ಎಲ್ಲರ ಜತೆ ಮಧ್ಯೆ ಬಿಟ್ಟು ಹೊರಟು ಹೋದನಲ್ಲ ತನ್ನ ಪಾಡಿಗೆ ತಾನು... ಎಂದುಕೊಂಡು ಚಿಕ್ಕಮ್ಮನ ಕಡೆ ನೋಡಿದ. ಆಕೆ,

"ರಾತ್ರಿಯೆಲ್ಲಾ ಪ್ರಯಾಣ ಮಾಡಿ ಆಯಾಸವಾಗಿರುತ್ತೆ ಒಂದು ಘಳಿಗೆ ಸುಧಾರಿಸಿಕೊಳ್ಳಿ. ಕಾಫಿ ತಂದು ಕೊಡ್ತೀನಿ" ಎಂದು ಒಳಸರಿದಳು.

ಸುಕನ್ಯ ಮುಖ ಸೊಟ್ಟಗೆ ಮಾಡಿದ್ದನ್ನು ಸುರೇಶ ಗಮನಿಸಿದ. ಸರಳನ ಕಡೆ ನೋಡಿದ. ಅವಳು ನಿಂತಲ್ಲೇ ಮನೆಯನ್ನೆಲ್ಲಾ ವೀಕ್ಷಿಸುತ್ತಿದ್ದಳು.

"ಕೂತ್ಕೊಳ್ಳಿ" ಎಂದ ತಾನೂ ಕೂರುತ್ತ. ಇಬ್ಬರೂ ಕುಳಿತರು. ವಿಮಲ ಮೂವರಿಗೂ ಕಾಫಿ ಕೊಟ್ಟು, ಮುಕುಂದನಿಗೆ ಕೊಡಲೆಂದು ಅವನ ರೂಮಿಗೆ ಹೊರಟಳು. ಸುರೇಶ ಅವಳನ್ನು ತಡೆದ.

"ವಿಮಲ, ಅವನನ್ನು ಇಲ್ಲಿಗೇ ಕರೀರಿ. ಬಂದಿರುವುದು ಅವನ ಸ್ನೇಹಿತರು. ಅವನೇ ಇಲ್ಲಿ ಇಲ್ಲದಿದ್ದರೆ ಹೇಗೆ?" ಸರಳ ಮಂದಹಾಸವನ್ನು ಸೂಸಿದಳು. ಸುಕನ್ಯ

ಕೋಪದಿಂದ ಕೆಂಪಾಗಿದ್ದಳು. ಸುರೇಶನ ಮಾತುಗಳು ಮುಕುಂದನಿಗೆ ಕೇಳಿಸಿ ಎದ್ದು ಬಂದಿದ್ದ. ಸುರೇಶ ಅವನ ಕೈ ಹಿಡಿದು ವಿಶ್ವಾಸವನ್ನು ತೋರುತ್ತಾ ಕೈ ಅದುಮಿದ.

ರಾಜೇಂದ್ರ ಕಿಟಕಿಯ ಬಳಿ ನಿಂತು ಅವರಿಬ್ಬರನ್ನೇ ನೋಡುತ್ತಿದ್ದ. ಸುಕನ್ಯಳ ಬಗ್ಗೆ ಮೆಚ್ಚುಗೆ ಮೂಡಿರಲಿಲ್ಲ. ಸರಳೆಯ ಬಗ್ಗೆ ಏನೇನೋ ಆಸೆಗಳನ್ನು ತುಂಬಿಕೊಂಡ.

"ಮಧು ಬಾ ಇಲ್ಲಿ" ಎಂದು ಕರೆದು, ಇವರಿಬ್ಬರನ್ನು ನನ್ನ ರೂಮಿಗೆ ಕರೆದುಕೊಂಡು ಹೋಗು. ಇಬ್ಬರೂ ಸ್ನಾನ ಮಾಡ್ತಾರೆ. ಬಚ್ಚಲು ಮನೆ ತೋರಿಸು." ಮುಕುಂದನ ಮಾತಿಗೆ ಮಧು ತಲೆ ಆಡಿಸಿದಳು. ಕಾಫಿ ಕುಡಿದು ಮುಗಿಸಿ ಇಬ್ಬರೂ ಎದ್ದರು. ರಾಜೇಂದ್ರ ಅಲ್ಲಿಂದ ಕದಲಿದ.

"ನಾನು ಮುಕುಂದನ ಜತೆ ಸ್ವಲ್ಪ ಮಾತನಾಡಬೇಕು. ನೀನು ಮೊದಲು ಸ್ನಾನ ಮುಗಿಸಿ ಬಾ..." ಎಂದು ಸುಕನ್ಯ ಹೇಳಿದಾಗ ಸ್ವರಳ ಮಧುವಿನ ಜತೆ ನಡೆದಳು. ಅವರಿಬ್ಬರೂ ಅತ್ತ ಹೋದ ಕೂಡಲೇ ಮುಕುಂದ ಸುಕನ್ಯಳ ಬಳಿಗೆ ಬಂದ....

"ಮುಕುಂದ, ನಿಮ್ಮ ಮನೆಯವರೆಲ್ಲಾ ಉದಾಸೀನವಾಗಿದಾರಲ್ಲ.... ಏನು ಹೇಳಿದ್ರು?" ಸುಕನ್ಯ ಆತಂಕವನ್ನು ತೋರಿಸಿದಳು.

"ನಾನು ಏನೂ ಮಾತನ್ನಾಡೇ ಇಲ್ಲ. ಎಲ್ಲರಿಗೂ ಹಬ್ಬದ ಕೆಲಸ... ಪಾಪ ಬೇಗ ಎದ್ದು ಮಾಡಿರ್ತಾರೆ. ನಿದ್ದೆ ಸಾಲದು ಇವತ್ತೂ ಹಬ್ಬ, ತುಂಬಾ ಕೆಲಸವಿದೆ." ಮುಕುಂದ ತಡವರಿಸಿದ.

"ಮತ್ತೆ ಯಾವಾಗ ಮಾತನಾಡ್ತೀರಿ?"

"ನೋಡೋಣ ಮಾತನಾಡಿದ್ರಾಯ್ತು"

"ನಾನು ಮತ್ತೆ ಮತ್ತೆ ಬರೋಕ್ಕೆ ಆಗಲ್ಲ ಈ ಹಳ್ಳಿಗೆ"

"ಹಳ್ಳಿ ಹಳ್ಳಿ ಅಂತ ಯಾಕೆ ಹೀಗಾಡ್ತೀಯಾ! ಹಳ್ಳಿಯವನನ್ನು ಮೆಚ್ಚಿಕೊಂಡಿದೀಯ ಇಲ್ಲಿಗೆ ಬರದೇ ಎಲ್ಲಿಗೆ ಹೋಗ್ತೀಯಾ?" ತಮಾಷೆ ಮಾಡಿದ.

"ತಮಾಷೆ ಬೇಡ. ನಿಮ್ಮ ಮನೆಯವರು ಒಪ್ಪದಿದ್ರೆ ಏನ್ಮಾಡ್ತೀರಿ?"

"ತಡಿ ಅವಾಂತರವೇಕೆ? ಹಬ್ಬ ಕಳೆಯಲಿ. ಎಲ್ಲರೆದುರಿಗೆ ನಿನ್ನನ್ನು ನಿಲ್ಲಿಸಿ, ಇವಳನ್ನು ಮದುವೆಯಾಗ್ತಿದೀನಿ. ಎಲ್ಲರಿಗೂ ಒಪ್ಪಿಗೇನಾ ಅಂತ ಕೇಳೇ ಬಿಡ್ತೀನಿ."

"ನಿಜವಾಗಿಯೂ?" ಸುಕನ್ಯ ಹುಬ್ಬೇರಿಸಿದಳು.

"ಯಾಕೆ ಅನುಮಾನಾನಾ?"

"ಯಾಕೋ ಈ ಮನೆ, ಈ ಜನ ಎಲ್ಲಾ ಗಾಭರಿಯಾಗ್ತಿದೆ. ಎಲ್ಲಾ ಹಾಗೇಕೆ ಮಿಕಿ ಮಿಕಿ ಅಂತ ನೋಡ್ತಾರೆ."

"ಹೊಸಬಳು, ಹಾಗೆ ನೋಡ್ತಾರೆ. ಎರಡು ದಿನ ಇಲ್ಲೇ ಇರು. ನೀನು ಎಲ್ಲಿದೀಯ ಅಂತ ಸಹ ಯಾರೂ ನೋಡಲ್ಲ, ಕೇಳಲ್ಲ ನಿನ್ನನ್ನು"

"ಅಷ್ಟೇನಾ? ಎರಡೇ ದಿನದ ಬೆಲೇನಾ ನನಗೆ?"

"ಆ ಬೆಲೆ ಚಿಂತೆ ಯಾಕೆ? ಇಲ್ಲಿ ಸದಾಕಾಲ ನಿನಗೆ ಬೆಲೆ ಇದೆ, ನೆಲೆ ಇದೆ" ತನ್ನ ಎದೆ ಮುಟ್ಟಿಕೊಂಡು ಹೇಳಿದ.

"ಆ ಧೈರ್ಯದ ಮೇಲೇ ಇಲ್ಲಿ ತನಕ ಬಂದಿರುವುದು... ಒಂದು ವೇಳೆ ನಮ್ಮ ಮದುವೆ ನೆರವೇರದೇ ಹೋದರೆ?"

"ನನ್ನ ಮೇಲೆ ನಂಬಿಕೆ ಇದ್ದರೆ ಮತ್ತೆ ಆ ಮಾತನ್ನಾಡಬೇಡ. ಅದ್ಸರಿ ನಿಮ್ಮ ತಾಯಿ ಏಕೆ ಬರಲಿಲ್ಲ?"

"ಸಾವಿತ್ರಿಗೆ ಹುಷಾರಿರಲಿಲ್ಲ. ಸರಳಂಗೆ ಹಬ್ಬದ ರಜವಿತ್ತು. ಯಾಕೆ? ಏನಾಯ್ತೀಗ?"

"ಏನಿಲ್ಲ. ಆದರೆ ಸರಳ ಚಿಕ್ಕವಳು ಏನು ಮಾತನಾಡಬಲ್ಲಳು?"

"ಯಾರೇಕೆ ಮಾತನಾಡಬೇಕು? ನೀವಿದೀರಲ್ಲ." ರೇಗಿದಳು.

"ಓ.ಕೇ. ಓ. ಕೇ.. ರೇಗಬೇಡ. ಯಾರಿಗಾದರೂ ಕೇಳಿಸಿದರೆ ನಗ್ತಾರೆ. ಇದುವರೆಗೂ ನಮ್ಮ ಮನೆಯಲ್ಲಿ ಯಾರ ಹೆಂಡತಿಯೂ ಗಂಡನ ಮೇಲೆ ರೇಗಿಲ್ಲ"

"ಹಾಗಾದ್ರೆ ಹೆಂಡತಿಯಾದ ಮೇಲೆ ರೇಗಬಾರದು ಅಂತ ತಾನೇ. ಈಗ ನಾನಿನ್ನು ನಿಮ್ಮ ಹೆಂಡತಿಯಾಗಿಲ್ಲವಲ್ಲ"

"ನೀನು ಅತಿ ಜಾಣೆ...." ಸುಕನ್ಯಳ ಕೆನ್ನೆ ಹಿಂಡಿದ. ಬಾಗಿಲ ಬಡಿತ ಕೇಳಿತು. ಜತೆಗೆ ಸುರೇಶನ ಧ್ವನಿ.

"ಬರಲೇನಯ್ಯಾ?"

"ಬಾರಯ್ಯಾ ಸುಮ್ಮನೇ... ಇಲ್ಲೇನೂ ನಡೀಬಾರದ್ದು ನಡೀತಿಲ್ಲ"

"ಹಾಗಲ್ಲ. ನಾನು ಭೂ ಪ್ರದಕ್ಷಿಣೆ ಹೋಗಬೇಕಾದ ಸ್ಥಿತಿ ಒದಗಿದರೆ ಅಂತ.."

"ಓ.... ಷಟಪ್. ಈ ಮನೇಲಿ ನನಗೆ ಅಷ್ಟು ಧೈರ್ಯ ಎಲ್ಲಿದೆ?"

ಸುಕನ್ಯ ಎದ್ದು ನಿಂತಳು "ಎಷ್ಟು ಹೊತ್ತಾಯ್ತು ಅವಳು ಹೋಗಿ. ಜಲಕ್ರೀಡೆ ಆಡ್ತಿದಾಳಾ ಹೇಗೆ?"

"ಜಲಕ್ರೀಡೆ ಆಡಬೇಕು ಅಂತಿದ್ರೆ ನದೀಗೆ ಹೋಗೋಣ. ಮನೇಲಿ ಏನು ಚೆನ್ನ?".

"ನಿಜವಾಗಿಯೂ ಯಾವಾಗ ಹೋಗೋಣ?"

"ತಾತಾ ಗೋತಾ ಹೊಡೆದ ಮೇಲೆ" ಮುಕುಂದ ಯಾವ ಭಾವನೆಯೂ ಇಲ್ಲದೇ ಹೇಳಿದಾಗ ಸುರೇಶ ಪೆಚ್ಚಾದ.

"ಮುಕುಂದಾ... ಏನಿದು? ಯಾರಿಗಾದ್ರೂ ಕೇಳಿಸಿದರೆ ಏನಂದುಕೊಳ್ತಾರೆ?"

"ಎಲ್ಲರೂ ಆ ದಿನಕ್ಕಾಗಿ ಕಾಯುತ್ತಿದಾರೆ ನನಗೆ ಗೊತ್ತು." ಎಂದ.

ಸುರೇಶ ಸುಕನ್ಯಳ ಮುಖ ನೋಡಿ, ರೂಮಿನಿಂದ ಆಚೆಗೆ ಬಂದ. ಅದೇ ಸಮಯಕ್ಕೆ ಎದುರಾದ ಸರಳ ಢಿಕ್ಕಿ ಹೊಡೆಯುವುದರಲ್ಲಿದ್ದಳು. "ಸಾರಿ" ಎಂದ. ಸರಳ ನಕ್ಕಳು. ಎಲ್ಲವನ್ನು ಮರೆತು ಅವಳನ್ನೇ ನೋಡಿದ.

"ಜಾಗ ಬಿಡಿ" ಎಂದಳು ಮುಗುಳ್ನಗುತ್ತಾ. ಮತ್ತೊಮ್ಮೆ 'ಸಾರಿ' ಎಂದು ನುಡಿದು ಜಾಗ ಬಿಟ್ಟ. ಅವಳು ರೂಮಿನೊಳಕ್ಕೆ ಹೋದಳು. ಸುಕನ್ಯ ಮುಕುಂದ ಆಚೆಗೆ ಬಂದರು.

"ಏನೇ ಬಚ್ಚಲು ಮನೆ ಚೆನ್ನಾಗಿದ್ಯೇನೆ? ಒಳಗೆ ಇಣುಕಿ ತಂಗಿಯನ್ನು ಕೇಳಿದಳು.

"ಏ-ಒನ್, ಸುಮ್ಮನೇ ಹೋಗಿ, ಬೇಗ ಸ್ನಾನ ಮುಗಿಸಿ ಬಾ"

"ನೀನು ರೇಗಬೇಡ ನನ್ನ ಮೇಲೆ" ಸಿಡುಕಿದಳು. ಸುಕನ್ಯ ಬಟ್ಟೆಗಳನ್ನು ಹಿಡಿದು ಬಚ್ಚಲು ಮನೆ ಕಡೆ ನಡೆದಳು.

ಇದ್ದಕ್ಕಿದ್ದಂತೆ ಸುರೇಶ ಕೇಳಿದ "ನಿಮ್ಮ ಮನೆಗೆ ಏನಾದ್ರೂ ಹೆಸರನ್ನಿಟ್ಟಿದ್ದೀರಾ?"

"ಹೂಂ... ಕೋಲಾಹಲ, ಕುರುಕ್ಷೇತ್ರ, ರಣರಂಗ ಇತ್ಯಾದಿ, ಇನ್ನು ಏನೇನೋ.... ಅಥವಾ ಇನ್ನು ಯಾವುದಾದರೂ ಸೂಕ್ತವಾದ ಹೆಸರು ಇದ್ದರೆ ತಿಳಿಸು... ಅದನ್ನು ಇಟ್ಟರಾಯಿತು."

"ನಿಮ್ಮ ಮನೆಗೆ ನಾನು ಹೆಸರನ್ನಿಟ್ಟರೆ ನಿಮ್ಮ ತಾತ ಸುಮ್ಮನಿರ್ತಾರಾ?" ಸುರೇಶ ತಲೆ ಅಡ್ಡಡ್ಡ ಮಾಡಿದ.

"ಸರಿ ಬಿಡು. ನಮ್ಮ ತಾತನ ಮನೆಗೆ ಹೆಸರನ್ನಿಡಲು ನೀನ್ಯಾರು? ನಮ್ಮ ಮನೆಗೆ ಹೆಸರನ್ನಿಡೂವಂತೆ..."

ಬಿರುಗಾಳಿಯಂತೆ, ತಕ್ಷಣವೇ ವಾಪಸ್ಸಾದಳು ಸುಕನ್ಯ.

"ಬರೀ ಸಗಣಿ ವಾಸನೆ. ನನಗಂತೂ ತಡೆಯೋಕೆ ಆಗ್ತಿಲ್ಲ "ವಾಕರಿಸುವಂತೆ ಕೆಟ್ಟ ಮುಖ ಮಾಡಿದಳು.

"ಸ್ನಾನ ಆಯ್ತೋ ಇಲ್ಲವೋ.." ಸರಳ ಕೇಳಿದಳು.

"ಎಲ್ಲಿ ಆಯ್ತು? ಎ-ಒನ್ ಎಂದೆ. ಬರೀ ಕೊಳಕು, ವಾಸನೆ"

"ಕೊಳಕೇನಿಲ್ಲ ಬಿಡು... ಸ್ನಾನದ ಮನೇಲಿ ಏನು ಮಲಗಬೇಕಾ? ಬೇಗ ಸ್ನಾನ ಮುಗಿಸಿ ಬರಬಾರದಾ?"

"ಈ ಹೆಂಗಸರೇ ಇಷ್ಟು ಎಷ್ಟು ಪಿರುಕಣೆ, ಎಷ್ಟು ಪರುಟವಣೆ?" ಮುಕುಂದ ತಲೆ ಚಚ್ಚಿಕೊಂಡ.

"ಏನು ಹಾಗಂದ್ರೆ!"

"ನಿನ್ನ ತಲೆ ಮೈಗೆಲ್ಲಾ ಸೆಂಟು ಸುರಿದುಕೊಂಡು ಸ್ನಾನದ ಶಾಸ್ತ್ರ ಮಾಡಿ ಬಾ. ಇವತ್ತೆಲ್ಲಾ ಹೀಗೆ ಕಾಲ ಕಳೀಬೇಡ" ಸುಕನ್ಯ ಆಕಡೆ ಸರಿದ ಮೇಲೆ ನಗುತ್ತಾ ನುಡಿದ.

"ನಮ್ಮ ಮನೆ ಚಿಂತೆಯೇ ಇಲ್ಲ ಇವಳಿಗೆ ಅವಳದ್ದೇ ಅವಳಿಗೆ. ಹಳ್ಳಿ ಮನೆ ಎಂದ್ರೆ ಇನ್ನು ಹೇಗೆ ಇರುತ್ತೆ? ದನ ಕರು ಇದ್ದ ಮೇಲೆ ಸಗಣಿ ವಾಸನೆ ಇದ್ದೇ ಇರುತ್ತೆ."

"ಈ ತರಹದ ಸ್ವಭಾವದವರು ನಿಮ್ಮ ತಾತನ್ನ ಹೇಗೆ ಮೆಚ್ಚಿಸ್ತಾರೋ?"

ತಾತಂಗೆ ಇಂಥೋರೇ ಸರಿ. ಹೋಗಲಿ ಬಿಡು. ಈ ದಿನ ಆ ಸುದ್ದಿಯೇ ಬೇಡ. ನಾಳೆ ದಿನ ಎಲ್ಲರೂ ಊರಿಗೆ ಹೊರಟು ಹೋಗೋಣ."

ಕೆಲವರಿಗೆ ಬೆಳಗಿನ ತಿಂಡಿಯೂ ಆಯಿತು. ಜತೆಯಲ್ಲಿಯೇ ಅಡಿಗೆಯೂ ತಯಾರಾಯಿತು. ವಿಜಯದಶಮಿ ದೇವರ ಉತ್ಸವ ಪ್ರತಿ ವರ್ಷವೂ ಇದೇ ಮಾರ್ಗವಾಗಿ ಮೆರವಣಿಗೆ ಹೋಗುತ್ತಿದ್ದುದು. ಸಾಯಂಕಾಲದ ಹೊತ್ತಿಗೆ ಎಲ್ಲರೂ ಬಿಡುವು ಮಾಡಿಕೊಂಡು ಮೆರವಣಿಗೆ ನೋಡಲು ಸಿದ್ಧರಾಗಿರುತ್ತಿದ್ದರು. ಹಣ್ಣುಕಾಯಿಯೊಂದಿಗೆ ಮಂಗಳಾರತಿ ಮಾಡಿಸುತ್ತಿದ್ದರು.

ತಿಂಡಿ ತಿಂದ ಸ್ವಲ್ಪ ಹೊತ್ತಿಗೆ ಸುಕನ್ಯ, ತಲೆನೋವು, ವಾಕರಿಕೆ, ವಾಂತಿಯಾಗುವಂತಿದೆ ಎಂದು ಒದ್ದಾಡತೊಡಗಿದಳು.

"ನನಗೇ ಸಗಣಿ ವಾಸನೆ, ಹಳೇ ಮನೆ ವಾಸನೆ ತಡೆಯಕ್ಕೆ ಆಗ್ತಿಲ್ಲ. ನಾನೀಗಲೇ ವಾಪಸ್ಸು ಹೋಗ್ತೀನಿ" ಎಂದು ಹಠಮಾಡತೊಡಗಿದಳು.

ಮುಕುಂದ ಅಸಹನೆಯನ್ನು ಬದಿಗೊತ್ತಿ, ಸಮಾಧಾನದಿಂದ ಹೇಳಿದ, "ಈ ಮನೆಯ ಸೊಸೆಯಾಗಿ ಬರುವವಳು ನೀನು. ಇದನ್ನೆಲ್ಲಾ ತಡೆದುಕೊಳ್ಳಲೇ ಬೇಕಾಗುತ್ತೆ. ನಾವೆಲ್ಲಾ ಇಲ್ಲವೆ?"

"ನೀವು ಇರ್ತೀರಿ ಅಂತ, ನನಗೆಲ್ಲಿಯ ಕರ್ಮ?"

"ಸುಕನ್ಯ.... ಇದು ಅತಿಯಾಯ್ತು. ತಾತನ್ನ ಒಪ್ಪಿಸೋಕ್ಕೆ ಆಗದೇ ನಾನು ಒದ್ದಾಡ್ತಿದೀನಿ. ಜತೆಗೆ ನೀನೂ ಅದಕ್ಕೆ ಸರಿಯಾಗಿ ಹೀಗೆ ಮಾತನಾಡ್ತೀಯಲ್ಲ. ಏನಾದ್ರೂ ಮಾಡ್ಕೋ..." ಹೊರಗೆ ವಿಮಲನ ಹತ್ತಿರ ಮಾತನಾಡುತ್ತಾ ನಿಂತಿದ್ದ ಸರಳೆಯನ್ನು ಕರೆದ. ಸುರೇಶನನ್ನು ಕರೆದ.

"ಇವಳು ಊರಿಗೆ ಹೋಗ್ತಾಳಂತೆ. ಯಾರಾದ್ರೂ ಬಸ್ಸು ಹತ್ತಿಸಿ ಬನ್ನಿ. ಅಥವಾ ನೀವು ಹೋಗುವುದಾದರೆ ಹೊರಡಿ" ಸರಳ ಗಾಭರಿಯಾದಳು. ಸುರೇಶ ಕಾರಣವನ್ನು ಕೇಳಿ ತಿಳಿದುಕೊಂಡ. ಸರಳ ಅಕ್ಕನಿಗೆ ಸಮಾಧಾನದಿಂದ ತಿಳುವಳಿಕೆ ಹೇಳಿದಳು.

"ಇದೆಲ್ಲಾ ಏನು ದೊಡ್ಡದು ಅಂತ ರಂಪ ಮಾಡ್ತಿದೀಯೇ... ಮೆಡಿಕಲ್ ಸ್ಟೋರ್ಸ್‌ನಿಂದ ಮಾತ್ರೆ ತರಿಸಿದರಾಯ್ತು. ತಿಂದರೆ ಸರಿ ಹೋಗುತ್ತೆ. ಬಂದ ತಕ್ಷಣ ಹೊರಟರೆ ಏನಂದುಕೊಳ್ತಾರೆ? ಅಲ್ಲದೇ ಬಂದಿರುವುದು ನಮ್ಮ ಕೆಲಸಕ್ಕೆ ಅಲ್ವಾ?"

ಸುರೇಶ ಸರಳೆಯನ್ನು ಮೆಚ್ಚುಗೆಯಿಂದ ನೋಡಿದ. "ನಾನು ಹೋಗಿ ಮಾತ್ರೆಗಳನ್ನು ತಂದು ಕೊಡ್ತೀನಿ" ತಾನೇ ಹೇಳಿದ.

"ಹೂಂ, ಪ್ಲೀಸ್" ಎಂದಳು ಸರಳ. ಸುರೇಶ ಹೊರಟ.

ಅಷ್ಟರಲ್ಲಿ ಸುಕನ್ಯ ಬಚ್ಚಲು ಮನೆಯತ್ತ ಓಡಿದ್ದಳು. ಅವಳ ಹಿಂದೆ ಸರಳನೂ ಓಡಿದಳು. ಅಲ್ಲೇ ತಿರುಗಾಡುತ್ತಿದ್ದವರಿಗೆ, ಸುಕನ್ಯಳಿಗೆ ತಲೆನೋವು, ವಾಂತಿ ಎನ್ನುವ ವಿಷಯ ತಿಳಿಯಿತು. ರಾಜೇಂದ್ರ ಸರಳೆಯನ್ನು ವ್ಯಂಗ್ಯವಾಗಿ ಕೇಳಿದ.

"ಏನಾಯ್ತು? ನಿಮ್ಮ ಅಕ್ಕನಿಗೆ? ಇನ್ನೂ ಹಳ್ಳಿ ಊಟವನ್ನು ಮಾಡಿಯೇ ಇಲ್ಲ." ಸರಳ ಉತ್ತರಿಸುವ ಮೊದಲೇ ಮುಕುಂದ ರೇಗಿದ್ದ.

"ನಿನಗೇನು ಅದನ್ನೆಲ್ಲಾ ಕಟ್ಟಿಕೊಂಡು? ನಿನ್ನ ಕೆಲಸ ನೋಡು ಹೋಗು"

ರಾಜೇಂದ್ರ 'ಗುರ್' ಎಂದ. ವಿಮಲ ಕಷಾಯ ತಯಾರಿಸಿ ತಂದಿದ್ದಳು.

"ಅಜೀರ್ಣಕ್ಕೆ ಹೀಗಾಗುತ್ತೆ. ಕಷಾಯ ಕುಡಿದರೆ ಸರಿಹೋಗುತ್ತೆ ಅಂತ ಚಿಕ್ಕಮ್ಮ ಹೇಳಿದಳು ತಗೊಳ್ಳಿ"

"ಬೇಡ... ನನಗೆ ಇದೆಲ್ಲಾ ಸೇರೋಲ್ಲ"

"ಸುಮ್ಮನೆ ಔಷಧಿ ಅಂದ್ಕೊಂಡು ಕುಡಿ ಏನೂ ಆಗೋಲ್ಲ"

"ಸೇರೋಲ್ಲ ಅಂದ್ರೆ ಸೇರೋಲ್ಲ" ಸುಕನ್ಯ ಸಿಡುಕಿದಾಗ ವಿಮಲ ಹೆದರಿ ಕಷಾಯದ ಬಟ್ಟಲನ್ನು ವಾಪಸ್ಸು ತೆಗೆದುಕೊಂಡು ಹೊರಟು ಹೋದಳು.

"ನಾನಿನ್ನು ಇಲ್ಲೇ ಇದ್ರೆ ಸತ್ತು ಹೋಗ್ತೀನಿ ಅಷ್ಟೆ.... ಮೊದಲು ನನ್ನನ್ನು ಡಾಕ್ಟರ ಹತ್ತಿರ ಕರೆದುಕೊಂಡು ಹೋಗಿ.... " ಮುಕುಂದನ ಕೈ ಹಿಡಿದಳು.

ಅಷ್ಟರಲ್ಲಿ ಸುರೇಶ ಮಾತ್ರೆಗಳನ್ನು ತಂದಿದ್ದ. ಸುಕನ್ಯ ಮಾತ್ರೆಗಳನ್ನು ನುಂಗಿ ಮಲಗಿದಳು. ಮುಕುಂದ ಅಲ್ಲೇ ಕುಳಿತ. ಸುರೇಶ, ಸರಳ ಆಚೆಗೆ ಬಂದರು. ಸುರೇಶ ಅವಳನ್ನೇ ದಿಟ್ಟಿಸಿ ನೋಡಿದ. "ಸರಳಂಗೆ ಏನೂ ಆಗ್ತಿಲ್ಲವೆ?" ತನ್ನಲ್ಲೇ ಅಂದು ಕೊಂಡ.

"ಸರಳ ಬರ್ತೀರಾ... ಹಾಗೆ ತಿರುಗಾಡಿ ಬರೋಣ ಚೆನ್ನಾಗಿದೆ"

ಅವಳು ಅನುಮಾನಿಸಿದಳು. ಸಂಕೋಚ ಪಡುತ್ತಿದ್ದಾಳೆ ಎಂದುಕೊಂಡು, "ಪರವಾಗಿಲ್ಲ ಬಿಡಿ. ನಿಮಗಿಷ್ಟವಿಲ್ಲವೇನೋ... ನನಗೂ ಹೊಸ ಜಾಗ. ನೀವೂ ಹೊಸಬರು. ನಿಮ್ಮ ಅಕ್ಕ ಮಲಗಿದ್ದಾರೆ... ನನ್ನ ಸ್ನೇಹಿತ ಅವರ ಕೇರ್ ತಗೋ ತಿದಾನೆ. ಸುಮ್ಮನೇ ಇಲ್ಲಿ ಕುಳಿತು ಮಾಡುವುದೇನು ಅಂತ.... ಅಷ್ಟೆ".

"ನೀವು ಹೋಗಿ ಬನ್ನಿ. ನಾನು ಇಲ್ಲಿ ಮನೆಯವರ ಹತ್ತಿರ ಮಾತನಾಡ್ತಿರ್ತೀನಿ. ನನಗೇನೂ ಬೇಜಾರಿಲ್ಲ." ಸರಳ ಸಂಕೋಚ ಬಿಟ್ಟು ನುಡಿದಾಗ ಅವನಿಗೂ ಸರಿ ಎನಿಸಿತು. ತಾನು ಚಪ್ಪಲಿ ಮೆಟ್ಟಿ ಹೊರನಡೆದ.

ಸರಳ ಅಡಿಗೆ ಮನೆ ಹೊಕ್ಕಿದ್ದನ್ನು ನೋಡಿದ ರಾಜೇಂದ್ರ ತಾನೂ ಅಡಿಗೆ ಮನೆ ಹೊಕ್ಕ. ಅಲ್ಲಿಯೇ ಇದ್ದ ಒಂದು ಚಾಪೆಯ ಮೇಲೆ ಕುಳಿತ.

"ಏನಮ್ಮಾ.... ಏನಾದ್ರೂ ಬೇಕಾಗಿತ್ತಾ?" ಚಿಕ್ಕಮ್ಮ ಆದರದಿಂದ ಸರಳೆ ಯನ್ನು ಕೇಳಿದಳು.

"ಏನೂ ಬೇಡ... ಸುಮ್ಮನೇ ಬಂದೆ. ನಾನು ಏನಾದ್ರೂ ಸಹಾಯ ಮಾಡಲೇ?"

"ಬೇಡಮ್ಮ... ನೀವು ಅತಿಥಿಗಳು. ನಿಮ್ಮಿಂದ ಕೆಲಸ ತೆಗೆಯುವುದೇ?"

"ತಪ್ಪೇನು? ಎಲ್ಲರೂ ಸೇರಿ ಮಾಡಬೇಕಾದ ಕೆಲಸ ಅಲ್ವೆ....?"

"ಪರವಾಗಿಲ್ಲ. ನಾವೇ ಬೇಕಾದಷ್ಟು ಜನರಿದೀವಿ. ಹೋಗೇ ವಿಮಲ ಹೊರಗೆ ಇವರ ಜತೆ ಮಾತನಾಡುತ್ತಾ ಇರು."

"ನಾನು ಇಲ್ಲೇ ಕೂತಿದ್ರೆ ನಿಮಗೆ ತೊಂದರೆ ಏನಿಲ್ಲ ತಾನೇ...."

"ನಮಗೇನು ತೊಂದರೆ? ಈ ಘಾಟು, ಈ ಹೊಗೆವಾಸನೆ ನಿನಗೆ ತಲೆನೋವು ಬರಿಸದಿದ್ದರೆ ಸಾಕು.... ನಿಮ್ಮಕ್ಕನಿಗೆ ಹೇಗಿದೆ ಈಗ?"

ಸರಳ ಸರಳವಾಗಿ ನಕ್ಕಳು.

"ನಂಗೇನೂ ಆಗಲ್ಲ ಬಿಡಿ. ಸುಕನ್ಯ ಮಾತ್ರ ಸುಂಗಿ ಮಲಗಿದಾಳೆ. ಸ್ವಲ್ಪ ಹೊತ್ತಿಗೆ ಸರಿ ಹೋಗಬಹುದು."

"ಎಷ್ಟಾಗಲೀ ಪಟ್ಟಣದವರು.. ಇಂತಹ ಹಳ್ಳಿಗೆ ಹೊಂದಿಕೊಳ್ಳುವುದು ಕಷ್ಟ ವಾಗುತ್ತೆ" ಚಿಕ್ಕಮ್ಮ ವ್ಯಂಗ್ಯವಾಗಿ ಹೇಳಿದಾಗ ಸರಳ ಸುಮ್ಮನಿದ್ದಳು. ಚಿಕ್ಕಮ್ಮ ಅವಳ ಮನೆಯ ವಿಷಯವನ್ನು ಕೇಳಿ ತಿಳಿದುಕೊಂಡಳು.

"ನಿಮ್ಮ ತಾಯಿ ಬರ್ತಾರೆ ಅಂತ ಮುಕುಂದ ಹೇಳಿದ್ದ...."

"ನಮ್ಮ ಅಜ್ಜಿಗೆ ಹುಷಾರಿರಲಿಲ್ಲ. ಅದಕ್ಕೆ ಬರಕ್ಕಾಗಲಿಲ್ಲ...

ಸರಳ ತಾನಾಗಿಯೇ, ಮುಕುಂದ ಸುಕನ್ಯರ ಸ್ನೇಹ ಕುರಿತು ಏನನ್ನೂ ಹೇಳಲಿಲ್ಲ. ಅವರುಗಳೂ ಕೇಳಲಿಲ್ಲ. ಅವರಿಗೆಲ್ಲಾ ಸರಳ ಮೆಚ್ಚುಗೆಯಾಗಿದ್ದಳು. ಸರಳ ನಡೆಯ ನುಡಿಯ ಈ ಹುಡುಗಿಯನ್ನೇ ಮುಕುಂದ ಏಕೆ ಮದುವೆಯಾಗಬಾರದು ಎಂದು ಓರಗಿತ್ತಿಯರು ಆಲೋಚಿಸುತ್ತಿದ್ದರು.

ಸರಳ ಏನು ಆಡಿ ಬಿಡುವಳೋ ಎಂದು ಹೆದರಿ, ಮುಕುಂದ ಅವಳನ್ನರಸಿ, ಅಡಿಗೆ ಮನೆಗೆ ಬಂದಿದ್ದ. ಅವನನ್ನು ಕಂಡು ಸರಳ ಎದ್ದು ನಿಂತಳು. "ಸುಕನ್ಯಾ ಎದ್ದಳಾ?" ಕೇಳಿದಳು. ಅವಳು ಹೊರ ನಡೆದಳು, ಅವನು 'ಹುಂ' ಎಂದು ಹೇಳಿದೊಡನೆ. "ಈ ಹೆಂಗಸರ ಮಧ್ಯೆ ಕೂತು ಏನು ಮಾಡ್ತಿದೀಯಾ?" ಮುಕುಂದ ರಾಜೇಂದ್ರನ ಕಡೆ ತಿರುಗಿ ರೇಗಿದ್ದ.

"ಈಗ ನೀನು ಈ ಹೆಂಗಸರ ಮಧ್ಯೆ ಬಂದು ಏನೋ ಮಾಡ್ತಿದೀಯಾ?" ಕೂತಲ್ಲಿಂದ ಅಲ್ಲಾಡದೇ ರಾಜೇಂದ್ರ ನುಡಿದಾಗ ಮುಕುಂದ ರೇಗಿ ಹೊರ ನಡೆದ.

"ಸಿಟೀಲಿದೀನಿ ಅಂತ ದಿನ ದಿನಕ್ಕೆ ಪೊಗರು ಜಾಸ್ತಿ ಆಗ್ತಿದೆ" ರಾಜೇಂದ್ರ ಗೊಣಗಿದಾಗ ಚಿಕ್ಕಮ್ಮ ಸಿಡುಕಿದಳು.

"ನೀನು ಸುಮ್ಮನಿರು. ಅವನು ಬರುವುದೇ ಕಡಿಮೆ. ಇನ್ನು ಮೇಲೆ ಇನ್ನೂ ಅಪರೂಪವಾಗಿ ಬಿಡ್ತಾನೆ."

"ನೀವು ಅವನ ಪರವಹಿಸಿಕೊಂಡು ನನ್ನನ್ನು ಅನ್ನಬೇಡಿ" ರಾಜೇಂದ್ರ ಎದ್ದು

ನಡೆದ. ಎಲ್ಲರೂ ಮಾತಿಲ್ಲದೇ ಕೆಲಸ ಮುಂದುವರೆಸಿದರು.

ವಿಜಯದಶಮಿಯ ವಿಶೇಷ ಪೂಜೆ, ಮಂಗಳಾರತಿಯೊಂದಿಗೆ ಸಮಾಪ್ತಿ ಯಾಯಿತು. ಎಲ್ಲರೂ ಮಂಗಳಾರತಿಯನ್ನು ಕಣ್ಣಿಗೊತ್ತಿಕೊಂಡು, ದೇವರಿಗೆ ಪ್ರದಕ್ಷಿಣೆ ನಮಸ್ಕಾರ ಮಾಡಿದರು. ನಂತರ ತೀರ್ಥ ಪ್ರಸಾದ ಪಡೆದರು. ಅಲ್ಲಿ ಸುಕನ್ಯ ಇಲ್ಲದ್ದನ್ನು ಎಲ್ಲರೂ ಗಮನಿಸಿದ್ದರು. ತಂದೆ ನರಸಿಂಹ ಭಟ್ಟರು, ಸರಳೆ ಯನ್ನು ಮೆಚ್ಚುಗೆಯಿಂದ ನೋಡಿದ್ದು ಎಲ್ಲರ ಗಮನಕ್ಕೆ ಬಂದಿತ್ತು. ರಾಜೇಂದ್ರನ ಮನಸ್ಸಿನಲ್ಲಿ ಏನೇನೋ ಆಸೆ.

ಮುಕುಂದ, ಸುಕನ್ಯಳನ್ನು ಎಬ್ಬಿಸಿ, ಬಲವಂತದಿಂದ ಕರೆತಂದಿದ್ದ. ನಿದ್ದೆಗಣ್ಣಿನ ಸುಕನ್ಯಳಿಗೆ ಸರಳ ಸಹಾಯ ಮಾಡಿ, ತೀರ್ಥಪ್ರಸಾದವನ್ನು ಕೊಡಿಸಿದಳು. ಮುಕುಂದ ಪೆಚ್ಚಾಗಿದ್ದ. ತಾತ ಅಲ್ಲಿಯೇ ಕೂತಿದ್ದರು.

ಎಲ್ಲರೂ ಊಟಕ್ಕೆ ಕುಳಿತಾಗ, ಸುಕನ್ಯ ತಾನು ಊಟಮಾಡುವುದಿಲ್ಲವೆಂದು ಹಠ ಮಾಡಿದಳು.

"ಒಂದು ತುತ್ತು ತಿಳಿಸಾರು ಅನ್ನ ತಿನ್ನು. ಏನೂ ಆಗೊಲ್ಲ. ಯಾರೂ ನಿನಗೆ ಬೇರೇನೂ ಬಲವಂತ ಮಾಡುವುದಿಲ್ಲ." ಮುಕುಂದನೆಂದಾಗ ಸರಳ ಅದನ್ನೇ ಅನುಮೋದಿಸಿದ್ದಳು. ಸುರೇಶ ಮುಕುಂದನಿಗೆ ಹೇಳಿದ.

"ನಿಮ್ಮ ತಾತನಿಗೆ ಈಗಲೇ ಪರಿಚಯ ಮಾಡಿಸಿಬಿಡು ಆಮೇಲೆ ಏನಾದ್ರೂ ಅಂದಾರು...." ಮನಸ್ಸಿಲ್ಲದ ಮನಸ್ಸಿನಲ್ಲಿ ಅವನು ಸುಕನ್ಯಳನ್ನು ತಾತನ ಬಳಿಗೆ ಕರೆತಂದ.

"ತಾತ. ಊಟಕ್ಕೆ ಏಳಿ. ಎಲೆ ಹಾಕಿದೆ...."

"ಏನಪ್ಪಾ.... ಎಂದೂ ಇಲ್ಲದ್ದು. ಏನು ವಿಶೇಷ?"

"ಅಮ್ಮ ಕರೆದು ಬಾ ಎಂದಳು ಬಂದೆ ಅಷ್ಟೇ...." ತಾತ ತಾವಾಗಿಯೇ ಏನೂ ಕೇಳದ್ದನ್ನು ಗಮನಿಸಿದ ಸುರೇಶ ಮುಂದೆ ಬಂದ.

"ತಾತ, ನೆನ್ನೆ ನಾನು ಹೇಳಿದ್ನಲ್ಲ...ನಮ್ಮ ಕಡೆಯವರು.... ಅವರುಗಳು ಬೆಂಗಳೂರಿನಿಂದ ಬಂದಿದಾರೆ...."

ಸುಕನ್ಯ ಸರಳಂಗೆ, ಸಂಜ್ಞೆ ಮಾಡಿ, ನಮಸ್ಕರಿಸುವಂತೆ ಹೇಳಿದ ಮುಕುಂದ.

ಸರಳ ಗೌರವದಿಂದ ತಾತನಿಗೆ ನಮಸ್ಕರಿಸಿದಾಗ, ಸುಕನ್ಯ ಅವಳನ್ನೇ ಅನುಸರಿ ಸಿದಳು. ತಾತ, ಆಶೀರ್ವಾದ ಮಾಡಿದರು. ಆದರೆ ಏನನ್ನೂ ಕೇಳಲಿಲ್ಲ. ಅವರಿಗೆ

ಕಣ್ಣು ಸರಿಯಾಗಿ ಕಾಣುತ್ತಿರಲಿಲ್ಲವಾದ್ದರಿಂದ ಯಾರೂ ಸರಿಯಾಗಿ ಗೊತ್ತಾಗಲಿಲ್ಲವಾದ್ದರಿಂದ ಸುಮ್ಮನಾದರು.

ವಿಜಯದಶಮಿಯ ಹಬ್ಬದ ಸಿಹಿ ಊಟ ಜೋರಾಗಿತ್ತು. ಸುಕನ್ಯ ಸುಮ್ಮನೇ ತಿಳಿಸಾರು, ತಿಳಿ ಮಜ್ಜಿಗೆಯಲ್ಲಿ ಅನ್ನ ಕಲಸಿ ತಿಂದ ಶಾಸ್ತ್ರ ಮಾಡಿದಳು. ಎಲ್ಲರೂ ಊಟ ಮುಗಿಸಿ ಸುಧಾರಿಸಿಕೊಳ್ಳುವ ಸಮಯದಲ್ಲಿ, ಆ ಮನೆಯವರೆಲ್ಲಾ ಅಡಿಗೆ ಮನೆಯಲ್ಲಿ ಸೇರಿದ್ದರು. ತಾತ, ತಂದೆ, ಮುಕುಂದನ ಹೊರತು ಪಡಿಸಿ, ... ಉಳಿದವರು ಸರಳ ಸುಕನ್ಯಳ ಬಗ್ಗೆಯೇ ಚರ್ಚೆ ಮಾಡುತ್ತಿದ್ದರು. ಎಲ್ಲರಿಗೂ ಮೆಚ್ಚುಗೆಯಾಗಿದ್ದವಳು ಸರಳಳೇ... ಮುಕುಂದ ಸಿಗರೇಟು ಮುಗಿಸಿ ಒಳಗೆ ಅಡಿಗೆ ಮನೆಗೆ ಬಂದಾಗ ಎಲ್ಲರೂ ಮಾತನ್ನು ನಿಲ್ಲಿಸಿ ಸುಮ್ಮನಾದರು.

"ಏನು ಮಾತನಾಡ್ತಿದ್ರಿ?... ಎಲ್ಲಾ ಒಟ್ಟಿಗೇ ಸುಮ್ಮನಾಗಿ ಬಿಟ್ರಲ್ಲ" ಯಾರೂ ತಕ್ಷಣ ಏನನ್ನು ಆಡಲಿಲ್ಲ. ಮಧು ನುಡಿದಳು.

"ಊರಿನಿಂದ ಬಂದಿದಾರಲ್ಲ ಅವರ ಬಗ್ಗೇನೇ ಮಾತನಾಡುತ್ತಿದ್ದೆವು."

"ಮುಕುಂದ ಅಕ್ಕನಿಗಿಂತ ತಂಗಿ ಚೆನ್ನ ಅಲ್ವೇನೋ.... " ವಿಮಲನ ಮಾತು.

"ಇರಬಹುದು..."

"ಅವಳನ್ನೇ ಏಕೆ ಮದುವೆಯಾಗಬಾರದು ನೀನು?" ಚಿಕ್ಕಮ್ಮನ ಮಾತು.

"ನಾನು ಮೆಚ್ಚಿರುವುದು, ಅವಳನ್ನಲ್ಲ. ಅವಳ ಅಕ್ಕನ್ನ... ಅವಳನ್ನೇ ಪ್ರೀತಿಸ್ತೀನಿ. ಈಗ ಈ ಮಾತು ಸಾಕು ಮಾಡಿ. ನಾನು ನೆನ್ನೇನೆ, ಈ ವಿಷಯ ಮಾತನಾಡಕೂಡದೆಂದು ಹೇಳಿರಲಿಲ್ವಾ?"

"ಆಡಿದರೆ ಏನೀಗ? ತಾತ ನೋಡಿದ್ರಾ ಅವಳನ್ನ? ಏನಂದ್ರು?"

"ನೋಡಿರಬಹುದು. ಏನೂ ಹೇಳಲಿಲ್ಲ."

"ಹಾಗಾದ್ರೆ ಏನು ಮಾಡ್ತೀಯಾ?"

"ಊರಿಗೆ ಹೋದ ಮೇಲೆ, ಏನು ಮಾಡ್ತೀನಿ ಅಂತ ತಿಳಿಸಿ ಬರೀತೀನಿ ಗುರುಗುಟ್ಟುತ್ತಾ ಮುಕುಂದ ಆಚೆ ನಡೆದಾಗ, ರಾಜೇಂದ್ರ ಕಿಸಕ್ಕನೆ ನಕ್ಕ.

"ರಿಜಿಸ್ಟರ್ ಮದುವೆ ಮಾಡ್ಕೋತಿದೀನಿ ಅಂತ ಬರೆದು ತಿಳಿಸ್ತಾನೆ ಅಷ್ಟೇ"

"ಹೌದೇನೋ... ಹಾಗೇ ಮಾಡ್ತಾನೆ ಅಂತೀಯಾ" ತಾಯಿ ಪೆದ್ದಾಗಿ ಕೇಳಿದಾಗ

"ಹೌದು. ಮತ್ತಿನ್ನೇನು? ಪ್ರೀತಿ ಮಾಡುವವರೆಲ್ಲ ಹಾಗೇನೇ...."

"ಇವನಿಗೇನು ಅವಸರವಿತ್ತು. ನಾವು ನೋಡಿ ಮಾಡುತ್ತಿರಲಿಲ್ವೆ?"

"ಹೋಗಲಿ ಬಿಡಿ ಅಕ್ಕ... ಎರಡು ವರ್ಷದಿಂದ ಇಬ್ಬರಿಗೂ ಸ್ನೇಹವಂತೆ. ಸ್ನೇಹ ತುಂಬಾ ಮುಂದುವರೆದಿದೆ ಅಂತ ಅನ್ನಿಸುತ್ತೆ.... ನಾವು ಒಪ್ಪದಿದ್ದರೆ.... ಬೇಡ ಎಂದರೆ ನಮ್ಮನ್ನೆಲ್ಲ ಬಿಟ್ಟು ತಮ್ಮ ಪಾಡಿಗೆ ತಾವು ಮದುವೆ ಮಾಡಿಕೊಳ್ಳಕ್ಕೂ ಸಿದ್ಧವಾಗಿರ್ತಾರೆ ಈಗಿನ ಕಾಲದವರು"

"ನಾವುಗಳು ಒಪ್ಪಿದರೂ ತಾತ, ಒಪ್ಪಬೇಕಲ್ಲ."

"ಅವರನ್ನು ಒಪ್ಪಿಸಲೇಬೇಕು. ಇಲ್ಲದಿದ್ದರೆ ಇವನೂ ನಮ್ಮಿಂದ ದೂರವಾಗಿ ಬಿಡ್ತಾನೆ" ಚಿಕ್ಕಮ್ಮ ನುಡಿದಾಗ ಜಾನಕಿ ಆತಂಕಗೊಂಡಳು.

"ದೇವರ ಮೆರವಣಿಗೆ ಬರುವ ಹೊತ್ತಿಗೆ ಹಣ್ಣುಕಾಯಿ, ಮಂಗಳಾರತಿಗೆ ಸಿದ್ಧ ಮಾಡಿರಬೇಕು. ಎಲ್ಲಾ ಎದ್ದು ಮುಖ ತೊಳೆದು, ತಲೆ ಬಾಚಿ, ಹೊಸ ಬಟ್ಟೆ ಹಾಕಿಕೊಂಡು ಸಿದ್ಧರಾಗಿ. ಇಲ್ಲದಿದ್ದರೆ ಅಪ್ಪನಿಂದ ಮಾತನ್ನು ಕೇಳಬೇಕಾಗುತ್ತದೆ." ಚಿಕ್ಕಪ್ಪ ನುಡಿದಾಗ ಚಿಕ್ಕಮ್ಮ ಎದ್ದು ಕಾಫಿ ತಯಾರಿಗೆ ಹೊರಟಳು. ವಿಮಲ ಸಹಾಯ ಮಾಡಲು ಅನುವಾದಳು.

ವಿಮಲ ಎಲ್ಲರಿಗೂ ಕಾಫಿಯನ್ನಿತ್ತು. ಸರಳಗೆ ಹೇಳಿದಳು.

"ಸಾಯುಂಕಾಲ ದೇವಸ್ಥಾನಕ್ಕೆ ಹೋಗಿ ಬರೋಣ... ನಿಮಗೆ ಇಷ್ಟವಿದ್ದರೆ...."

"ಓ... ಅದಕ್ಕೇನಂತೆ ಬರ್ತೀನಿ "ಸರಳ ಮುಗುಳ್ನಗುತ್ತಾ ಉತ್ತರಿಸಿದಾಗ ಸುಕನ್ಯ ಸಿಡುಕಿದ್ದಳು.

"ನಾನು ಬರೋಲ್ಲ. ನನಗೆ ಸುಸ್ತು"

ಸರಳ, ವಿಮಲ ಅಲಂಕರಿಸಿಕೊಂಡು ಹೊರಟಾಗ, ರಾಜೇಂದ್ರ ತಾನೂ ಬೇಗ ಬೇಗ ಸಿದ್ಧನಾದ. ಸರಳೆಯ ಜತೆ ತಿರುಗಾಡುವ ಆಸೆಯಿಂದ ಸುರೇಶನೂ ಹೊರಟಿದ್ದ. ವಿಮಲ ಮಧುವನ್ನು ಹೊರಡಿಸಿದಳು. ಅವರು ತಮ್ಮ ಹಿಂದೆ ಹೊರಟ ರಾಜೇಂದ್ರನ್ನ ಗೇಲಿ ಮಾಡಿದರು.

"ನಮ್ಮ ಜತೆಗೆ ಬಾ ಅಂತ ಅಂದ್ರೂ ಎಲ್ಲಿಗೂ ಬರದವನು, ಇವತ್ತೇನು ಚೆನ್ನಾಗಿ ಅಲಂಕರಿಸಿಕೊಂಡು ಹೊರಟಿದೀಯಾ?"

"ನಮ್ಮ ಮನೆಗೆ ಬಂದಿರುವ ಅತಿಥಿಗಳಿಗೆ ನಮ್ಮ ಹಳ್ಳಿಯ ವೈಭವವನ್ನು ತೋರಿಸಬೇಡವೇ ಮತ್ತೆ?" ರಾಜೇಂದ್ರ ನಗುತ್ತಾ ನುಡಿದಿದ್ದ.

"ಏನಿದೆ ವೈಭವ? ಬರೀ ಕಾಡು, ಕತ್ತಲೆ, ಜೀರುಂಡೆ ಝೇಂಕಾರ...."

"ಇದು ತಾನೇ ಸಿಟೀಲಿ ಎಲ್ಲಿ ಸಿಕ್ಕುತ್ತೆ? ಅಲ್ವೇನ್ರೀ ಸರಳಾ, ನೀವೇ ಹೇಳಿ...."

ರಾಜೇಂದ್ರ ಕೇಳಿದಾಗ, ಸರಳ ಇಲ್ಲ ಎನ್ನದಾದಳು.

"ಸಿಟಿಗಿಂತ ಹಳ್ಳಿಯ ಪರಿಸರ ಚೆನ್ನ. ನಮಗೆ ಇದೆಲ್ಲ ಅಪರೂಪ"

"ಒಂದೆರಡು ದಿನ ಚೆನ್ನಾಗಿರುತ್ತೆ. ದಿನಾ ಇಲ್ಲೇ ಇದ್ರೆ ಕ್ರಮೇಣ ಬೇಜಾರಾಗುತ್ತೆ" ವಿಮಲನ ಹೇಳಿಕೆ.

"ಹೌದಾ... ಹಾಗನ್ನಿಸುತ್ತಾ ನಿಮಗೂ....?" ಮತ್ತೆ ಪ್ರಶ್ನಿಸಿದ.

"ನಾನು ಹೇಗೆ ಹೇಳಲಿ! ಇವತ್ತೇ ಮೊದಲು ನಾನು ಈ ಹಳ್ಳಿಯನ್ನು ನೋಡುತ್ತಿರುವುದು."

"ನೀವು ಒಂದು ವಾರ ಇಲ್ಲಿಯೇ ಇರಿ. ನಿಮಗೆ ಎಂಥೆಂತಹ ಸ್ಥಳಗಳನ್ನು ತೋರಿಸ್ತೀನಿ ನಾನು." ಸರಳ ಸುಮ್ಮನೇ ನಕ್ಕಳು.

ಎಲ್ಲರ ಹಿಂದೆ ಕೈ ಕಟ್ಟಿ ಸುಮ್ಮನೇ ಬರುತ್ತಿದ್ದ ಸುರೇಶನಿಗೆ ಇವರ ಸಂಭಾಷಣೆ ಬೇಸರ ತಂದಿತ್ತು. ನಾನು ಸರಳ ಇಬ್ಬರೇ ಇದ್ದಿದ್ದರೆ ಎಷ್ಟು ಚೆನ್ನಾಗಿತ್ತು ಎನ್ನಿಸ ತೊಡಗಿತ್ತು.

"ಯಾಕ್ರೀ ನೀವು ಏನೂ ಮಾತನಾಡ್ತಾನೇ ಇಲ್ಲ" ಮಧು ಕೇಳಿದಳು.

"ನಿಮ್ಮ ರಾಜೇಂದ್ರ, ತಮ್ಮ ಹಳ್ಳಿಯ ವೈಭವವನ್ನು ವರ್ಣಿಸುತ್ತಿದ್ದರಲ್ಲ ಕೇಳಿಸಿಕೊಳ್ತಾ ಇದ್ದೆ" ವ್ಯಂಗ್ಯವಾಗಿ ನುಡಿದಾಗ ರಾಜೇಂದ್ರ ಕೆಟ್ಟ ಮುಖ ಮಾಡಿದ. ಹುಡುಗಿಯರು ಕಿಸಕ್ಕನೆ ನಕ್ಕಾಗ ಹಲ್ಲು ಕಡಿದ. ಕತ್ತಲಾದ್ದರಿಂದ ಯಾರಿಗೂ ಅವನ ಮುಖದ ಭಾವನೆ ತಿಳಿಯಲಿಲ್ಲ.

ದೂರದಿಂದಲೇ ದೇವಸ್ಥಾನವನ್ನು ವೀಕ್ಷಿಸಿದರು. ಮುಂದಿದ್ದ ಚಪ್ಪರದ ಬಳಿ ಜನರಾಗಲೇ ಸೇರಿದ್ದರು. ಇವರುಗಳು ದೂರದಿಂದಲೇ ದೇವರಿಗೆ ಕೈ ಮುಗಿದು ಪ್ರದಕ್ಷಿಣೆ ಹಾಕಿ ಮತ್ತೆ ಮನೆಯ ದಾರಿ ಹಿಡಿದರು. ಮನೆಗೆ ಆಪ್ತರು, ಸ್ನೇಹಿತರು ಬಂದು, ಹಿರಿಯರಿಗೆ ಬಿನ್ನಿ ಪತ್ರೆಯನ್ನು ಕೊಟ್ಟು, ನಮಸ್ಕರಿಸಿ ಆಶೀರ್ವಾದವನ್ನು ಪಡೆಯುತ್ತಿದ್ದರು.

ಮನೆಯವರೊಡನೆ, ಸರಳಾ, ಸುರೇಶನೂ ತಾತನಿಗೆ ನಮಸ್ಕರಿಸಿದರು. ತಾತ, ಶ್ರೀಮದ್ಗಾಂಭೀರ್ಯದಿಂದ ಎಲ್ಲರಿಗೂ ಆಶೀರ್ವಾದ ಹಸ್ತವನ್ನು ತಲೆಯ ಮೇಲಿಟ್ಟರು. ಬಂದವರಲ್ಲಿ ಕೆಲವರು, ಸರಳ ಸುರೇಶ ದಂಪತಿಗಳೆಂದು ಭಾವಿಸಿರಬೇಕು. "ಎಷ್ಟು ಚೆನ್ನಾಗಿದೆ ಜೋಡಿ" ಎಂದು ನುಡಿದ ಮಾತುಗಳು ಕೆಲವರ ಕಿವಿಯನ್ನು ತಲುಪಿತು. ಸುರೇಶ ಸರಳೆಯ ಮುಖವನ್ನೇ ಅವಲೋಕಿಸಿದ. ಅವಳು ಕೆಂಪಾಗಿದ್ದಳು ಅವಳು

ನಾಚುತ್ತಾ ಒಳಸರಿದಳು. ರಾಜೇಂದ್ರ ಅಸಮಾಧಾನದಿಂದ ಗೋಣಗಿದ್ದು ಯಾರಿಗೂ ತಿಳಿಯಲಿಲ್ಲ.

ಮಾತನಾಡುತ್ತಾ ಕುಳಿತಿದ್ದ ಮುಕುಂದ ಸುಕನ್ಯ, ಸರಳೆಯನ್ನು ಕಂಡು ಕೇಳಿದ. "ಹೇಗಿತ್ತು ನಮ್ಮ ಹಳ್ಳಿಯ ವಿಜಯದಶಮಿಯ ಮೆರವಣಿಗೆ?"

"ಚೆನ್ನಾಗಿತ್ತು. ನೀವಿಬ್ಬರೂ ಸಹ ಬರಬಹುದಾಗಿತ್ತು"

"ನನಗೇನೂ ಹೊಸದಲ್ಲ ಬಿಡಿ. ಸುಕನ್ಯ ಸುಸ್ತು ಅಂತ ಉಳಿದುಕೊಂಡಿದ್ದರಿಂದ ನಾನೂ ಉಳಿದೆ...."

"ಅದರಿಂದ ನಿಮಗಿಬ್ಬರಿಗೇ ಏಕಾಂತದಲ್ಲಿ ಮಾತನಾಡಲು ಸಾಕಷ್ಟು ಅವಕಾಶ ಸಿಕ್ತು ಅಲ್ವಾ?"

"ಮಾತು!.... ಈ ವಾಲಗದ ಸದ್ದನ್ನು ಮೀರಿಸಿ ಎತ್ತರದ ಧ್ವನಿಯಲ್ಲಿ ಮಾತನಾಡಿ ಇಬ್ಬರೂ ಸುಸ್ತಾಗಿದೀವಿ.... ಏಕಾಂತ ಎಲ್ಲಿ ಬಂತು?" ಎಲ್ಲರೂ ನಕ್ಕರು.

ವಿಮಲ, ಮಧು, ಇಬ್ಬರೂ ಸುರೇಶ ಮುಕುಂದನಿಗೆ ನಮಸ್ಕರಿಸಿದಾಗ ಸುರೇಶ ಸಂಕೋಚಗೊಂಡ. "ಬೇಗ ಮದುವೆಯಾಗಲಿ" ಎಂದು ಹರಸಿದ ಮುಕುಂದ. ಇಬ್ಬರೂ ನಾಚುತ್ತಾ ಹೊರ ನಡೆದರು. ಸರಳ ಕೆಂಪಾದಳು ಕಾರಣವಿಲ್ಲದೆ.

ರಾತ್ರಿ ಉತ್ಸವದ ಗಲಾಟೆ ಕಡಿಮೆಯಾಗುವವರೆಗೂ ಎಲ್ಲರೂ ಮಾತನಾಡುತ್ತಾ ಕಾಲ ಕಳೆದರು. ಮಲಗುವ ಮುಂಚೆ ಮುಕುಂದ ತಾಯಿಯ ಬಳಿ ಬಂದು ನಿಂತ.

"ಅಮ್ಮ.... ಅವರೆಲ್ಲ ನಾಳೆ ವಾಪಸ್ಸು ಹೊರಡ್ತಿದಾರೆ. ನಾನೂ ಅವರ ಜತೇನೇ ಹೊರಟಿದೀನಿ."

"ಅವಾಂತರ ಏನು! ಇನ್ನೂ ಎರಡು ದಿನ ಇರಬಹುದಾಗಿತ್ತು"

"ಇದ್ದು ಏನು ಮಾಡಬೇಕು ಹೇಳು? ಸೊಸೆಯಾಗುವವಳನ್ನು ಹೇಗೂ ಎಲ್ಲರೂ ನೋಡಿದೀರಾ. ಆಮೇಲೆ ಆಕ್ಷೇಪಣೆ ಮಾಡುವ ಹಾಗೇ ಇಲ್ಲ."

"ಅಂದರೆ ನೀನೇ ಎಲ್ಲಾ ತೀರ್ಮಾನ ಮಾಡಿ ಬಿಟ್ಟಿದೀಯಾ....?"

"ಮತ್ತೆ ಮತ್ತೆ ಅದೇ ಮಾತನ್ನು ಹೇಳಬೇಡ. ನೀವುಗಳು ಒಪ್ಪಿದರೂ ಸರಿ. ಒಪ್ಪದಿದ್ದರೂ ಸರಿ. ನಾನು ಅವಳನ್ನೇ ಮದುವೆಯಾಗುವುದು."

"ನೀನು ಮುಂಚೇನೇ ಹೀಗಿದೆ ವಿಚಾರ ಅಂತ ಒಂದ್ಮಾತು ನಮಗೆ ತಿಳಿಸ ಬಾರದಾಗಿತ್ತಾ?"

"ತಿಳಿಸಿದ್ದರೆ ಏನ್ಮಾಡ್ತಿದ್ರಿ? ತಾತನ್ನ ಒಪ್ಪಿಸ್ತಿದ್ರಾ? ಈಗಲೂ ಏನೀಗ? ನಾನು

ಹದಿನೈದು ದಿನಗಳ ಸಮಯ ಕೊಡ್ತೀನಿ. ಮನೆಯವರೆಲ್ಲಾ ಸೇರಿ ಮಾತನಾಡಿ ತಾತನ್ನ ಒಪ್ಪಿಸಲು ಸಾಧ್ಯವಾದರೆ ಒಪ್ಪಿಸಿ.... ಆಮೇಲೆ ನನಗೆ ತಿಳಿಸಿ."

"ನಮ್ಮ ಮನೇಲಿ ಹುಟ್ಟಿ ಬೆಳೆದವನು, ಹೀಗೆ ಮಾತನಾಡ್ತೀಯಲ್ಲೋ ಆನಂದನೂ ನಮ್ಮಿಂದ ದೂರವಾದ. ನಿನಗೂ ಅದೇ ಆಸೇನಾ?"

"ತಾತ ಬದುಕಿರುವವರೆಗೂ ಹೀಗೇನೇ.... ಹೋಗಲಿ ಬಿಡು. ನಿನಗಿಷ್ಟವಿದ್ದರೆ ನೀನು ನಮ್ಮ ಜತೆ ಬಂದುಬಿಡು. ನಾವಿಬ್ಬರೂ ಚೆನ್ನಾಗಿ ನೋಡಿಕೊಳ್ತೀವಿ"

"ಅವಳೂ ಕೆಲಸಕ್ಕೆ ಹೋಗ್ತಾಳೆ ಅಂದೆ...."

"ಕೆಲಸಕ್ಕೆ ಹೋದರೇನಾಯ್ತು? ಮನೆಯ ಹೊರಗಿನ ಕೆಲಸಕ್ಕೆ ಒಬ್ಬ ಕೆಲಸದವಳನ್ನು ಇಟ್ಟುಕೊಂಡರಾಯ್ತು. ಇಷ್ಟು ದಿನ ಈ ಮನೇಲಿ ದುಡಿದಿದ್ದು ಸಾಕು. ನಮ್ಮ ಮನೇಲಿ ಆರಾಮವಾಗಿರುವಂತೆ."

"ಚೆನ್ನಾಗಿದೆ. ನನಗೆ ಮಡಿ, ಮೈಲಿಗೆ, ಕೆಲಸ, ಕಾರ್ಯ ಬಿಟ್ಟು ಕೂತಿರಕ್ಕೆ ಆಗುತ್ತಾ? ನನ್ನ ಜಾಯಮಾನಕ್ಕೆ ಬರಲಿಲ್ಲ. ನನಗೆ ಹೀಗೇ ಸರಿ."

"ಸರಿ ಬಿಡು. ನಿನ್ನ ಹಣೆಬರಹ. ನಿನಗೆ ಆನಂದನ ಹೆಂಡತಿ ಸೇವೆ ಮಾಡಲಿಲ್ಲ. ನನ್ನ ಹೆಂಡತಿಯ ಸೇವೆ ನಿನಗೆ ಬೇಕಿಲ್ಲ. ರಾಜೇಂದ್ರನಿಗಾದರೂ ನೀವೆಲ್ಲ ಒಪ್ಪಿ ನೋಡಿ, ನಿಮಗೆ ಸರಿಯಾದ ಹುಡುಗಿಯನ್ನು ಹುಡುಕಿ ಮದುವೆ ಮಾಡಿ ನೀವುಗಳು ಹೇಳಿದ ಹಾಗೆ ಕೇಳಿಕೊಂಡು ನಿಮ್ಮ ಸೇವೆಯನ್ನು ಮಾಡುತ್ತಾಳೆ."

"ನನಗೆ ಯಾರ ಸೇವೆಯೂ ಬೇಕಿಲ್ಲ. ಹೀಗೆ ಗಟ್ಟಿಯಾಗಿದ್ದ ಕಾಲದಲ್ಲೇ ಕಣ್ಣು ಮುಚ್ಚಿಕೊಂಡರೆ ಸಾಕಾಗಿದೆ."

"ಸರಿ. ವೇದಾಂತದ ಮಾತು ಇದು. ಅಷ್ಟು ಸುಲಭವಾಗಿ ಯಾರೂ ನಿನ್ನನ್ನು ಕಳಿಸಿಕೊಡೋಲ್ಲ."

"ನಿಂಗೊತ್ತಿಲ್ಲ ಮುಕುಂದ ಹಗಲೂ ರಾತ್ರಿ ನಾನೆಷ್ಟು ಕೊರಗ್ತಿದೀನೀಂತ"

"ನಂಗೊತ್ತು ಆನಂದನಿಗೋಸ್ಕರ ನೀನೆಷ್ಟು ಕಣ್ಣೀರು ಸುರಿಸಿದೀಯಾಂತ"

"ಮತ್ತೆ. ಎಲ್ಲರೂ ಸೇರಿ ನನ್ನ ಹೊಟ್ಟೆ ಉರಿಸ್ತೀರಲ್ಲೋ...."

"ಎಲ್ರೂ ಅಲ್ಲ.... ತಾತ ಅನ್ನು.... ಅಪ್ಪ, ಚಿಕ್ಕಪ್ಪನಾದರೂ ಅವರಿಗೆ ತಿಳುವಳಿಕೆ ಹೇಳಬೇಡವೇ?"

"ಹೋಗಲಿ ಬಿಡು. ಹತ್ತು ವರ್ಷದ ಹಳೇ ಮಾತು. ಮಲ್ಕೋ ಹೋಗು. ಬೆಳಿಗ್ಗೆ ಬೇಗ ಏಳಬೇಕು." ಮುಕುಂದ ಎದ್ದ.

ಬೆಳಿಗ್ಗೆ ಬೇಗನೇ ಎದ್ದು ಸಿದ್ಧರಾಗಿ ನಾಲ್ಕು ಜನರೂ ಹೊರಟರು.

ತಾತ ತಾನಾಗಿಯೇ ಏನನ್ನೂ ಕೇಳಿಲಿಲ್ಲ. "ಇವರಿಗೆಷ್ಟು ಕೊಬ್ಬು!" ಎಂದುಕೊಂಡ ಮುಕುಂದ. "ಎಂತಹ ಖದೀಮ ತನಗೊಂದು ಮಾತನ್ನು ಹೇಳಲಿಲ್ಲವಲ್ಲ" ಎಂದು ತಾತ ಬೈದುಕೊಂಡರು. ಜಾನಕಮ್ಮ ಹುಡುಗಿಯರಿಬ್ಬರಿಗೂ ಕುಂಕುಮ ಎಲೆ ಅಡಿಕೆಯೊಂದಿಗೆ ರವಿಕೆ ಖಣವನ್ನು ಇತ್ತು ಕೊಟ್ಟರು.

ರಾಜೇಂದ್ರ, ಮಧು, ವಿಮಲ, ಸರಳನ್ನ ಮರೆಯದೇ ಇನ್ನೊಮ್ಮೆ ಬನ್ನಿ ಎಂದು ಆಹ್ವಾನಿಸಿದರು. ಸರಳ ಮುಗುಳ್ನಕ್ಕು "ಹೂ" ಎಂದಿದ್ದಳು.

ಟ್ಯಾಕ್ಸಿಯನ್ನೇರಿದ ಕೂಡಲೇ ಸುಕನ್ಯ ನಿಟ್ಟುಸಿರು ಬಿಟ್ಟಳು.

"ಒಂದೇ ದಿನಕ್ಕೆ ಸುಸ್ತಾಗಿ ಹೋಯ್ತಾ ನಿನಗೆ?" ಮುಕುಂದ ರೇಗಿದ.

"ಮತ್ತೆ? ಇನ್ನೊಂದು ದಿನ ಇದ್ದರೂ ನೆಗೆದು ಬೀಳ್ತಿದ್ದೆ." ಸರಳಾ, ಸುರೇಶ್ ಜೋರಾಗಿ ನಕ್ಕರು.

* * *

ಅವರುಗಳು ಆಕಡೆ ಹೊರಟ ಕೂಡಲೇ ಮನೆಯಲ್ಲಿ ಎಲ್ಲರೂ ತಮತಮಗೆ ತೋಚಿದಂತೆ ಮಾತನಾಡಲು ಪ್ರಾರಂಭಿಸಿದರು. ತಾತ ಅಲ್ಲಿರದೇ ಮಲಗಿದ್ದರಿಂದ ಎಲ್ಲರಿಗೂ ಸಲೀಸಾಗಿತ್ತು. ಚಿಕ್ಕಪ್ಪ ಮೊದಲು ನುಡಿದರು.

"ಅಣ್ಣಾ ನೋಡಿದ್ಯಾ ನಿನ್ನ ಸೊಸೇನ? ಹೇಗಿದಾಳೆ?"

"ಇನ್ನೂ ಸೊಸೆ ಎಲ್ಲಿ ಆಗಿದಾಳೆ? ನಿಮ್ಮ ತಂದೆ ಒಪ್ಪಬೇಡವೇ?" ಜಾನಕಮ್ಮ ಮಧ್ಯ ನುಡಿದಳು.

"ಅದೇ ಕಷ್ಟ. ಅವರೂ ಅಪ್ಪನ್ನ ಒಪ್ಪಿಸಲೇ ಬೇಕು."

"ಒಪ್ಪದಿದ್ದರೇನೀಗ? ರಿಜಿಸ್ಟರ್ಡ್ ಮದುವೆ ಆಗ್ತಾನೆ" ರಾಜೇಂದ್ರ ನುಡಿದಾಗ ತಂದೆಗೆ ಅಸಹನೆಯುಂಟಾಯಿತು. ಎತ್ತರದ ಧ್ವನಿಯಲ್ಲಿ

"ಅದೆಲ್ಲ ಸುಳ್ಳು.... ಹಾಗ್ಯಾಕೆ ಮಾಡ್ತಾನೆ?" ಎಂದರು.

"ಯಾಕೆ ಮಾಡಬಾರದು? ಒಂದೇ ಆಫೀಸ್ನಲ್ಲಿ ಎರಡು ವರ್ಷದಿಂದ ಒಟ್ಟಿಗೇ ಕೆಲಸ ಮಾಡ್ತಿದಾರೆ. ಸ್ನೇಹಿತರೂ ಆಗಿದಾರೆ."

"ನಿನಗ್ಯಾರು ಹೇಳಿದರು ಇದನ್ನು?"

"ಮುಕುಂದ ಚಿಕ್ಕಮ್ಮನ ಹತ್ತಿರ ಹೇಳಿದ್ದನ್ನು ಕೇಳಿಸ್ಕೊಂಡೆ. ಬೇಕಾದರೆ ಚಿಕ್ಕಮ್ಮನ್ನೇ ಕೇಳಿ." ಚಿಕ್ಕಪ್ಪ ತಲೆ ಆಡಿಸಿದರು.

"ಹೌದು. ಮುಕುಂದ ಸರಸೂಗೆ ಎಲ್ಲಾ ಹೇಳಿದಾನೆ. ಅವನಿಗೆ ಎಲ್ಲರ ಒಪ್ಪಿಗೆ ಸಿಕ್ಕಿ. ಸರಿಯಾಗಿ ಮದುವೆ ಆಗುವ ಆಸೇನೇ ಇದೆ. ಇಲ್ಲದಿದ್ದರೆ ಇಲ್ಲಿಗೇಕೆ ಕರೆದು ಕೊಂಡು ಬರ್ತಿದ್ದ. ಗುಟ್ಟಾಗಿ ಮದುವೆ ಆಗ್ತಿದ್ದ."

"ತಾತ ಹಳೇ ಕಾಲದವರು. ಮುಕುಂದನಿಗೂ ಅವರೇ ಹೆಣ್ಣು ನೋಡಿ ಮದುವೆ ಮಾಡುವ ಆಸೆ ಇಟ್ಟುಕೊಂಡಿರುವವರು. ಸುಕನ್ಯಳಂತಹ ಫ್ಯಾಷನ್ನಿನ ಹುಡುಗೀನ ಹೇಗೆ ಒಪ್ತಾರೆ! ಅಲ್ಲದೇ ನಮ್ಮ ಸ್ವಂತ ಜನವೂ ಅಲ್ಲ. ಜಾತಕ ನೋಡಿಲ್ಲ. ಗೋತ್ರ ಗೊತ್ತಿಲ್ಲ."

"ಅಪ್ಪಾ.... ನೀವು ಯಾವ ಕಾಲದಲ್ಲಿದೀರಿ" ಲವ್ ಮ್ಯಾರೇಜ್‌ಗೆ ಅದೆಲ್ಲಾ ಬೇಕೇ ಇಲ್ಲ". ರಾಜೇಂದ್ರ ನುಡಿದ.

"ನೀನು ಸ್ವಲ್ಪ ಸುಮ್ಮನಿರ್ತೀಯಾ?" ರೇಗಿದರು. ವಿಮಲ ಮಧು ಕಿಸಕ್ಕನೇ ನಕ್ಕರು.

"ನಮ್ಮ ಮನೇಲಿ, ಮದುವೆಗಿರುವ ಇನ್ನೂ ಇಬ್ಬರು ಹೆಣ್ಣು ಮಕ್ಕಳಿದಾರೆ. ಜನ ಆಡ್ಕೋತಾರೆ."

"ಅಂಥಾದ್ದೇನು! ಅಪ್ಪನ್ನೂ ಒಂದ್ಮಾತು ಕೇಳಬೇಡವೆ?"

"ಅವರಿಬ್ಬರ ಸ್ನೇಹ ತುಂಬಾ ಮುಂದುವರೆದಿದೆ. ಒಟ್ಟಿಗೆ ಓಡಾಡಿದ್ದಾರೆ. ಅಲ್ಲದೇ ಈಗ ಅವನು ನಮ್ಮ ಮಾತನ್ನು ಕೇಳುವುದಿಲ್ಲ. ನಮ್ಮ ಮರ್ಯಾದೆ ಉಳಿಸಿ ಕೊಳ್ಳಬೇಕು ಅಂತಿದ್ರೆ ನಾವು ಈ ಮದುವೆಗೆ ಒಪ್ಪಲೇ ಬೇಕು. ಇಲ್ಲದಿದ್ದರೆ ನಾವಾಗಿಯೇ ಜನರ ಬಾಯಿಗೆ ಸಿಕ್ಕಿ ಬೀಳ್ತೀವಿ."

"ಹಾಗಾದ್ರೆ ನೀವೇ ಯಾರಾದ್ರೂ ಅಪ್ಪನ ಹತ್ತಿರ ಮಾತನಾಡಿ. ನಾನು ಅವರನ್ನೆದುರಿಸಿ ಮಾತನಾಡಲಾರೆ"

"ಆನಂದ ಮನೆ ಬಿಟ್ಟು, ಹೊರಟಾಗಲೂ ನೀವು ಏನೂ ಆಡಲಿಲ್ಲ." ಎಂದು ಹೇಳಬೇಕೆಂದುಕೊಂಡವಳು ಇದು ಸಮಯವಲ್ಲವೆಂದು ಸುಮ್ಮನಾದಳು.

"ಸರಿ. ನಾನು ಆಡ್ತೀನಿ" ಚಿಕ್ಕಪ್ಪ ನುಡಿದರು.

"ನಿನಗೆ ಮೊದಲ್ನಿಂದ ಅವನ ಮೇಲೆ ಏನೋ ಪ್ರೀತಿ. ಅವನು ಮಾಡಿದ್ದೇ ಸರಿ ಎನ್ನುವ ಧೋರಣೆ. ಅದೇನು ಮಾಡ್ತೀಯೋ ನಿನಗೇ ಸೇರಿದ್ದು."

"ಅವನು ನಿನ್ನ ಮಗನಾಗಿಯೇ ಬೆಳೆದಿದ್ದಾನೆ ಸರಸೂ, ನೀನು ಮೊದಲ್ನಿಂದ ಅವನ ಪರವಹಿಸಿ, ಅವನನ್ನು ಇಂಜನಿಯರಿಂಗ್ ಓದಿಸಿ, ಬೆಂಗಳೂರಿನಲ್ಲಿ ಕೆಲಸಕ್ಕೆ

ಸೇರುವಂತೆ ಮಾಡಿಬಿಟ್ಟೆ. ಈಗ ನಮ್ಮನ್ನೆಲ್ಲಾ ತೊರೆದು ಹೋದನು. ಈಗ ಹಾಗಾಗದಂತೆ ಮಾಡಬೇಕಾದದ್ದು ನಿನ್ನ ಜವಾಬ್ದಾರಿ." ಸರಸ್ವತಿಗೂ ಹೇಳಿದರು.

"ಒಳ್ಳೇದೇ ಆಯ್ತು ಬಿಡಿ. ಇಲ್ಲದಿದ್ರೆ ಈ ಹಳ್ಳೀಲಿದ್ದು ಏನ್ಮಾಡ್ತಿದ್ದ? ಆಫೀಸ್ನಲ್ಲಿ ಜುಂ ಅಂತಿದಾನೆ. ತಾತ ಒಪ್ಪದಿದ್ದರೆ ನಾನು ಅವನ ಮನೆಗೆ ಹೋಗಿರ್ತೀನಿ"

"ಸರಿ. ಸರಿ. ನಿನಗೂ ಅವಳಿಗೂ ಸರಿಹೋಗುತ್ತಾ?"

"ಸುಮ್ಮನೆ ಹೇಳಿದೆ. ಮಕ್ಕಳು ದೊಡ್ಡವರಾದ ಮೇಲೆ ಅವರವರದ್ದೇ ಅವರಿಗೆ. ನಾವು ಯಾಕೆ ಅವರಿಗೆ! ಆನಂದ ಮಾಡಿದ ಕೆಲಸವನ್ನೇ ಮುಕುಂದ ಮಾಡ್ತಾನೆ ಅಷ್ಟೆ...."

"ನನ್ನ ಸಂಕಟ ನಿನಗೆ ಹೇಗೆ ಅರ್ಥವಾಗುತ್ತೆ?"

"ಹೌದು. ನನಗೆ ಹೇಗೆ ಅರ್ಥವಾಗಬೇಕು? ಯಾವ ಜನ್ಮದ ಕರ್ಮವೋ ಶಾಪವೋ. ಈ ಜನ್ಮದಲ್ಲಿ ನನಗೆ ಮಕ್ಕಳಿಲ್ಲ..." ವ್ಯಥೆಯ ಧ್ವನಿಯಲ್ಲಿ ನುಡಿದಳು.

"ಹೋಗಲಿ ಸುಮ್ಮನಿರಬಾರದೇ? ಮಾತು ಎಲ್ಲಿಂದ ಎಲ್ಲಿಗೋ ಹೋಯ್ತು"

"ಅಕ್ಕಾ ನಿಮಗೆ ಅನುಮಾನ ಬರಲಿಲ್ವಾ? ಸುಕನ್ಯ ಬಸಿರಿ ಇರಬಹುದು ಅಂತ ನನಗೆ ಅನ್ನಿಸ್ತು. ಅದಕ್ಕೇ ತಲೆನೋವು, ವಾಂತಿ, ಸುಸ್ತು, ಮುಖ ಹೇಗೆ ಬಿಳುಚಿ ಕೊಂಡಿತ್ತು ನೋಡಿದ್ರಾ?" ಚಿಕ್ಕಮ್ಮ ಸಂದೇಹವನ್ನು ಸೃಷ್ಟಿಸಿದಳು.

"ನನಗೆ ಹೇಗೆ ಗೊತ್ತಾಗಬೇಕು? ನಾನು ಅವಳನ್ನು ಸರಿಯಾಗಿ ನೋಡಲೇ ಇಲ್ಲ. ರೂಮು ಬಿಟ್ಟು ಆಚೆ ಬಂದಿದ್ರೆ ತಾನೇ?"

"ಅದಕ್ಕೇ ಮುಕುಂದ ಅವಳನ್ನು ಇಲ್ಲಿಗೆ ಕರೆದುಕೊಂಡು ಬಂದನೋ ಏನೋ, ಅದಕ್ಕೇ ಮದುವೆಗೆ ಅವಸರ ಪಡ್ತಿದಾನೆ ಅಂತ ಅನ್ನಿಸುತ್ತೆ. ಒಂದು ವೇಳೆ ಬೇಜಾರು ಮಾಡಿಕೊಂಡು ಅಬಾರ್ಷನ್ ಮಾಡಿಸಿಬಿಟ್ಟರೆ? ಆ ಪಾಪ ನಮ್ಮನ್ನು ಸುತ್ತಿಕೊಳ್ಳುತ್ತೆ. ಭ್ರೂಣ ಹತ್ಯಾ ದೋಷ ನಮ್ಮನ್ನ ತಟ್ಟುತ್ತೆ."

"ಛೆ. ಛೆ. ಹಾಗೆಲ್ಲಾ ಇರಬಾರದು. ನಿನ್ನ ಭ್ರಮೆ ಅಷ್ಟೇ. ಮುಕುಂದ ಅಂತಹವನಲ್ಲ." ಮಗನ ಮೇಲೆ ಅಪವಾದ ಹೊರೆಸಲು ಆಕೆಯ ಮನ ಒಪ್ಪಲಿಲ್ಲ.

"ಹೇಗೆ ಇಲ್ಲ ಅಂತೀರಿ ಅತ್ತಿಗೆ, ಒಂದೆ ಊರಿನಲ್ಲಿ, ಒಂದೇ ಕಡೆ, ಒಟ್ಟಿಗೆ ಓಡಾಡ್ತಾರೆ. ಹುಡುಗಿಯೂ ಅಷ್ಟೆ.... ಈ ಕಾಲದವಳು." ಚಿಕ್ಕಪ್ಪ ಮಾತಿಗೆ ಒತ್ತು ಹಾಕಿದರು.

"ನನಗಂತೂ ಏನೂ ಅರ್ಥವಾಗ್ತಿಲ್ಲ. ಅದೇನು ಮಾಡ್ತೀರೋ ನೀವುಗಳೇ ಮಾಡಿ. ಈಗಾಗಿರುವ ಅನಾಹುತವೇ ಸಾಕಾಗಿದೆ. ಇನ್ನೇನೂ ಆಗದಿದ್ದರೆ ಸಾಕು." ಜಾನಕಮ್ಮ ಗದ್ಗದಿತಳಾಗಿ ನುಡಿದಾಗ ಎಲ್ಲರೂ ಸುಮ್ಮನಾದರು.

ಮನೆಯಲ್ಲಿ ಮಂಕು ಕವಿದಿತ್ತು. ಹಬ್ಬದ ಕಳೆಯಾಗಲೀ, ಮದುವೆಯ ಸಂಭ್ರಮವಾಗಲೀ ಇರಲಿಲ್ಲ. ಚಿಕ್ಕಪ್ಪ, ಚಿಕ್ಕಮ್ಮ ಸಂಧಾನ ನಡೆಸಿ, ಯಾರೋ ಎಂದೋ ಕೊಟ್ಟಿದ್ದ ಒಂದು ಹುಡುಗಿಯ ಜಾತಕವನ್ನೂ, ಮುಕುಂದನ ಜಾತಕವನ್ನು ತೆಗೆದುಕೊಂಡು ಪರಿಚಯವಿದ್ದ ಒಬ್ಬ ಜೋಯಿಸರ ಮನೆಗೆ ನಡೆದರು.

"ಈ ಎರಡು ಜಾತಕಗಳು ಹೊಂದುತ್ತವೆ. ಆದಷ್ಟು ಬೇಗ ಯಾವುದಾದರೂ ಒಳ್ಳೆಯ ಮುಹೂರ್ತದ ದಿನವನ್ನು ಹುಡುಕಿ ಕೊಡಿ. ಅವನು ಫಾರಿನ್ನಿಗೆ ಹೊರಟಿದಾನೆ. ಅಷ್ಟರಲ್ಲಿ ಮದುವೆಯಾಗಿ ಬಿಡಬೇಕು."

ಜೋಯಿಸರು ಅವರ ಮಾತನ್ನು ನಂಬಿದರು. "ಮುಂದಿನ ತಿಂಗಳಿನಲ್ಲಿ ದಿನಗಳು ಪ್ರಶಸ್ತವಾಗಿವೆ." ಎನ್ನುತ್ತಾ ತಾರೀಖನ್ನು ಗುರುತು ಮಾಡಿಕೊಟ್ಟರು. ಅವರಿಗೆ ಸ್ವಲ್ಪ ಹೆಚ್ಚು ಎನ್ನಿಸುವಷ್ಟು ಸಂಭಾವನೆಯನ್ನು ಕೊಟ್ಟು, ದೇವರ ಹುಂಡಿಗೆ ಕಾಣಿಕೆಯನ್ನು ಸಲ್ಲಿಸಿ ವಿಜಯದ ನಗೆಯೊಂದಿಗೆ ಇಬ್ಬರೂ ಮನೆಗೆ ಬಂದರು.

ಆ ರಾತ್ರಿ ಚಿಕ್ಕಪ್ಪ ತಮ್ಮ ಅಪ್ಪನೊಡನೆ ಮಾತನಾಡಿದರು.

"ಇಬ್ಬರ ಜಾತಕಗಳೂ ಹೊಂದುತ್ತವೆ. ಮುಂದಿನ ತಿಂಗಳು ದಿನಗಳೂ ಚೆನ್ನಾಗಿದೆ. ಗುರುತು ಹಾಕಿಸಿಕೊಂಡು ತಂದಿದೀನಿ. ನೋಡ್ತೀರಾ?"

"ಅವಾಂತರವೇನು? ದೀಪಾವಳಿ ಕಳೆಯಲಿ. ಬೇರೆ ಯಾವುದಾದರೂ ಹೆಣ್ಣನ್ನು ನೋಡಿ ಮದುವೆ ಕಾರ್ಯ ನೆರವೇರಿಸಿದರೆ ಆಯ್ತು." ಸುಕನ್ಯಳೇ ಆ ಹೆಣ್ಣು ಎಂದು ಅವರು ಭಾವಿಸಿರಲಿಲ್ಲವಾದರೂ, ಆಡಿದ್ದರು.

"ಈಗ ಅದೆಲ್ಲ ಸಾಧ್ಯವಿಲ್ಲ. ಅವರುಗಳ ಮದುವೆ ನಡೆಯಲೇ ಬೇಕು. ಈಗ ಅಂತಹ ಸ್ಥಿತಿ ಒದಗಿದೆ."

"ಅಂಥಾದ್ದೇನಾಗಿದೆ ಈಗ? ಯಾವ ಹುಡುಗಿ? ಬಂದಿತ್ತಲ್ಲ ಅದೇ"

"ಹೂಂ. ಅವರಿಬ್ಬರ ಸ್ನೇಹ.... ಬರೀ ಸ್ನೇಹವಲ್ಲ. ತುಂಬಾ ಮುಂದುವರೆದು ಬಿಟ್ಟಿದಾರೆ. ಆ ಹುಡುಗಿ ಗರ್ಭಿಣಿ ಇರಬಹುದು ಎಂಬ ಅನುಮಾನವಿದೆ."

"ಏನಂದೇ? ಅವರುಗಳು ಅಷ್ಟು ಮುಂದುವರೆಯೋದು ಎಂದ್ರೇನು? ಅವರಿಗೆ ಯಾರೂ ಹೇಳೋರು ಕೇಳೋರು ಇಲ್ಲವೆ? ಆ ಹುಡುಗಿಗೆ ಸ್ವಲ್ಪ ಮರ್ಯಾದೆ

ಯಾದರೂ ಬೇಡವೆ? ಅಂತಹ ಹುಡುಗಿ ಈ ಮನೆಯ ಸೊಸೆಯಾಗುವುದು ಖಂಡಿತಾ ಸಾಧ್ಯವಿಲ್ಲ."

"ಇದರಲ್ಲಿ ನಮ್ಮ ಮುಕುಂದನದೂ ತಪ್ಪಿದೆಯಲ್ಲ, ಆದ್ದರಿಂದ ಹೆಚ್ಚಿಗೆ ಮಾತನಾಡಿ ಪ್ರಯೋಜನವಿಲ್ಲ. ಮದುವೆಯೊಂದೇ ಪರಿಹಾರ."

"ಕೂಡದು. ಮದುವೆಗೆ ಮೊದಲೇ ಗರ್ಭಿಣಿಯಾಗಿರುವ ಅವಳು ಈ ಮನೆಯ ವಧುವಾಗಿ ಬರಲು ಸಾಧ್ಯವೇ ಇಲ್ಲ."

"ಅಪ್ಪಾ. ಹೀಗೆ ಹಠ ಮಾಡಬೇಡಿ. ಇದರಿಂದ ಅನಾಹುತವಾಗುತ್ತೆ"

"ಅದೇನಾಗುತ್ತೋ ಆಗಿಹೋಗಲಿ. ಯಾರೋ ಏನೋ..."

"ಹಾಗೆನ್ನಬೇಡಿ. ಹುಡುಗ್ರು ತಿಳೀದೇ ತಪ್ಪು ಮಾಡಿದಾರೆ. ನಮ್ಮ ಈ ಹಠದಿಂದ ಯಾರಿಗೂ ಅನ್ಯಾಯವಾಗಬಾರದು. ಹುಟ್ಟುವ ಮಗು ನಮ್ಮ ವಂಶದ್ದೇ ತಾನೇ. ನೀವು ಒಪ್ಪದಿದ್ದರೆ, ಮುಕುಂದನೂ ಈ ಮನೆಯಿಂದ ದೂರವಾಗ್ತಾನೆ."

"ಎಲ್ಲಿಗೆ ಹೋಗ್ತಾನೋ ಹೋಗಲಿ. ಅಂಥವನಿಂದ ನನಗೇನಾಗುತ್ತೆ?"

"ಹೀಗೆ ಹೇಳ್ತಾ ಇರಿ. ಆನಂದ ಹೆಂಡತಿ ಜತೆ ಹೊರಟು ಹೋದ. ಮುಕುಂದನೂ ದೂರವಾಗ್ತಿದಾನೆ. ನಾಳೆ ರಾಜೇಂದ್ರನೂ ಹೀಗೆ ಮಾಡಿದರೆ, ಈ ಆಸ್ತಿ ಪಾಸ್ತಿ ನೋಡ್ಕೊಳ್ಳೋಕೆ ಯಾರೂ ಇಲ್ಲದ ಹಾಗಾಗುತ್ತೆ. ನರಸಿಂಹ ನಿಮ್ಮ ಮಗನಾಗಿ ಹುಟ್ಟಿ ನಿಮಗೇನು ಅನ್ಯಾಯ ಮಾಡಿದಾನೆ? ನಿಮ್ಮ ಮಾತಿಗೆ ಎದುರಾಡುವ ಶಕ್ತಿ ಇಲ್ಲದವನಿಗೆ ನೀವು ಹೀಗೆ ಅನ್ಯಾಯ ಮಾಡಬಹುದೆ?"

"ನಾರಾಯಣ! ಮಾತು ಉದ್ದವಾಯ್ತು ನಿಂದು. ಎಲ್ಲರೂ ಎಲ್ಲಾದ್ರೂ ಹೋಗಿ. ಆಸ್ತಿಯನೆಲ್ಲಾ ಯಾವುದಾದರೂ ಅನಾಥಶ್ರಮಕ್ಕೆ ಬರೀತೀನಿ. ಯಾವುದೋ ಹುಡುಗಿಯಂತೆ! ಕಂಡಿರಲಿಲ್ಲ: ಕೇಳಿರಲಿಲ್ಲ ಅವಳ ಪರವಹಿಸಿಕೊಂಡು ನನಗೆ ತಿಳುವಳಿಕೆ ಹೇಳ್ತೀಯಾ?"

"ಈಗ ಅವಳು ಯಾರೋ ಅಲ್ಲ. ಈ ಮನೆಗೆ ಸೊಸೆಯಾಗಿ ಬರುವವಳು. ಈ ಮನೆಯ ವಂಶದ ಕುಡಿಯನ್ನು ಹೊತ್ತಿರುವವಳು."

"ಹಾಗಾದ್ರೆ.... ಇದೆಲ್ಲಾ ನಿನ್ನದೇ ಕರಾಮತ್ತು. ಅವನನ್ನು ಹೋದ ದಾರಿಗೆ ಬಿಟ್ಟಿದ್ದೂ ಅಲ್ಲದೇ, ಅವನು ಮಾಡಿದ್ದೇ ಸರಿ ಅನ್ನುವಂತೆ ಮಾತನಾಡ್ತೀಯಲ್ಲ. ಅವನಿಗಂತೂ ನಾಚಿಕೆ ಇಲ್ಲ ಎಂದರೆ, ನನ್ನ ಮಗನಾಗಿ ನಿನಗೂ ನಾಚಿಕೆ ಇಲ್ಲವೇ?"

"ನಾವೆಲ್ಲಾ ಒಪ್ಪಿಗೆ ಕೊಡ್ತೀವಿ ಎನ್ನುವ ಆಸೆಯಿಂದ ಹುಡುಗೀನೂ ಕರೆತಂದು

ನಮಗೆಲ್ಲಾ ತೋರಿಸಿದ. ನಾಚಿಕೆ ಇಲ್ಲದವನಾಗಿದ್ದರೆ ನಮಗ್ಯಾರಿಗೂ ತಿಳಿಸದೇ ಗುಟ್ಟಾಗಿ ಮದುವೆ ಆಗ್ತಿರಲಿಲ್ಲವೆ?"

"ಈಗಲೂ ಹಾಗೇ ಮಾಡ್ಕೋ ಹೋಗು ಅಂತ ಹೇಳು. ಈ ಮನೆಯ ದಿಕ್ಕಿಗೆ ತಲೆ ಇಟ್ಟು ಮಲಗುವುದೂ ಬೇಡ. ಅವನು ಹೀಗೆ ಅಂತ ಗೊತ್ತಿದ್ದಿದ್ರೆ ಅವನ ಕೈ ಕಾಲು ಮುರಿದು ಕೂರಿಸ್ತಿದ್ದೆ. ಏನೂ ಹೇಳದೇ ಓಡಿ ಹೋಧದ್ದು ಇದಕ್ಕೇ ಏನೋ... ಈ ನಿನ್ನನ್ನು 'ಛೂ' ಬಿಟ್ಟಿದ್ದಾನೆ."

"ನಿಮ್ಮ ಮಾತು ಕೇಳಿಕೊಂಡು, ನೀವು ತೋರಿಸಿದ ಹುಡುಗಿಯನ್ನೇ ಒಪ್ಪಿ ಮದುವೆಯಾದ ಆನಂದನೇ ನಿಮ್ಮಿಂದ ದೂರವಾಗಿದಾನೆ. ಆನಂದನೇ ನಿಮಗೆ ಹೆದರ ಲಿಲ್ಲ. ಆ ಕಾಲವೆಲ್ಲಾ ಮುಗಿದು ಹೋಯ್ತು. ನಿಮಗೆ ಏನೂ ಅನ್ನಿಸುತ್ತಿಲ್ಲವೇ?"

"ನನಗೇನೂ ಅನ್ನಿಸಬೇಕಾಗಿಲ್ಲ. ನನಗೇನೂ ಹೇಳಬೇಡಿ. ಅದೇನೇನು ಮಾಡ್ತೀರೋ ಮಾಡ್ಕೋ ಹೋಗಿ" ಭುಸುಗುಟ್ಟಿದರು.

ಇದುವರೆಗೂ ಹೊರಗೆ ಸುಮ್ಮನೇ ನಿಂತು ಇವರುಗಳ ಸಂಭಾಷಣೆಯನ್ನು ಕೇಳಿಸಿ ಕೊಳ್ಳುತ್ತಿದ್ದ ನರಸಿಂಹನಿಗೆ ಮುಜುಗರವೆನಿಸಿತು. ಒಳಬಂದ.

"ನಾರಾಯಣ, ಹೋಗಲಿ ಬಿಡು. ವಯಸ್ಸಾದವರು, ಅವರ ಜಾಡನ್ನು ಅವರು ಬಿಡುವುದಿಲ್ಲ. ಶಾಂತರಾಗಿ ಯೋಚಿಸಿ ಒಂದು ಇತ್ಯರ್ಥಕ್ಕೆ ಬರಲಿ. ಸುಮ್ಮನೇ ಹಗರಣದಿಂದೇನು ಪ್ರಯೋಜನ? ವಯಸ್ಸಾದವರು, ಮಲಗಿ ನಿದ್ದೆ ಮಾಡಲಿ. ಇಲ್ಲ ದಿದ್ದರೆ ಅವರ ಆರೋಗ್ಯ ಕೆಡುತ್ತೆ"

"ನೋಡಿದ್ರಾ ಅಪ್ಪಾ? ಅವನ ಒಳ್ಳೆತನಾನಾ? ತನ್ನಿಂದ ತನ್ನ ಮಗ ದೂರ ವಾಗೋಕ್ಕೆ ನೀವೇ ಕಾರಣ... ಅಂತ ಗೊತ್ತಿದ್ದೂ, ಅವನು ನಿಮ್ಮ ಬಗ್ಗೆ ಆದರ ವನ್ನಿಟ್ಟುಕೊಂಡಿದಾನೆ.... ನಿಮಗೆ ನಿಮ್ಮ ಮಕ್ಕಳು ನಿಮ್ಮ ಬಳಿಯಲ್ಲಿರಲಿ ಅಂತನ್ನುವ ಆಸೆ... ಅವನಿಗೂ ಅದೇ ಆಸೆ ಇರೋಲ್ವಾ?"

"ನಾರಾಯಣ. ಸಾಕು ಮಾಡು. ಮುಕುಂದ ಇಷ್ಟು ಮುಂದುವರೆಯಲು ನೀನೇ ಕಾರಣ."

"ಇರಬಹುದು. ನಾನು ಅವನನ್ನು ಸ್ವಂತ ಮಗನಂತೆ ಬೆಳೆಸಿದೀವಿ. ಆನಂದನಿಗೆ ಆದಂತೆ, ಇವನಿಗೂ ಆಗೋಕ್ಕೆ ನಾನು ಒಪ್ಪುವುದಿಲ್ಲ. ನಾನೂ ದೇಶಾಂತರ ಹೋಗಿ ಬಿಡ್ತೀನಿ ಅಷ್ಟೇ...."

"ಹೋಗೋ ಹೋಗು. ಎಲ್ಲಿಗೆ ಬೇಕಾದರೂ ಹೋಗು." ನಾರಾಯಣ

ಸಿಟ್ಟಿನಿಂದ ಹೊರಗೆ ಬಂದ. ನರಸಿಂಹ ತಂದೆಗೆ ಸಮಾಧಾನ ಹೇಳಿದ.

"ನಾರಾಯಣ ದುಡುಕು ಸ್ವಭಾವದವನು. ಅವನ ಮಾತಿಗೆ ಬೇಜಾರು ಮಾಡ್ಕೋಬೇಡಿ. ನಿಧಾನವಾಗಿ ಯೋಚಿಸಿ. ಮುಕುಂದನಿಗೂ ತಿಳುವಳಿಕೆ ಹೇಳೋಣ. ಒಪ್ಪದಿದ್ದರೆ ಆಮೇಲೆ ಮುಂದಿನ ಮಾತು. ನೀವು ಮಲಗಿ ಆಯಾಸವಾಗಿದೆ"

ಅವರು ಮತ್ತೆ ಮಾತನಾಡಲು ಅವಕಾಶ ಕೊಡದಂತೆ ಹೊದಿಕೆ ಸರಿಪಡಿಸಿ, ದೀಪ ಆರಿಸಿ ಹೊರಬಂದ. ನಾರಾಯಣ ಹೊರಗೆ ಕೈ ಕಟ್ಟಿ ನಿಂತಿದ್ದ.

"ನಾರಾಯಣ. ನೀನೂ ಬೇಜಾರು ಮಾಡ್ಕೋಬೇಡ. ಅಪ್ಪನ ಮಾತುಗಳು ಹೊಸದೇನಲ್ಲ. ಅದೇನೇನು ಆಗಬೇಕೋ, ಅದೆಲ್ಲಾ ನಡೆದೇ ನಡೆಯುತ್ತೆ. ಸುಮ್ಮನೇ ಕಲಹ, ಆತಂಕವೇಕೆ? ಅವರಿಗೂ ವಯಸ್ಸಾಗಿದೆ. ಒಂಥರ ಪಿರುಚು."

"ನಮಗೂ ವಯಸ್ಸಾಗಿದೆ. ಇನ್ನೂ ಎಷ್ಟು ಅಂತ ಅಪ್ಪನ ಮಾತುಗಳನ್ನು ಕೇಳಬೇಕು? ನೆನ್ನೆಯವರೆಗೂ ಸಹ ನಾನು ಸುಮ್ಮನಿದ್ದೆ. ಆದರೆ ಇವತ್ತು ತಡೆಯಕ್ಕೆ ಆಗಲಿಲ್ಲ. ಮುಕುಂದನದೂ ತಪ್ಪಿರುವಾಗ ನಾವು ಅದನ್ನು ಸರಿಪಡಿಸಬೇಕು. ನಾಳೆ ಅವಳ ಜೀವಕ್ಕೇನಾದರೂ ಅಪಾಯವಾದರೆ, ನಮಗೆಷ್ಟು ಕಷ್ಟ! ನಮಗೆ ಮಕ್ಕಳಿಲ್ಲ. ಆದರೆ ಯಾವುದೇ ಕಾರಣಕ್ಕೂ ಆ ಮಕ್ಕಳ ಅಗಲಿಕೆ ನನಗಿಷ್ಟವಿಲ್ಲ."

"ನನಗೂ ಇಷ್ಟವಿಲ್ಲ"

"ಮತ್ತೆ? ನೀನೂ ಅಪ್ಪನಿಗೆ ಹೇಳಬಹುದಾಗಿತ್ತಲ್ಲ."

"ನಿನ್ನ ಹಾಗೆ ದುಡುಕಿ ಮಾತನಾಡಲು ನನ್ನಿಂದ ಸಾಧ್ಯವಿಲ್ಲ."

"ಇದು ದುಡುಕಲ್ಲ. ಅನುಭವ ಕಲಿಸಿದ ಪಾಠ, ಆನಂದನಿಗೆ ಆದ ದುಃಖವೇ ಸಾಕಾಗಿದೆ. ಮುಕುಂದ ಚೆನ್ನಾಗಿರಬೇಕು. ನಗುನಗುತ್ತಾ ಇಲ್ಲಿಗೆ ಬರುತ್ತಿರಬೇಕು. ಅದೇ ನನ್ನ ಆಸೆ. ನಿನಗೆ ಹಾಗೆ ಅನ್ನಿಸುವುದಿಲ್ಲವೇ?"

"ನನಗೇನು ಆ ಆಸೆ ಇಲ್ಲವೆ? ಆದರೆ ಅಪ್ಪ ದೊಡ್ಡವರು. ವಯಸ್ಸಾದವರು. ಅವರನ್ನು ವಿರೋಧಿಸಿ ಅವರ ಮನಸ್ಸಿಗೆ ನೋವನ್ನುಂಟು ಮಾಡುವುದು, ಒಳ್ಳೆಯು ದಲ್ಲ. ನೋಡೋಣ ಒಂದೆರಡು ದಿನ ಅವರನ್ನು ಅವರ ಪಾಡಿಗೆ ಬಿಟ್ಟು, ಬಿಡಿ. ಯಾರೂ ಮಾತನಾಡಿಸಬೇಡಿ.... ಅವರಾಗಿಯೇ ಮನಸ್ಸು ಬದಲಾಯಿಸಿದರೂ ಬದಲಾಯಿಸಬಹುದು." ನಾರಾಯಣ ತಲೆಯಾಡಿಸಿದ.

"ಆನಂದ ಮದುವೆ ಆದಮೇಲೆ ದೂರವಾದ. ಇವನು ಮದುವೆಗೆ ಮುಂಚೇನೇ ದೂರವಾಗ್ತಾನೆ. ಅಷ್ಟೇನೇ... ಅವರವರ ಪಾಡಿಗೆ ಅವರು ಸುಖವಾಗಿರ್ತಾರೆ ಬಿಡಿ.

ಯಾರೂ ಈ ಬಗ್ಗೆ ಏನನ್ನೂ ಕೇಳಬೇಡಿ. ಈ ವಿಷಯವನ್ನು ಅವರೆದುರಿಗೆ ಆಡುವುದೇ ಬೇಡ. ಎರಡು ದಿನ ಕಳೆದರೆ ಅವರಾಗಿಯೇ ಕೇಳ್ತಾರೆ."

"ಅದೂ ನಿಜ. ಸುಮ್ಮನಿದ್ದು ಏನು ಹೇಳ್ತಾರೆ ಅಂತ ಕಾಯೋಣ... ಇಷ್ಟು ಹೊತ್ತಾದ್ರೂ ಇನ್ನು ಅವರ ಫಲಾಹಾರವಾಗಿಲ್ಲ."

"ಕೊಡಿ. ನಾನು ಕೊಟ್ಟು ಬರ್ತೀನಿ." ಅತ್ತಿಗೆ ಕೊಟ್ಟ ಹಣ್ಣು ಹಾಲು ಹಿಡಿದು ನಾರಾಯಣ ಮತ್ತೆ ತಂದೆಯ ರೂಮಿಗೆ ಬಂದ.

"ನನಗೆ ಏನೂ ಸೇರುವ ಹಾಗಿಲ್ಲ. ನಿಮ್ಮಗಳ ಅನಾಚಾರದಿಂದ ನನ್ನ ಹೊಟ್ಟೆ ತುಂಬಿ ಹೋಗಿದೆ. ತಗೊಂಡು ಹೋಗು" ತಂದೆ ರೇಗಿದರೂ ತಟ್ಟೆಯನ್ನು ಬಟ್ಟಲನ್ನೂ ಅಲ್ಲಿಯೇ ಇಟ್ಟು, ಬಾಗಿಲನ್ನು ಮುಂದಕ್ಕೆಳೆದುಕೊಂಡು ಬಂದು, ತಾನು ಊಟಕ್ಕೆ ಕುಳಿತ.

ಎರಡು ದಿನ ಕಳೆಯಿತು. ಯಾರೂ ಬಂದು ತನ್ನನ್ನು ವಿಚಾರಿಸದಿದ್ದಾಗ ತಾತ ಚಿಂತಿತರಾದರು. ಸಮಯಕ್ಕೆ ನಿತ್ಯದಂತೆ ಊಟ ತಿಂಡಿ ಕಳೆದರೂ, ಎಲ್ಲರೂ ತನಗೆ ವಿರೋಧವಾಗಿ ನಿಂತಿದ್ದಾರೆ ಎಂದರಿವಾದಾಗ ಗಾಭರಿಯಾದರು. ನನಗೆ ಬೆಲೆ ಕೊಡದೇ, ಬೆಂಗಳೂರಿಗೆ ತಾವುಗಳೇ ಹೋಗಿ ಮದುವೆ ನೆರವೇರಿಸಿಬಿಟ್ಟರೆ ಎಂಬ ಸಂದೇಹ ಕಾಡಿದಾಗ, ಮನಸ್ಸು ಅಲ್ಲೋಲ ಕಲ್ಲೋಲ ಗೊಂಡಿತು. ಕಲಕಿದ ಮನಸ್ಸು ಮೊದಲಬಾರಿಗೆ ಚಿಂತನೆಗೆ ತೊಡಗಿತು.

ತಾನು ಹಿರಿತನವನ್ನು ತೋರಿಸಲು ಹೋಗಿ ತಾವಾಗಿಯೇ ಗೌರವವನ್ನು ಕಳೆದು ಕೊಳ್ಳುತ್ತಿದ್ದೇನೆಯೇ ಅಂತನ್ನಿಸಿದಾಗ ಎಚ್ಚೆತ್ತರು.

ಹತ್ತು ವರ್ಷಗಳ ಹಿಂದೆ, ಆನಂದನಿಗೆ ಹೆಮ್ಮೆಯಿಂದ, ನಿಂತು ತಾವೇ ಮುಂದಾಗಿ ಅವನ ಮದುವೆ ಮಾಡಿದ್ದರು. ಹಠ ಮೊಂಡುತನ ಏನೇ ಮಾಡಿದ್ದರೂ ಅವರಿಗೆ ಆನಂದ ಮುದ್ದಿನ ಮೊಮ್ಮಗ. ಅಚ್ಚುಮೆಚ್ಚು. ಸ್ಕೂಲಿಗೆ ತಪ್ಪಿಸಿಕೊಂಡು, ಅವರ ಹಿಂದೆ ಮುಂದೆ ಅವಿತುಕೊಂಡು ತಿರುಗಾಡುತ್ತಿದ್ದರೂ, ಬೈಯದೇ ಅವನ ಪರವಹಿಸಿಕೊಂಡು ಮಾತನಾಡುತ್ತಿದ್ದರು. ಹೈಸ್ಕೂಲನ್ನೂ ದಾಟದೇ ಮನೆಯಲ್ಲಿ ಕುಳಿತವನು, ವ್ಯವಸಾಯದ ಕಡೆ ಗಮನ ಕೊಡಲಾರಂಭಿಸಿದಾಗ ತಾತ ಹೆಮ್ಮೆ ಪಟ್ಟು ಕೊಂಡಿದ್ದರು. ವ್ಯವಸಾಯದ ಬಗ್ಗೆ, ತೋಟದ ಕೆಲಸ ಕಾರ್ಯಗಳ ಬಗ್ಗೆ ತಾತ ಮೊಮ್ಮಗನಿಗೆ ತಿಳುವಳಿಕೆ ಹೇಳುತ್ತಿದ್ದರು.

ಆನಂದನಿಗಿಂತ ಎರಡು ವರ್ಷಕ್ಕೆ ಚಿಕ್ಕವಳಾಗಿದ್ದ ಶಾಂತಿ ಮದುವೆಯ

ವಯಸ್ಸನ್ನು ತಲುಪಿದ್ದಳು. ತಾತನ ದೂರದ ಸಂಬಂಧಿಯರೊಬ್ಬರ ಮನೆಯ ವರನೊಡನೆ ಶಾಂತಿಯ ಮದುವೆ ನಿಶ್ಚಯವಾಯಿತು. ಶಾಂತಿಯ ಅತ್ತೆಯ ತಮ್ಮನ ಮನೆಯವರು ತುಂಬಾ ಅನುಕೂಲಸ್ಥರು. ಅನಾರೋಗ್ಯದಿಂದ ನರಳುತ್ತಿದ್ದ ಆತನ ಕಾರುಬಾರನ್ನೆಲ್ಲ ಶಾಂತಿಯ ಅತ್ತೆಯ ಮನೆಯವರೇ ನೋಡಿಕೊಳ್ಳುತ್ತಿದ್ದರು. ಆತನಿಗೆ ಒಬ್ಬಳೇ ಮಗಳು ಲಕ್ಷ್ಮಿ.

ಅವರ ಆಸ್ತಿಪಾಸ್ತಿಗೆಲ್ಲಾ ಲಕ್ಷ್ಮಿ ಒಬ್ಬಳೇ ವಾರಸುದಾರಳೆಂದು ತಿಳಿದ ತಾತ, ತಾವೇ ಮುಂದಾಗಿ, ಲಕ್ಷ್ಮಿಯನ್ನು ಆನಂದನಿಗೆ ವಧುವನ್ನಾಗಿ ತಂದುಕೊಳ್ಳಲು ಸಂಧಾನ ನಡೆಸಿದರು. ರೂಪಿನಲ್ಲಿ ಸುಮಾರಾಗಿದ್ದ ಲಕ್ಷ್ಮಿ ಆನಂದನಿಗೆ ತಕ್ಕ ಜೋಡಿಯಲ್ಲವೆಂದು ಮನೆಯವರಿಗೆಲ್ಲಾ ಅನ್ನಿಸಿದ್ದರೂ, ತಾತನ ಮಾತಿಗೆ ಎದುರಾಡುವ ಧೈರ್ಯವಿರಲಿಲ್ಲ. ಅಲ್ಲದೇ ಆನಂದನೂ ತಾತನ ಮಾತಿಗೆ ಒಪ್ಪಿಕೊಂಡಿದ್ದ. ಅಳಿಯನಿಗೆ ಸಾಕಷ್ಟು ಕೊಡುವ ಆಸೆಯನ್ನು ಭಾರೀ ಬೀಗರು ತೋರಿಸಿದ್ದರಿಂದ ಆನಂದನಿಗೆ ಆಸೆ ಹುಟ್ಟಿಸಿದ್ದರು. ಅದು ಆನಂದನಿಗೂ ಹಿತವಾದ ವಿಷಯ. ತಾತನಂತೆ ಅವನಿಗೂ ಆಸೆ ಹೆಚ್ಚು.

ಒಂದೇ ದಿನ, ಒಂದೇ ಚಪ್ಪರದಲ್ಲಿ ಶಾಂತಿಯ ಹಾಗೂ ಆನಂದನ ಮದುವೆ ಅದ್ಧೂರಿಯಾಗಿ ನೆರವೇರಿತ್ತು. ತಾತನ ಮಾತಿಗೆ ಬೆಲೆ ಕೊಟ್ಟು, ಲಕ್ಷ್ಮಿಯನ್ನು ಮದುವೆಯಾಗಿದ್ದ ಆನಂದ ಕೆಲವೇ ದಿನಗಳಲ್ಲಿ ಲಕ್ಷ್ಮಿಯ ಕೈಗೊಂಬೆಯಾದ. ಪಕ್ಕದ ಹಳ್ಳಿಯಲ್ಲಿದ್ದ ಹೆಂಡತಿಯ ತವರಿಗೆ, ಅವಳು ಬಯಸಿದಾಗಲೆಲ್ಲಾ ಕರೆದುಕೊಂಡು ಹೋಗಿ ಬರುತ್ತಿದ್ದ. ಕ್ರಮೇಣ ಅದು ಅತಿರೇಕವಾಗಿ ಕಾಣಲಾರಂಭಿಸಿತ್ತು. ಎಲ್ಲರಿಗೂ, ಅವಳು ಧಿಮಾಕಿನಿಂದ, ಈ ಮನೆಯವರೊಡನೆ ಹೊಂದಿಕೊಳ್ಳಲು ಇಷ್ಟಪಡದೇ, ಗಂಡನನ್ನು ತನ್ನ ಇಷ್ಟದಂತೆ ಕುಣಿಸುತ್ತಿದ್ದಳು.

ತನ್ನ ಮನೆಯವರು, ಹೇರಳವಾಗಿ ಖರ್ಚು ಮಾಡಿ, ಒಡವೆ ವಸ್ತು ಕೊಟ್ಟು, ಮದುವೆ ಮಾಡಿ ಕಳಿಸಿದ್ದಾರೆ. ತಾನು ಇವರುಗಳಿಗಿಂತ ಶ್ರೀಮಂತೆ ಎನ್ನುವ ಅಹಂಕಾರದಿಂದ ಮೆರೆಯುತ್ತಿದ್ದಳು. ಅದೇ ಭಾವನೆಯನ್ನು ಗಂಡನಲ್ಲಿಯೂ ಮೂಡಿಸಿದಳು. ಆನಂದ ಶ್ರೀಮಂತಿಕೆಯ ಗತ್ತನ್ನು ಪ್ರಕಟಿಸಲಾರಂಭಿಸಿದ್ದ.

ಮನೆಯವರಿಗೆಲ್ಲ ಅವನ ವರ್ತನೆ ಬೇಸರವನ್ನುಂಟು ಮಾಡಿದ್ದರೂ, ತಿಳುವಳಿಕೆ ಹೇಳಲು ಹಿಂಜರಿದಿದ್ದರು. ತಾತನೇ ಸುಮ್ಮನಿರುವಾಗ, ತಮ್ಮ ಮಾತು ಏನು ನಡೆದೀತು ಎನ್ನುವ ಅಂಜಿಕೆ. ಮೊದಲು ಮೊದಲು ತಾತ ಸುಮ್ಮನಿದ್ದರೂ, ಒಂದು

ದಿನ ಇಬ್ಬರನ್ನೂ ಒಟ್ಟಿಗೇ ಕರೆಸಿ ಕೂಗಾಡಿದ್ದರು.

"ಆಗಾಗ್ಗೆ ಏನಿರುತ್ತೆ ಅವಳ ತವರು ಮನೇಲಿ? ಅದೇನು ಚೆನ್ನ ಅಂತ ಪದೇ ಪದೇ ಹೋಗ್ತೀರಿ? ಅವಳು ಹೇಳ್ತಾಳೆ, ನೀನು ಕೇಳ್ತೀಯ. ಇನ್ನು ಮೇಲೆ ಸುಮ್ಸುಮ್ನೆ ಹೋಗಲೇ ಕೂಡದು. ಶಾಂತಿ ಪದೇ ಪದೇ ಬರ್ತಾಳೈ? ಅವಳನ್ನು ನೋಡಿ ಕಲಿತುಕೋ..."

"ಇಲ್ಲಿ ಬಂದ ಹೊರತೂ ನಿರ್ವಾಹವಲ್ಲ ಅಂತ ಅವಳನ್ನು ಯಾರು ಕರೆದಿದಾರೆ. ಅವಳು ತನ್ನ ಗಂಡನ ಮನೆಯಲ್ಲಿ ಇಲ್ಲಿಗಿಂತ ಸುಖವಾಗಿದಾಳೆ"

"ಏನು ನಿನ್ನ ಮಾತು? ಮದುವೆಯಾದ ಮೇಲೆ ಹೆಣ್ಣು ಮಕ್ಕಳಿಗೆ ತವರು ಹತ್ತಿರವಲ್ಲ. ನಿನ್ನ ಹೆಂಡತಿಗೆ ಇಲ್ಲಿ ಏನು ಕಷ್ಟ ಆಗಿದೆ. ನೀನು ಬುದ್ಧಿ ಹೇಳು.... ಇನ್ನು ಮೇಲೆ ಹೀಗೆ ಮನಸ್ಸಿಗೆ ಬಂದಾಗಲೆಲ್ಲಾ ಹೋಗಕೂಡದು" ತಾತ ಅಧಿಕಾರ ವಾಣಿಯಿಂದ ನುಡಿದಾಗ ಲಕ್ಷ್ಮಿ ಎದುರಿಸಿ ಆಡಿದ್ದಳು.

"ಅಲ್ಲಿಗೆ ಬನ್ನಿ ಅಂತ ಅಮ್ಮ ಕರೀತಾಳೆ ಹೋಗಿ ಬರ್ತೀನಿ.... ಇದರಲ್ಲಿ ತಪ್ಪೇನು?" ತಾತನಿಗೆ ರೇಗಿ ಹೋಯಿತು. ಬಾಯಿ ಕಳೆದುಕೊಂಡವನಂತೆ ಸುಮ್ಮನೇ ನಿಂತಿದ್ದ ಆನಂದನ ಮೇಲೆ ಎಗರಾಡಿದರು.

"ಹೆಣ್ಣಿಗ, ಅವಳು ನನ್ನ ಎದುರಿಗೆ ನಿಂತು ಮಾತನಾಡಿದರೂ ಸುಮ್ಮ ನಿದೀಯಲ್ಲ. ಎರಡು ಬಾರಿಸುವ ಯೋಗ್ಯತೆ ಇಲ್ಲವೆ ನಿನಗೆ?"

"ಎರಡು ಬಾರಿಸುವಂತಹ ಮಾತನ್ನೇನೂ ಆಡಿಲ್ಲ. ನಾನು ಹೊಡೆಸಿಕೊಂಡು, ಬಡಿಸಿಕೊಂಡು ಇಲ್ಲಿಯೇ ಬಿದ್ದಿರಬೇಕಾದ ಸ್ಥಿತಿ ಏನೂ ಬಂದಿಲ್ಲ ನನಗೆ. ಇಲ್ಲಿಯ ಹತ್ತರಷ್ಟು ಆಸ್ತಿ ಪಾಸ್ತಿ ಅಲ್ಲಿದೆ. ಅದನ್ನೆಲ್ಲ ನೋಡಿಕೊಳ್ಳುವವರ್‍ಯಾರಿಲ್ಲ. ಅಷ್ಟೇ... ನಡೀರಿ... ಅಲ್ಲಿಗೆ ಹೋಗೋಣ... ಇಲ್ಲಿದ್ದು ಏನಾಗಬೇಕಾಗಿದೆ ನಮಗೆ!" ಗಂಡನ ತೋಳನ್ನು ಹಿಡಿದು ಜಬರ್ದಸ್ತಿನಿಂದ ನುಡಿದಾಗ ಮನೆಯವರೆಲ್ಲಾ ಭಯದಿಂದ ಬೆದರಿದರು.

ಹೆಂಡತಿ ಇಷ್ಟು ಆಡಿದರೂ, ಸುಮ್ಮನಿದ್ದ ಆನಂದನನ್ನು ಕಂಡು ತಾತ ಕೆಟ್ಟ ದನಿಯಲ್ಲಿ ಕಿರುಚಿದ್ದರು.

"ಮುಚ್ಚು ಬಾಯಿ! ನನ್ನ ಎದುರಿಗೆ ನಿಂತು ಮಾತನಾಡುವಷ್ಟು ಧೈರ್ಯ ನಿನಗೆ? ಬೇಕಿದ್ದರೆ ನೀನು ಹೋಗು. ನಾನು ಅವನಿಗೆ ಬೇರೆ ಮದುವೆ ಮಾಡ್ತೀನಿ. ಏನು ನೋಡ್ತಿದೀಯೋ, ಕಳಿಸೋ ಅವಳನ್ನು ಕತ್ತು ಹಿಡಿದು ದಬ್ಬೋ ಆಚೆಗೆ. ಅವಳು

ಅಷ್ಟು ಅನ್ನುವಾಗಲೂ, ಅವಳ ಬಾಯಿ ಮುಚ್ಚಿಸುವ ಧೈರ್ಯವಿಲ್ಲವೇ ನಿನಗೆ?'' ಹೂಂಕರಿಸಿದ್ದರು. ಆನಂದ ಅಲ್ಲಾಡಿರಲಿಲ್ಲ.

''ಅವಳು ಹೇಳೋದು ಸರಿ ತಾತ..ಅಲ್ಲಿಯ ಕಾರುಬಾರು ಇಲ್ಲಿಯ ಹತ್ತರಷ್ಟು. ಮಾವನವರ ಅನಾರೋಗ್ಯದಿಂದ ನೋಡುವವರಿಲ್ಲ ಅಷ್ಟೇ... ಅಲ್ಲೇ ಬಂದು ಇರಿ ಎಂದು ಅತ್ತೆ ಹೇಳ್ತಾನೇ ಇದಾರೆ.... ನಾನು ಹೋಗ್ತೀನಿ....''

''ಏನಂದೆ? ಭಂಡ.... ಅವಳನ್ನು ನೂಕೋ ಆಚೆಗೆ ಅಂದ್ರೆ, ಅವಳ ಹಿಂದೆ ನಾನೂ ಹೋಗ್ತೀನಿ ಅನ್ನುವಷ್ಟು ಧೈರ್ಯ ನಿನಗೆ....''

''ನಾನಾಗಲಿ, ಇವಳಾಗಲೀ ಆಡಿದ ಮಾತಿನಲ್ಲಿ ತಪ್ಪೇನಿಲ್ಲ. ನಾವು ಹೋಗ್ತಿದೀವಿ ಕಳಿಸಿಕೊಡಿ...'' ನಮ್ರನಾಗಿ ಕೇಳಿಕೊಂಡಾಗ ತಾತ ಅಧೀರರಾದರು. ನಿಂತ ನೆಲ ಕುಸಿದಂತಾಯಿತು. ನಾನು ಎತ್ತಿ ಆಡಿಸಿ ಬೆಳೆಸಿದ ಹುಡುಗ. ನನ್ನೆದುರು ನಿಂತು ಹೆಂಡತಿಯ ಪರವಹಿಸಿ, ನನಗೇ ಎದುರುತ್ತರ ಕೊಡುವಷ್ಟು ಧೈರ್ಯ?....

''ಏನೋ? ಇಷ್ಟು ಮಾತನಾಡುವ ಧೈರ್ಯ ಬಂತಾ ನಿನಗೆ? ಓದಿಲ್ಲ ಬರಹವಿಲ್ಲ. ಚಂಗೂಲಿ ತಿರುಗಾಡಿಕೊಂಡಿದ್ದವನು, ... ನಿನಗೆ ಶ್ರೀಮಂತರ ಹೆಣ್ಣು ತಂದು ಮದುವೆ ಮಾಡಿಸಿದವನು ನಾನು! ನನಗೇ ತಿಳುವಳಿಕೆ ಹೇಳ್ತೀಯಾ?''

''ಅವಳನ್ನು ಮದುವೆಯಾಗಿರುವವನು ನಾನು. ಅವಳ ಕಷ್ಟ, ಸುಖ ನನಗೆ ಸೇರಿದ್ದು. ಅವಳ ಮಾತಿನಲ್ಲಿ ತಪ್ಪೇನಿದೆ ಅಂತ? ನಾನು ಇಲ್ಲಿಗಿಂತ ಅಲ್ಲಿ ಸುಖವಾಗಿರ್ತೀನಿ. ಇಲ್ಲಿಯ ನಿಮ್ಮ ಆಸ್ತಿಗೆ ಇವರೆಲ್ಲರೂ ಹಕ್ಕುದಾರರು. ಅಲ್ಲಿಯ ಆಸ್ತಿಗೆ ನಾನೊಬ್ಬನೇ ಹಕ್ಕುದಾರ.''

ಹಿಂದೆ ಮುಂದೆ ನೋಡದೇ ತಾತ ಅವನ ಕೆನ್ನೆಗೆ ಒಂದೇಟು ಬಿಗಿದಿದ್ದರು.... ''ಹೋಗೋ ಅಯೋಗ್ಯ ಹೋಗು.... ಆಸ್ತಿಯಂತೆ... ಹಕ್ಕಂತೆ... ಅವರ ಮನೆ ಎಂಜಲು ತಿಂದುಕೊಂಡು ಬಿದ್ದಿರು. ಅವಳ ಮಾತಿಗೆ ತಲೆತೂಗುವವ ನೀನು. ನೀನು ಹೆಣ್ಣಿಗ. ಗಂಡಸಲ್ಲ.... ನಿನ್ನಂತಹವನು ನನ್ನ ಮೊಮ್ಮಗನಲ್ಲ... ಇವತ್ತಿಗೆ ಈ ಮನೆಯ ಋಣ ತೀರಿತು ನಿನಗೆ.... ಈ ಕ್ಷಣವೇ ತೊಲಗಿ ಹೋಗು....

ಎಲ್ಲರೆದುರಿಗಾದ ಅಪಮಾನದಿಂದ ಆನಂದ ಕ್ರೋಧಗೊಂಡಿದ್ದ. ಮನೆ ಬಿಟ್ಟು ಹೋಗು ಎಂದು ಅರಚಿದ್ದ ತಾತನ ಮೇಲೆ ತಿರಸ್ಕಾರ ಮೂಡಿತ್ತು.

ಮನೆ ಬಿಟ್ಟು ಹೋಗು ಎಂದ ಮೇಲೆ ಒಂದು ಕ್ಷಣವೂ ಇಲ್ಲಿರೋಲ್ಲ ನಾನು ಎನ್ನುತ್ತಾ ಗಂಟು ಮೂಟೆ ಕಟ್ಟಲಾರಂಭಿಸಿದ.

"ಯಾರಾದರೂ, ನನಗೆ ತಿಳಿಯದಂತೆ ಅವನನ್ನು ಬಲವಂತವಾಗಿ ಉಳಿಸಿಕೊಂಡರೋ, ಅವರಿಗೂ ಈ ಮನೆಯಲ್ಲಿ ಜಾಗವಿಲ್ಲ. ಇವನ ಜತೆಯಲ್ಲಿಯೇ ದಬ್ಬಿ ಬಿಡ್ತೀನಿ. ಇವನು ಈ ಮನೆಯಲ್ಲಿ ಹುಟ್ಟಲೇ ಇಲ್ಲ ಎಂದುಕೊಳ್ತೀನಿ"

ಯಾರೂ ಅಲುಗಾಡದೇ, ಮಾತನಾಡದೇ ಸುಮ್ಮನಿದ್ದುದನ್ನು ಕಂಡು ರೇಗಿ ಹೋಗಿತ್ತು. ತಾಯಿ ತಂದೆ ಸಹ ಮೌನವಾಗಿದ್ದುದನ್ನು ಕಂಡು, ಅವರುಗಳ ಮೇಲೂ ತಿರಸ್ಕಾರ ಹುಟ್ಟಿತ್ತು. ಎಲ್ಲರಿಗೂ ತನಗಿಂತ ತಾತನೇ ಹೆಚ್ಚು ಎಂಬ ಭಾವನೆ ಮೂಡಿ ಕೋಪ ಅಧಿಕವಾಯಿತು.

"ಎಲ್ಲರಿಗೂ ಹೊಟ್ಟೆ ಉರಿ... ನನ್ನ ಶ್ರೀಮಂತಿಕೆಯನ್ನು ಕಂಡು ಅಸೂಯೆ. ಇಲ್ಲಿ ಇನ್ನು ಒಂದು ಘಳಿಗೆಯೂ ಇರಬಾರದು. ನಡೀ ಲಕ್ಷ್ಮಿ ಹೋಗೋಣ" ಎಂದು ಯಾರಿಗೂ ಒಂದು ಮಾತು ಹೇಳದೇ, ತಿರುಗಿ ನೋಡದೇ ಹೆಂಡತಿಯೊಡನೆ ಹೊರ ನಡೆದಿದ್ದ. ಆನಂದನ ದುಡುಕಿಗೆ ತಾಯಿ, ಚಿಕ್ಕಮ್ಮ ಅಳುತ್ತಾ ಇದ್ದುದು ಅವನಿಗೆ ತಿಳಿಯಲಿಲ್ಲ.

ಇದಕ್ಕೆಲ್ಲಾ ತಾತನೇ ಕಾರಣ ಎಂದು ಮುಕುಂದನಿಗೆ ರೇಗಿದ್ದರೂ, ಚಿಕ್ಕವನಾದ್ದರಿಂದ ಏನನ್ನೂ ಆಡಿರಲಿಲ್ಲ. ಚಿಕ್ಕಪ್ಪನಿಗೆ ಬೇಸರವಾಗಿತ್ತು. ತಂದೆ ಕೊರಗುತ್ತಿದ್ದರು. ತಾತ ಸಮಾಧಾನದಿಂದ, ಆವೇಶಕ್ಕೊಳಗಾಗದೇ, ಇಬ್ಬರಿಗೂ ತಿಳುವಳಿಕೆ ಹೇಳಿದ್ದರೆ..... ಎಂದು ಆಗಾಗ್ಗೆ ಚಿಂತಿಸುತ್ತಿದ್ದ.

ಆದರೆ ಅಂದಿನಿಂದ ಒಬ್ಬರಾದರೂ ತಾತನ ಎದುರಿಗೆ ಆನಂದನ ಹೆಸರನ್ನು ಎತ್ತುವ ಧೈರ್ಯ ಮಾಡಿರಲಿಲ್ಲ. ಆನಂದ ಎಂದೂ ಬಂದಿರಲಿಲ್ಲ. ಅದೇ ನೆಪದಿಂದ ಶಾಂತಿ ಸಹ ತವರು ಮನೆಗೆ ದೂರವಾಗಿದ್ದಳು. ಯುಗಾದಿ, ದೀಪಾವಳಿ ಹಬ್ಬದ ಸಮಯದಲ್ಲಿ ಆನಂದನನ್ನು ಕರೆಸುವ ಆಸೆಯಾಗುತ್ತಿತ್ತು ಜಾನಕಿಗೆ. ನಾರಾಯಣನೊಡನೆ ಗುಟ್ಟಾಗಿ ಹೇಳಿ ಕಳಿಸಿದ್ದರೂ, ಅವನೆಂದೂ ಬಂದಿರಲಿಲ್ಲ. ಆನಂದ ತನ್ನ ತಪ್ಪನ್ನು ಒಪ್ಪಿಕೊಂಡಿರಲಿಲ್ಲ.... ತಾತನದೇ ತಪ್ಪೆಂದು ಎಲ್ಲರ ಅನಿಸಿಕೆ.

ಇದು ಹತ್ತು ವರ್ಷದ ಹಿಂದೆ ನಡೆದ ಘಟನೆಯಾದರೂ ಯಾರೂ ಮರೆತಿರಲಿಲ್ಲ. ನಾರಾಯಣನಿಗೆ ಕೊರಗು. ತೊಡೆಯ ಮೇಲೆ ಕೂಡಿಸಿಕೊಂಡು ತಾವು ಬೆಳೆಸಿದ ಮೊಮ್ಮಗನಿಂದ ಹೇಗೆ ದೂರವಿದ್ದಾರೆ ಎಂದು ಚಿಂತಿಸುತ್ತಿದ್ದ. ಅಪರೂಪಕ್ಕೊಮ್ಮೆ ಆನಂದನ ಭೇಟಿಯಾಗಿ ಅವನ ಯೋಗಕ್ಷೇಮವನ್ನು ಅತ್ತಿಗೆಗೆ ತಿಳಿಸುತ್ತಿದ್ದ. ನರಸಿಂಹನಿಗೆ ಆ ಧೈರ್ಯವೂ ಇರಲಿಲ್ಲ.

ಈ ಹತ್ತು ವರ್ಷಗಳಲ್ಲಿ ಮನೆಯಲ್ಲಿ ಮದುವೆಯ ಮಾತೇ ಬಂದಿರಲಿಲ್ಲ. ಈಗ ಮುಕುಂದನ ಮದುವೆಯ ಪ್ರಸ್ತಾಪ ಬಂದಾಗ ಮನೆಯಲ್ಲಿ ಕೋಲಾಹಲ! ಮಹಾಭಾರತ!!

ಆ ರಾತ್ರಿ ತಾತನಿಗೆ ನಿದ್ದೆ ಇಲ್ಲ ಹಳೆಯ ಕತೆಗಳನ್ನು ನೆನೆಸಿಕೊಂಡರು. ಅದರಲ್ಲಿ ತನ್ನ ತಪ್ಪು ಎಷ್ಟು? ಆನಂದನ ತಪ್ಪು ಎಷ್ಟು? ಎಂದು ಮೊದಲ ಬಾರಿಗೆ ಚಿಂತಿಸಿದರು. ಅವನ ತಪ್ಪೇ ಹೆಚ್ಚು ಎಂದೆನಿಸಿತು. ಹೆಂಡತಿಯ ತವರು ಮನೆಯ ಕಾರುಬಾರು ನಡೆಸಲು, ಯಾರಾದ್ರೂ ತನ್ನ ಸ್ವಂತ ಮನೆ, ಸ್ವಂತ ಜನವನ್ನು ಬಿಟ್ಟು ಹೋಗ್ತಾರ್ಯೆ? ಹೋಗಿ ಹತ್ತು ವರ್ಷಗಳಾಯ್ತಲ್ಲ, ಒಂದು ದಿನವಾದರೂ ಈ ಕಡೆ ತಲೆ ಹಾಕಿಲ್ಲ. ಅವನಿಗೆ ಅಷ್ಟು ಜಂಭವಿರಬೇಕಾದರೆ, ನನಗೆ ಎಷ್ಟಿರಬೇಡ? ನನ್ನ ಜತೆ ಕೂತು, ಮಲಗಿ, ನನ್ನ ತೊಡೆಯ ಮೇಲೆ ಆಟವಾಡಿ ಬೆಳೆದವನಿಗೆ ನನ್ನ ಬಗ್ಗೆ ಯಾವ ಭಾವನೆಯೂ ಇಲ್ಲವೆ! ದುರಭಿಮಾನಿ... ಇಷ್ಟೇನಾ ಅವನಿಗೆ ನನ್ನ ಮೇಲೆ ಇದ್ದ ಪ್ರೀತಿ!

ಅವನೇ ಹಾಗೆ ಮಾಡಿದನೆಂದ ಮೇಲೆ ಇನ್ನು ಈ ಮುಕುಂದನದೇನು ಲೆಖ್ಖ! ಅವನೆಂದೂ ನನಗೆ ಹತ್ತಿರವಾದವನೇ ಅಲ್ಲ....ನಾರಾಯಣನ ಸಾಕು ಮಗ.... ಆನಂದ ಮಾಡಿದ್ದು ಸರ್ವಥಾ ತಪ್ಪು ಅಂತ ನನಗೆ ಈಗಲೂ ಅನ್ನಿಸುತ್ತಿದೆ. ಆದರೆ....? ಮುಕುಂದ ಮಾಡುತ್ತಿರುವುದು ತಪ್ಪು ಅಂತ ನಾರಾಯಣನಿಗೇಕೆ ಅನ್ನಿಸುತ್ತಿಲ್ಲ?... ಯಾವುದೋ ಹುಡುಗಿ ಹಿಂದೆ ತಿರುಗಿ ಸ್ನೇಹ ಬೆಳೆಸಿ, ಸಂಬಂಧವನ್ನು ಬೆಳೆಸಿ, ಈಗ ಮದುವೆಯಾಗಹೊರಟಿದ್ದಾನೆ. ಅಷ್ಟಾದರೂ ಅದು ತಪ್ಪಾಗಿ ಕಾಣುತ್ತಿಲ್ಲವಲ್ಲ ಏಕೆ?.... ಕಾಲ ಅಷ್ಟು ಬದಲಾಗಿದೆಯೇ? ಹತ್ತು ವರ್ಷದಲ್ಲಿ ಇಷ್ಟೊಂದು ಅಂತರ?

ಈಗಲೇ ಇಷ್ಟು, ಇನ್ನೂ ಏನೇನು ನಡೆಯಲಿದೆಯೋ ಈ ಮನೆಯಲ್ಲಿ ಎರಡು ದಿನದಿಂದ ಯಾರೂ ನನ್ನ ಕೈಲಿ ಮಾತನಾಡಿಲ್ಲ. ಒಳಗೊಳಗೇ ಏನು ಮಸಲತ್ತು ನಡೆಸುತ್ತಿದಾರೋ.... ಈಗ ನಾನೇನು ಮಾಡಬಹುದು? ಆನಂದ ಮನೆ ಬಿಟ್ಟು ಹೋದಾಗಲೇ ನಾನು ಅರ್ಧ ಇಳಿದು ಹೋದೆ. ಒಂಟಿತನ ನನ್ನನ್ನು ಕಾಡಿಸಿದರೂ ಮರೆಯಲು ಯತ್ನಿಸಿದ್ದೆ. ಈಗ ಪೂರ್ತಿಯಾಗಿ ಒಬ್ಬಂಟಿಗನಾಗಿ ಬಿದ್ದಿದ್ದೇನೆ ಅಷ್ಟೇ. ನಾನಿಲ್ಲದೇನೇ ಅವರೆಲ್ಲಾ ಇರಬಲ್ಲರು...ಎನ್ನುವುದನ್ನು ಸೂಚ್ಯವಾಗಿ ತಿಳಿಸುತ್ತಿರ ಬಹುದು. ಅಥವಾ ಎಲ್ಲರಿಗೂ ಸಾಧ್ಯವಾಗಬಹುದು.... ಆದರೆ ನನಗೆ! ಈ ವೃದ್ಧಾಪ್ಯ ದಲ್ಲಿ ಅವರುಗಳಿಲ್ಲದೇ ಒಬ್ಬನೇ ಇರಬಲ್ಲೆನೆ! ಅದು ಸಾಧ್ಯವೆ?

ಈಗ ನಾರಾಯಣ ಎದುರು ಬಿದ್ದಿದ್ದಾನೆ. ಮುಂದೆ ನರಸಿಂಹನೂ ಎದುರು ಬೀಳಬಹುದು. ಈಗ ಯಾರ ಕೈಲಿ ನನ್ನ ವ್ಯಥೆಯನ್ನು ಹೇಳಿಕೊಳ್ಳಲಿ! ಹತ್ತು ವರ್ಷದ ಕೆಳಗೆ ನನಗೆ ಸಮಾಧಾನ ಹೇಳಿದವರಲ್ಲಿ ಎಷ್ಟೋ ಜನ ಈಗ ಬದುಕಿಲ್ಲ. ಎಷ್ಟೋ ದಿನ ನನಗೆ ನಾನೇ ಸಮಾಧಾನ ಹೇಳಿಕೊಂಡೆ.... ಮನೆಯ ಚಿಕ್ಕಮಕ್ಕಳ ಗಲಾಟೆಯಲ್ಲಿ ಕ್ರಮೇಣ ಆ ನೋವು ಕಡಿಮೆಯಾಯಿತು. ಆದರೆ ಈಗ? ಅವರುಗಳೆಲ್ಲ ದೊಡ್ಡವರಾಗಿದ್ದಾರೆ. ಅವರವರದೇ ಅವರಿಗೆ. ನಾನು ಬೇಕಾಗಿಲ್ಲ.

ಆದರೆ ಜಾನಕಿ? ಪಾಪ ಅವಳು ಒಂದು ದಿನವೂ ಅಸಮಾಧಾನವನ್ನು ವ್ಯಕ್ತಪಡಿಸಿದವಳಲ್ಲ. ಆದರೆ ದುಃಖವನ್ನೆಲ್ಲ ಹೇಗೆ ಸಹಿಸಿಕೊಂಡಳು? ಹೆತ್ತ ತಾಯಿಯ ಜೀವ ಎಷ್ಟು ನೊಂದಿರಬಹುದು? ಒಂದು ದಿನವೂ ಗಟ್ಟಿಯಾಗಿ ಮಾತನಾಡಿದವಳಲ್ಲ. ಜಗಳವಾಡಿದವಳಲ್ಲ. ಮನೆಯ ಹಿರಿಯ ಸೊಸೆಯಾಗಿ ಬಂದು ನನ್ನನ್ನು ಹೆಚ್ಚಿಗೆ ನೋಡಿಕೊಂಡವಳು ಅವಳು. ಹಿರಿಮಗ ಮನೆಬಿಟ್ಟು ಹೋದಾಗ ಅದೆಷ್ಟು ದುಃಖಿಸಿರಬಹುದು? ಅದೆಷ್ಟು ಕೊರಗಿರಬಹುದು? ಆದರೆ ಹಿಂದೆ ಮುಂದೆ ಆಡಿ ಎಂದೂ ನನ್ನ ಮನಸ್ಸನ್ನು ನೋಯಿಸಿದವಳಲ್ಲ.

ಹೆತ್ತ ತಾಯಿ, ತಂದೆಯರನ್ನು ಬಿಟ್ಟು ಮನೆಯಿಂದ ಅವನು ಹೊರಟು ಹೋದದ್ದಕ್ಕೆ ನಾನೇ ಕಾರಣ. ಶ್ರೀಮಂತಿಕೆಗೆ ಬೆರಗಾಗಿ, ಲಕ್ಷ್ಮಿಯಂತಹ ಧಿಮಾಕಿನ ಹೆಣ್ಣನ್ನು ನಾನು ಅವನಿಗೆ ಕಟ್ಟಿದ್ದೆ. ರೂಪಿನಲ್ಲಿ ಆನಂದನಿಗೆ ತಕ್ಕವಳಲ್ಲ ಅವಳು. ಆದರೆ ಒಳ್ಳೆಯ ಗುಣವಾದರೂ ಇರಬೇಡವೆ ಅವಳಲ್ಲಿ! ಜಾನಕಿಗೆ ತಕ್ಕ ಸೊಸೆ ಅವಳಲ್ಲ.... ನಿಜ.... ನಾನು ದುಡುಕಿದೆ ಎಂದು ಈಗ ಅನ್ನಿಸ್ತಿದೆ.

ಲಕ್ಷ್ಮಿಗೆ ತಿಳುವಳಿಕೆ ಹೇಳಿ, ಅವಳು ಗುಣ ನಡತೆಗಳಲ್ಲಿ ತಿದ್ದಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕಾಗಿತ್ತು ನಾನು. ನನಗೆ ಗೌರವಿಸಿ ಎಲ್ಲರೂ ಸುಮ್ಮನಿದ್ದರೇನೋ... ಹಿರಿಯವನಾಗಿದ್ದು ನನಗಷ್ಟು ತಿಳುವಳಿಕೆ ಇಲ್ಲವಾಯಿತು. ನಾರಾಯಣ, ನರಸಿಂಹ ಸಹ ನನಗೆ ಹೆದರಿ, ಏನನ್ನೂ ಆಡಿರಲಿಲ್ಲ.... ಛೆ.... ಎಂತಹ ಕೆಲಸವಾಗಿ ಹೋಯಿತು... ಈಗ ದುಃಖವಾಗ್ತಿದೆ... ಆದರೆ ಇಷ್ಟು ವರ್ಷಗಳ ನಂತರ ಇವರುಗಳು ಹೀಗೆ ಹೊಸದಾಗಿ ವರ್ತಿಸುತ್ತಿದಾರಲ್ಲ. ಅವರೆಲ್ಲ ಒಂದಾಗಿ ನನ್ನನ್ನು ಒಂಟಿಯನ್ನಾಗಿ ಮಾಡಿದಾರಲ್ಲ.... ಈಗ ಈ ಮುಪ್ಪಿನಲ್ಲಿ ನಾನು ಒಂಟಿಯಾಗಿರಲಾರೆ. ಏನೋ ಅಧೀರತೆ ನನ್ನನ್ನು ಕಾಡುತ್ತದೆ. ಯಾರಾದರೂ ಒಬ್ಬರಾದರೂ ಬಂದು ನನ್ನ ಈ ಒಂಟಿತನವನ್ನು ನೀಗಬಾರದೇ..... ತಾತ ಹಂಬಲಿಸಿದರು.

ಮತ್ತೆ ಎರಡು ದಿನಗಳು ಹಾಗೇ ಕಳೆದವು. ಊಟ ತಿಂಡಿ ಇತ್ಯಾದಿ ಸಮಯಕ್ಕೆ ಸರಿಯಾಗಿ ನಡೆದರೂ, ... ಆದರೂ ಏನೇ ನ್ಯೂನತೆ... ಸುಮ್ಮನೆ ಎಲ್ಲರೂ ಏನೋ ತಮ್ಮ ಕರ್ತವ್ಯ ಎಂಬಂತೆ ಮಾಡುತ್ತಿದ್ದಾರೆ ಎಂಬ ಭಾವನೆ.... ಕಡೆಗೆ ತಡೆಯಲಾಗದೇ ಸೊಸೆ ಸರಸ್ವತಿಯನ್ನು ಕರೆದರು.

"ಏನಮ್ಮಾ ಸರಸ್ವತಿ? ಮುದುಕ ನಾನೊಬ್ಬ ಈ ಮನೇಲಿದೀನಿ ಎನ್ನುವುದನ್ನೇ ಎಲ್ಲರೂ ಮರೆತಂತಿದೆ." ಮಾವ ಕೇಳಿದಾಗ ಸರಸ್ವತಿ ಮುಗುಳ್ನಕ್ಕಳು.

"ಯಾಕೆ ಹಾಗಂತೀರಿ ಮಾವಯ್ಯಾ...? ನಿಮ್ಮಿಂದಲೇ ಈ ಮನೆ"

"ಆದರೇನು? ಇದೀಯಾ? ಇಲ್ವಾ? ಅಂತ ಕೇಳೋದಿಲ್ಲ. ನಾನೂ ನಾಲ್ಕು ದಿನಗಳಿಂದ ನೋಡ್ತಾನೇ ಇದೀನಿ. ಒಬ್ಬರೂ ಹತ್ತಿರ ಸುಳಿದಿಲ್ಲ. ಮಕ್ಕಳು ಎಲ್ಲಿ?"

"ಎಲ್ಲರಿಗೂ ಅವರವರ ಕೆಲಸವಿರಲ್ಲವೆ? ಅಲ್ಲದೇ ಎಲ್ಲರೂ ಪೆಚ್ಚಾಗಿದಾರೆ. ಎಲ್ಲರಿಗೂ ಏನೋ ಬೇಜಾರು. ಏನು ಮಾತನಾಡಿದರೆ ಏನು ಹಗರಣ ಕಾದಿದೆಯೋ ಅಂತ ಎಲ್ಲರೂ ಹೆದರಿದ್ದಾರೆ."

"ನೀನೇ ಹೇಳಮ್ಮಾ... ಮುಕುಂದ ಮಾಡಿದ್ದು ಸರೀನಾ! ಒಂದು ಗಳಿಗೆ ತಡೆದು ಕೇಳಿದರು.

"ಸರಿಯಲ್ಲ. ನಮಗೂ ಗೊತ್ತು. ಆದರೆ ಈಗೇನು ಮಾಡುವುದು? ಅವನು ಮನಸ್ಸನ್ನು ಕೆಡಿಸಿಕೊಂಡು ಊರಿಗೆ ಹೊರಟು ಹೋದ."

"ಮಾಡಬಾರದ ಕೆಲಸ ಮಾಡಿದ್ರೆ ಮನಸ್ಸು ಕೆಡದೇ ಇರುತ್ತಾ? ಆಮೇಲೆ ಸರಿ ಮಾಡೋಕ್ಕೆ ಆಗುತ್ತಾ?"

"ಹೋಗಲಿ ಬಿಡಿ ಮಾವಯ್ಯಾ... ಯಾರೂ ಇದನ್ನೆಲ್ಲ ಸರಿಪಡಿಸಲು ಸಾಧ್ಯವಿಲ್ಲ. ಅವರವರ ಹಣೆ ಬರಹ... ನಮಗೇ ನಿಮಗೆ ಏಕೆ? ಸುಮ್ಮನಿದ್ದು ಬಿಟ್ಬಿರಾಯ್ತು"

"ಏನಮ್ಮಾ ನೀನು ಹೀಗಂತೀಯಾ? ಕಂಡೂ ಕಂಡೂ ಗರ್ಭಿಣಿಯಾಗಿರುವ ಹುಡುಗಿಯನ್ನು ಮನೆ ತುಂಬಿಸಿಕೊಳ್ಳುವುದು ಹೇಗೆ ನೀನೇ ಹೇಳು."

"ಏನ್ಮಾಡ್ತೀರಾ? ಬುದ್ಧಿ ವಿಪರೀತಕ್ಕೇರಿದಾಗ ಇಂಥವೆಲ್ಲಾ ನಡೆಯುತ್ತೆ. ಅದೂ ನಮ್ಮ ಮನೆ ಮಗೂನೇ ತಾನೇ... ಹುಟ್ಟುತ್ತೆ ಬೆಳೆಯುತ್ತೆ."

"ಅದೇ ನನಗೆ ಒಪ್ಪದ ವಿಷಯ. ಮೊದಲೇ ಯಾರೋ ಏನೋ ಅಂದ್ಕೊಂಡ್ರೆ... ಗರ್ಭಿಣಿ ಬೇರೆ ಅಂತ ಅಂತೀರಾ...? ಮೊದಲು ಅವಳು ಆ ಗರ್ಭ

ತೆಗೆಸಿ ಬಿಡಲಿ. ಆಮೇಲೆ ಮದುವೆ ವಿಷಯ ಯೋಚಿಸೋಣ."

"ಮಾವಯ್ಯಾ.... ನೀವು ಇಂತಹ ಮಾತನ್ನು ಆಡಬಾರದು. ಅದು ಈ ಮನೆಗೆ ಒಳ್ಳೇದಲ್ಲ"

"ಏಕೆ? ಏನಾಯ್ತು? ಈಗ ಕಳೆದ್ರೇನಾಯ್ತು? ಮತ್ತೆ ಹುಟ್ಟುತ್ತೆ."

"ಹುಟ್ಟು, ಸಾವು ನಮ್ಮ ಕೈಲಿಲ್ಲ. ಭ್ರೂಣ ಹತ್ಯೆ ಮಹಾಪಾಪ. ಆ ಶಾಪ ಯಾರನ್ನಾದರೂ ತಟ್ಟಬಹುದು." ಅವಳು ತಳಮಳದಿಂದ ನುಡಿದಳು.

"ಹಾಗಾದ್ರೆ ಮುಕುಂದ ಆ ಹುಡುಗಿಯನ್ನು ಮರೆಯುವುದೇ ಒಳ್ಳೆಯದು."

"ಅದೂ ಸಾಧ್ಯವಿಲ್ಲ. ಆ ಮಗು ಬೆಳೆದ ಮೇಲೆ, ಈ ಮನೆಯ ಮಗು ಅಂತ ಎಲ್ಲರಿಗೂ ತಿಳಿದೇ ತಿಳಿಯುತ್ತೆ.

"ಅಂದರೆ....? ಮದುವೆಯಾಗದೇ ಮಗುವನ್ನು ಹೆರುವ ಧೈರ್ಯ ಆ ಹುಡುಗಿಗೆ ಇದೆಯೇ?"

"ಈ ಕಾಲದಲ್ಲಿ ಕಾನೂನು ಅವರಿಗೆ ಬೆಂಬಲ ನೀಡುತ್ತದೆ. ಕೋರ್ಟು, ಕಛೇರಿ ಹತ್ತಿದರೆ ಅವಳಿಗೆ ನ್ಯಾಯ ಸಿಗುತ್ತೆ. ನಮ್ಮ ಮನೆ ಮರ್ಯಾದೆ ಹೋಗುತ್ತದೆ. ಮನೆ ಯಲ್ಲಿ ನಾಲ್ಕು ಗೋಡೆಗಳ ಮಧ್ಯೆ ಉಳಿಯಬಹುದಾದ ಮಾತು ಬೀದಿಗೆ ಬರುತ್ತದೆ ಅಷ್ಟೇ...."

"ಅಂದರೆ ಮದುವೆಗೆ ಒಪ್ಪುವುದೇ ಸರಿ ಅಂತೀಯಾ....?"

"ಬೇರೆ ಮಾತೇ ಇಲ್ಲ. ನಾವು ಒಪ್ಪಿದರೂ, ಒಪ್ಪದಿದ್ದರೂ ಅವನು ಅವಳನ್ನು ಮದುವೆಯಾಗುವುದಾಗಿ ತಿಳಿಸಿ ಹೋಗಿದ್ದಾನೆ. ಚಿಕ್ಕವರು, ಅವರ ಆಸೆಗೆ ಅಡ್ಡಿ ಬರದೇ ಮುಂದೆ ನಿಂತು ಮದುವೆ ನೆರವೇರಿಸಿದರೆ, ಹಿರಿಯೋರ ಮರ್ಯಾದೇನೂ ಉಳಿಯುತ್ತೆ."

"ಸರಿ ಸರಿ. ನೀವುಗಳೆಲ್ಲ ಒಂದಾಗಿ, ನನ್ನನ್ನೇ ಬೇರೆ ಮಾಡ್ತಿದೀರಿ. ಅದೇನು ಮಾಡ್ತಿರೋ ಮಾಡಿ. ಆದರೆ.... ಅವಳು ಆ ಪಿಂಡ ತೆಗೆಸಿ ಹಸೆಮಣೆ ಹತ್ತಬೇಕು" ಸರಸ್ವತಿ ಬೇಸರಿಸಿದಳು.

"ನಿಮಗೆ ತಾನೇ ಯಾಕಿಷ್ಟು ಹಠ ಅಂತೀನಿ? ಆ ಹುಡುಗಿ ನಿಮಗೇನು ಅನ್ಯಾಯ ಮಾಡಿದಾಳೆ!ಮಕ್ಕಳಿಲ್ಲದ ನಮ್ಮ ಕೊರಗು ಯಾರಿಗೆ ತಾನೇ ಅರ್ಥವಾಗುತ್ತೆ? ಮಕ್ಕಳಾ ಗುವುದಕ್ಕೂ ಪುಣ್ಯವಂತರಾಗಿರಬೇಕು. ದಯವಿಟ್ಟು ಅಂತಹ ನೀಚ ಕೆಲಸವನ್ನು ಮನಸ್ಸಲ್ಲೂ ಆಲೋಚಿಸಬೇಡಿ." ದೈನ್ಯತೆಯಿಂದ ಸರಸ್ವತಿ ಕೇಳಿಕೊಂಡಳು.

ಚಿಕ್ಕ ಸೊಸೆಯ ಮಾತನ್ನು ಕೇಳಿ ಆತ ಅಧೀರರಾದರು. ಎಂದೂ ಇಷ್ಟು ಮಾತನಾಡಿದವಳಲ್ಲ. ಇಂದು ನನ್ನ ವಿರುದ್ಧ ಮಾತನಾಡುತ್ತಿದ್ದಾಳೆ... ಎಲ್ಲರೂ ಒಂದಾಗಿದಾರೆ ನಾನು ಸೋಲುತ್ತಿದ್ದೇನೆ ಎನಿಸಿ,

"ಸರಿ. ಅವಳು ಮರ್ಯಾದೆ ಇಲ್ಲದವಳು ಎಂದರೆ, ನಾವೂ ಮರ್ಯಾದೆಯನ್ನು ಬಿಡಬೇಕಾಗಿದೆ. ಈಗ.... ಆದರೆ ನಾವು ಜನರಿಗೆ ಹೆದರಿ, ಏನೋ ಒಂದು ಅಂತ ಒಪ್ಪಿದೀವಿ ಅಂತ ಅವರುಗಳು ಅಂದ್ಕೊಂಡು ಕಾಟಾಚಾರದ ಮದುವೆ ಮುಗಿಸ ಬಾರದು. ವಿಜೃಂಭಣೆಯಿಂದ, ಒಡವೆ, ವಸ್ತು, ಊಟ ಉಪಚಾರ ಯಾವುದಕ್ಕೂ ಚ್ಯುತಿ ಬರಬಾರದು.... ಅದ್ದೂರಿಯ ಮದುವೆ ನೆರವೇರಬೇಕು. ಅಷ್ಟಾದರೂ ಈ ಮುದುಕನ ಆಸೆ ಈಡೇರಲಿ."

ಸರಸೂಗೆ ಸಂತೋಷವಾದರೂ ಏನೋ ಸಂದೇಹ. ವ್ಯಂಗ್ಯವಾಗಿ ಆಡಿದರೆ.... ಎಂದು ಹಾಗೆ ಸುಮ್ಮನೆ ನಿಂತಳು. ತಾತ ಮತ್ತೆ ನುಡಿದರು.

"ಯಾಕೆ ಸುಮ್ಮನಾದೆಯಮ್ಮಾ? ಹುಡುಗಿ ಅನುಕೂಲಸ್ಥರ ಮನೆಯವಳಲ್ಲ. ಒಂದು ನೀರು ಸಾರು, ಬೇಳೆ ಪಾಯಸ ಮಾಡಿಸಿ, ಧಾರೆ ಎರೆದುಕೊಟ್ಟರೆ ಸಾಕು ಅಂತ ಯಾಕೆ ಹೇಳಲಿಲ್ಲ?" ಇದು ವ್ಯಂಗ್ಯವಾಗಿ ಆಡಿದ ಮಾತು.

"ಈ ಮಾತನ್ನು ಆಡಬಾರದು ನೀವು. ಹೆಣ್ಣು ಹೆತ್ತವರು ಕಷ್ಟ ಪಡದೇ ಮದುವೆ ಹೇಗೆ ಆಗುತ್ತೆ! ತಂದೆ ಇಲ್ಲ. ಆ ಹೆಣ್ಣು ಮಕ್ಕಳದ್ದೇ ಸಂಪಾದನೆ. ನಾವು ಅವರಿಂದ ಏನನ್ನೂ ನಿರೀಕ್ಷಿಸಬಾರದು."

"ಹೂಂ....ಹೂಂ.... ಕಾಟಾಚಾರದ ಮದುವೆಗೆ ನಾನು ಖಂಡಿತಾ ಒಪ್ಪು ವುದಿಲ್ಲ. ನಮ್ಮ ಅಂತಸ್ತಿಗೆ ತಕ್ಕಂತೆ ಮದುವೆ ನಡೆಯಬೇಡವೆ?"

"ಅಂತಸ್ತು, ಆಸ್ತಿ ಯಾವುದೂ ಶಾಶ್ವತವಲ್ಲ. ಹಿರಿಯೋರ ಆಶೀರ್ವಾದ ಮುಖ್ಯ. ಅದೊಂದಿದ್ದರೆ ಮನೆ ನಂದನವನವಾಗುತ್ತೆ. ಅಂತೂ ನೀವು ಒಪ್ಪಿದೀರಲ್ಲ ಅದೇ ಸಂತೋಷ. ನಾನೀಗಲೇ ಹೋಗಿ ಅಕ್ಕ ಭಾವನಿಗೆ ಈ ವಿಷಯ ತಿಳಿಸ್ತೀನಿ. ಮುಕುಂದನಿಗೆ ಟೆಲಿಗ್ರಾಂ ಕೊಡಬೇಕು." ಚಿಗರೆಯಂತೆ ಅವಳು ಸಂಭ್ರಮದಿಂದ ನಡೆದಾಗ ಆತ ದಂಗಾದರು. ತಾನಾಗಿಯೇ ಸೋತೆ ಅಂತನ್ನಿಸಿತ್ತು.

"ಹಾಗಾದ್ರೆ ಇದುವರೆಗೂ ನೀವೆಲ್ಲಾ ಸುಮ್ಮನೇನೇ ಇದ್ರಾ?" ಮತ್ತೆ ಕರೆದು ಪ್ರಶ್ನಿಸಿದರು.

"ಹುಂ ನಿಮ್ಮ ಒಪ್ಪಿಗೆಗೆ ಕಾಯುತ್ತಿದ್ದೆವು."

ಆತನಿಗೆ ಅಭಿಮಾನವೆನಿಸಿತು. ಬಲವಂತವೇ ಆದರೂ ಪರವಾಗಿಲ್ಲ. ತನ್ನ ಸ್ಥಾನಕ್ಕೆ ಏನೂ ಕುಂದು ಬಂದಿಲ್ಲ ಎನಿಸಿದಾಗ ಹೆಮ್ಮೆಯುಂಟಾಗಿತ್ತು.

"ಹಾಗಾದ್ರೆ ಮುಕುಂದನಿಗೆ ನಾವುಗಳು ಬರ್ತೀದೀವಿ ಅಂತ ಟೆಲಿಗ್ರಾಂ ಕೊಟ್ಟು ಬಿಡಿ. ಒಂದು ಸಲ ಹಾಗೇ ಅವರ ಮನೆ, ಜನ ಎಲ್ಲರನ್ನು ತಿಳಿದುಕೊಂಡ ಹಾಗುಗುತ್ತೆ."

ಮಾವನ ಆಂತರ್ಯದ ಅರಿವಾದರೂ ಗೆದ್ದೆವು ಎಂದುಕೊಂಡಳು.

ತಕ್ಷಣ ಹೋಗಿ ನಾರಾಯಣ ಮುಕುಂದನಿಗೆ "ನಾವು ಬರ್ತೀದೀವಿ" ಎಂದಷ್ಟೇ ಟೆಲಿಗ್ರಾಂ ಕೊಟ್ಟರು. ಯಾರ್‍ಯಾರು ಹೊರಡುವುದು ಎಂದು ತೊಯ್ದಾಟ, ಹೊಯ್ದಾಟ ನಡೆಸಿ, ಕಡೆಗೆ ತಾತ, ನಾರಾಯಣ ಸರಸ್ವತಿ ಹಾಗೂ ವಿಮಲ ಹೊರಡುವು ದೆಂದು ನಿರ್ಧರಿಸಿದರು.

* * *

ವಾರ ಕಳೆದರೂ, ಹಳ್ಳಿಯಿಂದ ಏನೂ ವರ್ತಮಾನ ಬರದಿದ್ದರಿಂದ ಮುಕುಂದ ಬೇಸರಗೊಂಡಿದ್ದ. ಸುಕನ್ಯ ಆಗಾಗ್ಗೆ ಕೇಳಿ ಬೇಸರವನ್ನು ಹೆಚ್ಚಿಸಿದ್ದಳು. ಸರಿ ಹೇಗೂ ಅವರುಗಳು ಒಪ್ಪುವುದಿಲ್ಲ. ಸಿವಿಲ್ ಮ್ಯಾರೇಜ್ ಆಫೀಸಿನಲ್ಲಿ ಈಗಲೇ ಹೆಸರನ್ನು ಬರೆಸಿದರೆ....ಹೇಗೂ ಒಂದು ತಿಂಗಳಾದರೂ ಬೇಕಾಗುತ್ತೆ.... ಎಂದು ಆಲೋಚಿಸಿದ್ದ.

ಅಷ್ಟರಲ್ಲಿ ಹಳ್ಳಿಯಿಂದ ಟೆಲಿಗ್ರಾಂ ಬಂದಾಗ ಏನೆಂದು ತಕ್ಷಣಕ್ಕೆ ಅರ್ಥ ವಾಗಿರಲಿಲ್ಲ. ಮಧ್ಯೆ ಭಾನುವಾರ ಬಂದಿದ್ದರಿಂದ, ಎರಡು ದಿನ ತಡವಾಗಿ ಅವನ ಕೈ ಸೇರಿತ್ತು. ಈಗ ಯಾರು, ಯಾಕೆ ಬರುತ್ತಿದಾರೆ ಎಂದು ತಿಳಿಯಲಿಲ್ಲ. ಸುರೇಶನಿಗೆ ವಿಷಯ ತಿಳಿಸಿ, ಸಲಹೆ ಕೇಳಿದ. ಬರ್ತೀನಿ ಅಂತ ತಿಳಿಸಿದಾರಲ್ಲ. ಅದನ್ನು ನೋಡೇ ಬಿಡು. ಆಮೇಲೆ ರಿಜಿಸ್ಟ್ರಾರ್ ಆಫೀಸಿಗೆ ಹೋದರಾಯ್ತು.

ಹಳ್ಳಿಯಿಂದ ಬರ್ತಿದಾರೆ, ಊರು ಹೊಸದು, ರಸ್ತೆ ಗೊತ್ತಾಗುತ್ತೋ ಇಲ್ಲವೋ ಅಂತ ಅಂದುಕೊಂಡರೂ, ಯಾವಾಗ ಬರ್ತಾರೆ ಎಂದು ಸರಿಯಾಗಿ ತಿಳಿಯದ್ದರಿಂದ, ಏನಾದರೂ ಮಾಡಿಕೊಳ್ಳಲಿ ಎಂದು ಉದಾಸೀನದಿಂದ ತನ್ನ ಪಾಡಿಗೆ ತಾನು ಆಫೀಸಿಗೆ ಹೋದ.

ಇಷ್ಟು ವರ್ಷಗಳಲ್ಲಿ ಅವರ್‍ಯಾರು ಬೆಂಗಳೂರಿಗೆ ಬಂದಿರಲಿಲ್ಲವಾದ್ದರಿಂದ, ಮುಕುಂದನ ವಿಳಾಸ ಹಿಡಿದು ಹುಡುಕಿ, ಕಡೆಗೆ ಬಂದು ಸೇರಿದ್ದರು. ಮನೆಗೆ ಬೀಗ ಹಾಕಿತ್ತು.

"ಬರ್ತೀವಿ ಅಂತ ತಿಳಿಸಿದ್ರೂ ಈ ಭೂಪ ಮನೇಲಿಲ್ಲವಲ್ಲ. ಸ್ಟೇಶನ್‌ಗೂ ಬಂದಿರಲಿಲ್ಲ. ಎಲ್ಲಿ ಹೋದನೋ ಎಂದು ಬೈದು ಕೊಂಡು ಮನೆ ಮಾಲೀಕರನ್ನು ವಿಚಾರಿಸಿದರು. ಅವರು, ಕೆಲಸಕ್ಕೆ ಹೋಗಿದ್ದಾರೆ, ಇನ್ನು ಸಾಯಂಕಾಲಕ್ಕೆ ಬರುವುದು" ಎಂದರು.

"ತಮ್ಮ ಮನೆಗೆ ಬಂದಿರಿ", ಎಂದು ಕರೆಯಲಿಲ್ಲ. ಪಟ್ಟಣದ ಜನ ಬರೀ ಸ್ವಾರ್ಥಿಗಳು ಎಂದು ಬೈದುಕೊಂಡರು. ಅವರ ಮನೆಯಲ್ಲಿ ಯಾರೂ ಹೆಂಗಸರಿರಲಿಲ್ಲ. ಕೆಲ ನಿಮಿಷದ ನಂತರ ಯೋಚಿಸಿ, ಆತ ಸುರೇಶನ ಮನೆ ವಿಳಾಸ ತಿಳಿಸಿದರು.

"ಇದೇ ರಸ್ತೆಯಲ್ಲಿ ಕಡೇ ಮನೆಯ ಪಕ್ಕದ್ದೇ ಮನೆ. ಹಳದಿ ಬಣ್ಣ ಹಚ್ಚಿದೆ. ಮನೆ ದೂರವೇನಿಲ್ಲ. ಹೋಗಿ ಬರುವುದಾದರೆ ಹೋಗಿ ಬನ್ನಿ"

ಹೆಂಗಸರನ್ನಿಟ್ಟುಕೊಂಡು ಮನೆ ಬಾಗಿಲಿನಲ್ಲಿ ಕುಳಿತಿರುವುದಕ್ಕಿಂತ ಸುರೇಶನ ಮನೆಗೆ ಹೋಗುವುದು ವಾಸಿ. ಹೇಗೂ ಪರಿಚಯದವನು ಎಂದುಕೊಂಡು ಕಿಟ್ ಬ್ಯಾಗ್‌ಗಳನ್ನು ಅಲ್ಲಿಯೇ ಬಿಟ್ಟು ಸುರೇಶನ ಮನೆಯ ದಿಕ್ಕಿಗೆ ನಡೆದರು.

ಬೆಳಗಿನ ಹತ್ತೂವರೆಯ ಸಮಯ, ಯಾರು ಬಂದರೋ ಎಂದುಕೊಂಡು ಪಂಕಜಮ್ಮ ಬಾಗಿಲನ್ನು ತೆರೆದರು. ಸುರೇಶನಿಗೆ ಹೆಣ್ಣು ಕೊಡಲು ಯಾರೋ ಬಂದಿರಬೇಕೆಂದುಕೊಂಡು ಆದರದಿಂದ ಒಳಗೆ ಬರಮಾಡಿಕೊಂಡರು.

ನಾರಾಯಣ ತಮ್ಮ ಪರಿಚಯ ಹೇಳಿಕೊಂಡು, ತಾವು ಬಂದ ಕಾರಣವನ್ನು ತಿಳಿಸಿದರು. ಆಕೆಗೆ ಮುಜುಗರವೆನಿಸಿದರೂ, ಅಸಂತೋಷವನ್ನು ವ್ಯಕ್ತ ಪಡಿಸಲಿಲ್ಲ. ಬಿಸಿ ಬಿಸಿ ಕಾಫಿ, ತಿಂಡಿ ತಂದಿತ್ತಳು. ಸುರೇಶನ ತಂದೆ ಶ್ರೀಪತಿರಾಯರು ಮನೆಯಲ್ಲಿದ್ದರು. ಅವರ ಜತೆ ಬೆರೆತು ಮಾತುಕತೆಯಾಡಿದರು.

"ಮುಕುಂದನಿಗೆ ಫೋನು ಮಾಡಿ ತಿಳಿಸಿದ್ರೆ ಚೆನ್ನಾಗಿತ್ತು. ನಮ್ಮ ಹತ್ತಿರ ಆ ನಂಬರು ಇಲ್ಲ. ನಿಮ್ಮ ಹತ್ತಿರ ಇದೆಯಾ?" ನಾರಾಯಣ ಕೇಳಿದ.

"ಮುಕುಂದನ ನಂಬರು ಗೊತ್ತಿಲ್ಲ. ಸುರೇಶನ ನಂಬರು ಇದೆ. ಅವನಿಗೆ ಫೋನು ಮಾಡಿ ತಿಳಿದುಕೊಳ್ಳಬೇಕು. ನೀವುಗಳು ಕುಳಿತು ಸುಧಾರಿಸಿಕೊಳ್ಳಿ, ನಾನು ವಿಚಾರಿಸ್ತೀನಿ" ಆತ ಚಪ್ಪಲಿ ಮೆಟ್ಟಿ ಹೊರಟಾಗ ಆತನನ್ನು ನಾರಾಯಣ ವಂದಿಸಿದ. ಒಳ್ಳೆ ಜನ ಅಂತ ಕಾಣಿಸುತ್ತೆ ತಮ್ಮಲ್ಲೇ ಹೊಗಳಿದರು.

ಶ್ರೀಪತಿರಾಯರು ಕೆಲವೇ ನಿಮಿಷಗಳಲ್ಲಿ ವಾಪಸ್ಸಾದರು. "ಅವನಿಗೆ ಫೋನ್

ಮಾಡಿ ಎಲ್ಲಾ ತಿಳಿಸಿದೀವಿ. ಅವನು ಮುಕುಂದನಿಗೆ ಫೋನು ಮಾಡಿರ್ತಾನೆ. ಏನೂ ಆತಂಕವಿಲ್ಲ'' ಎನ್ನುತ್ತಾ ಮಾತಿಗೆ ಕೂತರು. ಸರಸ್ವತಿ, ವಿಮಲ ಎದ್ದು ಒಳಕ್ಕೆ ಹೋದರು.

''ಲಗ್ಗೇಜು ತಂದಿದ್ದರೆ ಇಲ್ಲೇ ಸ್ನಾನ ಮಾಡಬಹುದಾಗಿತ್ತು. ''ಆಕೆ ವಿಶ್ವಾಸ ವಾಗಿ ನುಡಿದಾಗ ಸರಸ್ವತಿ ಸಂಕೋಚಗೊಂಡಳು.

''ಬರ್ತೀನಿ ಅಂತ ಟೆಲಿಗ್ರಾಂ ಸಹ ಕೊಟ್ಟಿದ್ದೆವು. ಯಾಕೆ ಹೀಗೆ ಮಾಡಿದನೋ, ಮನೆ ಮಾಲೀಕರ ಕೈಲಿ ಬೀಗದ ಕೈ ಕೊಟ್ಟಿದ್ದರಾದರೂ ಚೆನ್ನಾಗಿರುತ್ತಿತ್ತು.''

''ಏನಾಯ್ತೀಗ? ಈ ನೆವದಿಂದ ನೀವು ನಮ್ಮ ಮನೆಗೆ ಬರುವಂತಾಯ್ತು ಇಲ್ಲದಿದ್ರೆ ಏಕೆ ಬರ್ತಿದ್ರಿ?'' ಆಕೆ ಮಾತನಾಡುತ್ತಾ ಅಡಿಗೆ ತಯಾರಿ ನಡೆಸಿದಳು.

ಹೊರಗಡೆ ಮುಕುಂದನ ಮದುವೆ ಬಗ್ಗೆ ಮಾತುಕತೆ ನಡೆಸಿದ್ದರು. ತಾತ, ಸುರೇಶನ ಮನೆಯ ವಿಚಾರಗಳನ್ನು ಕೇಳಿ ತಿಳಿದುಕೊಂಡರು. ಆತ,

''ನನಗೆ ಮೂರು ಜನ ಹೆಣ್ಣು ಮಕ್ಕಳು, ಇಬ್ಬರು ಗಂಡು ಮಕ್ಕಳು. ರಿಟೈರ್ ಆಗುವ ಹೊತ್ತಿಗೆ ಹೆಣ್ಣು ಮಕ್ಕಳ ಮದುವೆ ಮುಗಿಸಿದ್ದೆ. ಹಿರಿ ಮಗ ಮಹೇಶನ ಮದುವೆ ಆಗಿದೆ. ಮೈಸೂರಿನಲ್ಲಿದ್ದಾನೆ. ಇನ್ನು ಇವನ ಮದುವೆ ಆಗಬೇಕು. ಹೆಣ್ಣುಗಳು ಬರುತ್ತಿವೆ.''

''ನೀವೇ ಧನ್ಯರು ಬಿಡಿ. ಜವಾಬ್ದಾರಿ ಮುಗಿಯತ್ತಾ ಬಂದಿದೆ.''

''ಇಷ್ಟು ಆಗಬೇಕಾದರೆ, ಎಷ್ಟು ಒದ್ದಾಡಿರ್ತೀನಿ.''

''ನಮ್ಮ ಮನೆ ತರಹ ಹಗರಣಗಳು ನಡೆದಿರಲಾರದು.''

''ನಡೀದೇ ಏನು! ನಮ್ಮ ಮನೇಲೂ ನಡೀತು. ನನ್ನ ಕಿರಿ ಮಗಳು ಸರ್ಕಾರಿ ಕೆಲಸದಲ್ಲಿದ್ದಾಳೆ. ಅವಳದ್ದೂ ಲವ್ ಮ್ಯಾರೇಜ್.''

''ಸುರೇಶ ಈ ವಿಚಾರವನ್ನು ಹೇಳಿರಲಿಲ್ಲ. ಈ ಮದುವೆಗೆ ನೀವು ಒಪ್ಪಿರ ಲಿಲ್ಲವೆ!....''

''ಹಾಗೇನಿಲ್ಲ. ಮೊದಲು ಬೇಕಾದಷ್ಟು ಮಾತುಕತೆಗಳು ನಡೆದರೂ, ಅವಳು ಉಪವಾಸ ಮಾಡಿ ಹೆದರಿಸಿ, ಒಪ್ಪಿಗೆ ಪಡೆದಳು. ಗಂಡಿನ ಮನೆಯವರು ಮೊದಲೇ ಒಪ್ಪಿಬಿಟ್ಟಿದ್ದರು....ಯಾವ ತಕರಾರೂ ಇರಲಿಲ್ಲ. ಕಡೆಗೆ ನಾವುಗಳೂ ಒಪ್ಪ ಬೇಕಾಯ್ತು....''

''ಹಾಗಾದರೆ, ಈ ಕಾಲದವರು ಮಾಡಿದ್ದೆಲ್ಲಾ ಸರಿ ಅಂತೀರಾ?''

"ಸರಿಯೋ ತಪ್ಪೋ.... ಒಪ್ಪಲೇ ಬೇಕಾಗುತ್ತೆ. ಕಾಲಕ್ಕೆ ತಕ್ಕಂತೆ ಕೆಲವು ಸಲ ಬದಲಾಗುವ ಪರಿಸ್ಥಿತಿ ಒದಗುತ್ತದೆ. ಇಲ್ಲದಿದ್ದರೆ, ನಮ್ಮ ಮಕ್ಕಳನ್ನು ನಾವಾಗಿಯೇ ದ್ದೂರಮಾಡಿದ ಹಾಗಾಗುತ್ತೆ. ಬಿಸಿರಕ್ತ, ಹೊಸ ಸಂಸಾರ, ಹೆಂಡತಿ, ಮಕ್ಕಳು ಇವರುಗಳ ಮಧ್ಯೆ ಅವರಿಗೆ ನಮ್ಮ ಅಗತ್ಯ ಸಾಧ್ಯವಿಲ್ಲ. ಹಳೆಯ ನೆನಪುಗಳು ಕಾಡಿ ತಿನ್ನುತ್ತದೆ. ವೃದ್ಧಾಪ್ಯದ ದಿನಗಳು ಹೆದರಿಸುತ್ತದೆ. ಒಂಟಿತನವನ್ನು ಎದುರಿಸುವುದು ದುಸಾಧ್ಯ ಎನಿಸುತ್ತದೆ. ನಿಮಗೆ ಇದರ ಅನುಭವವಿರಬಾರದು. ನಮ್ಮ ಬೀಗರು ಇದೇ ಮಾತನ್ನು ಹೇಳಿ, ನನಗೆ ಅರಿವು ಮೂಡಿಸಿದರು. ಏನ್ಮಾಡ್ತೀರಾ....ಕಾಲ ಹಾಗಾಗಿದೆ....ಎಲ್ಲಾ ಬದಲಾಗುತ್ತಿದೆ."

ಆತನ ಮಾತಿನಿಂದ ತಾತ ಮತ್ತೂ ಕುಗ್ಗಿದರು. ತನಗಿಂತ ವಯಸ್ಸಿನಲ್ಲಿ ಚಿಕ್ಕವರು, ಆದರೆ ಈಗನ ಕಾಲದವರಿಗೆ ತಕ್ಕಂತಹ ಮಾತುಗಳು. ನಾರಾಯಣ ಮೆಚ್ಚುಗೆಯಿಂದ ಆತನ ನುಡಿಗಳಿಗೆ ತಲೆತೂಗುತ್ತಿದ್ದಾನೆ. ತಾತನಿಗೆ ಮಾತುಗಳು ಖುಷಿಯನ್ನು ತಂದಿರಲಿಲ್ಲ...ಅಲ್ಲಿಂದ ಎದ್ದು ಹೊರಡಬೇಕೆನ್ನಿಸಿತು.

ಅಷ್ಟರಲ್ಲಿ ಸುರೇಶ, ಮುಕುಂದ ಒಟ್ಟಾಗಿ ಬಂದರು. ಸುರೇಶ 'ನಮಸ್ಕಾರ' ಎಂದ ವಿನಯದಿಂದ. ಎಲ್ಲರನ್ನೂ ಕುರಿತು ಮುಕುಂದ ರೇಗಿ ನುಡಿದ.

"ಇಂಥ ಹೊತ್ತಿಗೆ ಬರ್ತೀನಿ ಅಂತ ಸರಿಯಾಗಿ ತಿಳಿಸಬಾರದಾಗಿತ್ತಾ! ಯಾವಾಗಲೂ ಎಡವಟ್ಟೇ..."

"ಬಸ್ಸು ಲೇಟಾಯ್ತು. ಇಲ್ಲದಿದ್ದರೆ ಬೆಳಗಿನ ಝಾವದಲ್ಲೇ ಬಂದು ಸೇರಬೇಕಾಗಿತ್ತು."

"ಸರಿ ನಡೀರಿ...." ಮುಂದೆ ಹೊರಟ. 'ಎಷ್ಟು ಹೊತ್ತಿಗೆ ಬಂದಿರಿ! ಹೇಗೆ ಬಂದಿರಿ?' ಅಂತ ಒಂದ್ಮಾತು ವಿಶ್ವಾಸದಿಂದ ವಿಚಾರಿಸಲಿಲ್ಲವಲ್ಲ ಎಂದು ಚಿಕ್ಕಪ್ಪನಿಗೆ ಬೇಸರವಾಗಿತ್ತು.

"ಒಳಗೆ ನಿನ್ನ ಚಿಕ್ಕಮ್ಮ, ವಿಮಲ ಇದಾರೆ. ಕರಿ ಹೊರಡೋಣ" ಎಂದರು. ಮುಕುಂದ ಸ್ವಲ್ಪ ಗೆಲುವಾದ. ಚಿಕ್ಕಮ್ಮನೂ ಬಂದಿರಬೇಕಾದರೆ, ಏನೂ ಆತಂಕವಿಲ್ಲ ಎಂದುಕೊಂಡು ಒಳಕ್ಕೆ ಬಂದ.

"ಸಧ್ಯ ಬಂದ" ಎಂದಳು ಸರಸ್ವತಿ ಅವನನ್ನು ಕಂಡು, ಉತ್ಸಾಹದಿಂದ ಎದ್ದಳು. ಸುರೇಶನೂ ಬಂದು ನಿಂತ ಮುಗುಳ್ನಗುತ್ತಾ.

"ನಾವಿನ್ನು ಬರ್ತೀವಿ" ಎಲ್ಲರೂ ಹೊರಟರು.

“ಎಲ್ಲಾ ಇಲ್ಲಿಗೇ ಊಟಕ್ಕೆ ಬಂದು ಬಿಡಿ. ಅಡಿಗೆ ಆಗಿದೆ. “ಪಂಕಜಮ್ಮ ವಿಶ್ವಾಸದಿಂದ ಆಹ್ವಾನವಿತ್ತಳು.

“ಪರವಾಗಿಲ್ಲ ಹೋಟೆಲ್ಲಿನಲ್ಲಿ ಊಟ ಹಾಕಿಸ್ತೀನಿ” ಎಂದ ಉದಾಸೀನದಿಂದ.

“ಏಯ್, ಏನು ಮಾತೋ ನಿನ್ನದು. ಈ ಮನೆಯವರು ಹೊಸಬರಾ ನಿನಗೆ?”

“ಏನಿಲ್ಲ. ಆದರೂ ಒಟ್ಟಿಗೆ ಇಷ್ಟು ಜನಕ್ಕೆ... ನಿಮ್ಮ ತಾಯಿಗೆ ಕಷ್ಟ ಆಗುವುದಿಲ್ಲವೆ?”

“ಏನೂ ಇಲ್ಲ. ನಮ್ಮ ಅಕ್ಕ ಭಾವ ಅವರ ಮಕ್ಕಳು ಎಲ್ಲ ಒಟ್ಟಿಗೆ ಸೇರಿದಾಗ ಇನ್ನೂ ಜಾಸ್ತಿ ಆಗುತ್ತೆ. ನೀನು ಹೀಗೆ ಮಾತನಾಡಿ, ನಿನ್ನ ಸ್ನೇಹಿತನಿಗೆ ಅವಮಾನ ಮಾಡಬೇಡ.

“ಸಾರಿ. ಕಣೋ.... ನಿನಗೆ ನೋವನ್ನುಂಟು ಮಾಡಬೇಕು ಅಂತ ಹೇಳಲಿಲ್ಲ”

“ಸರಿ. ಹಾಗಾದ್ರೆ ಸುಮ್ಮನಿರು. ಎಷ್ಟು ದಿನ ಅವರುಗಳು ಇಲ್ಲಿರುತ್ತಾರೋ, ಅಲ್ಲಿಯವರೆಗೂ ನಮ್ಮ ಮನೆಯಲ್ಲಿಯೇ ಊಟ.” ಸುರೇಶ ನುಡಿದಾಗ ಎಲ್ಲರೂ ಒಪ್ಪಬೇಕಾಯ್ತು ಪಂಕಜಮ್ಮನೂ ಅದನ್ನೇ ಒತ್ತಿ ಹೇಳಿದರು.

“ಅಡಿಗೆ ಕೆಲಸ ಕಷ್ಟ ಅಂತ ಅಂದ್ರೆ, ಹೇಗಾಗುತ್ತೆ ಹೇಳಿ. ಬರೋರು ಬರಬೇಕು. ಅದೇ ಚೆನ್ನ ಇಲ್ಲದಿದ್ದರೆ ಮನುಷ್ಯನಿಗೆ ಸಮಾಜದಲ್ಲಿ ಏನು ಬೆಲೆ ಇರುತ್ತೆ?” ಈ ಮಾತು ಎಲ್ಲರಿಗೂ ಹಿತವನ್ನುಂಟು ಮಾಡಿತು.

* * *

ಮುಕುಂದ ಆಫೀಸಿನಲ್ಲಿಯೇ ಸುಕನ್ಯಂಗೆ, ತಾತ, ಚಿಕ್ಕಪ್ಪ ಬಂದಿರುವ ವಿಷಯ ವನ್ನು ತಿಳಿಸಿದ. ಸಾಯಂಕಾಲ ಎಲ್ಲರನ್ನು ಕರೆದುಕೊಂಡು ಬರ್ತೀನಿ ಎಂದು ಹೇಳಿದ್ದ. ಸುಕನ್ಯ ಮನೆಗೆ ಬಂದು ತಾಯಿಗೆ ಈ ವಿಷಯವನ್ನು ತಿಳಿಸಿದ್ದಳು. ಮನೆ ಯಲ್ಲಿಯೇ ಇದ್ದ ಸರಳ, ಸರಭರನೆ ಅತಿಥಿಗಳ ಸ್ವಾಗತಕ್ಕೆ ಸಿದ್ಧತೆ ಮಾಡ ತೊಡಗಿದಳು.

ಸುರೇಶನ ಮನೆಯಲ್ಲಿ ಊಟ ಮುಗಿಸಿ, ಸಣ್ಣನಿದ್ದೆ ತೆಗೆದು, ಸಾಯಂಕಾಲ ಸಿದ್ಧರಾಗಿ ಎಲ್ಲರೂ ಸುಕನ್ಯಳ ಮನೆಗೆ ಹೊರಟಿದ್ದರು. ತಾತ ಒಪ್ಪಿಗೆ ಕೊಟ್ಟಿರುವ ವಿಚಾರವನ್ನು ಚಿಕ್ಕಪ್ಪ ತಿಳಿಸಿದ್ದರೂ ಮುಕುಂದ ಬಿಗುವಾಗಿಯೇ ಇದ್ದ. ಸುರೇಶನ ತಂದೆ ತಾಯಿ ಸಹ ಬರಲಿ ಎಂದು ಕೇಳಿಕೊಂಡಿದ್ದ. ತಂದೆ ಬರಲು ಇಷ್ಟಪಡಲಿಲ್ಲ. ಸುರೇಶ ತಾಯಿಯನ್ನು ಹೊರಡಿಸಿದ್ದ.

ಹಣ್ಣು ಹೂವು, ಎಲೆ ಅಡಿಕೆ ಸಮೇತ ಬಂದವರನ್ನು ಸುಭದ್ರಮ್ಮ ಸಂಭ್ರಮ

ದಿಂದ ಸ್ವಾಗತಿಸಿದಳು. ಮುಕುಂದ ಪರಸ್ಪರ ಪರಿಚಯ ಮಾಡಿಸಿದ. ತಿಂಡಿ ಕಾಫಿಯ ನಂತರ ತಾತ ನೇರವಾಗಿ ಮಾತಿಗೆ ಪ್ರಾರಂಭಿಸಿದರು.

"ನಮ್ಮ ಕಡೆಯ ಬೇಕಾದಷ್ಟು ಹುಡುಗಿಯರು, ಇವನನ್ನು ಮದುವೆಯಾಗಲು, ಮೂಲೆ ಹಿಡಿದು ಸಾಲಾಗಿ ನಿಂತಿದ್ದಾರೆ. ಲಕ್ಷಗಟ್ಟಲೆ ವರದಕ್ಷಿಣೆ ಕೊಟ್ಟು, ಚೆನ್ನಾಗಿ ಮದುವೆ ಮಾಡಿಕೊಡಲು ತಯಾರಾಗಿರುವವರಿದಾರೆ. ಆದರೆ....ನಮ್ಮ ಹುಡುಗ ನಿಮ್ಮ ಹುಡುಗಿಯನ್ನು ಮೆಚ್ಚಿದಾನೆ ಅಂತ ತಿಳಿಯಿತು...ಅದೇ ವಿಚಾರವಾಗಿ ಮಾತನಾಡೋಣ ಅಂತ ಬಂದಿದೀವಿ."

ಮುಕುಂದ ಹಲ್ಲು ಕಡಿದ. ತಾತನ ಮಾತಿನ ವರಸೆ ಅವನನ್ನು ಕೆಂಪಾಗಿಸಿತ್ತು. ಸುರೇಶನ ಕಡೆ ನೋಡಿದ. ಅವನು ಮುಗುಳ್ನಕ್ಕು ಸುಮ್ಮನಿರು ಎಂದು ಸಂಜ್ಞೆ ಮಾಡಿದ.

"ಒಬ್ಬರನ್ನೊಬ್ಬರು ಪ್ರೀತಿಸ್ತಿದ್ದಾರೆ, ಸ್ನೇಹ ಸಾಕಷ್ಟು ಮುಂದುವರೆದಿದೆ ಅಂತ ತಿಳೀತು. ಶಾನೇ ದಿನ ತಳ್ಳುವುದು ಚೆನ್ನಾಗಿರೋಲ್ಲ.... ಜನ ಆಡ್ಕೋತಾರೆ. ಅದಕ್ಕೇ ಬೇಗ ಈ ಮದುವೆ ನೆರವೇರಬೇಕು. ತಿಳೀತೆ?...."

ಯಾರಿಗೂ ತಾತನ ಮಾತು ಹಿಡಿಸಿರಲಿಲ್ಲ. ಅವಮಾನಿತರಂತೆ ಎಲ್ಲರೂ ಪೆಚ್ಚಾಗಿ ಕುಳಿತಿದ್ದರು. ಆದರೆ ಮಧ್ಯೆ ಮಾತನಾಡುವುದಕ್ಕೂ ಹೆದರಿದ್ದರು.

"ಆದರೆ ಹಾಗಂತ, ಅವಾಂತರದಲ್ಲಿ ಏನೋ ಒಂದು ಆಯ್ತು ಅಂತ ಅಂತಹ ಕಾಟಾಚಾರದ ಮದುವೆ ನಮಗೆ ಹಿಡಿಸುವುದಿಲ್ಲ. ಎಲ್ಲಾ ಸರಿಯಾಗಿ ನಡೆಯಬೇಕು. ಜನ ನಗುವಂತಾರಬಾರದು. ಅದ್ದೂರಿಯಾಗಿ, ಯಾವ ಲೋಪವೂ ಬರದಂತೆ, ಯಾರೂ ಆಕ್ಷೇಪಣೆ ಮಾಡದಿರುವಂತೆ, ಈ ಲಗ್ನವನ್ನು ನಡೆಸಿಕೊಡುವುದು ನಿಮ್ಮ ಧರ್ಮ, ಏನಂತೀರಿ?"

ತಾತನ ಮಾತಿನ ರೀತಿ ಅಸಹ್ಯವನ್ನುಂಟು ಮಾಡಿದ್ದರೂ, ಅವರು ಒಪ್ಪಿರುವುದೇ ಹೆಚ್ಚು, ಈಗ ಸಹನೆಯಿಂದ ಇರುವುದೇ ಸೂಕ್ತ ಎಂದುಕೊಂಡು ಯಾರೂ ತುಟಿ ಪಿಟಕ್ಕೆನ್ನದೆ ಸುಮ್ಮನಿದ್ದರು. ಆದರೂ, ಸುಭದ್ರಮ್ಮ ಏನಾದರೂ ಆಡಲೇ ಬೇಕಾಗಿತ್ತು.

"ನೀವು ಸಂತೋಷದಿಂದ ಈ ಮದುವೆಗೆ ಒಪ್ಪಿರುವುದು ನಮ್ಮ ಸೌಭಾಗ್ಯ. ನಾವು ಪ್ರಯತ್ನ ಮೀರಿ ಈ ಮಂಗಳ ಕಾರ್ಯವನ್ನು ನೆರವೇರಿಸಿ ಕೊಡ್ತೀವಿ. ನಿಮಗೆ ಯಾವ ಆತಂಕವೂ ಬೇಡ." ಆಕೆ ವಿನಯದಿಂದ ಕೈ ಜೋಡಿಸಿ ನುಡಿದಾಗ ಎಲ್ಲರೂ ಕತ್ತು ತಗ್ಗಿಸಿದ್ದರು.

ಅಳಿಯನ ಉಡುಗೊರೆ, ಬೀಗರ ಉಡುಗೊರೆ ಉಪಚಾರ, ಅತಿಥಿಗಳ ಸತ್ಕಾರ ಎಲ್ಲಾ ಸಂಪ್ರದಾಯದಂತೆ ನಡೆಯಬೇಕು. ಊಟ, ತಿಂಡಿ, ಭಕ್ಷ್ಯ, ಭೋಜ್ಯ ಎಲ್ಲಾ ನಮ್ಮ ಇಷ್ಟದಂತೆಯೇ ನಡೆಯಬೇಕು. ನಮ್ಮ ಕಡೆಯಿಂದ ಬಂದವರಿಗೆಲ್ಲ ಫಲ ತಾಂಬೂಲ, ಉಡುಗೊರೆ, ಮರೆಯದೇ ನೀಡಬೇಕು.

ಹುಡುಗಿಗೆ ಐದು ಭಾರಿ ಸೀರೆಗಳು, ಎರಡು ಸೆಟ್ ಚಿನ್ನದ ಒಡವೆಗಳ ನ್ನಿಡಬೇಕು. ನಮ್ಮ ಮನೆಯ ಹೆಣ್ಣು ಮಕ್ಕಳಿಗೆ ಚೆನ್ನಾಗಿರುವ ಸೀರೆಯನ್ನು ಉಡುಗೊರೆಯನ್ನಾಗಿ ಕೊಡಬೇಕು. ಅವರ ಪಟ್ಟಿ ಬೆಳೆಯುತ್ತಲೇ ಇದ್ದು, ಸುಕನ್ಯ ತಿರಸ್ಕಾರದಿಂದ ಮುಕುಂದನ ಕಡೆ ನೋಡಿದಳು. ಅವನು ಪೆಚ್ಚಾಗಿದ್ದ.

"ನಾಳೆ ಸಾಯಂಕಾಲವೇ ಲಗ್ನ ಪತ್ರಿಕೆ ಶಾಸ್ತ್ರ ಆಗಿ ಬಿಡಬೇಕು. ನಾವು ನಾಡಿದ್ದು ಬೆಳಿಗ್ಗೆ ಹಳ್ಳಿಗೆ ವಾಪಸ್ಸು ಹೋಗಿ ಬಿಡಬೇಕು."

ಸುಭದ್ರಮ್ಮ ಎಲ್ಲಾ ಮಾತಿಗೂ ತಲೆದೂಗಿ, ಒಪ್ಪಿಗೆಯನ್ನಿತ್ತಾಗ, ಎಲ್ಲರಿಗೂ ಆಶ್ಚರ್ಯ. ಮಗಳ ಮದುವೆ ಮುಗಿದರೆ ಸಾಕು ಎಂದು ಒಪ್ಪಿದ್ದಾರೆ ಎಂದು ಭಾವಿಸಿದರು. ತಾತನ ಹೊರತು, ಎಲ್ಲರ ಮುಖದಲ್ಲೂ ಅಸಹನೆಯ ಗೆರೆಗಳು!

ಚಿಕ್ಕಮ್ಮ ಹಣ್ಣು ಹೂವಿನ ಬುಟ್ಟಿಯನ್ನು ಒಳಗೆ ದೇವರ ಮುಂದೆ ಇಡುವಾಗ, ಸುಭದ್ರಮ್ಮನಿಗೆ ಸಾಂತ್ವನ ಹೇಳಿದಳು.

"ನೀವೇನೂ ಗಾಭರಿಯಾಗಬೇಡಿ. ನಮ್ಮ ಮಾವನವರಿಗೆ ವಯಸ್ಸಾಗಿದೆ. ಅವರ ಮಾತಿನ ವರಸೆಯೇ ಹಾಗೆ. ಮದುವೆಗೆ ಒಪ್ಪಿದ್ದೇ ಒಂದು ದೊಡ್ಡ ಪ್ರಯತ್ನ. ಅದು ಅವರ ಸೋಲು ಅಂತ ಅವರ ಭಾವನೆ. ನೀವು ಕೈಮೀರಿ ಖರ್ಚು ಮಾಡಲು ಹೋಗಬೇಡಿ. ಅವರಿಗೆ ಕೊಡುವ ಉಡುಗೊರೆಯೊಂದು ಭಾರಿಯಾಗಿದ್ದರೆ ಸಾಕು. ಇನ್ನು ನಮಗೆಲ್ಲಾ.... ಹೇಗಾದರೂ ಸರಿ... ಹೆಚ್ಚಿಗೆ ಖರ್ಚು ಮಾಡಲು ಹೋಗಬೇಡಿ. ಮದುವೆಯಾಗಿ ಗಂಡನ ಮನೆಗೆ ಹೋಗಿರುವ ಮಗಳೊಬ್ಬಳಿದ್ದಾಳೆ. ಅವಳಿಗೆ ಮಾತ್ರ ಒಂದು ಸೀರೆ ತನ್ನಿ ಸಾಕು. ಯಾಕೆಂದರೆ, ಅವಳ ಗಂಡನ ಮನೆಯವರು ಆಡಿಕೊಳ್ಳ ಬಾರದು ಅಂತ ಅಷ್ಟೇ...."

ಚಿಕ್ಕಮ್ಮ ಇದ್ದುದನ್ನು ಇದ್ದ ಹಾಗೆ, ಸರಳವಾಗಿ, ನೇರವಾಗಿ ನುಡಿದಾಗ ಸುಭದ್ರಮ್ಮ ಸಮಾಧಾನಗೊಂಡಳು.

"ನಮ್ಮ ಮನೆ ಪರಿಸ್ಥಿತಿ ನಿಮಗೆ ಅರ್ಥವಾಗಿದ್ದೇ.... ಮಕ್ಕಳಿಗೆ ತಂದೆ ಇಲ್ಲ. ಇವರುಗಳದ್ದೇ ಸಂಪಾದನೆ. ನಿಮ್ಮಂತಹ ಅತ್ತೆಮನೆ ಸಿಕ್ಕಿದ್ದು ನಮ್ಮ ಸುಕನ್ಯಳ

ಅದೃಷ್ಟ. ಮುಕುಂದ ನಮ್ಮ ಅಳಿಯನಾಗುತ್ತಿರುವುದು ನಮ್ಮ ಭಾಗ್ಯ..."

"ಇದು ದೊಡ್ಡ ಮಾತು. ಒಂದು ಹೆಣ್ಣಿಗೆ ಒಂದು ಗಂಡನ್ನು ಭಗವಂತ ಸೃಷ್ಟಿಸಿಯೇ ಇರ್ತಾನೆ. ಅದು ನಿಯಮ. ಆದರೆ ಮನುಷ್ಯ ಇರಲಾರದ ಸಮಸ್ಯೆಯನ್ನು ಸೃಷ್ಟಿಸ್ತಾನೆ..... ಅದು ಅವನ ದೌರ್ಬಲ್ಯ..." ಸರಸ್ವತಿ ಒಳ್ಳೆಯ ಮಾತುಗಳನ್ನಾಡಿ ಸುಭದ್ರಮ್ಮನನ್ನು ಮೆಚ್ಚಿಸಿದ್ದಳು.

"ಹೊತ್ತಾಗುತ್ತೆ, ನಾವಿನ್ನು ಬರ್ತೀವಿ. ನೀವುಗಳು ನಾಳೆಗೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಲ್ಲ" ಎಂದು ಸರಸ್ವತಿ ಹೊರಡುವ ಸೂಚನೆ ತೋರಿದಾಗ ಸುಭದ್ರಮ್ಮ ಮಗಳ ಕೈಯಲ್ಲಿ ಅರಿಶಿನ ಕುಂಕುಮ ತಾಂಬೂಲ ಕೊಡಿಸಿದಳು.

ಸುಕನ್ಯ ಸಮಯ ಸಾಧಿಸಿ, ಯಾರಿಗೂ ತಿಳಿಯದಂತೆ, ಮುಕುಂದನ ಕಿವಿಯಲ್ಲಿ ಉಸುರಿದಳು.

"ಘಾಟೀ ಕಣ್ರೀ ನಿಮ್ಮ ತಾತ. ಚೆನ್ನಾಗಿ ವಸೂಲು ಮಾಡ್ತಾರೆ"

"ಶ್ ಮೆಲ್ಲಗೆ.... ನೀನೇನೂ ಗಾಭರಿಯಾಗಬೇಡ. ತಾತ ಕೇಳಿದ್ದನ್ನೆಲ್ಲ ಕೊಡಬೇಕು. ಅಂತೇನಿಲ್ಲ. ನಾನು ಕೇಳಿದ್ದನ್ನು ಕೊಟ್ಟರೆ ಸಾಕು "ಗೇಲಿ ಮಾಡಿದ.

"ನಿಮ್ಮ ತಾತಂಗೆ ಹೆದರಿದವರೂ ನೀವೇ, ಈಗ ಹೀಗೆ ಹೇಳ್ತಾ ಇರೋರೂ ನೀವೇ...".

"ಅವರು ಮದುವೆಗೆ ಒಪ್ಪುವುದು ಮುಖ್ಯವಾಗಿತ್ತು. ಕೊಡುವ, ತೆಗೆದು ಕೊಳ್ಳುವ ಬಗ್ಗೆ ನನಗ್ಯಾವ ಆಸಕ್ತಿಯೂ ಇಲ್ಲ. ಅದಕ್ಕೆಲ್ಲಾ ಸಮಯವಿದೆ. ಈಗ ನಾಳೆ ಎಂಗೇಜ್‌ಮೆಂಟ್. ಅದಕ್ಕೆ ರೆಡಿಯಾಗು ಸಾಕು"

"ನಾಳೆ ಹೇಗೂ ರಜ ಹಾಕ್ತೀರಿ.... ಸ್ವಲ್ಪ ಬೆಳಿಗ್ಗೆ ಬಂದು ನನಗೆ ಸಹಾಯ ಮಾಡ್ತೀರಾ? ಅಥವಾ ಅಳಿಯನ ಜಬರ್ದಸ್ತು ತೋರಿಸ್ತೀರೋ"

"ತಾತ ಏನಂತಾರೋ... ಸುರೇಶನ್ನ ಕೇಳ್ತೀನಿ. ಅವನು ಮಾಡಿದರೆ ಆಗ ಬಹುದು ತಾನೇ...?"

"ನೀವೇ ಮಾಡದಿದ್ದ ಮೇಲೆ ಅವರೇಕೆ ಮಾಡಬೇಕು?"

"ಸುರೇಶನ್ನ ಕೇಳ್ತೀನಿ... ಅವನು ಆಗಲ್ಲ ಅಂದರೆ ಚಿಕ್ಕಪ್ಪನ್ನ ಕಳಿಸ್ತೀನಿ."

"ಸರಿ ನಿಮಗೆ ಇಷ್ಟವಿಲ್ಲ ಅಂತ ಅರ್ಥವಾಯ್ತು"

"ಇಷ್ಟದ ಪ್ರಶ್ನೆ ಅಲ್ಲ ಸುಕನ್ಯ. ಲಗ್ನಪತ್ರಿಕೆ ಒಂದು ಆಗಿಹೋಗಲಿ. ಆಮೇಲೆ ತಾತನಿಗೆ ಯಾರು ಕೇರ್ ಮಾಡ್ತಾರೆ?"

"ಏನೋ ಅದೆಲ್ಲಾ ನಿಮಗೆ ಗೊತ್ತು..." ಮುಖ ತಿರುಗಿಸಿದಳು.

ಸುರೇಶನ್ನ ಒಂದು ಪಕ್ಕಕ್ಕೆ ಕರೆದು ಮುಕುಂದ ಹೇಳಿದ.

"ಇವರ ಮನೇಲಿ ಯಾರೂ ಗಂಡಸರಿಲ್ಲ. ನಾಳೆ ಬೆಳಗ್ಗೆ ಸ್ವಲ್ಪ ಬಂದು ಇವರುಗಳಿಗೆ ಸಹಾಯ ಮಾಡ್ತೀಯಾ! ಇವಳ ಜತೆಯಲ್ಲಿ ಹೋಗಿ, ಒಂದಿಬ್ಬರು ಹತ್ತಿರದ ನೆಂಟರಿಗೆ ವಿಷಯ ತಿಳಿಸಿ, ಆಹ್ವಾನಿಸಬೇಕು... ಹೋಗಿ ಬರ್ತೀಯಾ? ನಿಮ್ಮ ತಾಯಿ ಏನೂ ಅನ್ನಲ್ಲ ತಾನೇ..."

"ಅಮ್ಮ ಏನೂ ಅನ್ನೋಲ್ಲ... ಆದರೆ...."

"ಆದರೆ ಗೀದರೆ ಏನಿಲ್ಲ. ನೀನು ಹೂ ಅನ್ನು. ನಾಳೆ ರಜಾ ಹಾಕು. ನಾನೇನು ದಿನಾ ದಿನಾ ಲಗ್ನ ಪತ್ರಿಕೆ ಮಾಡಿಕೊಳ್ತೀನಾ?"

"ಆಯ್ತಪ್ಪಾ... ಅದೇನೇನು ಕೆಲಸ ಅಂತ ತಿಳಿಸಿದ್ರೆ ಒಳ್ಳೆಯದು"

"ತಡೀ.... ಇವರನ್ನೆಲ್ಲ ಮೊದಲು ಕಳಿಸಿ ಬಿಡೋಣ. ನಾವಿಬ್ಬರೂ ನಿಧಾನವಾಗಿ ಮಾತನಾಡಿ ಹೋಗೋಣ." ಅವರೆಲ್ಲರೂ ಹೊರಟಾಗ, ಇಬ್ಬರೂ ಹಿಂದೆ ಉಳಿದುಕೊಂಡರು.

"ನಮಗೆ ಸ್ವಲ್ಪ ಕೆಲಸವಿದೆ, ಆಮೇಲೆ ಬರ್ತೀವಿ...." ಅವರುಗಳನ್ನು ಕಳಿಸಿ, ಇವರುಗಳು ಮಾತುಕತೆ ಮುಂದುವರೆಸಿದರು.

"ನಾಳೆ ಮುಂಚಿತವಾಗಿ, ನಮ್ಮ ಭಾವನವರಿಗೆ, ನನ್ನ ಅಣ್ಣಂದಿರಿಗೆ ತಿಳಿಸಿ ಕರೆಯಬೇಕು. ಮುಂದಿನದನ್ನು ಅವರುಗಳು ಒಂದು ಮಾಡುತ್ತಾರೆ"

"ಅವರುಗಳು ಯಾವಾಗ ಬಂದು ಏನು ಮಾಡಿದಾರೆ? ಹಿರಿಯೋರು ಅಂತ ಕರೆಯೋಣ. ಗೌರವಕ್ಕೆ ಬರಲಿ ಅಷ್ಟೇ....ಉಳಿದೆಲ್ಲಾ ಕೆಲಸ ನಮ್ಮದೇ...." ಸುಕನ್ಯ ನುಡಿದಳು.

"ಎಲ್ಲಾ ನಮ್ಮ ಕೈಲಿ ಎಲ್ಲಿ ಆಗುತ್ತೆ? ಅಡಿಗೆಯವರನ್ನು ಗೊತ್ತು ಮಾಡಬೇಡವೆ! ಪುರೋಹಿತರಿಗೆ ತಿಳಿಸಬೇಡವೆ?"

"ಅದಕ್ಕೇ ನಾನು ಹೇಳಿದ್ದು... ರಿಜಿಸ್ಟರ್ಡ್ ಮದುವೇನೇ ವಾಸಿ ಅಂತ," ಸುಕನ್ಯ ನುಡಿದಾಗ, ಸುಭದ್ರಮ್ಮ ಗದರಿದರು. ಮುಕುಂದ ಪೆಚ್ಚಾದ.

"ಹುಂ. ಸರಿ ಅದನ್ನೆಲ್ಲಾ ಯಾವಾಗ ಮಾಡ್ತೀಯಾ? ಈಗಲೇ ಮಾಡಬೇಕು.... ನಡಿಯೋ ಸುರೇಶ, ಈಗಲೇ ಹೋಗಿ ಅಡಿಗೆಯವರನ್ನು ಗೊತ್ತು ಮಾಡಿ, ಹಾಗೇ ಪುರೋಹಿತರಿಗೆ ತಿಳಿಸಿ ಬರೋಣ" ಮುಕುಂದನೆಂದ.

"ಇಬ್ಬರೂ ಒಂದೇ ಕಡೆಗೆ ಹೋದರೆ.... ಕೆಲಸ ನಿಧಾನವಾಗುತ್ತೆ. ನೀನು ಒಂದು ಕಡೆಗೆ ಹೋಗು... ನಾನು ಇನ್ನೊಂದು ಕಡೆಗೆ ಹೋಗ್ತೀನಿ"

"ಹೌದು ಸರಿ. ಹಾಗಾದ್ರೆ ಹೀಗೆ ಮಾಡೋಣ. ನಾನೂ ಸುಕನ್ಯ ಪುರೋಹಿತರ ಮನೆಗೆ ಹೋಗಿ ಲಿಸ್ಟು ತಗೊಂಡು, ಅಡಿಗೆಯವರ ಹತ್ತಿರ ಹೋಗಿ ಐವತ್ತು ಜನಕ್ಕೆ ಊಟಕ್ಕೆ ಆರ್ಡರ್ ಕೊಟ್ಟು ಬರ್ತೀನಿ.... ನೀನೂ ಸರಳ ಹೋಗಿ ಯಾರ್ಯಾರನ್ನ ಕರೀಬೇಕೋ, ಅವರನ್ನೆಲ್ಲ ಕರೆದು ಬನ್ನಿ"

ಸುರೇಶ ಓರೆಗಣ್ಣಿನಿಂದ ಸರಳೆಯನ್ನು ನೋಡಿದ. ಅವಳು ಕೆಂಪಾಗಿ, ಇನ್ನೂ ಚೆಲುವೆಯಾಗಿ ಕಂಡಳು. ಅವಳನ್ನು ತನ್ನ ಜತೆಯಲ್ಲಿ ಕರೆದೊಯ್ಯುವ ಸುಯೋಗ ಇಷ್ಟು ಬೇಗ ಒದಗಿದ್ದುದಕ್ಕೆ ಖುಷಿಗೊಂಡ.

ಸುಭದ್ರಮ್ಮ ಮಾತ್ರ ಆತಂಕಗೊಂಡರು. ಸುರೇಶ ಈಚೆಗಷ್ಟೆ ಪರಿಚಯವಾದ ಹುಡುಗ. ಅವನ ಜತೆ ಸರಳ ಹೋಗುವುದು ಸರಿಯಲ್ಲ ಅಂತನ್ನಿಸಿದರೂ ಈಗ ಇವರುಗಳನ್ನು ಬಿಟ್ಟರೆ ತನಗಿನ್ಯಾರು ಇಲ್ಲ. ಸರಳ ಕೆಲಸಕ್ಕೆ ಹೋಗುವ ಹುಡುಗಿಯಾದರೂ, ಅವಳಿಗೆ ಒಂದು ಮಾತು ಎಚ್ಚರಿಕೆ ಹೇಳಿದರೆ ಸಾಕು ಎನಿಸಿತ್ತು.

ಸರಳ ನಾಚಿದರೂ ಹೆದರಿರಲಿಲ್ಲ. ಈಗ ನಡೆಯುವ ಕೆಲಸ ಮುಖ್ಯ. ಸುರೇಶ ಅಪರಿಚಿತನೇನಲ್ಲ. ಮುಕುಂದನ ಸ್ನೇಹಿತನೆಂದ ಮೇಲೆ, ತಾನು ಅನುಮಾನ ಪಡಬಾರದು. ದೊಡ್ಡಪ್ಪ ಮಾವಂದಿರು ಯಾರಾದರೂ ಕೇಳಿದರೆ ಏನೋ ಒಂದು ಹೇಳಿದರಾಯ್ತು ಎಂದುಕೊಂಡು ಹೊರಟಳು.

ರಾಜಾಜಿನಗರದಲ್ಲಿದ್ದ ಸೋದರ ಮಾವಂದಿರನ್ನು, ಮಲ್ಲೇಶ್ವರದಲ್ಲಿದ್ದ ದೊಡ್ಡಪ್ಪನ ಮನೆಯವರಿಗೆ ಸುದ್ದಿಯನ್ನು ತಿಳಿಸಿ ಆಹ್ವಾನಿಸಿದಳು. ಅವರುಗಳು ಕೆದಕಿ ಬೆದಕಿ ವಿಷಯಗಳನ್ನು ಕೇಳಿ ತಿಳಿದುಕೊಳ್ಳುವ ಸನ್ನಾಹದಲ್ಲಿದ್ದಾಗಲೇ ಹೊರಟಳು. "ನಮ್ಮ ಪರಿಚಯದವರೊಬ್ಬರ ಜತೆಯಲ್ಲಿ ಬಂದಿದೀನಿ. ಹೊತ್ತಾಗುತ್ತೆ" ಎಂದು ಹೇಳಿ ಹೊರಟಳು. ಸುರೇಶನ್ನ ಅವರುಗಳು ಒಳಗೆ ಕರೆದಿರಲಿಲ್ಲವಾದ್ದರಿಂದ ಇವನೂ ಹೊರಗೇ ನಿಂತಿದ್ದ. ಹತ್ತು ಹತ್ತೂವರೆಯ ಸಮಯವಾಗಿತ್ತು. ಅಲ್ಲಿಂದ ಹೊರಟಾಗ ಇವರುಗಳು ವಾಪಸ್ಸಾಗುವ ಹೊತ್ತಿಗೆ ಸುಕನ್ಯ ಮುಕುಂದರೂ ವಾಪಸ್ಸು ಬಂದಿದ್ದರು. ಅರ್ಚಕರು ಕೊಟ್ಟ ಲಿಸ್ಟನ್ನು ಸುರೇಶನ ಕೈಗಿತ್ತ.

"ಪ್ಲೀಸ್, ಸುರೇಶ, ಇದರಲ್ಲಿ ಬರೆದಿರುವ ಸಾಮಾನುಗಳನ್ನು ಬೆಳಿಗ್ಗ ತಂದು ಕೊಡ್ತೀಯಾ! ಊಟದ ಏರ್ಪಾಡು ಸಹ ಆಯ್ತು. ಐವತ್ತು ಜನಕ್ಕಾಗುವಷ್ಟು, ಅಡಿಗೆ

ಮಾಡಿ ತಂದಿಟ್ಟು. ಇಲ್ಲಿ ಬಡಿಸಿಹೋಗ್ತಾರೆ. ಅಪ್ಪಾನ್ಸ್ ಸಹ ಕೊಟ್ಟಾಯಿತು."

"ನಿಮ್ಮ ತಾತ ಈ ಏರ್ಪಾಡಿಗೆ ಒಪ್ತಾರಾ?"

"ಅವರಿಗೆ ತಿಳಿಸದಿದ್ದರೆ ಆಯ್ತು ಅಥವಾ ಅವರಿಗೆ ಹೇಗೆ ಗೊತ್ತಾಗಲು ಸಾಧ್ಯ?"

"ಸರಿಯಪ್ಪಾ... ಇನ್ನು ಹೊರಡೋಣ್ವಾ?"

"ಇಲ್ಲೇ ಊಟ ಮಾಡಿಕೊಂಡು ಹೋಗಿ, ... ತಾತನ ಹೆದರಿಕೆ ಇಲ್ಲದಿದ್ದರೆ." ಸರಳ ನುಡಿದಾಗ ಸುಕನ್ಯ ನಕ್ಕಳು.

"ಇವನು ನನ್ನ ಜತೆಯಲ್ಲಿರುವಾಗ ನನಗೆ ಯಾವ ಹೆದರಿಕೆಯೂ ಇಲ್ಲ" ಮುಕುಂದನ ಮಾತಿಗೆ ಸುರೇಶ ನಕ್ಕ.

"ಸರಿ ಹಾಗಾದ್ರೆ ಬೇಗ ಬಡಿಸಿ ಬಿಡಿ. ಈಗಾಗಲೇ ಹೊತ್ತಾಗಿದೆ."

ಸರಳ ಎಲ್ಲರಿಗೂ ತಟ್ಟೆ, ಹಾಕಿ, ನೀರಿಟ್ಟು ಬಡಿಸಿದಳು. ಸರಳೆಯ ಕೈನಿಂದ ಬಡಿಸಿದ ಊಟ ಅತಿರುಚಿಯಾಗಿದೆ ಎಂದೆನಿಸಿತ್ತು ಸುರೇಶನಿಗೆ. ಒಂದು ತುತ್ತು ಹೆಚ್ಚಾಗಿಯೇ ಉಂಡ.

ಅವರಿಬ್ಬರೂ ಹೋದ ನಂತರ, ಸರಳ ಸಾವಿತ್ರಿಯನ್ನು ಕರೆತಂದು ಅವಳಿಗೂ ಅಜ್ಜಿಗೂ ಬಡಿಸಿ, ತಾನೂ ಕುಳಿತಳು. ಸುಕನ್ಯ ಅವರುಗಳನ್ನು ಬಿಡಲೆಂದು ಗೇಟಿನ ಬಳಿ ಹೋದವಳು ಒಳಗೆ ಬಂದಿರಲಿಲ್ಲ.

ಸಾವಿತ್ರಿ ಅನ್ನದೊಂದಿಗೆ ಬೆರಳಾಡಿಸಿ ಎದ್ದಳು. ಅವಳಿಗೆ ಊಟ ರುಚಿಸಲಿಲ್ಲ. ಮನೆಯಲ್ಲಿ ಅಕ್ಕನ ಮದುವೆಯ ಮಾತುಕತೆಗಳು ನಡೆಯುತ್ತಿರುವ ವಿಚಾರ ಕಿವಿಗೆ ಬಿದ್ದಿತ್ತು. ಆದರೆ ಯಾರೂ ಅವಳೊಂದಿಗೆ ಹೇಳಿರಲಿಲ್ಲ. ಆದರೆ, ಅವರುಗಳು ಬಂದ ಸಮಯದಲ್ಲಿ ತನ್ನನ್ನು ಬಲವಂತವಾಗಿ ಪಕ್ಕದ ಮನೆಗೆ ಕರೆದುಕೊಂಡು ಹೋಗಿ ಕೂರಿಸಿದ್ದರು. ಅವಳಿಗೆ ಅಸಮಾಧಾನವಾಗಿದೆಯೆನ್ನುವುದನ್ನು ಸರಳ ಅರಿತಳು. "ಬೇಜಾರು ಮಾಡ್ಕೋ ಬೇಡ ಕಣೆ ಸಾವಿತ್ರಿ... ಸುಮ್ಮನೆ ಸರಿಯಾಗಿ ಊಟ ಮಾಡು."

"ಅಂಥಾದ್ದೇನಾಯ್ತು ಈಗ? ಸಧ್ಯ ನೀನು ಒಬ್ಬಳು ಮಗಳು ಇದೀಯ ಅಂತ ಆ ಪುಣ್ಯಾತ್ಮನಿಗೆ ತಿಳಿಯಲಿಲ್ಲಮ್ಮ. ತಿಳಿದಿದ್ದರೆ ಏನ್ಮಾಡುತ್ತಿದ್ದರೋ"

"ಅಮ್ಮ.... ನೀನು ಸ್ವಲ್ಪ ಸುಮ್ಮನಿರ್ತೀಯಾ? ಅವರಿಗೆ ತಿಳಿಯಬಾರದಂತಹ ತಪ್ಪೇನನ್ನು ಮಾಡಿದಾಳೆ ಸಾವಿತ್ರಿ? ಬಂದವರ ಎದುರಿಗೆ, ಅವಳಿಗೆ ಮದುಗರ

ವಾಗದಿರಲಿ ಅಂತ ಪಕ್ಕದ ಮನೇಲಿರು ಅಂತ ಹೇಳಿದ್ದಾಯ್ತು. ಇವತ್ತಲ್ಲ ನಾಳೆ ಅವರಿಗೆ ತಿಳಿದೇ ತಿಳಿಯುತ್ತೆ."

"ತಿಳಿದು ಏನಾಗಬೇಕಾಗಿದೆ? ಅವರಿಗ ತಿಳಿಯದಿರುವುದೇ ವಾಸಿ. ಸುಮ್ಮನೆ ಕೆದಕಿ ಬೆದಕಿ ಅಪಹಾಸ್ಯವಾಗಿ ಮಾತನಾಡಿ ನಮ್ಮ ಮನಸ್ಸನ್ನು ಇನ್ನೂ ನೋಯಿಸ್ತಾರೆ ಅಷ್ಟೇ. ಅವಳು ಅವರುಗಳ ಎದುರಿಗೆ ಬರದಿದ್ದರೆ ಒಳ್ಳೆಯದು. ಸುಮ್ಮನೆ ಯಾರು ಉತ್ತರ ಹೇಳ್ತಾರೆ ಎಲ್ಲರಿಗೂ...."

ಸಾವಿತ್ರಿ ತಡವರಿಸುತ್ತಾ ಎದ್ದು ನಿಂತಿದ್ದವಳು, ಗೋಡೆಯನ್ನಾಧರಿಸಿ ನಡೆದಳು.

"ನೋಡಿದ್ಯಾ... ನೀನು ಸಹ ಅವಳಿಗೆ ಬೇಜಾರು ಮಾಡಿದೆ. ಅವಳು ಸರಿಯಾಗಿ ಊಟವನ್ನೇ ಮಾಡಲಿಲ್ಲ."

"ಎದ್ದರೆ ಎದ್ದಳು ಬಿಡು. ಸಾಕಾಗಿದೆ ಎಲ್ಲರಿಗೂ ಉಪಚಾರ ಮಾಡಿ...."

"ನೀನು ಯಾರಿಗೂ ಉಪಚಾರವನ್ನು ಮಾಡಬೇಡ. ಮನಸ್ಸನ್ನು ನೋಯಿಸಲೂ ಬೇಡ." ಸುಕನ್ಯ ಒಳಗೆ ಬಂದಿದ್ದವಳು ಆಡಿದ್ದಳು.

"ಅದೇನು ಎಂದೂ ಇಲ್ಲದ್ದು ಇಂದು? ಅವಳ ಪರವಹಿಸಿ ಮಾತನಾಡ್ತಿದೀಯಲ್ಲ...."

"ಯಾರ ಪರವೂ ಇಲ್ಲ. ಸಧ್ಯ ನನ್ನ ಮದುವೆ ಮುಗಿಯುವವರೆಗೂ ಯಾರಿಗೂ ಸಾವಿತ್ರಿಯ ಬಗ್ಗೆ ತಿಳಿಯದಿದ್ದರೆ ಒಳ್ಳೆಯದು. ಮೊದಲೇ ಹಳ್ಳಿ ಜನ. ಸಾಕು ಮಾಡಿ ಬಿಡ್ತಾರೆ."

"ಏನೇ ನೀನು? ತಂಗಿ ಎನ್ನುವ ಕರುಣೆ ಇಲ್ಲದೆ ಹೀಗಾಡ್ತೀಯಲ್ಲ"

"ನೀನು ಇದೀಯಲ್ಲ ಕರುಣೆ ತೋರಿಸೋಕೆ. ನಿನ್ನ ಮದುವೇಲಿ ನಿನ್ನ ಪಕ್ಕದಲ್ಲೇ ಕೂರಿಸ್ಕೋ ಅವಳನ್ನ... ಬೇಕಾದರೆ ನಿನ್ನ ಮನೆಗೂ ಕರೆದುಕೊಂಡು ಹೋಗು"

"ಸಾಕು ಮಾಡಿ ನಿಮ್ಮ ಮಾತನ್ನ....ನಾಳೆ ಅಷ್ಟೊಂದು ಕೆಲಸವನ್ನು ಮುಂದಿಟ್ಟುಕೊಂಡು, ಯಾವುದೋ ಕೆಲಸಕ್ಕೆ ಬಾರದ ವಿಷಯಕ್ಕೆ ಕಾದಾಡ್ತೀರಲ್ಲ" ಸುಭದ್ರಮ್ಮ ರೇಗಿ ನುಡಿದಾಗ ಸಾವಿತ್ರಿ ನೊಂದುಕೊಂಡಳು. ಹಾಗಾದರೆ ನಾನೊಂದು ಕೆಲಸಕ್ಕೆ ಬಾರದ ವಿಷಯವೇ...

ಸರಳ ಅವಳ ಬಳಿ ಬಂದು, ಅವಳ ಬೆನ್ನ ಮೇಲೆ ಕೈ ಇಟ್ಟಳು. "ಸಾವಿತ್ರಿ ನೀನು ಮಲಕೋ.... ಈಗಾಗಲೇ ಹೊತ್ತಾಗಿದೆ." ಪುರೋಹಿತರು ಕೊಟ್ಟ ಲಿಸ್ಟನ್ನು ಓದತೊಡಗಿದಳು.

"ಎರಡು ಶಲ್ಯ, ಎರಡು ರವಿಕೆ ಖಣ, ಒಂದು ಷರಟಿನ ಬಟ್ಟೆ, ಇಷ್ಟನ್ನು ತಂದು ಬಿಡು ಬೆಳಿಗ್ಗೆ" ಸುಭದ್ರಮ್ಮ ಸುಕನ್ಯಂಗೆ ಹೇಳಿದಳು. ಸುಕನ್ಯ "ಹುಂ" ಗುಟ್ಟಿದಳು.

ಆಕೆಗೆ ಹೀನಾಯವೆನಿಸಿತ್ತು. ಮನೆಯಲ್ಲಿ ಹಿರಿಯವನ್ನಾಗಿ ನಿಂತು ಮಾಡುವ ಗಂಡಸಿಲ್ಲ. ಸ್ವಂತ ಗಂಡು ಮಕ್ಕಳಿಲ್ಲ ಎಲ್ಲಾ ಇವರುಗಳದ್ದೇ....ಏನು ಮಾಡ್ತಾರೋ.. ಬರೀ ಹೆಣ್ಣು ಸಂಸಾರ. ಗಂಡು ಎನಿಸಿದಾಗ ಆಕೆಗೆ ದುಃಖ ಒತ್ತರಿಸಿತ್ತು.

ಸುಕನ್ಯ ಹಿರಿಯವಳು, ಹೆಣ್ಣಾಗಿ ಹುಟ್ಟಿದಾಗ ಆಕೆಗೆ ದುಃಖವಾಗಿತ್ತು. ಚೊಚ್ಚಲ ಮಗು ಗಂಡಾಗಿದ್ದರೆ... ಎಂಬ ಆಸೆ ಆಸೆಯಾಗಿಯೇ ಉಳಿದಿತ್ತು. ಸುಕನ್ಯ ಹೆಣ್ಣಾಗಿ ಹುಟ್ಟಿ ನಿರಾಸೆಗೊಳಿಸಿದ್ದಳು. ತನ್ನ ಓರಗಿತ್ತಿಗೆ ಎಲ್ಲರೂ ಬರೀ ಗಂಡು ಮಕ್ಕಳೇ ತನಗೇಕೆ ಹೆಣ್ಣು ಮಗು ಹುಟ್ಟಬೇಕಿತ್ತು? ಎಂದು ಪರಿತಪಿಸಿದ್ದಳು. ನಂತರ ಮೂರು ವರ್ಷಗಳ ಒಳಗೆ ಸರಳ ಹುಟ್ಟಿದಾಗ ಆಕೆ ಕುಗ್ಗಿ ಹೋಗಿದ್ದಳು. ಯಾರಿಗೂ ಮುಖ ತೋರಿಸಬಾರದು ಎನಿಸುವಷ್ಟು ಹೀನಾಯವಾಗಿತ್ತು. ಒಂದು ಸಾಲದು ಅಂತ ಎರಡು ಹೆಣ್ಣು, ಬರೀ ಖರ್ಚಿಗೆ ಮಾರ್ಗ, ಸುಖವಾಗಿರುವುದು ನಮ್ಮ ಹಣೆಯಲ್ಲಿ ಬರೆದಿಲ್ಲ ಎಂದು ವಿಲಾಪಿಸಿದ್ದಳು.

ಆ ನಂತರ ಮುಂದಿನ ಎರಡೇ ವರ್ಷಗಳಲ್ಲಿ ಮತ್ತೊಂದು ಹೆಣ್ಣು ಮಗು ಹುಟ್ಟಿದಾಗ 'ಸಾವಿತ್ರಿ' ಎಂಬ ಹೆಸರಿನಿಂದ ಕರೆಯಲಾರಂಭಿಸಿದಳು.... ಯಾವುದೋ ಕೊರಗಿನಿಂದ ಹೆಣ್ಣು ಮಕ್ಕಳನ್ನು ಪ್ರೀತಿಯಿಂದ ಬೆಳೆಸಲಿಲ್ಲ. ಅಸಡ್ಡೆಯಿಂದ ನೋಡು ತ್ತಿದ್ದಳು. ಇದರ ಅರಿವು ಮೂವರಿಗೂ ಬರುವಷ್ಟು ಹೊತ್ತಿಗೆ, ಎಲ್ಲರಿಗೂ ಚೆನ್ನಾಗಿ ತಿಳುವಳಿಕೆ ಮೂಡಿತ್ತು.

"ಹುಟ್ಟಿದೀರಲ್ಲ ನನ್ನ ಹೊಟ್ಟೆ ಉರಿಸೋಕೆ. ಒಂದಲ್ಲ ಅಂತ ಮೂರು ಮೂರು. ಮೊದಲೇ ಸರಿ. ಭಗವಂತ ನಮ್ಮಂತಹವರಿಗೇ ಇಂತಹ ವರವನ್ನು ಕೊಡುವುದು ಏನೂಂತ ಹುಟ್ಟಿದೀರೋ ನನ್ನನ್ನು ಕಾಡಿ ತಿನ್ನೋಕೆ" ಮುಖ ತಿವಿದು ಅನ್ನುತ್ತಿದ್ದಳು.

ಸ್ವಲ್ಪ ದೊಡ್ಡವಳಾಗಿದ್ದ ಸುಕನ್ಯ ಎದುರು ವಾದಿಸುತ್ತಿದ್ದಳು.

"ಯಾರ ಮನೆ ತಾಯೀರೂ ನಿನ್ನ ಹಾಗೆ ಆಡೋಲ್ಲ. ನೀನ್ಯಾಕೆ ಹೀಗಾಡ್ತೀಯಾ! ನಾವೇನು ಪಾಪ ಮಾಡಿದೀವಿ! ನಮ್ಮ ಮೇಲೇಕೆ ದ್ವೇಷ?"

"ಇವತ್ತಿರ್ತೀರಿ...ನಾಳೆ ನಿಮ್ಮ ನಿಮ್ಮ ಗಂಡಂದಿರ ಮನೆಗೆ ಹೋಗ್ತೀರಿ....

ನಿಮ್ಮಿಂದ ನನಗೇನು ಲಾಭ?"

"ದೊಡ್ಡೋರಾಗಿ ಓದಿ, ಕೆಲಸಕ್ಕೆ ಸೇರಿ ಸಂಪಾದಿಸಿ ತಂದು ಕೊಡ್ತೀವಿ"

"ತಂದು ಕೊಡ್ತೀರಾ! ನೀವೇನು ಗಂಡು ಮಕ್ಕಳೇ.... ತಂದು ತಂದು ನನ್ನ ಕೈಲಿ ಕೊಡೋಕ್ಕೆ?"

"ನಿನಗೆ ಗಂಡು ಮಕ್ಕಳಿಲ್ಲ ಅಂತ ನಮ್ಮನ್ಯಾಕೆ ಅಂತೀಯ.... ಇದರಲ್ಲಿ ನಮ್ಮದು ತಪ್ಪೇನಿದೆ?"

"ಹೋಗು ಸುಮ್ಮನೆ ಬಾಯಿದೆ ಅಂತ ಮಾತನಾಡಬೇಡ. ಗಂಡು ಮಕ್ಕಳಿಲ್ಲದ ಕೊರಗು ಏನು ಅಂತ ನನಗೆ ಗೊತ್ತು. ನಿನಗೇನು ಅರ್ಥವಾಗುತ್ತೆ?"

"ನಿನಗೆ ನಮ್ಮನ್ನ ಕಂಡರೆ ಆಗಲ್ಲ.... ಆದರೆ ಮುಂದೆ ನಿನಗೆ ನಾವೇ ಬಿಕ್ಕಿ ತಿಳಿದುಕೊಳ್ಳೇ...." ಸುಕನ್ಯಳೂ ಹಂಗಿಸಿ ನುಡಿಯುತ್ತಿದ್ದಳು.

ಆದರೆ ಸರಳ ಹಾಗಲ್ಲ. ಹೆಸರಿಗೆ ತಕ್ಕಂತೆ ಇದ್ದಳು. ಒಂದು ದಿನವಾದರೂ ಅದು ಇದು ಅಂತ ಹಠ ಮಾಡಿದವಳಲ್ಲ. ತಾಯಿ ಕೊಟ್ಟಿದ್ದನ್ನು ತಿಂದು, ತೊಡಿಸಿದ ಬಟ್ಟೆ ಉಟ್ಟು, ಸ್ಕೂಲಿಗೆ ಹೋಗುತ್ತಿದ್ದಳು. ಸುಕನ್ಯ ತಾಯಿಯ ಹತ್ತಿರ ಕಾದಾಡಿ, ಕಾಸು ಕಿತ್ಕೊಂಡು, ಬಳೆ, ರಿಬ್ಬನ್ನು ಚಾಕಲೇಟು ಕೊಂಡು ಖುಷಿಪಟ್ಟರೆ, ಸರಳ ಅದಕ್ಕೆಲ್ಲ ಆಸೆ ಪಡುತ್ತಿರಲಿಲ್ಲ. ಅವಳು ಬಿಟ್ಟ, ಹಳೇ ಪುಸ್ತಕ ಬಟ್ಟೆ, ಚಪ್ಪಲಿಯೇ ಇವಳಿಗೆ ಗತಿ.

ಪಾಪ, ಸಾವಿತ್ರಿಯದೂ ಇನ್ನೂ ಗೋಳು. ಯಾರಿಗೂ ಬೇಡವಾದವಳು. ಹೊಟ್ಟೆ ಹಸಿದಾಗ ಅತ್ತರೆ, ತಾಯಿ ಪ್ರೀತಿಯಿಂದ ಹಾಲನ್ನು ಕುಡಿಸುತ್ತಿರಲಿಲ್ಲ. ಸರಳ ತಾಯಿಯ ಬೈಗುಳದಿಂದ ತಪ್ಪಿಸಿ ಹೊರಗೆ ತಿರುಗಾಡಿಸಿ ಆಟ ಆಡಿಸುತ್ತಿದ್ದಳು. ತಂದೆ ಮನೆಯಲ್ಲಿದ್ದಾಗ, ಒಂದೊಂದು ಸಲ ಮಕ್ಕಳ ಪರವಹಿಸಿ ಮಾತನಾಡುತ್ತಿದ್ದುದು ಉಂಟು.

"ಅವುಗಳನ್ಯಾಕೆ ಅಂತೀಯಾ! ಅವಳಿಗೇನು ತಿಳಿಯುತ್ತೆ? ಗಂಡಾಗಿ ಹುಟ್ಟಿದಿದ್ದ ರೇನಂತೆ! ಇವೂ ನಮ್ಮ ಮಕ್ಕಳೇ ತಾನೇ...ತೀರ ಇಷ್ಟು ಹೀನಾಯವಾಗಿ ಬೈಯ ಬೇಡ."

"ನಿಮಗೇನು ತಿಳಿಯುತ್ತೆ? ಎಲ್ಲರೂ ಒಟ್ಟಿಗೇ ಬೆಳೆದು ನಿಂತಾಗ ಏನೂಂತ ನಿಮಗೇ ತಿಳಿಯುತ್ತೆ" ಆಕೆ ಗಟ್ಟಿಸಿ ನುಡಿದರೆ ಆತ ಪೆಚ್ಚಾಗುತ್ತಿದ್ದರು. ಯಾವುದೋ ಒಂದು ಸೊಸೈಟಿಯಲ್ಲಿ ಗುಮಾಸ್ತರಾಗಿದ್ದ ವಿಶ್ವನಾಥರಾಯರಿಗೆ ಆದಾಯ ಕಡಿಮೆ.

ವಾಸವಾಗಿದ್ದ ಚಿಕ್ಕ ಮನೆ, ಒಡವೆ ವಸ್ತ್ರಗಳಿಗಾಗಿ ಪರದಾಟ ಸುಭದ್ರಮ್ಮನನ್ನು ಕೆರಳಿಸುತ್ತಿತ್ತು. ಆ ಕೋಪವನ್ನು ಮಕ್ಕಳ ಮೇಲೆ ತೀರಿಸಿಕೊಳ್ಳುತ್ತಿದ್ದಳು.

ಸುಕನ್ಯ ಕಾಲೇಜಿಗೆ ಸೇರಿದ ಹೊಸದರಲ್ಲಿ ಒಂದು ದಿನ ವಿಶ್ವನಾಥಯ್ಯ ತೀರಿ ಹೋದರು. ಆಗ ಸೊಸೈಟಿಯ ಸಹೋದ್ಯೋಗಿಗಳು ತುಂಬಾ ಸಹಾಯ ಮಾಡಿದರು. ಸೊಸೈಟಿಯ ಮಾಲೀಕರು ಸುಕನ್ಯಳ ಓದಿಗೆ ಸಹಾಯ ಮಾಡಿದ್ದರು. ಅವಳಿಗೆ ತಮ್ಮ ಸೊಸೈಟಿಯ ಒಂದು ಕೆಲಸ ಸಹ ಕೊಡಿಸಿದ್ದರು. ಅಲ್ಪ ಸ್ವಲ್ಪ ಕೂಡಿಟ್ಟ ಹಣದಲ್ಲಿ ಜೀವನ ಸಾಗಿಸುವುದು ಕಷ್ಟ ಎಂದೆನಿಸಿತ್ತು. ತನ್ನ ತಮ್ಮಂದಿರಾಗಲೀ, ಗಂಡನ ಮನೆ ಕಡೆಯವರಾಗಲೀ, ತಾನಾಗಿಯೇ ಯಾವ ಸಹಾಯವನ್ನು ಮಾಡಲು ಮುಂದೆ ಬರದಿದ್ದಾಗ, ಆಕೆಗೆ ಅವರುಗಳ ಬಗ್ಗೆ ತಿರಸ್ಕಾರ ಮೂಡಿತ್ತು.

ಸರಳ ಸಣ್ಣ ಮಕ್ಕಳಿಗೆ ಪಾಠ ಹೇಳಿಕೊಟ್ಟು ಅಲ್ಪ ಸ್ವಲ್ಪ ಸಂಪಾದಿಸುತ್ತಿದ್ದಳು. ಬಿ. ಕಾಂ ಮುಗಿಸಿದ ಕೂಡಲೇ, ಸೊಸೈಟಿಯವರ ಶಿಫಾರಸಿನಿಂದ ಅವಳಿಗೆ ಬ್ಯಾಂಕಿನಲ್ಲಿ ಕೆಲಸ ಸಿಕ್ಕಿತ್ತು.

ಈಗ ತಿನ್ನಲು ಉಣ್ಣಲು ಯಾವ ಕೊರತೆಯೂ ಇರಲಿಲ್ಲ. ಆದರೆ ಸಾವಿತ್ರಿಯದೇ ಭಾರಿ ಚಿಂತೆ ಎಲ್ಲರಿಗೂ. ಹೈಸ್ಕೂಲಿನಲ್ಲಿ ಓದುತ್ತಿದ್ದಾಗ, ಒಂದು ಆಕಸ್ಮಿಕದಿಂದ, ಸಾವಿತ್ರಿ ಕಣ್ಣಿನ ದೃಷ್ಟಿಯನ್ನು ಕಳೆದುಕೊಳ್ಳಬೇಕಾಗಿ ಬಂದಿತ್ತು. ಹಣದ ತೊಂದರೆ ಇದ್ದರೂ ಸಾಲ ಸೋಲಮಾಡಿ ಅವಳಿಗೆ ಬೇಕಾದಷ್ಟು ಚಿಕಿತ್ಸೆ ಕೊಡಿಸಿದ್ದರು. ಹಣದ ತೊಂದರೆಯಿಂದಾಗಿ, ಕಣ್ಣಿನ ಆಪರೇಷನ್ ಮಾಡಿಸಲು ಆಗಿರಲಿಲ್ಲ. ಸಾವಿತ್ರಿ ಓದನ್ನು ಬಿಡಬೇಕಾಗಿ ಬಂದಿತ್ತು. ಕಣ್ಣಿನ ದೃಷ್ಟಿಯನ್ನು ಕಳೆದುಕೊಂಡ ಅವಳು ತಾನು ಸ್ಕೂಲಿಗೆ ಹೋಗುವುದನ್ನು ಇಷ್ಟ ಪಡಲಿಲ್ಲ. ಅವಳಿಗೆ ಅದು ಮನಸ್ಸಿಗೆ ಆದ ದೊಡ್ಡ ಆಘಾತ: ಸರಳ ತಾನು ಕೆಲಸಕ್ಕೆ ಸೇರಿದ ಮೇಲೆ, ಸಾವಿತ್ರಿಗೆ ಸಂಗೀತ ಪಾಠ ಹೇಳಿಕೊಡಲು ಒಬ್ಬ ಟೀಚರನ್ನು ಗೊತ್ತು ಮಾಡಿದ್ದಳು. ಆಕೆ ಮೊದ ಮೊದಲು ಸಾವಿತ್ರಿಯ ಮೇಲಿನ ಕನಿಕರದಿಂದ ಪ್ರತಿದಿನವೂ ಬಂದು ಪಾಠಗಳನ್ನು ಕಲಿಸುತ್ತಿದ್ದಳು. ಸರಳನಿಗೆ ಬಿಡುವಾಗಿದ್ದಾಗ ತಾನೂ ಕೂತು ಕಲಿತಳು. ಸುಕನ್ಯ ಯಾವ ಆಸಕ್ತಿಯನ್ನೂ ತೋರಲಿಲ್ಲ.

ಸರಳ ಕೆಲಸಕ್ಕೆ ಸೇರಿದ ಮೇಲೆ, ಸುಕನ್ಯ ಸೊಸೈಟಿಯ ಕೆಲಸವನ್ನು ಬಿಟ್ಟು, ತಾನೂ ಬಿ. ಕಾಂ. ಪರೀಕ್ಷೆಗೆ ಕಟ್ಟಿ, ಪಾಸುಮಾಡಿ, ಬೇರೊಂದು ಕಂಪೆನಿಯಲ್ಲಿ ಕೆಲಸಕ್ಕೆ ಸೇರಿದಳು ಟೈಪಿಂಗ್, ಷಾರ್ಟ್‌ಹಾಂಡ್‌ಗಳಲ್ಲಿ ಅನುಭವವಿದ್ದ ಅವಳಿಗೆ

ಸುಲಭವಾಗಿ ಕೆಲಸ ಸಿಕ್ಕಿತ್ತು. ಈಗ ಸಂಪಾದನೆ ಹೆಚ್ಚಾಗಿತ್ತು. ಅಲಂಕಾರ ಸಾಮಗ್ರಿಗಳಿಗೆ ಹೇರಳವಾಗಿ ಖರ್ಚು ಮಾಡಿ, ತನಗಿಷ್ಟ ಬಂದಂತೆ ಅಲಂಕರಿಸಿಕೊಳ್ಳುತ್ತಿದ್ದಳು. ದಿನನಿತ್ಯ ಶಿಸ್ತಾಗಿ ಅಲಂಕರಿಸಿಕೊಂಡು, ವಯ್ಯಾರವಾಗಿ ಬರುತ್ತಿದ್ದ ಸುಕನ್ಯ ಮುಕುಂದನನ್ನು ಆಕರ್ಷಿಸಿದ್ದಳು.

ಮುಕುಂದನ ನೋಟ ತನ್ನ ಮೇಲಿದೆ ಎನ್ನುವುದನ್ನು ಅರಿತ ಸುಕನ್ಯ ಅವನನ್ನು ಇನ್ನೂ ಹೆಚ್ಚು ಹೆಚ್ಚಾಗಿ ಆಕರ್ಷಿಸತೊಡಗಿದಳು. ಅರ್ಧದಷ್ಟು ಸಂಪಾದನೆಯ ಹಣವನ್ನು ಹೊಸ ಹೊಸ ಸೀರೆ, ರವಿಕೆ, ಪೌಡರು, ಲಿಪ್‌ಸ್ಟಿಕ್, ಕೇಶಾಲಂಕಾರಗಳಿಗಾಗಿ ಖರ್ಚು ಮಾಡುತ್ತಿದ್ದಳು. ಸ್ವಲ್ಪ ಹಣವನ್ನು ತಾಯಿಯ ಕೈಗೆ ಕೊಟ್ಟು, ಉಳಿದುದನ್ನು ಬ್ಯಾಂಕಿನಲ್ಲಿ ತನ್ನ ಹೆಸರಿನಲ್ಲಿ ಜಮಾ ಮಾಡುತ್ತಿದ್ದಳು. ಈಚೆಗೆ ಅವಳ ದರ್ಪ ಅಹಂಕಾರ ಜಾಸ್ತಿಯಾಗಿತ್ತು. ಜೋರು, ದಬ್ಬಾಳಿಕೆಯಿಂದ ವರ್ತಿಸುತ್ತಿದ್ದಳು. ಮುಕುಂದನ ಸ್ನೇಹವಾದ ಮೇಲೆ ಅವಳ ಮೆರೆದಾಟ ಜಾಸ್ತಿಯಾಗಿತ್ತು.

ಹಳ್ಳಿ ಬಿಟ್ಟು ಪಟ್ಟಣ ಸೇರಿದ್ದ ಮುಕುಂದನಿಗೆ ಸಿಟಿಯ ಜೀವನ ಬಹಳ ಹಿಡಿಸಿತ್ತು. ದಿನಕ್ಕೊಂದು ಬಗೆಯ ಬಟ್ಟೆ ಧರಿಸಿ, ಷೋಕಿ ಮಾಡುತ್ತಿದ್ದ. ಹೋಟೆಲು ಸಿನಿಮಾಗಳಿಗೆಂದು ಖರ್ಚು ಮಾಡುತ್ತಿದ್ದುದರಿಂದ, ತನ್ನ ಮನೆಗೆ ಹಣ ಕಳಿಸುವ ಪರಿಪಾಠವನ್ನೇನೂ ಇಟ್ಟುಕೊಂಡಿರಲಿಲ್ಲ. ಸುಕನ್ಯಳ ಸ್ನೇಹವಾದ ಮೇಲೆ ಅವನ ಷೋಕಿ ಹೆಚ್ಚಾಗಿತ್ತು. ತಿರುಗಾಟ ಜಾಸ್ತಿಯಾಗಿತ್ತು.

ಮೊದ ಮೊದಲು, ಸುಕನ್ಯ ಮುಕುಂದನ ಸ್ನೇಹವನ್ನು ಯಾರಿಗೂ ತಿಳಿಸಿರಲಿಲ್ಲ. ಸರಳ ಒಂದೆರಡು ಸಲ, ಅವರಿಬ್ಬರನ್ನು ಒಟ್ಟಿಗೇ ಓಡಾಡಿದ್ದನ್ನು ಕಂಡಿದ್ದಳಾದ್ದರಿಂದ ಅವಳಿಗೆ ಮಾತ್ರ ತಿಳಿಸಿದ್ದಳು. ವಯಸ್ಸಿನಲ್ಲಿ ಚಿಕ್ಕವಳಾದರೂ ತಿಳುವಳಿಕೆಯುಳ್ಳ ಸರಳ ಅವಳಿಗೆ ಬುದ್ಧಿವಾದ ಹೇಳಿದ್ದಳು.

"ನೀವಿಬ್ಬರೂ ಹೇಗೂ ಒಬ್ಬರನ್ನೊಬ್ಬರು ಮೆಚ್ಚಿದ್ದೀರಿ. ಮುಕುಂದ ಒಳ್ಳೆಯವರು ಅಂತೀಯಾ... ಬೇಗ ಯಾಕೆ ಮದುವೆಯಾಗಬಾರದು? ಮುಕುಂದನಿಗೆ ಈ ವಿಷಯ ತಿಳಿಸಿ, ಆದಷ್ಟು ಬೇಗ ಮುಂದುವರೆಯುವುದು ಒಳ್ಳೆಯದು."

ಆ ಗಳಿಗೆಯಲ್ಲಿ ಸುಕನ್ಯ ಅಸಹನೆ ತೋರಿದ್ದರೂ, ಅನಂತರ ಅವಳ ಮಾತು ಸರಿ ಎನಿಸಿತ್ತು. ವಿದ್ಯಾವಂತ, ಹಣವಂತ, ತನಗಿಂತ ಒಳ್ಳೆಯವನು, ತನಗೆ ಅನುರೂಪನಾದವನು ಎನಿಸಿದಾಗ ಅವನೊಡನೆ ಮಾತನಾಡಿದ್ದಳು.

"ನಮ್ಮ ಮನೇಲಿ, ನಾನೇ ಹಿರಿಯವಳು, ನಮ್ಮ ಮನೆಯ ಸ್ಥಿತಿ ಬಗ್ಗೆ ನಾನು

ನಿಮಗೆ ತಿಳಿಸಿಯೇ ಇದೀನಿ. ಈಗ ಹೇಗೂ ಸರಳ ಕೆಲಸದಲ್ಲಿದಾಳೆ. ಆದ್ದರಿಂದ ನಾನು ಮದುವೆಯಾಗಬೇಕು ಅಂತ ತೀರ್ಮಾನಿಸಿದೀನಿ. ನಿಮ್ಮ ಅಭಿಪ್ರಾಯವೇನು? ನಿಮ್ಮ ಮನೆಯವರೊಡನೆ ಈ ವಿಷಯ ಯಾವಾಗ ತಿಳಿಸ್ತೀರಿ?"

ಮುಕುಂದ ಮದುವೆ ಬಗ್ಗೆ ತಲೆಕೆಡಿಸಿಕೊಂಡಿರಲಿಲ್ಲ. ಆನಂದನ ಮದುವೆಯ ನಂತರ, ಮನೆಯಲ್ಲಿ ಹಗರಣ ನಡೆದು, ಅವನು ಮನೆಬಿಟ್ಟು ಹೋದಾಗಿನಿಂದ ಮನೆಯಲ್ಲಿ ಮದುವೆಯ ಮಾತೇ ಬಂದಿರಲಿಲ್ಲ. ಸುಕನ್ಯ ಆ ವಿಷಯವನ್ನು ಮುಂದಿಟ್ಟಾಗ ಅವನಿಗೂ ಆಸೆಯುಂಟಾಯಿತು. ಆದರೆ ತನ್ನ ಮನೆಯಲ್ಲಿ ತನ್ನ ಮದುವೆಯ ಪ್ರಸ್ತಾಪವನ್ನು ತಾನೇ ಎತ್ತಲು ಹೆದರಿಕೆ. ತಾನೇ ನೋಡಿಕೊಂಡ ಹೆಣ್ಣನ್ನು ಒಪ್ಪುತ್ತಾರೋ ಇಲ್ಲವೋ ಎನ್ನುವ ಭಯದಿಂದ ಎಷ್ಟೋ ದಿನಗಳನ್ನು ಮುಂದೂಡಿದ್ದ. ಸುಕನ್ಯ ಒಂದು ದಿನ ಕರೆತಂದು, ತಾಯಿಗೆ ಅವನನ್ನು ಪರಿಚಯಿಸಿದ್ದಳು. ಆಕೆಗೆ ಆತಂಕವಾಗಿತ್ತು. ಸ್ನೇಹ ಪ್ರೀತಿ ಎಂದು ಮುಂದುವರೆದರೆ, ಮುಂದೆ ಮದುವೆ ಮಾಡಬೇಕಾಗಿ ಬಂದು, ಸಂಪಾದಿಸುವ ಕೈಗಳು ಕಡಿಮೆಯಾಗುತ್ತದೆ ಎನ್ನುವ ಚಿಂತೆ ಆವರಿಸಿಕೊಂಡಿತ್ತು. ಸುಕನ್ಯ ತಾನು ಅವನನ್ನು ಮದುವೆಯಾಗುವುದಾಗಿ ಹೇಳಿದಾಗ, ಆಕೆಗೆ ಸಹನೆಯಾಗಿರಲಿಲ್ಲ.

"ನಿನಗೀಗಲೇ ಮದುವೆ ಏಕೆ? ಮದುವೆಗೆ ಅಂತ ಹಣವನ್ನು ಎಲ್ಲಿಂದ ಒದಗಿಸಲಿ!....?"

"ಹಾಗಾದರೆ ನಿನ್ನ ಅರ್ಥವೇನು! ನಾನು ಮದುವೆಯಿಲ್ಲದೆ ಹೀಗೆ ಈ ಮನೆಯಲ್ಲಿಯೇ ಬಿದ್ದಿರಬೇಕಾ?"

ಸುಭದ್ರಮ್ಮ ಬೇಸರಗೊಂಡಿದ್ದಳು. "ಅದಕ್ಕೇ ಹೇಳೂದು... ಹೆಣ್ಣು ಮಕ್ಕಳು ಅಂತ. ನಮಗ್ಯಾಕೆ ಅಯ್ಯೋ ಅಂತೀರಾ? ನಮ್ಮ ಕಷ್ಟಕ್ಕೆ ಎಲ್ಲಿ ನೆರವಾಗ್ತೀರಾ? ಹುಟ್ಟಾನೇ ಒಂದು ಕಾಲನ್ನು ಮನೆಯಿಂದಾಚೆ ಇಟ್ಟಿರ್ತೀರಾ!"

"ಈಗ ನಿನಗೇನು ಕಡಿಮೆ ಆಗಿದೆ? ಸರಳಾನೂ ಸಂಪಾದಿಸುತ್ತಿಲ್ಲವಾ? ಗಂಡು ಮಕ್ಕಳಿಗಿಂತ ಹೆಚ್ಚಾಗಿ, ಸಂಪಾದಿಸಿ ಸುರಿದಿದೀನಿ ಈ ಮನೆಗೆ. ಯಾವ ಗಂಡು ಮಗ ಹದಿನೆಂಟು ವರ್ಷಕ್ಕೆ ದುಡಿಮೆಗೆ ಸೇರುತ್ತಿದ್ದ? ಎಂಟು ಹತ್ತು ವರ್ಷದಿಂದ ಈ ಮನೆಗೆ ಸಂಪಾದಿಸಿ ಹಾಕಿದೀನಿ"

"ಸಂಪಾದಿಸ್ತಿದೀನಿ ಅಂತ ನನಗೆ ಕೊಟ್ಟು, ನೀನೇನು ಬೇರೆ ಯಾರಿಗೋ ಕೊಡುತ್ತಿಲ್ಲವಲ್ಲ. ನೀನು ಹುಟ್ಟಿ ಬೆಳೆದ ಮನೆಗೆ ತಾನೇ...."

"ಹೌದು. ಈ ಮನೆಯಲ್ಲಿ ಹುಟ್ಟಿದ ತಪ್ಪಿಗೆ, ಋಣ ತೀರಿಸ್ತಿದೀನಿ. ಯಾವ ಖುಷಿಗಾಗಿ ಈ ಮನೆಯಲ್ಲಿ ಹುಟ್ಟಿದೆ! ಯಾವ ಸಂತೋಷದಿಂದ ಬೆಳೆದೆ?"

"ನಾನು ಯಾವ ಸಂತೋಷದಲ್ಲಿ ಅದ್ದಿ ಮುಳುಗಿದೀನಿ. ನಿಮ್ಮಗಳನ್ನು ಮುಂದಕ್ಕೆ ತರಲು ನನ್ನ ಜೀವ ತೇಯ್ತಿದೀನಿ."

"ಅದೇನು ಹೆಚ್ಚುಗಾರಿಕೆ ಅಲ್ಲ ಬಿಡು. ಅದನ್ನು ಎಲ್ಲಾ ತಂದೆ ತಾಯಿಯರೂ ಮಾಡ್ತಾರೆ. ಅದು ಅವರ ಕರ್ತವ್ಯ."

"ನಿನಗೆ ಈಗ ಅರ್ಥವಾಗೋಲ್ಲ. ನಿಮ್ಮ ಹೊಟ್ಟೇಲಿ ಹುಟ್ಟಿದೋವು ಹೀಗೆ ಹೊಟ್ಟೆ ಉರಿಸುತ್ತವಲ್ಲ, ಆಗ ಅರ್ಥವಾಗುತ್ತೆ. ಹುಟ್ತಾ ಹುಟ್ತಾ ಮೂರು ಜನ ಹೆಚ್ಚಾಗಿ ಹುಟ್ಟಿದ್ದು ಅಲ್ಲದೇ, ನಿಮ್ಮದೇ ನಿಮಗೆ....ನನ್ನ ಕಷ್ಟವೆಲ್ಲ ಹೇಗೆ ಅರ್ಥ ವಾಗುತ್ತೆ?"

ಸರಳ ತಾಯಿಗೆ ಸಮಾಧಾನ ಹೇಳಿದ್ದಳು.

"ಅಮ್ಮ ಅವಳಿಗೂ ವಯಸ್ಸು ಮೀರುತ್ತಿದೆ ಅಲ್ಲವೆ! ಮಾಡಿಕೊಳ್ಳಲಿ ಬಿಡು. ನ್ಯಾಯವಾಗಿ ಇದು ನೀನೇ ಮಾಡಬೇಕಾದ ಕೆಲಸ. ಮುಕುಂದ ತುಂಬಾ ಒಳ್ಳೆಯವರು. ಅಂತಹವರ ಸ್ನೇಹ, ಪ್ರೀತಿ ಸಿಕ್ಕಿದ್ದು ಇವಳ ಅದೃಷ್ಟ. ಅವರು ತುಂಬಾ ಅನುಕೂಲ ವಾಗಿದ್ದಾರೆ. ಸಮಯ ಅಂದ್ರೆ ನಮಗೂ ಸಹಾಯಕರಾಗಿರ್ತಾರೆ. ಅವಳಂತೂ ಇದೇ ಊರಿನಲ್ಲಿರ್ತಾಳೆ ಇನ್ನೇನು?"

"ನಿನಗೆ ಅರ್ಥವಾಗೋಲ್ಲ ಬಿಡು. ಸಾವಿತ್ರಿಗೆ ಆಪರೇಷನ್ ಮಾಡಿಸಬೇಡವೆ! ಇವಳ ಮದುವೆಗೆ ಹಣ ಖರ್ಚಾದರೆ ಅವಳ ಗತಿ?"

"ಸಾವಿತ್ರಿ ಚಿಂತೆ ನನಗಿರಲಿ. ಸುಕನ್ಯಳ ಆಸೆಗೆ ಅಡ್ಡಿ ಯಾಕೆ ಬರ್ತೀಯ? ಒಪ್ಪಿಕೋ...." ಸರಳ ತಾಯಿಯನ್ನು ಒಪ್ಪಿಸಿದ್ದಳು.

"ಒಂದೇ ಕಡೆ ಕೆಲಸದಲ್ಲಿದ್ದಾರೆ. ಸ್ನೇಹದಿಂದ ಅಲ್ಲಿ ಇಲ್ಲಿ ತಿರುಗಾಡ್ತಾರೆ. ನಮ್ಮ ಜನ ನಮ್ಮನ್ನು ಆಡಿಕೊಳ್ಳುವುದಕ್ಕಿಂತ, ಮದುವೆ ಮಾಡಿ ಬಿಟ್ಟರೆ ಯಾವ ಅಂಜಿಕೆಯೂ ಇರುವುದಿಲ್ಲ. ನೀನೀಗ ಒಪ್ಪದಿದ್ದರೂ, ಸುಕನ್ಯ ಅವರ ಹಿಂದೆ ಓಡಿ ಹೋಗಿ ಮದುವೆಯಾದರೆ ಏನು ಮಾಡ್ತೀಯಾ?"

ನಿಧಾನವಾಗಿ ಯೋಚಿಸಿದಾಗ, ಸರಳೆಯ ಮಾತಿನಲ್ಲಿ ನಿಜಾಂಶವಿಲ್ಲದೆ ಇಲ್ಲ ಎಂದೆನಿಸಿತ್ತು. ಆದರೂ ಏನೋ ದಿಗಿಲು. ಅವಳ ಮದುವೆಯಾದ ಮೇಲೆ ಇನ್ನು ಇವಳು ಸುಮ್ಮನಿರುತ್ತಾಳೆಯೋ? ಆಗ ನಾನು ಬೇಡ ಎನ್ನುವುದಕ್ಕೆ ಆಗುತ್ಯೆ? ಆಮೇಲೆ

ಸಾವಿತ್ರಿಯ ಗತಿ ಏನು? ನನ್ನನ್ನು ಕೇಳುವವರ್‍ಯಾರು? ನಮ್ಮಂತಹವರಿಗೆ ಇಂತಹ ಶಿಕ್ಷೆ....ಎಂದು ಅಸಹನೆಗೊಂಡಿದ್ದಳು.

ಚಿಕ್ಕ ವಯಸ್ಸಿನಿಂದಲೂ ಅಷ್ಟೆ, ಸುಕನ್ಯ ಜೋರು. ತನಗೆ ಬೇಕೆನಿಸಿದ್ದನ್ನು ಕಾಡಿ ಬೇಡಿ ಪಡೆಯುತ್ತಿದ್ದಳು. ಕೆಲಸಕ್ಕೆ ಸೇರಿದ ಹೊಸತರಲ್ಲೂ ಅಷ್ಟೆ. ಹಂಗಿಸಿ ಅನ್ನುವುದನ್ನು ಹೆಚ್ಚು ಮಾಡಿದ್ದಳು.

"ಒಂದು ರೂಪಾಯಿ ಕೇಳಿದರೆ, ಕೊಡೋಕ್ಕೆ ಎಷ್ಟು ಸತಾಯಿಸುತ್ತಿದ್ದೆ ನೀನು! ನಾನು ನಿನಗಿಂತ ವಾಸಿ. ನೀನು ಕೇಳದೇನೇ ನಿನಗೆ ನೂರಾರು ರೂಪಾಯಿ ಕೊಡ್ತಿದೀನಿ. ಯಾವ ಗಂಡು ಮಗನಿಗೆ ಕಮ್ಮಿ ನಾನು?"

ಸುಭದ್ರಮ್ಮ ಅಳುತ್ತಿದ್ದಳು.

"ಹೀಗೆ ಕಾಡ್ತೀಯಲ್ಲೇ. ನಿನ್ನಂತಹವಳಿಗೆ ಮದುವೆಯಾದ್ರೆ ನಿನ್ನ ಗಂಡನ ಗತಿ ದೇವರೇ ಗತಿ. ಜನ ನನ್ನನ್ನು ಹೀಯಾಳಿಸುತ್ತಾರೆ ಅಷ್ಟೆ."

"ಅಂತಹ ಗಂಡನ ಮನೆ ಬೇಡವೇ ಬೇಡ ನನಗೆ. ನನಗೆ ಸರಿ ಹೊಂದುವವನನ್ನು ನಾನೇ ಹುಡುಕಿ ಮದುವೆ ಆಗ್ತೀನಿ."

ಅದೇನೋ ನಿಜವಾಯಿತು. ಅವಳಿಗೆ ಸರಿ ಹೊಂದುವವನನ್ನೇ ಹುಡುಕಿ ಕೊಂಡಿದ್ದಳು. ಆದರೆ' ಪ್ರೇಮವಿವಾಹವಾದರೂ ಖರ್ಚಿಗೆ ಬಂದಿತ್ತು. ಸರಳವಾದ ಮದುವೆಗೆ ಅವರು ಒಪ್ಪುವಂತೆ ಮಾತನ್ನಾಡಿರಲಿಲ್ಲ. ತನ್ನ ಸ್ಥಿತಿ ಅವರಿಗೆ ತಿಳಿಯ ಬಾರದು. ತಾವು ಕೀಳು ಎಂದು ಅವರು ಭಾವಿಸಬಾರದು ಎಂದುಕೊಂಡು, ಮುಕುಂದನ ತಾತ ಹೇಳಿದಕ್ಕೆಲ್ಲ ಸುಭದ್ರಮ್ಮ 'ಹೂಂ' ಗುಟ್ಟಿ, ಒಪ್ಪಿಗೆ ಕೊಟ್ಟಿದ್ದಳು.

ಸುಕನ್ಯ ದುಡುಕಿದಳು. ಹೀಗೆ ಖರ್ಚು ವೆಚ್ಚ ಮಾಡುವುದಾದರೆ, ಇದನ್ನು ಲವ್ ಮ್ಯಾರೇಜ್ ಅಂತ ಯಾರು ಅಂತಾರೆ. ನಾನೇನೋ ಒಪ್ಪಿದೆ. ಆದರೆ ಹಣ ಎಲ್ಲಿಂದ ತರುವುದು! ಇವಳಿಗೆ ಸಾಲ ಸೋಲ ಮಾಡಿದರೆ, ನಾಳೆ ಇವರಿಬ್ಬರ ಗತಿ ಏನು? ನಿದ್ದೆ ಬಾರದೇ ಹೊರಳಾಡಿದಳು.

ಸುಕನ್ಯ ಹೊಂಗನಸು ಕಾಣುತ್ತಿದ್ದಳು. ಎರಡು ವರ್ಷಗಳ ಸ್ನೇಹ ವಿವಾಹದಲ್ಲಿ ಸಾಕಾರಗೊಳ್ಳುತ್ತಿದೆ. ತಾನು ಮೆಚ್ಚಿದ ಮುಕುಂದ ತನ್ನ ಪತಿಯಾಗುತ್ತಿದ್ದಾನೆ. ಹನಿಮೂನ್‌ಗೆ ಎಲ್ಲಿಗೆ ಹೋಗಬೇಕು! ನಿಮ್ಮಿಬ್ಬರ ಮಾತುಕತೆ, ನಡೆನುಡಿ ಪ್ರೀತಿ ಪ್ರೇಮ, ಸರಸ ಸಲ್ಲಾಪ ಹೇಗಿರಬೇಕೆಂದು ಯೋಚಿಸುತ್ತಿದ್ದಳು.

ಸರಳೆಯ ಜವಾಬ್ದಾರಿ ಹೆಚ್ಚಿತ್ತು. ಸುಕನ್ಯ ಏನೋ, ಸಧ್ಯ ಇಲ್ಲಿಂದ ಹೊರಟರೆ

ಸಾಕು ಎಂಬಂತೆ ಹೊರಡಲಿದ್ದಾಳೆ. ನಂತರ ಪೂರ್ಣ ಜವಾಬ್ದಾರಿ ತನ್ನದು. ತಾನು ಮದುವೆ ಆಗಬಾರದು. ಅಮ್ಮನಿಗೆ ನಿರಾಸೆಯನ್ನುಂಟು ಮಾಡಬಾರದು. ಸಾವಿತ್ರಿಗೆ ಯಾರೂ ಇಲ್ಲ ಎನ್ನುವಂತಾಗಬಾರದು. ಅಥವಾ ಒಂದು ವೇಳೆ ತಾನು ಮದುವೆ ಯಾದರೂ, ಸಾವಿತ್ರಿ, ಅಮ್ಮ ನನ್ನ ಜತೆಯೇ ಇರುವಂತಾಗಬೇಕು. ಅಂತಹವನ ಕೈ ಹಿಡಿಯಬೇಕು. ಸುಕನ್ಯಳಿಂದ ಇನ್ನು ಮುಂದೆ ಏನನ್ನಾದರೂ ನಿರೀಕ್ಷಿಸುವುದು ಅಸಾಧ್ಯ ಎಂದುಕೊಂಡಳು.

ಮಲಗಿದ್ದ ಸಾವಿತ್ರಿ ತನ್ನಲ್ಲೇ ಆಲೋಚಿಸುತ್ತಿದ್ದಳು. ಸುಕನ್ಯಂಗೆ ಮದುವೆ ಯಾಗ್ತಿದೆ. ಅವಳ ಗಂಡನಾಗುವವನು ಹೇಗಿದಾನೋ... ಸುಕನ್ಯ ಪ್ರೀತಿಸಿದವನೇ ಅಂತೆ. ಇವಳಿಗೆ ಮೊದಲಿನಿಂದಲೂ ಅಂತಹುದರಲ್ಲಿ ಆಸಕ್ತಿ. ಸ್ನೇಹಿತೆಯರ ಮನೆಗೆ ಹೋಗುವುದು, ತಿರುಗಾಡುವುದು, ಅವಳಿಗೆ ಆಸೆ. ಈಚೆಗೆ ಇವನ ಜತೆಯಲ್ಲಿ ತಿರುಗಾಡುತ್ತಿರಬಹುದು. ಅವರಿಬ್ಬರ ಪ್ರೀತಿ ಹೇಗಿರಬಹುದು? ಕತೆ ಕಾದಂಬರಿಯಲ್ಲಿ ಓದುವಂತೆ? ಸಿನಿಮಾಗಳಲ್ಲಿ ತೋರಿಸುವಂತೆ? ನಾನು ಸಿನಿಮಾ ನೋಡಿ ಎಷ್ಟೋ ವರ್ಷಗಳಾದವು. ಓದುವುದನ್ನು ಬಿಟ್ಟೇ ಅನೇಕ ವರ್ಷಗಳಾದವು. ಇಷ್ಟೆಲ್ಲಾ ಏಕೆ? ಹೊರ ಪ್ರಪಂಚ ನೋಡಿಯೇ ವರ್ಷಗಳ ಮೇಲಾಯ್ತು.

ಅಮ್ಮ ಹೇಳುವಂತೆ ನನ್ನದು ದುರಾದೃಷ್ಟ. ಹೆಣ್ಣಾಗಿ ಹುಟ್ಟಿದ್ದೂ ಅಲ್ಲದೇ ನಾನೇ ಏಕೆ ಕುರುಡಿಯಾಗಬೇಕಾಗಿತ್ತು? ಅಮ್ಮ ನನ್ನನ್ನು ಸಂತೈಸುವ ಬದಲು ಬೈದಿರು ವುದೇ ಹೆಚ್ಚು. ನನ್ನಿಂದ ಆಗಬಾರದ ಅಪರಾಧವಾಗಿದೆ ಎನ್ನುವ ತರಹ.

ಸಾವಿತ್ರಿ ಅಂತ ಏಕಾದರೂ ಹೆಸರನ್ನಿಟ್ಟರೋ. ಆ ಸಾವಿತ್ರಿಯ ತರಹ ಕಷ್ಟ ಪಡುವುದೇ ಆಗಿದೆ. ಅವಳು ತಾನಾಗಿ ಬಯಸಿ ಸತ್ಯವಾನನನ್ನು ಮದುವೆಯಾದಳು. ಆದರೆ...ಈ ಕುರುಡಿ ಸಾವಿತ್ರಿಯನ್ನು ಮದುವೆಯಾಗಲು ಯಾವ ಸತ್ಯವಾನ ಮುಂದೆ ಬಂದಾನು? ನಾನು ಸತ್ಯವಾನನಿಲ್ಲದ ಸಾವಿತ್ರಿಯಾಗಿಯೇ ಬಾಳಬೇಕೇ? ಕಣ್ಣಿನ ಚಿಕಿತ್ಸೆಗೆ ಅಮ್ಮನ ಹತ್ತಿರ ದುಡ್ಡಿಲ್ಲವಂತೆ. ನನಗಾಗಿ ಸಹಾಯ ಮಾಡುವವರೂ ಯಾರಿಲ್ಲ. ಆದರೆ ನನಗೂ ಆಸೆಗಳಿಲ್ಲವೆ? ನಾನು ನೋಡೋಕೆ ತುಂಬಾ ಚೆನ್ನಾಗಿದೀನಿ ಅಂತ ಅಜ್ಜಿ ಹೇಳುತ್ತಾಳೆ. ಹೇಗಿದೀನೋ ನನಗೆ ಹೇಗೆ ಗೊತ್ತಾಗಬೇಕು? ಕನ್ನಡಿ ಮುಂದೆ ನಿಂತರೂ ನನ್ನ ರೂಪ ನನಗೆ ಕಾಣುವುದಿಲ್ಲವಲ್ಲ.

ನನ್ನ ರೂಪವನ್ನು ಮೆಚ್ಚಿ, ನನ್ನ ಸಂಗೀತವನ್ನು ಮೆಚ್ಚಿ, ಯಾರಾದರೂ ಮದುವೆ ಯಾಗಿ, ಸಿನಿಮಾದಲ್ಲಿ ತೋರಿಸುವಂತೆ ಫಾರಿನ್ನಿಗೆ ಕರೆದುಕೊಂಡು ಹೋಗಿ ಕಣ್ಣುಗಳ

ಆಪರೇಷನ್ ಮಾಡಿಸಿ, ನನಗೆ ಜೀವನ ಕೊಡುವಂತಾದರೆ... ಅಂತಹವನು ತನಗೆ ದೊರೆತರೆ.... ಇಪ್ಪತ್ತೊಮ್ಮರು ವರ್ಷದ ಸಾವಿತ್ರಿ ಆಸೆಯ ಕುದುರೆಯ ಹಿಂದೆ ಓಡ ತೊಡಗಿದಳು.

ಮಾರನೇ ದಿನ ಅವರ ಮನೆಯಲ್ಲಿ ಬೆಳಿಗ್ಗೆಯಿಂದಲೇ ಜಿಜ್ಞಾಸೆ, ಚರ್ಚೆ. ರಜ ತೆಗೆದುಕೊಂಡಿದ್ದ ಸುಕನ್ಯ ಷಾಪಿಂಗ್ ಎಂದು ಹೊರಕ್ಕೆ ಹೋಗಿದ್ದಳು. ಸರಳ ಮನೆ ಚೊಕ್ಕಟ ಮಾಡಿ 'ಲಗ್ನ ಪತ್ರಿಕೆ'ಗೆ ಬೇಕಾದ ಸಿದ್ಧತೆ ನಡೆಸಿದ್ದಳು. ಸಾವಿತ್ರಿ, "ನಾನು ಇಲ್ಲೇ ಇರ್ತೀನಿ ಎಲ್ಲಿಗೂ ಹೋಗುವುದಿಲ್ಲ" ವೆಂದು ಹಠ ಹಿಡಿದಿದ್ದಳು. ಸುಭದ್ರಮ್ಮನಿಗೆ ಸರ್ವಥಾ ಸಮ್ಮತವಿಲ್ಲ.

"ಕುರುಡಿ ಅಂತ ಆಡ್ಕೋತಾರೆ ಕಣೇ. ಸುಮ್ಮನೇ ನಾನು ಹೇಳಿದಷ್ಟನ್ನು ಕೇಳು" ಸರಳ ಉಪಾಯದಿಂದ ಸಮಜಾಯಿಷಿ ಹೇಳಿದ್ದಳು.

"ಬಂದವರು ತಲಾತಟ್ಟಿ ಮಾತನಾಡಿದರೆ, ನಿನಗೂ ಬೇಜಾರಾಗುತ್ತೆ ನಮಗೂ ಬೇಜಾರಾಗುತ್ತೆ. ಹಳ್ಳಿಯಿಂದ ಬರ್ತಾರೆ. ಅವರುಗಳ ಮಾತಿನ ರೀತಿ ನೀತಿಗಳೇ ಬೇರೆ ತರಹವಾಗಿರುತ್ತೆ"

"ಹಾಗಾದ್ರೆ, ನಾನೂ ಒಬ್ಬಳು ತಂಗಿ ಇದೀನಿ ಅಂತ ಅವರ್‍ಯಾರಿಗೂ ತಿಳಿಯ ಬಾರದು ಅಂತ ನಿಮ್ಮ ಇಷ್ಟಾನಾ?"

"ಛೆ... ಏನು ಮಾತು! ನನಗೊಬ್ಬಳು ಸುಂದರವಾದ ತಂಗಿಯಿದಾಳೆ ಅಂತ ನಾನು ಹೆಮ್ಮೆಯಿಂದ ಹೇಳಿಕೊಳ್ತೀನಿ... ಆದರೆ ಅವರು ನಮಗಿನ್ನೂ ಹೊಸಬರು... ಅವರ ಮಾತಿನಲ್ಲಿ ಜಂಭ ಅಹಂಕಾರವಿಲ್ಲದಿದ್ದರೆ, ನಾನೇಕೆ ನಿನಗೆ ಬೇಡ ಎಂದು ಹೇಳುತ್ತಿದ್ದೆ. ಖಂಡಿತಾ ಹೀಗೆ ಹೇಳುತ್ತಿರಲಿಲ್ಲ. ಮುಕುಂದನ ತಾತ ಹಳೇ ಕಾಲದ ಮನುಷ್ಯ. ಅದನ್ನೇ ದೊಡ್ಡದು ಮಾಡಿಯಾರು ಅಂತ ಅಷ್ಟೆ... ಮೊದಲೇ ಇದು ಪ್ರೇಮ ವಿವಾಹ ಅಂತ ಅವರಿಗೆ ಒಪ್ಪಿಗೆ ಇರಲಿಲ್ಲವಂತೆ... ಸಾವಿತ್ರಿ ನೀನು ಜಾಣೆ ಅಲ್ವಾ..? ನಿನಗೆ ಎಲ್ಲ ಗೊತ್ತಾಗುತ್ತೆ...ನಿನಗೆ ಯಾರೂ ಹೇಳಿಕೊಡಬೇಕಾಗಿಲ್ಲ...." ಸಾವಿತ್ರಿ ಸುಮ್ಮನಿದ್ದು ಅಸಹನೆಯನ್ನು ನುಂಗಿಕೊಂಡಳು.

ಮತ್ತೆ ಆ ರಾತ್ರಿಯೂ. ಸಮಾರಂಭ ನಡೆಯುವ ಸಮಯದಲ್ಲಿ ಸಾವಿತ್ರಿ ಅಜ್ಜಿಯ ಜತೆಯಲ್ಲಿ ಪಕ್ಕದ ಮನೆಯಲ್ಲಿರುವುದೆಂದು ತೀರ್ಮಾನವಾಯಿತು.

ತಾತನ ಇಚ್ಛೆಯಂತೆ "ಲಗ್ನ ಪತ್ರಿಕೆ" ಸಮಾರಂಭ ಚೆನ್ನಾಗಿ ನಡೆಯಿತು. ಸೊಗಸಾದ ಭಾರಿ ಊಟ, ಉಪಚಾರ, ಉಡುಗೊರೆಗಳಿಂದ ಸಂತೃಪ್ತಿಗೊಂಡರು.

ಸುಭದ್ರಮ್ಮನ ಭಾವ ಮಾತ್ರ ಯಾವ ಮಾತಿಗೂ ಬರದೇ, ನಡೆದ ಸಮಾರಂಭದಲ್ಲಿ ಭಾಗಿಯಾದರು.

ಆಕೆಯ ತಮ್ಮ ಮಾತ್ರ "ನಮಗೊಂದು ಮಾತು ತಿಳಿಸದೇ ಎಲ್ಲಾ ಸಿದ್ಧತೆ ನಡೆಸಿದೀಯಲ್ಲ ನಿನಗೆ ನಾವ್ಯಾರೂ ಬೇಡವಾದೆವು ಅಲ್ಲವೇ?" ಹಂಗಿಸಿ ಕೇಳಿದ್ದ.

ಸುಭದ್ರಮ್ಮನಿಗೆ ಜಗಳವಾಡುವ ಮನಸ್ಸಿದ್ದರೂ ತಡೆದುಕೊಂಡಳು. "ನಾವು ಕಷ್ಟದಲ್ಲಿದೀವಿ ಅಂತ ಎಂದು ನೀನು ಕೇಳಿದಾನೆ? ಈಗ ಆಕ್ಷೇಪಣೆ ಮಾಡ್ತಾನೆ ಎಂದುಕೊಂಡು. ಮದುವೆ ಕೆಲಸ ಮುಗಿಯುವವರೆಗೂ, ಈ ತರಹದ ಮಾತಿಗೆಲ್ಲಾ ಕಿವಿಗೊಡಬಾರದು" ಎಂದು ಜಾಣತನವನ್ನು ತೋರಿದಳು.

"ಮುಂದಿನ ತಿಂಗಳ ಮೊದಲವಾರದ ಎರಡನೇ ದಿನವೇ ಮದುವೆ. ಕೇವಲ ಹದಿನೇಳು ದಿನಗಳು ಉಳಿದಿವೆ. ಎಲ್ಲಾ ಸಿದ್ಧತೆಯಾಗಬೇಕು." ತಾತ ಎಚ್ಚರಿಸಿ ಹೊರಟರು. ಚಿಕ್ಕಪ್ಪ ಮಾತ್ರ ಹೊರಡುವ ಮುಂದೆ, ಸುಭದ್ರಮ್ಮನ ಮುಂದೆ ಕೈ ಜೋಡಿಸಿ ನುಡಿದರು.

"ನಮ್ಮ ತಂದೆಗೆ ವಯಸ್ಸಾಗಿದೆ. ಒಣ ಅಭಿಮಾನ ಜಾಸ್ತಿ. ಅವರು ಹೇಳಿದರು ಅಂತ ನೀವು ಹೆಚ್ಚಿಗೆ ಖರ್ಚು, ಶ್ರಮ ಯಾವುದನ್ನೂ ವ್ಯರ್ಥಮಾಡಬೇಡಿ. ನಮಗೆ ಹಳ್ಳಿಯಲ್ಲಿ ಯಾವುದಕ್ಕೂ ಕೊರತೆ ಇಲ್ಲ. ಬೇಕಾದಷ್ಟಿದೆ. ಮದುವೆಗೆ ಏನೇನು ಬೇಕೋ ಅದನ್ನು ತಿಳಿಸಿದರೆ, ಮುಂಚಿತವಾಗಿ ಕಳಿಸಿ ಕೊಡ್ತೀನಿ. ಯಾವುದಕ್ಕೂ ಸಂಕೋಚಪಟ್ಟುಕೊಳ್ಳಬೇಡಿ."

ಆಕೆ ಸಂತಸಗೊಂಡಳು.

"ನಿಮ್ಮಂತಹ ಬೀಗರು ಸಿಕ್ಕಿರುವುದು ನಮ್ಮ ಪುಣ್ಯ. ನಮಗೆ ತಾವಾಗಿಯೇ ಯಾರು ಇಂತಹ ಮಾತುಗಳನ್ನು ಹೇಳಿಲ್ಲ. ಆಗಲಿ. ಸಮಯ ಬಿದ್ದರೆ, ನೀವೇ ನಮಗೆ ಆಧಾರ. ನಮ್ಮ ಸುಕನ್ಯ ಮುಗ್ಧ ಸ್ವಭಾವದವಳು. ಅವಳು ನಿಮ್ಮಂತಹವರ ಮನೆ ಸೇರುತ್ತಿರುವುದೇ ಅವಳ ಅದೃಷ್ಟ."

"ಇನ್ನು ಮುಂದೆ ಅವಳು ನಿಮ್ಮ ಮಗಳಲ್ಲ. ನಮ್ಮ ಮನೆ ಹುಡುಗಿ. ನಮಗೆ ಹೇಗೆ ಬೇಕೋ ಹಾಗೆ ಸರಿ ಮಾಡಿಕೊಳ್ತೀವಿ ಅವಳನ್ನ" ಸರಸ್ವತಿ ಚಿಕ್ಕಮ್ಮ ಸಂತಸದಿಂದ ನುಡಿದಳು. ಸುಕನ್ಯ ಎಲ್ಲರಿಗೂ ನಮಸ್ಕರಿಸಿದಳು.

"ಹೆಚ್ಚಿಗೆ ಬಗ್ಗಿ ಎಷ್ಟು ಆಯಾಸ ಮಾಡಿಕೋ ಬೇಡಮ್ಮ" ಎಂದು ಆಕೆ ಅಕ್ಕರೆ ತೋರಿದಾಗ ಯಾರಿಗೂ ಅರ್ಥವಾಗಲಿಲ್ಲ. ಸುಕನ್ಯ ಸುಮ್ಮನೇ ನಕ್ಕಳು.

ಸಮಾರಂಭಕ್ಕೆ ಸುರೇಶನ ಮನೆಯವರೂ ಬಂದಿದ್ದರು. ಹೊರಟಾಗ ಸುರೇಶ ತಾನಾಗಿಯೇ ಹೇಳಿದ್ದ.

“ಮದುವೆಗೆ ಹೆಚ್ಚಿಗೆ ದಿನಗಳು ಬಾಕಿ ಇಲ್ಲ. ನನ್ನಿಂದ ಯಾವ ಸಹಾಯ ಬೇಕಾದರೂ ನಿಸ್ಸಂಕೋಚವಾಗಿ ಹೇಳಿ. ನಾನು ರೆಡಿ.” ಸರಳೆಯ ಕಡೆ ನೋಡುತ್ತಾ ಹೇಳಿದ್ದ. ಅವಳ ಜತೆ ತಿರುಗಾಡುವ, ಮಾತನಾಡುವ ಅವಕಾಶ ಸಿಕ್ಕೀತೆಂದು ಅವನ ಆಸೆ. ಸರಳ ಮುಗುಳ್ನಕ್ಕು ‘ಈಗ ನೀವೇ ಆಪದ್ಬಾಂಧವರು’ ಎಂದಿದ್ದಳು. ಆ ಮಾತು ಅವನನ್ನು ಮೆಚ್ಚಿಸಿತು. ಸರಳ ನನ್ನನ್ನು ಮೆಚ್ಚಿದ್ದಾಳೆ ಎಂದು ಆನಂದಗೊಂಡ.

ಮಾರನೇ ದಿನವೇ ಅವರುಗಳು ಹಳ್ಳಿಗೆ ವಾಪಸ್ಸು ಹೊರಟರು. ಮುಕುಂದ, ಮದುವೆಗೆ ಎರಡು ಮೂರು ದಿನಗಳ ಮುಂಚೆ, ತಾನು ಹಳ್ಳಿಗೆ ಬರುವುದಾಗಿ ತಿಳಿಸಿದ.

ಸುರೇಶನ ಜತೆಯಲ್ಲಿ ತಿರುಗಾಡಿ, ಮುಕುಂದ ತಾನೇ ಒಂದು ಸಣ್ಣ ಛತ್ರವನ್ನು ಗೊತ್ತು ಮಾಡಿ, ಅಡ್ವಾನ್ಸ್ ಹಣವನ್ನು ಕೊಟ್ಟ. ಹಳ್ಳಿಯಲ್ಲಿ ದೊಡ್ಡ ದೊಡ್ಡ ಅಂಗಡಿಗಳಿಲ್ಲ, ಅಲ್ಲದೇ ಅಮ್ಮನಿಗೆ ತಿಳಿಯುವುದಿಲ್ಲ ಎಂದುಕೊಂಡು ಸುಕನ್ಯಳಿಗೆ ತರವೇಕಾದ ಭಾರಿ ಸೀರೆಗಳನ್ನು ತಾನೇ ಖರೀದಿಸಿದ. ತಾನೇ ಪ್ರೀತಿಯಿಂದ ಅವಳಿಗೆ ಒಂದು ಸೆಟ್ ಒಡವೆ ಕೊಡಿಸಿದ.

“ಹನಿಮೂನ್‌ಗೆ ಎಲ್ಲಿಗೆ ಹೋಗೋಣ” ಸುಕನ್ಯ ಉತ್ಸಾಹದಿಂದ ಕೇಳಿದಾಗ, “ಹಳ್ಳಿಗೆ ಹೋಗೋಣ ಅಲ್ಲಿ ಹೊಸದಾಗಿ ಮದುವೆಯಾದವರಿಗೆ, ಪ್ರಶಸ್ತವಾದ ಜಾಗಗಳಿವೆ” ಎಂದು ತಮಾಷೆ ಮಾಡಿದ್ದ.

“ಥೂ, ಹಳ್ಳಿ ಹೆಸರು ಕೇಳಿದರೆ, ಹೊಟ್ಟೆ ತೊಳೆಸುತ್ತೆ ನನಗೆ”

“ಮುಂದೆ ಈ ಹಳ್ಳಿಯವನ ಜತೆಯಲ್ಲಿಯೇ ಇರ್ತೀಯಲ್ಲ ಆಗ ಏನಾಗಲ್ವಾ?”

“ಮುಕುಂದ ತಮಾಷೆ ಮಾಡಬೇಡಿ. ಎಲ್ಲಿಗೆ ಹೋಗೋಣ ಹೇಳಿ.”

“ನೀನೇ ಹೇಳು. ನನಗೆ ಯಾವ ಊರಾದ್ರೂ ಸರಿ. ನೀನಿರುವ ಊರೇ ಸ್ವರ್ಗ” ಹತ್ತಿರ ಸರಿದ.

“ಸಾಕು. ಸಾಕು....ಕಾಶ್ಮೀರಕ್ಕೆ ಹೋಗೋಣ್ವಾ?”

“ಕಾಶ್ಮೀರಾನಾ! ಅಬ್ಬಾ ಅಷ್ಟು ದೂರ! ಬೇಡಾ ಸುಕನ್ಯ.”

“ಯಾಕೆ ಹೆದರಿಕೇನಾ?”

“ನಿಧಾನವಾಗಿ ಇನ್ಯಾವಾಗಲಾದರೂ ಹೋಗೋಣ. ಅಲ್ಲಿ ಹೋದರೂ

ಅಲ್ಲಿಯ ಸುಂದರ ಪ್ರಕೃತಿ ನೋಡುವ ಮೂಡ್‌ನಲ್ಲಿ ನಾವಿರುವುದಿಲ್ಲ. ನಮ್ಮ ಪ್ರಪಂಚವೇ ಬೇರೆ ಆಗಿರುತ್ತೆ ಅಲ್ವಾ?.... ನಮ್ಮ ಪ್ರೀತಿ ಪ್ರೇಮ ಸ್ವಲ್ಪ ಹಳೆಯದಾದ ಮೇಲೆ ಅಲ್ಲಿಗೆ ಹೋಗಿ ಮತ್ತೆ ಸ್ಫೂರ್ತಿ ಪಡೆಯೋಣ."

"ಥೂ, ಈಗ ಈಗಲಿಂದ ಪ್ರೀತಿ ಕಡಿಮೆಯಾಗುತ್ತೆ ಅಂತೀರಲ್ಲ. ಹಾಗಾದ್ರೆ ಎಲ್ಲಿಗೂ ಬೇಡ. ಇಲ್ಲಿಯೇ ಇರೋಣ"

"ನಿನ್ನಿಷ್ಟ"

"ಥೂ ನೀವೆಷ್ಟು ಅನ್‌ರ್‍ಯೋಮಾಂಟಿಕ್?...."

"ಇಲ್ಲ. ನಾನೆಷ್ಟು ರ್‍ಯೋಮಾಂಟಿಕ್ ಅಂತ ನಿನಗೆ ಗೊತ್ತಿಲ್ಲ... ಅದು ಆಮೇಲೆ. ನಿನಗೆ ಬೇಜಾರಾಗಬಾರದು ಅಂತ ಊಟಿಗೆ ಹೋಗಿ ಬರೋಣ ಅಂದ್ಕೊಂಡಿದೀನಿ. ಹೇಗೂ ಚಳಿ ಇರುತ್ತೆ ಹೊರಗೆ ತಿರುಗಾಡುವುದೇ ಬೇಡ" ಮುಕುಂದ ನಕ್ಕಾಗ ಸುಕನ್ಯಳಿಗೆ ಅವನ ಮಾತಿನ ಅರ್ಥವಾಯಿತು. ನಾಚಿದಳು.

"ಓ. ಕೇ. ನಾನು ನಾಳೆ ಹಳ್ಳಿಗೆ ಹೊರಟಿದೀನಿ. ಮತ್ತೆ ನಿನ್ನನ್ನು ಛತ್ರದಲ್ಲಿ ಮದುಮಗಳ ವೇಷದಲ್ಲೇ ನೋಡುವುದು....ಬೈ" ಎಂದು ಹೇಳಿ ಮುಕುಂದ ಹೊರಟ.

ಸುಕನ್ಯ ಸವಿಗನಸು ಕಾಣುತ್ತಾ ನಿಂತಳು. ಸರಳ ಬಂದು ಎಚ್ಚರಿಸಿದಳು. "ಹೀಗೆ ಕನಸು ಕಾಣುತ್ತಾ ನಿಂತರೆ ಹೇಗೆ? ಮುಕುಂದ ಹೋಗಿ ಅರ್ಧ ಗಂಟೆಯಾಯ್ತು" ಸುಕನ್ಯ ಉದಾಸಭಾವದಿಂದ ಒಳಗೆ ಬಂದಳು.

ಮುಕುಂದನ್ನ ಬಿಡಲು ಸುರೇಶ ಬಸ್‌ಸ್ಟ್ಯಾಂಡ್‌ಗೆ ಹೋಗಿದ್ದ.

"ನಾನು ಇನ್ನು ಮದುವೆ ದಿನವೇ ನಿನಗೆ ಸಿಗುವುದು. ನಿನ್ನಿಂದ ಎಷ್ಟೋ ಸಹಾಯವಾಗಿದೆ. ಅದಕ್ಕೇ ಧೈರ್ಯವಾಗಿ ಹೇಳ್ತಿದೀನಿ. ನೀನು ಆಗಾಗ್ಗೆ ಹೋಗಿ ಅವರ ಮನೆಯ ಕಡೆ ವಿಚಾರಿಸುತ್ತಿರು...."

"ಆಗ್ಲಯ್ಯಾ.... ನೀನು ನಿರಾತಂಕವಾಗಿ ಹೋಗಿ ಬಾ" ಆಶ್ವಾಸನೆ ಇತ್ತ.

* * *

ಮುಕುಂದ ಹಳ್ಳಿಯ ತನ್ನ ಮನೆ ಸೇರಿದ ಕೂಡಲೇ ಮನೆಯಲ್ಲಿ ಮದುವೆಯ ಸಡಗರ ಹೆಚ್ಚಿತು. ಮುಕುಂದ ತಾನು ತಂದಿದ್ದ, ಸೀರೆ ಒಡವೆಗಳನ್ನು ತಾಯಿಯ ಕೈಗಿತ್ತ. ಆಕೆ ತಾವು ಬೀಗರಿಗೆ, ಸೊಸೆಗೆ, ಹೆಣ್ಣು ಮಕ್ಕಳಿಗೆ ತಂದಿದ್ದ ಜವುಳಿಯನ್ನು ಗಂಟು ಬಿಚ್ಚಿ ತೋರಿಸಿದರು. ಅದರಲ್ಲಿ ಆನಂದನ ಹೆಂಡತಿಗೂ, ಶಾಂತಿಗೂ ತಂದಿದ್ದ ಸೀರೆ ಭಾರಿಯಾಗಿತ್ತು.

"ಈಗಲೂ ಮನೆ ಹಿರಿಮಗ ಅನ್ನಿಸಿಕೊಂಡವನು ಬರದಿದ್ದರೆ ಏನು ಚೆನ್ನ? ನೀನು ಹೋಗಿ ಬಲವಂತವಾಗಿ ಕರೆದುಕೊಂಡು ಬಾ." ತಾಯಿ ಹೇಳಿದ್ದಳು.

"ನಂಗೇನಿಲ್ಲ. ನಾನು ಹೋಗಿ ಕರೀತೀನಿ. ಅಪ್ಪನೋ ಚಿಕ್ಕಪ್ಪನೋ ಏಕೆ ಹೋಗಬಾರದು?"

"ಅವರಿಬ್ಬರೂ, ನಿನ್ನ ತಾತನಿಗೆ ಹೆದರ್‍ತಾರೆ. ನಿನ್ನ ಮದುವೆ ತಾನೇ ನಡೀತಿರುವುದು. ನೀನೇ ಹೋಗಿ ಕರೆದರೆ ತಪ್ಪೇನಿಲ್ಲ."

"ಹುಂ. ಸರಿ. ಸಾಯಂಕಾಲ ಹೋಗ್ತೀನಿ."

ಆನಂದನ ಮನೆಯನ್ನು ಮುಕುಂದ ತಲುಪಿದಾಗ ಕತ್ತಲಾಗುತ್ತಾ ಬಂದಿತ್ತು. ಲಕ್ಷ್ಮಿ ಹೆಚ್ಚಿಗೆ ಮಾತನಾಡಿಸಲಿಲ್ಲ. ಆನಂದ ಏನು ಬಂದಿದ್ದು? ಎಂದಷ್ಟೇ ಕೇಳಿದ. "ನನ್ನ ಮದುವೆ ಗೊತ್ತಾಗಿರುವ ವಿಚಾರ ನಿನಗೆ ತಿಳಿದಿಲ್ವಾ?"

"ನನಗ್ಯಾರು ಹೇಳಬೇಕು. ಎಷ್ಟಾದರೂ ಮನೆಯಿಂದ ಆಚೆ ದೂಡಿಸಿ ಕೊಂಡವನು ನಾನು...."

"ಈಗ ನಾನೇ ಹೇಳ್ತಿದೀನಿ. ನಿನಗೆ ಎಲ್ಲರಿಗಿಂತ ಮುಂಚೆ ತಿಳಿಸಬೇಕು. ಅಂತ ಅಮ್ಮನ ಆಸೆ, ಅವಳೇ ನನ್ನನ್ನು ಕಳಿಸಿದಾಳೆ. ಎರಡನೇ ತಾರೀಖು ನನ್ನ ಮದುವೆ ಬೆಂಗಳೂರಿನಲ್ಲಿ. ನಾಳೆ ದೇವರ ಸಮಾರಾಧನೆ. ಈ ಸಮಯದಲ್ಲಾದರೂ ಎಲ್ಲಾ ಮುನಿಸನ್ನು ಮರೆತು ಮನೆಗೆ ಬಂದು ಓಡಾಡು. ಮನೆಯವನು ನೀನೇ ಇಲ್ಲದಿದ್ದರೆ ನಮಗೆಲ್ಲ ಏನು ಸಂತೋಷವಿರುತ್ತೆ?"

"ನಾನು ಬರದಿದ್ದರೆ ನಡೆಯುವ ಕಾರ್ಯವೇನೂ ನಿಂತು ಹೋಗುವುದಿಲ್ಲ. ಆ ಮನೆಗೆ ಬರುವ ಮನಸ್ಸಿಲ್ಲ ನನಗೆ. ನನ್ನನ್ನ ಬಲವಂತ ಮಾಡಬೇಡ."

"ಹಾಗೆನ್ನ ಬೇಡ ಆನಂದ. ಹತ್ತು ವರ್ಷದಿಂದ ಏನು ಸಮಾರಂಭ ನಡೆದಿದೆ ನಮ್ಮ ಮನೆಯಲ್ಲಿ ನೀನೇ ಹೇಳು. ನೀನು ಬಂದರೆ, ಶಾಂತಿ, ಅವಳ ಗಂಡನೂ ಬರ್‍ತಾರೆ."

"ಶಾಂತಿಗೆ ನೀನು ಹೋಗಬೇಡ ಅಂತ ನಾನೇನೂ ಹೇಳಿಲ್ಲ"

"ಅತ್ತಿಗೆ ಮಕ್ಕಳೂ ಬರಲಿ ಅಂತ ನಮ್ಮ ಆಸೆ"

"ಅವಳು ಬರುವುದಾದರೆ ಕರೆದುಕೊಂಡು ಹೋಗು. ನಾನು ಬರೋಲ್ಲ"

"ಸ್ವಂತ ತಾತನಾಡಿದ ಒಂದು ಮಾತಿಗೆ ಇಷ್ಟು ಹಗೆತನ ಬೆಳೆಸಿಕೊಂಡಿದೀಯಲ್ಲ ಒಳ್ಳೇದಲ್ಲ ಇದು. ನನ್ನ ಹೆಂಡತಿಯ ಮನೆಯವರಿಗೂ ಎಲ್ಲಾ ವಿಷಯ ತಿಳಿಯುತ್ತೆ"

"ಓ .... ಹಾಗೋ.... ನಾನು, ಒಬ್ಬ ಮಗ ಇದೀನಿ ಅಂತ ಅವರಿಗೆ ಹೇಳಲೇ ಬೇಡಿ. ನನ್ನಿಂದೇನಾಗಬೇಕು?"

"ಅಂತೂ ನಿನ್ನ ಮಾತಿನ ವರಸೆ ಮಾತ್ರ ಆದೇ.....ಬರ್ತೀಯೋ ಇಲ್ಲವೋ ನೇರವಾಗಿ ಹೇಳಿಬಿಡು" ಅವನಿಗೂ ರೇಗಿತ್ತು.

"ಬರೋಲ್ಲ ಅಂದ್ನಲ್ಲ. ತಾತ ಬದುಕಿರುವವರೆಗೂ, ಆ ಮನೆ ಕಡೆ ತಿರುಗಿ ಮಲಗೋಲ್ಲ ನಾನು. ಅಮ್ಮನಿಗೆ ನನ್ನನ್ನು ನೋಡಬೇಕು ಅಂತ ಅನ್ನಿಸಿದರೆ, ಅವಳೇ ಬರಲಿ. ಎಲ್ಲರೂ ತಾತನಿಗೆ ಹೆದರಿ, ನನ್ನನ್ನ ದೂರ ಮಾಡಿದಾರೆ. ಅವರೇ ಬರಲಿ"

"ಈಗ ನಾನು ಬರಲಿಲ್ಲವೆ?"

"ನಿನಗೆ ಬೇಕಾದಾಗ ಬಂದಿದೀಯ. ನನಗೆ ಬೇಕಾದಾಗ ಯಾರು ಬಂದಿದೀರಿ? ಈ ಹತ್ತು ವರ್ಷದಲ್ಲಿ ಇದೀಯಾ? ಇಲ್ಲವಾ? ಎಂದು ಯಾರೂ ಕೇಳಿಲ್ಲ. ಸುಮ್ಮನೇ ರೇಗಿಸಬೇಡ ಹೋಗು. ತಾತನ ವಿರುದ್ಧ ಮಾತನಾಡಿ, ನನ್ನ ಪರವಹಿಸುವ ಧೈರ್ಯ ವಿರಲಿಲ್ಲ ಯಾರಿಗೂ. ಸುಮ್ಮನೇ ಕೈ ಕಟ್ಟಿ ನಿಂತಿದ್ದೀರಿ...."

"ಆಗ ನಾವೆಲ್ಲಾ ಚಿಕ್ಕವರು, ನಮಗೂ ಏನೂ ತಿಳೀದು. ಆಮೇಲೆ ಈ ಊರನ್ನೇ ಬಿಟ್ಟು ಹೋದವನು ನಾನು. ನಾವೆಂದೂ ತಾತನಿಗೆ ಹೆದರಿ ನಿನ್ನನ್ನು ದೂರ ಮಾಡಿಲ್ಲ. ಊರಿಗೆ ಬಂದಾಗಲೆಲ್ಲಾ ಬರ್ತೀನೋ ಇಲ್ಲವೋ...."

"ಈಗ ಮದುವೆಗೆ ಕರೆಯೋಕ್ಕೆ ಬಂದಿದೀಯಾ.... ಮುಂದಿನ ವರ್ಷ, ಮಗುವಿನ ನಾಮಕರಣ ಅಂತ ಕರೆಯಕ್ಕೆ ಬರ್ತೀಯ ಅಷ್ಟೆ, ಇಲ್ಲದಿದ್ದರೆ ನನ್ನ ನೆನಪು ನಿನಗಿರುವುದಿಲ್ಲ."

"ನನ್ನ ಬಗ್ಗೆ ಬೇಡ. ಅಮ್ಮನ ಬಗ್ಗೆ ಯೋಚಿಸು. ದಿನ ಬೆಳಗೂ ನಿನ್ನನ್ನೇ ನೆನೆದು ಕೊರಗ್ತಾಳೆ. ಅವಳಿಗೋಸ್ಕವಾದರೂ ಬಾ. ಇಲ್ಲಿಗೆ ಬರಲು ಇಷ್ಟವಿಲ್ಲದಿದ್ದರೆ, ಬೆಂಗಳೂರಿನ ಮದುವೆಗೆ ಬಾ"

"ಈಗ, ಗದ್ದೆ ಕೆಲಸ, ತೋಟದ ಕೆಲಸವನ್ನು ಬಿಟ್ಟು, ಬರೋಕ್ಕೆ ಆಗುಲ್ಲ. ಲಕ್ಷ್ಮಿ ಮಕ್ಕಳು ಬರುವುದಾದರೆ ಶಾಂತಿ ಜತೆ ಕಳಿಸ್ತೀನಿ" ಆನಂದ ಒರಟಾಗಿ ನುಡಿದಾಗ ಮುಕುಂದ ನೊಂದುಕೊಂಡ. ಹೆಂಡತಿ ಮಕ್ಕಳನ್ನು ಕಳಿಸುವುದಿಲ್ಲವೆನ್ನುವುದು ತಿಳಿದದ್ದೆ. ಇವನಿಗೆ ಬೇಡವಾದ ಮೇಲೆ ಅವರಿಗೆ ಯಾವ ನೆಂಟಸ್ತಿಕೆ? ಅಷ್ಟು ಹೊತ್ತು ಮಾತನಾಡಿಯೂ ಅವನನ್ನು ಒಪ್ಪಿಸಲು ಆಗದಿದ್ದಾಗ ನಿರಾಶೆಯಿಂದ ಎದ್ದು ಹೊರಟ.

ಅವನ ಮುಖ ನೋಡಿಯೇ ತಾಯಿ ಫಲಿತಾಂಶ ತಿಳಿದಳು. ಪೆಚ್ಚಾದಳು.

ಮಾರನೇ ದಿನ ದೇವರ ಸಮಾರಾಧನೆಯಾದ್ದರಿಂದ ಮನೆ ಮುಂದೆ ಚಪ್ಪರ ಹಾಕಿಸಿಯಾಗಿತ್ತು.

ಬೆಳಗಿನ ಝಾವದಲ್ಲಿ ಓಲಗದವರು ಬಂದು ಎಬ್ಬಿಸಿದರು. ಮದುಮಗನಿಗೆ, ಹಸೆ ಮೇಲೆ ಕೂರುವವರಿಗೆ ಎಣ್ಣೆ ಶಾಸ್ತ್ರವಾಯಿತು. ನಂತರ ಹೋಮ, ಚಪ್ಪರದ ಪೂಜೆ ಒಂದೊಂದಾಗಿ ಸಾಂಗವಾಗಿ ನೆರವೇರಿತು. ಹತ್ತಿರದ ನೆಂಟರು, ಸ್ನೇಹಿತರು, ಹಳ್ಳಿಯ ಆಳುಕಾಳುಗಳೆಲ್ಲ ಊಟಕ್ಕೆ ಆಹ್ವಾನಿತರಾಗಿದ್ದರು. ಊಟಕ್ಕೆ ಎಲೆ ಹಾಕುವ ಸಮಯಕ್ಕೆ ಶಾಂತಿ ಮಕ್ಕಳೊಂದಿಗೆ ಬಂದಿಳಿದಳು. ಎಲ್ಲರಿಗೂ ಆಶ್ಚರ್ಯ, ಆನಂದ.

"ಸಧ್ಯ ಬಂದೆಯಲ್ಲ. ನೀನೂ ಕೈ ಕೊಡ್ತೀಯೇನೋ ಅಂದ್ಕೊಂಡಿದ್ದೆ."

"ರಾತ್ರಿ, ಆನಂದ ಬಂದು ಜಗಳವಾಡಿದ. ನೀನು ಹೋಗದಿದ್ದರೆ ನನ್ನನ್ನು ಆಕ್ಷೇಪಣೆ ಮಾಡ್ತಾರೆ ಅಂತ ಜೋರು ಮಾಡಿದ. ರಾಜೇಂದ್ರ ಬಂದು ಹೇಳಿದ್ದರೂ ನಾನು ಅನುಮಾನಿಸುತ್ತಿದ್ದೆ."

ನಿನ್ನ ಯಜಮಾನರು ಬರಲಿಲ್ಲವಲ್ಲ.

"ಅವರಿಗೆ ರಜವಿಲ್ಲ. ಬೆಂಗಳೂರಿಗೆ ಒಂದು ದಿನದ ಮಟ್ಟಿಗೆ ಬರುತ್ತಾರೆ."

"ಅಂತೂ ನೀನಾದ್ರೂ ಬಂದೆಯಲ್ಲ. ತಂದೆ, ತಾಯಿ, ಚಿಕ್ಕಪ್ಪ, ಚಿಕ್ಕಮ್ಮ ವಿಶ್ವಾಸದಿಂದ ಅವಳನ್ನು ಸುತ್ತಿದರು. ಬಾಣಂತನಕ್ಕೂ ಬರದೇ ದೂರವಾಗಿದ್ದವಳು. ಮಕ್ಕಳು ತಾಯಿಯನ್ನು ಅಂಟಿಕೊಂಡು ಕುಳಿತವು. ಹತ್ತು ವರ್ಷದ ಮಾತುಗಳನ್ನು ಆಡಬೇಕಾಗಿತ್ತು. ಎಲ್ಲರಿಗೂ ಮಾತಿನ ಸಡಗರ.

ಶಾಂತಿ ತಾತನ್ನ ಮಾತನಾಡಿಸಿ, ಮಕ್ಕಳನ್ನು ಪರಿಚಯಿಸಿದಳು. ತಾತ ಆದರವನ್ನು ತೋರಿಸಲಿಲ್ಲ. ಅನಾದರಣೆಯನ್ನು ಮಾಡಲಿಲ್ಲ. ಹೆಚ್ಚಿಗೆ ಮಾತನಾಡಿಸಲಿಲ್ಲ. ಅವಳಿಗೆ ಬೇಸರವೆನಿಸಿತು.

"ತಾತ ಇನ್ನೂ ಬದಲಾಯಿಸಿಲ್ಲ. ಆನಂದನ ಮೇಲಿನ ಕೋಪವನ್ನು ನನ್ನ ಮೇಲೆ ತೋರಿಸುತ್ತಿದ್ದಾರೆ." ಸರಸ್ವತಿಯೊಂದಿಗೆ ನುಡಿದಳು.

"ನಿನಗೇನಾಗಬೇಕು ಬಿಡು. ನಿನ್ನ ಪಾಡಿಗೆ ನೀನಿದೀಯ. ದಿನನಿತ್ಯ ಅವರ ಹತ್ತಿರ ಏಗ್ಬೇಕಿಲ್ಲ. ನಮ್ಮ ಪಾಡು ಹೇಗಿರಬೇಕು ಯೋಚಿಸು" ವಿಮಲ ನಕ್ಕಳು.

"ನಿನಗೆ ಮೊದಲು ಮದುವೆಯಾಗುತ್ತೆ ಅಂದ್ಕೊಂಡಿದ್ದೆ ನಾನು."

ಮುಕುಂದ ಸುಕನ್ಯರ ಪ್ರಣಯದ ಕಥೆಯನ್ನು ತಿಳಿಸಿದಳು ಸರಸ್ವತಿ. "ಇಲ್ಲಿದ್ದರೆ ವಿಮಲಗೇ ಮೊದಲು ಮಾಡಬಹುದಾಗಿತ್ತು. ಅವನು ತುಂಬಾ ಮುಂದು

ವರೆದುಬಿಟ್ಟಿದಾನೆ. ತಾತನ್ನ ಒಪ್ಪಿಸಿದ್ದೇ ಒಂದು ಯಜ್ಞ."

"ತಾತ ಒಪ್ಪಿದ್ದು ಹೆಚ್ಚು. ಅವರೇನೂ ಯಾರಿಗೂ ಅಯ್ಯೋ ಅನ್ನೋಲ್ಲವಲ್ಲ"

"ಈಗಲೂ ಅನ್ನೋಲ್ಲ. ಮುಕುಂದನ ಅತ್ತೆ ಮನೆಯವರು ಅನುಕೂಲವಾಗಿಲ್ಲ ಅಂತ ತಿಳಿದರೂ, ಒಂದು ದೊಡ್ಡ ಲಿಸ್ಟನ್ನೇ ಕೊಟ್ಟಿದಾರೆ. ಎಲ್ಲಾ ಯಾತಕ್ಕೆ? ಯಾರಿಗೆ ಬೇಕಾಗಿದೆ? ಮದುವೆಗೆ ಒಪ್ಪಿದಾರಲ್ಲ ಅಂತ ಸುಮ್ಮನಾದೆವು. ಹೋಗಲಿ ಬಿಡು. ಬೇರೆ ಮಾತನಾಡು." ಸರಸ್ವತಿ ಬೇಸರದಿಂದ ನುಡಿದಳು.

"ಮನೆಯವರೆಲ್ಲಾ ಸೇರಿದೀವಿ. ಅವನೊಬ್ಬ ಇಲ್ಲ" ತಾಯಿ ಸಂಕಟ ಪಟ್ಟಳು.

"ಅವನೂ ಮತ್ತೆ ಬಂದು ಸೇರುವ ಕಾಲ ಬರುತ್ತೆ, ಚಿಂತಿಸಬೇಡ" ಶಾಂತಿ ತಾಯಿಗೆ ಸಮಾಧಾನ ಹೇಳಿದಳು.

"ನಿನ್ನ ಬಾಯ ಹರಕೆಗಳಿಂದ ಹಾಗಾಗಲಿ. ಊರಿನ ಎಲ್ಲಾ ದೇವರಿಗೂ ಅಭಿಷೇಕ ಮಾಡಿಸ್ತೀನಿ."

"ದೇವರು ಅಭಿಷೇಕದ ಆಸೆಗೆ ಆನಂದನ್ನ ಇಲ್ಲಿಗೆ ಕರೆಸಬೇಕು. ತಾತನ್ನ ಎಲ್ಲಿಗೆ ಕಳಿಸೋಣ ಆಗ?" ರಾಜೇಂದ್ರ ಕುಹಕವಾಗಿ ಮಾತನಾಡಿದ.

"ಇವನೊಬ್ಬ ಎಲ್ಲರನ್ನು ಮೀರಿಸಿದವನು. ಜವಾಬ್ದಾರಿಯಿಲ್ಲ. ತಿಳುವಳಿಕೆ ಇಲ್ಲ." ಶಾಂತಿ ರೇಗಿಸಿದಳು.

"ಇವನಿಗೂ ಒಂದು ಮದುವೆ ಮಾಡಿಬಿಡಿ. ಇವನ ಹೆಂಡತಿ ಜವಾಬ್ದಾರೀನೂ ವಹಿಸಿಕೊಳ್ತಾಳೆ. ತಿಳುವಳಿಕೇನೂ ಹೇಳ್ತಾಳೆ" ಮಧು ನುಡಿದಳು.

"ಯಾರು ಕಾದು ಕೂತಿದಾರೆ ಇವನನ್ನ ಮದುವೆಯಾಗೋಕೆ?" ಎಲ್ಲರೂ ನಕ್ಕಾಗ ರಾಜೇಂದ್ರ ಎದ್ದು ಹೋದ. ಎಲ್ಲರೂ ಸೀರೆ ಬಟ್ಟೆ, ಒಡವೆಗಳನ್ನು ಜೋಡಿಸಿ ಪೆಟ್ಟಿಗೆಯಲ್ಲಿಡುವ ಕೆಲಸದಲ್ಲಿ, ಸಡಗರದಿಂದ ಒಬ್ಬರಿಗೊಬ್ಬರು ನೆರವಾದರು.

ಮಾರನೇ ದಿನ ಎಲ್ಲರಿಗೂ ಬಿಡುವು. ಅದರ ಮಾರನೇ ದಿನ ಬೆಳಿಗ್ಗೆ ತಿಂಡಿ ಕಾಫಿ ಮುಗಿಸಿ, ಮಧ್ಯಾಹ್ನ ಬಸ್ಸಿನಲ್ಲಿ ತಿನ್ನಲು ಹುಳಿಯನ್ನ ಮೊಸರನ್ನವನ್ನು ಕಲಸಿಟ್ಟು ಕೊಂಡರು. ಪ್ರೈವೇಟ್ ಬಸ್ಸೊಂದನ್ನು ಗೊತ್ತು ಮಾಡಿದ್ದರು. ಮನೆ ಬಾಗಿಲಿಗೆ ಬಸ್ಸು ಬಂದು ನಿಂತಿತ್ತು.

ಹೊರಡುವ ಮೊದಲು, ಚಿಕ್ಕಮ್ಮ, ಶಾಂತಿ ಮದುಮಗನಿಗೆ ಆರತಿ ಎತ್ತಿ ದೃಷ್ಟಿ ನೀವಾಳಿಸಿ ತೆಗೆದರು. ಮುಕುಂದ ಹಾಸ್ಯವಾಗಿ ನಕ್ಕ.

ನಗಬೇಡವ್ಪೋ, ಎಷ್ಟು ಜನರ ಕಣ್ಣು ಬಿದ್ದಿರುತ್ತೋ, ಹತ್ತು ವರ್ಷಗಳ ನಂತರ ಮನೆಯಲ್ಲಿ ನಡೆಯುತ್ತಿರುವ ಮಂಗಳ ಕಾರ್ಯ. ಸುಸೂತ್ರವಾಗಿ ನೆರವೇರಿದರೆ ಸಾಕು. ನಡುಮನೆಯಲ್ಲಿದ್ದ ಗಣಪತಿಯ ಫೋಟೋಗೆ ಕೈ ಮುಗಿದಳು.

"ನಮ್ಮ ಮದುವೆ ಎಂದೋ ಆಗಿ ಹೋಗಿದೆ ಚಿಕ್ಕಮ್ಮ" ಮುಕುಂದ ತಮಾಷೆ ಮಾಡಿದ.

"ಷ್! ಮೆಲ್ಲಗೆ... ಯಾರಿಗಾದರೂ ಕೇಳಿಸೀತು. ಆಡಿಕೋತಾರೆ...."

ಇದರಲ್ಲಿ ಆಡಿಕೊಳ್ಳುವುದು ಏನಿದೆ ಎಂದು ಅವನಿಗೆ ಅರ್ಥವಾಗಲಿಲ್ಲ ಸುಮ್ಮನಾದ. ಎಲ್ಲರೂ ಬಸ್ಸನ್ನು ಹತ್ತಿದರು. ಬಸ್ಸು ಬೆಂಗಳೂರಿನ ದಾರಿಯಲ್ಲಿ ಓಡಿತು.

ಬಸ್ಸು ಬೆಂಗಳೂರನ್ನ ಸೇರಿದಾಗ ಕತ್ತಲಾಗುತ್ತಾ ಬಂದಿತ್ತು. ಸೀದಾ ಛತ್ರಕ್ಕೇ ಬಂದರು. ಮದುಮಗನಿಗೆ ಆರತಿಯನ್ನೆತ್ತಿ, ಬೀಗರನ್ನ ಉಪಚಾರದೊಂದಿಗೆ ಬರ ಮಾಡಿಕೊಂಡರು. ಆಯಾಸ ಪರಿಹಾರಾರ್ಥವಾಗಿ ಎಲ್ಲರಿಗೂ ಬಿಸಿಕಾಫಿ, ತಿಂಡಿಯನ್ನು ಕೊಟ್ಟು ಉಪಚರಿಸಿದರು.

ನಂತರ ವರಪೂಜೆಯ ಕಲಾಪ. ಎಲ್ಲಾ ತಾತನ ಇಷ್ಟದಂತೆಯೇ ನೆರವೇರಿತು. ಸುಭದ್ರಮ್ಮ ಯಾವುದಕ್ಕೂ ಕೊರತೆಯಿಲ್ಲದಂತೆ ಎಲ್ಲಾ ಸಿದ್ಧತೆಗಳನ್ನು ಮಾಡಿದ್ದಳು.

ಮುಕುಂದನ ಚಿಕ್ಕಪ್ಪ ಹಳ್ಳಿಯಿಂದ ಹೊರಡುವಾಗಲೇ, ಎರಡು ಮೂಟೆ ಸಣ್ಣಕ್ಕಿ, ಎರಡು ನೂರು ತೆಂಗಿನಕಾಯಿ, ನಾಲ್ಕು ಪಿಂಡಿ ಬೆಲ್ಲ, ನಾಲ್ಕು ಬಾಳೆಹಣ್ಣಿನ ಗೊನೆಗಳು, ಹತ್ತಾರು ಕಟ್ಟು ಬಾಳೆ ಎಲೆ, ಎರಡು ಕೇಜಿಯಷ್ಟು ಬಣ್ಣ ಕಟ್ಟಿದ ಪುಡಿ ಅಡಿಕೆ, ಆರು ಕಟ್ಟು ವೀಳ್ಯದೆಲೆ ಎಲ್ಲವನ್ನೂ ಬಸ್ಸಿನ ಟಾಪ್‌ಗೆ ಹಾಕಿಸಿದ್ದರು. ಅದು ಸುರೇಶನಿಗೆ ಮಾತ್ರ ತಿಳಿಯಿತು. ಈಗಾಗಲೇ ಅಡಿಗೆಯವರಿಗೆ ಕಾಂಟ್ರಾಕ್ಟ್ ಕೊಟ್ಟು ಬಿಟ್ಟಿದ್ದರಿಂದ, ಅವನು ಅಡ್ವಾನ್ಸ್ ಹಣದೊಂದಿಗೆ ಅಡ್ಜಸ್ಟ್ ಮಾಡುವುದಾಗಿ ಹೇಳಿದ.

ಸಡಗರದಿಂದ ಸರಭರನೆ ಓಡಾಡುತ್ತಿದ್ದ ಸರಳೆಯನ್ನು ಸುರೇಶ ಆಗಾಗ್ಗೆ ನೋಡುತ್ತಲೇ ಇದ್ದ. ಮದುವೆಯ ಸಿದ್ಧತೆಗೆ ಸಹಾಯ ಮಾಡುವ ಅವಕಾಶ ಸಿಕ್ಕಿ ಅವನು ಸರಳಂಗೆ ಹೆಚ್ಚಿನ ಪರಿಚಿತನಾಗಿದ್ದ. ಆದರೆ ಯಾವುದೇ ಸಲುಗೆ ಇರಲಿಲ್ಲ. ಸರಳ ಯಾವ ಸಂಕೋಚವನ್ನು ನಟಿಸದೇ ಅವನೊಡನೆ ಮಾತನಾಡುತ್ತಿದ್ದುದು ಅವನಲ್ಲಿ ಹೊಸ ಆಸೆಗಳನ್ನು ಹುಟ್ಟಿಸಿತ್ತು.

ಬಸ್ಸಿನಿಂದ ಇಳಿದಾಗಿನಿಂದ ರಾಜೇಂದ್ರ ಹದ್ದಿನಂತೆ ಸರಳೆಯನ್ನೇ ಗಮನಿಸುತ್ತಿದ್ದ. ಸರಳ ಇದಾವುದರ ಗಮನವಿಲ್ಲದೇ ತನ್ನ ಕೆಲಸ ಕಾರ್ಯ, ಓಡಾಟಗಳಲ್ಲಿ ಮಗ್ನಳಾಗಿದ್ದಳು.

ಸುರೇಶ ಸಹಾಯ ಮಾಡುವ ನೆವದಲ್ಲಿ ಸರಳನ ಜತೆ ಜತೆಯಲ್ಲಿಯೇ ಇರುವುದನ್ನು ಗುರುತಿಸಿ, ರಾಜೇಂದ್ರ ತಾನಾಗಿಯೇ ಅವಳ ಬಳಿಗೆ ಬಂದ.

"ನನ್ನಿಂದ ಏನಾದ್ರೂ ಸಹಾಯವಾಗ ಬೇಕಿದ್ರೆ ಕೇಳಿ ಮಾಡಿಕೊಡ್ತೀನಿ"

"ಥ್ಯಾಂಕ್ಸ್. ಏನೂ ಬೇಡ. ನೀವು ಗಂಡಿನವರು. ನಾವು ನಿಮ್ಮಿಂದ ಕೆಲಸ ಮಾಡಿಸಬಾರದು."

ಅವೆಲ್ಲಾ ಹಳೇಕಾಲದ ಮಾತು. ಈಗ ಅದರಲ್ಲಿ ಭೇದವಿಲ್ಲ. ಅಲ್ಲದೇ ನಾನು ಹಾಗೆಲ್ಲಾ ಎಲ್ಲರಿಗೂ ಈ ಮಾತನ್ನು ಹೇಳುವುದಿಲ್ಲ.

"ನಿಮ್ಮ ಮುಖ ನೋಡಿದರೆ ಗೊತ್ತಾಗುತ್ತೆ" ಎಂದುಕೊಂಡ ಸುರೇಶ

"ಸಧ್ಯಕ್ಕೆ ನಾವೆಲ್ಲಾ ನೋಡಿಕೊಳ್ಳುತ್ತಿದೀವಿ. ನಿಮ್ಮಿಂದ ಏನಾದರೂ ಆಗಬೇಕಾಗಿದ್ದರೆ ನಾನೇ ಬಂದು ತಿಳಿಸ್ತೀನಿ" ರಾಜೇಂದ್ರ ಪೆಚ್ಚಾಗಿ ಹಿಂತಿರುಗಿದ.

ಶಾಂತಿ ಸರಳನ್ನ ನೋಡಿಯೇ ನೋಡಿದಳು. "ಮುಕುಂದನ ಹೆಂಡತಿಯಾಗೋಳಿಗಿಂತ ಇವಳೇ ಚೆನ್ನಾಗಿದ್ದಾಳೆ. ಅಲ್ವೇನೆ? ನಮ್ಮ ರಾಜೇಂದ್ರುಂಗೆ ಯಾಕೆ ವಿಚಾರಿಸಬಾರದು ಇವಳನ್ನು?"

"ಚಿಕ್ಕಮ್ಮ ಅವತ್ತೇ ಕೇಳಿದ್ದಳು. ಮುಕುಂದ ಹೀಯಾಳಿಸಿ ಬಿಟ್ಟ. ಇಂಥ ಮಂಗಂಗೇಕೆ ಅಂಥ ಮಾಣಿಕ್ಯ? ಅವಳು ಬ್ಯಾಂಕಿನಲ್ಲಿ ಕೆಲಸದಲ್ಲಿದಾಳೆ, ಈ ಹಳ್ಳಿ ಯುವನನ್ನು ಏಕೆ ಮದುವೆ ಆಗ್ತಾಳೆ? ಅಂತ."

"ಇವನೇ ಇವಳನ್ನು ಲವ್ ಮಾಡಬಹುದಾಗಿತ್ತು" ವಿಮಲ ನಕ್ಕಳು.

ವರಪೂಜೆಯ ನಂತರ, ಬಿಸಿ ಅಡಿಗೆಯ ಭಾರಿ ಊಟವನ್ನು ಉಪಚಾರಗಳೊಂದಿಗೆ ಬಡಿಸಿದರು. ಬೀಗರು ಸಂತೃಪ್ತರಾಗಿ ಉಂಡು, ಆರಾಮವಾಗಿ ಮಲಗಿದರು. ಅರ್ಧರಾತ್ರಿಯವರೆಗೂ ಮಾತುಕತೆಗಳು ಕೇಳಿಬರುತ್ತಿದ್ದವು.

ಬೆಳಿಗ್ಗೆ ಬೇಗನೆ ಎಲ್ಲಾ ಕಲಾಪಗಳು ಪ್ರಾರಂಭವಾದವು. ಕಾಫಿ, ಸ್ನಾನ, ತಿಂಡಿ ಒಂದೊಂದರ ನಂತರ ಇನ್ನೊಂದು. ಕರೆದಿದ್ದ ನೆಂಟರಿಷ್ಟರೆಲ್ಲಾ ಬರತೊಡಗಿದರು. ಮುಕುಂದನ ಸಹೋದ್ಯೋಗಿಗಳು, ಸ್ನೇಹಿತರು, ಸುಕನ್ಯಳ ಗೆಳತಿಯರು, ಸರಳನ ಬ್ಯಾಂಕಿನವರು, ನೆಂಟರು, ಪರಿಚಯದವರು.... ಇತ್ಯಾದಿ.

ಸುಮುಹೂರ್ತದಲ್ಲಿ ಸುಕನ್ಯ ಮುಕುಂದ ಸತಿಪತಿಗಳಾದರು. ಆಹ್ವಾನಿತರು, ಉಡುಗೊರೆಗಳನ್ನಿತ್ತು ಹಾರೈಸಿ, ಊಟ ಮುಗಿಸಿ, ಫಲ ತಾಂಬೂಲಗಳನ್ನು ತೆಗೆದು ಕೊಂಡು ಹೊರಟರು. ಹಳ್ಳಿಯ ಸಂಪ್ರದಾಯವೊಂದನ್ನೂ ಬಿಡದೇ ಎಲ್ಲವನ್ನು ಮುಗಿಸಿದರು. ಕೂತು, ಕೂತು ಮದುಮಕ್ಕಳಿಗೆ ಬೇಜಾರಾಗಿತ್ತು. ಮುಕುಂದ ಸಿಡುಕ ತೊಡಗಿದ.

ಸಾಯಂಕಾಲ ರಿಸೆಪ್ಷನ್ ಬೇಡ ಎಂದು ಮುಕುಂದ ಒಪ್ಪಿ ಹೇಳಿದ್ದರೂ ಬರುವವರು ಬಂದಿದ್ದರು.... ಮತ್ತೆ ರಾತ್ರಿಗೆ ಭಾರಿ ಊಟ. ತಾತಂಗೆ ಏನೋ ಕೊರತೆ ಎನಿಸಿತ್ತು. ಆದರೆ ಮದುವೆ ಮುಗಿದಿತ್ತು. ಮುಕುಂದನೇ ಬೇಡವೆಂದಿದಾನೆ ಎನ್ನುತ್ತಲು ಸುಮ್ಮನಾಗಿದ್ದರು. ಎಲ್ಲರೂ ಬೆಳಿಗ್ಗೆನೇ ಬಂದಿದ್ದರು, ಇನ್ನು ನಮ್ಮವರೆಲ್ಲ ನಮ್ಮ ಜತೆಗೆ ಇದಾರೆ ಇನ್ನೇನು?

ಮದು ಮಕ್ಕಳ ಆರತಕ್ಷತೆ, ಒಂದು ಸಂಗೀತದ ಕಛೇರಿ, ಫಲ ತಾಂಬೂಲದ ಖರ್ಚು ಉಳಿಸಲು ಮಾಡಿರುವ ಉಪಾಯ ಎಂದೇ ಭಾವಿಸಿ ತಮ್ಮ ಅಸಹನೆಯನ್ನು ವ್ಯಕ್ತಪಡಿಸಿದರೂ, ಅದು ಅವರ ಹಳ್ಳಿಯ ಮನೆಯಲ್ಲವಾದ್ದರಿಂದ ಯಾರೂ ಗಮನಕ್ಕೆ ತಂದುಕೊಳ್ಳಲಿಲ್ಲ.

ಎಲ್ಲರಿಗೂ ಸೊಗಸಾದ ಉಡುಗೊರೆ ದೊರಕಿತ್ತು. ತಾತ ತಮ್ಮ ಉಡುಗೊರೆಗೆ ಸಂತುಷ್ಟರಾದರು. ಯಾವ ಆಕ್ಷೇಪವನ್ನೂ ಎತ್ತಲಿಲ್ಲ. ಸುಭದ್ರಮ್ಮ ಯಾವ ಮಾತಿಗೂ ಅವಕಾಶ ಕೊಡದಂತೆ, ಬೀಗಿತ್ತಿಯರಿಗೆ ಒಳ್ಳೆಯ ಸೀರೆ, ಮೂರು ಜನ ಹೆಣ್ಣು ಮಕ್ಕಳಿಗೂ ಸೀರೆ, ಗಂಡಸರಿಗೆ ಒಳ್ಳೆಯ ಒಂದು ಜತೆ ಪಂಚೆ, ಯಾರಿಗೂ ಅಸಮಾಧಾನವಾಗಿರಲಿಲ್ಲ.

ಬೆಳಿಗ್ಗೆಯೇ ಹಳ್ಳಿಗೆ ವಾಪಸ್ಸು ಮದುಮಕ್ಕಳೊಡನೆ ಹೊರಡುವುದೆಂದು ನಿರ್ಧಾರವಾಗಿತ್ತು. ಮುಕುಂದನ ತಂದೆ ತಾಯಿ ಅಕ್ಷತೆಯನ್ನಿತ್ತು. ಸುಭದ್ರಮ್ಮನ ಬಳಗದವರನ್ನೆಲ್ಲಾ ಹಳ್ಳಿಗೆ ಆಹ್ವಾನಿಸಿದರು. "ಹಳ್ಳೀಲಿ ಬೀಗರೌತಣವನ್ನು ಇಟ್ಟು ಕೊಳ್ತಿದೀವಿ. ದಯಮಾಡಿ ನೀವುಗಳೆಲ್ಲರೂ ಬರಬೇಕು." ಸುರೇಶನ ತಂದೆ ತಾಯಿ ಗಳಿಗೂ ಆಹ್ವಾನ ಸಿಕ್ಕಿತು.

ಮಾರನೇ ಬೆಳಿಗ್ಗೆ ಹೊತ್ತಿಗೆ ಊಟ ಮುಗಿಸಿ ಬೀಗರು ಹೊರಟರು. ಮತ್ತೊಮ್ಮೆ ಎಲ್ಲರಿಗೂ ಫಲ ತಾಂಬೂಲವನ್ನು ಕೊಟ್ಟರು. ಸುಕನ್ಯಳ ಜತೆಗೆಂದು ಇನ್ಯಾರೂ ಹೊರಡಲಿಲ್ಲ. ಮೊದಲಿನಿಂದ ಪರಿಚಯಸ್ಥ, ಹೊಸಬನೇನಲ್ಲ, ಮುಕುಂದನಿದಾನಲ್ಲ

ಜತೆಗೆ ಎಂದು ಸುಮ್ಮನಾದರು. ಸುಕನ್ಯ, ಹಳ್ಳಿಗೆ ಹೊರಡಲು ಬೇಸರವನ್ನು ತೋರಿಸದೇ ಗೆಲುವಾಗಿದ್ದಳು. ಅಲ್ಲದೇ ಒಂದೆರಡು ದಿನ ತಾನೇ, ಅಮ್ಮನ ಜತೆಯೇ ವಾಪಸ್ಸು ಬಂದರಾಯ್ತು ಎಂದು ಆಲೋಚಿಸಿದ್ದಳು.

ತೀರ್ಥಹಳ್ಳಿ ತಲುಪಿದಾಗ ಸಾಯಂಕಾಲ ಕಳೆದಿತ್ತು. ಪದ್ಧತಿಯ ಪ್ರಕಾರ ಮದು ಮಕ್ಕಳಿಗೆ ಕದಲಾರತಿ ಎತ್ತಿ ಒಳ ಬರಮಾಡಿಕೊಂಡರು. ತಕ್ಷಣವೇ ಎಲ್ಲರಿಗೂ ಬಿಸಿ ಬಿಸಿ ಕಾಫಿ ಬಂತು. ಸುಕನ್ಯ ಗಂಡನ ಮಗ್ಗುಲನ್ನು ಬಿಟ್ಟು ಅಲ್ಲಾಡಲಿಲ್ಲ. ಇಬ್ಬರೂ ಕೆಳದನಿಯಲ್ಲಿ ಏನನ್ನೋ ಮಾತನಾಡುತ್ತಿದ್ದರು.

ಏನಿರುತ್ತೆ ಅಷ್ಟೊಂದು ಮಾತು? ಎಂದು ಓಡಾಡುತ್ತಿದ್ದವರೆಲ್ಲಾ ಅವರನ್ನು ನೋಡಿ ತಮ್ಮಲ್ಲೇ ಅಂದುಕೊಂಡು, ಕಂಡರೂ ಕಾಣದಂತೆ ಓಡಾಡಿಕೊಂಡಿದ್ದರು.

ಗಸಗಸೆ ಪಾಯಸದೊಡನೆ, ಎಲ್ಲರಿಗೂ ಬಿಸಿ ಬಿಸಿ ಊಟ ಸಿದ್ಧವಾಯಿತು. ಊಟ ರುಚಿಯಾಗಿದ್ದರು,ಸುಕನ್ಯ ಸಗಣಿ ವಾಸನೆ ಎಂದು ಮುಖ ಸಿಂಡರಿಸಿದಳು. ಕೈ ತೊಳೆದವಳೇ ರೂಮು ಸೇರಿದಳು. ಎಲ್ಲರೂ ಮುಖ ಮುಖ ನೋಡಿಕೊಂಡರು.

"ತೀರಾ ಸೂಕ್ಷ್ಮ ಕಣೋ ನಿನ್ನ ಹೆಂಡತಿ. ಹಳ್ಳೀಲಿ ಹೇಗಿರ್ತಾಳೆ ಮತ್ತೆ?" ಶಾಂತಿ ಕೇಳಿದಳು.

"ಅವಳೇನು ಇಲ್ಲೇ ಇರಬೇಕೆ?" ಚಿಕ್ಕಮ್ಮ ನುಡಿದರು.

ಮುಕುಂದನಿಗೆ ಬೇಸರವೆನಿಸಿತು. ಸುಕನ್ಯ ತನ್ನ ಮನೆಯವರ ಜತೆ ಹೊಂದಿ ಕೊಳ್ಳುವುದಿಲ್ಲವೆಂದು ಅರ್ಥವಾಗಿತ್ತು. ಆದರೆ ಅವನು ಏನೂ ಮಾಡಲಾರ. ಅವನು ಎದ್ದು ರೂಮಿಗೆ ಹೋದ. "ಹುಂ. ಇವನೂ ರೂಮು ಸೇರಿದ" ಶಾಂತಿ ಮತ್ತೆ ನಕ್ಕಳು.

"ಹೊಸದಾಗಿ ಮದುವೆ ಆದವರು, ಹಾಗೆ ಕಣೇ.... ಈ ಹುಡುಗೀರ ಎದುರಿಗೆ ನೀನು ಏನೇನೋ ಆಡಬೇಡ ಸುಮ್ಮನಿರು" ಜಾನಕಮ್ಮ ಗದರಿದಳು.

ವಿಮಲ, ಮಧು ಯೋಚಿಸುತ್ತಿದ್ದುದೇ ಬೇರೆ. ಸರಳ ನಮ್ಮ ಅತ್ತಿಗೆ ಆಗಿದ್ದರೆ, ಇಲ್ಲಿಯೇ ನಮ್ಮಗಳ ಜತೆ ಕುಳಿತು ಹರಟೆ ಹೊಡೆಯುತ್ತಿದ್ದಳು. ಸುಕನ್ಯ ಹಾಗಲ್ಲವೇ ಅಲ್ಲ ಎನ್ನುವುದು ತಿಳಿದಿತ್ತು.

ಸುಕನ್ಯ ಯಾರಿಗೂ ಕೇರ್ ಮಾಡಲಿಲ್ಲ. ತನ್ನ ಪಾಡಿಗೆ ತಾನಿದ್ದಳು. ಬೆಳಿಗ್ಗೆ ಒಂದು ಸಲ ಬಚ್ಚಲು ಮನೆ ಕೆಲಸ ಮುಗಿಸಿದಳೆಂದರೆ, ಮತ್ತೆ ರಾತ್ರಿಯವರೆಗೂ, ಆ ಕಡೆ ಸುಳಿಯುತ್ತಿರಲಿಲ್ಲ.

ಬೀಗರೌತಣದ ದಿನ ಬೆಳಿಗ್ಗೆ, ಬೆಂಗಳೂರಿನಿಂದ ಸುಕನ್ಯಳ ಮನೆಯವರು, ಎಂಟು ಹತ್ತು ಜನ ಮಾತ್ರ ಬಂದಿದ್ದರು. ಸುಕನ್ಯಳ ಸೋದರ ಮಾವಂದಿರು, ಸುರೇಶನ ತಂದೆ ತಾಯಿ ಮಾತ್ರ ಬಂದಿದ್ದರು. ಸರಳ ತಾನು ಸಾವಿತ್ರಿಯ ಜತೆ ಉಳಿದುಕೊಂಡು, ಸುಭದ್ರಮ್ಮನನ್ನು ಕಳಿಸಿದ್ದಳು. ಆ ರಾತ್ರಿಯೇ ಅವರುಗಳು ಮರು ಪ್ರಯಾಣ ಮಾಡಿದರು. ಅವರುಗಳೊಂದಿಗೆ ಸುಕನ್ಯ ಮುಕುಂದರೂ ಹೊರಟಾಗ ಜಾನಕಮ್ಮನಿಗೆ ಅಚ್ಚರಿ.

"ನಾಡಿದ್ದು ಹನಿಮೂನ್‌ಗೆ ಹೊರಟಿದ್ದೀವಿ. ನಾಳೆ ಸ್ವಲ್ಪ ಬಟ್ಟೆ ಇತ್ಯಾದಿ ಜೋಡಿಸಿಟ್ಟುಕೊಳ್ಳಬೇಕು."

"ಹನಿಮೂನ್‌ಗೆ ಹೋಗಲೇಬೇಕಾ? ಸುಮ್ಮನೇ ಅವಳನ್ನು ಅಲ್ಲಿ ಇಲ್ಲಿ ಸುತ್ತಿಸಬೇಡವೋ.... ಆಯಾಸದಿಂದ ಹೆಚ್ಚು ಕಮ್ಮಿ ಆದರೆ?"

"ಏನು ಆಗುಲ್ಲ. ಅವಳೇನು ಚಿಕ್ಕ ಮಗುವೇ?"

"ನಿನಗದೆಲ್ಲ ಗೊತ್ತಾಗೋಲ್ಲ. ಡಾಕ್ಟರಿಗೆ ತೋರಿಸಿದೀರಿ ತಾನೇ"

"ಯಾಕೆ? ಅವಳಿಗೇನಾಗಿದೆ?"

"ಹುಡುಗಾಟವಾಡಬೇಡ ನಿನಗೆ ಗೊತ್ತಿಲ್ವಾ?"

"ಸರಿಯಾಗಿ ಮಾತನಾಡು. ನನಗೇನೂ ಅರ್ಥವಾಗ್ತಿಲ್ಲ."

"ಸುಕನ್ಯ ಬಸಿರಿ ಅಂತ ನಮಗೆಲ್ಲ ಗೊತ್ತು" ಮುಕುಂದ ನಕ್ಕುಬಿಟ್ಟ.

"ನನಗೇ ಗೊತ್ತಿಲ್ಲದ್ದು ನಿಮಗೆ ಹೇಗೆ ಗೊತ್ತಾಯ್ತು?" ಇನ್ನೂ ಮದುವೆ ಯಾಗಿ ಮೂರು ರಾತ್ರಿ ಕಳೆದಿದೆ.

"ನಿಜ ಹೇಳು ಮುಕುಂದ. ಅವಳು ಸರಿಯಾಗಿದಾಳೆ ತಾನೇ...."

"ಯಾಕೆ? ಅನುಮಾನನಾ? ಕರೆದು ಕೇಳಲಾ?"

"ಥೂ ಭಂಡ..." ಅವರು ಮತ್ತೇನೂ ಕೇಳದೆ ಸುಮ್ಮನಾದರು. ಏನಿದು? ತಾವು ಅಂದುಕೊಂಡಿದ್ದು ಸುಳ್ಳೇ?.... ಅಥವಾ ಮುಕುಂದ ಮುಚ್ಚಿಡುತ್ತಿದಾನೆಯೇ? ಅವನಿಗೂ ಹೀನಾಯವಾಗಿರಬೇಕು. ಹೋಗಲಿ, ಇಂದಲ್ಲ ನಾಳೆ ತಿಳಿದೇ ತಿಳಿ ಯುತ್ತದೆ" ಎಂದುಕೊಂಡು ಸುಮ್ಮನಾದರು. ತಮ್ಮ ಕರ್ತವ್ಯ ಎಂಬಂತೆ ಸುಕನ್ಯಳಿಗೂ ತಿಳುವಳಿಕೆ ಹೇಳಿದರು.

"ನಿನ್ನ ಆರೋಗ್ಯ ಚೆನ್ನಾಗಿ ನೋಡ್ಕೋ... ಹಾಳು ಮೂಳು ತಿಂದು ನಿದ್ದೆಗೆಟ್ಟು ಮೈ ಕೆಡಿಸಿಕೊಳ್ಳಬೇಡ"ಅತ್ತೆಗೇಕೆ ಇಷ್ಟು ಆತಂಕವೆನ್ನುವಂತೆ ಗಂಡನ ಕಡೆ ನೋಡಿದಳು

ಸುಕನ್ಯ. ಮುಕುಂದ ನಕ್ಕ.

"ಅವಳ ಅಮ್ಮ ಅದನ್ನೆಲ್ಲಾ ನೋಡಿಕೊಳ್ತಾರೆ. ನೀನು ಚಿಂತಿಸಬೇಡ" ತಾಯಿಗೆ ತಮಾಷೆಯಾಗಿ ಹೇಳಿದ. ಸುಕನ್ಯ ಕಣ್ಣು ಕಣ್ಣು ಬಿಟ್ಟಳು ಬಸ್ಸಿನಲ್ಲಿ ಕುಳಿತ ಕೂಡಲೇ ಮುಕುಂದ ತಮಾಷೆ ಮಾಡಿದ.

"ಸುಕನ್ಯ, ಜೋಪಾನ ನನ್ನ ಮಗನಿಗೆ ನೋವಾದೀತು"

"ಏಯ್" ಎಂದಳು ಬೆರಗಿನಿಂದ.

"ಅಮ್ಮ, ಚಿಕ್ಕಮ್ಮಾ ಎಲ್ಲರೂ ನೀನು ಪ್ರೆಗ್ನೆಂಟ್ ಅಂತ ತಿಳಿದು ಕೊಂಡಿದಾರೆ." ಮತ್ತೆ ನಕ್ಕ.... ತಮಾಷೆಯಿಂದ.

"ಥೂ... ಇಷ್ಟು ಬೇಗ...."

"ಅದಕ್ಕೆ ಕೇಳಿದೆ. ನನಗೆ ತಿಳಿಯದ ಹಾಗೆ ನೀನೇನಾದರೂ...."

"ಛಟಪ್...ನಾಚಿಕೆಯಾಗುಲ್ಲ ನಿಮಗೆ, ನಿಮ್ಮ ಹೆಂಡತಿ ಬಗ್ಗೆ ಹೀಗೆ ಮಾತ ನಾಡುವುದಕ್ಕೆ?"

"ಸಾರಿ.... ಡಿಯರ್. ತಮಾಷೆ ಮಾಡಿದೆ. ಇನ್ನು ಎರಡು ವರ್ಷ ಯಾವ ಚಿಂತೆಯೂ ಬೇಡ... ಹಾಯಾಗಿರೋಣ"

"ಓ. ಕೇ." ಎಂದರೂ, "ಶುದ್ಧ ಹಳ್ಳೀಜನ..." ಎಂದು ಗೊಣಗಿದಳು.

"ಇನ್ನೂ ಮಗೂನ್ಯಾಕೆ ಹಡೆದಿಲ್ಲ ನಿನ್ನ ಹೆಂಡತಿ ಅಂತ ಇನ್ನೊಂದಾರು ತಿಂಗಳಿಗೆ ಕೇಳಿದರೆ....?ಏನ್ಮಾಡಲಿ?" ಕೆಣಕಿದ.

"ಅಬಾರ್ಷನ್ ಆಯ್ತು ಅಂತ ಹೇಳಿ...." ತಮಾಷೆಯಾಗಿ ಹೇಳಿ ನಕ್ಕಳು.

ಎರಡು ದಿನಗಳ ನಂತರ, ಅವರಿಬ್ಬರೂ ಊಟಿಗೆ ಹೊರಟರು.

ಒಂದು ಮಧ್ಯಾಹ್ನ ಸುರೇಶ ಯಾವುದೋ ಹಣಕಾಸಿನ ಲೆಖ್ಖಾಚಾರ ಹೇಳುವು ದಕ್ಕೆಂದು, ಸರಳೆಯ ಮನೆಗೆ ಬಂದ. ಒಳಗಿನಿಂದ ಸುಶ್ರಾವ್ಯವಾದ ಸಂಗೀತ ಕೇಳಿ ಬರುತ್ತಿತ್ತು. ಯಾರೋ ಎತ್ತರದ ಧ್ವನಿಯಲ್ಲಿ ಸೊಗಸಾಗಿ ಹಾಡುತ್ತಿದ್ದರು. ಹಾಗೇ ಆಲಿಸುತ್ತಾ ನಿಂತ. ಒಳಗಿನಿಂದ ಬಂದ ಸರಳ ಅವನನ್ನು ಕಂಡು ಬಾಗಿಲು ತೆಗೆದು,

"ಯಾವಾಗ ಬಂದ್ರಿ? ಬೆಲ್ ಮಾಡಬಾರದಾಗಿತ್ತಾ?" ಕೇಳಿದಳು.

"ಯಾರೋ ಹಾಡ್ತಾ ಇದ್ದರು. ಹಾಗೇ ಕೇಳ್ತಾ ನಿಂತು ಬಿಟ್ಟೆ..."

ಸರಳ ಒಂದು ಘಳಿಗೆ ಸುಮ್ಮನಾದಳು. ಹಾಡು ಕೇಳಿ ಬರುತ್ತಲೇ ಇತ್ತು. "ಒಳಗೆ ಬನ್ನಿ"ಎಂದು ಕರೆದು ಕೂರಿಸಿದಳು. ಸ್ವಲ್ಪ ಸಮಯದಲ್ಲಿ ಹಾಡುವುದು

ನಿಂತಿತು. ಮನೆಯಿಂದ ಹೊರಗೆ ಯಾರೋ ಹೋದರು. ಸರಳ ಒಳಗಿನಿಂದ ತನ್ನ ಜೊತೆಯಲ್ಲಿ ಸಾವಿತ್ರಿಯನ್ನು ಕರೆತಂದಳು. ಸುರೇಶ ಎದ್ದು ನಿಂತ. ಅವನ ಕಣ್ಣುಗಳು ಹಿಗ್ಗಿನಿಂದ ಅರಳಿದವು.

"ಅರೆ! ಅವಳೇ...ಆ ದಿನ ಕಿಟಕಿಯಲ್ಲಿ ಕಂಡ ಚೆಲುವೆ...." ತನ್ನಲ್ಲೇ ಉದ್ಗಾರವೆತ್ತಿದ.

"ಇವಳು ತನ್ನ ತಂಗಿ ಸಾವಿತ್ರಿ.... ಇವಳೇ ಹಾಡುತ್ತಿದ್ದುದು. ಸಾವಿತ್ರಿ ಇವರು ನಮ್ಮ ಸ್ನೇಹಿತರು ಸುರೇಶ್ ಅಂತ, ಸುಕನ್ಯಳ ಮದುವೆಯಲ್ಲಿ ತುಂಬಾ ಓಡಾಡಿ ನಮಗೆ ಸಹಾಯ ಮಾಡಿದರು."

ಸಾವಿತ್ರಿ ಎತ್ತಲೋ ನೋಡುತ್ತಾ 'ನಮಸ್ಕಾರ' ಎಂದಾಗ ಸುರೇಶ ಮಂಕಾದ. ತಕ್ಷಣ ಅವಳು ದೃಷ್ಟಿಹೀನೆ ಎನ್ನುವುದು ತಿಳಿದು ಅವನ ಮನಸ್ಸು ಚೂರಾಯಿತು.

"ಸಾವಿತ್ರಿ ನೀನು ಹೋಗು" ಸಾವಿತ್ರಿ ಕೈ ಮುಂದೆ ಮಾಡಿ ತಡವರಿಸುತ್ತಾ ಗೋಡೆಯನ್ನಾಧರಿಸಿ ಒಳಗೆ ಹೊರಟು ಹೋದಳು. ಸುರೇಶ ಏನೂ ಮಾತಾಡದೇ ಮತ್ತೆ ಕುಳಿತ.

"ನಿಮ್ಮ ಮನಸ್ಸಿನಲ್ಲಿ ಏನು ಹೋರಾಟ ನಡೀತಿದೆ ಅಂತ ನನಗರ್ಥ ವಾಗುತ್ತಿದೆ. ನೀವು ಸಾವಿತ್ರಿ ಬಗ್ಗೆನೇ ಯೋಚಿಸ್ತಿದೀರಿ ಅಲ್ವಾ?...."

"ಹಿಂದೆ ಒಂದು ಸಲ ಅವರನ್ನ ನೋಡಿದ್ದೆ. ಆದರೆ...." ಅವನು ಗೊಂದಲ ಕ್ಕೊಳಗಾಗಿದ್ದ. ಅಕ್ಕ ತಂಗಿಯರು ಒಂದೇ ತರಹ... ತನಗೆ ಬೇಸ್ತು....

"ಅವಳು ಹೀಗೆ ಅಂತ ನಿಮಗೆ ಗೊತ್ತಿರಲಿಲ್ಲ ಅಲ್ಲವೆ?... ತಕ್ಷಣ ಯಾರಿಗೂ ಗೊತ್ತಾಗುವುದೇ ಇಲ್ಲ. ಇನ್ನೊಂದಾದರೂ ಅವಳ ವಿಚಾರ ಹೇಳ್ತೀನಿ. ಈಗ ಏನು ಬಂದದ್ದು ಅಂತ ಹೇಳಲೇ ಇಲ್ಲ...."

"ಅನಿರೀಕ್ಷಿತವಾಗಿ ನಾನು ಬಂದದ್ದು ನಿಮಗೆ ತೊಂದರೆಯಾಗಿರಬಹುದು ಅಲ್ವಾ?" ಅವಳನ್ನೇ ನೋಡುತ್ತಾ ಕೇಳಿದ.

"ಇಲ್ವಲ್ಲಾ ಏಕೆ?" ಅವಳು ಸಂದೇಹದಿಂದ ಕೇಳಿದಳು.

"ಮುಂಚೇನೇ ಗೊತ್ತಾಗಿದ್ದಿದ್ರೆ ನಿಮ್ಮ ತಂಗೀನ ಅವಿತಿಡಬಹುದಾಗಿತ್ತು ಅಲ್ವಾ?" ವ್ಯಂಗ್ಯವಾಗಿ ಕೇಳಿದ.

"ನಮ್ಮ ಮನೇಲಿ, ನಾವ್ಯಾಕೆ ಅವಳನ್ನು ಬಚ್ಚಿಡೋಣ ಹೇಳಿ...."

"ಆದರೂ, ಅವಳು ಎಲ್ಲರ ಎದುರಿಗೆ ಬರುವುದು ನಿಮಗಿಷ್ಟವಿಲ್ಲ. ಎಲ್ಲರ

ಜತೆಯಲ್ಲಿ ಬೆರೆಯುವುದು ನಿಮಗೆ ಬೇಕಾಗಿಲ್ಲ ಅಲ್ವಾ! ನಿಮ್ಮಕ್ಕನ ಮದುವೆ ಸಮಯದಲ್ಲಿ ಎಲ್ಲಿಗೆ ಕಳಿಸಿದ್ರಿ?"

"ಮದುವೆ ಮನೇಲಿ ಅವಳೇನೂ ಓಡಾಡಬೇಕಾಗಿತ್ತಾ! ಅವಳು ಮನೆಯಲ್ಲೇ ಇದ್ದಳು ಸುಮ್ಮನೆ, ಕಂಡವರೆಲ್ಲಾ ಏನಾದ್ರೂ ಕೇಳ್ತಾರೆ. ನಮಗೆ ಹೇಳೋಕು ಕಷ್ಟ. ಅವಳಿಗೂ ಬೇಸರವಾಗುತ್ತದೆ. ಆದಕ್ಕೆ ಅವಳು ಹೆಚ್ಚಿಗೆ ಹೊರಗೆ ಬರುವುದಿಲ್ಲ."

"ಇದು ತಪ್ಪು... ಹಾಗೇ ಅಂತ ಅವಳು ಮನೆ ಸಮಾರಂಭಗಳಲ್ಲೂ ಹೊರಗೆ ಬರಬೇಡವೆ?"

"ಅವಳನ್ನು ಬಾ ಅಂತ ನಾವು ಕರೆಯೋಲ್ಲ. ಬರ್ತೀನಿ ಅಂತ ಅವಳು ಹೇಳಿಲ್ಲ."

"ಇನ್ನು ಮೇಲೆ ಹೀಗೆ ಮಾಡಬೇಡಿ. ಯಾರು ಬಂದರೂ, ಅವರೆದುರಿಗೆ ಬಂದು ಅವರೂ ಬೆರೆಯಲಿ ಇಲ್ಲದಿದ್ದರೆ, ಇದರಿಂದ ಅವರ ಕೀಳರಿಮೆ ಹೆಚ್ಚುತ್ತೆ." ಮತ್ತೊಮ್ಮೆ ಅವಳು ಹೊರಗೆ ಬರಬಾರದೇ ಎಂದು ಅವನ ಮನಸ್ಸು ತವಕಿಸುತ್ತಿತ್ತು. ಮತ್ತೆ ಮತ್ತೆ ಆ ಚೆಲುವೆಯನ್ನು ಕಣ್ತುಂಬಾ ನೋಡುವ ಆಸೆ... ಸರಳ ಸುಂದರಿ.... ಚೆಲುವೆ.... ಇಲ್ಲಿ ಬಂದು ತನ್ನೆದುರಿಗೆ ಕುಳಿತಿರಬಾರದೇ....ಅವನು ಅವಳನ್ನು ಕರೆಯಿರಿ ಎನ್ನುವಂತೆ, ಸರಳೆಯ ಕಡೆ ನೋಡಿದ. ಸರಳ ನಕ್ಕಳು.

ಅರೆ.... ತಾನು ಇವಳನ್ನೇ ಸಾವಿತ್ರಿ ಎಂದು ಭ್ರಮಿಸಿದ್ದೆನಲ್ಲ.... ಇವಳು ಸರಳ... ಅವಳು ಸಾವಿತ್ರಿ.... ತನ್ನ ಮನದನ್ನೆ ಯಾರು... ತನ್ನಲ್ಲೇ ಆಲೋಚಿಸು ತ್ತಿದ್ದವನನ್ನು ಸರಳ ಎಚ್ಚರಿಸಿದಳು.

"ಅದು ಅಷ್ಟು ಸುಲಭವಲ್ಲ ಸುರೇಶ್...." ಸಾವಿತ್ರಿ ತನ್ನೆದುರಿಗೆ ಬರುವುದು ಸುಲಭವಲ್ಲ ಎಂದು ಅವಳು ಹೇಳುತ್ತಿದ್ದಾಳೆ ಎಂದು ಭಾವಿಸಿದ.

"ಯಾಕೆ ಸುಲಭವಲ್ಲ! ನೀವು ಯಾರಿಗೆ ಹೆದರ್ತೀರಿ!....

"ಯಾರಿಗೂ ಹೆದರೋಲ್ಲ. ಆದರೆ ಯಾರಿಗೂ ಈ ವಿಚಾರ ತಿಳಿಯದು...."

"ಅಂದರೆ ಮುಕುಂದನಿಗೂ...."

"ಅವರಿಗೆ ತಿಳಿದಿದೆ. ಆದರೆ ಅವರ ಮನೆಯವರಿಗೆ ತಿಳಿಸಿಲ್ಲ."

"ಅವನ ತಾತನಿಗೆ ಹೆದರಿರಬೇಕು ನೀವು" ನಕ್ಕಾಗ, ಅವಳೂ ನಕ್ಕಳು. ಅವಳು ಮತ್ತೆ ಅತ್ತಿತ್ತ ನೋಡಿದಾಗ ಅವಳು ನೆನಪಿಸಿದಳು.

"ನೀವು ಬಂದ ವಿಚಾರವನ್ನು ಮರತೇ ಬಿಟ್ರಿ...."

"ಇವೆಲ್ಲ ಒಂದಿಷ್ಟು ಬಿಲ್ಸ್, ನೋಡಿ ಸರಿಯಾಗಿದೆಯೋ ಇಲ್ಲವೋ...."

"ನೀವು ನೋಡಿದೀರಲ್ಲ ಇನ್ನೇನು?"

"ಎಷ್ಟಾಗಲಿ, ನೀವು ಬ್ಯಾಂಕಿನವರು ಸರಸರ ಅಂತ ಗುಣಿಸಿ ಬಿಡ್ತೀರಿ"

"ಆ ಕೆಲಸಾನ ಕ್ಯಾಲುಕ್ಲೇಟರ್ ಮಾಡುತ್ತೆ" ಮತ್ತೆ ಇಬ್ಬರೂ ನಕ್ಕರೂ.

ಸುಭದ್ರಮ್ಮ ಒಳಗಿನಿಂದ ಕಾಫಿಯನ್ನು ತಂದಿತ್ತು. "ಚೆನ್ನಾಗಿದೀಯೇನಪ್ಪಾ?" ಎಂದು ವಿಚಾರಿಸಿದರು. 'ಹೂಂ' ಎಂದ ಕಾಫಿಯನ್ನು ಹೀರುತ್ತಾ.

ಹೊರಟಾಗ ಅವನಿಗೆ ಮತ್ತೊಮ್ಮೆ ಸಾವಿತ್ರಿಯನ್ನು ನೋಡುವ ಆಸೆಯಾಯಿತು. ಆದರೆ ಅವಳೆಲ್ಲೂ ಕಾಣಲಿಲ್ಲ. 'ಬರ್ತೀನಿ' ಎಂದು ಅವರಿಬ್ಬರಿಗೆ ಹೇಳಿದ.

ಅಂದಿನಿಂದ ಸುರೇಶ ಸಾವಿತ್ರಿಯ ಬಗ್ಗೆ ಹೆಚ್ಚು ಹೆಚ್ಚು ಚಿಂತಿಸಲಾರಂಭಿಸಿದ. ಸಾವಿತ್ರಿ... ಸಾವಿತ್ರಿ ನೀನೆಷ್ಟು ಚೆನ್ನ... ನಿನ್ನನ್ನ ನೋಡಿದರೆ ನಿನಗೆ ಕಣ್ಣುಗಳು ಇಲ್ಲ ಅಂತ ಅನ್ನಿಸುವುದೇ ಇಲ್ಲವಲ್ಲ....ಸರಳನನ್ನೇ ನೀನು ಎಂದು ಭಾವಿಸಿದ್ದೆನಲ್ಲ.... ಸರಳೆಯ ಒಡನಾಟ ನನಗೆ ಹಿತವಾಗಿತ್ತು. ಆದರೆ ಅದು ನಿನ್ನ ಒಡನಾಟ ಎಂದೇ ಭ್ರಮಿಸಿದ್ದೆ... ಸಾವಿತ್ರಿ ನೀನು ಎಷ್ಟು ಚೆನ್ನವೋ ನಿನ್ನ ಧ್ವನಿಯೂ ಅಷ್ಟೇ ಚೆನ್ನಾಗಿದೆ.... ಸಾವಿತ್ರಿ ನೀನು ಭುವನ ಸುಂದರಿ... ಗಾನ ಸರಸ್ವತಿ....

ಸಾವಿತ್ರಿಯನ್ನು ಕಣ್ತುಂಬಾ ನೋಡಬೇಕು.... ಅವಳ ಸನಿಹದಲ್ಲಿ ಕುಳಿತು ಅವಳ ಗಾನ ಮಾಧುರ್ಯವನ್ನು ಸವಿಯಬೇಕು.... ಸಾವಿತ್ರಿ, ಸಾವಿತ್ರಿ ಎಂದು ಹಗಲೂ ರಾತ್ರಿ ಅವಳ ಬಗ್ಗೆ ಚಿಂತಿಸತೊಡಗಿದ.

ಮುಕುಂದ ಸುಕನ್ಯ ಹನಿಮೂನ್‌ನಿಂದ ವಾಪಸ್ಸಾದರು. ಸುಕನ್ಯ ಸೀದಾ ತನ್ನ ಮನೆಗೆ ಹೋಗಲು ಇಷ್ಟಪಡಲಿಲ್ಲ. ತಾಯಿಯ ಮನೆಗೆ ಬಂದು ಇಳಿದಳು. ಯಾರು ಕೇಳದಿದ್ದರೂ, ತಾನಾಗಿಯೇ ತನ್ನ ಹನಿಮೂನ್‌ನ ಅನುಭವಗಳನ್ನು ಹೇಳತೊಡಗಿದಳು. ಕಡೆಗೆ ಸುಭದ್ರಮ್ಮ ತಡೆಯಲಾರದೇ,

"ಸಾಕು. ಸಾಕು. ಅದೇನು ಚೆನ್ನ ಅಂತ ಅದನ್ನೆಲ್ಲ ಹೇಳ್ತಿದೀಯ.... ಹನಿಮೂನ್‌ಗೆ ಹೋದವರೆಲ್ಲಾ ಹೀಗಾಡ್ತಾರ್ಯೆ?"

"ನಿನಗೆ ಹೊಟ್ಟೆ ಉರಿ. ನಿನ್ನ ಕಾಲದಲ್ಲಿ ನೀನು ಹೋಗಿರಲಿಲ್ಲ. ಅದಕ್ಕೆ"

"ಅಬ್ಬಾ.... ನಿನ್ನ ಬಾಯಿಗೆಂತೂ. ಏನು ಅಂದ್ರೆ ಅದನ್ನೆ ಆಡ್ತೀಯಲ್ಲ. ಸರಳ ಸಾವಿತ್ರಿಯರಿಗೆ ಅದರ ಅನುಭವ ಏನಿರುತ್ತೆ? ಅವರೆದುರಿಗೆ ಆಡ್ತೀಯಲ್ಲಾ...."

"ಅದನ್ನು ಅವರುಗಳು ಹೇಳಲಿ... ಏನೇ ಸರಳಾ, ನೀನು ಮದುವೆಯಾದ ಮೇಲೆ, ನಿನ್ನ ಹನಿಮೂನ್ ಅನುಭವವನ್ನೂ ನನ್ನ ಹತ್ತಿರ ಹೇಳದೇ ಇರಬೇಡ"

"ಥೂ. ಅದೆಲ್ಲ ನಿನಗೇ ಇರಲಿ ಹೋಗು. ನನಗೀಗ ಮದುವೆ ಆಸೆ ಇಲ್ಲ. ನಾನೀಗ ಬ್ಯಾಂಕಿಗೆ ಹೋಗಬೇಕು. ನಿಮ್ಮ ಮಾತು ಕೇಳಲು ಪುರುಸೊತ್ತಿಲ್ಲ."

"ಇಷ್ಟವಿಲ್ಲ ಅನ್ನು. ನನ್ನನ್ನು ಕಂಡರೆ ಯಾರಿಗೂ ಆಗುಲ್ಲ"

"ಯಾಕೆ? ಮುಕುಂದನಿಗೂ ಆಗುಲ್ವಾ? ಅವರ ಹತ್ತಿರಾನೂ ಜಗಳವಾಡಿದೆ ತಾನೆ?"

"ಹುಂ. ನನಗಿನ್ನೇನು ಅದೇ ಕೆಲಸ. ಹೋಗಲಿ ಹೊಟ್ಟೆ ಹಸೀತಿದೆ. ಅದೇನು ಮಾಡಿದೀಯೋ ಕೊಡು ತಿಂದು ಒಂದು ಗಳಿಗೆ ಮಲಗ್ತೀನಿ"

ತಾಯಿ ಬೇಸರಿಸಿಕೊಂಡು ಒಳ ನಡೆದಳು. ಸರಳ ಬ್ಯಾಂಕಿಗೆ ಹೊರಟು ಹೋದಳು. ಸಾವಿತ್ರಿ ಒಳಗಿನಿಂದ ಸುಕನ್ಯಳ ಮಾತುಗಳನ್ನು ಆಲಿಸಿದ್ದಳು. ಅವಳ ಮೈ ಜುಂ ಎಂದಿತ್ತು. ಹೊಸದಾಗಿ ಮದುವೆಯಾದವರು. ಅವರುಗಳು ಹೇಗೆ ಕಾಲ ಕಳೆದಿರಬಹುದು!... ಏನೇನು ಮಾತನಾಡಿರಬಹುದು...? ಇದರ ಬಗ್ಗೆ ತನಗಂತೂ ಏನೂ ಕಲ್ಪನೆ ಇಲ್ಲ. ಕತೆ ಪುಸ್ತಕ ಓದುಲ್ಲ. ಸಿನಿಮಾ ನೋಡುಲ್ಲ. ಸುಕನ್ಯ ಮುಚ್ಚು ಮರೆ ಇಲ್ಲದೇ ಎಲ್ಲವನ್ನು ಹೇಗೆ ಹೇಳ್ತಾಳೆ. ಅಮ್ಮ ಗದರಿಸಿ ಬಿಟ್ಟಳು ಇಲ್ಲವಿದ್ದರೆ ಇನ್ನೂ ಏನಾದರೂ ಹೇಳಿರುತ್ತಿದ್ದಳು.

ತನಗೂ ಮದುವೆಯಾಗುವಂತಿದ್ದರೆ...ತಾನೂ ಹನಿಮೂನ್‌ಗೆ ಹೋಗುವಂತಿದ್ದರೆ.... ಗಂಡನ ಹೆಗಲ ಮೇಲೆ ತಲೆ ಇಟ್ಟು ಪ್ರೀತಿಯ ಮಾತುಗಳನ್ನು ಆಡುವಂತಿದ್ದರೆ.... ಗಂಡನ ಪ್ರೀತಿ ಪ್ರೇಮದ ಅನುಭವ ತನಗೂ ದೊರಕುವಂತಿದ್ದರೆ... ಎಷ್ಟು ಚೆನ್ನ...ಭಾವೋದ್ವೇಗಗಳಿಂದ ವಿಚಲಿತಗೊಂಡು, ಏನೂ ತೋಚದೇ ತಂಬೂರಿಯ ತಂತಿಯನ್ನು ಮೀಟತೊಡಗಿದಳು. ಝೇಂಕಾರದ ನಾದಕ್ಕೆ ದನಿ ಸೇರಿಸಿ ಹಾಡತೊಡಗಿದಳು.

"ಈಗ ನಿನ್ನ ಸಂಗೀತ ಶುರು ಮಾಡಬೇಡಮ್ಮ ಸಧ್ಯ.... ತಲೆನೋವು ಮಲಗಬೇಕು..ಎಷ್ಟೋ ದಿನಗಳಾಯಿತು, ಚೆನ್ನಾಗಿ ನಿದ್ದೆ ಮಾಡಿ..." ಸುಕನ್ಯ ಅಡ್ಡಿಪಡಿಸಿದಾಗ ಸಾವಿತ್ರಿ ಪೆಚ್ಚಾದಳು.

"ಇವಳೊಬ್ಬಳು... ನನಗಿರುವ ಸಂಗಾತಿ ಇದೊಂದೇ... ಇದನ್ನು ಬೇಡ ಅಂತಾಳಲ್ಲ" ಎಂದು ರೇಗಿಕೊಂಡು, ರೂಮಿನ ಕಿಟಕಿಯ ಬಳಿಕುಳಿತು, ಹೊರಗಿನ

ರಸ್ತೆಯ ಗದ್ದಲವನ್ನು ಆಲಿಸತೊಡಗಿದಳು.

ಸುರೇಶ ಮುಕುಂದನಿಗೆ ಒಂದು ಪಾರ್ಟಿ ಕೊಡಿಸಬೇಕೆಂದುಕೊಂಡ. ತಾಯಿ ಅವರಿಬ್ಬರನ್ನು ಮನೆಗೆ ಊಟಕ್ಕೆ ಕರೆಯೋಣ ಎಂದಾಗ, ಅವರಿಬ್ಬರ ಜತೆಗೆ ಸರಳ ಸಾವಿತ್ರಿಯನ್ನು ಕರೆಯಬೇಕು ಎಂದುಕೊಂಡ. ಮೊದಲಿಗೆ ಸರಳ ಒಪ್ಪಲಿಲ್ಲ.

"ಹೊಸದಾಗಿ ಮದುವೆಯಾದವರು ಅವರು, ಅವರಿಗೆ ಔತಣ ಮಾಡಿ ಸಾಕು. ನಾವು ಇಬ್ಬರು ಏಕೆ?" ಎಂದಿದ್ದಳು....

"ಅಮ್ಮ ಕೂಡಾ, ನೀವಿಬ್ಬರು ಬರಲಿ ಎಂದು ಆಸೆ ಪಟ್ಟಿದಾರೆ" ಎಂದ.

"ನಾನು ಬರ್ತೀನಿ.... ಆದರೆ ಸಾವಿತ್ರಿ ಬೇಡ" ಎಂದಳು ಖಂಡಿತವಾಗಿ....

"ಸಾವಿತ್ರಿ ಬರಲೇಬೇಕು. ಇಲ್ಲದಿದ್ದರೆ ಈ ಪ್ರೋಗ್ರಾಂನೇ ಕ್ಯಾನ್ಸಲ್ ಮಾಡಿ ಬಿಡ್ತೀನಿ" ಎಂದ.

"ಅಷ್ಟು ಅನುಕಂಪಾನಾ ನಿಮಗೆ ಅವಳ ಮೇಲೆ?"

"ಅನುಕಂಪಾನೋ ಆದರವೋ ತಿಳಿಯದು. ಎಜುಕೇಟೆಡ್ ಆಗಿ ನಾವುಗಳೇ ಅವಳನ್ನು ಈ ರೀತಿ ದೂರವಿಟ್ಟರೆ ಅವರಂಥವರು ಹೇಗೆ ಬಾಳಬೇಕು?"

"ನಿಜವಾಗಿಯೂ ಈ ಮಾತನ್ನು ನೀವು ಹೇಳ್ತಿದೀರಾ ಸುರೇಶ್?"

"ಯಾಕೆ? ನಾನು ಈ ತರಹ ಮಾತನಾಡುತ್ತಿರುವುದು ಚೆನ್ನಾಗಿ ಕಾಣುಲ್ವಾ?"

"ಹಾಗಲ್ಲ. ನಿಜ ಹೇಳ್ತೀನಿ. ಮುಕುಂದ ಸಹ ಒಂದು ದಿನವೂ ಈ ರೀತಿ ಮಾತನಾಡಿದವರಲ್ಲ"

"ಅವನ ಆಕರ್ಷಣೆಯೇ ಬೇರೆಯಾಗಿತ್ತಲ್ಲ..."

"ಅಂದರೆ...."

"ಏನಿಲ್ಲ ಬಿಡಿ. ಸಾವಿತ್ರೀನ ಮೊದಲ ಬಾರಿ ನೋಡಿದಾಗ ಹೀಗೆ ಅಂತ ನನಗೆ ಖಂಡಿತಾ ತಿಳಿದಿರಲಿಲ್ಲ. ಆಮೇಲೆ, ಶಿವಮೊಗ್ಗದಲ್ಲಿ ನಿಮ್ಮನ್ನು ನೋಡಿದಾಗ ನಿಮ್ಮನ್ನು ಅವಳೇ ಅಂತ ಅಂದುಕೊಂಡು ಬಿಟ್ಟಿದ್ದೆ. ಮೊದಲೇ ಸಾವಿತ್ರಿಯ ಬಗ್ಗೆ ತಿಳಿದಿದ್ದರೆ, ಮದುವೆಗೆ ಸಾವಿತ್ರಿಯೂ ಬರುವಂತೆ ಮಾಡಿರುತ್ತಿದ್ದೆ. ಕುರುಡಾದದ್ದು ಅವಳ ತಪ್ಪೇನಲ್ಲವಲ್ಲ"

"ಹೌದು. ಆದರೆ ಜನ ನೋಡುವ ರೀತಿಯೇ ಬೇರೆಯಲ್ಲ"

"ಎಲ್ಲರನ್ನು ಮೆಚ್ಚಿಸುಕ್ಕೆ ಆಗುಲ್ಲ ಬಿಡಿ. ಕೆಲವರನ್ನಾದರೂ ಮೆಚ್ಚಿಸ ಬಹುದಲ್ಲ. ನಮ್ಮ ಮನೇಗೆ ಸಾವಿತ್ರೀನ ಖಂಡಿತಾ ಕರೆದುಕೊಂಡು ಬರಬೇಕು.

ಇಲ್ಲದಿದ್ದರೆ ನಾನು ಇಷ್ಟೊಂದು ಮಾತನಾಡಿ ಏನು ಪ್ರಯೋಜನ!"

ಸರಳ ಒಪ್ಪಿದಳು. ಸಾವಿತ್ರಿಗೆ ಮೊದಲು ಈ ಆಹ್ವಾನ ಸಮ್ಮತವೆನಿಸಲಿಲ್ಲ. "ನಾನು ಬರುಲ್ಲ"ಎಂದಳು.

"ಅವರುಗಳು ತುಂಬಾ ಒಳ್ಳೆಯವರು. ಸುರೇಶ್ ಹೇಳುವುದು ನಿಜ. ಹೀಗೇ ಮನೆಯೊಳಗೆ ಎಷ್ಟು ದಿನಾಂತ ಜನರ ಕಣ್ಣಿಗೆ ಬೀಳದಂತೆ ಇರ್ತೀಯ...? ಚೆನ್ನಾಗಿ ಸಂಗೀತ ಕಲಿತು, ಕಚೇರಿ ಮಾಡಲು ಒಂದು ದಿನ ಹೊರಗೆ ಹೋಗಲೇಬೇಕು ಅಲ್ವೆ?"

"ನಾನು ಅಷ್ಟು ಮುಂದೆ ಬರ್ತೀನಿ ಅಂತ ನಿನಗನ್ನಿಸುತ್ತಾ? ನನ್ನಿಂದ ಅಷ್ಟು ಸಾಧನೆ ಸಾಧ್ಯಾನ?"

"ಬರದೇ ಏನು? ಸುರೇಶನಂತಹವರ ಪ್ರೋತ್ಸಾಹವಿದ್ದರೆ ಏನು ಬೇಕಾದರೂ ಸಾಧಿಸಬಹುದು. ದೊಡ್ಡ ಸಂಗೀತ ವಿದ್ವಾಂಸೆಯಾಗಬಹುದು."

"ಬೇಡ ಬಿಡೇ ಸರಳ, ನನಗೆ ಇದೇ ಸರಿ. ಅದೆಲ್ಲ ಬೇಕಿಲ್ಲ"

"ಹಾಗಾದರೆ ನೀನು ಬರುಲ್ಲ ಅಂತ ಹೇಳಿ ಬಿಡಲಾ?"

'ಹೂಂ' ಎಂದಳು ಸಾವಿತ್ರಿ. ಸಾವಿತ್ರಿ ಬರಲು ಒಪ್ಪಲಿಲ್ಲ ಎಂದು ತಿಳಿದಾಗ, ತಾನೇ ಕರೆಯಲು ಬಂದ. ಸಾವಿತ್ರಿ ಸಂಕೋಚಗೊಂಡಳು.

"ನಾನು ಒಳ್ಳೆಯವನು ಅಂತ ಅನ್ನಿಸುತ್ತೋ, ಕೆಟ್ಟವನು ಅಂತ ಅನ್ನಿಸುತ್ತೋ.."

"ನನ್ನ ಬಗ್ಗೆ ಒಳ್ಳೆ ಭಾವನೆಗಳನ್ನು ಇಟ್ಟುಕೊಂಡಿರುವವರು ನೀವು. ಒಳ್ಳೆಯವರಲ್ಲದೇ ಕೆಟ್ಟವರಾಗಲು ಹೇಗೆ ಸಾಧ್ಯ?"

"ಹಾಗಿದ್ದರೆ, ಬರುಲ್ಲ ಅಂತ ಹೇಳಬೇಡಿ. ಒಂದು ವೇಳೆ ನೀವೀಗ ಒಪ್ಪದಿದ್ದರೆ, ಇನ್ನು ಎಂದೆಂದಿಗೂ ನಾನು ನಿಮ್ಮನ್ನು ಕರೆಯುವುದಿಲ್ಲ."

ಸಾವಿತ್ರಿಗೆ ಮುಜುಗರವೆನಿಸಿತು. ನನ್ನ ಪಾಡಿಗೆ ನನ್ನನ್ನು ಬಿಡದೆ ಇದೇಕೆ ನನ್ನನ್ನು ಹೀಗೆ ಪೀಡಿಸುತ್ತಿದಾನೆ ಎಂದೆನಿಸಿತು.

"ಯಾಕೆ ಹೀಗೆ ಬಲವಂತ ಮಾಡ್ತೀರಾ? ನಾನು ಬರದೇ ಇದ್ದರೆ ನಿಮಗಾಗುವ ನಷ್ಟವೇನು!"

ಸುರೇಶ ಅತ್ತಿತ್ತ ನೋಡಿದ. ಸರಳ ಅಡಿಗೆ ಮನೆಯಲ್ಲಿದ್ದಳು. ಸಾವಿತ್ರಿಯ ಸನಿಹಕ್ಕೆ ಬಂದು ನುಡಿದ.

"ನೀವು ಎಷ್ಟು ಚೆನ್ನಾಗಿದೀರಿ. ಎಷ್ಟು ಚೆನ್ನಾಗಿ ಹಾಡ್ತೀರಿ.... ಅಂತ ನನಗೆ

ಮಾತ್ರ ಗೊತ್ತು. ನಿಮ್ಮ ರೂಪವನ್ನು ಮೆಚ್ಚಿದೀನಿ. ನಿಮ್ಮ ಸಂಗೀತವನ್ನು ಮೆಚ್ಚಿದೀನಿ. ಆದ್ದರಿಂದ ಬನ್ನಿ ಅಂತ ಕರೆಯುತ್ತಿದೀನಿ. ಇಷ್ಟರ ಮೇಲೆ ನಿಮ್ಮಿಷ್ಟ."

ಅವನು ಸುಮ್ಮನಾದುದನ್ನು ಕಂಡು, ಅವನಿಗೆ ಸಿಟ್ಟು ಬಂದಿರಬಹುದು ಎಂದು ಊಹಿಸಿದಳು. ಅವನು ಅಲ್ಲಿ ನಿಲ್ಲದೇ ಹೊರಟು ಹೋಗಿದ್ದ. ಸರಳ ಬಂದು, "ಸುರೇಶ ಎಲ್ಲೀ ಹೊರಟು ಹೋದರೇನೇ... ನೀನೇನು ಹೇಳಿದೆ?" ಅಂತ ಕೇಳಿದಾಗ ಸಾವಿತ್ರಿಯ ಮನಸ್ಸು ಬರಿದಾಯಿತು.

ತನ್ನನ್ನು ಮೆಚ್ಚಿ ಬಂದವನನ್ನು ನಿರಾಸೆಗೊಳಿಸಿದೆ ಎನಿಸಿದಾಗ ಪಿಚ್ಚೆನಿಸಿತು. ಅವನು ಮತ್ತೆ ಬಂದು ಕರೆದರೆ, ತಾನು ಖಂಡಿತ ಹೋಗಿ ಬರುವೆ ಎಂದು ನಿರ್ಧರಿಸಿ ಕೊಂಡಳು.

ಆದರೆ ಅವನ ಮತ್ತೆ ಬರಲೇ ಇಲ್ಲ. ಸುರೇಶನ ತಂದೆಯ ಕಡೆಯ ಬಳಗದ ಕಡೆಯಿಂದ ಯಾವುದೋ ಅನಿವಾರ್ಯವಾದ ಅಡ್ಡಿ ಬಂದುದರಿಂದ, ಯಾರನ್ನೂ ಕರೆದು ಔತಣ ಮಾಡುವಂತಿರಲಿಲ್ಲ. ಸರಳ ನಿರಾಳವಾದಳು. ಆದರೆ, ಸಾವಿತ್ರಿ ಅವನನ್ನೇ ನೆನೆಸುತ್ತಿದ್ದಳು.

ರಜ ಮುಗಿಸಿ, ಸುಕನ್ಯ ಮುಕುಂದ ಇಬ್ಬರೂ ಮತ್ತೆ ಕೆಲಸಕ್ಕೆ ಹೋಗಲಾರಂಭಿಸಿದ್ದರು. ಮದುವೆಯಾಗಿ ಎರಡು ತಿಂಗಳು ತುಂಬುವುದರಲ್ಲಿತ್ತು. ಅವನು ಮುಂಚಿನಂತೆ ಸುರೇಶನಿಗೆ ಮಾತುಕತೆಗೆ ಸಿಗುತ್ತಿರಲಿಲ್ಲ. ಸುರೇಶ ಒಂಟಿಯಾದವನಂತೆ ತೋರಿ ಬರುತ್ತಿದ್ದ. ಯಾವುದೋ ಚಿಂತೆಯಲ್ಲಿರುವಂತೆ ತೋರಿ ಬಂದ ಮಗನನ್ನು ಪಂಕಜಮ್ಮ ಕೇಳಿದರು.

"ಈ ನಡುವೆ ತುಂಬಾ ಉದಾಸವಾಗಿರುವಂತೆ ಅನ್ನಿಸುತ್ತೆ. ಏನೂಂತ ಹೇಳಿದರೆ ನನಗೂ ತಿಳಿಯುತ್ತೆ"

"ಏನೂ ಇಲ್ಲಮ್ಮ, ಏನೋ ಬೇಜಾರು. ಆಫೀಸ್ನಲ್ಲೂ ಕೆಲಸ ಜಾಸ್ತಿ."

"ರಜ ಹಾಕಿ, ನಾಲ್ಕು ದಿನ ಎಲ್ಲಾದ್ರೂ ಹೊರಗೆ ಸುತ್ತಿ ಬಾ"

"ಎಲ್ಲಿಗೆ ಅಂತ ಹೋಗಲಿ? ಅಲ್ಲದೇ ಯಾವ ರಜವೂ ಇಲ್ಲ. ಮುಕುಂದನ ಮದುವೆ ಸಮಯದಲ್ಲಿ ರಜಗಳು ಮುಗಿದಿವೆ"

ಈಚೆಗೆ ಮುಕುಂದನೂ ಬಂದಿಲ್ಲ. ಅದಕ್ಕೆ ಇವನಿಗೆ ಬೇಜಾರಿರಬಹುದು ಎಂದುಕೊಂಡು "ಜಲಜಾ ಕಾಗದ ಬರೆದಿದಾಳೆ. ಮೈಸೂರಿಗೆ ಕಳಿಸು ಒಂದೆರಡು ದಿನ ಬರಲಿ ಅಂತ. ಹೋಗಿ ಬರ್ತೀಯಾ!"

"ಈಗೇಕೆ?"

"ಅವಳ ಗಂಡನ ಮನೆ ಕಡೆಯ ಹುಡುಗಿ ಒಬ್ಬಳು ಮದುವೆಗಿದಾಳಂತೆ. ಪೋಟೋ ಜಾತಕ ಕಳಿಸಿದಾಳೆ. ನೋಡ್ತೀಯಾ?"

"ಯಾರಿಗೆ?"

"ಇನ್ಯಾರಿಗೆ? ನಿನಗೆ! ನಿನ್ನ ಮದುವೆ ಒಂದು ಮುಗಿದರೆ, ನಮ್ಮ ಜವಾಬ್ದಾರಿ ಮುಗಿದಂತೆ. ಇದುವರೆಗೂ ಮುಂದೂಡಿದೆ. ನಿನ್ನ ಸ್ನೇಹಿತನ ಮದುವೇನೂ ಆಯಿತು."

"ಯಾರೂ ಬೇಡಮ್ಮ. ಅವನು ಒಪ್ಪಲಿಲ್ಲ ಅಂತ ಜಲಜಂಗೆ ಬರಿ"

"ಯಾಕೋ, ನೀನು ಮುಕುಂದನ ತರಹ ಯಾರನ್ನಾದರೂ, ನೀನೇ ನೋಡಿ ಕೊಂಡಿದೀಯಾ....?"

"ಹಾಗೇನಿಲ್ಲ. ಹಾಗಿದ್ದರೆ, ನಿನಗೆ ತಿಳಿಸುತ್ತಿರಲಿಲ್ಲವೆ?" ಎಂದು ಬಾಯಿ ನುಡಿದಿದ್ದರೂ, ಅವನ ಕಣ್ಮುಂದೆ ಸಾವಿತ್ರಿಯ ರೂಪ ಬಂದು ನಿಂತಿತು. ಇದ್ದಕ್ಕಿದ್ದಂತೆ ಸಾವಿತ್ರಿಯನ್ನು ಮದುವೆಯಾದರೆ ಹೇಗೆ? ಎಂಬ ಆಲೋಚನೆ ಮೂಡಿತು. ತಕ್ಷಣವೇ ನುಡಿದ.

"ನಾನು ಸಾವಿತ್ರೀನ ಮೆಚ್ಚಿದೀನಿ. ಮದುವೆಯಾಗಬೇಕು ಅಂತ ಅಂದ್ಕೊಂಡಿದೀನಿ. ಅದನ್ನೇ ಯೋಚಿಸುತ್ತಿದೀನಿ"

"ಯಾವ ಸಾವಿತ್ರೀನೋ... ನಿನ್ನ ಜತೆ ಕೆಲಸದಲ್ಲಿದಾಳಾ?"

"ಅಲ್ಲ ಸುಕನ್ಯಳ ತಂಗಿ"

"ಏನಾಗಿದೆ ನಿನಗೆ? ಸುಕನ್ಯಳ ತಂಗಿ ಸರಳ, ಸಾವಿತ್ರಿಯಲ್ಲ"

"ಇಲ್ಲ ಸಾವಿತ್ರಿ ಅಂತ ಇನ್ನು ಒಬ್ಬಳು ತಂಗಿ ಇದಾಳೆ. ಎಷ್ಟು ಚೆನ್ನಾಗಿ ಹಾಡ್ತಾಳೆ ಅಂತೀಯ.... ನೋಡೋಕೂ ಚೆನ್ನಾಗಿದಾಳೆ. ಆದರೆ...." ಮುಂದೆ ಹೇಳಲು ಅನುಮಾನಿಸಿದ. ತಲೆ ತಗ್ಗಿಸಿದ.

"ಆದರೆ ಏನು? ಕುಂಟೀನೋ, ಕುರುಡೀನೋ" ಸುರೇಶ ಬೆಚ್ಚಿ ತಲೆ ಎತ್ತಿ ನೋಡಿದ.

"ಹೌದು. ಅವಳಿಗೆ ಕಣ್ಣು ಕಾಣುವುದಿಲ್ಲ. ಅವಳು ಕುರುಡಿ... ನೀನು ಹೀಗೆ ಕೇಳಬಹುದಾ? ನೀನು ನೋಡಿದೀಯಾ ಅವಳನ್ನು?" ಒರಟಾಗಿ ಕೇಳಿದ.

"ನಾನು ನೋಡಿಲ್ಲ. ಅದಕ್ಕೆ ಕೇಳಿದ್ದು, ಇಲ್ಲದಿದ್ದರೆ,.... ಅವಳು ಸರಿಯಾಗಿ

ದ್ದಿದ್ದರೆ ಮದುವೆ ಮನೆಯಲ್ಲಿ ಓಡಾಡದೇ ಇರುತ್ತಿದ್ದಳಾ?"

"ಪಾಪ ಅವಳದೇನೂ ತಪ್ಪಿಲ್ಲ. ಇವರುಗಳೇ ಅವಳನ್ನು ಮನೆಯಲ್ಲಿ ಬಿಟ್ಟು ಬಂದಿದ್ದರು."

"ಆದರೇನು? ಮನೆಯವರೇ ಅವಳನ್ನು.. ಎಲ್ಲರೊಡನೆ ಬರೆಯಲು ಬಿಡಲಿಲ್ಲವಲ್ಲ."

"ಇದೆಲ್ಲಾ ಸುಕನ್ಯಳ ಕಾರುಬಾರು."

"ಇರಬಹುದು. ನೀನೆಲ್ಲಿ ನೋಡಿದೆ ಅವಳನ್ನು? ಏನಾಗಿದೆ ಅವಳ ಕಣ್ಣು ಗಳಿಗೆ?"

"ಅವರ ಮನೇಲೇ ನೋಡಿದ್ದೆ. ಆಕ್ಸಿಡೆಂಟ್‌ನಲ್ಲಿ ಕಣ್ಣುಗಳು ಹೋಯಿತಂತೆ. ಅವಳನ್ನು ನೋಡಿದರೆ ಹಾಗೆ ಅಂತ ಅನ್ನಿಸುವುದೇ ಇಲ್ಲ."

"ನಾನೊಂದು ಮಾತು ಹೇಳ್ತೀನಿ ಸುರೇಶ,... ಬೇಜಾರು ಮಾಡ್ಕೋಬೇಡ. ಮನುಷ್ಯನಿಗೆ ಕಣ್ಣೇ ಮುಖ್ಯ, ಅದಿಲ್ಲದಿದ್ದರೆ ಯಾವುದೂ ಇಲ್ಲ. ಅವಳನ್ನು ಮದುವೆ ಯಾದರೆ ನಿನಗೆ ಸುಖ ಏನೂ ಸಿಗುವುದಿಲ್ಲ. ಕಣ್ಣು ಇದ್ದೂ ಕುರುಡನಾದ ಸ್ಥಿತಿ ನಿನಗೆ ಬರುತ್ತೆ."

"ಅವಳು ನನ್ನ ಜತೆ ಇದ್ದರೆ ಸಾಕು. ನನಗೆ ಅದೇ ಸುಖ. ಅವಳು ನನಗೆ ಏನನ್ನು ಮಾಡುವುದು ಬೇಡ"

"ಅದ್ಹೇಗೆ ಆಗುತ್ತೆ? ಕಡೇ ಪಕ್ಷ ಅವಳ ಕೆಲಸವನ್ನು ಮಾಡಿಕೊಳ್ಳಬೇಡವೆ? ನಿನ್ನ ಹೆಂಡತಿಯಾಗಿ ಬಂದಮೇಲೆ. ಮನೆಯ ಯೋಗಕ್ಷೇಮ, ನಿಮ್ಮ ಕ್ಷೇಮ ಎಲ್ಲವನ್ನೂ ನೋಡಿಕೊಳ್ಳುವ ಛಾತಿ ಇರಬೇಡವೆ? ಅದು ಅವಳಿಂದ ಅಸಾಧ್ಯ"

"ನೀನೂ ಹೀಗೆ ಅಂತೀಯ ಅಂತ ನಾನು ಅಂದುಕೊಂಡಿರಲಿಲ್ಲ. ನೀನು ಎಲ್ಲರಂತಲ್ಲ ಅಂತ ಅಂದುಕೊಂಡಿದ್ದೆ."

"ನಾನು ಅನುಕಂಪ ತೋರಿಸ್ತೀನಿ, ಅವಳಿಗೆ ಬೇಕಾದರೆ ಸಹಾಯ ಮಾಡ್ತೀನಿ. ಆದರೆ ಅವಳನ್ನು ಮನೆ ಸೊಸೆ ಮಾಡಿಕೊಳ್ಳುವಷ್ಟು ದೊಡ್ಡ ಹೃದಯ ನನಗಿಲ್ಲ, ನನ್ನ ಮಗನ ಸುಖ ನನಗೆ ಮುಖ್ಯ."

"ಅವಳನ್ನು ಉದ್ಧಾರ ಮಾಡಿದ ಪುಣ್ಯ ನಿನಗೆ ಬರುತ್ತೆ"

"ಅದು ಸುಳ್ಳು.... ಅವಳು ನಿನ್ನ ಹೆಂಡತಿಯಾದ ಮಾತ್ರಕ್ಕೆ ಅವಳು ಉದ್ಧಾರ ವಾಗುವುದಿಲ್ಲ. ಅವಳಿಗೆ ಏನಾಗುತ್ತದೋ, ಎಂಬ ಭಯ ನಿನ್ನಲ್ಲಿ ಸದಾ ಇರುತ್ತೆ.

ಆಗ ನಿನ್ನ ವ್ಯಕ್ತಿತ್ವವೇ ಹಾಳಾಗುತ್ತದೆ. ಒಂದಲ್ಲ ಒಂದು ದಿನ ಅವಳ ಮೇಲೆ ಬೇಸರ ಬರುತ್ತಪೆ. ಆಗ ಅವಳಿಗೂ ಹೀನಾಯವೆನಿಸುತ್ತದೆ. ಏನಾದರೂ ಅನಾಹುತಗಳು ನಡೆಯಬಹುದು. ಆಗ ನಿನ್ನ ಆಸೆಗಳೆಲ್ಲಾ ಮಣ್ಣು ಪಾಲಾಗುತ್ತದೆ. ಆದರ್ಶವೆಲ್ಲಾ ಚೂರಾಗುತ್ತದೆ. ಅದು ಅವಳ ಉದ್ಧಾರವಲ್ಲ. ಸುಮ್ಮನೇ ಜನ ಆಡಿಕೊಂಡು ನಗುವಂತಾಗುತ್ತದೆ. ಬೇಕಾದರೆ, ನೀನು ಅವಳಿಗೆ ನಿನ್ನ ಕೈಲಾಗುವ ಸಹಾಯವನ್ನು ಮಾಡು. ಸಂಗೀತಕ್ಕೆ ಪ್ರೋತ್ಸಾಹ ಕೊಡು. ನಾನು ಬೇಡವೆನ್ನುವುದಿಲ್ಲ. ಆದರೆ ಅವಳನ್ನು ಮದುವೆಯಾಗಿ ಅವಳಿಗೆ ಬಾಳು ಕೊಡ್ತೀನಿ ಅಂತ ಅವಳ ಬಾಳು ಇನ್ನೂ ಹಾಳಾಗುವುದು ಬೇಡ."

"ಹಾಗ್ಯಾಕಮ್ಮಾ ಆಗುತ್ತೆ?"

"ನೀನೇ ಯೋಚಿಸು. ನಾಳೆ ಮಕ್ಕಳು ಹುಟ್ಟಿದರೆ, ಅವಳು ಮಕ್ಕಳನ್ನು ಹೇಗೆ ನೋಡಿಕೊಳ್ತಾಳೆ? ಹೇಗೆ ಬೆಳೆಸ್ತಾಳೆ? ಸುಮ್ಮನೆ ಇಲ್ಲದ ಆಸೆ ಹುಟ್ಟಿಸಿ ಅವಳು ಮತ್ತೂ ನೊಂದುಕೊಳ್ಳುವಂತಾಗಬಾರದು."

ತಾಯಿ ಹಾಗೆ ಹೇಳಿದರೂ ಅವನಿಗೆ ಸಮಾಧಾನವಾಗಿರಲಿಲ್ಲ. ಆಕೆ ಮಗನನ್ನು ಹೊಗಳಿದ್ದಳು.

"ನಿನ್ನ ದೊಡ್ಡ ಗುಣ ಮೆಚ್ಚುವಂಥದ್ದೇ..ಆದರೆ ಅದೆಲ್ಲ ನಿನ್ನಂತಹ ಸಾಮಾನ್ಯರಿಂದ ಆಗುವುದಿಲ್ಲ. ಇದನ್ನು ಇಷ್ಟಕ್ಕೇ ಬಿಟ್ಟು ಬಿಡು. ಸುಮ್ಮನೇ ಕೊರಗಬೇಡ. ಅದರಲ್ಲೇ ನಿನ್ನ ಒಳಿತು ಇದೆ...."

"ಸುರೇಶ ಸರಳನ್ನ ಏಕೆ ಮೆಚ್ಚಿಲ್ಲ? ಅವಳ ಬಗ್ಗೆ ಕೇಳಿದ್ದರೆ, ನಾನು ಈ ಕ್ಷಣ ಒಪ್ಪಿಗೆ ಕೊಡುತ್ತಿದ್ದೆ. ನಾನಾಗಿಯೇ ಹೇಗೆ ಕೇಳಲಿ? ಈಗ ಅವನ ಮನಸ್ಸು ಸರಿಯಿಲ್ಲ. ನಿಧಾನವಾಗಿ ಕೇಳಿದರಾಯಿತು" ಎಂದುಕೊಂಡಳು.

ಸುರೇಶ ಎದ್ದು ಹೋದಾಗ ತನ್ನಲ್ಲೇ ಏನನ್ನೋ ನಿರ್ಧರಿಸಿಕೊಂಡಳು. ಮಗನಿಗೆ ತಿಳಿಯದಂತೆ ಒಂದು ಮಧ್ಯಾಹ್ನ ಸೀದಾ ಸುಭದ್ರಮ್ಮನ ಮನೆಗೆ ಬಂದಳು. ಎದುರಾದವಳು ಸರಳೆಯೇ.... ಸಾವಿತ್ರಿ ಎಂಬ ಹುಡುಗಿ ಎಲ್ಲಿಯೂ ಕಾಣಲಿಲ್ಲ. ಕೇಳುವುದು ಹೇಗೆ ಎಂದು ಯೋಚಿಸುತ್ತಿದ್ದಳು. ಅಷ್ಟರಲ್ಲಿ ಸುಭದ್ರಮ್ಮನ ಕೈ ಹಿಡಿದು ಒಳಗಿನಿಂದ ಬಂದ ಸಾವಿತ್ರಿಯನ್ನೇ ನೋಡಿದಳು. ಸುಭದ್ರಮ್ಮ ಪೆಚ್ಚಾದಳು.

"ಹೌದು. ಸುರೇಶ ಹೇಳಿದಂತೆ, ಸಾವಿತ್ರಿ ನಿರಾಭರಣ ಸುಂದರಿಯೇ.... ಸರಳೆಗಿಂತ ರೂಪಸಿ. ಆದರೆ.... ಇವಳನ್ನು ಮದುವೆಯಾದರೆ ಸುರೇಶ ಜೀವನ ಪರ್ಯಂತ

ಕಷ್ಟಪಡಬೇಕಾಗುತ್ತದೆ'' ಎನಿಸಿ ಮನಸ್ಸು ಚಿಕ್ಕದಾಯಿತು. ಹೆಚ್ಚಿಗೆ ಏನನ್ನೂ ಮಾತನಾಡದೇ ವಾಪಸ್ಸು ಬಂದಳು.

ಇದ್ದಕ್ಕಿದ್ದಂತೆ ಆಕೆ ಏಕೆ ಬಂದಿದ್ದಳು ಎಂದು ಯಾರಿಗೂ ಅರ್ಥವಾಗಲಿಲ್ಲ. ಯಾರೂ ಅದರ ಬಗ್ಗೆ ಪ್ರಸ್ತಾಪ ಮಾಡಲಿಲ್ಲ.

ಯುಗಾದಿ ಹಬ್ಬಕ್ಕೆ ಮುಕುಂದ ಹೆಂಡತಿಯೊಡನೆ ಹಳ್ಳಿಗೆ ಹೊರಟಿದ್ದ. ಸುರೇಶನಿಗೆ ಹೇಳಲು ಬಂದಿದ್ದ.

``ಯಾಕೋ ಹೀಗಿದೀಯಾ? ಏನಾಗಿದೆ ನಿನಗೆ!'' ವಿಶ್ವಾಸದಿಂದ ಕೇಳಿದ್ದ.

``ಏನಿಲ್ಲ'' ಸುರೇಶ ತಳ್ಳಿ ಹಾಕಿದರೂ ಮುಕುಂದ ಬಿಡಲಿಲ್ಲ.

``ಏನಿಲ್ಲ ಅಂದರೆ ನಾನು ನಂಬುವುದಿಲ್ಲ. ಹಳ್ಳಿಯಿಂದ ವಾಪಸ್ಸು ಬಂದ ಮೇಲೆ ವಿಚಾರಿಸಿಕೊಳ್ತೀನಿ'' ತನ್ನ ಆಪ್ತ ಸ್ನೇಹಿತ, ತನಗೆ ಬೇಕಾದಷ್ಟು ಸಹಾಯ ಮಾಡಿದವನು, ಅವನ ಯೋಗಕ್ಷೇಮ ತನಗೂ ಸೇರಿದ್ದು. ಮದುವೆ ಆದ ಮೇಲೆ ತಾನು ಅವನ ಬಗ್ಗೆ ಚಿಂತಿಸುವುದೇ ಇಲ್ಲ ಎಂದುಕೊಂಡಾಗ ಸಣ್ಣತನದ ಅರಿವಾಗಿತ್ತು.

ಅವನನ್ನು ಏನೋ ಚಿಂತೆ ಕಾಡ್ತಿದೆ. ಅದೇನೆಂದು ತಿಳಿದುಕೊಂಡು ಸರಿಪಡಿಸಬೇಕು ಎಂದುಕೊಂಡ....

ಮುಕುಂದನ ಮನೆಯವರು, ಉತ್ಸಾಹದಿಂದ, ಕುತೂಹಲದಿಂದ ಅವರುಗಳಿಗಾಗಿ ಕಾಯುತ್ತಿದ್ದರು. ಸುಕನ್ಯಳನ್ನು ನೋಡಿ ನಿರಾಸೆಯಾಯಿತು. ಆಮೇಲೆ ವಿಚಾರಿಸಿದರಾಯ್ತು ಎಂದುಕೊಂಡರು.

ಸೊಸೆಗೆ ಸೀಮಂತ ಮಾಡಿ, ಬಳೆ ತೊಡಿಸಿ, ಆರತಿಗೆ ಎಲ್ಲರನ್ನೂ ಕರೆಯಬೇಕು ಎಂದು ಆಸೆ ಹೊತ್ತಿದ್ದ ಅವರುಗಳಿಗೆ ನಿರಾಸೆಯಾಗಿತ್ತು. ತಾತ ಸಹ ಉತ್ಸಾಹದಿಂದ ಮೊಮ್ಮಗನನ್ನು ಅವನ ಹೆಂಡತಿಯನ್ನು ನೋಡಲು ಬಂದರು.

``ಏನಮ್ಮಾ ಹೇಗಿದೀಯಾ?'' ವಿಶ್ವಾಸವನ್ನು ತೋರಿದರು. ``ದೀಪಾವಳಿ ಹಬ್ಬದಲ್ಲಿ ಏನು ಉಡುಗೊರೆ ಕೊಟ್ಟರು ನಿಮ್ಮ ಅತ್ತೆ?'' ಕೇಳಿದರು. ಮುಕುಂದ ಕಕ್ಕಾಬಿಕ್ಕಿಯಾದ. ದೀಪಾವಳಿ ಹಬ್ಬಕ್ಕೆಂದು ಅತ್ತೆಯ ಮನೆಗೆ ಹೋದ ನೆನಪು ಬರಲಿಲ್ಲ. ಏನೋ ಹೇಳಲು ನೋಡಿದ. ಯಾವ ಉಡುಗೊರೆ?.... ದೀಪಾವಳಿ ಹಬ್ಬದ ವೇಳೆಗೆ ತಮಗಿನ್ನೂ ಮದುವೆಯೇ ಆಗಿರಲಿಲ್ಲವೆನ್ನುವುದು ಸುಕನ್ಯಳಿಗೆ ನೆನಪಿಗೆ ಬಂತು. ಸುಕನ್ಯಗಳಿಗೆ ರೇಗಿತು.

``ನಿಮ್ಮ ತಾತಂಗೆ ಬರೀ ಉಡುಗೊರೆಯದೊಂದೇ ಚಿಂತೆ. ನೀವೂ ಸುಮ್ಮ

ನಿದ್ದೀರಿ. ದೀಪಾವಳಿ ಹಬ್ಬದ ನಂತರ ನಮ್ಮ ಮದುವೆ ಆಗಲಿಲ್ಲವೆ!"

"ಹಬ್ಬದ ಉಡುಗೊರೆಯನ್ನು ಆಮೇಲಾದರೂ ಕೊಟ್ಟರೋ ಹೇಗೆ ಅಂತ ತಾತ ವಿಚಾರಿಸಬಹುದು." ತಮಾಷೆ ಮಾಡಿದ.

"ಸರಿ. ಸರಿ. ನಿಮ್ಮ ಶಾಂತಿ ಗಂಡನಿಗೆ ಏನೇನು ಕೊಟ್ಟಿದಾರೆ?" ಸುಕನ್ಯ ಅವಮಾನದಿಂದ ಕೆಂಪಾದಳು.

"ಏನೂ ಕೊಟ್ಟಿದಾರೋ, ಏನು ಕೊಟ್ಟಿಲ್ಲವೋ ನನಗೆ ತಿಳೀದು. ತಾತನ ಮಾತಿಗೇನು ಬೆಲೆ ಕೊಡ್ತೀಯ ಸುಮ್ಮನಿರು"

ತನ್ನ ಹತ್ತಿರವೇ ಜೋಪಾನವಾಗಿಟ್ಟುಕೊಂಡಿದ್ದ, ತನ್ನ ಹೆಂಡತಿಯ ಒಂದು ಜತೆ ಬಳೆಯನ್ನು ಜಾನಕಿಯ ಕೈಗಿತ್ತು ಹೇಳಿದರು.

"ಇದಕ್ಕೆ ಪಾಲಿಷ್ ಹಾಕಿಸಿ, ಮುಕುಂದನ ಹೆಂಡತಿಗೆ ಕೊಡು"

ಜಾನಕಿ, ಸರಸ್ವತಿ ಮುಖ ಮುಖ ನೋಡಿಕೊಂಡರು. ಅವರಿಗೆ ಹೇಗೆ ತಿಳಿಸುವು ದೆಂದು ತಿಳಿಯಲಿಲ್ಲ. ಸುಮ್ಮನಾದರು.

ಹಬ್ಬವಾದ ಎರಡನೇ ದಿನವೇ ಅವರಿಬ್ಬರೂ ಹೊರಟು ನಿಂತಾಗ ತಾತ ಕೇಳಿದ್ದರು. "ಅದೇನು ಹೊರಟೆ ಬಿಟ್ಟಿದಾರೆ. ಸೀಮಂತ, ಗೀಮಂತ ಮಾಡಿ ಕೊಳ್ಳಲ್ಲವಂತಾ?"

"ಸುಕನ್ಯಂಗೆ ಅಂತಹ ಸುದ್ದಿ ಏನಿಲ್ಲ. ಈಗ ಏನೂ ಸಮಾಚಾರವಿಲ್ಲ ಅಬಾರ್ಷನ್ ಆಯ್ತು ಅಂತ ಹೇಳಿದ" ಜಾನಕಮ್ಮ ತಲೆತಗ್ಗಿಸಿ ನುಡಿದಾಗ ತಾತ ಪೆಚ್ಚಾದರು.

"ಸರಿ. ನಾನು ಕೊಟ್ಟ ಬಳೆಗಳನ್ನು ಇತ್ಲಾಗೆ ತತ್ತಾ. ಅವಳಿಗೆ ಈಗಲೇ ಕೊಡುವುದು ಬೇಡ"ಸುಕನ್ಯಳಿಗೆ ಈ ಮಾತು ತಿಳಿಯುವುದು ಬೇಡವೆಂದು ಮೊದಲೇ ತಿಳಿಸಿ, ಸರಸ್ವತಿ ಮುಕುಂದನಿಗೆ ತಿಳಿಸಿದ್ದಳು. ಅವನಿಗೆ ತಾತನ ಬಗ್ಗೆ ರೇಗಿ ಹೋಯ್ತು.

"ಯಾರಿಗೆ ಬೇಕಾಗಿವೆ ಅವರ ಬಳೆ? ನಮಗೇನೂ ಅದರ ಆಸೆ ಇಲ್ಲ"

"ಹಾಗಲ್ಲ" ಎಂದು ಏನೋ ಹೇಳಲು ಹೊರಟ ಚಿಕ್ಕಮ್ಮನನ್ನು ತಡೆದ.

"ತಾತನ ಪರವಹಿಸಿ ಯಾರೂ ಮಾತನಾಡಬೇಡಿ. ಕೈಗೆ ಹಾಕಿಕೊಂಡಿದ್ದ ಬಳೆ ಗಳನ್ನು ಕೈಯಿಂದ ಕಿತ್ತುಕೊಳ್ಳಕ್ಕೂ ಹೇಸುಲ್ಲ ಅವರು. ಸಧ್ಯ ನೀವು ಕೊಡದೇ ಇದ್ದುದೇ ಒಳ್ಳೆಯದಾಯ್ತು."

ಎಲ್ಲರೂ ಪೆಚ್ಚಾದರು. ತಾತ ಬದುಕಿರುವವರೆಗೂ ಹೀಗೆಯೇನೋ ಆಗಾಗ್ಗ

ಏನಾದರೂ ಮಾತುಗಳು ಬರುತ್ತಲೇ ಇರುತ್ತವೆ ಎಂದುಕೊಂಡರು.

ಹೀಗೆ ಹಗರಣ ನಡೆದದ್ದೂ ಅಲ್ಲದೇ, ಸುಕನ್ಯ, ಮುಕುಂದ ಹಳ್ಳಿಯಿಂದ ವಾಪಸ್ಸಾದ ಹತ್ತು ದಿನಗಳ ನಂತರ, ಸುಕನ್ಯಳಿಗೆ ನಿಜವಾಗಿಯೂ ಅಬಾರ್ಷನ್ ಆಯಿತು. ಇನ್ನೂ ಹೌದೋ ಅಲ್ಲವೋ ಎಂಬ ಅನುಮಾನ ಬರುವ ಮೊದಲೇ ಎರಡು ತಿಂಗಳು ತುಂಬಲಿದ್ದ ಅವಳಿಗೆ ಏನೂ ಇಲ್ಲವಾಯಿತು. ಇದರಿಂದ ಅವರಿಬ್ಬರಿಗೂ ದುಃಖವೇನೂ ಆಗಿರಲಿಲ್ಲ. ಏನನ್ನೂ ಯೋಚಿಸದೇ ಆರಾಮವಾಗಿಯೇ ಇದ್ದರು.

ಒಂದು ದಿನ ಮುಕುಂದ ಆರಾಮವಾಗಿ ಸುರೇಶನ ಮನೆಗೆ ಬಂದ. ಸುಕನ್ಯ ತನ್ನ ತಾಯಿಯ ಮನೆಗೆ ಹೊರಟು ಹೋಗಿದ್ದಳು. ಹರಟೆ ಹೊಡೆಯೋಣವೆಂದು ಬಂದವನಿಗೆ, ಸ್ನೇಹಿತ ಸಿಕ್ಕಿರಲಿಲ್ಲ. ಸುರೇಶ ಹೊರಗೆಲ್ಲೋ ಹೋಗಿದ್ದ.

"ಏನಪ್ಪಾ ಈ ನಡುವೆ ಅಪರೂಪವಾಗಿಬಿಟ್ಟೆ?" ಪಂಕಜಮ್ಮ ಮುಗುಳ್ನಗುತ್ತಾ ಪ್ರಶ್ನಿಸಿದರು.

"ಹಬ್ಬಕ್ಕೆ ಹಳ್ಳಿಗೆ ಹೋಗಿದ್ದೆ. ಬಂದ ಮೇಲೆ ಸುಕನ್ಯಂಗೆ ಹುಷಾರಿರಲಿಲ್ಲ. ರೆಸ್ಟ್ ತಗೋತೀನಿ ಅಂತ ತಾಯಿಯ ಮನೆಗೆ ಹೋಗಿದಾಳೆ. ಆರಾಮವಾಗಿ ಒಬ್ಬನೇ ಇದೀನಿ.... ಇವನೊಡನೆ ಹರಟೆ ಹೊಡೆಯೋಣ ಅಂತ ಬಂದರೆ ಇವನೇ ಇಲ್ಲ...." ನಕ್ಕು ಅಲ್ಲಿದ್ದ ಒಂದು ಇಂಗ್ಲೀಷ್ ವಾರಪತ್ರಿಕೆಯೊಂದನ್ನು ಕೈಯಲ್ಲಿ ಹಿಡಿದು ಹಾಳೆಗಳನ್ನು ತಿರುವಿದ. ಅದರ ಒಳಗಿನ ಹಾಳೆಗಳಲ್ಲಿ ಅಲ್ಲಲ್ಲಿ ಸಾವಿತ್ರಿ... ಸಾವಿತ್ರಿ ಎಂದು ಬರೆದಿತ್ತು. ಅದು ಸುರೇಶನ ಕೈ ಬರಹವಿದ್ದಂತೆ ತೋರಿತು.

"ಸಾವಿತ್ರಿ ಯಾರು?" ತನ್ನಲ್ಲೇ ಕೇಳಿಕೊಂಡ. ಆಕೆ ಕಾಫಿ ತಂದಿತ್ತಾಗ "ಸುರೇಶಂಗೆ ಯಾವಾಗ ಮದುವೆ ಮಾಡ್ತೀರಿ?" ಪ್ರಶ್ನಿಸಿದ.

"ಮಾಡ್ಬೇಕಪ್ಪಾ, ಯಾಕೋ ಅವನಿಗೆ ಮದುವೆ ಬಗ್ಗೆ ಮನಸ್ಸೇ ಇಲ್ಲ. ಸರಿಯಾಗಿ ಉತ್ತರಾನೇ ಹೇಳುಲ್ಲ. ನೀನಾದರೂ ಹೇಳಿನೋಡು ಅವನು ಈಗ 'ಹುಂ' ಎಂದರೆ ನಾಳೇನೇ ಮದುವೆ ಮಾಡಿಸುಕ್ಕೆ ರೆಡಿ ನಾವು."

ಈ ಸಾವಿತ್ರಿ ಯಾರು ಎಂದು ಕೇಳಲೇ ಎಂದುಕೊಂಡ. ಆದರೆ.... ಆಕೆಗೆ ತಿಳಿದಿರಲಾರದು. ತಿಳಿದಿದ್ದರೆ, ತನ್ನೊಡನೆ ಹೇಳುತ್ತಿರಲಿಲ್ಲವೆ ಎಂದುಕೊಂಡು ಕಾಫಿ ಕುಡಿದು ಮುಗಿಸಿ ಹೊರಟ. "ಅವನಿಗೆ ನಾನು ಬಂದಿದ್ದೆ ಅಂತ ಹೇಳಿ. ಅವನಿಗೆ ಆದಾಗ ನಮ್ಮ ಮನೆಗೆ ಬರಲಿ"

"ಇವತ್ತೇ ಕಳಿಸ್ತೀನಪ್ಪಾ. ನೀನಾದರೂ ಸ್ವಲ್ಪ ಹೇಳು. ನಿನ್ನ ಮದುವೆ ಆದ ಮೇಲೆ ಒಂಟಿಯಾಗಿ ಬಿಟ್ಟಿದ್ದಾನೆ."

"ಹೇಳ್ತೀನಿ...." ಎಂದು ಮುಕುಂದ ಹೊರಟ. ಸ್ವಲ್ಪ ದೂರದಲ್ಲೇ ಸುರೇಶ ಎದುರಾದ.

"ನಿನ್ನ ಮನೆಯಿಂದಲೇ ಬರ್ತಿದೀನಿ. ಆಸಾಮಿ ಪತ್ತೇನೇ ಇಲ್ಲ. ಎಲ್ಲಿಗೆ ಹೋಗಿದ್ದೆ?" ಸ್ನೇಹದಿಂದ ಕೇಳಿದ.

"ಗಣಪತಿ ದೇವಸ್ಥಾನದಲ್ಲಿ ಸಂಗೀತ ಕಚೇರಿ ಇತ್ತು. ಹೋಗಿದ್ದೆ"

"ಯಾವತ್ನಿಂದ ಈ ಸಂಗೀತದ ಖಯಾಲಿ?"

"ಯಾಕೆ? ನಿನ್ನ ಮದುವೆ ಆದಾಗಿನಿಂದ."

"ಚೆನ್ನಾಗಿದೆ. ಅದೆಲ್ಲಾ ರಿಟೈರ್ ಆದ ಮುದುಕರು ಮಾಡುವ ಕೆಲಸ. ಮನೆಯಲ್ಲಿ ಹೊತ್ತು ಹೋಗದಿದ್ದವರು ಹೋಗ್ತಾರೆ, ಅಂತ ಕೇಳಿದ್ದೆ. ಆದರೆ...."

"ಏನು ಮಾಡಲಿ? ನನಗೂ ಮನೇಲಿ ಹೊತ್ತು ಹೋಗ್ತಿಲ್ಲ ಅಂತ ತಿಳ್ಕೋ"

"ತಮಾಷೆ ಮಾಡಬೇಡ. ನಿಜ ಹೇಳು. ಸಾವಿತ್ರಿಯ ಜತೆ ತಿರುಗಾಡಲು ಹೋಗಿದ್ದೆಯಾ?"

"ಸಾವಿತ್ರಿ! ಯಾವ ಸಾವಿತ್ರಿ? ನಾನು ಯಾರ ಜತೆಯೂ ಹೋಗಿರಲಿಲ್ಲ"

"ಮುಚ್ಚಿಡಬೇಡ. ನಿಜ ಹೇಳು. ನಾನು ಈಗ್ತಾನೇ ನಿನ್ನ ಮನೆಯಿಂದ ಬರ್ತಿದೀನಿ"

"ಅಮ್ಮ ಹೇಳಿದಳಾ?"

"ಅಂದರೆ ನಿಮ್ಮ ಅಮ್ಮನಿಗೆ ಎಲ್ಲಾ ಗೊತ್ತಿದ್ದು ನನಗೇನೂ ಹೇಳಲಿಲ್ಲ"

"ಮತ್ತೆ ನೀನ್ಯಾಕೆ ಕೇಳ್ತಿದೀಯಾ?"

"ನಿನ್ನ ಮನೆಯಲ್ಲಿದ್ದ ವೀಕ್ಲಿಯ ಪುಟಗಳಲ್ಲಿ ಸಾವಿತ್ರಿ.... ಸಾವಿತ್ರಿ ಅಂತ ಗೀಚೀದೀಯಾ.... ಆ ಸಾವಿತ್ರಿ ಯಾರು ಅಂತ ಕೇಳಿದೆ ಅಷ್ಟೆ...."

"ಹೋಗಲಿ ಬಿಡೋ.... ಆ ಮಾತು ಏಕೆ ಈಗ? ಯಾರೂ ಇಲ್ಲ ಅಂದ್ನಲ್ಲ"

"ನಾನು ನಿನ್ನ ಆಪ್ತ ಸ್ನೇಹಿತ ಅನ್ನುವ ವಿಶ್ವಾಸವಿದ್ದರೆ, ನನಗೆ ಹೇಳಬಹುದು ಎನ್ನುವ ನಂಬಿಕೆ ಇದ್ದರೆ, ನನಗೆ ಹೇಳು, ನನ್ನ ಕೈಲಾಗುವುದಾದರೆ ನಾನು ನಿನಗೆ ಸಹಾಯ ಮಾಡ್ತೀನಿ."

"ಈಗ ಹಾಗಂತೀಯಾ! ಆಮೇಲೆ ನೀನೂ ಉಪದೇಶ ಮಾಡ್ತೀಯಾ?"

"ಹಾಗಾದರೆ ಏನೋ ಎಡವಟ್ಟು ಇರಬೇಕು. ನಿನ್ನದು ತಪ್ಪು ಅಂತ ಅನ್ನಿಸಿದರೆ ನಿನಗೆ ಬುದ್ಧಿ ಹೇಳ್ತೀನಿ. ಸರಿ ಅನ್ನಿಸಿದರೆ ನಾನು ಸಹಾಯ ಮಾಡ್ತೀನಿ. ಅದೇನು ಅಂತ ಹೇಳುವುದಾದರೆ ಬೇಗ ಹೇಳು."

"ಇವತ್ತು ಬೇಡ. ಇನ್ನೊಂದಾದ್ರೂ ಹೇಳ್ತೀನಿ" ಸುರೇಶನಿಗೆ ಇಷ್ಟವಿಲ್ಲವೆಂದರಿತ ಮುಕುಂದ ಬಲವಂತ ಮಾಡಲಿಲ್ಲ. ಅಲ್ಲಿಂದ ಸೀದಾ ತನ್ನ ಅತ್ತೆ ಮನೆಗೆ ಬಂದ. ರಾತ್ರಿಯ ಊಟ ಅಲ್ಲೇ ಮಾಡುತ್ತಿದ್ದ. ಬಾಗಿಲ ಪಕ್ಕದಲ್ಲಿದ್ದ ಕಿಟಕಿಯ ಬಳಿ ಕುಳಿತಿದ್ದ ಸಾವಿತ್ರಿಯನ್ನು ಕಂಡ ತಕ್ಷಣ ಅವನಿಗೆ ಜ್ಞಾನೋದಯವಾದಂತೆ ಎಲ್ಲಾ ತಿಳಿದು ಹೋಯಿತು.

ಇವಳೇ ಆ ಸಾವಿತ್ರಿ! ಆದರೆ.... ಇವಳಿಗೆ ಕುರುಡು ಎಂದು ಸುರೇಶನಿಗೆ ತಿಳಿದಿಲ್ಲವೆ? ಇವಳನ್ನೆಲ್ಲಿ ನೋಡಿದ? ನಾನೇ ಇದುವರೆಗೂ ಇವಳನ್ನು ಸರಿಯಾಗಿ ನೋಡಿಲ್ಲ. ಮಾತನಾಡಿಸಿಲ್ಲ. ಆದರೆ ಅವನೇಕೆ ಇವಳ ಬಗ್ಗೆ ತಲೆ ಕೆಡಿಸಿಕೊಂಡಿದ್ದಾನೆ? ಸಾವಿತ್ರಿಗೆ ಅದರ ಬಗ್ಗೆ ಅರಿವಿದೆಯೆ?ಅವಳಿಗೆ ತಿಳಿದಿರಲಾರದು. ಸುರೇಶ ಯಾರು ಎಂದು ಕೂಡಾ ಸರಿಯಾಗಿ ಗೊತ್ತಿರಲಾರದು.

ಸಾವಿತ್ರಿಯನ್ನೇ ದಿಟ್ಟಿಸಿದ. ಹೌದು. ಯಾರಾದರೂ ನೋಡಿದರೆ ಮತ್ತೊಮ್ಮೆ ನೋಡುವಂತಹ ಚೆಲುವೆಯೇ, ತಾನೆಂದೂ ಗಮನಿಸಿರಲಿಲ್ಲ. ಸುರೇಶ ಮೊದಲ ಬಾರಿಗೆ ಇವಳನ್ನು ಮೆಚ್ಚಿರಬೇಕು. ಸರಳೆಯೂ ಇವಳ ಹಾಗೇ ಇದಾಳೆ. ಆದರೆ ಸರಳೆಯ ಬಗ್ಗೆ ಅವನಿಗೆ ಏನೂ ಅನ್ನಿಸಿಲ್ಲವೆ? ಎಂದೂ ಅವಳ ಬಗ್ಗೆ ಕುತೂಹಲ ದಿಂದ ಕೇಳಿಯೂ ಇಲ್ಲ. ಮದುವೆಯ ಸಮಯದಲ್ಲಿ ಅವಳ ಜತೆ ಸಾಕಷ್ಟು ಓಡಾ ಡಿದಾನೆ.... ಅವಳ ಬಗ್ಗೆ ಏನು ಅಭಿಪ್ರಾಯವಿರಬಹುದು?

ಸರಳನೇ ಒಂದು ತರಹ. ಸುಕನ್ಯಳ ತರಹ ಅಲ್ಲ. ಅತೀ ಗಂಭೀರ. ಐದಾರು ವರ್ಷಗಳಿಂದ ಬ್ಯಾಂಕಿನಲ್ಲಿ ಕೆಲಸದಲ್ಲಿದಾಳೆ. ಆದರೆ ಒಂದು ದಿನವೂ, ಒಬ್ಬ ಗಂಡಸಿನ ಜತೆ ವಿನಾಕಾರಣ ಮಾತನಾಡುತ್ತಾ ನಿಂತಿರುವುದನ್ನು ಕಂಡಿಲ್ಲ. ಅವಳಿಗೆ ಈಗಲೇ ಮದುವೆಯಾಗುವ ಆಸೆ ಇದೆಯೋ ಇಲ್ಲವೋ,....ಅವಳನ್ನು ಕೇಳುವುದು ಹೇಗೆ? ಅಲ್ಲದೇ ಅವಳ ತಾಯಿ ಸಹ ಏನನ್ನುತ್ತಾರೋ?

ಸುಕನ್ಯ ಇಂಥ ವಿಷಯದಲ್ಲಿ ಸಹಾಯಕಳಲ್ಲ. ಅವಳಿಗೆ ತಂಗಿಯರ ಬಗ್ಗೆ ಸಹ ಹೆಚ್ಚಿನ ಆಸಕ್ತಿ ಇಲ್ಲ. ಸ್ವಲ್ಪ ಸ್ವಾರ್ಥಿ, ತಾನೀಗ ಈ ಮನೆಯ ಹಿರಿಮಗನ ಸ್ಥಾನದಲ್ಲಿದೀನಿ. ಅತ್ತೆಗೆ ಗೊತ್ತಾಗದಂತೆ ಸರಳೆಯನ್ನು ಕೇಳಬೇಕು ಎಂದುಕೊಂಡ.

ಸುಭದ್ರಮ್ಮ ಎಲ್ಲರನ್ನೂ ಒಟ್ಟಿಗೆ ಕೂರಿಸಿ ಬಡಿಸಿದರು. ಮುಕುಂದ ಮೊಟ್ಟ ಮೊದಲ ಬಾರಿಗೆ ಆಸಕ್ತಿಯಿಂದ ಮೂರು ಜನ ಅಕ್ಕತಂಗಿಯರನ್ನೇ ಗಮನಿಸುತ್ತಿದ್ದ. ತಡವರಿಸುತ್ತಾ, ಮುಗ್ಗರಿಸುತ್ತಾ ಓಡಾಡುತ್ತಿದ್ದ ಸಾವಿತ್ರಿಯ ಬಗ್ಗೆ ಕನಿಕರವೆನಿಸಿತು. ಯಾರ ಅವಲಂಬನೆಯೂ ಇಲ್ಲದೇ ಅವಳು ಇರಲಾರಳು ಎಂದು ಅನ್ನಿಸಿತ್ತು. ಗಂಭೀರವಾಗಿ ಜವಾಬ್ದಾರಿಯಿಂದ ತಿರುಗಾಡುತ್ತಿದ್ದ ಸರಳೆಯ ಬಗ್ಗೆ ಮೆಚ್ಚುಗೆ ಮೂಡಿತ್ತು. ಹೊಟ್ಟೆ ಬಾಕಿಯಂತೆ, ಗಬಗಬನೆ ತಿನ್ನುತ್ತಿದ್ದ ಸುಕನ್ಯೆಯನ್ನು ನೋಡಿ ನಗು ಬಂತು. ಊಟದ ನಂತರ ಸರಳೆಯನ್ನು ಪ್ರತ್ಯೇಕವಾಗಿ ಕೇಳಿದ.

"ನಮ್ಮ ಸುರೇಶನ ಬಗ್ಗೆ ನಿನ್ನ ಅಭಿಪ್ರಾಯವೇನು?"

"ಇದ್ದಕ್ಕಿದ್ದಂತೆ ಈ ಪ್ರಶ್ನೆ ಯಾಕೆ? ನನ್ನ ಅಭಿಪ್ರಾಯವೇಕೆ!"

"ನಿಮಗೆ ಒಪ್ಪಿಗೆ ಇದ್ದರೆ, ನಿಮ್ಮಿಬ್ಬರ ಮದುವೆ ಮಾಡಿಸೋಣ ಅಂತ"

"ಮದುವೆ? ಆ ಬಗ್ಗೆ ನಾನೆಂದೂ ಚಿಂತಿಸಿಯೇ ಇಲ್ಲ"

"ಒಂದಲ್ಲ ಒಂದು ದಿನ ಯೋಚಿಸಬೇಕಾದ ವಿಷಯ ಇದು. ಈಗಲೇ ಯೋಚಿಸಬಹುದಲ್ಲ...."

"ಮದುವೆ ಬಗ್ಗೆ ನಾನು ಹೇಗೆ ಯೋಚಿಸಲಿ? ನಾನೂ ಇಲ್ಲವಿದ್ದರೆ ಸಾವಿತ್ರಿ ಒಂಟಿಯಾಗಿ ಬಿಡ್ತಾಳೆ. ಅಮ್ಮನಿಗೆ ಆಮೇಲೆ ಯಾರು ದಿಕ್ಕು....?"

"ನಾವೆಲ್ಲರೂ ಇದೀವಲ್ಲ.. ಅಲ್ಲದೇ ಸುರೇಶ ತುಂಬಾ ಒಳ್ಳೆಯವನು. ಅವರ ಮನೆಯವರೂ ಅಷ್ಟೇ. ಸಾವಿತ್ರಿಗೆ ಏನೂ ಕಷ್ಟ ಬರುವುದಿಲ್ಲ. ನಿಮಗೆ ಅವರ ಬೆಂಬಲವಿರುತ್ತೆ"

"ಸರಿ.... ಮೊದಲು ಅವರಿಗೆ ನಮ್ಮ ಮನೆಯ ಪರಿಸ್ಥಿತಿಯನ್ನು ತಿಳಿಸಿ. ಅವರು ಒಪ್ಪಿದರೆ, ನಾನೂ ಒಪ್ತೀನಿ" ಸರಳ ಯಾವ ಭಾವ ಉದ್ವೇಗಗಳಿಗೆ ಒಳಗಾಗದೇ ನುಡಿದಾಗ ಮುಕುಂದ ಅಚ್ಚರಿಗೊಂಡ.

"ಹಾಗಾದರೆ, ನಾಳೆ ನಾಡಿದ್ದರಲ್ಲಿ, ಅವನನ್ನು ಮನೆಗೆ ಕರೆದುಕೊಂಡು ಬರಲಾ?"

"ಮನೆಗೆ ಬೇಡ. ಮನೇಲಿ ಸಾವಿತ್ರಿ ಎದುರಿಗೆ ಮಾತನಾಡಲು ಕಷ್ಟವೆನಿಸುತ್ತೆ. ಬ್ಯಾಂಕಿನ ಹತ್ತಿರವೇ ಬರಲಿ"

ಸರಳ ಇಷ್ಟು ಬೇಗ ಒಪ್ಪುವಳೆಂದು ಅವನು ತಿಳಿದಿರಲಿಲ್ಲ. ಆ ಭೂತಪ್ಪ

ಏನಂತಾನೋ, ಏನು ಮಾಡ್ತಾನೋ ಎಂದು ಚಿಂತಿಸಿದ. ಮಾರನೇ ದಿನವೇ ಸುರೇಶನ್ನ ಭೇಟಿಯಾದ್ನ.

"ಸರಳನ ಬಗ್ಗೆ ನಿನ್ನ ಅನಿಸಿಕೆ ಏನು?" ದಿಢೀರನೇ ಕೇಳಿದ.

"ಯಾವ ಸರಳಾ?"

"ಏನಯ್ಯಾ ಹೀಗೆ ಕೇಳ್ತೀಯಾ? ನನ್ನ ನಾಟಿನಿ ಸರಳಾ.... ಅವಳ ಜತೆ ಜತೆ ಓಡಾಡಿದೀಯ.. ಮಾತನಾಡಿದೀಯ.. ಅವಳ ಬಗ್ಗೆ.ನಿನ್ನ ಅಭಿಪ್ರಾಯವೇನು ಎಂದು ಕೇಳಿದೆ..."

"ನೀನ್ಯಾಕೆ ಹಾಗೆ ಕೇಳ್ತಿದೀಯ ಅಂತ ನನಗೆ ಅರ್ಥವಾಯ್ತು. ಅವಳನ್ನ ನನಗೆ ಪ್ರಪೋಸ್ ಮಾಡ್ತಿದೀಯ ತಾನೇ.... ಹೌದಾ?"

"ಹೌದು, ಯಾಕಾಗಬಾರದು! ಚೆನ್ನಾಗಿದಾಳೆ. ಕೆಲಸದಲ್ಲಿದಾಳೆ. ಒಳ್ಳೆಯ ಸ್ವಭಾವದವಳು."

"ಆದರೆ.... ಮುಂಚೆ ಸರಳನ್ನ ಮೆಚ್ಚಿದ್ದೆ ನಿಜ. ಆದರೆ ಸಾವಿತ್ರೀನ ನೋಡಿದ ಮೇಲೆ ಸರಳ ಸಪ್ಪೆ ಅಂತ ಅನ್ನಿಸುತ್ತೆ." ನಿಜವನ್ನೇ ಹೇಳಿದ.

"ಸಾವಿತ್ರಿ? ಅವಳ ತಂಗಿ ಸಾವಿತ್ರಿ ತಾನೇ....?" ಯಾವಾಗ ನೋಡಿದೆ?"

"ಅವರ ಮನೆಯಲ್ಲೇ. ಅವಳು ಕಣ್ಣಿಗೆ ತಂಪು.... ಕಿವಿಗೆ ಇಂಪು ಅವಳು ಹಾಡುವುದನ್ನು ಕೇಳಿದೀಯಾ? ಎಷ್ಟು ಚೆನ್ನಾಗಿ ಹಾಡ್ತಾಳೆ..."

"ಇಲ್ಲಪ್ಪಾ ಇಲ್ಲ. ನಾನೆಂದೂ ಅವಳು ಹಾಡಿದ್ದನ್ನು ಕೇಳಿಲ್ಲ. ನಾನು ಬರೀ ಸುಕನ್ಯನ್ನೇ ನೋಡಿದ್ದು. ಅವಳ ಮಾತುಗಳನ್ನು ಕೇಳಿದೆ...ಅವಳನ್ನು ಮಾತ್ರ ಪ್ರೀತಿಸಿದೆ.... ನಿನ್ನ ಹಾಗೆ ನಾನು ಇಬ್ಬರ ಗೊಂದಲದಲ್ಲಿ ಸಿಕ್ಕಿ ಬಿದ್ದಿಲ್ಲ"

"ನಾನು ಮೊದಲು ನೋಡಿದ್ದು ಸಾವಿತ್ರಿಯನ್ನೇ.... ಆಮೇಲೆ ಸರಳನ್ನ ನೋಡಿದಾಗ ಅವಳೇ ಎಂದುಕೊಂಡೆ. ಆದರೆ ಅವರಿಬ್ಬರೂ ಬೇರೆ ಬೇರೆ ಎಂದು ತಿಳಿದ ಮೇಲೆ ತನ್ನ ತಲೆಯೇ ಕೆಟ್ಟು ಹೋಗಿದೆ. ನಾನು ಸಾವಿತ್ರೀನ ಮಾತ್ರ ಪ್ರೀತಿಸ್ತೀನಿ."

"ಅದು ನಿನ್ನ ಭ್ರಮೆ ಅಷ್ಟೆ. ನೀನು ಇಬ್ಬರನ್ನೂ ಪ್ರೀತಿಸ್ತಿಲ್ಲ. ಇಬ್ಬರನ್ನೂ ಮೆಚ್ಚಿದೀಯ ಅಷ್ಟೆ..."

"ಹಾಗೇನಿಲ್ಲ. ನಾನು ಸಾವಿತ್ರೀನೇ ಮದುವೆಯಾಗಬೇಕು ಅಂತ ಅಂದ್ಕೊಂಡಿದೀನಿ.... ಅವಳಿಗೆ ಒಂದು ಬಾಳನ್ನು ಕೊಡುವ ಆಸೆ...."

"ಆ ಆಸೇನ ಕನಸ್ನಲ್ಲೂ ಯೋಚಿಸಬೇಡ...."

"ಯಾಕೆ ತಪ್ಪೇನು?"

"ತಪ್ಪೇನಿಲ್ಲ. ಆದರೆ ಇದರಿಂದ ಅವಳಿಗೆ ಬಾಳು ಸಿಗುತ್ತೆ ಎನ್ನುವುದು ಆಡುವಷ್ಟು ಸುಲಭವಲ್ಲ.... ಬರೀ ತೊಂದರೆ, ನಿರಾಸೆ.... ಸಾವಿತ್ರಿಯಂತೂ ಸುಖವಾಗಿರುವುದಿಲ್ಲ...."

"ಏಕೆ ಹಾಗಂತೀಯ? ನನ್ನ ಮೇಲೆ ನಂಬಿಕೆ ಇಲ್ಲವಾ?"

"ಇದು ನಂಬಿಕೆ ಪ್ರಶ್ನೆ ಅಲ್ಲ.... ಅಲ್ಲದೇ ಬರೀ ನಿನ್ನೊಬ್ಬನ ಮಾತಲ್ಲ. ನಿನ್ನ ತಾಯಿ ತಂದೆಯರಿಗೆ ಬೇಸರವಾಗುತ್ತೆ. ನಿನ್ನ ಅಕ್ಕ, ಭಾವಂದಿರಿಗೆ ಸಾವಿತ್ರಿ ಆಡಿಕೊಳ್ಳುವ ವಸ್ತುವಾಗ್ತಾಳೆ. ನಿನ್ನ ಅತ್ತಿಗೆ ನಿನ್ನ ಅಣ್ಣ, ನಿನ್ನನ್ನು ವಿಚಿತ್ರವಾಗಿ ನೋಡಬಹುದು. ನೀನು ಪ್ರೀತಿಸುವ ಸಾವಿತ್ರಿ ಇಕ್ಕಟ್ಟಿಗೆ ಸಿಕ್ಕಿ ಬೀಳುವ ಪ್ರಸಂಗ ಬರಬಹುದು.... ಅವಳಿಗೆ ತೊಂದರೆಯಾಗುವುದಿಲ್ಲವೆ! ಅದು ಸರೀನಾ! ಹೋಗಲಿ... ಅವಳು ನಿನ್ನನ್ನು ಯಾವ ರೀತಿ ನೋಡಿಕೊಳ್ಳುವ ಸ್ಥಿತಿಯಲ್ಲಿದಾಳೆ? ಅಡಿಗೆ ಮಾಡಿ ಬಡಿಸ್ತಾಳೆಯೆ? ನಿನ್ನ ಮಕ್ಕಳನ್ನೂ ಎತ್ತಿ ಆಡಿಸಿ ಬೆಳೆಸುವ ಸ್ವಂತ ಶಕ್ತಿ ಇದೆಯೆ! ಅವಳೇ ಎಲ್ಲಾದಕ್ಕೂ ನಿನ್ನ ಅವಲಂಬನೆ ಯಲ್ಲಿರುತ್ತಾಳೆ. ನೀನು ಹೊರಗೆ ಕೆಲಸಕ್ಕೆ ಹೋಗ್ತೀಯೋ... ಅವಳನ್ನೇ ನೋಡಿಕೊಳ್ತೀಯೋ... ಅದರಿಂದ ಅವಳಿಗೆ ನಿರಾಸೆಯಾಗುವುದಲ್ಲವೆ? ಅವಳ ಮನಸ್ಸು ಕೆಡುವುದಿಲ್ಲವೆ? ನಿನ್ನ ಜತೆ ಹೊರಗೆ ಹೋಗುವಂತಿಲ್ಲ. ಬೇರೆಯವರ ಜತೆ ಬೆರೆಯುವಂತಿಲ್ಲ. ಅದು ನಿಮ್ಮಿಬ್ಬರನ್ನೂ ಚುಚ್ಚುತ್ತೆ. ಒಂದು ವೇಳೆ ಮದುವೆಯಾದ ಮೇಲೆ ಅವಳು ಹೀಗಾಗಿದ್ದರೆ, ಅದು ಬೇರೆ ಮಾತು. ಆಗ ಯಾರೂ ಏನೂ ಮಾಡುವಂತಿರಲಿಲ್ಲ. ಗ್ರಹಚಾರ ಎಂದು ಕೊಂಡು, ಎಲ್ಲವನ್ನೂ ಅನುಭವಿಸಬೇಕಾಗುತ್ತಿತ್ತು. ಆದರೆ ಈಗ.... ತಿಳಿದೂ ತಿಳಿದೂ ನೀನು ಈ ಕೆಲಸ ಮಾಡುವುದನ್ನು ಯಾರೂ ಒಪ್ಪುವುದಿಲ್ಲ. ನಿನ್ನ ಸ್ನೇಹಿತ ನಾನೂ ಸಹ ಒಪ್ಪುವುದಿಲ್ಲ..."

"ಮುಕುಂದಾ.... ನೀನೂ ಸಹ ಹೀಗೆ ಅಂತೀಯಲ್ಲ.... ನೀನು ನನಗೆ ಈ ವಿಷಯದಲ್ಲಿ ಸಹಾಯ ಮಾಡ್ತೀಯಾ ಎಂದುಕೊಂಡಿದ್ದೆ."

"ಹ್ಞೂ....ಹ್ಞಾ.... ಈ ವಿಷಯದಲ್ಲಿ ನನ್ನ ಸಹಾಯ ಖಂಡಿತಾ ಇಲ್ಲ. ಆದರೆ ಒಂದು ಉಪಾಯ ಹೇಳ್ತೀನಿ....ಸರಳ ಹೇಗೂ ನಿನ್ನನ್ನು ಒಪ್ಪಿದಾಳೆ. ಅವಳನ್ನು ಮದುವೆಯಾಗು. ಅವಳು ಸ್ವಾರ್ಥಿಯಲ್ಲ. ಸಾವಿತ್ರೀನ ತನ್ನ ಜತೆ ಇಟ್ಟುಕೊಳ್ಳು ತ್ತಾಳೆ.... ಅದೂ ನೀನು ಒಪ್ಪಿದರೆ, ಆಗ ನೀನು ಅವಳನ್ನು ದಿನಾ ನೋಡಬಹುದು...

ಅವಳು ಹಾಡುವುದನ್ನು ಕೇಳಬಹುದು... ಅವಳಿಗೆ ನಿನ್ನಿಂದಾಗುವ ಸಹಾಯವನ್ನು ಮಾಡಬಹುದು. ಅವಳನ್ನು ಸಂಗೀತ ಲೋಕದಲ್ಲಿ ಮುಂದಕ್ಕೆ ತರಬಹುದು... ನೀನು ಪ್ರೀತಿಸಿದವಳಿಗೆ ನೀನು ಇಷ್ಟು ಮಾಡಿದರೆ, ಅದಕ್ಕಿಂತ ಇನ್ನೇನು ಬೇಕು? ಆಗ ನಿನಗೂ ಒಂದು ತರಹ ತೃಪ್ತಿಯ ಭಾವನೆ ಸಿಗುತ್ತದೆ....ನೀನು ಸರಳನ ಬಗ್ಗೆ ಆದಷ್ಟು ಬೇಗ ಏನೂ ಇತ್ಯರ್ಥ ಮಾಡದಿದ್ದರೆ, ಅವಳೂ ನಿನಗೆ ಸಿಗುವುದಿಲ್ಲ. ಚೆನ್ನಾಗಿದಾಳೆ. ಬ್ಯಾಂಕಿನಲ್ಲಿ ಕೆಲಸದಲ್ಲಿದಾಳೆ. ಯಾರಾದರೂ ಸರಿ, ಅವಳ ಷರತ್ತುಗಳಿಗೆ ಒಪ್ಪಿ ಅವಳನ್ನು ಮದುವೆಯಾಗ್ತಾರೆ. ಆಗ ನಿನಗೆ ಈ ಅವಕಾಶವೂ ತಪ್ಪಿ ಹೋಗುತ್ತೆ...."

"ಆಗ ಸಾವಿತ್ರಿಯನ್ನೇ ಸುಲಭವಾಗಿ ಮದುವೆಯಾಗಬಹುದು.."

"ನೀನೇಕೆ ಹೀಗೆ ಮೂರ್ಖನಂತೆ ಆಡ್ತೀಯೋ ನನಗೆ ತಿಳೀದು... ನಿನ್ನನ್ನು ಮದುವೆಯಾಗಲು ಸಾವಿತ್ರಿಯೇ ಒಪ್ಪದಿದ್ದರೆ ಆಗೇನು ಮಾಡ್ತೀಯಾ?...ನಾನು ಇಷ್ಟು ಹೇಳಿದೀನಪ್ಪಾ.... ನೀನು ಅದೆಷ್ಟು ಯೋಚಿಸ್ತೀಯಾ ಯೋಚಿಸು. ನನ್ನ ಸ್ನೇಹಿತ ನನಗೆ ಸಲಹೆ ಕೊಡಲಿಲ್ಲ ಎಂದು ಆಮೇಲೆ ಮಾತ್ರ ಬೈಯಬೇಡ."

"ನೀನು ಇಷ್ಟು ಮಾತನಾಡಿ, ನನ್ನ ತಳಮಳವನ್ನು ಇನ್ನೂ ಹೆಚ್ಚಿಸಿದೀಯ. ನಾನೇನು ಮಾಡಬೇಕೋ ತಿಳೀತಿಲ್ಲ"

"ನೀನು ದೇವರನ್ನು ನಂಬ್ತೀಯಾ ತಾನೇ?...."

"ಹೂಂ ಯಾಕೆ?"

"ಹಾಗಾದರೆ ದೇವರ ಮೇಲೆ ಭಾರ ಹಾಕಿ, ಅವರಿಬ್ಬರ ಹೆಸರನ್ನೂ ಬೇರೆ ಬೇರೆ ಚೀಟಿಗಳಲ್ಲಿ ಬರೆದು ಮಡಿಸಿಟ್ಟು, ಚೀಟಿಯನ್ನು ಎತ್ತಿ ನೋಡು. ಅವರಲ್ಲಿ ಯಾರ ಹೆಸರು ಇರುತ್ತೋ ಅವರನ್ನೇ ಯಾವ ಅಳುಕೂ ಇಲ್ಲದೇ ಮದುವೆಯಾಗು. ನಂತರ ನೀನು ಯಾರನ್ನೂ ಏನೂ ಅನ್ನುವ ಹಾಗಿಲ್ಲ. ಅವರ ಕಷ್ಟಸುಖ, ನಿನಗೆ ಸೇರಿದ್ದು. ಹ್ಞಾ... ಆಮೇಲೆ ಇನ್ನೊಂದು ಮಾತು... ಈ ತಂಟೆ ಯಾವುದೂ ಬೇಡ.... ಅಂತ ಅನ್ನಿಸುವುದಾದರೆ, ಇವರಿಬ್ಬರನ್ನೂ ಮರೆತು, ಬೇರೆ ಒಬ್ಬಳನ್ನು ಮದುವೆಯಾಗಿ ಸುಖವಾಗಿರು ರಾಜಕುಮಾರನಂತೆ. ಆಗ ನಿಶ್ಚಿಂತೆ."

"ನನ್ನ ಮದುವೆ ಚಿಂತೆ ನಿನಗೆ ಯಾವಾಗ್ನಿಂದ?"

"ನೀನು ನನ್ನ ಸ್ನೇಹಿತ, ಅವಳು ನನ್ನ ನಾದಿನಿ. ಅವಳ ಮದುವೆ ಜವಾಬ್ದಾರಿ ನನ್ನ ಮೇಲಿದೆ. ಅಷ್ಟೇ ಸುಲಭವಾಗಿ ಅವಳಿಗೆ ಮದುವೆಯಾಗುವುದಾದರೆ, ಸುಕನ್ಯಾಗೂ ನಿರಾತಂಕ. ನನಗೂ ಸಂತೋಷ... ಹೌದಲ್ವಾ!...."

"ಆಗಲಿ. ಯೋಚಿಸ್ಬಿಟ್ಟು ಹೇಳ್ತೀನಿ"

ಅವನು ಹಾಗೆ ಹೇಳಿದ್ದರೂ, ಅವನ ಯೋಚನೆ ಬಗೆಹರಿಯಲಿಲ್ಲ. ಸರಳನ ಬಗ್ಗೆ ಯಾವ ದೋಷ ಕಂಡು ಬರದಿದ್ದರೂ, ಸಾವಿತ್ರಿಯನ್ನು ಮದುವೆಯಾದರೆ ತಾನು ಏನೋ ಮಹತ್ಸಾಧನೆ ಮಾಡಿದಂತಾಗುತ್ತದೆ ಎಂದೂ ಅನ್ನಿಸುತ್ತಿತ್ತು. ಆದರೆ....?

ಮುಕುಂದ ಹೇಳಿದಂತೆ, ನಾನೊಬ್ಬ ಸಾಮಾನ್ಯ ಮನುಷ್ಯ. ನನ್ನ ಆಸೆ ಆಕಾಂಕ್ಷೆಗಳು ಒಂದು ಮಿತಿಯಲ್ಲಿರಬೇಕು. ಈಗೇನೋ ಆದರ್ಶದ ಬೆನ್ನೇರಿ ಹೋಗಬಹುದು. ಆದರೆ ಮುಂದೆ?ಮುಂದೆ ಎಲ್ಲವನ್ನು ಹೇಗೆ ಎದುರಿಸಬೇಕು ಎಂದು ತಿಳಿಯುತ್ತಿಲ್ಲವಲ್ಲ. ಅಮ್ಮ ಉಪಾಯವನ್ನು ತಿಳಿಸಿದ್ದರೇ.... ಮುಕುಂದ ಸಲಹೆಯನ್ನು ನನ್ನ ಪರವಾಗಿ ಕೊಟ್ಟಿದ್ದರೇ...? ಆದರೆ ಇಬ್ಬರೂ ಬೇರೆ ಉಪದೇಶವನ್ನೇ ಮಾಡಿದ್ದರು.

ದೇವರು ಮಾಡಿಸಿದಂತಾಗಲಿ ಎಂದುಕೊಂಡು, ದೇವರ ಮೇಲೆ ಭಾರ ಹಾಕಿ, ದೇವರ ಮನೆಯನ್ನು ಒಳಹೊಕ್ಕ. ಮೊದಲು ಬಾಗಿಲನ್ನು ಭದ್ರಪಡಿಸಿ, ಸರಸರನೆ ಎರಡು ಸಣ್ಣ ಚೀಟಿಗಳಲ್ಲಿ ಸಾವಿತ್ರಿ, ಸರಳ ಎಂದು ಬೇರೆ ಬೇರೆ ಬರೆದು, ಕಣ್ಣು ಮುಚ್ಚಿ, ಚೆನ್ನಾಗಿ ಮುಚ್ಚಿದ ಮುಷ್ಟಿಯಲ್ಲಿ ಕುಲುಕಿ, ಒಂದು ಚೀಟಿಯನ್ನು ಆರಿಸಿದ. ಬಿಚ್ಚಿ ನೋಡಿದಾಗ ಕೈ ನಡುಗಿತು. ಸರಳನ ಹೆಸರನ್ನು ಬರೆದ ಚೀಟಿಯನ್ನೇ ಅವನು ಆರಿಸಿದ್ದ.

ಅವನಿಗೆ ಸಂತೋಷವೂ ಆಗಲಿಲ್ಲ. ದುಃಖವೂ ಆಗಲಿಲ್ಲ. ಒಂದು ಘಳಿಗೆ ಬೇರೆ ಯಾರನ್ನಾದರೂ ಮದುವೆಯಾಗಲೇ, ಇವರಿಬ್ಬರೂ ಬೇಡವೇ ಬೇಡ ಎಂದೂ ಚಿಂತಿಸಿದ. ಆದರೆ ಆಮೇಲೆ ಸಾವಿತ್ರಿಯನ್ನು ನೆನಸುವಂತೆಯೇ ಇಲ್ಲ ಎಂದುಕೊಂಡ.

ಅಂತೂ ಮುಕುಂದನ ಮಧ್ಯಸ್ಥಿಕೆಯಿಂದ, ಸರಳ ಸುರೇಶರ ಮದುವೆ ನಿಶ್ಚಯವಾಯಿತು. ಈ ಪ್ರಸ್ತಾಪ ಬಂದಾಗ ಸುಭದ್ರಮ್ಮ ಮುಖ ಸಿಂಡರಿಸಿದ್ದಳು. ಸರಳನಿಗೂ ಮದುವೆಯಾಗಿಬಿಟ್ಟರೆ ತಮ್ಮ ಗತಿ ಏನು ಎನ್ನುವ ಆತಂಕದಿಂದ. ತಾಯಿಯ ಆತಂಕವನ್ನು ಗಮನಿಸಿದ ಸರಳ ಸಮಾಧಾನ ಮಾಡಿದ್ದಳು, ಸುರೇಶನ್ನ ತನ್ನದೇ ಆದ ಕೆಲವು ನಿಯಮಗಳಿಗೆ ಒಪ್ಪಿಸಿದೀನಿ ಎಂದು ಹೇಳಿದರೂ, ಅದೂ ಸರಿ ಎನಿಸಿರಲಿಲ್ಲ. 'ಅಳಿಯ ಮಗನಲ್ಲ' ಅಂತಾರೆ. ಅವನನ್ನು ಅವಲಂಬಿಸಬೇಕಾದ ಸ್ಥಿತಿ ಬಂದಿತಲ್ಲ ಎಂದು ಮನಸ್ಸು ಚಿಕ್ಕದಾಗಿತ್ತು.

ಸಾವಿತ್ರಿಯ ಕಿವಿಗೆ ಈ ವಿಷಯ ತಿಳಿದಾಗ, ತಾನು ಸೋತಂತಹ ಅನುಭವ

ವಾಗಿತ್ತು. ಸುರೇಶ ತನ್ನನ್ನು ಮೆಚ್ಚಿದ್ದಾನೆ ಎನ್ನುವುದು ತಿಳಿದಿತ್ತು. ಅವನ ಒಳ್ಳೆಯ ಮಾತುಗಳಿಗೆ ಮಾರು ಹೋಗಿದ್ದಳು. ಆದರೆ ಅವನು ತನ್ನನ್ನು ಮದುವೆಯಾಗುವ ಆಸೆಯನ್ನಿಟ್ಟುಕೊಂಡಿದ್ದ ಎನ್ನುವುದು ಅವಳಿಗೆ ನಿಲುಕದ ವಿಷಯ....ಆದರೂ ಅವನು ಸರಳೆಯನ್ನು ಮದುವೆಯಾಗುತ್ತಿದ್ದಾನೆ ಎನ್ನುವ ವಿಷಯ ತಿಳಿದಾಗ ಸಂತೋಷವಂತೂ ಆಗಲಿಲ್ಲ. ಅವನು ಬೇರೆ ಯಾರನ್ನಾದರೂ ಮದುವೆಯಾಗಿದ್ದರೆ ಚೆನ್ನಾಗಿತ್ತೇನೋ ಅಂತ ಸಹ ಅನ್ನಿಸಿತ್ತು.

ಸಿಕ್ಕಾಪಟ್ಟೆ ಸುಮ್ಮನೇ ವ್ಯಯಮಾಡಿ, ಅದ್ದೂರಿಯ ಮದುವೆಯನ್ನು ಮಾಡಿಕೊಳ್ಳುವ ಆಸೆ ಇಬ್ಬರಿಗೂ ಇರಲಿಲ್ಲವಾದ್ದರಿಂದ, ಸರಳವಾಗಿ ಮದುವೆಯಾಗಬೇಕೆಂದು ಇಬ್ಬರೂ ನಿರ್ಧರಿಸಿದ್ದರು. ಸುರೇಶನ ತಂದೆ ತಾಯಿ ಸಹ ಸಮ್ಮತಿಸಿದ್ದರು.

ಅತಿ ಹತ್ತಿರದ ಸಂಬಂಧಿಗಳನ್ನು, ತುಂಬಾ ಬೇಕಾದವರನ್ನು ಮಾತ್ರ ಆಹ್ವಾನಿಸಿ, ಯಾವುದಾದರೂ ದೇವಸ್ಥಾನದಲ್ಲಿ ಮದುವೆಯಾಗುವುದೆಂದು ನಿರ್ಧರಿಸಿದ್ದರು. ಅದರಂತೆ, ಮನೆಯವರ ಅನುಕೂಲಗಳನ್ನು ನೋಡಿಕೊಂಡು, ದಿನವನ್ನು ಗೊತ್ತು ಮಾಡಿದ್ದರು. ಹಳ್ಳಿಯಿಂದ ಮುಕುಂದನ ಮನೆಯವರ್ಯಾರೂ ಬಂದಿರಲಿಲ್ಲ. ಸಾವಿತ್ರಿಯನ್ನು ಕರೆತರಲೇಬೇಕು. ಎಂದು ಸುರೇಶ ಬಲವಂತ ಮಾಡಿದ್ದರಿಂದ, ಸಾವಿತ್ರಿ ಸಹ ಮದುವೆ ಮಂಟಪಕ್ಕೆ ಬಂದಿದ್ದಳು. ಸುರೇಶ ಆಗಾಗ್ಗೆ ಅವಳ ಕಡೆ ನೋಡುತ್ತಿದ್ದುದು ಅವಳ ಅರಿವಿಗೆ ಬಂದಿರಲಿಲ್ಲ. ಯಾವುದೇ ಭಾವನೆಗಳನ್ನು ತೋರ್ಪಡಿಸದೇ, ಗಂಭೀರ ವದನರಾಗಿ ವಧೂವರರು, ಪುರೋಹಿತರ ಮಂತ್ರಗಳಿಗೆ ಸ್ಪಂದಿಸಿ, ಸುಮುಹೂರ್ತದಲ್ಲಿ ದಂಪತಿಗಳಾದರು.

ಅದೇ ದಿನ ಸಾಯಂಕಾಲ, ಸುರೇಶ, ಸರಳ ತಮ್ಮ ತಮ್ಮ ಸಹೋದ್ಯೋಗಿಗಳಿಗೆ ಪಾರ್ಟಿ ಇಟ್ಟುಕೊಂಡಿದ್ದರು. ಸುರೇಶನ ಮನೆಯವರಿಗೆ ಸರಳ ಮೆಚ್ಚುಗೆಯಾಗಿದ್ದಳು. ಸುರೇಶನ ಅತ್ತಿಗೆ ರತ್ನ ತಾನೇ ಸುಂದರಿ ಎಂದು ಮೆರೆಯುತ್ತಾಳೆ ಎಂದು ಭಾವಿಸಿದ್ದ, ಅವನ ಅಕ್ಕಂದಿರಿಗೆ ಸುರೇಶನ ಹೆಂಡತಿ ಇನ್ನೂ ಚೆಲುವೆ ಎಂದು ಸಂತಸವಾಗಿತ್ತು. ಸರಳನ ಸೌಜನ್ಯ ಎಲ್ಲರನ್ನೂ ಆಕರ್ಷಿಸಿತ್ತು. ಪಂಕಜಮ್ಮನಿಗೆ ಖುಷಿ. ಸಧ್ಯ, ಸಾವಿತ್ರಿಯ ಚಿಂತೆ ಬಿಡುವಂತೆ ಆಯ್ತಲ್ಲ ತನ್ನ ಮಗನಿಗೆ ಎಂದು.

ಸುಕನ್ಯ ಮುಕುಂದರಂತೆ, ಈ ದಂಪತಿಗಳು ಹನಿಮೂನ್‌ಗೆಂದು ಎಲ್ಲಿಗೂ ಹೋಗಲಿಲ್ಲ. ಒಂದು ವಾರ ಕಳೆದ ನಂತರ, ರಜವಿಲ್ಲದ್ದರಿಂದ ತಮ್ಮ ತಮ್ಮ ಕೆಲಸಗಳಿಗೆ ಹೋಗಲು ಪ್ರಾರಂಭಿಸಿದ್ದರು. ಹೊಸದಾಗಿ ಮದುವೆಯಾದವನ ಭಾವ

ಉತ್ಸಾಹವೂ ಸುರೇಶನಲ್ಲಿರಲಿಲ್ಲ. ಸರಳೆಯೊಡನೆ ಕಳೆದ ಘಳಿಗೆಗಳು ಅವನಿಗೆ ಯಾವ ಖುಷಿಯನ್ನೂ ಕೊಟ್ಟಿರಲಿಲ್ಲ. ಬಯಕೆ ತೀರಿದ್ದರೂ, ಯಾವುದೋ ಅತೃಪ್ತಿ ಅವನನ್ನು ಕಾಡಿತ್ತು. ಸರಳನ ಜತೆಯಲ್ಲಿ ಅವರ ಮನೆಗೆ ಬಂದಾಗ, ಸಾವಿತ್ರಿಯನ್ನು ಕಣ್ತುಂಬಾ ನೋಡುತ್ತಿದ್ದ. ಅವನ ಚಿತ್ತ ಚಂಚಲವಾಗುತ್ತಿತ್ತು. ಯೋಗಕ್ಷೇಮವನ್ನು ವಿಚಾರಿಸುವ ನೆವದಲ್ಲಿ ಅವಳನ್ನು ಮಾತಿಗೆಳೆಯುತ್ತಿದ್ದ. ಸಂಗೀತಾಭ್ಯಾಸ ಮಾಡು ತ್ತಿದ್ದರೆ, ಗಂಧರ್ವ ಲೋಕದಿಂದ ಇಳಿದು ಬಂದಿರುವಳ ಜತೆ ಸರಸವಾಡುತ್ತಿರುವಂತೆ ಕಲ್ಪಿಸಿಕೊಳ್ಳುತ್ತಿದ್ದ. ಅವನ ತಳಮಳ ಸಾವಿತ್ರಿಗೆ ತಿಳಿಯಲಿಲ್ಲ. ಸರಳ ಗಮನಿಸಲಿಲ್ಲ.

ಸುಕನ್ಯಂಗೆ ಮತ್ತೆ ಈ ಬಾರಿಯೂ ಗರ್ಭವಿಲ್ಲದೇ ಗರ್ಭಪಾತವಾಯಿತು. ಇದು ಮೂರನೆಯ ಸಲ. ಅವಳು ಗಾಭರಿಯಾದಳು. ಡಾಕ್ಟರು ಡಿ. ಅಂಡ್. ಸಿ. ಮಾಡಿಸಬೇಕೆಂದು ಹೇಳಿದ್ದರು. ಅದೂ ಆಯಿತು. ಅವಳು ಬಹಳ ನಿತ್ರಾಣ ವಾಗಿದ್ದಳು. ಅವಳಿಗೆ ಸಹಾಯಕಳಾಗಿ, ಸುಭದ್ರಮ್ಮ ಅವಳ ಮನೆಗೆ ಹೋಗಿದ್ದರು. ಸಾವಿತ್ರಿಯ ಜತೆಗೆಂದು ಸರಳ ನಾಲ್ಕು ದಿನಗಳ ಮಟ್ಟಿಗೆ ತನ್ನ ತಾಯಿಯ ಮನೆಗೆ ಬಂದಿದ್ದಳು.

ಅಂಥ ಒಂದು ದಿನ, ಭಾನುವಾರ, ಸರಳ ಬ್ಯಾಂಕಿಗೆ ಹೋಗಿದ್ದ ಸಮಯದಲ್ಲಿ ಸುರೇಶ ಅವರ ಮನೆಗೆ ಬಂದ. ಕಿಟಕಿಯ ಬಳಿ ಕುಳಿತು ತಲೆ ಬಾಚಿಕೊಳ್ಳುತ್ತಾ ನಿಂತಿದ್ದ ಸಾವಿತ್ರಿ ಅವನ ಕಣ್ಣಿಗೆ ಬಿದ್ದಳು. ಅವನ ಮನಸ್ಸು ಕುಣಿಯಿತು.

"ಸರಳ ಬಂದಿಲ್ವಾ" ಎಂದು ಕೇಳುತ್ತಾ ಕಿಟಕಿಯ ಬಳಿ ಬಂದು ನಿಂತ. "ಇಲ್ಲ. ಒಳಗೆ ಬನ್ನಿ" ಎಂದು ಸಾವಿತ್ರಿ ಉತ್ಸಾಹ ಸಡಗರದಿಂದ ಬಾಗಿಲನ್ನು ತೆರೆದು ಆಹ್ವಾನಿಸಿ ದಾಗ. ಅವಳ ಮನಸ್ಸಿನ ಗರಿ ಬಿಚ್ಚಿಕೊಂಡಿತು. ಅವನು ಒಳಗೆ ಅಡಿ ಇಟ್ಟ. ಕುರ್ಚಿ ಯನ್ನು ಎಡವುದರಲ್ಲಿದ್ದ ಅವಳನ್ನು ಹಿಡಿದಾಗ, ಅವನ ಸಂಯಮ ಮೀರಿತು. ಆ ಗಳಿಗೆಗಾಗಿ ತಾನು ಕಾದಿದ್ದೇನೋ ಎನ್ನುವಂತೆ ಅವಳನ್ನು ತನ್ನ ಬಾಹುಗಳಲ್ಲಿ ಬಂಧಿಸಿದ. ಸಾವಿತ್ರಿ ಸಹ ಅವನ ಅಪ್ಪುಗೆಯನ್ನು ಸ್ವೀಕರಿಸಿ, ಅವನಿಗೆ ಅನುಕೂಲವನ್ನೇ ಮಾಡಿಕೊಟ್ಟಳು. ಇಬ್ಬರೂ, ಆ ಸಮಯಕ್ಕಾಗಿ ಕಾಯುತ್ತಿದ್ದವರಂತೆ ಹತ್ತಿರವಾದ ಅವರಿಬ್ಬರೂ, ಆಲಿಂಗನದ ಸುಖದಲ್ಲಿ ಮೈ ಮರೆತರು. ಯಾವ ಅಳುಕೂ ಇಲ್ಲದೇ ಸಾವಿತ್ರಿ ಅವನ ಪ್ರೀತಿಗೆ ಮಣಿದಳು. ಸುರೇಶ, ತಾನು ಪ್ರೀತಿಸಿದವಳು ಸುನಾಯಾಸ ವಾಗಿ ತನ್ನವಳಾದದ್ದಕ್ಕೆ ಹಿಗ್ಗಿದ್ದ. ಸ್ವರ್ಗ ಸಿಕ್ಕಷ್ಟು ಸಂತೋಷಪಟ್ಟ. ತಾವಿಬ್ಬರೂ

ಅನುಚಿತವಾಗಿ ನಡೆದುಕೊಳ್ಳುತ್ತಿದ್ದೇವೇನೋ ಎಂಬ ಹಿಂಜರಿಕೆಯೇ ಇರಲಿಲ್ಲ ಇಬ್ಬರಿಗೂ. ಆರಾಮವಾಗಿ ಆ ಸಮಯವನ್ನು ಸುಖದಲ್ಲಿ ಕಳೆದರು.

"ಅನಿರೀಕ್ಷಿತವಾದರೂ, ತನಗೆ ಅಲಭ್ಯವೆನಿಸಿದ್ದ ಆ ಪ್ರೀತಿ, ಆ ಸುಖ ತನಗೆ ಮೆಚ್ಚಿಗೆಯಾದವನಿಂದ ದೊರೆಕಿತು" ಎಂದು ನೆಮ್ಮದಿಯಿಂದ ಮಲಗಿದ್ದವಳನ್ನೇ ಮೆಚ್ಚುಗೆಯಿಂದ ನೋಡಿ ಸುರೇಶ ತನ್ನ ಮನೆಗೆ ಹಿಂತಿರುಗಿದ್ದ. ಆ ನಂತರ ಅಲ್ಲಿದ್ದು ಸರಳನಿಗಾಗಿ ಕಾಯುವುದು ಹಿತವಾಗಿ ಕಂಡಿರಲಿಲ್ಲ ಅವನಿಗೆ. ಸರಳ ಬರುವುದಕ್ಕೆ ಮುಂಚೆಯೇ ಅಲ್ಲಿಂದ ಹೊರಟಿದ್ದ.

ಯಾವುದೋ ಒಂದು ವಿಲಕ್ಷಣವಾದ ಆನಂದದಲ್ಲಿ ಮುಳುಗಿದ್ದ ಸಾವಿತ್ರಿ, ಅವನು ಹೋದನಂತರ, ತಂಬೂರಿಯನ್ನು ಹಿಡಿದು ಕುಳಿತು ತನಗೆ ಇಷ್ಟವಾದ ಮೋಹನ ರಾಗದ ಕೀರ್ತನೆಯೊಂದನ್ನು ಹಾಡತೊಡಗಿದಳು. ದಿನಕ್ಕಿಂತ ಹೆಚ್ಚಿನ ಆನಂದದಲ್ಲಿ ಸಂಗೀತಾಭ್ಯಾಸ ಮಾಡುತ್ತಿದ್ದ ತಂಗಿಯನ್ನೇ ವಿಶ್ವಾಸದಿಂದ ನೋಡಿದಳು ಸರಳ. ರಾಗದ ಮಾಧುರ್ಯ, ಲಹರಿಯ ಓಟ, ಎಂತಹವರನ್ನಾದರೂ ಮೆಚ್ಚಿಸು ವಂತಿತ್ತು. ಸಾವಿತ್ರಿ ಎಂದೂ ಇಷ್ಟು ಸಂತಸವಾಗಿ ಹಾಡಿರಲಿಲ್ಲ. ತಂಗಿಯನ್ನೇ ದಿಟ್ಟಿಸಿ ನೋಡಿದಳು. ಅಭಿಮಾನ ಉಕ್ಕಿ ಬಂತು.

ಇವಳು ಸಂಗೀತ ಕಚೇರಿಗಳನ್ನು ನಡೆಸುವಂತಾಗಬೇಕು. ಇವಳು ಹಾಕಿದ ಭಾವಗೀತೆಗಳನ್ನು ರೆಕಾರ್ಡ್ ಮಾಡಿಸಿ, ಕ್ಯಾಸೆಟ್‌ಗಳನ್ನು ಬಿಡುಗಡೆ ಮಾಡಿಸಬೇಕು. ಹೇಗಾದರೂ ಇವಳು ಸಂಗೀತದಲ್ಲಿ ಮುಂದೆ ಬಂದು ಪ್ರಖ್ಯಾತಿಯಾಗುವಂತೆ ಮಾಡಬೇಕು. ಸಂಗೀತವೇ ಇವಳ ಜೀವಾಳ. ಇದಿಲ್ಲದಿದ್ದರೆ ಇವಳು ಹೇಗೆ ಬಾಳು ತ್ತಾಳೆ? ಇಂತಹ ಪರಿಶ್ರಮ ಇವಳನ್ನು ಮುಂದೆ ತರುತ್ತದೆ ಎಂದುಕೊಂಡು, ಸಾವಿತ್ರಿಯನ್ನು ಕರೆಯದೇ ಹಾಗೇ ಒಳಗೆ ಹೋದಳು.

ಆದರೆ ಸಾವಿತ್ರಿ ಇದ್ದುದೇ ಬೇರೆ ಲೋಕದಲ್ಲಿ. ಗಂಧರ್ವಲೋಕದಲ್ಲಿ ತಾನೂ, ಸುರೇಶ ವಿಹರಿಸುತ್ತಿರುವಂತೆ ಕನಸು ಕಾಣುತ್ತಿದ್ದವಳಿಗೆ ಸರಳ ಬಂದುದರ ಬಗ್ಗೆ ಅರಿವಾಗಲೇ ಇಲ್ಲ. ಸುರೇಶ ಮತ್ತೆಂದು ಬರುವನೋ..... ಎಂದು ಆ ದಿನಕ್ಕಾಗಿ ಕಾಯುತ್ತಿದ್ದಳು. ವಯಸ್ಸಾಗಿ ಕಣ್ಣು ಮಂಜಾಗಿದ್ದ, ಚುರುಕಾಗಿ ಕಿವಿ ಕೇಳದಿದ್ದ ಆ ಅಜ್ಜಿ ಸಾವಿತ್ರಿಗೆ ಸಹಾಯಕಳಾಗಿದ್ದಳು. ಸುಭದ್ರಮ್ಮ ಪುರಾಣ ಪುಣ್ಯ ಕಥೆಗಳಿಗೆಂದು ಹೊರಗೆ ಹೋಗಿದ್ದ ದಿನಗಳಲ್ಲಿ ಸುರೇಶ ಸಾವಿತ್ರಿಗೋಸ್ಕರ ಬರುತ್ತಿದ್ದ. ಸರಳ ಸಹ ಬ್ಯಾಂಕಿಗೆ ಹೋಗಿರುತ್ತಿದ್ದಳು. ಯಾರಿಗೂ ಅನುಮಾನ ಬರದ ರೀತಿಯಲ್ಲಿ

ಅವರ ಪ್ರೇಮ ಸಲ್ಲಾಪ ಮುಂದುವರೆದಿತ್ತು. ಆ ದಿನ, ಮತ್ತೊಂದು ದಿನ.... ಹೀಗೆ ದಿನಗಳು ಉರುಳಿದವು.

ಸುಕನ್ಯ, ಮುಕುಂದರ ಮದುವೆಯಾಗಿ, ಎರಡು ವರ್ಷಗಳು ತುಂಬುವುದರಲ್ಲಿತ್ತು. ನಾಲ್ಕನೇ ಬಾರಿಯೂ ಸುಕನ್ಯಳಿಗೆ ಅಬಾರ್ಷನ್ ಆದಾಗ ಇಬ್ಬರೂ ಗಾಬರಿಗೊಂಡರು. ಅವಳು ಗರ್ಭಿಣಿ ಎಂದು ತಿಳಿದ ಮೊದಲನೇ ದಿನದಿಂದಲೇ, ಎಚ್ಚರಿಕೆ ವಹಿಸಿದ್ದರೂ, ಗರ್ಭ ಉಳಿಯುವುದು ಅನುಮಾನವಾಗಿ ಕಂಡು ಬಂದಾಗ, ಸುಕನ್ಯ ತಕ್ಷಣ ನರ್ಸಿಂಗ್ ಹೋಂಗೆ ಅಡ್ಮಿಟ್ ಆಗಿದ್ದಳು. ಅವಳ ಕೇಸ್ ಹಿಸ್ಟರಿಯನ್ನು ಬಲ್ಲ ಲೇಡಿ ಡಾಕ್ಟರು ಗಂಭೀರವಾದರು. ತಕ್ಷಣ ಸ್ಕ್ಯಾನಿಂಗ್, ಸ್ಕ್ರೀನ್ ಟೆಸ್ಟ್ ಎಂದು ಅಗತ್ಯವಾದ ಎಲ್ಲಾ ಟೆಸ್ಟ್‌ಗಳನ್ನು ಪೂರೈಸಿ ಮುಕುಂದನನ್ನು ಕರೆಸಿ ಮಾತನಾಡಿದರು.

"ನೋಡಿ ಮಿಸ್ಟರ್, ನಿಮ್ಮ ಮಿಸೆಸ್‌ನ ಗರ್ಭಕೋಶ ತೀರಾ ಅಶಕ್ತವಾಗಿದೆ. ಈ ಬಾರಿಯೂ ಗರ್ಭ ಉಳಿಯುವುದು ಅಸಾಧ್ಯ....ಅಲ್ಲದೇ ಆಕೆ ಮತ್ತೆ ಗರ್ಭವತಿಯಾಗುವಂತೆಯೇ ಇಲ್ಲ....ಆದಷ್ಟು ಬೇಗ ಅವಳ ಗರ್ಭಕೋಶವನ್ನೇ ತೆಗೆಯದಿದ್ದರೆ, ಸೋಂಕಿನಿಂದ ಆಕೆಯ ಜೀವಕ್ಕೂ ಅಪಾಯವಾಗಬಹುದು."

ಮುಕುಂದ ಹತಾಶನಾದ...ಸುಕನ್ಯ ತಾಯಿಯಾಗುವಂತಿಲ್ಲ...ತಮಗೆ ಮಕ್ಕಳಾಗುವಂತಿಲ್ಲ.... ಸುಕನ್ಯಗೆ ಈ ವಿಷಯ ತಿಳಿದರೆ ನಿರಾಸೆಯಿಂದ ಕುಸಿದು ಬೀಳುತ್ತಾಳೆ. ತನ್ನ ಮನೆಯವರಿಗೆ ತಿಳಿದರೆ?.... ಎಲ್ಲರಿಗೂ ಸುಕನ್ಯಳ ಬಗ್ಗೆ ತಿರಸ್ಕಾರ ಮೂಡಬಹುದು.... ಡಾಕ್ಟರು ಮತ್ತೆ ಎತ್ತರದ ಧ್ವನಿಯಲ್ಲಿ ಮಾತನಾಡಿದಾಗ ಮುಕುಂದ ಎಚ್ಚರಗೊಂಡ.

"ಸಾರಿ ಮಿಸ್ಟರ್.... ಈಗ ನಿಮ್ಮ ಮಿಸೆಸ್ ಬಗ್ಗೆ ಗಮನ ಕೊಡುವುದು ನಿಮ್ಮ ಮೊದಲ ಕರ್ತವ್ಯ. ನಿಧಾನವಾಗಿ ಅವರಿಗೆ ಆಗಿರುವ ತೊಂದರೆಯನ್ನು ವಿವರಿಸಿ, ತಿಳಿಸಿ. ಓದಿ ಬರೆದು ತಿಳುವಳಿಕೆಯುಳ್ಳವರು. ನೀವಿಬ್ಬರೂ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುತ್ತೀರೆಂದು ನಂಬಿದ್ದೇನೆ."

ಮುಕುಂದ ಒಪ್ಪಿದ. ಸುಕನ್ಯಳ ಆರೋಗ್ಯ ಅವನಿಗೆ ಮುಖ್ಯ. ಆದರೆ ಅವಳಿಗೆ ವಿಷಯವನ್ನು ತಿಳಿಸುವುದು ಹೇಗೆ ಎಂದು ಚಿಂತಿಸಿದ. ಅವಳು ಅತ್ತೂ ಕರೆದು ರಂಪ ಮಾಡಿದರೂ ಕಷ್ಟ. ಪೆಚ್ಚಿಯಂತೆ ಮಂಕಾದರೂ ಕಷ್ಟ, ಎಂದು ಹೆದರಿದ. ಅದೇ ದಿನ ಅವಳಿಗೆ ತಿಳಿಯುವಂತೆ ಆಪರೇಷನ್ ಮಾಡಿ, ಮುಗಿಸಿದರು. ಈ ವಿಷಯ

ಮುಕುಂದನ ಹೊರತು ಇನ್ಯಾರಿಗೂ ತಿಳಿಯಲಿಲ್ಲ.

ಸುಭದ್ರಮ್ಮ ಮಗಳ ಯೋಗಕ್ಷೇಮವನ್ನು ನೋಡಿಕೊಳ್ಳಲು ಮುಂದಾದರು. ಅವಳನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು. ಮುಕುಂದ ದಿನಾ ಬಂದು ಅವಳ ಆರೋಗ್ಯವನ್ನು ವಿಚಾರಿಸಿಕೊಂಡು ಹೋಗುತ್ತಿದ್ದ.

ಒಂದು ತಿಂಗಳ ನಂತರ ಸುಕನ್ಯ ತನ್ನ ಮನೆಗೆ ವಾಪಸ್ಸಾದಳು. ಈಗ ಅವಳು ಕೆಲಸಕ್ಕೆ ಹೋಗದೇ ರಜವನ್ನು ಮುಂದುವರೆಸಿದ್ದಳು. ಅವನು ಅವಳ ಬಗ್ಗೆ ಯಾವ ಭಾವನೆಯನ್ನು ತೋರ್ಪಡಿಸದೇ ಹೆಚ್ಚು ಹೆಚ್ಚು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದ.

ಈ ಸಮಯದಲ್ಲಿ ಹಳ್ಳಿಯಿಂದ ವಿಮಲ, ಚಿಕ್ಕಪ್ಪ, ಚಿಕ್ಕಮ್ಮ, ಮಧು ಬಂದಿದ್ದರು. ವಿಮಲನ್ನ ಒಬ್ಬ ವರನಿಗೆ ತೋರಿಸುವ ಕಾರ್ಯಕ್ರಮವಿತ್ತು. ಅದೇ ತಾನೇ ಚೇತರಿಸಿಕೊಳ್ಳುತ್ತಿದ್ದ ಸುಕನ್ಯ ಬೇಸರಗೊಂಡಳು. ಮೊದಲೇ ಅವಳಿಗೆ ತನ್ನ ಆರೋಗ್ಯದ ಬಗ್ಗೆ ಅನುಮಾನ. ಕಿಬ್ಬೊಟ್ಟೆಯಲ್ಲಿನ ಕತ್ತರಿಸಿದ್ದ ಗಾಯ ಮಾಯುತ್ತಿದ್ದು, ಏನೋ ಹಿಂಸೆ. ಅದೇಕೆ ಅಷ್ಟು ಉದ್ದ ಕತ್ತರಿಸಿದ್ದಾರೆ ಡಾಕ್ಟರನ್ನು ಕೇಳಿದಾಗ ಅವರು ಸರಿಯಾಗಿ ಹೇಳಿರಲಿಲ್ಲ. ಮುಕುಂದನೂ ಸರಿಯಾಗಿ ಹೇಳದೇ, "ಎಲ್ಲಾ ನಿನ್ನ ಒಳ್ಳೇದಕ್ಕೆ" ಎಂದಿದ್ದ. ತನ್ನ ಗರ್ಭಕೋಶವನ್ನು ತೆಗೆದಿರಬಹುದು ಎನ್ನುವ ಅನುಮಾನ ಅವಳಿಗೆ ಬಂದಿರಲೇ ಇಲ್ಲ.

"ಅದ್ಯಾಕೆ ಹೀಗಾಗಿದಾಳೆ! ಯಾರಾದರೂ ಒಳ್ಳೆಯ ಡಾಕ್ಟರಿಗೆ ತೋರಿಸಿ, ಒಳ್ಳೆಯ ಔಷಧ ಪಥ್ಯ ಮಾಡಿಸಬಾರದೆ?" ಚಿಕ್ಕಮ್ಮ ಕೇಳಿದ್ದಳು.

"ಎಲ್ಲಾ ನಡೀತಿದೆ. ಏನೂ ತೊಂದರೆ ಇಲ್ಲ ಚಿಕ್ಕಮ್ಮ" ಮುಕುಂದ ಬೇಸರದಿಂದ ನುಡಿದಿದ್ದ.

"ನಿನ್ನ ತಾತ ಅಂತೂ, ನಿನ್ನ ಮಗನನ್ನು ನೋಡಬೇಕು ಅಂತ ಕಾಯ್ತಾ ಇದಾರೆ. ಮರಿ ಮಗನನ್ನು ಕಾಣುವ ಹಂಬಲ ಅವರಿಗೆ. ಮದುವೆಯಾಗಿ, ಎರಡು ವರ್ಷಗಳಾಗುತ್ತಾ ಬಂತು.... ಅದ್ಯಾಕೆ ಇನ್ನು ಹೀಗೇ...."

"ಆಗುತ್ತೆ ಬಿಡು. ಅವಾಂತರವೇನು?" ಮುಕುಂದ ಮಾತನ್ನು ಮುಂದುವರೆಸಲು ಇಚ್ಛಿಸದೇ ಆ ಜಾಗದಿಂದ ಎದ್ದು ಹೋಗಿದ್ದ. ಸುಕನ್ಯ ಮುಖವನ್ನು ಸಿಂಡರಿಸಿದ್ದಳು. ಬಂದ ಕೆಲಸ ಮುಗಿಸಿ ಅವರು ಹಳ್ಳಿಗೆ ವಾಪಸ್ಸಾದರೆ ಸಾಕು ಎನ್ನುವಂತೆ ಚಡಪಡಿಸಿದ್ದರು ಇಬ್ಬರೂ. ಸುಕನ್ಯ ಅಂತೂ ಭಾರಿ ಚಿಂತೆಗೆ ಒಳಗಾಗಿದ್ದಳು.

ತನಗೆ, ಎರಡು ವರ್ಷ ಕಳೆದರೂ ಮಕ್ಕಳಾಗಿಲ್ಲ. ಮೇಲೆ ಮೇಲೆ ಅಬಾರ್ಷನ್

ಆಗಿದೆ. ಎಂತಹದೋ ಆಪರೇಷನ್ ಬೇರೆ ಆಗಿದೆ. ಮಗು ಆಗುತ್ತೋ ಇಲ್ಲವೋ... ಹಾಗೇನಾದರೂ ಆದರೆ, ಈ ತಾತ ಖಂಡಿತಾ ಸುಮ್ಮನಿರುವುದಿಲ್ಲ. ಮುಕುಂದನಿಗೆ ಅದೇ ನೆವ ಮಾಡಿ, ಬೇರೆ ಮದುವೆ ಮಾಡೇ ಮಾಡ್ತಾರೆ. ಈ ಆಲೋಚನೆ ಅವಳಿಗೆ ಸಹನೆಯಾಗಲಿಲ್ಲ. ತಟ್ಟನೇ, ಮಲಗಿದ್ದ ಮುಕುಂದನನ್ನು ಎಬ್ಬಿಸಿ ಮಾತನಾಡಿದಳು.

"ಬೇರೆ ಯಾರಾದರೂ ಡಾಕ್ಟ್ರನ್ನ ಕೇಳೋಣ ನನಗೇನಾಗಿದೆ ಅಂತ.... ನನ್ನಿಂದ ಒಂದು ಮಗುವನ್ನು ಹೆರಲು ಆಗಲಿಲ್ಲ ಅಂದರೆ ಏನರ್ಥ? ನಾನು ಬಂಜೆ ಅಂತ ನಿಮ್ಮ ಮನೆಯವರಿಂದ ಅನ್ನಿಸಿಕೊಳ್ಳಲಾರೆ. ಹೇಗಾದರೂ ಸರಿ ನಾನೊಂದು ಮಗು ವಿನ ತಾಯಿಯಾಗಲೇಬೇಕು.... ನನಗೆ ಮಗುವಾಗಲೇ ಬೇಕು..." ಅವಳು ಉದ್ವೇಗ ದಿಂದ ಮಾತನಾಡಿದಾಗ, ಅವನು ಚಿಕ್ಕಮ್ಮನ್ನ ಮನಸ್ಸಿನಲ್ಲೇ ಶಪಿಸಿದ. ಸಮಾಧಾನ ದಿಂದ ನುಡಿದ.

"ಈಗೇನಾಗಿದೆ ಅಂತ ಹೀಗಾಡ್ತೀಯ? ನಿಧಾನವಾಗಿ ಆಗಲಿ ಬಿಡು. ಅಥವಾ ಒಂದು ವೇಳೆ ಮಕ್ಕಳಾಗದಿದ್ದರೂ ನನಗೇನೂ ಚಿಂತೆ ಇಲ್ಲ. ಹೀಗೇ ಆರಾಮವಾಗಿದ್ದು ಬಿಡೋಣ.

"ಆರಾಮವಾಗಿರುಕ್ಕೆ ನಿಮ್ಮ ತಾತ ಎಲ್ಲಿ ಬಿಡ್ತಾರೆ? ನಿಮಗೆ ಇನ್ನೊಂದು ಮದುವೆ ಮಾಡಿ ನನ್ನಿಂದ ದೂರ ಮಾಡ್ತಾರೆ."

"ಹಾಗೆಲ್ಲಾ ಆಗುಕ್ಕೆ ನಾನು ಬಿಡ್ತೀನಾ? ತಾತನಿಗೆ ಯಾಕೆ ಹೆದರಬೇಕು?"

"ಹಾಗೆ ಹೇಳಬೇಡಿ ಮುಕುಂದ್, ಬಲವಂತದಿಂದ ಅವರನ್ನು ಒಪ್ಪಿಸಿ ಮದುವೆ ಯಾಗಿದೀನಿ. ಆ ವಿಷಯವನ್ನು ಅವರು ಮರೆತಿರುವುದಿಲ್ಲ. ಇದೇ ನೆವ ಮಾಡಿ ಕೊಂಡು ನನ್ನನ್ನು ದೂರ ಮಾಡಿ, ನಿಮಗೆ ಖಂಡಿತಾ ಇನ್ನೊಂದು ಮದುವೆ ಯನ್ನು ಮಾಡೇ ಮಾಡ್ತಾರೆ."

"ಛುತ್, ನನ್ನ ಮೇಲೆ ನಿನಗೆ ನಂಬಿಕೆ ಇಲ್ವಾ? ತಾತ ಹೇಳಿದರೆ ನಾನು ಕೇಳಿ ಬಿಡ್ತೀನಿ ಅಂತ ಅಂದ್ಕೊಂಡಿದೀಯ....?"

"ಈಗ ಹೀಗಂತೀರಿ ಮುಕುಂದ್, ಕ್ರಮೇಣ ನಿಮಗೂ ನನ್ನ ಮೇಲೆ ಬೇಸರ ಬರಬಹುದು. ನಾನು ಬಂಜೆ ಅಂತ ನೀವು ಅಂದುಕೊಳ್ಳಬಾರದು. ಅದು ನನಗೆ ಇಷ್ಟವಿಲ್ಲ. ನನಗೊಂದು ಮಗು ಬೇಕೇ ಬೇಕು. ನನ್ನ ಡಾಕ್ಟರ ಹತ್ತಿರ ಕರೆದುಕೊಂಡು ಹೋಗಿ. ನಾನು ಅವರ ಹತ್ತಿರ ಮಾತಾಡ್ತೀನಿ. ಎಷ್ಟು ಖರ್ಚಾದರೂ ಪರವಾಗಿಲ್ಲ. ಅಮೆರಿಕಾಕ್ಕೆ ಹೋಗಿಬರುವುದಾದರೂ ಸರಿ. ನಮಗೊಂದು ಮಗುವಾಗಲೇ ಬೇಕು..."

ಅವಳ ಉದ್ವೇಗಕ್ಕೆ ಮುಕುಂದ ಹೆದರಿದರೂ, ನಿಧಾನವಾಗಿ ಅವಳನ್ನು ಸಾಂತ್ವನಗೊಳಿಸಿದ. ನಂತರ ವಿಶದವಾಗಿ ಅವಳ ಪರಿಸ್ಥಿತಿಯನ್ನು ವಿವರಿಸಿ ಹೇಳಿದ. ಸುಕನ್ಯ ಮಾತಿಲ್ಲದಾದಳು....ತನ್ನ ಸ್ಥಿತಿಗೆ ದುಃಖ ಒತ್ತರಿಸಿ ಬಂತು. ಅಳುತ್ತಾ ನುಡಿದಳು.

"ನನಗೊಂದು ಮಾತು ತಿಳಿಸದೇ ಹೇಗೆ ಆಪರೇಷನ್‌ಗೆ ಒಪ್ಪಿದಿರಿ? ನಾನು ಸತ್ತಿದ್ದರೂ ಪರವಾಗಿರಲಿಲ್ಲ. ನಾನು ಬದುಕಿದ್ದು ನಿಮ್ಮ ಮಗುವಿಗೆ ತಾಯಿಯಾಗ ಲಾರದೆ, ನೀವು ಮರುಮದುವೆಯಾಗುವುದನ್ನು ಕಣ್ಣಾರೆ ನೋಡುವ ಸ್ಥಿತಿಗೆ ನನ್ನನ್ನು ತಂದಿಟ್ಟಿರಲ್ಲ."

ಅವಳ ಆರ್ಭಟಕ್ಕೆ ಮುಕುಂದ ಹೆದರಲಿಲ್ಲ.

"ಸ್ವಲ್ಪ ಸುಮ್ಮನಿರು. ನೀನು ತಾಯಿಯಾಗದಿದ್ದರೆ, ನಾನು ತಂದೆಯೂ ಆಗುವುದಿಲ್ಲ ತಿಳೀತಾ? ನಾನು ಇನ್ನೊಂದು ಮದುವೆ ಆಗ್ತೀನಿ ಅಂತ ಅನುಮಾನ ನಿನಗೇಕೆ? ನಾನು ನಿನ್ನನ್ನು ಮಾತ್ರ ಪ್ರೀತಿಸುತ್ತಿರುವುದು. ನನ್ನ ಪ್ರೀತಿ ಕಡಿಮೆ ಆಗುತ್ತೆ. ಇನ್ನೊಂದು ಮದುವೆ ಆಗುತ್ತೆ ಅಂತ ಏನೇನೋ ಅಂದ್ಕೊಬೇಡ. ಇವತ್ತೆ ಕಡೆ.... ಇನ್ನು ಸಾಕು ಮಾತು."

"ಆದರೆ...."

"ಆದರೆ ಗೀದರೆ ಏನಿಲ್ಲ"

"ಸ್ವಲ್ಪ ಮಾತನ್ನು ಕೇಳಿ..."

"ಹಾಗಾದರೆ ಮೊದಲು ನನ್ನ ಮಾತನ್ನು ಕೇಳು. ನಿನಗಿಷ್ಟವಿದ್ದರೆ ನಾವೊಂದು ಮಗುವನ್ನು ದತ್ತು ತೆಗೆದುಕೊಂಡು ಸಾಕೋಣ. ಆ ಮಗುವಿಗೆ ತಾಯಿ ತಂದೆಯರಾಗಿ ಪ್ರೀತಿಯಿಂದ ಬೆಳೆಸೋಣ."

"ನೋ.... ನನಗದು ಇಷ್ಟವಿಲ್ಲ. ಯಾರಿಗೋ ಹುಟ್ಟಿದ ಮಗು ಖಂಡಿತಾ ನಮ್ಮದಾಗುವುದಿಲ್ಲ."

"ಹಾಗಾದರೆ ಸರಿ. ಇನ್ನೆಂದೂ ಈ ವಿಷಯದ ಬಗ್ಗೆ ಮಾತನಾಡಕೂಡದು" ಮುಕುಂದ ಸಿಟ್ಟಿನಿಂದ ಎದ್ದು ಹೋದಾಗ ಸುಕನ್ಯ ಎದ್ದು ಕನ್ನಡಿಯ ಮುಂದೆ ನಿಂತು ತನ್ನನ್ನು ತಾನು ನೋಡಿಕೊಂಡು ಪ್ರಶ್ನಿಸಿಕೊಂಡಳು.

ತನಗೇನಾಗಿದೆ! ಎಲ್ಲಾ ರೀತಿಯಿಂದಲೂ ಸರಿಯಾಗಿದೇನಲ್ಲ. ಈ ಗರ್ಭಕೋಶ ಕ್ಕೇನಾಗಿತ್ತು!ಅದನ್ನು ಸರಿಪಡಿಸಲು ಸಾಧ್ಯವಿರಲಿಲ್ಲವೆ? ಯಾರನ್ನಾದರೂ ಕೇಳಿದರೆ,

ಈಗೇನು ಉಪಯೋಗ? ತನ್ನನ್ನು ಈ ಸ್ಥಿತಿಗೆ ತಂದ ಡಾಕ್ಟರನ್ನೇ ಕೇಳಬೇಕು.... ತನಗೆ ಹೇಗಾದರೂ ಸರಿ, ಒಂದು ಮಗುವಾಗುವಂತೆ ಉಪಾಯವನ್ನು ತಿಳಿಸಿ ಎಂದು ಕೇಳಲೇ ಬೇಕು ಎಂದುಕೊಂಡು, ಮಾರನೇ ದಿನವೇ ಡಾಕ್ಟರನ್ನು ನೋಡಲು ಸಮಯವನ್ನು ನಿಗದಿಪಡಿಸಿಟ್ಟುಕೊಂಡಳು. ಮುಕುಂದ ಅವಳನ್ನು ನರ್ಸಿಂಗ್ ಹೋಂ ಬಳಿ ಬಿಟ್ಟು, ಆಫೀಸಿಗೆ ಹೊರಟು ಹೋಗಿದ್ದ. ಡಾಕ್ಟರು ವಿಶ್ವಾಸದಿಂದ ಮಾತನಾಡಿಸಿದರು.

"ನನಗೇ ಏಕೆ ಹೀಗಾಯ್ತು ಡಾಕ್ಟರ್? ನನಗೊಂದು ಮಗುವಾಗದಿದ್ದರೆ ನಮ್ಮ ಮನೆಯಲ್ಲಿ ಭಾರಿ ಸಮಸ್ಯೆನೇ ಏಳುತ್ತೆ...."

"ಅದಕ್ಕೆ ನೀವುಗಳೇ ಏನಾದರೂ ಪರಿಹಾರವನ್ನು ಕಂಡುಕೊಳ್ಳಬೇಕು. ಈಗೇನು ಯಾವುದಾದರೂ ಒಂದು ಮಗುವನ್ನು ಅನಾಥಾಶ್ರಮದಿಂದ ದತ್ತು ತೆಗೆದು ಕೊಳ್ಳಬಹುದಲ್ಲ."

"ನೋ, ಡಾಕ್ಟರ್ ನನಗದು ಸುತರಾಂ ಇಷ್ಟವಿಲ್ಲ. ಯಾವುದೋ ಅನಾಥ ಮಗು ನಮ್ಮದಾಗುವುದಿಲ್ಲ. ಅನಾಥ ಮಕ್ಕಳು ಎಂದರೆ ಒಂದು ತರಹ ನನಗೆ"

"ಹಾಗಾದರೆ, ಸಧ್ಯಕ್ಕೆ ಬೇರೆ ಏನೂ ಉಪಾಯವಿಲ್ಲ."

"ಏಕೆ ಇಲ್ಲ? ಈ ಕಾಲದಲ್ಲಿ ಎಂತೆಂತಹ ಸಂಶೋಧನೆಗಳನ್ನು ನಡೆಸಿದಾರೆ. ನನಗೆ ಒಂದು ಕೃತಕವಾದ ಗರ್ಭಕೋಶವನ್ನು ಅಳವಡಿಸಿ ಗರ್ಭಿಣಿಯಾಗುವಂತೆ ಮಾಡಿದರೆ!"

ಡಾಕ್ಟರು ನಕ್ಕರು.

"ಅಂತಹ ಸಂಶೋಧನೆ ಮಾಡಿಲ್ಲ. ಇನ್ನೂ ಯಾರೂ. ಆದರೆ ಬೇರೆ ಬೇರೆ ತರಹದ ಸಂಶೋಧನೆಗಳಿಂದ, ನಿಮ್ಮಂತಹ ಮಕ್ಕಳಿಲ್ಲದ ತಂದೆ ತಾಯಿಗಳಿಗೆ ಉಪಯೋಗವಾಗುವಂತಹ ಉಪಾಯಗಳಿವೆ. ಆದರೆ ಈ ದೇಶದಲ್ಲಿ ಅದರ ಉಪಯೋಗವನ್ನು ಪಡೆಯುವವರು ಮುಂದೆ ಬಂದಿಲ್ಲ. ವಿದೇಶಗಳಲ್ಲಿ ಈ ಪ್ರಯೋಗ ಯಶಸ್ವಿಯಾಗಿ ನಡೆದಿವೆ."

"ಏನದು"? ಆತುರದಿಂದ ಕೇಳಿದಳು.

"ನಿಮಗೆ ಒಪ್ಪಿಯಾಗದೇ ಇರಬಹುದು.... ಆದರೆ ಈ ಪ್ರಯೋಗದಿಂದ ನಿಮಗೆ ಉಪಯೋಗವಾಗುವಂತಹುದು. ನಿಮ್ಮಿಬ್ಬರ ಮಗುವನ್ನು ಹೆತ್ತು ಕೊಡಲು ಒಬ್ಬ ಸಾರೋಗೇಟ್ ಮದರ್‌ನ ಗೊತ್ತು ಮಾಡಿಕೊಂಡು.... ಪ್ರಯೋಜನವನ್ನು

ಪಡೆಯಬಹುದು'' ಎಂದು ಹೇಳಿ, ಸಾರೋಗೇಟ್ ಮದರ್ ಮೇಲೆ ಮಾಡುವಂತಹ ಪ್ರಯೋಗದ ಬಗ್ಗೆ ತಿಳಿಸಿದ್ದರು.

ಸುಕನ್ಯ ಇಷ್ಟವಿಲ್ಲದಂತೆ ತಲೆಯಾಡಿಸಿದಳು.

``ನಿಮ್ಮದೇ ಸ್ವಂತ ಮಗು ಬೇಕು ಎಂದು ಇಷ್ಟಪಡುವುದಾದರೆ, ಇದೊಂದೇ ಉಪಾಯ ನಿಮ್ಮಂತಹವರಿಗೆ ಸರಿಹೊಂದುವಂತಹುದು. ಯೋಚಿಸಿ ನೋಡಿ, ನಿಮ್ಮಿಬ್ಬರಿಗೂ ಒಪ್ಪಿಗೆಯಾದರೆ, ... ಮುಂದಿನ ಪ್ರಯೋಗಗಳು...''

ಸುಕನ್ಯ ಎದ್ದು ನಿಂತಳು. ಅವಳ ಮನಸ್ಸು ಕೆಟ್ಟು ಹೋಗಿತ್ತು.

``ಥ್ಯಾಂಕ್ ಯೂ ವೆರಿಮಚ್ ಫಾರ್ ಯುವರ್ ಗುಡ್ ಸಜೆಷನ್....ನಮಗೆ ಒಪ್ಪಿಗೆಯಾದರೆ ಮತ್ತೆ ಬಂದು ನಿಮ್ಮನ್ನು ಭೇಟಿಯಾಗ್ತೀನಿ'' ಡಾಕ್ಟರು ಮುಗುಳ್ನಕ್ಕರು.

ಒಂದು ವಾರ ಕಳೆದರೂ, ಅವಳಿಂದ ಏನನ್ನೂ ನಿರ್ಧರಿಸಲಾಗಿರಲಿಲ್ಲ. ಹೋಗಲಿ ಅಂದರೆ, ಸುಮ್ಮನಿರಲೂ ಮನಸ್ಸು ಒಡಂಬಡಲಿಲ್ಲ. ವಿದೇಶದ ಸಾರೋಗೇಟ್ ಮದರ್ಸ್ ಬಗ್ಗೆ ಪ್ರಕಟವಾದ ಆರ್ಟಿಕಲ್‌ಗಳನ್ನು ಹುಡುಕಿ ಮತ್ತೆ ಮತ್ತೆ ಓದಿದಳು.

ಕೆಲವಾರು ದೋಷಗಳಿಂದ ತಾಯಿಯಾಗುವ ಸಾಧ್ಯತೆ ಇಲ್ಲದ ಮಹಿಳೆಯರಿಗೆ ವರದಾನ ಎಂಬ ಲೇಖನದಡಿಯಲ್ಲಿ ಪ್ರಕಟಗೊಂಡ ಬರಹಗಳು, ಸಾರೋಗೇಟ್ ಮದರ್‌ನ ಕರ್ತವ್ಯಗಳು, ನಿರ್ಬಂಧನೆಗಳನ್ನು ವಿವರವಾಗಿ ಬರೆಯಲಾಗಿತ್ತು.

ದಂಪತಿಗಳಲ್ಲಿ ನೈಸರ್ಗಿಕ ನಿಯಮದ ಪ್ರಕಾರ ನಡೆಯುವ ಪ್ರಕಾರವನ್ನು ಹೊರಗೆ, ಕೃತಕವಾಗಿ ಪ್ರಯೋಗಾಲಯಗಳಲ್ಲಿ ವಿಶೇಷವಾಗಿ ಸಂಯೋಜಿಸಿ, ಪ್ರನಾಳಿಕೆಗಳಲ್ಲಿಟ್ಟು ಬೆಳೆಸಿ, ಭ್ರೂಣಾವಸ್ಥೆಗೆ ಬರುವ ಮೊದಲೇ ಬೇರೊಬ್ಬ ಸ್ತ್ರೀಯ ಗರ್ಭಕೋಶಕ್ಕೆ ಜಾಗರೂಕತೆಯಿಂದ ರವಾನಿಸಿ, ಅಲ್ಲಿ ಭ್ರೂಣ ಆರೋಗ್ಯವಂತ ಶಿಶುವಾಗಿ ಬೆಳೆಯುವುದು, ಮಗು ಹುಟ್ಟುವವರೆಗೂ, ಅದನ್ನು ತನ್ನ ಒಡಲಲ್ಲಿಟ್ಟು ಸಂರಕ್ಷಣೆಯಿಂದ ಬೆಳೆಯಲು ಸಹಾಯಕಳಾಗಿ, ಮಗುವನ್ನು ಹೆತ್ತು, ಅದನ್ನು ಈ ದಂಪತಿಗಳಿಗೆ ವಹಿಸಿ ಕೊಡುವುದು ಈ ಬಾಡಿಗೆ ತಾಯಿಯ ಕರ್ತವ್ಯ... ಅವರೆ ಅವಕ್ಕೆ ತಕ್ಕಷ್ಟು ಸಂಭಾವನೆಯನ್ನು ಪಡೆಯುತ್ತಾಳೆ... ಅಲ್ಲದೇ ಅವಕ್ಕೆ ತಗಲುವ ಪ್ರತಿಯೊಂದು ಖರ್ಚು ಈ ದಂಪತಿಗಳದ್ದು. ಇವಕ್ಕೆ ಕಾನೂನಿನ ಬೆಂಬಲವೂ ಇರುತ್ತೆ....

ಇದರಿಂದ ಸಾಕಷ್ಟು ಖರ್ಚಾಗುತ್ತೆ ಏನೋ ಎಂದು ಸುಕನ್ಯ ಯೋಚಿಸಿದರೂ ಒಂದು ನಿರ್ಧಾರಕ್ಕೆ ಬಂದಳು. ಈಗ ತಾನು ಒಬ್ಬ ಬಾಡಿಗೆ ತಾಯಿಯನ್ನು ಹುಡುಕ ಬೇಕು. ಅದಕ್ಕೂ ಮೊದಲು ಮುಕುಂದನ ಬಳಿ ಮಾತನಾಡಿ ಅವನನ್ನು ಒಪ್ಪಿಸಬೇಕು. ಸುಕನ್ಯ ಒಂದು ನಿರ್ಧಾರಕ್ಕೆ ಬಂದಿದ್ದಳು.

ಸಾಯಂಕಾಲ ಆಫೀಸಿನಿಂದ ಬಂದವನು, ಕಾಫಿ ತಿಂಡಿ ಮುಗಿಸಿ ಪೇಪರು ಓದುತ್ತಾ ಕೂತಿದ್ದಾಗ ಮಾತಿಗೆ ಪ್ರಾರಂಭಿಸಿದಳು.

"ನಿಮಗೆ ಹಣ ಮುಖ್ಯಾನೋ....? ನಾನು ಮುಖ್ಯಾನೋ?...."

"ನಾನು ಮುಖ್ಯಾನೋ.... ನಮ್ಮ ಮಗು ಮುಖ್ಯಾನೋ...."ಮುಖ ಸಿಂಡರಿಸಿದ. ಈ ಬಗ್ಗೆ ಮಾತನಾಡಬೇಡ ಅಂತ ಅವತ್ತೇ ಹೇಳಿರಲಿಲ್ವಾ ನಾನು!"

"ಸಾರಿ.... ಸಾರಿ ಆದರೆ ಗಂಡ ಹೆಂಡತಿ ಅಂದ ಮೇಲೆ ನಮಗೆ ಹುಟ್ಟುವ ಮಗುವಿನ ಬಗ್ಗೆ ಮಾತನಾಡದೇ ಇರುಕ್ಕೆ ಆಗುತ್ತಾ?"

"ತಮಾಷೆ ಮಾಡಬೇಡ.... ಯಾರ ಮಗು? ಯಾವ ಮಗು?"

"ನಮ್ಮದೇ.... ನೀವು ಒಪ್ಪಿದರೆ?"

"ಏನೇನೋ ಹೇಳಿ ನನ್ನ ತಲೆ ಕೆಡಿಸಬೇಡ ಸುಮ್ಮನಿರು...."

"ನಾನೀಗ ಸುಮ್ಮನಿದ್ದರೆ ನನ್ನ ತಲೆ ಕೆಡುತ್ತೆ ಅಷ್ಟೆ... ಬಂಜೆ, ಬಂಜೆ ಅಂತ ನಿಮ್ಮ ಮನೆಯವರ ಹತ್ತಿರ ಅನ್ನಿಸಿಕೊಳ್ಳಲು ನಾನು ಸಿದ್ಧವಾಗಿಲ್ಲ"

"ನಾನಿಲ್ವಾ? ನಿನಗೇಕೆ! ಮತ್ತೆ ಮತ್ತೆ ಅದೇ ಮಾತನ್ನಾಡಬೇಡ".

"ಅದೇ ಮಾತಲ್ಲ. ಇದು ಬೇರೆ ಮಾತು. ಈ ಆರ್ಟಿಕಲ್ ಓದಿ....." ಅವನ ಕೈಗೆ ಪತ್ರಿಕೆಯನ್ನಿತ್ತಳು. ಮುಕುಂದ ಅವಳನ್ನೇ ಅನುಮಾನದಿಂದ ನೋಡಿ, ಲೇಖನವನ್ನು ಓದಿ ಮುಗಿಸಿದ.

"ಏನಾಗಬೇಕು ಇದರಿಂದ?"

"ಅರ್ಥವಾಗಲಿಲ್ವಾ? ನಾವು ಒಬ್ಬ ಬಾಡಿಗೆ ತಾಯಿಯನ್ನು ಹುಡುಕೋಣ"

"ಸುಕನ್ಯ, ಸರಿಯಾಗಿದೆ ತಾನೇ ನಿನ್ನ ತಲೆ?"

"ಫಸ್ಟ್ ಕ್ಲಾಸಾಗಿದೆ.... ಯಾಕೆ ಸಿಕ್ಕಾಪಟ್ಟೆ ಖರ್ಚಾಗುತ್ತೆ ಅಂತ ಚಿಂತೇನಾ?

"ಆ ಚಿಂತೆ ನನಗಿಲ್ಲ. ಆದರೆ ಇದು ಸರಿಯಲ್ಲ ಸುಕನ್ಯ.... ನಮ್ಮ ದೇಶದಲ್ಲಿ ಈ ಪ್ರಯೋಗ ಇನ್ನೂ ಜಾರಿಗೆ ಬಂದಿಲ್ಲ"

"ನೀವು ನಿಮ್ಮ ಹಳ್ಳಿಯಲ್ಲಿಲ್ಲ. ಬೆಂಗಳೂರಿನಂತಹ ಮುಂದುವರೆದ ಸಿಟಿ

ಯಲ್ಲಿದೀರಿ. ಈ ಮುಂಚೆಯೂ ಯಾರಾದರೂ ಪ್ರಯತ್ನಿಸಿರಬಹುದು. ನಮಗೆ ತಿಳಿದಿರುಲ್ಲ ಅಷ್ಟೇ.... ನಾವು ಯಾರಿಗೂ ತಿಳಿಸುವುದು ಬೇಡ..."

"ಸುಕನ್ಯ, ನೀನು ತಿಳಿದಿರುವಂತೆ ಎಲ್ಲಾ ಅಷ್ಟು ಸುಲಭವಲ್ಲ"

"ಯಾಕೆ ಸುಲಭವಲ್ಲ? ನಿಮ್ಮ ಮನೆಯವರಿಗೆ ತಿಳಿದರೆ, ರಂಪ ರಾದ್ಧಾಂತ ವಾಗುತ್ತೆ ಅಂತಾನಾ? ಹಳ್ಳಿಗೆ ಹೋಗಿ ಯಾರು ತಿಳಿಸ್ತಾರೆ?"

"ಆದರೂ, ನನಗಿದು ಸರಿ ಅಂತ ಅನ್ನಿಸುಲ್ಲ"

"ನಿಮ್ಮ ಹೆಂಡತಿ ಬಂಜೆ ಅನ್ನಿಸಿಕೊಂಡರೂ ಸರಿ, ನಮಗೆ ಮಕ್ಕಳಿಲ್ಲದೆ ನಾನು ಕೊರಗಿ ಸತ್ತರೂ ಸರಿ, ... ನನ್ನ ಸಂತೋಷ ನಿಮಗೆ ಬೇಕಿಲ್ವಾ?"

"ನಿಜ ಹೇಳು ಸುಕನ್ಯಾ.... ನೀನು ಸಂತೋಷವಾಗಿ ಈ ಪ್ರಯತ್ನಕ್ಕೆ ಕೈ ಹಾಕಿದೀಯಾ? ಯಾವ ತರಹದ ಅಳುಕೂ ಇಲ್ಲವಾ?"

"ನಾನಾಗಿಯೇ ಹೇಳಿದರೂ ನಿಮಗೇಕೆ ಅನುಮಾನ? ಅಳುಕುತ್ತಾ ಕುಳಿತರೆ ನೀವು ನನ್ನನ್ನು ಕಳೆದುಕೊಳ್ತೀರಿ ಅಷ್ಟೆ....ಅದೇ ನಿಮಗೆ ಬೇಕಿದ್ದರೆ ಸರಿ" ಸುಕನ್ಯ ಎದ್ದು ಹೊರಟಾಗ, ಕೈ ಹಿಡಿದೆಳೆದು ಕೂರಿಸಿದ. ಅವಳ ಮಾತಿನಿಂದ ಅವನು ನೊಂದದ್ದೆ.

"ನನ್ನ ಪಾಡಿಗೆ ನಾನು ಇದ್ದರೂ ಬಿಡದೆ ಮಾತಿಗೆಳೆದು ಹಿಂಸೆ ಮಾಡ್ತೀಯಲ್ಲ. ನಿನಗೇನು ಬೇಕೋ ಮಾಡ್ಕೋ ಹೋಗು.... ಆದರೆ ನನ್ನನ್ನು ಮಾತ್ರ ಯಾವುದಕ್ಕೂ ಎಳೀಬೇಡ...." ರೇಗಿದ.

ಸುಕನ್ಯ ಕಿಲಕಿಲನೆ ನಕ್ಕಳು.

"ರೇಗಿದರೆ ಹೇಗೆ? ನೀವಿಲ್ಲದೇ ಈ ಪ್ರಯೋಗ ನಡೆಯುವಂತೆಯೇ ಇಲ್ಲ." ಬೆಪ್ಪಾದ ಮುಕುಂದ, ಅವಳ ತಲೆ ಮೇಲೆ ಒಂದೇಟು ಮೊಟಕಿದ. ಅವನಿಗೂ ನಗು ಬಂದಿತ್ತು.

"ನಗಬೇಡ... ಅದಿರಲಿ ನಮಗೆ ಚಿಕ್ಕವಯಸ್ಸಿನ ಆರೋಗ್ಯವಂತ ಹೆಂಗಸು ಬಾಡಿಗೆಗೆ ಸುಲಭವಾಗಿ ಸಿಗ್ತಾಳೆ ಅಂದ್ಕೊಂಡ್ಯಾ? ಈ ಬಡದೇಶದಲ್ಲಿ ಹಣದ ಆಸೆಗೆ, ಅನಾರೋಗ್ಯದಿಂದ ನರಳುತ್ತಿರುವ, ಬಡತನದಿಂದ ಮಕ್ಕಳನ್ನು ಸಾಕಲಾರದ ಸ್ಥಿತಿ ಯಲ್ಲಿರುವ ಮುದಿ ಹೆಂಗಸು ಸಿಗಬಹುದು ಅಷ್ಟೆ...."

"ಥೂ, ಎಷ್ಟು ಕೀಳಾಗಿ ಮಾತನಾಡ್ತೀರಿ. ನಮಗೆ ಸರಿಯಾದ, ಸದೃಢವಾದ,

ಆರೋಗ್ಯವಂತ ಸುಂದರ ಹೆಂಗಸು, ಸಿಗುವವರೆಗೂ ಕಾಯೋಣ. ನಿಧಾನವಾಗಿ ಹುಡುಕಿಸೋಣ."

"ಸುಂದರ ಹೆಂಗಸು ಏಕೆ? ಮಗು ನಮ್ಮಿಬ್ಬರನ್ನೇ ಹೋಲುತ್ತೆ. ಜೀನ್ಸ್ ನಮ್ಮದು.... ಮಗು ನನ್ನ ಹಾಗೋ, ನಿನ್ನ ಹಾಗೋ ಇರಲೇ ಬೇಕು."

"ಅದು ನನಗೂ ಗೊತ್ತು. ಆದರೆ ಯಾರೋ ಕುರೂಪಿ ಹೆಂಗಸು, ಹಣದಾಸೆಗೆ ನನ್ನ ಮಗುವನ್ನು ಹೆತ್ತು ಕೊಡುವುದು ಬೇಕಿಲ್ಲ"

"ಸರಿ ಹಾಗಾದರೆ, ನಾಳೇನೇ ಪೇಪರ್‌ನಲ್ಲಿ ಒಂದು ಪ್ರಕಟಣೆ ಹಾಕಿಸ್ತೀನಿ"

"ಸುಂದರವಾದ, ಶೀಲವಂತೆಯಾದ, ವಿದ್ಯಾವಂತೆಯಾದ, ಮದುವೆಯಾಗದ ಒಬ್ಬ ಚಿಕ್ಕ ವಯಸ್ಸಿನ ಸುಂದರ ಯುವತಿಯೊಬ್ಬಳು ಬಾಡಿಗೆ ತಾಯಿಯಾಗಲು ಬೇಕಾಗಿದ್ದಾಳೆ. ತಕ್ಕಷ್ಟು ಸಂಭಾವನೆಯೂ ಆಗುತ್ತದೆ. ಅಂತ ಪ್ರಕಟಣೆ ಕಂಡ ಕೂಡಲೇ,ನಮ್ಮ ಮನೆ ಮುಂದೆ ಹೆಂಗಸರು, ಗಂಡಸರು ಎಲ್ಲರೂ ಕ್ಯೂ ನಿಲ್ತಾರೆ."

"ಘೂ ಸ್ವಲ್ಪ ಗಂಭೀರವಾಗಿ ಯೋಚಿಸಿ ಮಾತನಾಡಿ. ನಾನು ನಿಜವಾಗಿಯೂ ಹೇಳ್ತಾ ಇದೀನಿ. ತಮಾಷೆಯಲ್ಲ. ನಿಮಗಿಷ್ಟವಿಲ್ಲದಿದ್ದರೆ ಹೇಳಿಬಿಡಿ. ನಾನು ಯಾವುದಾದರೂ ಆಶ್ರಮಕ್ಕೆ ಸೇರಿಕೊಳ್ತೀನಿ. ಬಂಜೆ ಅನ್ನಿಸಿಕೊಂಡು ನಿಮ್ಮ ಮನೆಯಲ್ಲಿರಲಾರೆ"

ಮುಕುಂದ ಅವಳ ಕೈ ಹಿಡಿದು ವಿಶ್ವಾಸವನ್ನು ತೋರಿದ.

"ದುಡುಕಬೇಡ, ನಿಧಾನವಾಗಿ ಯೋಚಿಸಿ ನಿರ್ಧಾರಕ್ಕೆ ಬಾ. ಏನು ಸಮಸ್ಯೆ ಬಂದರೂ ಎದುರಿಸುವುದಕ್ಕೆ ಸಿದ್ಧರಾಗಿರಬೇಕು.... ಅಲ್ವಾ ಸುಕನ್ಯಾ?"

"ನಾನೆಲ್ಲಾ ಯೋಚಿಸಿ ನಿರ್ಧಾರಕ್ಕೆ ಬಂದಿದೀನಿ. ನೀವು 'ಹೂಂ' ಅನ್ನಿ ಸಾಕು"

"ನನಗೆ ಯೋಚಿಸೋಕ್ಕೆ ಅವಕಾಶ ಕೊಡು." ಒಂದೆರಡು ದಿನಗಳ ನಂತರ ಅವಳು ಈ ವಿಷಯವನ್ನು ಮರೆತು ಸುಮ್ಮನಾಗಬಹುದು ಎಂದುಕೊಂಡಿದ್ದ.

ಆದರೆ ಎರಡು ದಿನಗಳ ನಂತರ ಸುಕನ್ಯ ಮತ್ತೆ ಪೀಠಿಕೆ ಹಾಕಿದಳು.

"ಸರಿ...ಏನು ತೀರ್ಮಾನ ಮಾಡಿದ್ರಿ?"

"ನಿನಗೆ ಬೇಜಾರು ಮಾಡಲು ನನಗಿಷ್ಟವಿಲ್ಲ. ನಿನಗಿಷ್ಟವಾದ ಹಾಗಾಗಲಿ. ಆದರೆ, ಆ ಬಾಡಿಗೆ ಹೆಂಗಸನ್ನು ಹುಡುಕುವ ಕೆಲಸವನ್ನು ಮಾತ್ರ ನನಗೆ ಹಚ್ಚಬೇಡ. ನನ್ನ ಅವಶ್ಯಕತೆ ಇದ್ದ ದಿನ, ಡಾಕ್ಟರು ಹೇಳಿದ ದಿನಗಳಲ್ಲಿ ಮಾತ್ರ, ನರ್ಸಿಂಗ್ ಹೋಂಗೆ ಬರುವ ಕೆಲಸ ನನ್ನದು."

ಸುಕನ್ಯ ನಗುತ್ತಾ ನುಡಿದಳು. "ನಾನೊಬ್ಬ ಹುಡುಗಿಯನ್ನ ಆರಿಸಿದೀನಿ..."

"ಯಾರು? ಹುಡುಗೀನಾ! ಎಲ್ಲಿದ್ದಾಳೆ ನನಗೆ ಹೇಳಲೇ ಇಲ್ಲ." ಗಾಭರಿಯಾಗಿದ್ದ.

"ಅವಳೊಬ್ಬಳು ಮದುವೆಯಾಗದೇ ಇರುವ ಯುವತಿ. ನಾನಿನ್ನೂ ಅವಳ ಹತ್ತಿರ ಮಾತನಾಡಿಲ್ಲ. ನೀವು 'ಹೂಂ' ಅಂದಮೇಲೆ ಮಾತನಾಡೋಣ ಎಂದ್ಕೊಂಡೆ. ಯಾರು ಅಂತ ನೀವೇ ಹೇಳಿ ನೋಡೋಣ."

"ನನಗೆ ತಿಳಿಯದು. ನಿನಗೆ ಈ ಸಮಯದಲ್ಲಿ ಸಹಾಯ ಮಾಡುವಂತಹ ಸುಂದರ ಯುವತಿ.... ಯಾವ ಸ್ನೇಹಿತೆಯೂ ನನಗೆ ತಿಳಿಯದು."

"ಸ್ನೇಹಿತೆ ಅಲ್ಲ.... ನನ್ನ ತಂಗಿ ಸಾವಿತ್ರಿ"

ಮುಕುಂದ ಬೆಚ್ಚಿ ಬಿದ್ದ. "ಸಾವಿತ್ರಿ...? ನಮ್ಮ ಸಾವಿತ್ರಿ... ಬೇಡ ಸುಕನ್ಯ ಅವಳನ್ನ ಇದಕ್ಕೆಲ್ಲ ಎಳಿಯಬೇಡ..." ಸಂತಾಪದ ಧ್ವನಿಯಲ್ಲಿ ಹೇಳಿದ.

"ಯಾಕೆ! ಅವಳು ಅವಳು ಎಲ್ಲಾ ರೀತಿಯಿಂದಲೂ ನಮಗೆ ಸರಿಯಾಗಿದ್ದಾಳೆ. ಬೇರೆಯವರಿಗೆ ತಿಳಿಯುತ್ತೆ ಅನ್ನುವ ಭಯವೂ ಇರುವುದಿಲ್ಲ. ಯಾರಿಗೋ ಕೊಡುವ ಹಣವನ್ನು ಇವಳಿಗೆ ಕೊಟ್ಟರಾಯ್ತು. ಅವಳ ಕಣ್ಣಿನ ಆಪರೇಷನ್‌ಗೆ ಹೇಗೂ ಬೇಕಲ್ಲ... ಅಥವಾ ಹಾಗೆ ಅವಳ ಖರ್ಚಿಗೆಂದು ಇಟ್ಟುಕೊಳ್ಳಲಿ ಅವಳ ಇಷ್ಟ."

"ಕಣ್ಣೇ ಕಾಣದವಳು ಈ ಹಣವನ್ನು ಇಟ್ಟುಕೊಂಡು ಏನು ಮಾಡ್ತಾಳೆ? ನ್ಯಾಯವಾಗಿ ಅವಳ ಕಣ್ಣಿನ ಚಿಕಿತ್ಸೆಗೆ ಖರ್ಚು ಮಾಡಬೇಕಾದವರು. ನಾವುಗಳು ಅದನ್ನು ಬಿಟ್ಟು, ಇಂಥ ಕೆಲಸಕ್ಕೆ ಅವಳನ್ನು ಉಪಯೋಗಿಸಿಕೊಳ್ಳುವುದು ನನಗಿಷ್ಟವಿಲ್ಲ. ತಮಾಷೆಗೂ ಅವಳ ಈ ಹತ್ತಿರ ವಿಷಯವನ್ನು ಪ್ರಸ್ತಾಪಿಸಬೇಡ."

"ಯಾಕೆ? ಅವಳ ಮೇಲಿನ ಅನುಕಂಪ ಜಾಸ್ತಿಯಾಗಿರುವ ಹಾಗಿದೆಯಲ್ಲಾ?"

"ಯಾರಾದರೂ, ಅನುಕಂಪ ತೋರಿಸ್ತಾರೆ... ಅಂತಹ ಹುಡುಗಿ ಅವಳು.... ನನ್ನ ನಾದಿನಿ... ನನಗೆ ನಿನ್ನ ಈ ಹುಚ್ಚುತನ ಅತಿಯಾಗಿ ಕಾಣುತ್ತಿದೆ"

"ಹೌದು. ನನಗೆ ಹುಚ್ಚು ಹೆಚ್ಚಾಗಿದೆ....ಅದನ್ನು ಕಡಿಮೆ ಮಾಡುವ ಯೋಚನೆ ಇಲ್ಲ ನಿಮಗೆ... ನನಗಿಂತಾ ಹೆಚ್ಚಾಗಿ ಅವಳು ನಿಮಗೆ? ಅವಳು ನನ್ನ ತಂಗಿ.... ಅವಳನ್ನು ಏನು ಬೇಕಾದ್ರೂ ಕೇಳ್ತೀನಿ.... ಅದು ನನ್ನ ಇಷ್ಟ" ಹಳೆಯ ಚಾಪನ್ನೇ ಹಿಡಿದು ದರ್ಪದಿಂದ ಮಾತನ್ನಾಡಿದ್ದಳು.

"ಇದರಿಂದ ನಾನೂ ಕೆಟ್ಟವನಾಗ್ತೀನಿ. ನಿಮ್ಮ ತಾಯಿ ಏನಂದುಕೊಳ್ತಾರೆ?"

ಸುಕನ್ಯ ಸ್ವಲ್ಪ ಸಮಾಧಾನಗೊಂಡಳು.

"ಅಮ್ಮನ ಚಿಂತೆ ನಿಮಗೆ ಬೇಡ. ಅಷ್ಟೊಂದು ಹಣ ಸಿಕ್ಕುತ್ತೆ ಅಂದರೆ, ಅದು ಸಾವಿತ್ರಿಯ ಮುಂದಿನ ಜೀವನಕ್ಕೆ ಉಪಯೋಗವಾಗುತ್ತೆ ಅಂದರೆ, ಯಾಕೆ ಬೇಡ ಅಂತಾಳೆ! ಒಪ್ಪಿದರೂ ಒಪ್ಪಬಹುದು."

"ಬರೀ ಹಣದ ಪ್ರಶ್ನೆ ಅಲ್ಲ. ಅವಳು ಮದುವೆಯಾಗದವಳು, ಇನ್ನೂ ಚಿಕ್ಕವಳು, ನನ್ನನ್ನು ಸುಮ್ಮನೇ ಬಿಡ್ತಾರಾ?"

"ಸಾವಿತ್ರೀನೇ ಒಪ್ಪಿದರೆ, ಯಾರೇನು ಅಂತಾರೆ! ಅಥವಾ ನನಗೇನೂ ಚಿಂತೆ ಇಲ್ಲ. ಕಣ್ಣಿಲ್ಲದವಳನ್ನು ಯಾರು ಮದುವೆಯಾಗ್ತಾರೆ! ಅವಳಿಗೆ ಏನೂ ಕಷ್ಟವಾಗುವುದಿಲ್ಲ. ಹೇಗೂ ಅವಳು ಮನೆಯನ್ನು ಬಿಟ್ಟು ಹೊರಗೆ ಬರದೇ ಇರುವುದರಿಂದ ಯಾರಿಗೂ ತಿಳಿಯುವುದಿಲ್ಲ. ಅವಳು ಒಪ್ಪಿಕೊಂಡರೆ, ಜೀವಮಾನವೆಲ್ಲಾ ಸುಖವಾಗಿರ್ತಾಳೆ."

"ನಿನ್ನ ತಂಗಿಯ ಬಗ್ಗೆ ನಿನಗೆ ಏನೂ ಅನ್ನಿಸುವುದಿಲ್ಲವೆ? ಅವಳ ಮೇಲೆ ಪ್ರೀತಿ ಇಲ್ಲದಿದ್ದರೆ ಬೇಡ... ಸ್ವಾರ್ಥಿಯಾಗಬೇಡ."

"ಏನೂ ಬೇಕಾದರೂ ಅನ್ನಿ. ನೀವು ಒಪ್ಪದಿದ್ದರೆ, ನಿಮಗೆ ನನ್ನ ಮೇಲೆ ಪ್ರೀತಿ ಇಲ್ಲ ಅಂತ ಅಂದ್ಕೊಳ್ತೀನಿ"

ಏನೇ ಆಡಿದರೂ, ಈ ಮಾತಿಗೆ ಬಂದು ನಿಲ್ತಾಳಲ್ಲ ಎನಿಸಿ ಬೇಸರಗೊಂಡ.

"ನಿನಗೋಸ್ಕರ ಒಪ್ಕೊತೀನಿ. ಆಮೇಲೆ ಎಡವಟ್ಟಾದರೆ, ನನಗೇನೂ ಹೇಳಬೇಡ." ಅವನು ಒಪ್ಪಿದ್ದೇ ಸಾಕು ಎಂಬಂತೆ ಸುಕನ್ಯ ಮುದಗೊಂಡಳು. ಮಾತನ್ನು ಮುಂದುವರೆಸುವ ಇಚ್ಛೆ ಇಲ್ಲದೇ ಮುಕುಂದ ಮುಸುಕೆಳೆದು ಮಲಗಿದ.

ಸಾವಿತ್ರಿಯ ಹತ್ತಿರ ಮಾತನಾಡುವಾಗ ಸರಳನೂ ಇದ್ದರೆ ಸರಿ... ಇಲ್ಲದಿದ್ದರೆ ಆಮೇಲೆ ಆಕ್ಷೇಪಣೆ ಮಾಡಿ, ಅಡ್ಡಿ ತಂದರೆ ಎಂದುಕೊಂಡು, ಮಲಗಿದಳು. ಸರಳಂಗೆ ಸಾವಿತ್ರಿಯ ಮೇಲೆ ಪ್ರೀತಿ ಜಾಸ್ತಿ. ತಾನು ಸ್ವಾರ್ಥಿ ಇರಬಹುದು. ಆದರೆ ಅದಕ್ಕೆ ಪರಿಸ್ಥಿತಿಯೇ ಕಾರಣ... ನನ್ನ ಸ್ವಾರ್ಥತನದಿಂದ ಸರಳಂಗೆ ಏನೂ ನಷ್ಟವಿಲ್ಲ. ಸಾವಿತ್ರಿಗೆ ಲಾಭ.... ಇಬ್ಬರನ್ನೂ ಒಪ್ಪಿಸಬಹುದು ಎಂದುಕೊಂಡು ನಿಶ್ಚಿಂತೆಯಿಂದ ನಿದ್ರಿಸಿದಳು.

ಬೆಳಿಗ್ಗೆ ಮುಕುಂದ ಆಫೀಸಿಗೆ ಹೋಗುವುದನ್ನೇ ಕಾದಿದ್ದು, ಸರಳಂಗೆ ಬ್ಯಾಂಕಿಗೆ ಫೋನು ಮಾಡಿ ಮಾತನಾಡಿದಳು.

"ಸರಳ ಇವತ್ತು ಮಧ್ಯಾಹ್ನ ನಮ್ಮ ಮನೆಗೆ ಊಟಕ್ಕೆ ಬರ್ತೀಯಾ! ನಾನೂ ಒಬ್ಬಳೇ ನನಗೂ ಬೇಜಾರು. ಹಾಗೇ ಸಾವಿತ್ರೀನೂ ಕರೆದುಕೊಂಡು ಬಾ... ಅವಳಿಗಿಷ್ಟವಾದ ಅಡಿಗೆಯನ್ನು ಮಾಡಿರ್‍ತೀನಿ... ಎಲ್ಲರೂ ಕೂತು ತುಂಬಾ ಮಾತನಾಡೋಣ" ಮಾತಿನಲ್ಲಿ ಜೇನನ್ನು ಸುರಿಸಿ ಆಹ್ವಾನವಿತ್ತಳು. ಸರಳಂಗೆ ಏನೋ ಅನುಮಾನ.

"ಏನು ಅಂಥ ವಿಷಯಾ!..."

"ಮನೆಗೆ ಬಂದಾಗ ಹೇಳ್ತೀನಿ ಮರೆಯದೇ ಸಾವಿತ್ರಿಯನ್ನು ಕರೆದುಕೊಂಡು ಬಾ...." ಫೋನು ಡಿಸ್‌ಕನೆಕ್ಟ್ ಮಾಡಿ.. ಒಂದು ವಿಧವಾದ ಭಾವನೆಯಿಂದ ಹಾಗೇ ನಿಂತಳು......

ಸರಳ, ಸಾವಿತ್ರಿಯರೊಡನೆ ಪ್ರೀತಿಯಿಂದ ಮಾತನಾಡಿದುದಕ್ಕಿಂತ ಜಗಳವಾಡಿದುದೇ ಹೆಚ್ಚು.... ಈಗ ತನ್ನ ಸ್ವಾಭಿಮಾನವನ್ನು ಬದಿಗೊತ್ತಿ ಅವರುಗಳೊಡನೆ ಕೃತಕತೆ ನಟಿಸಿ, ಅವರನ್ನು ಒಪ್ಪಿಸುವಂತೆ ಮಾತನಾಡಬೇಕಾಗಿ ಬಂದ ತಮ್ಮ ಸ್ಥಿತಿಗೆ ಹೀನಾಯವೆನಿಸಿತ್ತು...ಆದರೆ ಇದರಿಂದ ತನಗೆ ಲಾಭವಿದೆ....ತನ್ನ ಅತ್ತೆ ಮನೆಯವರು ತನ್ನನ್ನು ನಿಂದಿಸುವುದು ತಪ್ಪುತ್ತೆ ಅನ್ನಿಸಿದಾಗ, ಒಂದು ರೀತಿಯ ಅಲ್ಪ ಸಮಾಧಾನದಿಂದ ಅಡಿಗೆ ಮನೆಗೆ ತೆರಳಿದಳು.

ಅವಳಿಗೆ ಅಡಿಗೆ ಕೆಲಸದಲ್ಲಿ ಆಸಕ್ತಿ ಇರಲಿಲ್ಲ. ಮಾಡಿದ ಅಡಿಗೆಯ ರುಚಿಯನ್ನು ಮುಕುಂದ ಎಂದೂ ತೆಗಳಿರಲಿಲ್ಲ. ಅದು ಅವನ ದೊಡ್ಡ ಗುಣ. ತನಗೆ ತಿಳಿದಂತೆ, ಸಾವಿತ್ರಿಗೆ ಇಷ್ಟವಾದ ಈರುಳ್ಳಿಯ ಗೊಜ್ಜನ್ನು ಮಾಡಿ, ಚಪಾತಿ ಮಾಡಿದಳು. ಅನ್ನಹುಳಿ ಸಹ ಮಾಡಿ, ಹತ್ತಿರದಲ್ಲಿದ್ದ ಸ್ವೀಟ್ ಹೋಂನಿಂದ ಒಂದಿಷ್ಟು ಸಿಹಿ ತಿಂಡಿಗಳನ್ನು ಕಟ್ಟಿಸಿ ತಂದಿದ್ದಳು. ಅವರಿಬ್ಬರನ್ನು ಕಾಯುತ್ತಾ ಕುಳಿತಿರುವುದು ಅಸಹನೀಯವಾಗಿ ಕಂಡಿತ್ತು. ಚಡಪಡಿಸುತ್ತಾ ಕುಳಿತವಳನ್ನು ಗೇಟಿನ ಕಿರ್ ಸದ್ದು ಎಚ್ಚರಿಸಿತು. ಇಣುಕಿದಳು. ಸರಳೆಯ ಕೈ ಹಿಡಿದು ನಿಧಾನವಾಗಿ ಬರುತ್ತಿದ್ದ ಸಾವಿತ್ರಿಯನ್ನು ಕಂಡು, ಮೊದಲಬಾರಿಗೆ ಮನಸ್ಸು ಮಿಡಿಯಿತು. ಒಂದೇಗಳಿಗೆ ಅಷ್ಟೇ. ಮನಸ್ಸನ್ನು ತಹಬಂದಿಗೆ ತಂದುಕೊಂಡು ಬಾಗಿಲು ತೆರೆದು ಒಳಕ್ಕೆ ಬರಮಾಡಿಕೊಂಡಳು.

"ಏನೇ ಸಾವಿತ್ರಿ ಹೇಗಿದೀಯಾ?" ಆತ್ಮೀಯತೆಯನ್ನು ವಿಶೇಷವಾಗಿ ಪ್ರಕಟಿಸಿ ಕೇಳಿದಳು.

"ನಾನು ಇನ್ನ್ಹೇಗೇ ಇರ್ತೀನಿ? ನಾನು ಹೇಗಿದೀನಿ ಎನ್ನುವುದು ನಿನಗೆ ಚೆನ್ನಾಗಿ ಗೊತ್ತೇ ಇದೆ."

"ಎಷ್ಟು ಜಾಣೆ ತರಹ ಮಾತಾಡ್ತೀಯಲ್ಲ.... ದೇವರಿಗೆ ಕಣ್ಣಿಲ್ಲ. ನಿನ್ನಂತಹವಳ ಕಣ್ಣನ್ನು ಕಿತ್ಕೊಂಡಿದಾನೆ."

"ನನ್ನ ಕರ್ಮಕ್ಕೆ ದೇವರನ್ನು ಯಾಕೆ ಅನ್ನಬೇಕು? ಅದೇನು ಅಷ್ಟು ವಿಶ್ವಾಸದಿಂದ ವಿಚಾರಿಸ್ತಿದೀಯಲ್ಲ. ದೇವರು ನಿನಗೆ ಯಾವಾಗ ಇಷ್ಟು ಒಳ್ಳೆ ಬುದ್ಧಿಯನ್ನು ಕೊಟ್ಟನೋ...?"

"ಸಾವಿತ್ರಿ...." ಸರಳ ಮೆಲ್ಲಗೆ ಗದರಿದಳು.

"ಅನ್ನಲಿ ಬಿಡು ಸರಳಾ... ನಾನೂ ಹಾಗೇ ಅನ್ತಿದ್ದೆ. ಹಿರಿಯವಳು, ಸಂಪಾದಿಸ್ತೀನಿ ಎನ್ನುವ ಧಿಮಾಕು, ಜಂಭ, ಅವಕ್ಕೆ ಏನೋ ಜಂಭವೆಲ್ಲ ಅಡಗಿ ಹೋಗುವ ಸ್ಥಿತಿ ಬಂದಿದೆ ನನಗೆ."

"ಏನಾಯ್ತೇ.....ನೀನೂ ಮುಕುಂದ ಇಬ್ಬರೂ ಸರಿಯಾಗಿದೀರಿ ತಾನೇ....?" ಸರಳ ಗಾಭರಿಯಿಂದ ಕೇಳಿದಳು.

"ಪಾಪ. ಮುಕುಂದ ತುಂಬಾ ಒಳ್ಳೆಯವರು, ನನ್ನಿಂದ ಅವರಿಗೆ ಎಷ್ಟು ಕಷ್ಟ, ಗೊತ್ತಾ? ನನಗೆ ಮಕ್ಕಳಾಗದಿದ್ದರೆ, ಅವರ ಮನೆಯವರು, ಅವರಿಗೆ ಇನ್ನೊಂದು ಮದುವೆ ಮಾಡಿ ಬಿಡ್ತಾರೆ. ನನಗೆ ಅದೇ ಗಾಭರಿಯಾಗಿದೆ."

"ಮುಕುಂದ ಒಪ್ಪಿದಾರೇನೇ....?"

"ಇಲ್ಲ ಒಪ್ಪಿಲ್ಲ. ನನ್ನ ಮೇಲಿನ ಪ್ರೀತಿಯಿಂದ ಒಪ್ಪಿಲ್ಲ. ಆದರೆ ನಾನು ಅವರಿಗೆ ಒಂದು ಮಗುವನ್ನು ಹೆತ್ತು ಕೊಡದಿದ್ದ ಮೇಲೆ, ಆ ತಪ್ಪು ನನ್ನದೇ ಅಲ್ಲವಾ?"

"ಅದಕ್ಕೆ ನೀನೇನು ಮಾಡುಕ್ಕಾಗುತ್ತೆ? ನೀನೂ ಮುಕುಂದ ಚೆನ್ನಾಗಿದ್ದರೆ, ಅವರ ತಾತ ಸಹ ಏನೂ ಮಾಡುಕ್ಕಾಗಲ್ಲ."

"ಆದರೆ ಅವರುಗಳು. ಬಂಜೆ ಬಂಜೆ ಅಂತ ನನ್ನನ್ನು ಹಂಗಿಸಿ ಅಂದರೆ ಅದೂ ನನಗೆ ಸಹಿಸುಲ್ಲ. ಮುಕುಂದ ತಾನೇ ಹೇಗೆ ಸಹಿಸ್ತಾರೆ."

"ಅದಿರಲಿ ಅಂಥಾದ್ದೇನಾಗಿದೆ ಈಗ?"

"ನನಗೆ ಮಕ್ಕಳಾಗುವ ಸಾಧ್ಯತೆಯೇ ಇಲ್ಲ ಅಂತ ಡಾಕ್ಟರು ಹೇಳಿದಾರೆ"

"ಏಕಂತೆ? ಅವರೇ ಔಷಧಿ. ಪಥ್ಯ ಎಲ್ಲಾ ಹೇಳಿದ್ದರಲ್ಲ..."

"ಹೌದು. ಆದರೆ ನನ್ನಲ್ಲೇ ಉಂಟಾಗಿರುವ ದೋಷಕ್ಕೆ ಏನ್ಮಾಡ್ತಾರೆ?"

"ಅದಕ್ಕೆ ಬೇರೆ ಇನ್ನೇನೂ ಉಪಾಯವೇ ಇಲ್ಲವಂತಾ?"

"ಇದೆ. ಒಂದು ಉಪಾಯವಿದೆ. ನೀವಿಬ್ಬರೂ ಕೋಪಿಸ್ಕೊಳ್ಳುವುದಿಲ್ಲ ಅಂತ ಅಂದರೆ ಮಾತ್ರ ಹೇಳ್ತೀನಿ" ಸುಕನ್ಯ ಎಂದೂ ಇಷ್ಟು ಸೌಜನ್ಯದಿಂದ ಮಾತನಾಡಿದವಳಲ್ಲ. ಅವಳ ಉಪಾಯವೇನು ಎಂದು ತಿಳಿಯಲು ಕಾತುರಳಾದಳು.

"ನಿನ್ನ ಉಪಾಯದಿಂದ ನಮಗೆ ಅಪಾಯವಾಗುವುದಾದರೆ...."

"ಹಾಗೆಲ್ಲ ಏನಿಲ್ಲ. ಏನೂ ಅಪಾಯವಿಲ್ಲ...." ಒಂದುಗಳಿಗೆ ಅನುಮಾನಿಸಿದಳು.

"ನೀನು ಅನುಮಾನಿಸಿದರೆ ನಮಗೆ ಹೇಗೆ ತಿಳಿಯಬೇಕು! ಅದೇನು ಹೇಳ್ತೀಯೋ ಬೇಗ ಹೇಳು"

"ಸಾವಿತ್ರಿ ಒಪ್ತೀನಿ ಅಂತ ಮಾತು ಕೊಟ್ರೆ ಹೇಳ್ತೀನಿ"

"ಯಾಕೆ? ಸಾವಿತ್ರೀನ ಮುಕುಂದನಿಗೆ ಮದುವೆ ಮಾಡಿಸುವ ಯೋಚನೆ ಏನಿಲ್ಲ ತಾನೇ..." ಸರಳ ಕೇಳಿದಾಗ ಸಾವಿತ್ರಿ ನಾಚಿದಳು.

"ಛೆ. ಅದಲ್ಲ.... ಆದರೆ ಸಾವಿತ್ರಿಯಿಂದ ನನಗೆ ಸಹಾಯವಾಗಬೇಕಾಗಿದೆ."

"ನನ್ನಿಂದ ಸಹಾಯಾನ ಬಯಸ್ತಿದೀಯಲ್ಲ ಸುಕನ್ಯ.... ಅದೇನು ಹೇಳು, ನನ್ನಿಂದ ಮಾಡುವುದಕ್ಕಾಗುವಂಥಾದ್ದಾದ್ರೆ ಖಂಡಿತಾ ಮಾಡ್ತೀನಿ." ತಮಾಷೆ ಎಂಬಂತೆ ನಕ್ಕಳು.

"ತಮಾಷೆ ಅಲ್ಲ ಕೇಳು.... ನಾನು ಒಂದು ಗಹನವಾದ ವಿಚಾರವನ್ನು ಹೇಳ್ತೀನಿ. ಮಧ್ಯದಲ್ಲಿ ಮಾತನಾಡಬಾರದು ಕಣೇ, ನಿನಗೆ ಒಪ್ಪಿಗೆ ಅಥವಾ ಒಪ್ಪಿಗೆ ಇಲ್ಲ ಎನ್ನುವುದನ್ನು ಮಾತ್ರ ತಿಳಿಸಬೇಕು"

ತಮಾಷೆಯಾಗಿ ಏನನ್ನೋ ಹೇಳ್ತಾಳೆ ಅಂತ ಅಂದುಕೊಂಡರೂ, ಸರಳ ಆತಂಕಗೊಂಡಿದ್ದಳು. ಸುಕನ್ಯ ಸರಿಯಾಗಿದಾಳೆ ತಾನೇ ಎನ್ನುವ ಅನುಮಾನ ಕಾಡಿತ್ತು. ಆದರೂ, "ಹೂಂ ಹೇಳು" ಇಬ್ಬರೂ ಹೇಳಿದರು. ಸುಕನ್ಯ ಪ್ರಾರಂಭಿಸಿದಳು.

ತನಗೆ ಮೇಲೆ ಮೇಲೆ ಆದ ಅಬಾರ್ಷನ್‌ಗಳಿಂದ, ಗರ್ಭಕೋಶಕ್ಕೆ ಉಂಟಾದ ತೊಂದರೆ, ಅದರಿಂದ ತನಗೆ ತಿಳಿಸದೇ ಮುಕುಂದ ಒಪ್ಪಿ ಆದ ಆಪರೇಷನ್, ಆ ನಂತರ ಡಾಕ್ಟರ್ ತಿಳಿಸಿದ್ದ, ತಾನು ಓದಿದ ಸಾರೋಗೇಟ್ ಮದರ್ ವಿಚಾರ, ತಾನು ಯೋಚಿಸಿ ಒಂದು ತೀರ್ಮಾನಕ್ಕೆ ಬಂದು, ಮುಕುಂದನನ್ನು ಒಪ್ಪಿಸಿದ್ದನ್ನೆಲ್ಲಾ

ಚಾಚೂ ತಪ್ಪದೇ ತಿಳಿಸಿದಳು. ಸರಳಂಗೆ ಕೋಪದಿಂದ ಮುಖ ಧುಮುಗುಟ್ಟುತ್ತಿತ್ತು. ಸಾವಿತ್ರಿ ಅವಮಾನಿತಳಂತೆ ತಲೆ ತಗ್ಗಿಸಿದಳು. ಇಬ್ಬರೂ ಮಾತನಾಡಲಿಲ್ಲ. ಸುಕನ್ಯಳಿಗೆ ಅವರಿಬ್ಬರ ಮೌನ ರೊಚ್ಚಿಗೆಬ್ಬಿಸಿತು. ಮೊದಲಿನ ಧಾಟಿಗೆ ಬಂದಳು.

"ಸರಿ. ಗೊತ್ತಾಯ್ತು. ನಿಮಗ್ಯಾರಿಗೂ ನನ್ನ ಬಗ್ಗೆ ಮರುಕವಿಲ್ಲ. ನನಗೆ ಸಹಾಯ ಮಾಡುವ ಮನಸ್ಸಿಲ್ಲ. ನನ್ನನ್ನು ಯಾರು ಬಂಜೆ ಎಂದರೂ, ನಿಮಗೆ ಏನೂ ಅನ್ನಿಸುವುದಿಲ್ಲ. ಏಕೆ ಅನ್ನಿಸುತ್ತೆ? ಮುಕುಂದ ಬೇರೆ ಇನ್ನೊಂದು ಮದುವೆ ಯಾದರೆ ನಿಮಗೆ ಏನು ಕಷ್ಟ? ನನಗೆ ತಾನೇ ಕಷ್ಟ? ತೊಂದರೆ... ನಾನು ಆತ್ಮಹತ್ಯೆ ಮಾಡಿಕೊಳ್ತೀನಿ. ನೀವುಗಳು ಸಂತೋಷ ಪಡೋರಂತೆ..." ಒಂದು ನಿಮಿಷದ ಹಿಂದೆ ತೋರಿದ ಸೌಜನ್ಯವನ್ನು ಮರೆತು ಕೂಗಾಡಿದಳು. ಸರಳ ಎದ್ದು ನಿಂತಳು.

"ಹೀಗೆ ಅಂತ ಮೊದಲೇ ಗೊತ್ತಾಗಿದ್ದಿದ್ರೆ ಸಾವಿತ್ರೀನ ಕರೆದುಕೊಂಡೇ ಬರು ತ್ತಿರಲಿಲ್ಲ. ನಿನಗೆ ಇವಳೇ ಆಗಬೇಕಾ? ಹಣ ಕೊಟ್ಟರೆ ಬೇರೆ ಯಾರಾದ್ರೂ ಸಿಕ್ತಾರೇನೋ ಹುಡುಕು."

"ಹುಂ. ಹುಡುಕ್ತೀನಿ....ಹಣಾನೂ ಬಿಸಾಕ್ತೀನಿ. ಏನೋ ಪಾಪ ಸಾವಿತ್ರಿಗೆ ಅನುಕೂಲವಾಗಲಿ ಅಂತ ಹೇಳಿದ್ರೆ....ನನಗೆ ಬುದ್ಧಿ ಹೇಳ್ತೀರಿ. ಸಾವಿತ್ರಿ ನೀನಾದರೂ ಯೋಚಿಸು. ಅಮ್ಮನೂ ಇಲ್ಲವಾದಾಗ ನೀನು ಒಬ್ಬಳೇ ಆಗ್ತೀಯಾ.... ಆಗೇನು ಮಾಡ್ತೀಯಾ! ರಸ್ತೇಲಿ ಹಾಡು ಹೇಳಿಕೊಂಡು ಭಿಕ್ಷೆ ಬೇಡ್ತೀಯಾ?"

"ಸುಕನ್ಯ ಸುಮ್ಮನಿದೀನಿ ಅಂತ ಅದೇನು ಮಾತೂಂತ ಆಡ್ತೀಯ... ಏಷ್ಟಾದರೂ ಅವಳು ನಿನ್ನ ತಂಗಿ. ಆ ಅಭಿಮಾನವಾದರೂ ಬೇಡವೆ?"

"ಆ ಅಭಿಮಾನದಿಂದಲೇ ಹೇಳ್ತಿದೀನಿ. ಒಂದು ಲಕ್ಷ ರೂಪಾಯಿಗಳನ್ನು ಕೊಡ್ತೀನಿ. ಯಾರಿಗುಂಟು ಯಾರಿಗಿಲ್ಲ? ಅವಳು ಜೀವಮಾನವೆಲ್ಲಾ ಇನ್ನೊಬ್ಬರ ಹಂಗಿಲ್ಲದೇ ಸುಖವಾಗಿರಬಹುದು."

"ಸುಖ? ಹಾಗೆ ಸಿಕ್ಕಿದ ಹಣದಿಂದ ಇವಳಿಗೆ ಯಾವ ಸುಖ? ಜೀವಮಾನವೆಲ್ಲಾ ಪರಿತಪಿಸಬೇಕಾಗುತ್ತೆ."

"ಹಣ ಬೇಡ ಅಂತ ಯಾರೂ ಅನ್ನಲ್ಲ. ಹೋಗಲಿ ಅವಳಿಗೆ ಹಣ ಬೇಡದಿದ್ದರೆ ಬೇಡ.... ಆದರೆ, ಇವಳಿಂದ ಇನ್ಯಾರಿಗೆ ಇನ್ನಾವ ಉಪಯೋಗವಿದೆ ನೀನೇ ಹೇಳು. ನನಗೆ ಸಹಾಯ ಮಾಡಿದರೆ ನಾನು ಈ ಜನ್ಮವೆಲ್ಲಾ ಅವಳಿಗೆ ಋಣಿಯಾಗಿರ್ತೀನಿ."

"ಸುಕನ್ಯ ನಿನ್ನ ಆಲೋಚನೆ ತುಂಬಾ ಚೆನ್ನಾಗಿದೆ. ಆದರೆ ಇದಕ್ಕೆ ನಾನು

ಒಪ್ಪುವುದಿಲ್ಲ." ವ್ಯಂಗ್ಯವಾಗಿ ಸರಳ ನುಡಿದಾಗ ಸುಕನ್ಯ ದನಿ ಏರಿಸಿದಳು.

"ಒಪ್ಪದಿರುವುದಕ್ಕೆ ನೀನ್ಯಾರು? ಸಾವಿತ್ರಿ ಮಾತನಾಡಲಿ. ಅವಳಿಗೆ ಕಣ್ಣಿಲ್ಲ ದಿದ್ದರೇನಂತೆ!ಬಾಯಿದೆಯಲ್ಲ". ಕಲ್ಲಿನಂತೆ ನಿಂತಿದ್ದ ಸಾವಿತ್ರಿ ಅಲುಗಾಡಿದಳು.

"ಸರಳಾ... ನಡೀ ಮನೆಗೆ ಹೋಗೋಣ" ಸುಕನ್ಯ ಎಚ್ಚೆತ್ತಳು ತಾನು ಆಡಿದ್ದು ಇಬ್ಬರಿಗೂ ಒಪ್ಪಿಗೆಯಾಗಿಲ್ಲ. ತಾನೀಗ ಜಾಣೆಯಾಗಬೇಕು ಎಂದುಕೊಂಡು,

"ಸರಿ. ಇದಂತೂ ಒಪ್ಪಿಗೆಯಾಗಲಿಲ್ಲ. ಊಟವನ್ನು ಮಾಡದೇ ಹೊರಡು ವಂಥಾದ್ದು ಏನಾಯ್ತೀಗ?"

"ನೀನು ಇಷ್ಟು ಹಂಗಿಸಿ, ಹೀಯಾಳಿಸಿ ಮಾತನಾಡಿದರೆ ಯಾರಿಗೆ ತಾನೇ ಊಟ ಸೇರುತ್ತೆ?"

"ಮನೆಗೆ ಹೋಗಿ ಏನು ಹೇಳ್ತೀಯಾ? ಊಟ ಹಾಕದೇ ಕಳಿಸಿದಳು ಅಂತ ತಿಳಿದ್ರೆ ಅಮ್ಮ ಬೈತಾಳೆ. ಸುಮ್ಮನೆ ಊಟ ಮಾಡಿ ಹೋಗೋರಂತೆ."

"ಬೈದರೆ ಬೈಯ್ಯಲಿ" ಎಂದಳು ಸಾವಿತ್ರಿ. "ಹೋಟೆಲ್ಲಿನಲ್ಲಿ ತಿನ್ನಿಸ್ತೀನಿ" ಎಂದಳು ಸರಳ. ಇಬ್ಬರೂ ಹೊರಟರು.

ಸುಕನ್ಯಗೆ ತನ್ನ ಯೋಜನೆ ಅಸಫಲವಾದುದಕ್ಕೆ ಬೇಸರವಾಯಿತು. ತಾನು ದುಡುಕಿದೆನೇನೋ ಅಂತನ್ನಿಸಿತ್ತು. ಮುಕುಂದನಿಗೆ ತಿಳಿದರೆ ಅವನು ತನ್ನನ್ನೇ ಬೈಯು ತ್ತಾನೆಂದು ಗೊತ್ತು. ದುರಭಿಮಾನವನ್ನು ಬದಿಗೊತ್ತಿ ಸಾವಿತ್ರಿಯ ಕೈ ಹಿಡಿದಳು.

"ಸಾವಿತ್ರಿ ನನ್ನನ್ನು ಕ್ಷಮಿಸಿ ಬಿಡು. ನಿನ್ನ ಮನಸ್ಸನ್ನು ನೋಯಿಸಿ ಬಿಟ್ಟೆ.... ಸರಳಾ, ನೀನು ಹೇಳುವುದೂ ಸರಿ. ತಂಗಿ ಅಂತ ಸಹಾಯ ಮಾಡುವ ಬದಲು ಅವಳಿಗೆ ತೊಂದರೆ ಕೊಡಲು ಹೊರಟಿದ್ದೆ. ನೀವಿಬ್ಬರೂ ಊಟಕ್ಕೆ ಬಂದರೆ, ನನ್ನನ್ನು ಕ್ಷಮಿಸಿದ್ದೀರಿ ಅಂತ. ಇಲ್ಲದಿದ್ದರೆ ಇನ್ನು ಮೇಲೆ, ನಿಮ್ಮ ಭಾಗಕ್ಕೆ ನಾನಿಲ್ಲ."

ಸಾವಿತ್ರಿ ಗೊಂದಲಕ್ಕೆ ಸಿಕ್ಕಿ ಬಿದ್ದಳು. ಸರಳ ಸುಮ್ಮನೇ ನಿಂತಳು.

"ಹೋಗಲಿ ಬಿಡೇ.... ನೀನೂ ಅಕ್ಕನೇ ಅಲ್ವಾ? ಒಂದು ಮಾತು ಹೆಚ್ಚಾಗುತ್ತೆ ಒಂದು ಮಾತು ಕಡಿಮೆ ಅಷ್ಟೆ. ನಿನಗೆ ತಾನೇ ನಮ್ಮನ್ನು ಬಿಟ್ಟರೆ ಬೇರೆ ಯಾರಿದ್ದಾರೆ? ತಂಗೀರು ಅನ್ನುವ ಸಲುಗೆಯಿಂದ ಇಷ್ಟೆಲ್ಲಾ ಆಡಿದೀಯಾ. ಒಂದು ಘಳಿಗೆ ಮುಂಚೆ ತುಂಬಾನೇ ಬೇಜಾರಾಗಿತ್ತು ನಿಜ. ಈಗೇನಿಲ್ಲ ಬಿಡು. ನಡಿ ಬಡಿಸು. ಊಟ ಮಾಡ್ತೀವಿ.... ಬಾರೇ ಸರಳಾ...." ಸರಳನ ಕೈಗಳನ್ನು ತಡಕಿದಾಗ, ಸರಳಗೆ ಏನು ಹೇಳಬೇಕೆಂದು ತೋಚಲಿಲ್ಲ. ಸುಕನ್ಯ ಆಡಿದ್ದೇನೋ ಅನುಚಿತವೇ. ಈ ಮುಂಚೆಯೂ

ಒರಟಾಗಿ ಮಾತುಗಳನ್ನಾಡುತ್ತಿದ್ದವಳು. ಆದರೆ ಅದು ಬೇರೆ ಮಾತು. ಇದೇ ಬೇರೆ ಮಾತು. ಆದರೆ ಸಾವಿತ್ರಿ ನಿಜವಾಗಿಯೂ ತಿಳುವಳಿಕಸ್ಥೆ. ಅವಳಿಗೆ ಸುಕನ್ಯಳ ಸ್ನೇಹ ದ್ವೇಷ ಎಲ್ಲಾ ಒಂದೇ. ಅದರಿಂದ ಲಾಭವೇನೂ ಇಲ್ಲ. ತನ್ನ ಅಸಹಾಯಕತೆಯೆ ಹೆಚ್ಚಾಗಿರುವಾಗ ತನಗೇಕೆ ಅನಾವಶ್ಯಕ ದ್ವೇಷ ಎಂದುಕೊಂಡಿರಬೇಕು... ಎಂದು ಕೊಂಡು ಸಾವಿತ್ರಿಯ ಕೈ ಹಿಡಿದು ವಿಶ್ವಾಸ ತೋರಿ, ಒಳಕ್ಕೆ ಕರೆದುಕೊಂಡು ಹೋದಳು.

ಸುಕನ್ಯ ಮೌನವಾಗಿ ಮೂವರಿಗೂ ತಟ್ಟೆ ಹಾಕಿದಳು. ಮೂವರೂ ಮಾತಿಲ್ಲದೆ ಊಟ ಮುಗಿಸಿದರು. ಅವರಿಬ್ಬರೂ ಹೊರಟಾಗ ಸುಕನ್ಯ ಮತ್ತೇನನ್ನೂ ಕೇಳಲಿಲ್ಲ. ಆಟೋ ಹತ್ತಿ ಕುಳಿತ ಮೇಲೆ ಸರಳ ಹೇಳಿದಳು.

"ಸುಕನ್ಯ ಏನೂ ಬದಲಾಗಿಲ್ಲ. ಅದೇ ತರಹ. ಅವಳು ಏನೇನೋ ಆಡಿದಳು ಅಂತ, ಅದನ್ನೇ ಯೋಚಿಸಬೇಡ. ಮರೆತು ಬಿಡು. ಅಮ್ಮಂಗೂ ಹೇಳಬೇಡ."

"ನನಗಷ್ಟೂ ಗೊತ್ತಾಗುಲ್ವೆ?" ಸಾವಿತ್ರಿ ಅವಳನ್ನೇ ಪ್ರಶ್ನಿಸಿದಳು. ಅವಳನ್ನು ಮನೆ ತಲುಪಿಸಿ, ಸರಳ ಮತ್ತೆ ಬ್ಯಾಂಕಿಗೆ ಹೊರಟು ಹೋದಳು. ಸಾವಿತ್ರಿ ತಾಯಿ ಕೇಳಿದ್ದಕ್ಕೆ ಮಾತ್ರ ಉತ್ತರಿಸಿ, ಏನೂ ತೋಚದೇ ತಂಬೂರಿ ಹಿಡಿದು ಶೃತಿ ಸರಿಮಾಡಿ ಕೊಂಡಳು. ತಂತಿಯನ್ನು ಮೀಟಿದಾಗ ಹೊಮ್ಮಿದ ನಾದಲಹರಿಯೊಂದಿಗೆ, ಅವಳ ಯೋಚನಾ ಲಹರಿ ಬೆರೆತು ಹರಿಯಿತು.

ತಾನೇನು? ತನಗೇನು ಅಸ್ತಿತ್ವವಿದೆ? ತನಗ್ಯಾವ ಬದುಕು ಇದೆ! ತಾನು ಹೀಗೆ ಬಾಳಲು ಸಾಧ್ಯವೆ? ಊಟ ನಿದ್ದೆಯಂತೆ, ತನಗೂ ಬೇರೆ ಬೇರೆ ಬಯಕೆಗಳೂ ಇವೆ ಆದರೆ ತಾನೆಷ್ಟು ಅಸಹಾಯಕಳು.... ಈ ವಿಚಾರದಲ್ಲಿ ತನಗೆ ಯಾರು ಯಾರು ಸಹಾಯಕರು?

ಸುರೇಶ ತನ್ನ ದೇಹವನ್ನು ಮಾತ್ರ ಬಯಸಿದನೆ? ಅಥವಾ ನಿಜವಾಗಿಯೂ ತನ್ನನ್ನು ಪ್ರೀತಿಸುತ್ತಿದಾನೆಯೆ? ತಾನೇನೋ ಅವನನ್ನು ಪ್ರೀತಿಸುತ್ತಿರುವುದು ನಿಜ... ಆದರೆ ಅದೆಂತಹ ಪ್ರೀತಿ? ಕೇವಲ ಅವನು ಬಯಸಿದಾಗ ಅವನವಳಾಗಿರುವೆ... ಆದರೆ ಅವನು ನನ್ನ ಗಂಡನಲ್ಲ. ನಾನು ಕೇವಲ ಅವನಿಗೆ ಮಾತ್ರ ಸೀಮಿತವಲ್ಲ ಅನು ಸರಳನ ಜತೆ ಹೇಗಿದಾನೋ ನನಗೆ ತಿಳಿಯದು. ತಾನೆಂದೂ ಆ ಬಗ್ಗೆ ಚಿಂತಿಸಿಲ್ಲ ಆದರೂ ಅವನು ಅವಳ ಗಂಡ. ಸಮಾಜದಲ್ಲಿ ಅವನ ರಕ್ಷಣೆ ಅವಳಿಗೆ ಮಾತ್ರ ತನಗೆ?

ಅವನ ಪ್ರೀತಿಯ ನಡೆ ನುಡಿಗಳಿಗೆ ತಾನು ಸೋತಿದ್ದೇನೋ ನಿಜ...

ತನಗೆಂದೂ ಅದು ಅಸಹ್ಯ, ಅಸಭ್ಯ ಎನಿಸಿಲ್ಲ. ಆದರೆ ಸದಾಕಾಲವೂ ಹೀಗೆಯೇ ಇರಬೇಕೆ? ಅಥವಾ ಇರಲು ಸಾಧ್ಯವೆ? ಅವನೇನೋ ಒಂದು ಸಲ ನುಡಿದಿದ್ದ.... ನಿನ್ನನ್ನು ಮದುವೆ ಆಗ್ತೀನಿ...ನನ್ನ ಹೆಂಡತಿಯಂತೆ ನೋಡಿಕೊಳ್ತೀನಿ ಅಂತ. ಆದರೆ ಆಗ ನಾನೇ ನಿರಾಕರಿಸಿದ್ದೆ... ಸರಳಂಗೆ ತಮ್ಮಿಬ್ಬರ ಸಂಬಂಧ ತಿಳಿಯುವುದು ತನಗಿಷ್ಟ ವಿರಲಿಲ್ಲ. ಕಣ್ಣಿಲ್ಲದವಳು, ಕದ್ದು ಮುಚ್ಚಿ ಆಡುವ ಪ್ರೀತಿಯಾಟವೇ ಸಾಕು ಎಂದು ಕೊಂಡಿದ್ದೆ....

ಮಗುವಾದರೇನು ಗತಿ ಎಂದು ಅವನೆಂದೂ ಹೆದರಿಸಿರಲಿಲ್ಲ. ಆ ಮಗು ನನ್ನದು ಅಂತ ಧೈರ್ಯವಾಗಿ ಹೇಳ್ತೀನಿ ಎಂದು ಮಾತುಕೊಟ್ಟಿದ್ದ. ತಾನೇ ಸಾಕುವು ದಾಗಿಯೂ ಹೇಳಿದ್ದ. ಆ ಮಾತಿನಲ್ಲಿ ಎಷ್ಟು ನಿಜಾಂಶವಿದೆಯೋ ತನಗೆ ತಿಳಿಯದು.... ಅವನ ಮುಖದ ಭಾವನೆಗಳನ್ನು ಅರಿಯಲು ತನಗೆ ಕಣ್ಣಿಲ್ಲವಲ್ಲ.

ಆದರೆ ಏಕೋ ಏನೋ, ತನಗೆ ಮಗುವಾಗುವ ಯಾವ ಸೂಚನೆಯೂ ಕಂಡು ಬಂದಿಲ್ಲ. ಆದರೆ ಆ ಭಾಗ್ಯವೂ ತನಗಿಲ್ಲವೇನೋ, ತಾನು ಎಲ್ಲಾ ರೀತಿಯಿಂದಲೂ ವಂಚಿತಳಾಗುತ್ತಿದೇನೆ ಅಂತ ಅರ್ಥವಲ್ಲವೆ? ತನಗೊಂದು ಮಗುವಾಗುವಂತಿದ್ದರೇ.... ತಾಯಿಯಾಗುವ ಸೌಭಾಗ್ಯ ತನ್ನ ಪಾಲಿಗಿದ್ದರೆ...ಸುಕನ್ಯ ಅದಕ್ಕಾಗಿ ಹಂಬಲಿ ಸುತ್ತಿಲ್ಲವೆ?

ಸುಕನ್ಯ ಎಷ್ಟೋ ವಾಸಿ.... ಅವಳ ಸುಖದುಃಖಗಳನ್ನು ಹೇಳಿಕೊಳ್ಳಲು ಅವಳಿಗೆ ಗಂಡ ಇದಾನೆ. ತಂಗಿಯರು ನಾವಿದ್ದೇವೆ. ನನಗೆ? ಸ್ವಂತ ನನ್ನವರು ಅಂತ ಯಾರಿ ದ್ದಾರೆ? ಈ ವಿಷಯಗಳನ್ನು ಸುರೇಶನೊಡನೆ ಆಡಲು ಮನಸ್ಸು ಒಪ್ಪುವುದಿಲ್ಲ.... ಸರಳ ಸುಕನ್ಯರಿಗೆ ಏನೂಂತ ಹೇಳಲಿ? ಯಾರಿಗೂ ಹೇಳಲಾಗದ ತೊಳಲಾಟಗಳಿಂದ ನಾನು ಬಳಲಿ ಹೋಗುತ್ತಿದ್ದೇನೆ...

ನನಗಿಂತ ಸುಕನ್ಯ ಸುಖಿ. ಸಿಡುಕಾದರೇನು? ದುಡುಕಾದರೇನು? ಅವಳನ್ನು ಪ್ರೀತಿಸುವ ಗಂಡನಿಗೆ ಒಂದು ಮಗುವನ್ನು ಕೊಟ್ಟು, ಅವನನ್ನು ತನ್ನವನನ್ನಾಗಿಯೇ ಇಟ್ಟುಕೊಳ್ಳುವ ಬಯಕೆ ಅವಳಿಗೆ. ತನ್ನ ಮನಸ್ಸಿನಲ್ಲಿರುವುದನ್ನು ಎಷ್ಟು ಧೈರ್ಯವಾಗಿ ಹೇಳಿದ್ದಳು. ನನ್ನನ್ನೇ ಏಕೆ ಕೇಳಿದಳು? ಸರಳನನ್ನೇಕೆ ಕೇಳಲಿಲ್ಲ? ಮದುವೆಯಾದವಳು, ಸುರೇಶನಿಗೂ ತಿಳಿಯುತ್ತದೆ... ಅವಳು ಸರಿ ಹೊಂದುವುದಿಲ್ಲ ಅಂತ ಸುಮ್ಮನಿರ ಬಹುದೆ? ನನ್ನ ಅಸಹಾಯಕತೆಯನ್ನೇ ನೆಪವನ್ನಾಗಿಟ್ಟುಕೊಂಡು ಕೇಳಿಬಿಟ್ಟಳಲ್ಲಾ? ಸಧ್ಯ ಬಲವಂತ ಮಾಡಲಿಲ್ಲ. ನಾನು ಸರಿಯಾಗಿದ್ದಿದ್ದರೆ, ನನ್ನನ್ನು ಕೇಳುವ ಧೈರ್ಯ ವಿರುತ್ತಿರಲಿಲ್ಲ.

ಹಣ ಕೊಡ್ತೀನಿ ಅಂದರೆ, ಬೇರೆ ಯಾರಾದರೂ ಖಂಡಿತಾ ಸಿಕ್ಕೇ ಸಿಗ್ತಾರೆ. ಆದರೆ ಅದು ಅವಳಿಗಿಷ್ಟವಿಲ್ಲ ಅಂತ ತೋರುತ್ತೆ. ಗುಟ್ಟಾಗಿಡಬೇಕೆಂದು ಹೇಳಿದಳು. ಅವಳ ಅತ್ತೆಯ ಮನೆಯವರಿಗೆ ತಿಳಿಯಲೇ ಕೂಡದು. ಅದಕ್ಕೆ ನನ್ನನ್ನು ಕೇಳಿರಬಹುದು. ನಾನಾದರೆ ಗೂಬೆ ತರಹ ಸದಾ ಮನೇಲೇ ಇರ್ತೀನಲ್ಲ. ಆದರೆ ಅವಳು ಕೇಳಿದ್ದು ಸರಿಯೇ....ಸರಿಯೇ? ಸರಿಯೇ ಎಂದು ಮತ್ತೆರಡು ಸಲ ತನಗೆ ತಾನೇ ಪ್ರಶ್ನಿಸಿಕೊಂಡಾಗ ತಪ್ಪು ಎಂದು ಹೇಳಲು ಅವಳ ಮನಸ್ಸು ಒಪ್ಪಲಿಲ್ಲ.

ಬೇರೆಯವರಿಗೇಕೆ ಹಣವನ್ನು ಕೊಡಬೇಕು, ಮನೆಯವರಿಗೇ ಸೇರಲಿ ಎಂದು ತನ್ನಾಸೆ ಎಂದು ಸುಕನ್ಯ ನಿಜವನ್ನೇ ನುಡಿದಿರಬಹುದು.... ಅಲ್ಲದೇ ನನಗೂ ಗಂಡನಿಲ್ಲ. ಮಕ್ಕಳಿಲ್ಲ. ಈ ಜನ್ಮದಲ್ಲಿ ಮದುವೆಯಾಗುತ್ತದೆಯೋ ಇಲ್ಲವೋ, ಹೀಗಾದರೂ ತನ್ನನ್ನು ಉಪಯೋಗಿಸಿಕೊಳ್ಳೋಣ ಅಂತ ಯೋಚಿಸಿರಬಹುದು..... ಒಂದು ವೇಳೆ ಈ ವಿಷಯದಲ್ಲಿ ನಾನು ಅವಳಿಗೆ ಸಹಾಯ ಮಾಡಿದರೆ, ಅದು ತಪ್ಪಾಗುತ್ತದೆಯೆ? ಸರಳ, ಸುರೇಶ್ ಅಮ್ಮ ಎಲ್ಲರೂ ಬೇಡವೆನ್ನಬಹುದು. ಆದರೆ ಸುಕನ್ಯಗೆ ಸಹಾಯವನ್ನು ಮಾಡುವ ಅವಕಾಶ ತಪ್ಪಿ ಹೋಗುತ್ತದೆ.

ಒಂದು ವೇಳೆ ಸರಳ ಇದೇ ಸಹಾಯವನ್ನು ಕೇಳಿದ್ದರೆ ತಾನೇನು ಹೇಳುತ್ತಿದ್ದೆ! ತನಗೆ ಸರಳ ಸುಕನ್ಯ ಇಬ್ಬರೂ ಒಂದೇ. ಸರಳಗೆ ಸಹಾಯ ಮಾಡುವ ಅಗತ್ಯವಿಲ್ಲ. ಆದರೆ ಅವಳಿಗೆ ದ್ರೋಹ ಮಾಡುತ್ತಿದ್ದೇನೆ. ಸಹಾಯ ಕೇಳಿದ ಸುಕನ್ಯಳ ಮಾತಿಗೆ ಒಪ್ಪದಿದ್ದರೆ ಅದೂ ದ್ರೋಹವಾಗುವುದಿಲ್ಲವೆ?

ಒಬ್ಬಳಿಗೆ ದ್ರೋಹ ಮಾಡಿದ್ದೇನೆ.... ಇನ್ನೊಬ್ಬಳಿಗೆ ಉಪಕಾರ ಮಾಡಿದರೆ ಏನೀಗ? ಆ ಪಾಪ ಇಲ್ಲಿ ಕಳಚಿ ಹೋಗಲಿ. ಈ ನೆಪದಿಂದ ತನ್ನ ಸುರೇಶನ ಸಂಬಂಧ ಕಳಚಿ ಹೋಗಬಹುದು. ಹೋದರೆ ಹೋಗಲಿ. ಕದ್ದು ಮುಚ್ಚಿ ಮಾಡುವ ಸಂಬಂಧ ಕೊನೆಗೊಳ್ಳಲಿ.

ಸುರೇಶನ ಜತೆಯ ಸಂಬಂಧದಿಂದ ದೇಹದ ಬಯಕೆ ತೀರಬಹುದು. ಆದರೆ ಅಂಜಿಕೆ ಇದ್ದೇ ಇರುತ್ತೆ. ಸುಕನ್ಯಗೆ ಸಹಾಯ ಮಾಡಿದರೆ ಒಂದು ಸಾರ್ಥಕತೆಯ ಮನೋಭಾವ ಉಂಟಾಗಬಹುದು. ಸ್ವಾರ್ಥದಿಂದ ಸರಳೆಯ ಬಾಳಿನಲ್ಲಿ ಮಧ್ಯೆ ಬಂದ ನಾನು ನಿಸ್ವಾರ್ಥದಿಂದ ಸುಕನ್ಯಳ ಬಾಳನ್ನು ಬೆಳಗಬೇಕು. ಮುಕುಂದ ಅವಳಿಂದ ದೂರವಾಗಬೇಕಾದರೆ, ಅವಳಿಗೆ ಬಂಜೆ ಎನ್ನುವ ಬಿರುದು ಸಿಗದಂತಿರಬೇಕಾದರೆ, ತಾನೀಗ ಅವಳಿಗೆ ಸಹಾಯ ಮಾಡಲೇ ಬೇಕು. ಈ ತೀರ್ಮಾನಕ್ಕೆ ಬಂದು ತಂತಿ

ಮೀಟುವುದನ್ನು ನಿಲ್ಲಿಸಿದಾಗ, ಸನಿಹದಲ್ಲಿ ಯಾರೋ ಬಂದು ನಿಂತಿದ್ದಾರೆಂದೆನಿಸಿತ್ತು.

ಎದುರಿಗೆ ನಿಂತಿದ್ದ ಸುಭದ್ರಮ್ಮ ಅವಳನ್ನೇ ತದೇಕವಾಗಿ ದಿಟ್ಟಿಸಿದಳು.

"ಯಾಕೋ ಅಷ್ಟು ಹೊತ್ನಿಂದ ಸುಮ್ಮನೇ ತಂತಿ ಮೀಟ್ತಾನೇ ಇದೀಯ. ನಾನೂ ನೋಡ್ತಾನೇ ಇದೀನಿ. ಹಾಡು ಮರೆತು ಹೋಗಿದೆಯಾ?"

ಸಾವಿತ್ರಿ ಬೆಚ್ಚಿದಳು. ತನ್ನ ಅಂತರಂಗದ ಅರಿವು ತಾಯಿಗೆ ಉಂಟಾದರೆ?

"ಏನಿಲ್ಲಮ್ಮ ಯಾವುದೋ ಹೊಸ ಹಾಡಿನ ಪ್ರಾರಂಭ ಹೇಗೆ ಮಾಡುವುದು ಅಂತ ಯೋಚಿಸ್ತಿದ್ದೆ. ತಕ್ಷಣಕ್ಕೆ ತಿಳೀತಿಲ್ಲ."

ಹುಂ. ಎಂದಳು ಸುಮ್ಮನೆ. ತಾಯಿ ಹೋಗಿರಬೇಕೆಂದುಕೊಂಡು ಮತ್ತೆ ತನ್ನ ಯೋಚನೆಗೆ ಹಿಂತಿರುಗಿದಳು.

ಈ ಸಂಗೀತದಿಂದ ನನಗೇನು ಪ್ರಯೋಜನವಾಯ್ತು? ಎಂಟು ವರ್ಷದಿಂದ ಕಲಿಯುತ್ತಾನೇ ಇದೀನಿ. ಇನ್ನೂ ಮುಗಿದಿಲ್ಲ. ಕೇಳಿದವರೆಲ್ಲ ಚೆನ್ನಾಗಿ ಹೇಳ್ತಾಳೆ ಅಂತ ಹೊಗಳ್ತಾರೆ. ಸುರೇಶನೂ ಹೊಗಳಿದ. ಮೆಚ್ಚಿದ. ಅವನಿಂದ ಈ ಪುರಸ್ಕಾರವೂ ದೊರಕಿತು. ಆದರೆ ತಾನು ಬರೀ ಮನೆಯಲ್ಲಿ ಕುಳಿತು ಹಾಡಿ, ಮನೆಯವರನ್ನು ಮೆಚ್ಚಿಸಿದರೆ ಏನು ಉಪಯೋಗ? ಕಚೇರಿಗಳಿಗೆ ಹೋಗಿ ಹಾಡುವಂತಾಗಬೇಕು. ಕ್ಯಾಸೆಟ್‌ಗಳನ್ನು ಮಾಡಿಸಬೇಕು. ಆದರೆ ಅದಕ್ಕೆಲ್ಲ ತನಗೆ ಸಹಾಯಕರ್‍ಯಾರು? ಸುಕನ್ಯ ಸರಳರಿಗೆ ಅವರವರ ಕೆಲಸವೇ ಹೆಚ್ಚು. ಅವರವರ ಚಿಂತೆಯೇ ಜಾಸ್ತಿ. ಸಂಸಾರದ ಜವಾಬ್ದಾರಿ. ಅಮ್ಮಂಗೆ ಇದೆಲ್ಲ ತಿಳಿಯುವುದಿಲ್ಲ. ಅಲ್ಲದೇ ಹಣ ಸಹ ಬೇಕಾಗುತ್ತದೆ. ಪಕ್ಕ ವಾದ್ಯದವರು ಬೇಕಾಗುತ್ತಾರೆ. ಅಲ್ಲಿ ಇಲ್ಲಿ ಓಡಾಡಬೇಕಾಗುತ್ತದೆ. ಗಂಟೆಗಟ್ಟಲೆ ಅವರೊಡನೆ ಕುಳಿತು ಅಭ್ಯಾಸವನ್ನು ಮಾಡಬೇಕಾಗುತ್ತದೆ. ಅದೆಲ್ಲ ತನ್ನಿಂದ ಸಾಧ್ಯವೆ? ರೆಕಾರ್ಡಿಂಗ್ ಅಂದರೆ, ಸ್ಟುಡಿಯೋದಲ್ಲಿ ತನ್ನ ಜತೆ ಯಾರು ಇರ್ತಾರೆ? ಇದಕ್ಕೆಲ್ಲ ಸಹಾಯಕರು ಯಾರು? ಅದಕ್ಕೆಲ್ಲ ಖರ್ಚು ಮಾಡಲು ನನ್ನ ಹತ್ತಿರ ಹಣವೆಲ್ಲಿದೆ?

ಅದಕ್ಕೆ....ಈಗ ತೆಗೆದುಕೊಂಡಿರುವ ತೀರ್ಮಾನವೇ ಸರಿ. ಸುಕನ್ಯ ಹೇಗೂ ಹಣ ಕೊಡ್ತೀನಿ ಅಂದಿದಾಳೆ. ಆ ಹಣದಿಂದ ತನ್ನ ಸಂಗೀತ ಉದ್ಧಾರವಾಗಿ ಹೋಗುತ್ತದೆ......ನಾನು ಒಂದು ಸಂಗೀತ ಶಾಲೆಯನ್ನೇ ಪ್ರಾರಂಭಿಸಬಹುದು.... ಸುಭದ್ರಮ್ಮ ಗೊಣಗಿದ್ದು ಕೇಳಿಸಿತ್ತು.

"ನಿನ್ನಂತಹವಳನ್ನು ಕಟ್ಟಿಕೊಂಡು ನಾನೇನು ಒದ್ದಾಡಲಿ ಹೇಳು. ಇಬ್ಬರೂ

ಮದುವೆ ಮಾಡಿಕೊಂಡು ಅವರ ಪಾಡಿಗೆ ಅವರು ಹೊರಟು ಹೋದರು. ಈಗ ಎಲ್ಲಾದಕ್ಕೂ ನಾನೇ ಒದ್ದಾಡಬೇಕು."

"ನನ್ನಿಂದ ಏನೂ ಆಗುಲ್ಲ ಅಂತ ತಿಳಿದ.ಕೂಡಲೇ ಕತ್ತು ಹಿಸುಕಿ ಕೊಂದು ಬಿಡಬೇಕಾಗಿತ್ತು." ಸಾವಿತ್ರಿಯೂ ಸಿಟ್ಟಿನಿಂದ ನುಡಿದಳು.

"ಸರಿ. ಅದೊಂದು ಪಾಪ ಬೇರೆ ನಾನು ಅಂಟಿಸ್ಕೋ ಬೇಕಿತ್ತಾ?"

"ಪಾಪ ಪುಣ್ಯದ ಬಗ್ಗೆ ಚಿಂತಿಸ್ತೀಯಲ್ಲ. ನಮ್ಮನ್ನೆಲ್ಲ ಇಷ್ಟು ವರ್ಷ ಅಂದಿದೀಯಲ್ಲ. ಅದು ಪುಣ್ಯದ ಕೆಲಸವೋ...."

"ಸಾಕು ಸುಮ್ಮನಿರು. ನಿನಗೇನು ಗೊತ್ತಾಗುತ್ತೆ....?"

"ಹೌದು. ನನಗೇನೂ ಗೊತ್ತಾಗುವುದಿಲ್ಲ. ತಿಳುವಳಿಕೆ ಇಲ್ಲ. ಅನ್ನದಂಡಕ್ಕೆ ಬಿದ್ದಿರುವವಳು ನಾನು."

"ಸರಿ. ನನ್ನ ಸಂಕಟವೇ ನನಗಿರುತ್ತೆ. ನೀನು ಸ್ವಲ್ಪ ಸುಮ್ಮನಿರ್ತೀಯಾ? ಜೀವಮಾನವೆಲ್ಲಾ ಹೀಗೆ ಒದ್ದಾಡುವುದೇ ಆಯ್ತು."

"ಈಗೇನಾಯ್ತು ಅಂಥದು? ಅವರಿಬ್ಬರಿಗೂ ಸುನಾಯಾಸವಾಗಿ ಮದುವೆಯಾಯ್ತು. ನನ್ನನ್ನು ಯಾವುದಾದರೂ ಅಂಧರ ಆಶ್ರಮಕ್ಕೆ ಸೇರಿಸಿ ಬಿಡು ನಿನ್ನ ಒದ್ದಾಟ ತಪ್ಪುತ್ತೆ"

"ನನ್ನ ವಯಸ್ಸಿನವರು, ಪುಣ್ಯ ಗಳಿಸುಕ್ಕೆ ಅಂತ ತೀರ್ಥಯಾತ್ರೆಗೆ ಹೋಗಿ ಬರುತ್ತಾರೆ. ನನಗೆಲ್ಲಿದೆ ಆ ಪುಣ್ಯ? ನಿನ್ನನ್ನು ಅಂಧರ ಆಶ್ರಮಕ್ಕೆ ಸೇರಿಸಿ ನಾನು ಯಾವ ಪಾಪವನ್ನು ಕಟ್ಟಿಕೊಳ್ಳಲಿ? ಹೆತ್ತ ತಪ್ಪಿಗೆ ಸಾಕ್ತೀನಿ"

"ಅಮ್ಮಾ ಸಾಕು ಮಾಡ್ತೀಯಾ? ಇದೆಲ್ಲ ಹಳೇ ಮಾತೇ. ನನ್ನ ಕೈಗೆ ಒಂದಿಷ್ಟು ಹಣ ಸಿಗಲಿ. ನಿನ್ನನ್ನು ನಾನು ತೀರ್ಥಯಾತ್ರೆಗೆ ಕಳಿಸ್ತೀನಿ. ನಿನಗೇಕೆ ಚಿಂತೆ?"

"ಯಾರಾದರೂ ಸಂಗೀತ ಕಚೇರಿ ಮಾಡುಕ್ಕೆ ಕರೆದಿದಾರಾ?" ಆಕೆ ಆಸೆಯಿಂದ ಕೇಳಿದಾಗ ಸಾವಿತ್ರಿ ಬೆದರಿದಳು. ತಾನು ಉದ್ವೇಗದಿಂದ ಎಲ್ಲವನ್ನು ಹೇಳಿ ಬಿಡುತ್ತೇನೇನೋ ಎಂದುಕೊಂಡು ಸುಮ್ಮನಾದಳು.

"ಕಚೇರಿ ಎಲ್ಲಿ? ಯಾವಾಗ?" ಆಕೆ ಮತ್ತೆ ಪ್ರಶ್ನಿಸಿದಳು.

"ಏನೋ ಸರಿಯಾಗಿ ಗೊತ್ತಿಲ್ಲ. ಸರಳಂಗೆ ಗೊತ್ತು ಅವಳಿಗೆ ಕಾಯ್ತಿದ್ದೆ ಎಷ್ಟೊಂದು ದಿನಗಳಿಂದ ಬಂದೇ ಇಲ್ಲ ಅಲ್ವಾ? ಫೋನು ಮಾಡಿ ಬರುಕ್ಕೆ ಹೇಳು"

ಏನೇನೋ ಮಾತನಾಡಿದರೂ, ತಾಯಿ ಮಗಳು ಮತ್ತೆ ಸರಿಹೋಗಿದ್ದರು.

ಸುಭದ್ರಮ್ಮ ಫೋನು ಮಾಡಿ ಸರಳಂಗೆ ಮನೆಗೆ ಬಂದು ಹೋಗುವಂತೆ ತಿಳಿಸಿದ್ದಳು. ಸರಳ ಒಂದೆರಡು ದಿನಗಳ ನಂತರ ಬರುವುದಾಗಿ ತಿಳಿಸಿದ್ದಳು.

ಸರಳ ಎರಡು ಮೂರು ದಿನಗಳ ನಂತರ ಬಂದಾಗ ಸುಭದ್ರಮ್ಮ ಸಿಡುಕಿದ್ದಳು. "ನಮ್ಮ ಬಗ್ಗೇನೇ ಚಿಂತೇನೇ ಇಲ್ಲ ನಿಮಗೆ. ವಾರವಾದರೂ ಬರಲಿಲ್ಲವಲ್ಲ?"

"ಏನೋ ಬರಕ್ಕಾಗಲಿಲ್ಲ.... ಸುಕನ್ಯಾನೂ ಬರಲಿಲ್ವಾ?"

"ಅವಳು ಮೊದಲೇ ಸರಿ. ಈಗಂತೂ ದಿನ ಬೆಳಗಾದರೆ ಆ ನೋವು ಈ ನೋವು ಅಂತ ಮಲಗಿಯೇ ಇರ್ತಾಳೆ. ನಾನೂ ಹೋಗಿರಲಿಲ್ಲ ಅಂತ ಅವಳಿಗೆ ಸಿಟ್ಟು. ನನಗೆ ಈ ಮನೆ ಜಂಜಾಟ ಬಿಟ್ಟು ಎಲ್ಲಿ ಹೋಗುಕ್ಕಾಗುತ್ತೆ?"

"ನಾನು ಇಲ್ಲಿ ನಾಲ್ಕು ದಿನ ಇರ್ತೀನಿ ನೀನು ಹೋಗಿ ಬಾ"

"ಅವಳನ್ನೇ ಬಾ ಎಂದೆ. ಬರುಲ್ಲ ಅಂದಳು. ಅವನು ಬೇಡ ಅಂದನೇನೋ"

"ಒಳ್ಳೇದೇ ಆಯ್ತು ಬಿಡು. ಇಬ್ಬರೂ ಆಗಾಗ್ಗೆ ಬರ್ತಿದ್ದರೆ ಇಲ್ಲಿ ನೀನು ಒಬ್ಬಳೇ ಹೇಗೆ ಮಾಡ್ತೀಯಾ?

"ಅಮ್ಮಂಗೆ ಈ ಸಂಸಾರ, ಜಂಝಾಟ ಎಲ್ಲಾ ಬೇಜಾರಾಗಿ ಹೋಗಿದೆ. ಪುಣ್ಯ ಕ್ಷೇತ್ರಗಳಿಗೆ ಹೋಗಿ ಬರುವ ಆಸೆ ಆಗ್ತಿದೆ." ಸಾವಿತ್ರಿ ನಗುತ್ತಾ ನುಡಿದಳು.

"ಹೌದೇನಮ್ಮಾ ಎಲ್ಲಿಗೆ ಹೋಗಬೇಕು ಅಂತ ಹೇಳು. ನಾನು ಕಳಿಸಿ ಕೊಡ್ತೀನಿ"

"ನಾನೆಲ್ಲಿ ಹೋಗುಕ್ಕಾಗುತ್ತೆ? ಅವಳೇನೋ ಹೇಳ್ತಾಳೆ."

"ಯಾಕಾಗುಲ್ಲ? ನಾನು ಎಲ್ಲಾ ನೋಡಿಕೊಳ್ತೀನಿ. ನಾನು ಇಲ್ಲಿ ಸಾವಿತ್ರಿಯ ಜತೆಗಿರ್ತಿನಿ"

"ಅಷ್ಟು ದಿನ? ನಿನ್ನ ಗಂಡ ಒಪ್ತಾನೇನೇ"

"ಅವರು ಮುಂದಿನ ತಿಂಗಳು, ಕಂಪೆನಿಯ ಕೆಲಸದ ಮೇಲೆ, ವಿದೇಶಕ್ಕೆ ಹೋಗಿ ಬರ್ತಿದಾರೆ. ಒಂದೆರಡು ತಿಂಗಳಾಗಬಹುದು."

"ಹೌದಾ? ಹಾಗಿದ್ರೆ ಸರಿ. ಆಮೇಲೆ ಕಷ್ಟವಾಗಬಹುದು."

"ಏನಿಲ್ಲ. ಹಾಗಾದ್ರೆ ಉತ್ತರ ಭಾರತದ ಪ್ರವಾಸಕ್ಕೆ ಬುಕ್ ಮಾಡಿಸ್ಲಾ?"

"ಸುಕನ್ಯಂಗೂ ಒಂದು ಮಾತು ತಿಳಿಸಬೇಕಲ್ಲ"

"ತಿಳಿಸಿದರಾಯ್ತು. ನಾನೇ ತಿಳಿಸ್ತೀನಿ...." ಸಂತೋಷಗೊಂಡ ಸುಭದ್ರಮ್ಮ ಪ್ರಯಾಣಕ್ಕೆ ಏನೇನು ಬೇಕಾಗಬಹುದೆಂದು ಪಟ್ಟಿ ಹಾಕತೊಡಗಿದಳು. ಸಾವಿತ್ರಿ ತನ್ನ

ಆಲೋಚನೆಗಳಲ್ಲಿ ಮುಳುಗಿದಳು.

"ಸಾವಿತ್ರಿ, ಯಾವುದೋ ಸಂಗೀತ ಕಚೇರಿ ಇದೆ ಅಂದಳು. ಎಲ್ಲಿ? ಯಾವಾಗ? ಅದನ್ನು ಮುಗಿಸಿಕೊಂಡೇ ಹೊರಡ್ತೀನಿ" ಸಾವಿತ್ರಿ ನಡುಗಿದಳು. ಸರಳ ಏನು ಹೇಳುವಳೋ ಎಂದು ಕಾದಳು. ಸರಳ ಸಾವಿತ್ರಿಯ ಗಾಭರಿಯ ಮುಖವನ್ನು ನೋಡಿದಳು.

"ಇನ್ನು ಈಗಲೇ ಅಲ್ಲ. ಇನ್ನೂ ತಡ. ಅಷ್ಟು ಹೊತ್ತಿಗೆ ನೀನು ಹೋಗಿ ವಾಪಸ್ಸು ಬರಬಹುದು" ಸಾವಿತ್ರಿ ಸಮಾಧಾನದ ಉಸಿರನ್ನು ಬಿಟ್ಟಳು. ಸುಭದ್ರಮ್ಮ ಸಂತಸಗೊಂಡಳು. ಸಾಯಂಕಾಲ ಬ್ಯಾಂಕಿಗೆ ಹೋಗುವ ಮೊದಲು ಸರಳ ಸುಕನ್ಯಳ ಮನೆಗೆ ಬಂದಳು. "ನೀನು ಬಂದೇ ಇಲ್ಲ ಅಂತ ಅಮ್ಮ ವಿಚಾರಿಸುತ್ತಿದ್ದಳು. ಆಗಾಗ ಹೋಗಿ ಬಾ... ಇಲ್ಲದಿದ್ದರೆ ಅವಳಿಗೂ ಆತಂಕವಾಗುತ್ತೆ."

ಸಾವಿತ್ರಿ ಏನು ಹೇಳಿದಳು ಎಂದು ಕೇಳುವ ತವಕವಾದರೂ ಸುಕನ್ಯ ತಡೆದುಕೊಂಡಳು. ಹೇಗೂ ಇವಳೂ ಬ್ಯಾಂಕಿಗೆ ಹೋಗ್ತಾಳೆ. ತಾನೇ ಹೋಗಿ ವಿಚಾರಿಸಿದರಾಯ್ತು ಎಂದುಕೊಂಡು ಆ ಕ್ಷಣವೇ ಹೊರಟಳು.

ಸುಭದ್ರಮ್ಮ ಅವಳನ್ನು ಕಂಡೊಡನೆ, "ಹೇಗೂ ಬಂದಿದೀಯಲ್ಲ. ನಾನು ಸ್ವಲ್ಪ ಇಲ್ಲೇ ಒಬ್ಬರ ಮನೆಗೆ ಹೋಗಿ ಬರ್ತೀನಿ ನಾನು ಬರುವವರೆಗೂ ಇರು" ಎಂದು ಹೇಳಿ, ಇಬ್ಬರಿಗೂ ಕಾಫಿ ಮಾಡಿಕೊಟ್ಟು ಹೊರಟಳು.

ಸುಕನ್ಯ ಆಗಾಗ್ಗೆ ಸಾವಿತ್ರಿಯ ಮುಖವನ್ನೇ ನೋಡುತ್ತಾ ಕಾಫಿ ಕುಡಿದು ಮುಗಿಸಿದಳು. ಸುಕನ್ಯ ಏನಾದರೂ ಆಡುತ್ತಾಳೇನೋ ಎಂದು ಸಾವಿತ್ರಿ ಕಾದಳು. ಕಡೆಗೆ ಸಾವಿತ್ರಿಯೇ ಮಾತಿಗೆ ಪ್ರಾರಂಭಿಸಿದಳು.

"ಅಮ್ಮ ತೀರ್ಥಯಾತ್ರೆಗೆ ಹೊರಟಿದಾಳೆ. ಗೊತ್ತಾ?"

"ಹೌದಾ?ಯಾವಾಗ? ಎಲ್ಲೆಲ್ಲಿಗೆ?"

"ಇನ್ನೂ ಸರಿಯಾಗಿ ಗೊತ್ತಿಲ್ಲ. ಸರಳ ಸೀಟ್‌ಬುಕ್ ಮಾಡ್ತಿಸ್ತಾಳಂತೆ. ಉತ್ತರ ಭಾರತ ಎಂದಳು. ಹದಿನೈದು ಇಪ್ಪತ್ತು ದಿನ ಅವಳೂ ಮನೆಯಿಂದ ಹೊರಗೆ ಇರ್ತಾಳೆ ಅಲ್ವಾ?"

"ನಿನಗೆ ಬೇಜಾರಾಗುತ್ತೆ ಅಲ್ವಾ? ನಿನ್ನ ಜತೆಗೆ ಯಾರು?"

"ಸರಳ ಬಂದಿರುತ್ತಾಳಂತೆ. ಆವಾಗ ಅಮ್ಮ ಹೇಗೂ ಮನೆಯಲ್ಲಿರುವಲ್ಲ.... ನೀನು ಅವತ್ತು ಹೇಳಿದ್ಯಲ್ಲ.... ಅದನ್ನು ಮಾಡಿಸಿಬಿಡು"

"ಯಾವುದನ್ನೇ...?" ಸುಕನ್ಯ ತಬ್ಬಿಬ್ಬು.

"ಅದೇ ಹೇಳಿದ್ಯಲ್ಲ....ಮಗುವಿನ ವಿಚಾರ...."

"ಅಂದ್ರೆ.... ನೀನು ಒಪ್ಪಿದೀಯಾ ಸಾವಿತ್ರಿ....?" ಸುಕನ್ಯಳಿಗೆ ಅನುಮಾನ.

"ಹೂಂ....ನಾನೂ ಯೋಚಿಸಿದೆ. ನನಗೆ ಹಣದ ಆಸೆ ಇಲ್ಲ. ನಾನು ಬದುಕಿರುವರೆಗೂ ನನ್ನನ್ನು ನೋಡಿಕೊಂಡರೆ ಸಾಕು. ಅದಕ್ಕೇ ಒಪ್ಪಿದೆ"

"ಸರಳಾನೂ ಒಪ್ಪಿದಾಳಾ?"

"ಅವಳಿಗೆ ನಾನೇನೂ ಹೇಳಿಲ್ಲ. ನಾನೇ ಒಪ್ಪಿದ ಮೇಲೆ ಅವಳು ಏನೂ ಅನ್ನುವ ಹಾಗೇ ಇಲ್ಲ"

"ಅದು ಸರಿ ಅನ್ನು.... ಸರಿಯಾಗಿ ಯೋಚಿಸಿದೀಯಾ ತಾನೇ? ಆಮೇಲೆ ಮತ್ತೆ ಇಲ್ಲ ಅನ್ನಬಾರದು ನಾನು ಬಲವಂತ ಮಾಡಿದೆ ಅಂತ ಅನ್ನಬಾರದು."

"ಇಲ್ಲ. ಖಂಡಿತಾ ಇಲ್ಲ. ನಾನಾಗಿಯೇ ಒಪ್ಪಿದೀನಿ"

"ಹಾಗಾದ್ರೆ ಸರಳಂಗೆ ಮೊದಲು ತಿಳಿಸಿಬಿಡು. ನಾನು ನಾಳೆ ಮತ್ತೆ ಬಂದು ನಿನ್ನನ್ನು ಡಾಕ್ಟರ ಹತ್ತಿರ ಕರೆದುಕೊಂಡು ಹೋಗ್ತೀನಿ. ಅಮ್ಮ ಕೇಳಿದ್ರೆ ಕಣ್ಣಿನ ಡಾಕ್ಟರರ ಹತ್ತಿರ ಹೋಗ್ತೀನಿ ಅಂತ ಹೇಳು."

"ನಾಳೇನೇ ಎಲ್ಲಾ ಮಾಡ್ತಾರಾ? ಅಮ್ಮ ಕೇಳಿದ್ರೆ ಏನೂಂತ ಹೇಳಲಿ?"

"ಇಲ್ಲ. ನಾಳೆ ಏನೂ ಮಾಡುಲ್ಲ. ಮೊದಲು ನಾನು ಅವರಿಗೆ ನಿನ್ನ ಪರಿಚಯ ಮಾಡಿಕೊಡಬೇಕು. ಅವರು ನಿನ್ನನ್ನು ಎಲ್ಲಾ ತರಹಾನೂ ಪರೀಕ್ಷೆ ಮಾಡಿ ನೋಡಿ ಆಮೇಲೆ ಏನು ಮಾಡಬೇಕು ಅಂತ ತಿಳಿಸ್ತಾರೆ"

"ಹೌದೇನೂ? ಡಾಕ್ಟರು ಹೇಗೆ ಹೇಳ್ತಾರ್ೋ ಹಾಗೇ ಕೇಳಿದ್ರಾಯ್ತು"

"ಒಂದು ವೇಳೆ ಅವರಿಗೆ, ನಾನು ಸರಿ ಹೋಗದೇ ಇದ್ದರೇ....?"

"ಎಲ್ಲರಿಗೂ ಒಳ್ಳೆಯದೇ. ನಾನು ಬೇರೆಯವರನ್ನು ಹುಡುಕ್ತೀನಿ. ದುಡ್ಡಿನ ಆಸೆಗೆ ಯಾರಾದ್ರೂ ಸಿಗ್ತಾರೆ. ನೀನೇಕೆ ಹಣ ಬೇಡ ಎಂದೆ...."

"ಸುಮ್ಮನೆ ಹಣವನ್ನಿಟ್ಟುಕೊಂಡು ನಾನೇನು ಮಾಡಲಿ?"

"ಕೊಡುವಾಗ ಬೇಡ ಅನ್ನಬೇಡ. ಮುಕುಂದ ಇದಕ್ಕೆ ಒಪ್ಪುವುದಿಲ್ಲ. ಆ ಹಣದಿಂದ ನಿನ್ನ ಕಣ್ಣಿನ ಆಪರೇಷನ್ ಮಾಡಿಸಿಕೋ.... ಬ್ಯಾಂಕಿನಲ್ಲಿಡು....ಬಡ್ಡಿ ಬರುತ್ತೆ ಸಂಗೀತಕ್ಕೆ ಖರ್ಚು ಮಾಡು. ಅಡಿಗೆಯವರನ್ನು, ಕೆಲಸದವರನ್ನು ಇಟ್ಟುಕೊಂಡು ಜುಂ ಅಂತ ಮಜವಾಗಿರು."

"ಒಂದು ವೇಳೆ ಕಣ್ಣುಗಳು ಸರಿಹೋದರೆ...."

"ನಿನ್ನ ಓದನ್ನು ಮುಂದುವರೆಸು....ಕೆಲಸಕ್ಕೆ ಸೇರಿಕೋ... ನಿನಗೆ ಸರಿ ಹೊಂದುವವನನ್ನು ಮದುವೆಯಾಗಿ...."ಏಕೋ ಏನೋ ಸುಕನ್ಯ ತಡೆದಳು.

"ಸಾವಿತ್ರಿ ನಕ್ಕುಬಿಟ್ಟಳು. ಒಂಥರಕ್ಕೆ ನನಗೆ ಕಣ್ಣುಗಳು ಸರಿಹೋಗದಿದ್ದರೇನೇ ವಾಸಿ ಅಲ್ವಾ? ಜುಂ ಅಂತ ಇರಬಹುದು." ವಿಷಾದತೆ ಇಣುಕಿತ್ತು.

"ಸಾರಿ. ಸಾವಿತ್ರಿ.... ನಿನ್ನ ಬಗ್ಗೆ ನಾನು ಮಾತನಾಡಬಾರದಾಗಿತ್ತು."

"ಏನೀಗ? ಮದುವೆಗೆ ಮುಂಚೇನೇ ಮಗುವಿನ ತಾಯಿಯಾದರೆ ನನಗೆ ಮದುವೆಯಾಗುವುದಕ್ಕೆ ಕಷ್ಟ ಅಂತ ತಾನೇ....? ಅದಕ್ಕೆಲ್ಲ ಒಪ್ಪುವವನು ಸಿಕ್ಕಿದರೆ ನಾನು ಖಂಡಿತಾ ಮದುವೆ ಆಗ್ತೀನಿ.... ಇಲ್ಲದಿದ್ದರೆ ಹೀಗೇ ಇರ್ತೀನಿ. ಅಲ್ಲದೇ ಅದೆಲ್ಲ ಕಣ್ಣು ಬಂದ ಮೇಲಿನ ಮಾತು ತಾನೇ.... ಈಗೇಕೆ ಅದರ ಯೋಚನೆ?"

ಸುಕನ್ಯ ಸಾವಿತ್ರಿಯನ್ನು ತಬ್ಬಿಕೊಂಡು ಅತ್ತು ಬಿಟ್ಟಳು. ಅದರಲ್ಲಿ ನಾನಾ ಭಾವನೆಗಳು ಅಡಗಿದ್ದವು. ತನ್ನ ದುರ್ಬಲತೆ ಅವಳನ್ನು ಚುಚ್ಚಿತು.

"ಸಾವಿತ್ರಿ ನೀನೆಷ್ಟು ಒಳ್ಳೆಯವಳು. ನಿನ್ನನ್ನು ಏನೇನೋ ಅಂದು ಎಷ್ಟೋ ಸಲ ನಿನ್ನನ್ನು ನೋಯಿಸಿದೀನಿ."

"ನಾನೂ ಸಾವಿತ್ರೀನೇ.... ನಿಜವಾಗಿಯೂ ಸಾವಿತ್ರೀನೇ... ನಿನಗೆ ಸಾವಿತ್ರಿಯ ಕಥೆ ಗೊತ್ತಾ?"

"ಸಾವಿತ್ರಿಯ ಕಥೆ ಯಾರಿಗೆ ಗೊತ್ತಿಲ್ಲ? ಪ್ಲೀಸ್ ಅವಳಿಗೆ ನನ್ನನ್ನು ಹೋಲಿಸ ಬೇಡ" ಹೊರಗೆ ಗೇಟು ಸದ್ದಾಯಿತು. "ಅಮ್ಮ ಬಂದಳು ಅಂತ ಕಾಣುತ್ತೆ" ಎಂದು ಕೊಂಡು ಮಾತು ಮರೆಸಿದಳು.

ಬಂದಿದ್ದವನು ಮುಕುಂದ. ಸುಕನ್ಯಳ ಸಂತಸದ ಮುಖವನ್ನು ಕಂಡು ಸಾವಿತ್ರಿಯ ಕಡೆ ನೋಡಿದ. ಮುಕುಂದ ಬಂದನೆಂದು ತಿಳಿದು ಸಾವಿತ್ರಿ ಕೆಂಪೇರಿದ್ದಳು. ಸುಕನ್ಯ, ಸಂಜ್ಞೆಯಿಂದ ಸಾವಿತ್ರಿ ಒಪ್ಪಿದಾಳೆ ಎಂದು ತಿಳಿಸಿದಾಗ ಮುಕುಂದ ಕಣ್ಣು ಗಳನ್ನು ಕಿರಿದು ಮಾಡಿದ. ಅವನಿಗೆ ಆತಂಕ ಪ್ರಾರಂಭವಾಗಿತ್ತು.

ಸಾವಿತ್ರಿ ಅಲ್ಲಿಯೇ ನಿಂತಿರಲು ನಾಚಿ, ತಡವರಿಸುತ್ತಾ ಒಳಗೆ ಹೊರಟು ಹೋಗಿದ್ದಳು. ಸುಕನ್ಯ ಮುಕುಂದನಿಗೆ ಕಾಫಿ ತಿಂಡಿಯನ್ನು ತಂದಿತ್ತು ಮಾತಿಗೆ ಕೂತಳು. ತಾಯಿ ಬರುವವರೆಗೂ ಕೂತಿದ್ದು, ಆಕೆ ಬಂದ ನಂತರ, ಸಾವಿತ್ರಿಗೆ ಬರ್ತೀನಿ ಎಂದು ಮತ್ತೊಮ್ಮೆ ಹೇಳಿ ಪ್ರೀತಿಯನ್ನು ತೋರಿಸಿ, ಗಂಡನೊಡನೆ ಹೊರಟಳು.

ಸರಳ, ಸಾವಿತ್ರಿಯರೊಡನೆ ತಾನು ನಡೆಸಿದ ಮಾತುಕತೆಯನ್ನೆಲ್ಲ ತಿಳಿಸಿ ನಿರಾಸೆಯಿಂದ ಸುಕನ್ಯ ದುಃಖಿಸಿದ್ದಾಗ ಮುಕುಂದ ಸಮಾಧಾನದ ಉಸಿರನ್ನು ಬಿಟ್ಟಿದ್ದ. ಹೆಂಡತಿಯನ್ನು ಸಮಾಧಾನಗೊಳಿಸಿದ್ದ. ಆದರೆ ತಾನಾಗಿಯೇ ಅದರ ಪ್ರಸ್ತಾಪವನ್ನು ಮಾಡಿರಲಿಲ್ಲ. ಆದರೆ ಸುಕನ್ಯ ಮತ್ತೆ ಈ ದಿನ ಆ ವಿಷಯವನ್ನು ಎತ್ತಿದ್ದಳು.

ಸುಕನ್ಯಳ ಸಂತಸಕ್ಕೆ ಅವನು ತನ್ನ ಸಂತೋಷವನ್ನು ಸೇರಿಸಿರಲಿಲ್ಲ. ಮುಗ್ಧ ಸಾವಿತ್ರಿಯ ಬಗ್ಗೆ ಕನಿಕರ ಮೂಡಿತ್ತು.... ಆದರೆ ಅಕ್ಕತಂಗಿಯರೇ ಒಂದಾಗಿ ಒಪ್ಪಿರುವಾಗ, ತಾನು ಏನು ಮಾಡಬೇಕೆಂದು ತಿಳಿಯದೇ ಸುಮ್ಮನಾದ.

ಸುಕನ್ಯಳೊಡನೆ ಸಾವಿತ್ರಿ ಹೊರಟಾಗ, ಸುಭದ್ರಮ್ಮ ದೇವರಿಗೆ ತುಪ್ಪದ ದೀಪಗಳನ್ನು ಬೆಳಗಿಸಿ, ಕೈ ಮುಗಿದು ಪ್ರಾರ್ಥಿಸಿದ್ದಳು. ಸುಕನ್ಯ ದೊಡ್ಡ ಮನಸ್ಸು ಮಾಡಿ ಕಣ್ಣಿನ ಡಾಕ್ಟರ ಬಳಿ ಕರೆದುಕೊಂಡು ಹೋಗ್ತಿದಾಳೆ. ದೇವರು ಈ ಸಲವಾದರೂ ಕಣ್ಣು ಬಿಟ್ಟು, ಸಾವಿತ್ರಿಗೆ ಕಣ್ಣಿನ ದೃಷ್ಟಿ ಬರುವಂತಾಗಲಿ ಎಂದು ಬೇಡಿಕೊಂಡಿದ್ದಳು.

* * *

ಸುಕನ್ಯಳ ಜತೆ, ಅವಳ ಕೈ ಹಿಡಿದು ಒಳ ಬಂದ ಸಾವಿತ್ರಿಯನ್ನೇ ದಿಟ್ಟಿಸಿದರು. ಡಾ||ಸರೋಜಿ ಮೆಚ್ಚುಗೆಯ ನೋಟದಿಂದ ಅವಳೆಡೆಗೆ ನೋಡಿದಾಗ, ಸುಕನ್ಯ 'ನಮಸ್ಕಾರ' ಎಂದಿದ್ದಳು. ಸಾವಿತ್ರಿಯೂ ನಮಸ್ಕಾರ ಡಾಕ್ಟರ್ ಎಂದಿದ್ದಳು ಒಳ ಗಂಟಲಿನಿಂದ.

'ಕೂತ್ಕೊಳ್ಳಿ' ಎಂದು ಕೈ ತೋರಿ ಕುರ್ಚಿಯನ್ನು ತೋರಿಸಿದಾಗ, ಸುಕನ್ಯಳ ಸಹಾಯದಿಂದ ಸಾವಿತ್ರಿ ತಡಕಾಡಿ ಕುಳಿತಾಗ, ಅವಳಿಗೆ 'ಪೂರ್ಣ ಕುರುಡು' ಎಂದು ಆಕೆಗೆ ಖಚಿತವಾಗಿತ್ತು. ಆಕೆಯ ವ್ಯಥೆಯ ಮುಖವನ್ನು ಕಂಡು ಸುಕನ್ಯ ಗಲಿಬಿಲಿಗೊಂಡರೂ, ಪರಿಚಯಿಸಿದ್ದಳು.

"ಇವಳು ನನ್ನ ತಂಗಿ ಸಾವಿತ್ರಿ ಅಂತ. ವಯಸ್ಸು ಇಪ್ಪತ್ಮೂರು. ಹತ್ತು ವರ್ಷಗಳ ಹಿಂದೆ ರೋಡ್ ಆಕ್ಸಿಡೆಂಟ್‌ನಲ್ಲಿ ಇವಳು ದೃಷ್ಟಿಯನ್ನು ಕಳೆದುಕೊಂಡಳು. ಇವಳೀಗ ಸಾರೋಗೇಟ್ ಮದರ್ ಆಗಲು ಒಪ್ಪಿಕೊಂಡಿದಾಳೆ".

"ಹೌದಾ? ಓ. ಕೇ. ಮೊದಲು ಇವರನ್ನು ಥರೋ ಚೆಕಪ್ ಮಾಡಬೇಕು. ಕಣ್ಣಿಗೆ ಚಿಕಿತ್ಸೆ ಕೊಡಿಸಿದ ಬಗ್ಗೆ ಡಾಕ್ಟರಿಂದ ಸರ್ಟಿಫಿಕೇಟ್ ಬೇಕು. ಎಲ್ಲಾ ಚೆಕ್ ಮಾಡಿ, ಸರಿಯಾಗಿದ್ದರೆ, ಮುಂದೆ ಏನು ಮಾಡಬೇಕು ಅಂತ ಆಮೇಲೆ ತಿಳಿಸ್ತೀವಿ".

"ಈಗ ಚೆಕಪ್ ಮಾಡ್ತೀರಾ?"

"ಹೂಂ ಮಾಡೋಣ. ರಿಸಲ್ಟ್ ನಾಳೆ ನಾಡಿದ್ದರಲ್ಲಿ ತಿಳಿಸ್ತೀವಿ. ಅದಕ್ಕೆ ಮುಂಚೆ ಕಣ್ಣಿನ ಚಿಕಿತ್ಸೆಯ ಮಾಹಿತಿಯನ್ನು ತಂದುಕೊಡಬೇಕು ನೀವು." ಸುಕನ್ಯ ಒಪ್ಪಿದಳು.

ಸುಕನ್ಯಳಿಗೆ ಹೊರಗೆ ಕಾಯುವಂತೆ ತಿಳಿಸಿ. ಸಾವಿತ್ರಿಯನ್ನು ಇನ್ನೊಂದು ರೂಮಿಗೆ ಅವಳ ಆಯಾಳ ಸಹಾಯದಿಂದ ಕರೆದುಕೊಂಡು ಹೋದರು.

ಅವಳ ರಕ್ತದ ಒತ್ತಡ, ಹೃದಯದ ಬಡಿತದ ತಪಾಸಣೆಯನ್ನು ಕೂಲಂಕಷವಾಗಿ ನಡೆಸಿ, ಅವಳ ರಕ್ತ ಹಾಗೂ ಮೂತ್ರವನ್ನು ಪರೀಕ್ಷೆಗಾಗಿ ಸಂಗ್ರಹಿಸಿದರು. ಸಾವಿತ್ರಿಗೆ ಅದೆಲ್ಲಾ ಹೊಸದು. ಸಂಕೋಚದಿಂದ ಮೈ ಮುದುರಿದಳು. ಮತ್ತೆ ಆಯಾಳ ನೆರವಿನಿಂದ ಹೊರಗೆ ಕರೆತಂದರು. ನಾಡಿದ್ದು ಬರುವುದಾಗಿ ಹೇಳಿ ಸುಕನ್ಯ ಸಾವಿತ್ರಿಯೊಡನೆ ಹೊರಟಳು. ಮನೆಗೆ ಬಂದ ಕೂಡಲೇ ಸುಭದ್ರಮ್ಮ ಸಂಭ್ರಮದಿಂದ ಕೇಳಿದ್ದಳು.

"ಏನಂದ್ರು ಡಾಕ್ಟರು....?"

"ಏನಿಲ್ಲ. ಎಲ್ಲಾ ಚೆಕ್ ಮಾಡಿದಾರೆ. ಹಿಂದೆ ಚಿಕಿತ್ಸೆ ಮಾಡಿದ್ದೆವಲ್ಲ. ಆ ರಿಪೋರ್ಟ್, ಸರ್ಟಿಫಿಕೇಟ್ ಎಲ್ಲಾ ಬೇಕಂತೆ. ಎಲ್ಲಿಟ್ಟಿದೀಯಾ ತೆಗೆದುಕೊಡು."

ಜೋಪಾನವಾಗಿ ಒಂದು ಕವರಿನೊಳಗೆ ಇರಿಸಿದ್ದ ರಿಪೋರ್ಟ್‌ನ್ನು ಮಗಳ ಕೈಗೆ ಕೊಟ್ಟಳು "ಮತ್ತೆ ಯಾವಾಗ ಹೋಗ್ತೀಯಾ?"

"ನಾಳೆ ನಾಡಿದ್ದರಲ್ಲಿ ಹೋಗ್ತೀನಿ"

"ನಾನು ಟೂರ್‌ನಿಂದ ವಾಪಸ್ಸು ಬರುವ ಹೊತ್ತಿಗೆ ಎಲ್ಲಾ ಸರಿ ಹೋಗಿರುತ್ತಾ?"

"ಹೂಂ ಅಂತ ಕಾಣಿಸುತ್ತೆ." ತಾಯಿಯ ಮನಸ್ಸನ್ನು ಒಲಿಸಿದ್ದಳು. ಮನೆಗೆ ಬಂದವಳೇ ಅದನ್ನು ಮುಕುಂದನ ಕೈಗಿತ್ತು. "ನಾಳೆ ಆಫೀಸಿಗೆ ಹೋಗುವಾಗ ದಾರಿಯಲ್ಲಿ ಇದನ್ನು ಡಾ|| ಸರೋಜನಿಗೆ ಕೊಟ್ಟು ಹೋಗಿ. ಅವರು ನಿಮ್ಮ ಹತ್ತಿರ ಮಾತನಾಡಬೇಕಂತೆ"

ಮುಕುಂದ ತುಟಿ ಸೊಟ್ಟಗೆ ಮಾಡಿದ. ಸುಕನ್ಯ ಜಯಗಳಿಸಿದವಳಂತೆ ತನ್ನಲ್ಲೇ ಮುಗುಳ್ನಕ್ಕಳು.

ಅಂದು ಗುರುವಾರ. ಸುಭದ್ರಮ್ಮ ಸಾಯಿ ಬಾಬಾ ಮಂದಿರಲ್ಲಿ ಸಾಯಂಕಾಲ ಭಜನೆಗೆ ಪ್ರತಿವಾರವೂ ಹೋಗುವುದು ರೂಢಿ. ಇದು ಎಲ್ಲರಿಗೂ ತಿಳಿದ ವಿಷಯ.

ಸುರೇಶ ಆ ಸಮಯದಲ್ಲಿ ಸಾವಿತ್ರಿಯನ್ನು ಭೇಟಿಯಾಗಲು ಬಂದ. ಅವನ ಧ್ವನಿ ಕೇಳಿದ ಕೂಡಲೇ ಉದ್ವೇಗದಿಂದ ಅವಳ ಹೃದಯದ ಬಡಿತದ ವೇಗ ಹೆಚ್ಚಿತು. ಪ್ರೀತಿ ಅಂತರಾಳದಿಂದ ಹೊರ ಹೊಮ್ಮಿತ್ತು. ಅವನ ಬಳಿಗೆ ಗಡಿಬಿಡಿಯಿಂದ ತಡವರಿಸಿ ಬಂದಳು. ಸುರೇಶ ಪ್ರೀತಿಯಿಂದ ಅವಳ ತಲೆಯನ್ನು ನೇವರಿಸಿದ.

"ಹತ್ತು ದಿನದಿಂದ ನಿನ್ನನ್ನು ನೋಡದೇ ನನ್ನ ಚೇತನವೇ ಉಡುಗಿ ಹೋಗಿತ್ತು" ಎಂದ.

"ನೀವು ಬರಲೇ ಇಲ್ಲ. ನನಗೆಷ್ಟು ಬೇಸರವಾಗಿತ್ತು ಗೊತ್ತಾ?"

"ಏನೋ ಆಫೀಸಿನ ಕೆಲಸ ಜಾಸ್ತಿ. ಬಿಡುವಾಗಲೇ ಇಲ್ಲ."

"ನೀವು ಫಾರಿನ್ನಿಗೆ ಹೋಗ್ತಿದೀರಂತೆ. ಸರಳ ಹೇಳಿದಳು."

"ನಾನೇ ನಿನಗೆ ಹೇಳೋಣ ಅಂತಿದ್ದೆ. ಅವಳೇಕೆ ಹೇಳಿದಳು."

"ನೀವು ಊರಿನಲ್ಲಿಲ್ಲದಾಗ ಸರಳ ಇಲ್ಲಿ ನನ್ನ ಜತೆಗೆ ಬಂದಿರುತ್ತಾಳಂತೆ. ಅಮ್ಮ ತೀರ್ಥಯಾತ್ರೆ ಟೂರ್ ಹೊರಟಿದಾಳೆ."

"ಹೌದಾ? ಒಳ್ಳೇದೇ ಆಯ್ತು ಬಿಡು"

"ಬರುವುದು ಎರಡು ಮೂರು ತಿಂಗಳಾತ್ತೆ ಅಂದಳು. ಅಷ್ಟು ದಿನ ನಿಮ್ಮನ್ನು ಭೇಟಿಯಾಗದೇ ಹೇಗಿರಲಿ?"

"ನನಗೂ ಅದೇ ಬೇಜಾರು....ಇನ್ನು ಹದಿನೈದು ಇಪ್ಪತ್ತು ದಿನಕ್ಕೆ ಇಲ್ಲಿಂದ ಹೊರಡ್ತೀನಿ. ಅದಕ್ಕೆ ಮುಂಚೆ ಬಿಡುವಾದಾಗೆಲ್ಲಾ ಬರ್ತೀನಿ"

"ಫಾರಿನ್ನಿಗೆ ಹೋಗಿ ನನ್ನನ್ನು ಮರತೇ ಬಿಡ್ತೀರೇನೋ...."

"ಅದ್ಹೇಗೆ ಮರೆಯಲಿ? ಇಬ್ಬಿಬ್ಬರಿದೀರಲ್ಲ. ನೀನೇ ನನ್ನನ್ನು ಮರೆಯ ಬಹುದು"

"ನಿಮ್ಮನ್ನು ಮರೆಯಲು ಸಾಧ್ಯವೆ? ಅಂಥ ದಿನ ಬರದಿರಲಿ ಎಂದು ಹಾರೈಸುತ್ತೀನಿ"....

"ನಿನಗೆ ಅಲ್ಲಿಂದ ಏನು ತರಲಿ?"

"ಸರಳಂಗೆ ಏನೂ ತರ್ತೀರೋ ಅದನ್ನೇ ತನ್ನಿ"

"ಅವಳಿಗಿಂತ ಸ್ಪೆಷಲ್ ನೀನು.... ನಿನಗೆ ಸ್ಪೆಷಲ್ ಏನಾದ್ರೂ ತರ್ತೀನಿ"

"ನಿಮ್ಮಿಷ್ಟ" ಎಂದಳು. ಅವಳು ಅವನಿಗೆ ಎಲ್ಲವನ್ನು ತಿಳಿಸುವ ಮನಸ್ಸಾದರೂ ತಡೆಮಕೊಂಡಳು. ಅವನು ತನ್ನನ್ನು ಪ್ರೀತಿಸಿದವನು. ಅವನು ಇದನ್ನೆಲ್ಲ ಒಪ್ಪಲಾರ.

ತಾನೀಗ ಬರೀ ನಟನೆ ಮಾಡುತ್ತಿದೇನೆಯೆ? ನನ್ನನ್ನು ಮೆಚ್ಚಿದವನಿಗೆ ದ್ರೋಹ ಬಗೆದಂತಾಗುತ್ತಿಲ್ಲವೆ ಅಂತ ಅನ್ನಿಸಿದಾಗ ಅಳು ಬರುವಂತಾಯ್ತು. ಅದನ್ನು ತಪ್ಪಾಗಿ ತಿಳಿದ.

"ಛಾನೇನು ಸದಾ ಕಾಲಕ್ಕೂ ಹೋಗ್ತಿಲ್ಲ. ನನ್ನ ಕೆಲಸ ಮುಗಿದ ಕೂಡಲೇ ವಾಪಸ್ಸು ಬಂದು ಬಿಡ್ತೀನಲ್ಲ."

"ಯಾಕೋ ನನಗೆ ಗಾಭರಿಯಾಗ್ತಿದೆ."

"ಗಾಭರಿ ಏಕೆ? ಇವತ್ತಿನಿಂದಲೇ ಹೀಗಾಡಿದರೆ ಹೇಗೆ? ಧೈರ್ಯವಾಗಿರು.... ಅಲ್ಲದೇ ಇವತ್ತೇ ಹೊರಟಿಲ್ಲ ನಾನು"

ಅಳುತ್ತಿದ್ದ ಸಾವಿತ್ರಿಯನ್ನು ಸಮಾಧಾನ ಮಾಡುವಷ್ಟರಲ್ಲಿ ಸಾಕಾಯಿತು. ಅಷ್ಟರಲ್ಲಿ ಸುಭದ್ರಮ್ಮ ಬಂದೇ ಬಿಟ್ಟಳು. ಸುರೇಶ ಅವಳನ್ನು ದೂರ ಸರಿಸಿ, ಬಾಗಿಲು ತೆಗೆದ, ಸಾವಿತ್ರಿ ರೂಮಿನಿಂದ ಆಚೆಗೆ ಬರಲಿಲ್ಲ.

ಆಗಾಗ್ಗೆ ಸುರೇಶ ಮನೆಗೆ ಬರುತ್ತಿದ್ದುದರಿಂದ ಆಕೆಗೆ ಏನೂ ಅನುಮಾನ ಬರಲಿಲ್ಲ. ಆದರೆ ಏಕೆ ಬಂದಿದ್ದನೋ ಎಂದುಕೊಂಡು,

"ಸರಳ ಇನ್ನೂ ಬಂದಿಲ್ವಾ?" ಕೇಳಿದಳು.

"ಇಲ್ಲ. ನಾನೂ ಕಾಯ್ತಾ ಇದೀನಿ. ಮರೆತು ಬಿಟ್ಟಳೋ ಏನೋ, ನಾನೇ ಬ್ಯಾಂಕಿನ ಹತ್ತಿರ ಹೋಗ್ತೀನಿ." ಎಂದು ಹೊರ ನಡೆದ.

ಸಾವಿತ್ರಿ, ರೂಮಿನಲ್ಲಿ ಕಿಟಕಿಯ ಬಳಿ ನಿಂತಿದ್ದನ್ನು ನೋಡಿದ ಆಕೆ ಭಾರವಾದ ಹೃದಯದಿಂದ ಅಡಿಗೆ ಮನೆ ಹೊಕ್ಕಳು. ಸರಳನ ಧ್ವನಿ ಕೇಳಿ ಆಚೆ ಬಂದಳು. ಸರಳ ಆಕೆಯ ಸೀಟನ್ನು ರಿಸರ್ವ್ ಮಾಡಿಸಿ ಟಿಕೆಟ್ ತಂದಿದ್ದಳು.

"ನಿನ್ನ ಗಂಡ ಈಗ್ತಾನೇ ಹೋದ್ರಲ್ಲೇ ನಿನಗೋಸ್ಕರ ಇದುವರೆಗೂ ಕಾದರು."

"ಹೌದಾ?" ಎಂದಳು ಅಚ್ಚರಿಯಿಂದ. ಅವನಿಗೆ ಇಲ್ಲಿಗೆ ಬರಲು ಹೇಳಿದ ನೆನಪಿಲ್ಲ. ಸರಳ ಏನು ಹೇಳುತ್ತಾಳೋ ಎಂದು ಸಾವಿತ್ರಿ ಕಿವಿಗೊಟ್ಟು ಕೇಳುತ್ತಿದ್ದಳು. ಆದರೆ ಸರಳ ಮತ್ತೇನನ್ನೂ ಆಡಲಿಲ್ಲ. ಟಿಕೆಟ್ಟನ್ನು ತಾಯಿಯ ಕೈಗಿತ್ತು ತಕ್ಷಣ ಹೊರಟು ಬಿಟ್ಟಳು.

ಮತ್ತೆ ಒಂದೆರಡು ದಿನಗಳ ನಂತರ, ಸುರೇಶ ಬಂದಾಗ, ಸಾವಿತ್ರಿ ಹೆದರಿ ಅವನನ್ನು ದೂರ ಸರಿಸಿದ್ದಳು. "ಅಮ್ಮ ಬಂದರೆ ಆಭಾಸವಾಗುತ್ತೆ. ನನಗೆ ಹೆದರಿಕೆ" ಎಂದಿದ್ದಳು.

"ಅಮ್ಮ ಬರುವ ಹೊತ್ತಿಗೆ ನಾನು ಹೊರಟು ಹೋಗ್ತೀನಿ. ನಾನು ಇನ್ನು ಎಷ್ಟು ದಿನ ಬರ್ತೀನಿ. ಆಮೇಲೆ ಮೂರು ತಿಂಗಳು ನಿನಗೆ ನನ್ನ ಕಾಟವಿಲ್ಲ."

"ಅಮ್ಮ ಸಧ್ಯದಲ್ಲೇ ಟೂರ್‌ಗೆ ಹೊರಡ್ತಾಳೆ. ಆಗ ದಿನಾ ಬನ್ನಿ. ನಾನು ಬೇಡ ವೆನ್ನುವುದಿಲ್ಲ"

"ನೋಡ್ತೀನಿ. ಆದರೆ ಬರ್ತೀನಿ. ಇಲ್ಲದಿದ್ದರೆ ಇಲ್ಲ. ಆದರೆ ನಾನು ಬಂದಾಗ ಮಾತ್ರ ನನ್ನನ್ನು ದೂರ ಸರಿಸಬೇಡ. ಹೀಗೆ ಮಾಡಿದರೆ, ಫಾರಿನ್ನಿಂದ ನನಗೆ ಬೇಕಾದವ ಳೊಬ್ಬಳನ್ನು ಜತೆಗೆ ಕರೆದುಕೊಂಡು ಬರ್ತೀನಿ".

"ಹಾಗೇ ಮಾಡಿ. ನನಗೂ ಸರಳಂಗೂ ಇಬ್ಬರಿಗೂ ನೆಮ್ಮದಿ" ಇಬ್ಬರೂ ನಕ್ಕರು. ತಾಯಿ ಬರುವಷ್ಟರಲ್ಲಿ ಅವನು ಹೊರಟು ಹೋಗಿದ್ದ. ಮನೆಯವರ್‍ಯಾರಿಗೂ ತಿಳಿಯದಂತೆ ಅವನು ಸಾವಿತ್ರಿಯನ್ನು ಸಂಧಿಸುತ್ತಿದ್ದುದು ಒಂದು ಸಾಹಸವೇ... ಸಾವಿತ್ರಿಯೊಡನೆ ಇದ್ದಾಗ ಸಿಗುವ ಆನಂದ ಅವನಿಗೆ ಸರಳೆಯ ಜತೆ ಇದ್ದಾಗ ಸಿಗು ತ್ತಿರಲಿಲ್ಲ. ಸರಳ ಒಂದು ರೀತಿ ಬೇರೆ. ಅವಳಿಗೆ ಗಂಡನ ಬಗ್ಗೆ ಹೆಚ್ಚಿನ ಕಾತುರ ವಿರಲಿಲ್ಲ. ಅವನಾಗಿಯೇ ಅವಳನ್ನು ಬಯಸಿದ ದಿನ ಮಾತ್ರ ಅವಳು ಸಹಕರಿಸು ತ್ತಿದ್ದಳು. ಅವನ ಪಾಡಿಗೆ ಅವನು ಮಲಗಿದ್ದ ದಿನ, ತಾನೂ ನೆಮ್ಮದಿಯಿಂದ ನಿದ್ದೆ ಮಾಡುತ್ತಿದ್ದಳು. ಸರಳನ ಈ ಸ್ವಭಾವ ಅವನಿಗೆ ಸಹಾಯಕವಾಗಿತ್ತು.... ಅವಳನ್ನು ಹೆಚ್ಚು ಅಪೇಕ್ಷೆಯೂ ಪಡುತ್ತಿರಲಿಲ್ಲ. ಉಪೇಕ್ಷೆಯನ್ನೂ ಮಾಡಿರಲಿಲ್ಲ. ಅವಳಿಗೆ ಯಾವ ರೀತಿಯ ಅನುಮಾನವೂ ಬರದಂತೆ ನೋಡಿಕೊಂಡಿದ್ದ. ಒಂದು ವೇಳೆ ಎಂದಾದರೂ ತಿಳಿದರೆ ತನಗೇನೂ ಭಯವಿಲ್ಲ ಎಂದೂ ತನಗೆ ತಾನೇ ಹೇಳಿ ಕೊಂಡಿದ್ದ.... ಸಾವಿತ್ರಿಗೆ ನನ್ನ ಮೇಲೆ ಪ್ರೀತಿ ಇದೆ. ಅವಳು ನನ್ನಿಂದ ಸುಖವಾಗಿದ್ದಾಳೆ ಎನ್ನುವುದೇ ಅವನಿಗೆ ಸಂತಸದ ವಿಷಯ.

ಸುಕನ್ಯ ಮತ್ತೆ ಡಾಕ್ಟರನ್ನು ಭೇಟಿಯಾದಳು. ಡಾಕ್ಟರು ಸಾವಿತ್ರಿಯ ಬಗ್ಗೆ ಸದಭಿಪ್ರಾಯವನ್ನು ಹೊಂದಿದ್ದರು.

"ನಿಮ್ಮ ಸಿಸ್ಟರ್ ಹೆಲ್ತಿಯಾಗಿದ್ದಾರೆ. ಕಣ್ಣಿಗೂ ಇದಕ್ಕೂ ಏನೂ ಸಂಬಂಧ ವಿಲ್ಲ. ಏನೂ ತೊಂದರೆಯಾಗುವುದಿಲ್ಲ. ನಿಮ್ಮ ಮನೆಯಲ್ಲಿ ಎಲ್ಲರ ಒಪ್ಪಿಗೆ ಇದೇ ತಾನೇ"

'ಹೂಂ' ಇದೆ.

"ಹಾಗಾದ್ರೆ ಅವಳನ್ನು ಮತ್ತೆ ಕರೆದುಕೊಂಡು ಬನ್ನಿ ಅವಳ ಋತುಚಕ್ರಗಳ

ಬಗ್ಗೆ ಒಂದು ಚಾರ್ಟನ್ನು ಸಿದ್ಧ ಪಡಿಸಬೇಕು" ಹಾಗೇ ನಿಮ್ಮ ಪತಿಯೂ ಒಂದು ದಿನ ಬರಲಿ. ಅವರ ಹತ್ತಿರ ಮಾತನಾಡಬೇಕು. ಒಂದು ಸ್ಟ್ಯಾಂಪ್ ಪೇಪರಿನಲ್ಲಿ ಒಪ್ಪಂದದ ಪತ್ರ ಸಿದ್ಧವಾಗಬೇಕು. ಪೂರಕವಾದ ಕ್ಲಾಸ್‌ಗಳನ್ನು ಬರೆದಿರಬೇಕು."

ಅದರಂತೆ ಮುಕುಂದ ಬಂದು ಡಾಕ್ಟರರ ಹತ್ತಿರ ಮಾತನಾಡಿ, ಒಬ್ಬ ಲಾಯರನ ನೆರವಿನಿಂದ, ಕಾನೂನುಬದ್ಧವಾದ, ಒಪ್ಪಂದದ ಪತ್ರವನ್ನು ತನ್ನ ಹಾಗೂ ಸುಕನ್ಯಳ ಸಹಿಯೊಂದಿಗೆ ಸಿದ್ಧಪಡಿಸಿದ. ಸಾವಿತ್ರಿಯ ಸಹಿಯೂ ಆಗಬೇಕಾಗಿತ್ತು. ಸಾಕ್ಷಿಗಳ ಸಹಿಗೆ ಸರಳ ಒಬ್ಬ ಸಾಕ್ಷಿಯಾಗಿರಲಿ ಎಂದು ತೀರ್ಮಾನಿಸಿದರು. ಸರಿಯಾದ ಒಂದು ದಿನದಲ್ಲಿ ಸುಕನ್ಯಳ ಅಂಡಾಶಯದಿಂದ ಅಂಡಾಣುವನ್ನು, ಮುಕುಂದನ ವೀರ್ಯಾಣು ವನ್ನು ಸಂಗ್ರಹಿಸಿ, ಪ್ರಯೋಗಾಲಯದಲ್ಲಿ ಅನುಕೂಲಕರವಾದ ಉಷ್ಣಾಂಶದಲ್ಲಿ ಎರಡನ್ನು ಪ್ರಣಾಳಿಕೆಯಲ್ಲಿ ಸಂಯೋಜಿಸಿ, ಅದನ್ನು ಕೋಲ್ಡ್ ಸ್ಟೋರೇಜ್‌ನಲ್ಲಿಟ್ಟು ಎಚ್ಚರಿಕೆಯಿಂದ ಕಾಪಾಡಿದರು.

ಇನ್ನು ಸಾವಿತ್ರಿಯನ್ನು ಅಡ್ಮಿಟ್ ಮಾಡಿಕೊಂಡು ಮುಂದಿನ ಪ್ರಯೋಗವನ್ನು ನಡೆಸುವುದಷ್ಟೆ ಬಾಕಿ ಇತ್ತು. ಸುಭದ್ರಮ್ಮ ಟೂರ್‌ಗೆ ಹೋಗುವ ದಿನವನ್ನೇ ಕಾದಿದ್ದು ಸುಕನ್ಯ ಲಗೇಜಿನೊಂದಿಗೆ ಬಂದಿಳಿದಳು. ಸರಳ ಸಂತೋಷಗೊಂಡಳು.

"ಸಧ್ಯ ನೀನು ಬಂದದ್ದು ಒಳ್ಳೇದೇ ಆಯ್ತು. ನಾಡಿದ್ದು ಸುರೇಶ್ ಬಾಂಬೆಗೆ ಹೊರಡ್ತಿದಾರೆ. ಸಾವಿತ್ರಿ ಒಬ್ಬಳೇ ಆಗ್ತಾಳಲ್ಲ ಅಂತ ಚಿಂತಿಸುತ್ತಿದ್ದೆ"

"ನಾನೂ ಅವಳ ಅಕ್ಕ ತಾನೇ... ನನಗೂ ಅವಳ ಯೋಗಕ್ಷೇಮ ಸೇರಿದ್ದೇ"

"ಹಾಗಾದ್ರೆ ಎರಡು ದಿನ ಅವಳ ಜತೆ ಇದ್ದು ಬಿಡು. ನಾಡಿದ್ದು ಸಾಯಂಕಾಲ ನಾನೂ ಬಂದು ಬಿಡ್ತೀನಿ. ಅಮ್ಮ ಬರುವವರೆಗೂ ನಮ್ಮದೇ ಸಾಮ್ರಾಜ್ಯ. "ಸರಳ ಸಂತೋಷವಾಗಿರುವಾಗಲೇ ತಾನು ತನ್ನ ವಿಷಯವನ್ನು ತಿಳಿಸಿ ಬಿಡಬೇಕೆಂದುಕೊಂಡು,

"ಏನು ಸಾಮ್ರಾಜ್ಯವೋ, ಸುಖ ಸಂತೋಷವೇ ಇಲ್ಲ."

"ಸಾಮ್ರಾಜ್ಯ ಎಂದರೆ ಹೋರಾಟ, ಪರಿಶ್ರಮ, ನಂತರ ಗೆಲುವು ತಾನೇ...."

"ಹೋರಾಟವೇನೋ ಇದೆ. ಆದರೆ ಗೆಲುವಿನ ವಿಚಾರ ಗೊತ್ತಿಲ್ಲ."

"ಯಾವ ವಿಚಾರ ಹೇಳ್ತಾ ಇದೀಯ ನೀನು....?"

"ನೋಡು, ನಿನಗೆ ಈಗಾಗಲೇ ನನ್ನ ಸಮಸ್ಯೆ ಮರೆತೇ ಹೋಗಿದೆ. ನನ್ನ ಸಮಸ್ಯೆ ನನ್ನನ್ನು ಸದಾ ಹೆದರಿಸುತ್ತಲೇ ಇರುತ್ತದೆ. ಹಳ್ಳಿಯಿಂದ ಕಾಗದ ಬಂದಾಗ ಲೆಲ್ಲಾ, ಮದುವೆಯಾಗಿ ಎರಡು ವರ್ಷ ಕಳೆದರೂ, ಇನ್ನು ಯಾಕೆ ಮಕ್ಕಳಾಗಿಲ್ಲ

ಅಂತ ಕೇಳಿ ಬರೀತಾರೆ. ತಾತ ಹೇಳಿದ್ರಂತೆ, ಪ್ರೀತಿಗೀತಿ ಅಂತ ಪ್ರೇಮಿಸಿ ಮದುವೆ ಯಾದವರ ಹಣೆಬರಹವೇ ಅಷ್ಟು ಏನಾದರೂ ಕುಂದು ಇರುತ್ತೆ. ಅವಳಿಗೆಲ್ಲಿ ಮಕ್ಕಳಾಗುತ್ತೆ ಅಂತ ಅಂದ್ರಂತೆ. ಇನ್ನು ನನಗೆ ಆತ್ಮಹತ್ಯೆಯೇ ಗತಿ!''

''ಯಾಕೆ? ಅವತ್ತು ಹೇಳಿದ್ಯಲ್ಲ ಹಣ ಬಿಸಾಕಿದರೆ, ಯಾರಾದ್ರೂ ಸಿಗ್ತಾರೆ ಅಂತ. ಯಾರೂ ಹೆಂಗಸರು ಸಿಗಲಿಲ್ವಾ?''

''ಹೇಗೆ ಅವರಾಗಿಯೇ ಸಿಗ್ತಾರೆ ಹೇಳು. ಪೇಪರ್ನಲ್ಲಿ ಪ್ರಕಟಣೆ ಹಾಕಿಸುಕ್ಕೆ ಇಷ್ಟವಿಲ್ಲ. ನಮ್ಮ ಡಾಕ್ಟರೇ ಒಂದೈದಾರು ಜನ ಹೆಂಗಸರನ್ನು ಕಳಿಸಿದ್ದರು. ಅಬ್ಬಾ ಒಬ್ಬರಿಗಿಂತ ಒಬ್ಬರು....ಅಹಹಾ....ಏನು ಹೇಳಲಿ,? ಒಬ್ಬಳು ಬಡತನದ ಸ್ಪೆಸಿಮನ್ ಮೂಳೆ ಚರ್ಮ ಎರಡೇ ಅವಳ ದೇಹದಲ್ಲಿದ್ದುದು., ಇನ್ನೊಬ್ಬಳಿಗೆ ಏನೋ ಚರ್ಮ ರೋಗ. ಮೈತುಂಬಾ ಅದೇನೇನು ಅಂಟಿಸಿಕೊಂಡಿದ್ದಳೋ,.....ಇನ್ನೊಬ್ಬಳು ಖಾಯಿಲೆ ಯಿಂದ ಎದ್ದು ಬಂದವಳ ತರಹ. ಇನ್ನೊಬ್ಬಳು ಪರವಾಗಿಲ್ಲ ಅಂತ ಅನ್ನಿಸ್ತು. ಆದರೆ ಅವಳ ಡಿಮಾಂಡೂ ಅತೀ ಅತೀ. ಅವಳ ಮಕ್ಕಳನ್ನು ಓದಿಸಬೇಕಂತೆ. ಇನ್ನೊಬ್ಬಳು ತುಂಬಾ ಚಿಕ್ಕವಳು. ಅವಳೊಬ್ಬ ವೇಶ್ಯೆಯ ಮಗಳು. ಮಗಳಿಗೆ ತಾನೂ ಸೂಳೆಯಂತೆ ಬಾಳಲು ಇಷ್ಟವಿಲ್ಲ. ಹಣ ಸಿಕ್ಕರೆ ತನ್ನ ಪಾಡಿಗೆ ತಾನು ಸುಖವಾಗಿರ ಬಹುದು ಎಂಬ ಆಸೆ. ಥೂ ಯಾಕೋ ನನಗೆ ಇಷ್ಟವಾಗಲಿಲ್ಲ. ಅಸಹ್ಯವೆನಿಸಿತು.''

''ಡಾಕ್ಟರಿಗೆ ಅಷ್ಟಾದರೂ ತಿಳಿಯಬೇಡವೆ! ಅಂಥೋರನ್ನೇ ಕಳಿಸೂದು?'' ಸಾವಿತ್ರಿ ಬೇಕೂಂತ ನುಡಿದಳು. ಸುಕನ್ಯಳ ಮಾತು ಬರೀ ಸುಳ್ಳು ಎನ್ನುವುದು ಅವಳಿಗೆ ತಿಳಿದಿತ್ತು.

''ಅವರು ಯಾರಿಗೋ ಹೇಳಿರ್ತಾರೆ. ಅಡ್ರೆಸ್ ಕೊಟ್ಟಿರ್ತಾರೆ. ಇನ್ಯಾರೋ ಬಂದಿರ್ತಾರೆ. ಅವರಿಗೆ ಏನು ಆಸಕ್ತಿ? ಅವರನ್ನು ಹೋಗಿ ಕೇಳಿದರೂ ಉಪ ಯೋಗವಿಲ್ಲ. ಸಾವಿತ್ರಿ ಒಪ್ಪಿದ್ದಿದ್ದರೆ ಈ ರಗಳೆ ಮುಗಿದಿರುತ್ತಿತ್ತು''

ಸರಳ ಉತ್ತರಿಸಲಿಲ್ಲ. ಸುಮ್ಮನಾದಳು.

''ನಾನೊಂದು ಮಾತು ಕೇಳ್ತೀನಿ, ಬೈಯಬೇಡ. ನೀನೇ ಆ ಕೆಲಸವನ್ನು ಮಾಡಿ ಕೊಡ್ತೀಯಾ ನನಗೆ? ಹೇಗೂ ಸುರೇಶನೂ ಊರಿನಲ್ಲಿರುವುದಿಲ್ಲ. ಸುರೇಶನೂ ಒಪ್ಪ ಬಹುದು.''

''ಸುಕನ್ಯಾ.... ನಿನಗೆ ನಮ್ಮಿಬ್ಬರ ಹೊರತು ಬೇರೆ ಇನ್ಯಾರೂ ಸಿಗಲಿಲ್ವಾ?''

''ಸಿಗಲಿಲ್ಲ. ಅದಕ್ಕೆ ಕೇಳಿದೆ. ಸಾವಿತ್ರೀನ ಬೇಡ ಎಂದವಳೇ ನೀನು. ನೀನಾದರೆ.

ಮದುವೆಯಾದವಳು. ನಿನಗೂ ಹೇಗೂ ಮಕ್ಕಳಾಗಿಲ್ಲ. ಮೊದಲನೆಯದನ್ನು ನಮ ಗೋಸ್ಕರ, ನನ್ನ ಮಗುವನ್ನು ಹೆತ್ತು ಬಿಡು. ಅಥವಾ ನಿನಗೂ, ನನಗೆ ಸಹಾಯ ಮಾಡುವುದಕ್ಕೆ ಇಷ್ಟವಿಲ್ಲವೋ?"

"ನನಗೆ ಈ ಮಕ್ಕಳು, ಮರಿ, ಬಸರಿ, ಬಾಣಂತನ ಒಂದೂ ಇಷ್ಟವಿಲ್ಲ. ನಾನಾಗಿಯೇ ನಾನು ಮಕ್ಕಳನ್ನು ಬಯಸುವುದಿಲ್ಲ. ಚಿಂತಿಸುವುದಿಲ್ಲ. ಮಕ್ಕಳಿಗಾಗಿ ಒದ್ದಾಡುವುದಿಲ್ಲ."

"ಈಗ ಹೀಗಂತೀಯಾ? ಸುರೇಶನಿಗೆ ಇಷ್ಟವಿದ್ದರೆ?"

"ಅವರಿಗೆ ಇಷ್ಟವಿದ್ದರೆ ಇದುವರೆಗೂ ಸುಮ್ಮನಿರುತ್ತಿದ್ದರಾ?"

"ಅಂದರೆ....? ನಿಮಗಿಬ್ಬರಿಗೂ ಮಕ್ಕಳು ಬೇಡ... ಹಾಗಾದರೆ, ನಿಮ್ಮಿಬ್ಬರಲ್ಲಿ ಯಾರೋ ಒಬ್ಬರು ಸರಿಯಿಲ್ಲ. ಸುರೇಶನಿಗೆ ನಿನ್ನ ಮೇಲೆ ಪ್ರೀತಿ ಇದೆಯೋ ಇಲ್ಲವೋ..."

ಅವರಿಬ್ಬರ ಮಾತುಗಳನ್ನು ಆಲಿಸುತ್ತಿದ್ದ ಸಾವಿತ್ರಿ ಬೆದರಿದ್ದಳು. ಸರಳ ಏನು ಹೇಳಿ ಬಿಡುವಳೋ ಎಂದು ತವಕಿಸುತ್ತಿದ್ದಳು.

"ಅದೆಲ್ಲ ನಿನಗ್ಯಾಕೆ? ನೀವು ಗಂಡಹೆಂಡತಿ ಚೆನ್ನಾಗಿದೀರಲ್ಲ. ಇನ್ನು ನಮ್ಮ ಚಿಂತೆ ನಿನಗೇಕೆ?"

"ಹಾಗಾದರೆ ಖಂಡಿತಾ ಏನೋ ಒಡಕು ಇದೆ."

"ಏನಿಲ್ಲ. ಒಡಕೂ ಇಲ್ಲ. ಚೂರೂ ಇಲ್ಲ. ಮಕ್ಕಳಾಗದಿದ್ದರೆ ಗಂಡ ಹೆಂಡತಿಯ ಮಧ್ಯೆ ಪ್ರೀತಿ ಇಲ್ಲ ಅಂತ ಯಾಕೆ ಅರ್ಥ ಕಲ್ಪಿಸಬೇಕು?" ಸರಳ ರೇಗಿದಳು. "ನಾನು ಇಲ್ಲೇ ಇದ್ದರೆ, ನನ್ನನ್ನು ಏನೇನೋ ಕೇಳಿ ಸತಾಯಿಸ್ತೀಯ ನಾನು ಹೋಗ್ತೀನಿ" ಸರಳ ಹೊರಟಾಗ, ಸುಕನ್ಯ ತಡೆದಳು.

"ತಡಿ. ನನ್ನ ಪ್ರಶ್ನೆಗೆ ಉತ್ತರ ಹೇಳಿ ಹೋಗು. ನಿನಗೆ ಇಷ್ಟವಿಲ್ಲದಿದ್ದರೆ ಬೇಡ. ನಿನಗೆ ಗೊತ್ತಿರುವವರು ಯಾರಾದ್ರೂ ಇದ್ದರೆ ತಿಳಿಸು. ಅಥವಾ ಸಾವಿತ್ರೀನ ಒಪ್ಪಿಸು"

"ಸಾವಿತ್ರೀನ ನಾನೇಕೆ ಒಪ್ಪಿಸಲಿ? ಅವಳಿಗೆ ತಿಳಿಯುವುದಿಲ್ಲವೆ? ಅವತ್ತೇ ಬೇಡ ಅಂದಿದ್ದಳಲ್ಲ"

"ಅವತ್ತು ಬೇಡ ಎಂದಿದ್ದರೂ, ಮತ್ತೆ ಕೇಳಿದರಾಯ್ತು. ನೀನು ಒಪ್ಪುವುದಿಲ್ಲ ಎಂದು ಗೊತ್ತಿದ್ದರೂ ನಿನ್ನನ್ನು ಕೇಳಲಿಲ್ಲವೇ ಹಾಗೆ..... ಈಗ ನಿನ್ನ ಎದುರಿಗೇ

ಮತ್ತೆ ಕೇಳ್ತೀನಿ. ಏನು ಹೇಳ್ತಾಳೋ ಅವಳೇ ಹೇಳಲಿ.... ಏನೇ ಸಾವಿತ್ರಿ.... ಮುಕುಂದ ಬೇರೆ ಮದುವೆಯಾಗಿ ನಾನು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ತಪ್ಪಿಸಬೇಕು ಅಂತಿದ್ರೆ, ನನಗೆ ಸಹಾಯ ಮಾಡ್ತೀಯಾ? ಬಂಜೆ ಎನ್ನುವ ಅಪವಾದದ ಪಟ್ಟವನ್ನು ತಪ್ಪಿಸ್ತೀಯಾ?"

ಸಾವಿತ್ರಿ ನಿರುತ್ತರಳಾದಳು... ಸರಳ ಅಚ್ಚರಿಗೊಂಡಳು. ಆ ದಿನ ಅವಮಾನಿತಳಂತೆ ತನ್ನ ಕೈ ಹಿಡಿದು...... ಹೋಗೋಣ ಅಂದಿದ್ದವಳು, ಈ ದಿನ ಯಾವ ಉದ್ವೇಗವೂ ಇಲ್ಲದೇ ಸುಮ್ಮನೇ ನಿಂತಿದಾಳೆ...

"ಅಬ್ಬಾ.... ಇಬ್ಬರೂ ಒಂದಾಗಿದೀರಿ. ಸಾವಿತ್ರಿ ಪರವಾಗಿಲ್ಲ ನೀನೂನು.... ನಾನು ಏನೋ ಅಂತಿದ್ದೆ...ಯಾಕೆ ಮನಸ್ಸು ಬದಲಾಯಿಸಿ ಬಿಟ್ಟೆಯಾ?"

"ಸುಕನ್ಯಂಗೆ ಸಹಾಯ ಮಾಡಿದ್ರೆ ತಪ್ಪಾ! ತಪ್ಪು ಅಂತಿದ್ರೆ ಹೇಳಿಬಿಡು."

"ತಪ್ಪಿನ ಮಾತಲ್ಲ. ನಿನ್ನ ಭವಿಷ್ಯವೇನು ಅಂತ ಚಿಂತೆ."

"ನನ್ನ ಭವಿಷ್ಯ ಇನ್ನೇನಿದೆ? ಕಣ್ಣಿಲ್ಲದವಳಿಗೆ ಎಲ್ಲಾ ಕತ್ತಲೆಯೇ. ನಾನು ಯಾರಿಗೆ ಏನು ಮಾಡಬಲ್ಲೆ? ಇದು ನನ್ನಿಂದಾಗಬಹುದಾದ ಕೆಲಸ. ಅದಕ್ಕೆ ಒಪ್ತೀನಿ. ಆಮೇಲೆ ಬೇಕಾದರೆ ನಿನಗೂ ಒಂದು ಮಗೂನ ಹೆತ್ತು ಕೊಡ್ತೀನಿ"

"ಛೀ. ಸುಮ್ಮನಿರು. ಇಂತಹ ಮಾತು ಕೇಳುಕ್ಕೆ ಅಸಹ್ಯ."

"ನೀನು ಎಲ್ಲಾ ರೀತಿಯಿಂದಲೂ ಸರಿಯಾಗಿದೀಯಲ್ಲ, ಅದಕ್ಕೆ ನಮ್ಮ ಮಾತು ಅಸಹ್ಯವಾಗಿ ಕಾಣಿಸುತ್ತೆ. ನಾನು ಬಂಜೆ, ಅವಳು ಕುರುಡಿ.... ನಮ್ಮಿಬ್ಬರ ಮಾತುಕತೆ, ನಡೆನುಡಿ ನಿನಗೆ ಅಸಹ್ಯವಾಗದೇ ಇನ್ನೇನು? ನೀನು ಸರಳ ಅಂದರೆ ಸರಳ, ನಿಜವಾಗಿಯೂ ಒಳ್ಳೆಯ ಹುಡುಗಿ ಎಂದು ಎಲ್ಲರೂ ನಿನ್ನನ್ನು ಹೊಗಳಿದಾಗ, ನಾನು ನಿನ್ನ ಬಗ್ಗೆ ಹೊಟ್ಟೆ ಉರಿದುಕೊಳ್ಳುತ್ತಿದ್ದೆ. ಆದರೆ ನೀನು ಹೆಸರಿಗೆ ತಕ್ಕವಳಲ್ಲ" ಸುಕನ್ಯ ಹಂಗಿಸಿ ನುಡಿದಾಗ, ಸರಳ ಬಿರಬಿರನೆ ಮನೆಯಿಂದಾಚೆ ಬಂದಳು. ಒಂದೆರಡು ಗಳಿಗೆ ನಿಂತಿದ್ದವಳು ಮತ್ತೆ ಒಳಗೆ ಬಂದಳು.

"ಸರಿ. ನಿಮಿಷ್ಟದಂತೆಯೇ ಆಗಲಿ. ಮಧ್ಯಸ್ಥಿಕೆ ವಹಿಸಿ ನಾನೇಕೆ ಕೆಟ್ಟವಳಾಗಲಿ? ಇದರಿಂದ ನನಗೆ ಯಾವ ಲಾಭವೂ ಇಲ್ಲ. ನಷ್ಟವೂ ಇಲ್ಲ. ನಾನಿನ್ನು ಬರ್ತೀನಿ"

"ಸರಳಾ...." ಸಾವಿತ್ರಿ ಕರೆದಳು "ಸಿಟ್ಟು ಮಾಡ್ಕೊಂಡು ಹೋಗಬೇಡ. ನಿನಗೆ ಲಾಭವಿಲ್ಲದಿರಬಹುದು. ನನಗೆ ಲಾಭವಿದೆ. ಸುಕನ್ಯ ಕೊಡುವ ಹಣದಿಂದ ನನ್ನ ಕಣ್ಣಿನ ಆಪರೇಷನ್ ಮಾಡಿಸಿಕೊಳ್ಳಬಹುದು. ಅಪ್ಪನ ಹೆಸರಿನಲ್ಲಿ ಒಂದು

ಅಂಥರ ಆಶ್ರಮವನ್ನು ಕಟ್ಟಿಸಬಹುದು ಅಥವಾ ಒಂದು ಕಲಾಮಂಟಪವನ್ನು ಕಟ್ಟಿಸಬಹುದು. ಯಾವುದಾದರೂ ನಾಲ್ಕು ಜನರಿಗೆ ಉಪಯೋಗವಾಗುವಂತಹ ಕೆಲಸ ಮಾಡಿದರೆ ನನ್ನಿಂದ ಸಹಾಯವಾದಂತಾಗುತ್ತಬ. ಇಲ್ಲದಿದ್ದರೆ ನಾನು ಯಾರಿಗೆ ಏನು ಮಾಡಬಲ್ಲೆ?'' ಸರಳ ಏನನ್ನೂ ನುಡಿಯದೇ ಹೊರಟೇ ಹೋದಳು.

''ಅವಳು ಹೊರಟು ಹೋದಳು. ನೀನು ಸುಮ್ಮನಿರು. ಬೇಡವೇ ಬೇಡ ಅಂತೇನೂ ಅನ್ನಲಿಲ್ಲವಲ್ಲ. ಅಮ್ಮ ಬರೋದರೊಳಗೆ ಮೊದಲನೆಯ ಹಂತದ ಪ್ರಯೋಗ ಮುಗಿದಿರಬೇಕು.''

''ಆಮೇಲೆ ಅಮ್ಮ ಏನಂತಾಳೋ....''

''ಏನೂ ತಪ್ಪಿಲ್ಲದಿದ್ದರೂ, ಅಮ್ಮ ಮೊದಲಿನಿಂದಲೂ ನಮ್ಮನ್ನೇ ಅನ್ನುತ್ತಿದ್ದಳು. ಈಗ ಸ್ವಲ್ಪ ಜಾಸ್ತಿ ಅನ್ನಬಹುದು, ಅಷ್ಟೇ.... ಆದರೆ ಹೊರಗಿನವರಿಗೆ ಹೇಳಿಕೊಂಡು ಬರುವುದಿಲ್ಲವಲ್ಲ.''

ಎರಡು ದಿನಗಳ ನಂತರ, ಸುರೇಶ ಬಾಂಬೆ ಪ್ಲೇನ್ ಹತ್ತಿದ ಮೇಲೆ, ಸರಳ ತನ್ನ ಲಗ್ಗೇಜ್‌ನೊಂದಿಗೆ ತಾಯಿಯ ಮನೆಗೆ ಬಂದಳು.

''ಅರೇ..ಬಂದೇ ಬಿಟ್ಟು! ನಾನು, ನೀನು ವುತ್ತೆ ಬರುಲ್ಲ ಅಂತ ಅಂದ್ಕೊಂಡಿದ್ದೆ.'' ಸುಕನ್ಯ ಗೇಲಿ ಮಾಡಿದಳು.

''ನಾನು ಬರಬಾರದು ಅಂತಾನೇ ಅಂದ್ಕೊಂಡಿದ್ದೆ. ನನ್ನ ಅತ್ತೇದೇ ಬಲವಂತ. ಸಾವಿತ್ರಿ ಒಬ್ಬಳೇ ಇದಾಳೆ. ಸುಕನ್ಯಳಿಗೂ ನಿಶ್ಯಕ್ತಿ.... ಅವಳು ಬರ್ತಾಳೋ ಇಲ್ಲವೋ.... ನೀನು ಹೋಗು ಅಂತ. ನಮ್ಮ ಮನೆಯ ಹುಳುಕು ಅವರಿಗೇಕೆ ಗೊತ್ತಾಗಬೇಕು ಅಂತ ಬಂದು ಬಿಟ್ಟೆ.''

''ನಿನಗಿಂತ ನಿಮ್ಮ ಅತ್ತೇನೇ ವಾಸಿ. ಅವರಿಗೆ ನನ್ನ ಬಗ್ಗೆ ಅನುಕಂಪ.''

''ಅವರಿಗೆ ನಿಜವಾದ ಸ್ಥಿತಿ ತಿಳಿದರೆ, ಅನುಕಂಪ ಹೋಗಿ, ಅಪವಾದ ಹೊರುವ ಸ್ಥಿತಿ ಬರುತ್ತೆ.''

''ನೀನೇನೇ ಹೇಳು. ನಿಮ್ಮತ್ತೆ ಅಂಥವರಲ್ಲ. ಈಗಿನ ಕಾಲಕ್ಕೆ ಹೊಂದಿಕೊಳ್ಳುವಂಥವರು. ನೀನೇ ಈ ಕೆಲಸ ಮಾಡ್ತೀನಿ ಅಂದಿದ್ರೂ ಅವರು ಬೇಡ ಅಂತ ಅನ್ನುತ್ತಿರಲಿಲ್ಲ. ಅವರಿಗೆ ನಿನ್ನಂತಹ ಮಡಿವಂತಿಕೆಯ ಸೊಸೆ! ಹಳ್ಳಿಯ ಸಂಪ್ರ ದಾಯಸ್ಥ ಕುಟುಂಬಕ್ಕೆ ಸೇರಿದ ನಾನೇ ಈ ಕೆಲಸಕ್ಕೆ ಮುಂದಾಗಿದೀನಿ.... ಅಂಥಾದ್ದರಲ್ಲಿ ನೀನು ಆ ಮನೆಯ ಸೊಸೆಯಾಗಿ, ಸುರೇಶನ ಹೆಂಡತಿಗಾಗಿ, ಹಿಂಜರಿತಿದೀಯಲ್ಲ''

"ಸಾವಿತ್ರಿಗೆ ತೊಂದರೆ ಆಗಬಾರದು ಅಂತ ಹಾಗೆ ಹೇಳಿದ್ದೆ. ಆದರೆ ಈಗ ಸಾವಿತ್ರಿಯೇ ಧೈರ್ಯವಾಗಿದಾಳಲ್ಲ... ಇನ್ನು ನನಗೇನು! ನಾನು ಈ ಮಾತಿಗೇ ಬರುವುದಿಲ್ಲ."

"ನಿನ್ನ ಮಾತು ಬೇಡ. ನಿನ್ನ ಸಹಾಯಬೇಕು." ಸುಕನ್ಯ ನಕ್ಕಾಗ ಸರಳಂಗೆ ನಗಬೇಕೆನಿಸಲಿಲ್ಲ.

"ಅಂತೂ ಚೆನ್ನಾಗಿ ನಾಟಕ ಆಡ್ತೀಯ. ಇದರಿಂದ ಗೆಲವು ನಿನಗಿರುವಾಗ ನನ್ನ ಸಹಾಯವೂ ನಿನಗಿದೆ. ಆಲ್‌ದಿ ಬೆಸ್ಟ್" ಅಂದಳು. ತಾನು ಇನ್ನು ಏನೂ ಮಾಡಬಹುದು. ಇಷ್ಟೇ ತಾನೇ ಎಂದೆನಿಸಿತ್ತು.

"ಥ್ಯಾಂಕ್ಸ್" ಎಂದ ಸುಕನ್ಯ ತನ್ನ ಯೋಜನೆಗಳನ್ನು ಹೇಳಿದಳು.

"ಅಮ್ಮ ಬರುವುದರೊಳಗೆ ಮೊದಲ ಹಂತದ ಪ್ರಯೋಗ ಮುಗಿದಿರಬೇಕು. ಆಮೇಲೆ ಅಮ್ಮನ ಕೈಲಿ ಏನೂ ಇರುಲ್ಲ."

"ಅಮ್ಮ ಸಿಟ್ಟು ಮಾಡಿಕೊಂಡು ಎಲ್ಲಾದರೂ ಹೊರಟು ಹೋದರೆ?"

"ಹಾಗೆ ಮಾಡುಲ್ಲ. ಅಮ್ಮನೂ ಹೆಂಗಸೇ ಅಲ್ಲವೆ? ಎಲ್ಲಾ ಹೇಳಿದ್ರಾಯ್ತು. ಅಲ್ಲದೇ ಹದಿನೈದು ಇಪ್ಪತ್ತು ದಿನ ಹೊರಗೇ ಇದ್ದು ಅಮ್ಮನಿಗೆ ನಮ್ಮ ಮೇಲೆ ಸ್ವಲ್ಪ ಪ್ರೀತಿ ವಾತ್ಸಲ್ಯಾನೂ ಬಂದಿರುತ್ತೆ. ಹೊರಗೆ ತಿರುಗಿ ಸಂಕುಚಿತ ಮನೋ ಭಾವವೂ ಹೋಗಿರುತ್ತೆ. ನಿನ್ನ ದೇವರೇ ನಮಗೆ ಈ ಸಲಹೆಯನ್ನು ಕೊಟ್ಟ ಅಂದ ರಾಯ್ತು ಅಥವಾ ಒಂದುವೇಳೆ ಮೊದಲಿನ ತರಹವೇ ಆಡಿದರೆ, ಆಗಿನ ಹಾಗೆ ಕೇರ್ ಮಾಡದಿದ್ದರಾಯ್ತು."

"ನಿನ್ನ ಧೈರ್ಯ ನನಗಿಲ್ಲ"

"ಹೌದು. ನನ್ನ ಧೈರ್ಯ ನಿನಗಿಲ್ಲ. ನಾನು ಧೈರ್ಯಗೆಟ್ಟಿದ್ದರೆ, ಅಪ್ಪ ಸತ್ತ ಮೇಲೆ ನಾವುಗಳು ಸತ್ತು ಹೋಗಿ ಬಿಡಬೇಕಾಗಿತ್ತು. ಈ ಸ್ಥಿತಿಗೆ ಬರುಕ್ಕೆ ಆಗುತ್ತಿರಲಿಲ್ಲ."

"ಆದರೆ, ಮುಕುಂದ, ಸುರೇಶ ನಮ್ಮ ಬಗ್ಗೆ ಏನಂದು ಭಾವಿಸ್ತಾರೋ...?"

"ಏನೂ ಭಾವಿಸುಲ್ಲ. ಪ್ರಚಂಡ ಮಹಿಳೆಯರು ಅಂತ ಬಿರುದು ಕೊಡ್ತಾರೆ ನೋಡ್ತಿರು.". ಸುಕನ್ಯ ಚಪ್ಪಾಳೆ ತಟ್ಟಿ ನಕ್ಕಾಗ ಸರಳ ಸಾವಿತ್ರಿಯರೂ ನಕ್ಕರು.

ಮಾರನೇ ದಿನವೇ ಬೆಳಿಗ್ಗೆ ಸಾವಿತ್ರಿಯನ್ನು ನರ್ಸಿಂಗ್ ಹೋಂಗೆ ಕರೆದುಕೊಂಡು ಹೋಗಿ ಅಡ್ಮಿಟ್ ಮಾಡಿದರು. ಈ ಬಗ್ಗೆಯೇ ಅವಳ ದಿನಚರಿಯ ಬಗ್ಗೆ ತಿಳಿದು ಕೊಂಡಿದ್ದರಿಂದ, ತಮ್ಮ ಪ್ರಯೋಗಕ್ಕೆ ಸಕಾಲವಾಗಿದೆ ಎಂದು ತೀರ್ಮಾನಿಸಿದ್ದರು.

ತಮಗೆ ಬೇಕಾದ ವಿವರಗಳನ್ನು ಕೇಳಿ ತಿಳಿದುಕೊಂಡರು, ಕೆಲವು ಇಂಜೆಕ್ಷನ್‌ಗಳನ್ನು ಕೊಟ್ಟರು. ಅವಳಿಗೆ ಮತ್ತಿನಿಂದ ನಿದ್ದೆ ಬರುವಂತಾಯಿತು. ಹೊಕ್ಕಳಿನ ಕೆಳಭಾಗದಲ್ಲಿ ಸಿರಿಂಜ್ ಮೂಲಕ ತಾವು ಈ ಮೊದಲೇ ಸಿದ್ಧಪಡಿಸಿಟ್ಟುಕೊಂಡಿದ್ದ, ಪ್ರಣಾಳಿಕೆಯಲ್ಲಿದ್ದ ದ್ರವರೂಪದ ವಸ್ತುವನ್ನು ಸಾವಿತ್ರಿಯ ಗರ್ಭಕೋಶಕ್ಕೆ ಹನಿಹನಿಯಾಗಿ ಇಳಿಸಿದರು.

“ಇನ್ನೂ ಇಪ್ಪತ್ತು ಗಂಟೆ ಅವಳು ಅಲ್ಲಾಡದಂತೆ ನೋಡಿಕೊಳ್ಳಬೇಕು. ಅವಳ ಕೈ ಕಾಲುಗಳನ್ನು ಮಂಚಕ್ಕೆ ಕಟ್ಟಿ ಬಿಡಿ...ಅವಳು ಕೆಮ್ಮಬಾರದು, ಸೀನಬಾರದು, ಆದ್ದರಿಂದ ಯಾರಾದರೊಬ್ಬರು ಅವಳ ಬಳಿಯಲ್ಲಿಯೇ ಇರಬೇಕು. ನನ್ನ ಅನುಮತಿ ಇಲ್ಲದೇ ತಿನ್ನಲು ಕುಡಿಯಲು ಕೊಡಬೇಡಿ” ಎಂದಿದ್ದರು.

ಸಾವಿತ್ರಿಗೆ ಎಚ್ಚರವಾದಾಗ ಕೈಕಾಲು ಕಟ್ಟಿದುದರ ಅರಿವಾಯಿತು. ‘ಸರಳಾ’ ಎಂದು ಕರೆದಳು. ಅಲ್ಲೇ ಕೂತಿದ್ದ ನರ್ಸು, “ಈಗ ಯಾರನ್ನೂ ಬಿಡುವುದಿಲ್ಲ.. ನಿನಗೇನು ಬೇಕು?“ ಎಂದು ಕೇಳಿದಳು.

“ಏನೂ ಬೇಡ. ಯಾರೂ ಇಲ್ವಾ! ಹೊಕ್ಕಳ ಕೆಳಗೆ ಏಕೋ ನೋಯ್ತಿದೆ.”

“ಇಲ್ಲ. ನಾನಿದೀನಿ” ಎನ್ನುತ್ತಾ ನರ್ಸು ಮತ್ತೊಂದು ಇಂಜೆಕ್ಷನ್ ಚುಚ್ಚಿದಳು. ಕ್ಷಣಮಾತ್ರದಲ್ಲಿ ಸಾವಿತ್ರಿಗೆ ಮಂಪರು ಕವಿಯಿತು. ನಿದ್ದೆಯ ಆಳಕ್ಕೆ ಇಳಿದಳು. ನೋವಿನ ಅನುಭವ ಮರೆಯಾಯಿತು.

ಹೀಗೇ ಎರಡು ದಿನಗಳು ಕಳೆದವು. ಸಾವಿತ್ರಿ ಯಾವುದೋ ಲೋಕಕ್ಕೆ ಹೋಗಿದ್ದವಳಂತೆ ಎಚ್ಚರಗೊಂಡಳು. ಡಾಕ್ಟರು ಮಾತನಾಡುತ್ತಿರುವುದು ಕೇಳಿಸಿತು.

“ಗುಡ್, ಒಳಗಡೆ ಸೆಟ್ಲ್ ಆಗಿದೆ. ಡಿಸ್ಚಾರ್ಜ್ ಆದ ಸೂಚನೆ ಇಲ್ಲ. ಆದರೂ ಇನ್ನೂ ಹತ್ತು ದಿನ ಅವಳು ಕಂಪ್ಲೀಟ್ ರೆಸ್ಟ್‌ನಲ್ಲಿರಬೇಕು. ಯಾವುದೇ ಕಷ್ಟಕರವಾದ ಕೆಲಸ ಮಾಡಿ, ಆಯಾಸ ಮಾಡಿಕೊಳ್ಳಬಾರದು. ಹತ್ತು ದಿನಗಳ ನಂತರ ಮತ್ತೆ ಚೆಕಪ್ ಮಾಡಿ ನೋಡ್ತೀವಿ. ಸ್ಕ್ಯಾನಿಂಗ್ ಮಾಡ್ತೀವಿ. ಪ್ರೋಗ್ರೆಸ್ ಹೇಗಿದೆ ಅಂತ ಗೊತ್ತಾದ ಮೇಲೆ ಮುಂದೇನು ಮಾಡಬೇಕು ಅಂತ ಹೇಳ್ತೀನಿ.”

ಸಾವಿತ್ರಿಗೆ ಒಂದೇ ಜಾಗದಲ್ಲಿ ಮಲಗಿ ಬೇಜಾರಾಗಿತ್ತು. ಎದ್ದು ಓಡಾಡಲೂ ಭಯ. ಎಡವಿ, ತೊಡರಿ ಬಿದ್ದರೇ....?

ಸರಳ ಅವಳ ಬೇಜಾರನ್ನು ಕಳೆಯಲು ರೇಡಿಯೋ ತಂದಿಟ್ಟಳು. ಕ್ಯಾಸೆಟ್‌ಗಳನ್ನು ಕೊಂಡು ತಂದಳು. ಅವಳಿಗೆ ಕಣ್ಣು ಕಾಣಿಸುತ್ತಿರಲಿಲ್ಲವಾದ್ದರಿಂದ ಮನೆಯಲ್ಲಿ

ಸುಧಾರಿಸುವುದು ಕಷ್ಟವೆಂದು, ಹತ್ತು ದಿನವೂ ಅವಳು ನರ್ಸಿಂಗ್ ಹೋಂನಲ್ಲಿರ ಬೇಕಾಯ್ತು. ಸರಳ ಸುಕನ್ಯ ಯಾರಾದರೊಬ್ಬರು ಅವಳು ಜತೆಯಲ್ಲಿರುತ್ತಿದ್ದರು.

ಸಾವಿತ್ರಿಯ ಬಗ್ಗೆ ಅಜ್ಜಿ ವಿಚಾರಿಸದಿರುವಂತೆ ಎಚ್ಚರಿಕೆ ವಹಿಸಿದ್ದಳು. ಆದರೂ ಒಂದು ದಿನ ಆ ಅಜ್ಜಿ ಕೇಳಿತ್ತು.

"ಯಾಕೆ? ಈ ನಡುವೆ ಸಾವಿತ್ರಿ ಸಂಗೀತಾನೇ ಹಾಡ್ತಿಲ್ಲವಲ್ಲ?"

"ಅವಳಿಗೆ ಹುಷಾರಿಲ್ಲ. ಮಲಗಿದಾಳೆ." ಕೂತ ಜಾಗದಲ್ಲಿ ಒಂದಿಷ್ಟು ತಿಂದು ಸದಾ ತೂಕಡಿಸುವ ಅಜ್ಜಿ ಅವರಿಬ್ಬರ ಮಾತನ್ನು ನಂಬಿತ್ತು.

ಹತ್ತು ದಿನ ಕಳೆದ ನಂತರ, ಸಾವಿತ್ರಿ ಡಾಕ್ಟರರ ಸಲಹೆಗಳನ್ನು ಕೇಳಿ ತಿಳಿದು ಕೊಂಡು ಮನೆಗೆ ಬಂದಳು. ಅವಳನ್ನು ಇಬ್ಬರೂ ಚೆನ್ನಾಗಿ ನೋಡಿಕೊಂಡರು.

ಇಪ್ಪತ್ತೈದು ದಿನಗಳು ಕಳೆದವು, ಸುಭದ್ರಮ್ಮ ಉತ್ತರಭಾರತ ಪ್ರವಾಸ ಮುಗಿಸಿ, ವಾಪಸ್ಸು ಬಂದಳು. ಖಾಯಿಲೆಯಿಂದ ಎದ್ದವಳಂತೆ ಕಾಣುತ್ತಿದ್ದ ಸಾವಿತ್ರಿಯನ್ನು ನೋಡಿದಳು. ಏನಾಗಿದೆ ಇವಳಿಗೆ? ಯಾಕೆ ಹೀಗಾಗಿದಾಳೆ!

"ಜ್ವರ ಬಂದಿತ್ತು ಈಗ ಹುಷಾರಾಗಿದಾಳೆ." ಸುಕನ್ಯ ಹೇಳಿದಳು.

ಸಾವಿತ್ರಿ ಎಂದೂ ತನ್ನನ್ನು ಬಿಟ್ಟು ಇದ್ದವಳಲ್ಲ. ಅದಕ್ಕೆ ಹೀಗಾಗಿದೆ ಎಂದು ಕೊಂಡು, ಮುಚ್ಚಟೆಯಿಂದ ಹಾಲು, ಹಣ್ಣನ್ನು ಕೊಟ್ಟು ಉಪಚರಿಸಿದಳು. ಆದರೆ ಸಾವಿತ್ರಿಗೆ ಆ ಉಪಚಾರ ಕೆಲವೇ ದಿನಗಳಲ್ಲಿ ಅಸಹ್ಯವಾಗತೊಡಗಿತು. ತಲೆನೋವು ವಾಂತಿ ಪ್ರಾರಂಭವಾಯಿತು.

ಸುಕನ್ಯ ಗಾಭರಿಯಾದಳು. ಸುಭದ್ರಮ್ಮ ನೋಡಿ, "ಅವಳಿಗೆ ಬೇಕಾದ ಶಕ್ತಿಯೇ ಇಲ್ಲವಾಗಿದೆ. ಡಾಕ್ಟರಿಗೆ ತೋರಿಸಿ ಬಾ" ಹೇಳಿದ್ದಳು.

ಸರಳ ಸುಕನ್ಯ ಮುಖ ಮುಖ ನೋಡಿಕೊಂಡರು. ಡಾಕ್ಟರ ಹತ್ತಿರ ಕರೆದು ಕೊಂಡು ಹೋದರು. ಅವರು ಗಾಭರಿ ಏನಿಲ್ಲ, ಇದು ನಡೆಯಬೇಕಾದದ್ದೇ ಎಂದು ಹೇಳಿ, ವಾಂತಿ ವಾಕರಿಕೆ ನಿಲ್ಲುವಂತೆ ಮಾತ್ರೆಗಳನ್ನು ಕೊಟ್ಟು ಸುಸ್ತು ಮಾಡಿಕೊಳ್ಳದಂತೆ ಹೆಚ್ಚು ರೆಸ್ಟ್ ತೆಗೆದುಕೊಳ್ಳಬೇಕೆಂದು ಹೇಳಿ ಕಳಿಸಿದಳು.

ಸಾವಿತ್ರಿ ಚೆನ್ನಾಗಿ ಚೇತರಿಸಿಕೊಂಡಳು. ಮುಖಕ್ಕೆ ಕಳೆ ಏರಲಾರಂಭಿಸಿತ್ತು. ಮೈಯ ಸುತ್ತಳತೆ ದೊಡ್ಡದಾಗುತ್ತಾ ಇರುವುದು ಗೊತ್ತಾಗುತ್ತಿತ್ತು. ಸುಭದ್ರಮ್ಮನ ಅನುಭವದ ಕಣ್ಣುಗಳು ಸಾವಿತ್ರಿಯ ಮೈಯ ಮೇಲೆ ಹರಿದಾಡಿದವು. ಗಾಭರಿಯಿಂದ ಕುಸಿದು ಬೀಳುವಂತಾಯ್ತು. ಮಗಳ ರಟ್ಟೆ ಹಿಡಿದೆಳೆದು ಕೇಳಿದಳು.

"ಏನೇ ಸಾವಿತ್ರಿ.... ಏನಾಗಿದೆ ನಿಂಗೆ? ನನಗೇನೋ ಅನುಮಾನ...!"

"ಏನಾಗಿದೆ ನಂಗೆ! ನಂಗೊತ್ತಿಲ್ಲ."

"ಯಾರೂ ಇಲ್ಲದಾಗ ಮುಕುಂದ ಏನಾದ್ರೂ ಬಂದಿದ್ನಾ....?"

"ಯಾಕೆ? ನಂಗೆ ಜ್ಞಾಪಕವಿಲ್ಲ..." ಸಾವಿತ್ರಿ ಬಿಳುಪಾಗಿದ್ದಳು.

"ಮುಕುಂದ ನಿನ್ನನ್ನು ಮುಟ್ಟಿದ್ನಾ?"

"ಥೂ ಹೋಗಮ್ಮ.... ಏನಮ್ಮಾ ನೀನು? ಅವರು ಏಕೆ ಹಾಗೆ ಮಾಡ್ತಾರೆ?"

"ಯಾವನೋ ಬಂದು ನಿನ್ನನ್ನು ಕೆಡಿಸಿದಾನೆ. ಇಲ್ಲದಿದ್ದರೆ ನಿನಗೆ ಈ ಸ್ಥಿತಿ ಖಂಡಿತಾ ಬರುತ್ತಿರಲಿಲ್ಲ"

ಸಾವಿತ್ರಿ ಬೆದರಿದಳು. ತಾನೀಗ ಏನು ಹೇಳಬೇಕೆಂದು ತಿಳಿಯಲಿಲ್ಲ. ಈ ಸುಕನ್ಯ ಎಲ್ಲಿ ಹಾಳಾದಳೋ, ಅವಳ ಮಾತನ್ನು ಕೇಳಿ, ಅವಳಿಗೆ ಸಹಾಯ ಮಾಡುಕ್ಕೆ ಹೊರಟರೆ, ನನ್ನ ಸಹಾಯಕ್ಕೆ ಈಗ ಅವಳೇ ಇಲ್ಲವಲ್ಲ ಎಂದುಕೊಂಡು,

"ನಂಗೊತ್ತಿಲ್ಲ. ನಂಗೇನಾಗಿದೆ ಅಂತ ನಂಗೊತ್ತಿಲ್ಲ." ಭಯದಿಂದ ನುಡಿದಳು.

"ಹೆದರಬೇಡ ಸಾವಿತ್ರಿ, ಹೇಳು, ನಿನಗೆ ಕಣ್ಣು ಕಾಣುವುದಿಲ್ಲವೆಂದು ತಿಳಿದವನು ಯಾರೋ ಬಂದು ಮಾಡಬಾರದ್ದನ್ನು ಮಾಡಿದಾರೆ. ಏನು ನಡೀತು ಅಂತ ಹೇಳು. ಇವತ್ತೇ ಡಾಕ್ಟರ ಹತ್ತಿರ ಕರೆದುಕೊಂಡು ಹೋಗಿ ಔಷಧಿ ಕೊಡಿಸ್ತೀನಿ."

ಹಾಗಾದ್ರೆ ಸುಕನ್ಯ ಏನನ್ನೂ ಹೇಳಿಲ್ಲ. ಈಗ ನಡೆದಿರುವ ವಿಚಾರವನ್ನು ಹೇಳಿದರೆ ಅಮ್ಮ ನಂಬುತ್ತಾಳೋ ಇಲ್ಲವೋ, ಅಥವಾ ಅವಳಿಗೆ ಅರ್ಥವಾಗದಿರಬಹುದು. ಅಥವಾ ಇಷ್ಟ ಪಡದೇ ಎಲ್ಲರನ್ನು ಬೈಯಬಹುದು ತಾನೀಗ ಎಲ್ಲವನ್ನೂ ಹೇಳಬೇಕೋ, ಹೇಳಬಾರದೋ.... ತನಗೇನೋ ಮೋಸವಾಗಿದೆ ಅಂತ ತಿಳಿದುಕೊಂಡಿದಾಳೆ, ಅದನ್ನೇ ಹೇಳಿದರಾಯ್ತು, ಆಮೇಲೆ ಸುಕನ್ಯ ಏನನ್ನಾದರೂ ಹೇಳಿಕೊಳ್ಳಲು ಎಂದುಕೊಂಡು,

"ನೀನು ಬೈಯುಲ್ಲ ಅಂದರೆ ಹೇಳ್ತೀನಿ."

"ಹೊಗಳಿಸಿಕೊಳ್ಳುವಂತಹ ಕೆಲಸವನ್ನೇ ಮಾಡಿದೀಯ. ಏನಾಯ್ತು ಅಂತ ಬೊಗಳು" ಮತ್ತೆ ರೇಗಿದಳು.

"ಮತ್ತೆ,.... ಒಂದಿನ, ಸರಳ ಇನ್ನು ಬ್ಯಾಂಕಿನಿಂದ ಬಂದಿರಲಿಲ್ಲ. ಮುಕುಂದನ ಜತೆ ಸುಕನ್ಯ ಮಾರ್ಕೆಟ್ಟಿಗೆ ಹೋಗಿದ್ದಳು. ನಾನು ಕಿಟಕಿಯ ಬಳಿ ಕೂತಿದ್ದೆ. ಯಾರೋ ಹಿಂದೆ ಬಂದು ನಿಂತಂತಾಯ್ತು. ಯಾರೆಂದು ತಿಳಿಯಲಿಲ್ಲ. ಅಷ್ಟರಲ್ಲಿ ಒಂದು ಕೈ

ನನ್ನ ಬಾಯಿಗೆ ಒತ್ತಿ ಹಿಡಿದು, ಯಾರೋ ನನ್ನನ್ನು ದರದರನೆ ರೂಮಿಗೆ ಎಳೆದು ಕೊಂಡು ಹೋದ ಹಾಗಾಯಿತು ಕಿರುಚಿದೆ, ಕೂಗಿದೆ. ಯಾರೂ ಬರಲಿಲ್ಲ. ಆ ವ್ಯಕ್ತಿಯೂ ಮಾತನ್ನಾಡಲಿಲ್ಲ. ಆಮೇಲೇನಾಯ್ತು ಅಂತ ನನಗೆ ತಿಳಿಯಲಿಲ್ಲ. ಎಚ್ಚರ ವಾದಾಗ ಯಾರೂ ಇದ್ದಂತಿರಲಿಲ್ಲ. ನಾನು ಮಂಚದ ಮೇಲೆ ಮಲಗಿದ್ದೆ. ಮೈ ಕೈ ನೋಯುತ್ತಿತ್ತು. ಸರಳ ಸುಕನ್ಯ ಯಾರೂ ಬಂದಿರಲಿಲ್ಲ. ಎದ್ದು ಆಚೆ ಬಂದು ಬಾಗಿಲನ್ನು ತಡಕಿದೆ. ಹಾಕಿದ ಬಾಗಿಲು ಹಾಕಿದ ಹಾಗೇ ಇತ್ತು. ಯಾರು ಎಲ್ಲಿಂದ ಬಂದರು ಅಂತ ನನಗೆ ಗೊತ್ತಾಗಲೇ ಇಲ್ಲ.'' ಸಾವಿತ್ರಿ ಸುಳ್ಳಿನ ಸರ ಪೋಣಿಸಿದಳು. ಬೆವರನ್ನು ಒರೆಸಿಕೊಂಡಳು.

''ತಕ್ಷಣವೇ ಸರಳಂಗೆ, ಸುಕನ್ಯಂಗೆ ಹೇಳಬಾರದಾಗಿತ್ತಾ? ಆ ಅಜ್ಜಿ ಎಲ್ಲಿಗೆ ಹೋಗಿತ್ತು.... ಅಕ್ಕಪಕ್ಕದವರನ್ನು ಕೂಗಿದ್ರೆ ಯಾರಾದ್ರೂ ಬರುತ್ತಿದ್ದರು.''

''ಅಕ್ಕಪಕ್ಕದವರು ಬಂದು ನನ್ನನ್ನೇ ಆಡಿಕೊಂಡು ನಗುತ್ತಿರಲಿಲ್ವೇನಮ್ಮ? ಕಣ್ಣು ಕಾಣದವಳನ್ನು ಕಿವಿಕೇಳದ ಮಂದ ಮುದುಕಿಯ ಜತೆ ನನ್ನನ್ನು ಬಿಟ್ಟು ಹೋಗಿದಾರೆ ಅಂತ ಎಲ್ಲಾ ಆಡಿಕೊಳ್ಳುತ್ತಿದ್ದರು. ಗೊತ್ತಿಲ್ಲದವರಿಗೂ ನಾನೇ ಈ ವಿಷಯವನ್ನು ತಿಳಿಸಿದ ಹಾಗಾಗುತ್ತಿತ್ತು. ಆ ನಂತರ, ಅವರುಗಳೇ ಯಾರೂ ಇಲ್ಲ ದಾಗ ನನ್ನನ್ನು ಮಾತನಾಡಿಸುವ ನೆಪದಲ್ಲಿ ಬರಲು ನೋಡುತ್ತಿದ್ದರು. ದಿನಾ ಅದೇ ಕೆಲಸ ನಡೀತಿತ್ತು ಅಷ್ಟೇ....'' ಸಾವಿತ್ರಿ ಸುಳ್ಳು ಹೇಳುವುದರಲ್ಲಿ ಮುಂದಾದಳು.

''ಥೂ ಪ್ರಾರಬ್ಧ. ಇಂತಹ ಅನಿಷ್ಟ ಕೆಲಸ ನಡೆದಾಗಲೂ ಸುಮ್ಮನಿದ್ಯಾ?''

''ಮತ್ತಿನ್ನೇನು? ನಾನೊಬ್ಬಳೇ ಇದ್ದಾಗ ಯಾವನೋ ಬಂದು ನನಗೆ ತಿಳಿಯ ದಂತೆ ರೇಪ್ ಮಾಡಿದ ಅಂತ ಬೀದಿಗೆಲ್ಲಾ ತಿಳಿಸಬೇಕಾಗಿತ್ತಾ?''

''ಬಾಯ್ಮುಚ್ಚು. ಆಗಿರುವುದು ಅಷಡ್ಡಾಳ ಕೆಲಸ. ಮಾತನಾಡ್ತೀಯಲ್ಲ. ನಿನಗೆ ಬಂದಿರುವ ಸ್ಥಿತಿ ಏನೂಂತ ಗೊತ್ತಾ ನಿನಗೆ?''

''ನನಗೇನು ಗೊತ್ತಿತ್ತು? ಹೀಗಾಗುತ್ತೆ ಅಂತ?''

''ಆ ಡಾಕ್ಟರು ಅದೇನು ನೋಡಿದಳೋ... ಅವಳಿಗೆ ತಿಳಿಯಲಿಲ್ವೆ?''

''ನಂಗೇನು ಗೊತ್ತು? ನೀನೇ ಡಾಕ್ಟರ ಹತ್ತಿರ ಕರೆದುಕೊಂಡು ಹೋಗು''

''ಹೂಂ. ಮೊದಲು ಅವರಿಬ್ಬರೂ ಬರಲಿ. ಅವರಿಬ್ಬರ ಜತೆ ನಿನ್ನನ್ನು ಬಿಟ್ಟು ಹೋದುದಕ್ಕೆ ತಂದಿಟ್ಟರಲ್ಲ ನನ್ನ ಕುತ್ತಿಗೆಗೆ, ಸರಳ ಅಂತೂ ಕೆಲಸಕ್ಕೆ ಹೋಗಿದ್ದಳು ಅಂದರೆ, ಗಂಡನ ಜತೆ ತಿರುಗಾಡಕ್ಕೆ ಹೋಗುವ ಅವಾಂತರವೇನಿತ್ತು ಇವಳಿಗೆ?

ಬರಲಿ ಇಬ್ಬರೂ, ಚೆನ್ನಾಗಿ ಛೀಮಾರಿ ಹಾಕ್ತೀನಿ. ಮನೆಯ ಮರ್ಯಾದೆ ಕಳೆದು ಬಿಟ್ಟರು."

"ಅವರಿಬ್ಬರಿಗೂ ನಾನು ಹೇಳಲೇ ಇಲ್ಲ. ಅವನು ಮತ್ತೆ ಮತ್ತೆ ಬಂದಿರುತ್ತಿದ್ದರೆ ಹೇಳುತ್ತಿದ್ದೆನೋ ಏನೋ... ನಾನಾಗಿಯೇ ಎಲ್ಲರಿಗೂ ಹೇಗಮ್ಮ ಹೇಳಲಿ? ಮರ್ಯಾದೆ ಇಲ್ಲದೇ ಹೇಗಮ್ಮ ಹೇಳೋದು!"

"ನೀನಂತೂ ಸುಮ್ಮನಿದ್ದೆ ಅಂದರೆ? ನನ್ನನ್ನು ಸುಮ್ಮನಿರು ಅಂತೀಯಾ?"

"ಇಲ್ಲ. ಮುಂಬಾಗಿಲಿನಲ್ಲಿ ನಿಂತ್ಕೊಂಡು ನನ್ನ ಮಗಳಿಗೆ ಹೀಗಾಗಿದೆ. ಯಾವನೋ ಮೋಸದಿಂದ ಕೆಡಿಸಿದಾನೆ ಅಂತ ಕಿರುಚ್ಕೋ...ಎಲ್ಲರೂ ಮನೆ ಮುಂದೆ ಸೇರ್ತಾರೆ."

"ಎಂಥಾ ಕೆಲಸ ಮಾಡಿಬಿಟ್ಟೆಯಲ್ಲೇ ಸಾವಿತ್ರಿ... ಹೆಣ್ಣಾಗಿ ಹುಟ್ಟಿದ್ದೂ ಅಲ್ಲದೇ, ಹೀಗೆ ಕಾಡ್ತೀರಲ್ಲೇ... ಅಲ್ಲೇ ಎಲ್ಲಾದ್ರೂ ನನ್ನ ಪ್ರಾಣ ಹೋಗಿದ್ದಿದ್ರೆ ಮನೆಗೆ ಬಂದು ಈ ದುಃಸ್ಥಿತಿಯನ್ನು ಕಣ್ಣಾರೆ ನೋಡುವುದಾದರೂ ತಪ್ಪುತ್ತಿತ್ತು. ನಾನೆಂತಹ ಪಾಪ ಮಾಡಿದ್ದೆ?" ತಲೆ ತಲೆ ಚಚ್ಚಿಕೊಳ್ಳತೊಡಗಿದಳು. ಏನಾದ್ರೂ ಮಾಡಿಕೊಳ್ಳಲಿ ಎಂದು ಸಾವಿತ್ರಿ ರೂಮಿಗೆ ಹೊರಟು ಹೋದಳು.

ಸರಳ ಸುಕನ್ಯ ಇಬ್ಬರೂ ಒಟ್ಟಾಗಿ ಬಂದರು. ಮನೆಯ ಅಸಹನೀಯ ಮೌನ ಇಬ್ಬರನ್ನೂ ಹೆದರಿಸಿತು. ಕೆಟ್ಟ ಮುಖ ಹಾಕಿ ಕುಳಿತಿದ್ದ ತಾಯಿಯನ್ನು ಮತ್ತೆ ನೋಡುವ ಧೈರ್ಯ ಬರಲಿಲ್ಲ. ಸುಕನ್ಯ ಸೀದಾ ಸಾವಿತ್ರಿಯ ಬಳಿಗೆ ಬಂದಳು. ಜೋಲು ಮುಖ ಹಾಕಿ ಕುಳಿತಿದ್ದ ಅವಳನ್ನು ಅಲುಗಾಡಿಸಿ "ಏನಾಯ್ತೇ" ಅಂತ ಪಿಸು ದನಿಯಲ್ಲಿ ಕೇಳಿದಳು.

"ಮೊದಲು ಬಾಗಿಲು ಹಾಕು. ಎಲ್ಲಾ ಹೇಳ್ತೀನಿ" ಎಂದಳು. ಸಾವಿತ್ರಿ ನಡೆದ ವಿಷಯವನ್ನು ಹೇಳುತ್ತಿರುವಂತೆಯೇ, ಸುಕನ್ಯ ಬಟ್ಟೆ ಬದಲಾಯಿಸಿ ಹೊರಗೆ ಬಂದಳು. ಅವಳಿಗೂ ಚಿಂತೆ ಆಗಿತ್ತು.

ಅಡಿಗೆ ಮನೆಯಲ್ಲಿ ಅಕ್ಕ ತಂಗಿಯರಿಬ್ಬರೂ, ಗುಸು ಗುಸು ಮಾತನ್ನಾರಂಭಿಸಿದಾಗ ಸುಭದ್ರಮ್ಮ ಸರಳನ್ನ ಕರೆದಳು.

"ಇಲ್ಲಿ ಬಾ, ಏನಾಯ್ತು ಅಂತ ನಾನು ಹೇಳ್ತೀನಿ. ಇಬ್ಬಿಬ್ಬರೂ ಸೇರಿಕೊಂಡು ಅವಳನ್ನು ಸರಿಯಾಗಿ ನೋಡಿಕೊಳ್ಳಕ್ಕೆ ಆಗದಿದ್ದ ಮೇಲೆ, ನನ್ನನ್ನು ಟೂರ್‌ಗೆ ಯಾಕೆ ಕಳಿಸಬೇಕಾಗಿತ್ತು? ನೇಣು ಹಾಕಿಕೊಳ್ಳುವ ಸ್ಥಿತಿ ತಂದಿಟ್ಟಿದಾಳೆ ನಿನ್ನ ತಂಗಿ"

ನಡೆದುದನ್ನು ಮತ್ತೆ ಹೇಳಿದಳು.

"ಅಮ್ಮಾ ಅವಳದ್ದೇನಮ್ಮಾ ತಪ್ಪು. ಅವಳಿಗೆ ಗೊತ್ತಾಗಲಿಲ್ಲವೇನೋ..." ಸುಕನ್ಯ ಸಾವಿತ್ರಿಯ ಪರವಹಿಸಿದಳು.

"ಸಾಕು ಸುಮ್ಮನಿರಿ. ನೀವಿಬ್ಬರೂ ಮದುವೆಯಾದವರು, ಗೊತ್ತಾಗಲಿಲ್ಲ ಅಂತ ಮುಚ್ಚುಕ್ಕೆ ಹೋಗಬೇಡಿ"

"ಹೋಗಲಿ, ಆದದ್ದಾಗಿ ಹೋಯ್ತು. ಈಗೇನು ಮಾಡೋಣ ಹೇಳು",.... ಯಾರಿಗೂ ತಿಳಿಸುವುದೇ ಬೇಡ. ಸುಮ್ಮನಿದ್ದು ಬಿಡೋಣ."

"ಏನು ಸುಮ್ಮನಿದ್ದು ಬಿಡೋಣ? ನಾಳೇನೇ ಅವಳನ್ನು ಸರಿಯಾದ ಡಾಕ್ಟರ ಹತ್ತಿರ ಕರೆದುಕೊಂಡು ಹೋಗಿ ಎಲ್ಲಾ ತೆಗೆಸಿ ಬಿಡಿ."

ಸುಕನ್ಯ ಸರಳ ಮುಖ ಮುಖ ನೋಡಿಕೊಂಡರು. ಆ ರಾತ್ರಿ ಅಕ್ಕತಂಗಿಯರು ತಮ್ಮ ತಮ್ಮಲ್ಲೇ ಏನನ್ನೋ ಮಾತನಾಡಿಕೊಂಡರು.

ಬೆಳಿಗ್ಗೆ ಇಬ್ಬರೂ ಸಾವಿತ್ರಿಯನ್ನು ಡಾಕ್ಟರ ಹತ್ತಿರ ಕರೆದುಕೊಂಡು ಹೋದರು. ಮಾಮೂಲಿನಂತೆ ಚೆಕಪ್ ನಡೆಸಿ ಡಾಕ್ಟರು "ಎಲ್ಲಾ ಸರಿಯಾಗಿದೆ. ಮುಂದಿನ ತಿಂಗಳು ಮತ್ತೆ ಕರೆದುಕೊಂಡು ಬನ್ನಿ. ಸ್ಕ್ಯಾನಿಂಗ್ ಮಾಡ್ತೀವಿ. ಬೇಬಿ ಹೇಗೆ ಡೆವಲಪ್ ಆಗಿದೆ ಅಂತ ತಿಳಿಯುತ್ತೆ" ಎಂದರು. ಸುಕನ್ಯ ನೆಮ್ಮದಿಯ ಉಸಿರನ್ನು ಬಿಟ್ಟಳು. ಮನೆಯಲ್ಲಿ ತಾಯಿಗೆ ಹೇಳಿದಳು.

"ಡಾಕ್ಟರು ಇಂಜೆಕ್ಷನ್ ಕೊಟ್ಟಿದ್ದಾರೆ. ಎರಡು ಟ್ಯಾಬ್ಲೆಟ್ಸ್ ಕೊಟ್ಟಿದ್ದಾರೆ. ನಾಳೆ ನಾಡಿದ್ದರಲ್ಲಿ ಎಲ್ಲಾ ಸರಿ ಹೋಗುತ್ತಂತೆ"

"ಸಧ್ಯ ಕಳೆದರೆ ಸಾಕಾಗಿದೆ." ಆಕೆ ಅಲವತ್ತುಕೊಂಡಾಗ ಯಾರಿಗೂ ನಗುವ ಧೈರ್ಯ ಸಹ ಇರಲಿಲ್ಲ.

ಎರಡು ದಿನ ಕಳೆದರೂ, ಇಂಜೆಕ್ಷನ್, ಮಾತ್ರೆ ಸಾವಿತ್ರಿಯ ಗರ್ಭದ ಮೇಲೆ ಏನೂ ಪರಿಣಾಮ ಬೀರದಿದ್ದಾಗ ಸುಭದ್ರಮ್ಮ ಧೃತಿಗೆಟ್ಟಳು. ಯಾರನ್ನೂ ಕೇಳದೇ ಮುಂದಿನ ರಸ್ತೆಯಲ್ಲಿದ್ದ ಒಬ್ಬ ಲೇಡಿ ಡಾಕ್ಟರನ್ನ ಕಾಡಿ ಬೇಡಿ ಮನೆಗೆ ಕರೆತಂದಳು. ನಡೆದ ಘಟನೆಯನ್ನು ವಿಷಯವನ್ನು ತಿಳಿಸಿ,

"ಹೇಗಾದ್ರೂ ನಮ್ಮ ಮಾನವನ್ನು ಕಾಪಾಡಿ ಡಾಕ್ಟರ್, ಮದುವೆಯಾಗದವಳು ತಾಯಿಯಾದರೆ ಜನ ಆಡಿಕೊಂಡು ನಗುವುದಿಲ್ಲವೆ? ಎಷ್ಟು ಖರ್ಚಾದರೂ ಪರವಾಗಿಲ್ಲ. ಅವಳನ್ನು ಮೊದಲ ಸ್ಥಿತಿಗೆ ತಂದು ಬಿಡಿ."

ಸಾವಿತ್ರಿಯ ಸ್ಥಿತಿಯನ್ನು ಕೂಲಂಕಷವಾಗಿ ಪರೀಕ್ಷಿಸಿ ಡಾಕ್ಟರು ಕೈ ಚೆಲ್ಲಿ ನುಡಿದಳು.

“ಈಗ ಇನ್ನೇನು ಮಾಡುವ ಹಾಗಿಲ್ಲ. ಆ ಔಷಧಿಯಿಂದ ಏನೂ ಆಗದಿದ್ದ ಮೇಲೆ ಏನೂ ಮಾಡಬಾರದು ಇಲ್ಲದ್ದನ್ನು ಮಾಡುಕ್ಕೆ ಹೋದರೆ, ನಿಮ್ಮ ಮಗಳ ಪ್ರಾಣಕ್ಕೆ ಅಪಾಯ. ಆಮೇಲೆ ಸುಮ್ಮನೇ ಪೋಲಿಸ್ ಕೇಸ್ ಆಗುತ್ತೆ. ಮೊದಲೇ ರೇಪ್ ಕೇಸ್ ಅಂತೀರಾ? ಪೋಲೀಸರಿಗೆ ತಿಳಿಸಲಿಲ್ಲವೆ?”

“ಅವಳು ಕುರುಡಿ, ಅವಳಿಗೆ ಯಾರು ಅವನು ಅಂತ ಗೊತ್ತಿಲ್ಲ. ಯಾರ ಮೇಲೆ ಕಂಪ್ಲೇಂಟ್ ಕೊಡುವುದು?”

“ಹಾಗಾದ್ರೆ ಸುಮ್ಮನಿದ್ದುಬಿಡಿ. ಇಂಥ ಎಷ್ಟೋ ಕೇಸುಗಳು ನಡೆಯುತ್ತೆ. ಮಗು ಹುಟ್ಟಿದ ಮೇಲೆ ಯಾವುದಾದರೂ ಅನಾಥಶ್ರಮಕ್ಕೆ ಕೊಟ್ಟು ಬಿಡಿ.” ಆಕೆ ತನ್ನ ಫೀಸನ್ನು ತೆಗೆದುಕೊಂಡು ಹೊರಟುಹೋದಳು. ಸುಭದ್ರಮ್ಮ ಹಿಂದಿನಿಂದ ಅವಳನ್ನೇ ಚೆನ್ನಾಗಿ ಬೈದರು.

ಸಾವಿತ್ರಿ, ತಾಯಿಯ ಸಿಟ್ಟಿಗೆ ನಡುಗಿದಳು. ಅಮ್ಮನ ಮನಸ್ಸು ಕೆಟ್ಟು ಹೋಗಿದೆ. ತನ್ನನ್ನು ಸಾಯಿಸಿದರೆ, ಎಂದು ಭಯವುಂಟಾಗಿ ರೂಮಿನ ಬಾಗಿಲನ್ನು ಭದ್ರ ಪಡಿಸಿ, ಮಂಚದ ಮೇಲೆ ಕುಳಿತಳು. ಸುಭದ್ರಮ್ಮ ತಲೆಯ ಮೇಲೆ ಕೈ ಹೊತ್ತು ಕುಳಿತಳು.

ಸುಕನ್ಯ ಮುಕುಂದನ ಜತೆ ತಿರುಗಾಡಲು ಹೋಗಿದ್ದಳು. ಸರಳ ಬ್ಯಾಂಕಿನಿಂದ ಬಂದಳು. ಮನೆಯಲ್ಲಿ ಒಂದು ದೀಪವೂ ಉರಿಯುತ್ತಿಲ್ಲ. ಕತ್ತಲೆಮಯ. ತನ್ನಲ್ಲಿದ್ದ ಬೀಗದ ಕೈನಿಂದ ಬೀಗ ತೆಗೆದು ಒಳಗೆ ಬಂದು ದೀಪ ಹಾಕಿದಳು. ತಾಯಿಯ ಅವತಾರ ಕಂಡು ಮತ್ತೇನೋ ನಡೆದಿದೆ ಎಂದು ಊಹಿಸಿದಳು. ಸಾವಿತ್ರಿ ಒಳ ಸೇರಿ, ತನ್ನ ರೂಮಿನ ಬಾಗಿಲನ್ನು ಹಾಕಿಕೊಂಡಿದ್ದಳು. ಸುಕನ್ಯ ಬರಲಿ ಎಂದು ಕಾದಳು.

ಸುಕನ್ಯ, ನಡೆದ ವಿಷಯವನ್ನೆಲ್ಲ ಮುಕುಂದನಿಗೆ ತಿಳಿಸಿದ್ದಳು. ಅವನು ಬೇಸರ ಗೊಂಡ. “ಏನಾದರಾಗಲೀ ಅಂತ ನಿಜವನ್ನೇ ಹೇಳಿ ಬಿಡಬೇಕಾಗಿತ್ತು. ನಾನು ಅವತ್ತೇ ಹೇಳಿದೆ. ಸಾವಿತ್ರೀನ ಇದಕ್ಕೆ ಎಳಿಯಬೇಡ ಅಂತ. ಕೇಳಿದ್ಯಾ ನನ್ನ ಮಾತನ್ನ?” ರೇಗಿದ್ದ.

“ನಾನು ಅಲ್ಲಿ, ಆಗ ಇದ್ದಿದ್ದರೆ, ನಿಜವನ್ನೇ ಹೇಳ್ತಿದ್ದೆನೋ ಏನೋ, ಏಕೋ ಏನೋ ಸಾವಿತ್ರೀನೇ ಸುಳ್ಳು ಹೇಳಿದಾಳೆ. ಅಮ್ಮನ್ನ ಮೆಚ್ಚಿಸುಕ್ಕೆ ನಾಟಕವಾಡಿದೆವು.”

“ಮತ್ತೆ ಮುಂದೇನು?”

"ಅದೇ ಹೆದರಿಕೆ. ಅಮ್ಮ ಏನು ಮಾಡ್ತಾಳೋ...?"

"ನಾನು ಬಂದು ನಿಮ್ಮ ತಾಯಿಯ ಹತ್ತಿರ ಮಾತನಾಡ್ತೀನಿ. ವಿಷಯ ಏನು ಅಂತ ನಿಜ ಹೇಳ್ತೀನಿ"

"ಇವತ್ತೇ ಬೇಡ. ಅಮ್ಮನ ಮೂಡ್ ಏನೇನೂ ಚೆನ್ನಾಗಿಲ್ಲ"

"ಅಂತೂ, ಎಲ್ಲರೂ ಸೇರಿ ನನ್ನನ್ನ ಕೆಟ್ಟವನನ್ನಾಗಿ ಮಾಡ್ತೀರಿ ಅಷ್ಟೇ."

"ಇಲ್ಲ. ಪಾಪ ಸಾವಿತ್ರಿ ಕೆಟ್ಟವಳಾದಳು ಅಷ್ಟೇ."

"ಅವಳಿಗೆ ಎಷ್ಟು ಬೇಸರವಾಗಿದೆಯೋ ಏನೋ ನಮಗೋಸ್ಕರ....ಪಾಪ!"

"ಹಾಗೇನೂ ಹೇಳಲಿಲ್ಲ. ಸರಿಯಾಗಿಯೇ ಇದ್ದಳು"

ಮುಕುಂದ ಮನೆಯೊಳಗೆ ಬರಲು ಧೈರ್ಯವಿಲ್ಲದೇ ಹೆಂಡತಿಯನ್ನು ಹೊರಗೇ ಅಲ್ಲಿಯೇ ಬಿಟ್ಟು ಹೊರಟುಹೋದ. ದೆವ್ವ ಬಡಿದಂತೆ ಕುಳಿತಿದ್ದ ತಾಯಿಯನ್ನು ನೋಡಿ ಸುಕನ್ಯ ಗಾಭರಿಯಾದಳು. ಇವತ್ತೇನು ಮಾತು ಬರುತ್ತೋ, ಸಾವಿತ್ರಿಯೂ ಕಾಣಲಿಲ್ಲ. ಸರಳ ಸುಮ್ಮನಿರುವಂತೆ ಸಂಜ್ಞೆ ಮಾಡಿದಳು.

ಅಡಿಗೆ ಬಿಸಿಮಾಡಿ, ಎಲ್ಲರಿಗೂ ತಟ್ಟೆ ಹಾಕಿದಳು. ತಾಯಿಯನ್ನು ಎಬ್ಬಿಸಿದಳು. ಆಕೆ ಇಬ್ಬರನ್ನು ದುರುದುರನೆ ನೋಡಿದಳು.

"ನನ್ನ ಹೊಟ್ಟೆ ತುಂಬಿ ಹೋಗಿದೆ. ಊಟವೂ ಬೇಡ, ಉಪಚಾರವೂ ಬೇಡ. ನಿಮ್ಮ ನಿಮ್ಮ ಪಾಡಿಗೆ ನೀವೂ ಹೋಗಿ."

"ಅವಳು ಮಾಡಿಲ್ಲದ ತಪ್ಪಿಗೆ ಅವಳನ್ನು ಬೈದರೆ, ಅವಳೇನು ಮಾಡ್ತಾಳೆ?"

"ಸಾವಿತ್ರಿಯೂ ನನ್ನ ಮಗಳಲ್ಲ. ನೀವು ನನ್ನ ಮಕ್ಕಳಲ್ಲ. ಶತ್ರುಗಳು."

"ಏನಾಯ್ತೀಗ? ಎಲ್ಲಾ ಸರಿ ಹೋಗುತ್ತೆ ಅಂದಿದಾರಲ್ಲ ಡಾಕ್ಟರು."

"ಏನಂದಿದಾರೆ ಅವರ ಪಿಂಡ? ಇಂಜೆಕ್ಷನ್ ಕೊಟ್ಟರಲ್ಲ. ಏನಾಯ್ತು? ಮಾತ್ರೆ ತಿನ್ನಿಸಿದರಲ್ಲ ಏನಾಯ್ತು? ಪಿಂಡ ಬೆಳಿತಾನೇ ಇದೆ. ಇವಳು, ನನ್ನ ಹತ್ತಿರ ಫೀಸು ಕಿತ್ಕೊಂಡು, ಈಗೇನೂ ಮಾಡುಕ್ಕಾಗುಲ್ಲ, ಅವಳಿಗೇ ಅಪಾಯ ಅಂತ ಹೇಳಿದ್ಳೂ ಅಲ್ಲದೇ, ಹುಟ್ಟಲಿ ಬಿಡಿ. ಅನಾಥಾಶ್ರಮಕ್ಕೆ ಕೊಟ್ಬರಾಯ್ತು ಅಂದಳಲ್ಲ ನನ್ನ ಹೊಟ್ಟೇಲಿ ಎಷ್ಟು ಸಂಕಟವಾಗುತ್ತಿರಬೇಡ"

"ನಿಧಾನವಾಗಿ ಯೋಚಿಸಿ, ಏನು ಮಾಡೋಣ ಅನ್ನುವ ತೀರ್ಮಾನಕ್ಕೆ ಬರೋಣ. ಈಗ ನೀನು ಊಟಕ್ಕೆ ಏಳದಿದ್ದರೆ ನಮಗ್ಯಾರಿಗೂ ಊಟವಿಲ್ಲ."

"ಒಂದು ಇತ್ಯರ್ಥವಾಗದ ಹೊರತು ನಾನು ಊಟ ಮಾಡುವುದಿಲ್ಲ. ಒಂದು

ಹನಿ ನೀರನ್ನು ಕುಡಿಯುವುದಿಲ್ಲ."

"ಹಾಗಾದರೆ ಕೇಳು... ಆ ಮಗು ಹುಟ್ಟಲಿಬಿಡು... ಆ ಮಗೂನ ನಾನು ಸಾಕಿಕೊಳ್ತೀನಿ. ಯಾವ ಅನಾಥಾಶ್ರಮಕ್ಕೆ ಕೊಡುವುದು ಬೇಡ."

"ನನ್ನ ಕಣ್ಣೊರೆಸುವ ಮಾತು."

"ಇಲ್ಲ, ಖಂಡಿತಾ. ನಾನು ಮುಕುಂದನ್ನ ಒಪ್ಪಿಸ್ತೀನಿ."

"ಸರಿ. ಅವರಿಗೂ ತಿಳಿಯಬೇಕೇನೋ ನಮ್ಮ ಮನೆಯ ಹಗರಣ"

"ಮುಕುಂದ ಹೇಗೂ ಬೇರೆಯವರಲ್ಲ. ನಮಗೆ ಹೇಗೂ ಮಕ್ಕಳಾಗಿಲ್ಲ. ಆಗುವುದೋ ಇಲ್ಲವೋ ಯಾರಿಗೆ ಗೊತ್ತು?" ಸುಕನ್ಯ ನುಡಿದಾಗ, ಸರಳ ಅನುಮೋದಿಸಿದಳು.

"ಒಂದು ವೇಳೆ ಮುಕುಂದ ಒಪ್ಪದಿದ್ದರೆ, ನಾನು ಸುರೇಶನ್ನ ಒಪ್ಪಿಸ್ತೀನಿ. ಅವರಿಗೆ ಸಾವಿತ್ರೀನ ಕಂಡರೆ ಅನುಕಂಪ ಜಾಸ್ತಿ. ಅವರು ಖಂಡಿತಾ ಬೇಡವೆನ್ನುವುದಿಲ್ಲ"

"ಗೊತ್ತಾಯ್ತಾ? ನಿಮ್ಮ ಒಂದು ತಪ್ಪಿನಿಂದ, ನಿಮ್ಮ ನಿಮ್ಮ ಗಂಡಂದಿರನ್ನು ಕೇಳಿಕೊಳ್ಳಬೇಕಾದ ಸ್ಥಿತಿ ಬಂದಿದೆ. ಅನುಭವಿಸಿ, ತಲೆತಗ್ಗಿಸಬೇಕಾದವಳು ನಾನು.

"ನಿನಗೆ ಒಳ್ಳೆಯ ಅಳಿಯಂದಿರು ಸಿಕ್ಕಿದಾರೆ. ಅದು ನಿನ್ನ ಪುಣ್ಯ ಅಂತ ತಿಳಕೋ..." ಸುಕನ್ಯ ನುಡಿದಳು.

"ಹೂಂ. ಪುಣ್ಯ ಅಂತೆ. ಪುಣ್ಯಾನ ದೋಚಿ ದೋಚಿ ಬಾಚಿಕೊಳ್ತಿದೀನಿ"

"ಈಗ ನಾವು ಹೇಳೋದನ್ನೆಲ್ಲಾ ಹೇಳಿಯಾಗಿದೆ. ನಿನಗೆ ನಮ್ಮ ಮೇಲೆ ನಂಬಿಕೆ ಇದ್ದರೆ ಊಟಕ್ಕೆ ಏಳು. ನಾನು ಸಾವಿತ್ರೀನೂ ಕರೀತೀನಿ." ಸರಳ ಹೇಳಿದಳು.

"ಹಾಗೇ ನಿನ್ನ ಅಜ್ಜೀನೂ ಎಬ್ಬಿಸು. ಅದು ಇದ್ದರೂ ಒಂದೇ, ಇಲ್ಲದಿದ್ದರೂ ಒಂದೇ. ಇನ್ನೂ ಯಾಕೆ ಬದುಕಿದೆಯೋ...."

ಸುಕನ್ಯ ನಗುತ್ತಾ ಅಡಿಗೆ ಮನೆಯ ಪಕ್ಕದ ಮೂಲೆ ಯಲ್ಲಿ ಮಲಗಿದ್ದ ಅಜ್ಜಿಯನ್ನು ಎಬ್ಬಿಸಲು ನೋಡಿದಳು. ಅಜ್ಜಿ ಅಲ್ಲಾಡಲಿಲ್ಲ. ಅದರ ಮೈ ಕೊರಟಿ ಹೋಗಿ, ಕೊರಡಿನಂತಾಗಿತ್ತು. ಸುಕನ್ಯ ಚೀರಿದಳು.

ಸುಭದ್ರಮ್ಮ ಮಕ್ಕಳ ಮೇಲೇ ರೇಗುತ್ತಾ ಎದ್ದಳು. ಇಬ್ಬರೂ ಅಜ್ಜಿ ಇದ್ದ ಬಳಿಗೆ ಬಂದರು.... ಸುಭದ್ರಮ್ಮ ಅರ್ಥಮಾಡಿಕೊಂಡಳು.

"ನೋಡಿದ್ರಾ? ಮಾಡಬಾರದ್ದನ್ನು ಮಾಡಿದರೆ, ಆಗಬಾರದ್ದು ಆಗುತ್ತೆ. ನನ್ನ

ಬಾಯಿ ಏನೇನನ್ನೋ ಆಡಿಸ್ತು. ಇನ್ನೆಲ್ಲಿ ಅಮ್ಮ...?" ಅಳತೊಡಗಿದಳು.

"ಯಾರೂ ಮಾಡಬಾರದ್ದನ್ನು ಮಾಡಿಲ್ಲ. ಆಗಬಾರದು ಆಗಿಲ್ಲ. ಅವಳ ತಪ್ಪಿಲ್ಲದಿದ್ದರೂ, ಮತ್ತೆ ಮತ್ತೆ ಅದನ್ನೇ ಅಂತೀಯ. ಅಜ್ಜಿಗೆ ವಯಸ್ಸಾಗಿತ್ತು ಗೊಟಕ್ ಅಂತು. ಅದಕ್ಕೂ ಇದಕ್ಕೂ ಏನು ಸಂಬಂಧ?"

"ಏನೂ ಸಂಬಂಧವಿಲ್ಲ. ನಿಮಗೆ ಹೇಗೆ ತಿಳೀಬೇಕು?"

"ಸರಿ. ಈಗೇನು ಮಾಡಬೇಕು ಹೇಳು."

"ಬೆಳಗಿನ ತನಕ ಯಾರೂ ಏನೂ ಮಾಡುಕ್ಕಾಗುಲ್ಲ. ಎಲ್ಲರೂ ಹೆಣಕಾಯ್ತಾ ಕೂತಿರಬೇಕು. ಬೆಳಿಗ್ಗೆ ಮುಕುಂದನಿಗೆ ಹೇಳಿ ಕಳಿಸು. ನನ್ನ ತಮ್ಮಂದಿರ ಮನೆಯರಿಗೆ ತಿಳಿಸಬೇಕು. ಯಾರಾದರೂ ಶಾಸ್ತ್ರಿಗಳಿಗೆ ತಿಳಿಸಿದರೆ ಬಂದು ಮುಂದೆ ಏನು ಮಾಡ ಬೇಕು ಅಂತ ಹೇಳ್ತಾರೆ."

ಅಂತೂ ಆ ರಾತ್ರಿ ಯಾರಿಗೂ ಊಟವಿಲ್ಲವಾಯ್ತು. ಸಾವಿತ್ರಿ ಹೆದರಿಯಾಳೆಂದು ಅವಳಿಗೆ ಅಜ್ಜಿಯ ವಿಷಯವನ್ನು ತಿಳಿಸಲಿಲ್ಲ. ಸರಳ ತಾಯಿಗೆ ತಿಳಿಯದಂತೆ, ಅವಳಿಗೆ ಹಾಲಿಗೆ ಬೋರ್ನ್‌ವಿಟಾ ಕದರಿ ಕೊಟ್ಟಿದ್ದಳು. ಸುಕನ್ಯ ತನ್ನ ಪಾಡಿಗೆ ತಾನು ಮಲ ಗಿದಳು. ಅವಳಿಗೆ ಅಲ್ಲಿ ಕುಳಿತಿರಲು ಇಷ್ಟವಿರಲಿಲ್ಲ. ಸುಭದ್ರಮ್ಮನ ಜತೆಗೆ ಕುಳಿತ ಸರಳ ತಾನೂ ತೂಕಡಿಸಿದಳು.

ಸುಭದ್ರಮ್ಮನ ತಂದೆಯ ಕಡೆಯ ಬಳಗದ ಯಾರೂ ದಿಕ್ಕಿಲ್ಲದ ಹೆಂಗಸು. ತಾಯಿ ಚಿಕ್ಕ ವಯಸ್ಸಿನಲ್ಲಿಯೇ ತೀರಿಹೋದ ಕಾರಣ, ಅವರುಗಳನ್ನು ಸಾಕಿದ್ದೇ ಈಕೆ. ಆ ಅನುಬಂಧದಿಂದ ಅಮ್ಮ ಎಂದೇ ಕರೆಯುತ್ತಿದ್ದರು. ಸುಭದ್ರಮ್ಮ ತನ್ನ ಸಹಾಯಕ್ಕೆಂದು ತನ್ನ ಮನೆಯಲ್ಲಿಯೇ ಇರಿಸಿಕೊಂಡಿದ್ದಳು. ತಾನೂ, ತನ್ನ ಹೆತ್ತ ತಾಯಿಯಷ್ಟೇ ಚೆನ್ನಾಗಿ ನೋಡಿಕೊಂಡಿದ್ದೆ ಎನ್ನುವ ದುಃಖ ಸುಭದ್ರಮ್ಮನಿಗೆ. ಬೆಳಗಾಗುತ್ತಿದ್ದಂತೆಯೇ ಸುಕನ್ಯ ಆಟೋದಲ್ಲಿ ತನ್ನ ಮನೆಗೆ ಧಾವಿಸಿ, ಮುಕುಂದನಿಗೆ ವಿಷಯ ತಿಳಿಸಿ, ತನ್ನ ಸೋದರ ಮಾವಂದಿರಿಗೆ ತಿಳಿಸುವಂತೆ ಹೇಳಿದಳು. ಸರಳ ತನ್ನ ಮನೆಗೂ ವಿಷಯ ತಿಳಿಸಿದಳು. ಮುಕುಂದ ತಾನೇ ತಿಳಿಸಬೇಕಾದವರಿಗೆ ತಿಳಿಸಿ, ಹಾಗೇ ಬರುತ್ತಾ ಒಬ್ಬ ಶಾಸ್ತ್ರಿಗಳನ್ನು ಕರೆದುಕೊಂಡು ಬಂದಿದ್ದ. ಸೋದರ ಮಾವಂದಿರು ಬಂದರು. ಕೆಲವೇ ಗಂಟೆಗಳಲ್ಲಿ ಅಜ್ಜಿಯ ಶವವನ್ನು ಸಾಗಿಸಿದರು. "ನಮ್ಮ ಮನೇಲಿ ನಡೀತಿರುವ ಅನ್ಯಾಯವನ್ನು ನೋಡಲಾರದೇ ಹೊರಟು ಹೋದೆಯಾ?" ಎಂದು ಸುಭದ್ರಮ್ಮ ಅಳುತ್ತಾ ನುಡಿದಿದ್ದೇ ಕಡೆಯ ಮಾತು.

ಅನಂತರ ಮಾತು ನಿಂತು ಹೋದವಳಂತೆ ಮಕ್ಕಳೊಡನೆ ಮಾತನಾಡುವುದನ್ನೇ ಬಿಟ್ಟು ಬಿಟ್ಟಳು. ಯಾರ ಮನೆಗೂ, ಯಾವ ತಂಟೆಗೂ ಬರದಂತೆ, ತನ್ನ ಪಾಡಿಗೆ ತಾನು ಕೆಲಸ ಮಾಡಿಕೊಂಡು, ದೇವರ ಧ್ಯಾನಗಳಲ್ಲಿ ಕಾಲವನ್ನು ಕಳೆಯತೊಡಗಿದಳು. ಸಮಾಧಾನ ಹೇಳಲು ಬಂಡಿದ್ದ ನೆಂಟರಿಷ್ಟರು, ಬಂದು ಮಾತನಾಡಿಸಿದರೂ ಮಾತ ನಾಡಲಿಲ್ಲ. ಡಾಕ್ಟರಿಗೆ ತೋರಿಸಿದಾಗ, "ಆಕೆಗೆ ಏನೂ ಆಗಿಲ್ಲ. ಮಾತನಾಡುವ ಮನಸ್ಸಿರಲಾರದು, ಅವರ ಪಾಡಿಗೆ ಅವರನ್ನು ಬಿಟ್ಟು ಬಿಡಿ" ಎಂದಿದ್ದರು.

ಹನ್ನೆರಡು ದಿನಗಳು ಕಳೆದ ಬಳಿಕ ಅಜ್ಜಿಯ ಹೆಸರಿನಲ್ಲಿ ಎಲ್ಲರಿಗೂ ಒಂದು ಊಟ ಹಾಕಿಸಿದಳು ಸುಕನ್ಯ. ಅವಳಿಗೆ ಒಂದು ತರಹ ಭಯ ಆವರಿಸಿತ್ತು. ಅಜ್ಜಿ, ದೆವ್ವವಾಗಿ, ನಿಜಾಂಶವನ್ನು ಎಲ್ಲರಿಗೂ ತಿಳಿಸಿದರೇ ಅಂತ! ದೆವ್ವಕ್ಕೆ ಎಲ್ಲಾ ಗೊತ್ತಿರುತ್ತೆ ಅಂತ. ಅಲ್ಲಿರಲು ಹೆದರಿ ತನ್ನ ಮನೆಗೆ ಹೊರಟು ಹೋದಳು.

ಕೆಲವು ದಿನಗಳ ನಂತರ, ಸುರೇಶ ಬರುವವನಿದ್ದುದರಿಂದ, ಒಂದೆರಡು ದಿನಗಳ ನಂತರ ಸರಳನೂ, ತನ್ನ ಮನೆಗೂ ಹೊರಟಳು. ಸಾವಿತ್ರಿ ಒಬ್ಬಳೇ ಆಗುವಳೆಂದು ಸುಕನ್ಯ ಅಲ್ಲಿಗೆ ಮತ್ತೆ ಬಂದರೂ, ಅವಳಿಗೆ ನೆಮ್ಮದಿ ಇರಲಿಲ್ಲ.

ಕಣ್ಣು ಕಾಣದ ಸಾವಿತ್ರಿ....., ಮೌನಿಯಾದ ತಾಯಿ, ಕನಸಿನಲ್ಲಿ ಬಂದು ಕಾಡುವ ಅಜ್ಜಿ, ಸುಕನ್ಯಳ ತಳಮಳ ಹೆಚ್ಚಿತು. ಸರಳನೂ ಇರಲಿಲ್ಲ. ಮುಕುಂದನಿಗೆ ಹೇಳಿ, ಬೇರೆ ಮನೆಗೆ ಹೋಗುವ ಉಪಾಯವನ್ನು ಮಾಡಿಸಿದಳು.

"ಅಜ್ಜಿ ಹೋದದ್ದು ಒಳ್ಳೆಯ ನಕ್ಷತ್ರ ಅಲ್ಲವಂತೆ. ಮನೆಯನ್ನು ಬಿಡಬೇಕು ಅಂದಿದಾರೆ. ಬೇರೆ ಮನೆಗೆ ಬದಲಾಯಿಸೋಣ" ಎಂದು ಅವನಿಂದ ಹೇಳಿಸಿದರೂ, ಸುಭದ್ರಮ್ಮ ಒಪ್ಪಲಿಲ್ಲ. 'ನೀವುಗಳು ಹೋಗಿ, ನಾನು ಬರುಲ್ಲ' ಎಂದು ತಲೆ ಆಡಿಸಿ, ಸಂಜ್ಞೆ ಮಾಡಿ ತಿಳಿಸಿದ್ದಳು. ಸುಕನ್ಯ ಸಾವಿತ್ರಿಯನ್ನು ತನ್ನ ಮನೆಗೆ ಕರೆದು ಕೊಂಡು ಹೋದಳು. ಆ ವಿಷಯ ಸರಳಂಗೂ ತಿಳಿಯದು.

ಊರಿಗೆ ವಾಪಸ್ಸಾದ ಸುರೇಶ, ಎರಡು ದಿನಗಳ ನಂತರ ಸರಳನೊಡನೆ ಬಂದಾಗ, ಸುಭದ್ರಮ್ಮ ಅವನೊಡನೆ ಮಾತನಾಡಲಿಲ್ಲ. ಸಾವಿತ್ರಿಗಾಗಿ ಅವನ ಕಣ್ಣುಗಳು ಹುಡುಕಾಡಿದವು. ಅವಳೆಲ್ಲಿಯೂ ಕಾಣಲಿಲ್ಲ. ಸುಭದ್ರಮ್ಮ ಬಾಯಿ ಬಿಡಲಿಲ್ಲ. ಸುರೇಶ ಬೇಸರಗೊಂಡ. ಇಬ್ಬರೂ ಅಲ್ಲಿಂದ ಸುಕನ್ಯಳ ಮನೆಗೆ ಬಂದರು.

ಅಲ್ಲಿ ಸಾವಿತ್ರಿಯನ್ನು ಕಂಡ ಸುರೇಶ ಕಣ್ಣರಳಿಸಿದ. ಇವಳೇಕೆ ಇಲ್ಲಿದಾಳೆ ಎಂದು ಮನಸ್ಸು ಒಂದು ಘಳಿಗೆ ಗಲಿಬಿಲಿಗೊಂಡರೂ, ಸೌಂದರ್ಯವನ್ನು ಹೆಚ್ಚಿಸಿ

ಕೊಂಡಿದ್ದ ಸಾವಿತ್ರಿಯನ್ನೇ ಮೆಚ್ಚುಗೆಯಿಂದ ನೋಡಿದ. ಅವಳನ್ನು ಮಾತನಾಡಿಸುವ ಬಯಕೆಯಾಯಿತು.

"ಹೇಗಿದೀಯಾ ಸಾವಿತ್ರಿ....?" ಕೇಳಿದ. ಅವನ ಧ್ವನಿ ಕೇಳಿದ್ದೇ ತಡ ಅವಳು ಧಿಗ್ಗನೆ ಎದ್ದು ನಿಂತಳು. ಅವಳನ್ನು ಮುಡಿಯಿಂದ ಅಡಿಯವರೆಗೂ ನೋಡಿದ ಒಂದೇ ಗಳಿಗೆಯಲ್ಲಿ ಅವಳಲ್ಲಾಗಿದ್ದ ಮಾರ್ಪಾಟು ಏನೆಂದು ಅವನಿಗೆ ಅರ್ಥವಾಗಿತ್ತು. ಹತ್ತಾರು ಭಾವನೆಗಳು ಅವನನ್ನು ಮುತ್ತಿದವು. ಅವನ ನೋಟದ ಅರಿವು ಉಂಟಾಗದ ಸಾವಿತ್ರಿಯನ್ನು ಸರಳ ಒಳಕ್ಕೆ ಕರೆದುಕೊಂಡು ಹೋಗಿದ್ದಳು.

ಸ್ನೇಹಿತನ ಹತ್ತಿರ ಮಾತನಾಡುತ್ತಿದ್ದರೂ, ಸುರೇಶನ ಮನಸ್ಸೆಲ್ಲಾ ಸಾವಿತ್ರಿಯ ಮೇಲೆ. ತಮ್ಮಿಬ್ಬರ ಮಿಲನ ಫಲಿಸಿದೆ ಎಂದೇ ಅವನು ಭಾವಿಸಿದ. ಅವಳ ಬಾಯಿಂದ ಅವಳ ಅನುಭವಗಳನ್ನು ಕೇಳುವ ಬಯಕೆ. ಆದರೆ ಅದಕ್ಕೆ ಆಸ್ಪದವಿರಲಿಲ್ಲ. ಸಾವಿತ್ರಿಯೊಬ್ಬಳೇ ಇದ್ದಿದ್ದರೇ....

ಮೌನಿಯಾಗಿ ಹೆಜ್ಜೆ ಹಾಕುತ್ತಿದ್ದ ಗಂಡನನ್ನೇ ಗಮನಿಸಿದಳು ಸರಳ. ಸಾವಿತ್ರಿಯ ಬಗ್ಗೆ ಅವನಿಗೆ ಅನುಮಾನ ಬಂದಿದೆ... ಅವನ ಮನಸ್ಸಿನಲ್ಲಿ ಏನು ಹೋರಾಟ ನಡೆಯುತ್ತಿರಬಹುದು ಎಂದು ಊಹಿಸದಾದಳು. ಆದರೆ ತಾನಾಗಿಯೇ ಆ ವಿಷಯವನ್ನು ಕುರಿತು ಮಾತನಾಡಲು ಅಳುಕಿದಳು. ಸಾವಿತ್ರಿ ಹೇಳಿದ್ದ ಸುಳ್ಳನ್ನು ಹೇಳಬೇಕೋ, ಅಥವಾ ನಿಜವಾದ ವಿಷಯವನ್ನು ತಿಳಿಸಬೇಕೋ ಗೊತ್ತಾಗಲಿಲ್ಲ. ಆದರೂ ಏನನ್ನು ತಾನಾಗಿಯೇ ಹೇಳುವುದು ಬೇಡ ಎಂದು ತೀರ್ಮಾನಿಸಿದಳು.

ರಾತ್ರಿಯೂ ಹೆಚ್ಚಿಗೆ ಮಾತನಾಡದೇ, ಆಲೋಚಿಸುತ್ತಾ ಮಲಗಿದವನನ್ನು ಮಾತನಾಡಿಸಿದಳು.

"ಮೂರು ತಿಂಗಳು ಹೊರಗಿದ್ದು ಬಂದಿದೀರಿ. ಆದರೂ ನಿಮಗೆ ಉತ್ಸಾಹವಿಲ್ಲ. ಏನು? ಏನಾದರೂ ಸಮಸ್ಯೇನಾ?"

"ನಾನು ಸಾವಿತ್ರಿಯ ಬಗ್ಗೇನೇ ಯೋಚಿಸುತ್ತಿದ್ದೆ. ಅವಳೇಕೆ ಅಲ್ಲಿದಾಳೆ?"

"ನಾನು ನಿಮ್ಮ ಜತೆ ಇರುವಾಗ, ನಿಮಗೆ ಸಾವಿತ್ರಿ ಚಿಂತೇನಾ!" ಅವಳಿಗೆ ಹೆದರಿಕೆ ಆಗಿತ್ತು. ಇವನೂ ಸಾವಿತ್ರಿಯ ಮೇಲೆ ಇಲ್ಲದ ಆರೋಪ ಹೊರಿಸಿ ಕೆಟ್ಟವಳು ಅಂತ ಬೈದರೆ, ಅದನ್ನು ಸಹಿಸುವುದು ಕಷ್ಟ.

"ಅವಳನ್ನು ನೋಡಿದರೆ ಅಯ್ಯೋ ಅಂತನ್ನಿಸುತ್ತೆ. ಅವಳಿಗೆ ಬಹಳ ಕಷ್ಟವಾಗುತ್ತಿರಬಹುದು ಅಲ್ವಾ?" ಗಂಡ ತಾನೇ ಹೇಳಲಿ ಎಂದು ಪೀಠಿಕೆ ಹಾಕಿದ್ದಾ

ನೆಂದುಕೊಂಡು ನುಡಿದಳು "ಪಾಪ. ಅವಳ ತಪ್ಪೇನೂ ಇಲ್ಲದಿದ್ದರೂ, ಕಷ್ಟವನ್ನು ಅನುಭವಿಸುತ್ತಿದಾಳೆ. ಅಮ್ಮಂಗೆ ಅದೇ ಕೊರಗು. ಮಾತನ್ನೇ ಬಿಟ್ಟಿದಾಳೆ"

ಸುರೇಶ ಅನುಮಾನದಿಂದ ಹೆಂಡತಿಯನ್ನೇ ನೋಡಿದ.

"ಅವಳದ್ದೇನೂ ತಪ್ಪಿಲ್ವಾ! ನಿನಗೆ ಹೇಗೆ ಗೊತ್ತು? ಹಾಗಾದರೆ..... ಯಾರ ತಪ್ಪು?" ಅವಳು ಏನು ಆಡಿ ಬಿಡುವಳೋ ಎಂದು ಆತಂಕದಿಂದ ನೋಡಿದ.

"ಅವಳೇ ಹೇಳಿದಳು. ಅವಳು ಒಬ್ಬಳೇ ಇದ್ದ ಸಮಯ ನೋಡಿ, ಯಾವನೋ ಖದೀಮ ಅವಳನ್ನು ರೇಪ್ ಮಾಡಿದಾನೆ ಅದರ ಫಲ ಇದು"

ಸುರೇಶ ದಂಗಾದ.... ಆ ಖದೀಮ ನಾನೇ.... ಅದು ರೇಪ್ ಅಲ್ಲ. ಪ್ರೀತಿಯ ಸಮಾಗಮ...ಎಂದು ಹೆಂಡತಿಯೊಡನೆ ಹೇಳಲು ಅಂಜಿದ.

ಸಾವಿತ್ರಿ ಹಾಗೆ ಹೇಳಿದಳಾ? ನಿಜವಾಗಿಯೂ....ತನ್ನನ್ನು ಪರೀಕ್ಷಿಸಲು ಸರಳ ಹೀಗೆ ಹೇಳಿರಬಹುದೆ ಎಂದುಕೊಂಡು ಮತ್ತೆ ಕೇಳಿದ.

"ಅವಳೇಕೆ ಸುಳ್ಳು ಹೇಳುತ್ತಾಳೆ? ನನಗೆ ತಿಳಿದ ಹಾಗೆ ಅವಳಿಗೆ ಬೇರೆ ಯಾವ ಗಂಡಸರ ಸ್ನೇಹವಿರಲಿಲ್ಲ.... ಯಾರೂ ಬರುತ್ತಿರಲಿಲ್ಲ" ಸುರೇಶ ಒಂದು ಕ್ಷಣ ಬೆವರನ್ನು ಒರೆಸಿಕೊಂಡು ಅವಳನ್ನೇ ಓರೆ ನೋಟದಿಂದ ನೋಡಿದ.

"ಅಜ್ಜಿ ಇರುತ್ತಿದ್ದರಲ್ಲ.... ಅಜ್ಜಿ ಏನೂ ಹೇಳಲಿಲ್ವಾ?"

"ಅವರಿಗೇನೂ ಗೊತ್ತಾಗಲೇ ಇಲ್ಲ. ಅವರಿಗೆ ಕಿವಿ ಮಂದ, ಕಣ್ಣು ಮಂಜು"

"ಅಂತಹವರ ಜತೆ ಅವಳನ್ನು ಬಿಟ್ಟು ನೀವು ಹೊರಗೆ ಹೋಗುತ್ತಿದ್ದರಲ್ಲ ಮತ್ತೆ..." ಒಂದು ಗಳಿಗೆ ಸಾವಿತ್ರಿ ಹೇಳಿದಂತೆಯೂ ನಡೆದಿರಬಹುದೇ... ಎಂಬ ಸಂಶಯವೂ ತಲೆದೋರಿತು.

"ಎಷ್ಟೋ ವರ್ಷಗಳಿಂದ ಹಾಗೇ ಮಾಡುತ್ತಿದ್ದೆವಲ್ಲ."

"ಹೋಗಲಿ. ಸಾವಿತ್ರಿ ಏಕೆ ಸುಮ್ಮನಿದ್ದಳು? ಗಲಾಟೆಯನ್ನೇಕೆ ಮಾಡಲಿಲ್ಲ?"

"ಅವಳಿಗೆ ಏನೋ ಹೆದರಿಕೆ, ಯಾರಿಗೂ ತಿಳಿಸದೇ, ಈಗ ಗರ್ಭಿಣಿ ಅಂತ ತಿಳಿದ ಮೇಲೆ, ಅಮ್ಮ ಬಲವಂತ ಮಾಡಿದ್ದರಿಂದ ತಿಳಿಸಿದಾಳೆ. ಇಲ್ಲದಿದ್ದರೆ ಅವಳಿಗೆ ಏನೊಂತ ತಿಳಿದೇ ಇರಲಿಲ್ಲ. ಅಮ್ಮ ಡಾಕ್ಟರನ್ನು ಕರೆಸಿ ಪರಿಹಾರವನ್ನು ಸೂಚಿಸಿದಳು ಆಕೆ ಒಪ್ಪಲಿಲ್ಲ. ಈಗ ಏನಾದರೂ ಮಾಡಿದರೆ ಅವಳಿಗೇ ಅಪಾಯ ಅಂತ ಹೇಳಿದ್ದರಿಂದ ಅಮ್ಮ ಹಾಗಾಗಿ... ಎಲ್ಲರೊಡನೆ ಮಾತನ್ನು ಬಿಟ್ಟಿದ್ದು"

ನೀನು ತಿಳಿದಿರುವಂತೆ ಸಾವಿತ್ರಿ ಮುಗ್ಧೆ ಅಲ್ಲ ಎಂದು ಹೇಳುವ ತವಕವಾದರೂ, ನಡೆದ ಘಟನೆಯ ತಿರುವು ಬೇರೆ ಕಡೆಗೆ ಎಲ್ಲಿಯೋ ಇದೆ, ಸಮಯ ಬಂದಾಗ ತಾನೇ ತಿಳಿಸಿದರಾಯ್ತು ಎಂದುಕೊಂಡು ಸುಮ್ಮನಾದ. ಸರಳ ಮಾತನ್ನು ಮುಂದು ವರೆಸಿದ್ದಳು.

"ಸುಕನ್ಯ, ಸಾವಿತ್ರಿಗೆ ಹುಟ್ಟು ಮಗುವನ್ನು ತಾನು ಸಾಕುವುದಾಗಿ ಹೇಳಿದಾಳೆ. ಮುಕುಂದ ಒಪ್ಪದಿದ್ದರೆ, ನಾವು ಸಾಕಿಕೊಳ್ಳೋಣ ಅಂತ ಅಂದ್ಕೊಂಡಿದೀನಿ...."

"ನನ್ನನ್ನು ಒಂದು ಮಾತು ಕೇಳದೇ....?" ಓರೆಗಣ್ಣಿನಿಂದ ಅವಳನ್ನು ನೋಡಿ ಪ್ರಶ್ನಿಸಿದ.

"ಈಗ ಕೇಳ್ತಿದೀನಲ್ಲ. ಅಲ್ಲದೇ ನೀವು ಬೇಡ ಅನ್ನುಲ್ಲ ಅಂತ ನನಗೆ ಗೊತ್ತು. ನಿಮಗೆ ಸಾವಿತ್ರಿ ಮೇಲೆ ಅನುಕಂಪ ಜಾಸ್ತಿ."

"ನಿನಗಿಷ್ಟವಾದರೆ, ನನಗೂ ಸರಿ.... ಸಾವಿತ್ರಿಯನ್ನು ನಮ್ಮ ಮನೆಗೇ ಕರೆದು ಕೊಂಡು ಬರಬಹುದಾಗಿತ್ತಲ್ಲ"

"ಸಾವಿತ್ರಿಗೆ ಇದ್ಯಾವ ವಿಷಯವೂ ತಿಳಿಯದು. ಅಮ್ಮ ಪ್ರವಾಸ ಮುಗಿಸಿ ಬಂದ ಮೇಲೆ ಸಿಕ್ಕಾಪಟ್ಟೆ ರಂಪ ಮಾಡಿದಳು. ಅಮ್ಮ ಮಾತನ್ನೇ ಆಡದಿರುವುದರಿಂದ, ಸಾವಿತ್ರಿ ಹೆದರಿ, ಸುಕನ್ಯಳ ಮನೇಲಿದಾಳೆ. ಅಲ್ಲಿ ಅವರು ಇಬ್ಬರೇ. ಇಲ್ಲಿ ನಿಮ್ಮ ತಂದೆ ತಾಯಿ ಕೇಳಿದರೆ ನಾನು ಏನು ಹೇಳಲಿ! ಅಲ್ಲದೇ ನಿಮ್ಮ ಅಕ್ಕತಂಗಿಯರು ಯಾರಾದರೂ ಬಂದು ಕೇಳಿದರೆ!"

"ಎಲ್ಲಾವನ್ನು ಅಪ್ಪ ಅಮ್ಮನಿಂದ ಮುಚ್ಚಿಡುಕ್ಕೆ ಆಗುಲ್ಲ. ಕೆಲವು ವಿಷಯ ಗಳನ್ನು ತಿಳಿಸಲೇಬೇಕಾಗುತ್ತದೆ"

"ಈಗ ಹೇಗೂ ನೀವೂ ಇದೀರಲ್ಲ. ಸಾವಿತ್ರೀನ ಕೇಳ್ತೀನಿ. ಅವಳು ಒಪ್ಪಿದರೆ ಕರೆದುಕೊಂಡು ಬರ್ತೀನಿ. ಆದರೆ ಅವಳ ಜತೆಗೆ ಸದಾ ಒಬ್ಬರು ಇರಬೇಕಾಗುತ್ತದೆ. ನಾನು ಕೆಲಸಕ್ಕೆ ಹೋಗಬೇಕು. ಸುಕನ್ಯ ಕೆಲಸ ಬಿಟ್ಟಿದಾಳೆ. ಸದಾ ಅವಳು ಜತೇಲೇ ಇರ್ತಾಳೆ. ಅದೇ ಸರಿ ಅಂತ ಅನ್ನಿಸುತ್ತೆ...."

ಸುರೇಶ ಏನನ್ನೂ ಹೇಳಲಿಲ್ಲ. ಅವನು ಬೇರೇನನ್ನೋ ಯೋಚಿಸುತ್ತಿದ್ದ. ಸಾವಿತ್ರಿ ಸುಳ್ಳು ಹೇಳಿದಳೆ? ಅಥವಾ ನಿಜವಾಗಿಯೂ ಯಾರಾದರೂ ರೇಪ್ ಮಾಡಿ ದಾರೆಯೆ! ಮುಕುಂದನಿರಬಹುದೆ? ಅವಳನ್ನೇ ಕೇಳಬೇಕು. ಈ ಯೋಚನೆ ಯಲ್ಲಿ ಅವನು ಸರಳನ ಬಗ್ಗೆ ಹೆಚ್ಚಿಗೆ ಗಮನ ಕೊಡಲಿಲ್ಲ. ಗಂಡನ ಚಿಂತೆಗೆ ಕಾರಣವೇನಿರ

ಬಹುದು ಎಂದು ಅರಿಯದ ಸರಳ ಹೆಚ್ಚು ಮಾತನಾಡಿಸದೇ ತನ್ನ ಪಾಡಿಗೆ ತಾನು ಮಲಗಿದ್ದಳು.

ಸುರೇಶ ವಿದೇಶದಿಂದ, ಸರಳಂಗೊಂದು ಕೈ ಗಡಿಯಾರ, ಸಾವಿತ್ರಿಗೆ ಒಂದು ಒಳ್ಳೆಯ ಕಪ್ಪು ಕನ್ನಡಕ, ಹಾಗೂ ತನ್ನ ತಾಯಿಗೊಂದು ಪುಟ್ಟ ಅಲಾರಾಂ ಗಡಿಯಾರ ಗಳನ್ನು ತಂದಿದ್ದ. ಯಾವುದನ್ನೂ ಆಚೆಗೆ ತೆಗೆದಿರಲಿಲ್ಲ. ನಾಳೆ ನಾಡಿದ್ದರಲ್ಲಿ ತೆಗೆದ ರಾಯ್ತು ಎಂದುಕೊಂಡಿದ್ದ. ತನಗೇನಾದರೂ ತಂದಿದ್ದೀರಾ ಎಂದು ಸರಳ ಉತ್ಸಾಹ ದಿಂದ ಕೇಳಿರಲಿಲ್ಲ. ಅವಳ ಉದಾಸೀನಕ್ಕೆ ಮನೆಯ ರಂಪ ರಾದ್ಧಾಂತವೇ ಕಾರಣವಿರ ಬಹುದು ಎಂದುಕೊಂಡ.

ಸುಕನ್ಯ ಮನೆಯಲ್ಲಿದ್ದ ಸಾವಿತ್ರಿಯನ್ನು ಸುಲಭವಾಗಿ ಭೇಟಿಯಾಗು ವಂತಿರಲಿಲ್ಲ. ಮುಕುಂದ ಏನು ತಿಳಿಯುಕೊಂಡಾನು? ಅವಳಂತೂ ತಾನಾಗಿಯೇ ಆಚೆ ಬರುವಂತಿಲ್ಲ. ಆದರೂ ಅವಳನ್ನು ಒಂದು ಸಲ ಭೇಟಿಯಾಗಬೇಕು. ಏಕಾಂತ ದಲ್ಲಿ ತನಗಾಗಿರುವ ಸಂತೋಷವನ್ನು ಹೇಳಬೇಕು....ಏನೋ ಆತಂಕ ದಿಗಿಲಿನಿಂದ ಅವನಿಗೆ ನಿದ್ದೆ ಬರಲಿಲ್ಲ.

* * *

ಸ್ಕ್ಯಾನಿಂಗ್ ಮಾಡಿದ ಡಾಕ್ಟರು ಅನುಮಾನದಿಂದ ಮತ್ತೆ ಮತ್ತೆ ನೋಡಿ ದೃಢ ಮಾಡಿಕೊಂಡರು. ಅವರಿಗೆ ಆಶ್ಚರ್ಯ,....ಸಾವಿತ್ರಿಗೆ ಕಣ್ಣು ಕಾಣಿಸುವಂತಿದ್ದರೆ, ಅವಳಿಗೂ ತೋರಿಸಬಹುದಾಗಿತ್ತು. ಸಾವಿತ್ರಿಯ ಗರ್ಭದಲ್ಲಿ ಅವಳಿ ಮಕ್ಕಳು!! ಅದು ಅವರಿಗೆ ಕೌತುಕದ ಸಂಗತಿ. ತಾವು ನಡೆಸಿದ ಪ್ರಯೋಗ, ಕೇವಲ ಒಂದೇ ಒಂದು ಶಿಶುವಿಗಾಗಿ.. ಅದು ಹೇಗೆ ಅವಳಿ ಮಕ್ಕಳಾಗಿ ಮಾರ್ಪಾಡಾದವು?... ಡಾಕ್ಟರು ತಕ್ಷಣ, ಸಾವಿತ್ರಿಯನ್ನು ಪರಿಶೀಲಿಸಿದ, ಪ್ರಯೋಗದಲ್ಲಿ ಸಹಾಯ ಮಾಡಿದ ಅಸಿಸ್ಟೆಂಟ್ ಡಾಕ್ಟರನ್ನು ಕರೆಸಿ, ವಿಷಯವನ್ನು ತಿಳಿಸಿ ವಿಚಾರಣೆ ನಡೆಸಿದಳು.

ಎಲ್ಲರಿಗಿಂತ ಮೊದಲು ಸಾವಿತ್ರಿಯನ್ನು ಪರೀಕ್ಷೆ ಮಾಡಿದ್ದ ಡಾಕ್ಟರು, ಭಯ ದಿಂದ ಬಾಯಿ ಬಿಟ್ಟರು.

"ಇವಳು ಕನ್ಯೆಯಲ್ಲವೆಂದು ಅನುಮಾನ ಬಂದಿತ್ತು. ಆದರೆ ಹೀಗೇನಾದರೂ ಇರಬಹುದೆಂಬ ಅನುಮಾನ ಮಾತ್ರ ಇರಲಿಲ್ಲ."

"ಈಗ ಹೇಳ್ತೀರಲ್ರೀ....ಆಗಲೇ ಏಕೆ ತಿಳಿಸಲಿಲ್ಲ? ಅವಳನ್ನಾದರೂ ಕೇಳಬಹು ದಾಗಿತ್ತು. ಈಗ ಈ ದಂಪತಿಗಳು ಕೇಳಿದರೆ ಏನು ಹೇಳೋಣ."

"ಹೇಳದೇ ಸುಮ್ಮನಿದ್ದು, ಅವಳಿ ಮಕ್ಕಳು ಹುಟ್ಟಿದರೆ, ಬೇಡಾಂತ ಏಕೆ ಅಂತಾರೆ ಮೇಡಂ?"

"ನಾನ್ಸೆನ್ಸ್..ಇದು ನಾವು ನಡೆಸಿರುವ ಪ್ರಯೋಗದ ಮೇಲೆ ತಪ್ಪು ಕಲ್ಪನೆಯನ್ನು ತರಿಸುತ್ತದೆ..ಇಲ್ಲಿ ನಮ್ಮ ತಪ್ಪು ಏನೂ ಇರುವಂತಿಲ್ಲ. ಕಾನೂನು ಸಹ ಒಂದು ಮಗುವಿಗೆ ಒಪ್ಪಂದದ ಸಹಿ ಹಾಕಿಸಿದೆ. ಆ ದಂಪತಿಗಳು ಇಲ್ಲದ ಗಲಾಟೆ ಮಾಡಿದರೆ, ನಮ್ಮ ನರ್ಸಿಂಗ್ ಹೋಂಗೇ ಅವಮಾನ. ಅವರು ನಮ್ಮ ವಿರುದ್ಧ ಏನಾದರೂ ಆಡುವ ಮೊದಲು, ನಮ್ಮದೇನೂ ತಪ್ಪಿಲ್ಲ ಅಂತ ತೀರ್ಮಾನವಾಗಿರಬೇಕು. ನಾನು ಸಾವಿತ್ರಿ ಹತ್ತಿರ ಮಾತನಾಡ್ತೀನಿ. ಅವಳನ್ನು ಇಲ್ಲಿಗೆ ಕರೆದು ಕೊಂಡು ಬನ್ನಿ."

"ಸಾವಿತ್ರಿ... ನಿನ್ನ ಹೊಟ್ಟೇಲಿ ಅವಳಿ ಮಕ್ಕಳು ಬೆಳೆಯುತ್ತಿವೆ. ಅದು ನಿನಗೆ ಗೊತ್ತಾ?

"ಹೌದಾ?" ಸಾವಿತ್ರಿ ಗಾಭರಿಯಿಂದ ಪಿಳಿ ಪಿಳಿ ಕಣ್ಣನ್ನು ಬಿಟ್ಟಳು.

"ಗಾಭರಿಗೆ ಕಾರಣವಿಲ್ಲ. ಆದರೆ ಒಂದು ಮಗು, ಎರಡು ಹೇಗಾಯ್ತು ಅಂತ ತಿಳಕೋಬೇಕು. ನಾನೊಂದು ಪ್ರಶ್ನೆ ಕೇಳ್ತೀನಿ. ನೀನು ನಿಜವನ್ನೇ ಹೇಳಬೇಕು"

ಸಾವಿತ್ರಿ ಗಲಿಬಿಲಿಗೊಂಡಳು...."ಏನು?" ಎಂದಳು ಕೆಳ ಉಸಿರಿನಲ್ಲಿ.

"ಪರವಾಗಿಲ್ಲ, ಹೇಳು. ನಾನು ಯಾರಿಗೂ ಹೇಳುವುದಿಲ್ಲ. ಹೆದರಬೇಡ. ನೀನು ಕನ್ಯೆಯಾಗಿರಲಿಲ್ಲವೆಂದು ನಮಗೆ ತಿಳಿದಿದೆ. ನಿನಗೆ ಯಾರಾದರೂ ಸ್ನೇಹಿತ ಇದಾನಾ?"

"ಇಲ್ಲ." ಎಂದಳು ಭಯದಿಂದ.

"ಇರಲಿ ಹೇಳು. ನಮ್ಮ ವೃತ್ತಿಯಲ್ಲಿ ಇದು ಅಪರೂಪವಲ್ಲ. ಅಲ್ಲದೇ ನಿನ್ನನ್ನು ಮೋಸಗೊಳಿಸುವವರೂ ಇರುತ್ತಾರೆ. ಅದು ಯಾರು ಅಂತ ತಿಳಿಸು ಪರವಾಗಿಲ್ಲ. ಯಾಕೆ ಅಂದ್ರೆ, ನಾವು ನಡೆಸಿದ ಮೊದಲ ಪ್ರಯೋಗ ಇದು. ಹೊಸ ರೀತಿಯದು. ಅದು ಎಲ್ಲಾ ರೀತಿಯಿಂದಲೂ ಸರಿಯಾಗಿರಬೇಕು ಅಲ್ಲವೆ? ಆದ್ದರಿಂದ ನಮಗೆ ಎಲ್ಲಾ ವಿಷಯವೂ ತಿಳಿದಿರಲೇಬೇಕು. ಇಲ್ಲದಿದ್ದರೆ ತೊಂದರೆಯಾಗುತ್ತದೆ. ನಿನಗಾಗಲೀ, ನಿನ್ನಲ್ಲಿ ಬೆಳೆಯುತ್ತಿರುವ ಮಗುವಿಗಾಗಲೀ ಯಾವುದೇ ರೀತಿಯ ತೊಂದರೆಯಾಗದಿರುವಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮ ಮೇಲಿರುತ್ತೆ.... ಒಂದು ವೇಳೆ ನಿನ್ನ ಅಕ್ಕ ಒಂದೇ ಮಗು ಸಾಕು ಅಂತ ಅಂದರೆ, ಇನ್ನೊಂದು ಮಗೂನ ನೀನು ಸಾಕಿಕೊಳ್ತೀಯಾ?"

"ನಾನಾ?...." ಎಂದು ತಡವರಿಸಿ ಪಿಳಿ ಪಿಳಿ ಕಣ್ಣು ಬಿಟ್ಟಳು.

"ನಿನ್ನಿಂದ ಸಾಕಲು ಸಾಧ್ಯಾನಾ? ನೀನೇ ಯೋಚಿಸು. ಅದಕ್ಕೇ ಕೇಳಿದ್ದು,... ಏನು ವಿಷಯ ನಡೆದಿದೆ ಅಂತ ನಿಜ ಹೇಳು... ಆ ಮನುಷ್ಯ ಯಾರು ಅಂತ ತಿಳಿದರೆ ಅವನನ್ನು ಕರೆಸಿ, ನಿನ್ನನ್ನು ಮದುವೆಯಾಗುವ ಇಷ್ಟವಿದೆಯಾ ಅಂತ ಕೇಳೋಣ. ಇಲ್ಲದಿದ್ದರೆ, ಮಗುವನ್ನಾದರೂ ಅವನಿಗೆ ಕೊಡೋಣ. ನಿನಗೆ ನ್ಯಾಯ ಸಿಗುವಂತೆ ಮಾಡೋಣ."

"ಅದು... ಅದು ಸಾಧ್ಯವಿಲ್ಲ. ಅವರಿಗೆ ಮದುವೆಯಾಗಿದೆ.. ಬೇರೆ ಯಾರಿಗೂ ನಮ್ಮ ಸಂಬಂಧದ ಬಗ್ಗೆ ಗೊತ್ತಿಲ್ಲ"

"ಓ... ಎಷ್ಟು ವರ್ಷದಿಂದ ನಿಮಗೆ ಈ ತರಹದ ಸ್ನೇಹ?"

"ಎರಡು ವರ್ಷಗಳಿಂದ..."

"ಇದುವರೆಗೂ ನಿಮ್ಮ ಮನೆಯವರ್‍ಯಾರಿಗೂ ಈ ವಿಷಯ ತಿಳಿಯದು ಅಂದರೆ ಆಶ್ಚರ್ಯವೇ..ಆತ ಯಾರು ಅಂತ ನಮಗೆ ಹೇಳು. ನಾನು ಯಾರಿಗೂ ತಿಳಿಸುವುದಿಲ್ಲ."

"ದಯವಿಟ್ಟು ಕೇಳಬೇಡಿ"

"ನೀನು ಹೇಳಲೇಬೇಕು. ಯಾಕೆ ಅಂದ್ರೆ. ಆ ಮನುಷ್ಯ ಯಾರು? ಆರೋಗ್ಯ ವಂತನೇ? ಅಲ್ಲವೆ? ಅವನಿಗೇನಾದರೂ ಕೆಟ್ಟ ಖಾಯಿಲೆ ಇದೆಯೆ? ಕೆಟ್ಟ ಚಟ ಯಾವು ದಾದರೂ ಇದೆಯ ಅಂತ ತಿಳಿದುಕೊಳ್ಳಬೇಕು... ಇಲ್ಲದಿದ್ದರೆ, ಹುಟ್ಟುವ ಮಕ್ಕಳಿಗೆ ಏನಾದರೂ ತೊಂದರೆಯಾದರೆ.... ಆ ಸಾಧ್ಯತೆಯೂ ಇರುತ್ತದೆ."

"ಅವರು ನನ್ನ ಅಕ್ಕನ ಗಂಡ.... ಅವರು ಹೇಗಿದಾರೋ ನನಗೆ ತಿಳಿಯದು.."

"ಯಾರೂ? ಮುಕುಂದನೇ...?" ಆಕೆ ಆಶ್ಚರ್ಯದಿಂದ ಕೇಳಿದರು.

"ಅಲ್ಲ. ಇನ್ನೊಬ್ಬರು....ಅವರು ನನ್ನನ್ನು, ತಮ್ಮ ಹೆಂಡತಿಗಿಂತ ಹೆಚ್ಚಾಗಿ ಪ್ರೀತಿಸುತ್ತಾರೆ."

"ಇದು ಅವರ ಮದುವೆಗೆ ಮುಂಚಿನ ಪ್ರೀತಿಯೋ, ನಂತರದ ಪ್ರೀತಿಯೋ..."

"ಮುಂಚಿನದು. ಆದರೆ ... ಮದುವೆಯ ನಂತರವೇ...."

"ತಿಳಿಯಿತು ಬಿಡು. ನಾನು ಅವರೊಡನೆ ಒಂದು ಸಲ ಮಾತನಾಡಬೇಕು"

"ಬೇಡ ಡಾಕ್ಟ್ರೇ..ನನಗೆ ಹೆದರಿಕೆ ಆಗುತ್ತೆ..ನಮ್ಮ ಮನೆಯಲ್ಲಿ ದೊಡ್ಡ ಹಗರಣವಾಗುತ್ತೆ... ನನ್ನ ಅಕ್ಕನಿಗೆ ನೋವಾಗುತ್ತದೆ."

ಸಾವಿತ್ರಿಯ ಬಗ್ಗೆ ಕನಿಕರವೆನಿಸಿತು.

ಮೊದಲೇ ಈ ವಿಷಯ ತಿಳಿದಿದ್ರೆ ಸುಕನ್ಯ ಮುಕುಂದರ ಹತ್ತಿರ ಎಲ್ಲಾ ಮಾತನಾಡಬಹುದಾಗಿತ್ತು. ಆದರೆ ಈಗ ಹೊಸ ಸಮಸ್ಯೆ ಉದ್ಭವವಾಗಿದೆ. ಹುಟ್ಟುವ ಮಕ್ಕಳಿಗೆ ಏನೂ ತೊಂದರೆ ಆಗದಿದ್ದರೆ ಸಾಕು. ನಮ್ಮ ನರ್ಸಿಂಗ್ ಹೋಂಗೆ ಕೆಟ್ಟ ಹೆಸರು ಬರಬಾರದು. ಆಕೆಯ ಯೋಚನೆ ಆಕೆಗೆ. ತಮ್ಮ ಪ್ರಯೋಗ ಯಶಸ್ವಿಯಾಗಬೇಕು. ಮಕ್ಕಳಿಲ್ಲದೆ ಕೊರಗುವ ದಂಪತಿಗಳಿಗೆ ಸಹಾಯವಾಗಬೇಕು. ನರ್ಸಿಂಗ್ ಹೋಂನ ಕೀರ್ತಿ ಹೆಚ್ಚಬೇಕು. ರಾಷ್ಟ್ರಖ್ಯಾತಿ ದೊರೆಯಬೇಕು. ಇಂತಹ ಹೆಬ್ಬಯಕೆ ಆಕೆಗೆ.

ಸಾವಿತ್ರಿಯನ್ನು ಕಳಿಸಿ, ಸುಕನ್ಯನನ್ನು ಕರೆಸಿ ಅವಳೊಡನೆ ಮಾತನಾಡಿದರು.

"ನಿಮ್ಮ ಸಿಸ್ಟರ್‌ಗೆ ಅವಳಿ ಮಕ್ಕಳು ಹುಟ್ಟುತ್ತವೆ. ಇದು ನಮ್ಮ ಊಹೆಗೂ ಮೀರಿದ್ದು. ನೀವು ಒಂದು ಮಗುವನ್ನು ಕೇಳಿದ್ರಿ. ದೇವರು ನಿಮಗೆ ಎರಡು ಮಕ್ಕಳನ್ನು ಕೊಡ್ತಿದಾನೆ."

"ಅದ್ಹೇಗೆ ಸಾಧ್ಯ ಡಾಕ್ಟರ್? ನೀವು ಲೆಕ್ಕಾಚಾರದಿಂದ ಒಂದೇ ಮಗು ಹುಟ್ಟುತ್ತೆ ಅಂತ ಅಂದಿದ್ರಿ... ಪ್ರಯೋಗದ ಫಲಿತಾಂಶ ಹೀಗೆ ಹೆಚ್ಚು ಕಡಿಮೆ ಆಗುವುದಾದರು ಹೇಗೆ? ನಮಗೆ ಒಂದೇ ಮಗು ಸಾಕು...."

"ಅದಕ್ಕೆ ಕಾರಣ ಏನು ಅಂತ ನಾವು ಸಂಶೋಧನೆ ನಡೆಸಿ ತಿಳಿದುಕೊಳ್ತೀವಿ. ಆದರೆ, ಇನ್ನೊಂದು ಮಗುವಿನ ಬಗ್ಗೆಯೂ ಈಗಿನಿಂದ ಯೋಚಿಸಿ."

"ಇನ್ನೊಂದನ್ನು ಯಾರಾದ್ರೂ ಕೇಳಿದ್ರೆ ಕೊಟ್ಟು ಬಿಡ್ತೀವಿ."

"ಅಷ್ಟು ಸುಲಭವಾಗಿ? ಈಗ ಇಷ್ಟು ಖರ್ಚು ಮಾಡ್ತಿದೀವಿ.... ಒಟ್ಟಿಗೇ ಎರಡು ಮಕ್ಕಳನ್ನು ಬೇಡ ಅಂತೀರಲ್ಲ...."

"ಮುಂದೆ ಸಾಕಿ, ಬೆಳಸಿ ದೊಡ್ಡದನ್ನಾಗಿ ಮಾಡಲು ಸಹ ಸಾಕಷ್ಟು ಖರ್ಚಾಗುತ್ತದೆ ಮೇಡಂ, ಈ ಕಾಲದಲ್ಲಿ ಒಂದು ಮಗುವನ್ನು ಬೆಳೆಸಿದರೆ ಸಾಕಾಗಿದೆ. ಈಗಲೂ ಬೇಕಾದಷ್ಟು ಖರ್ಚುಗಳಿವೆ. ಸಾವಿತ್ರಿಗೆ ಮದುವೆ ಆಗಿದ್ದಿದ್ದರೆ, ಅವಳನ್ನೇ ಸಾಕಿಕೋ ಎಂದು ಹೇಳಬಹುದಾಗಿತ್ತು"

"ನಿಮ್ಮ ಇನ್ನೊಬ್ಬ ಸಿಸ್ಟರ್‌ನ ಕೇಳಿದ್ರೆ?"

"ಒಪ್ತಾರೋ ಇಲ್ಲವೋ.... ಅವರಿಗೇ ಸ್ವಂತ ಮಕ್ಕಳಾಗಬಹುದು... ನನ್ನ ತಂಗಿ ಸರಳ ಹುಂ ಎನ್ನಬಹುದೇನೋ, ಆದರೆ, ಆದರೆ ಅವಳ ಗಂಡನ ಸ್ವಭಾವ ನನಗೆ ತಿಳಿಯದು... ಅವರನ್ನು ಹೇಗೆ ಕೇಳುವುದು?"

"ಸಾರ್, ನಿಮ್ಮ ತಂಗಿ ಕಷ್ಟಪಟ್ಟು ಹೆತ್ತ ಮಕ್ಕಳು, ನಿಮ್ಮ ಸಂಸಾರದಲ್ಲೇ ಇರಲಿ ಅಂತ.. ಅನ್ನಿಸುಲ್ವಾ? ಇಲ್ಲದಿದ್ದರೆ ಬೇರೆ ಯಾರ ಕೈಗೋ ಸೇರುತ್ತೆ"

"ನೋಡೋಣ. ಅವರು ನಮ್ಮ ಯಜಮಾನರ ಆಪ್ತ ಸ್ನೇಹಿತ ಕೂಡಾ. ಅವರ ಕೈಲಿ ಹೇಳಿಸ್ತೀನಿ"

"ಹೌದಾ? ವೆರಿಗುಡ್ ನಿಮ್ಮ ಯಜಮಾನರನ್ನೇ ಕಳಿಸಿ, ನಾನೇ ಅವರ ಹತ್ತಿರ ಮಾತನಾಡ್ತೀನಿ"

ಸುಕನ್ಯ ಡಾಕ್ಟರು ಹೇಳಿದ ವಿಷಯವನ್ನು ತಿಳಿಸಿದಾಗ ಮುಕುಂದ ಆತಂಕ ಗೊಂಡ. "ಡಾಕ್ಟರು ಹೇಳಿದ್ರು ಅಂತ ಎರಡೂ ಮಕ್ಕಳು, ನಮಗಿರಲಿ ಅಂತ ಒಪ್ಪಿಕೋ ಬೇಡಿ.... ನನ್ನ ಕೈಲಿ ಆಗುಲ್ಲ"

"ಈಗ ಹೀಗಂದ್ರೆ ಹೇಗೆ? ಒಂದೋ ಎರಡೋ, ಅದು ನಮ್ಮ ಸಮಸ್ಯೆ. ಸುರೇಶನ್ನ ನಾನು ಹೇಗೆ ಕೇಳ್ಲಿ! ಡಾಕ್ಟರಿಗೇಕೆ ಈ ಕುತೂಹಲ! ಸಾಕುವ ಶಕ್ತಿ ಇಲ್ಲದಿದ್ದ ಮೇಲೆ ಈ ಪ್ರಯತ್ನ ಯಾಕೆ ಮಾಡಿದೆ ಅಂತ ನಗುಲ್ವೆ? ಎಷ್ಟು ಕಷ್ಟವಾದರೂ ಪರವಾಗಿಲ್ಲ. ಎರಡೂ ಮಕ್ಕಳೂ ನಮಗೇ ಇರಲಿ... ಇನ್ನೆರಡು ವರ್ಷ ಹೋದಮೇಲೆ ಸಾವಿತ್ರಿ ಮತ್ತೆ ಈ ಕೆಲಸಕ್ಕೆ ಒಪ್ತಾಳೋ ಇಲ್ಲವೋ... ನೀನಂತೂ ಸಾವಿತ್ರಿಗೆ ಏನನ್ನೂ ಹೇಳಬೇಡ."

"ಸರಳಂಗೂ ಮದುವೆಯಾಗಿ ಎರಡು ವರ್ಷ ಕಳೆಯಿತು. ಅವಳಿಗೆ ಇನ್ನೂ ಮಕ್ಕಳಾಗಿಲ್ಲವಲ್ಲ. ಏನು ತೊಂದರೆಯೋ ಏನೋ.... ಹಿಂದೆ ಒಂದು ಸಲ, ಮಕ್ಕಳಾಗಿಲ್ಲ ಅಂತ ನಾವು ಕೊರಗುವುದಿಲ್ಲ ಎಂದಿದ್ದಳು. ಹಾಗಾದರೆ ಏನೋ ಇರಬೇಕು. ಆದ್ದರಿಂದ ಅವಳು ಒಪ್ಪಿಯೇ ಒಪ್ತಾಳೆ. ಮಗು ಚಿಕ್ಕದಾಗಿರುವಾಗಲೇ ಕೊಟ್ಟರೆ ಅವಳಿಗೂ ಸುಲಭ ನಮಗೂ ಸುಲಭ"

"ಚೆನ್ನಾಗಿದೆ ನಿನ್ನ ನ್ಯಾಯ... ಈ ಪ್ರಯೋಗ ನಡೆಸಿದವರು ನಾವು ಸುರೇಶನ್ನ ನಾನು ಹೇಗೆ ಕೇಳಲಿ?"

"ಸರಿ ಬಿಡಿ. ಅದನ್ನು ಯೋಚಿಸುಕ್ಕೆ ಇನ್ನೂ ಬೇಕಾದಷ್ಟು ಸಮಯವಿದೆ. ನಿಮ್ಮ ಹತ್ತಿರ ಡಾಕ್ಟರು ಮಾತನಾಡಬೇಕಂತೆ. ಬಿಡುವು ಮಾಡಿಕೊಂಡು ಹೋಗಿ ಬನ್ನಿ."

"ಸುಕನ್ಯ ಒಂದ್ಮಾತು ಹೇಳ್ತೀನಿ... ಸಿಟ್ಟಾಗಬೇಡ. ಈ ಎಲ್ಲಾ ತಾಪತ್ರಯ ಗಳಿಗಿಂತ ಮಗು ಇಲ್ಲದಿದ್ದರೂ ಪರವಾಗಿರಲಿಲ್ಲ. ನಾವಿಬ್ಬರೇ ಆರಾಮವಾಗಿರ

ಬಹುದಾಗಿತ್ತು... ಇರಲಾರದೇ ಇರುವೆ ಮುತ್ತಿಸಿಕೊಂಡ ಲೆಖ್ಖಾಚಾರ ಇರು"

"ಸರಿ ಬಿಡಿ. ನಿಮಗಷ್ಟು ಬೇಜಾರಾಗಿದ್ರೆ ಎರಡೂ ಮಕ್ಕಳನ್ನು ಯಾವುದಾದರೂ ಅನಾಥಾಶ್ರಮಕ್ಕೆ ಕೊಟ್ಟು ಬಿಡೋಣ. ಅಲ್ಲಿಗೆ ನಿಶ್ಚಿಂತೆ"

"ಇದಿಷ್ಟಕ್ಕೆ, ಈ ಸುಳ್ಳು, ಈ ನಾಟಕ ಎಲ್ಲಾ ಯಾಕೆ ಆಡಬೇಕಾಗಿತ್ತು? ಸಾವಿತ್ರೀನ ಯಾಕೆ ಗೋಳು ಹುಯ್ದುಕೊಂಡು ಬಲವಂತ ಮಾಡಬೇಕಾಗಿತ್ತು?"

"ಸಾವಿತ್ರಿ ಮೇಲೆ ಅಷ್ಟು ಕರುಣೆ ಇದ್ದರೆ, ಈಗಲೂ ಅವಳನ್ನು ಮದುವೆಯಾಗಿ, ಈಗ ಹೇಗೂ ಅವಳಿ ಮಕ್ಕಳ ತಾಯಿಯಾಗ್ತಾಳೆ. ನಾನು ನಿಮ್ಮಿಂದ ದೂರ ಎಲ್ಲಾದ್ರೂ ಹೋಗ್ತೀನಿ"

"ಬೇಡ ಡಿಯರ್. ಪಾಪ, ಸಾವಿತ್ರಿ ಕಣ್ಣಿಲ್ಲದವಳು ಎರಡೆರಡು ಮಕ್ಕಳನ್ನು ನೋಡಿಕೊಳ್ಳುವುದು ಅವಳಿಗೆ ಕಷ್ಟ ಆಗುತ್ತೆ. ನೀನು ಗವರ್ನೆಸ್ ತರಹ ನಮ್ಮ ಜತೇಲೇ ಇದ್ದು ಬಿಡು. ನಾನು ನಿನ್ನನ್ನು ಚೆನ್ನಾಗಿ ನೋಡಿಕೊಳ್ತೀನಿ" ಮುಕುಂದ ನಕ್ಕಾಗ ಅವನ ಮಾತಿನ ಅರ್ಥವಾಗಿ ತಾನೂ ನಕ್ಕಳು.

ಡಾಕ್ಟರ ಹತ್ತಿರ ಸಮಯ ಕೇಳಿಕೊಂಡು ಅವರನ್ನು ಭೇಟಿಯಾದ ಮುಕುಂದ. ನಮಸ್ಕಾರ ಪ್ರತಿ ನಮಸ್ಕಾರದ ನಂತರ, ಅವರ ಎದುರಿನ ಕುರ್ಚಿಯಲ್ಲಿ ಕುಳಿತು ಆಕೆಯೇ ಮಾತನಾಡಲಿ ಎಂದು ಸುಮ್ಮನೇ ಕಾದ.

"ಸಾವಿತ್ರಿಗೆ ಅವಳಿ ಮಕ್ಕಳಿವೆ ಎನ್ನುವ ವಿಚಾರವನ್ನು ನಿಮ್ಮ ಮಿಸೆಸ್ ತಿಳಿಸಿರಬಹುದು. ಆದರೆ ಅದರಲ್ಲಿ ಒಂದು ಮಗು ಮಾತ್ರ ನಿಮ್ಮದು ಎಂದು ಧೈರ್ಯವಾಗಿ ಹೇಳಬಲ್ಲೆ. ಏಕೆಂದರೆ ನಾವು ಪೂರ್ಣ ಪರಿಶೀಲನೆ ನಡೆಸಿ, ಪ್ರಯೋಗವನ್ನು ಮಾಡಿದ್ದೆವು... ಆದರೆ ಇನ್ನೊಂದು ಮಗು, ಯಾರದ್ದಿರಬಹುದು ಎಂದು ನಿಮಗೇನಾದರು ತಿಳಿದಿದೆಯೆ?"

ಇದ್ದಕ್ಕಿದ್ದಂತೆ ಸಾವಿತ್ರಿ ತನ್ನ ಮೇಲೆ ತಾನಾಗಿಯೇ ಹಾಕಿಕೊಂಡ ರೇಪ್‌ನ ಅಪವಾದದ ನೆನಪಾಯಿತು. ಅದು ನಿಜವಿರಬಹುದೆ? ಸಾವಿತ್ರಿ ಮುಂಚೆಯೇ ಯಾಕೆ ತಿಳಿಸಲಿಲ್ಲ ಎಂದುಕೊಂಡರೂ, ಅವಳ ಮೇಲೆ ಅನುಮಾನ ಪಡುವುದು ತರವಲ್ಲ ಎಂದುಕೊಂಡು,

"ನೀವು ಏನು ಹೇಳ್ತಿದೀರಿ ಡಾಕ್ಟರ್? ಸಾವಿತ್ರಿಯ ಮೇಲೆ ನಾನು ಹೇಗೆ ಅನುಮಾನ ಪಡಲಿ? ಅವಳ ಸ್ಥಿತಿ ನಿಮಗೆ ತಿಳಿದದ್ದೇ... ಅವಳು ಕೆಟ್ಟ ಹುಡುಗಿಯಂತೂ ಖಂಡಿತಾ ಅಲ್ಲ."

"ಮುಂದೆ ಹುಟ್ಟಲಿರುವ ಮಕ್ಕಳಿಗೆ ಯಾವ ತೊಂದರೆಯೂ ಆಗಬಾರದು ಎನ್ನುವ ದೃಷ್ಟಿಯಿಂದ ನಿಮ್ಮ ಹತ್ತಿರ ಮಾತನಾಡ್ತಿದೀನಿ.... ಎರಡೂ ಆರೋಗ್ಯವಂತ ಮಕ್ಕಳಾಗಿ ಹುಟ್ಟಬೇಕು. ಒಂದಕ್ಕೆ ತೊಂದರೆ ಇದ್ದರೂ, ದೊಡ್ಡ ಸಮಸ್ಯೆ ಎದ್ದೇಳುತ್ತೆ. ಇದಕ್ಕೆ ನಾವು ಜವಾಬ್ದಾರರಾಗಲು ಇಷ್ಟವಿಲ್ಲ...ಸಾವಿತ್ರಿ ಮೊದಲೇ ತಿಳಿಸಿದ್ದರೆ ಚೆನ್ನಾಗಿತ್ತು. ಸಾವು ಬಲವಂತ ಪಡಿಸಿದ ಮೇಲೆ ಎಲ್ಲಾ ಹೇಳಿದಾಳೆ."

"ಏನು ಹೇಳಿದಳು? ನಮಗ್ಯಾರಿಗೂ ಏನೂ ತಿಳಿಯದು?"

"ಹೌದು. ಅವಳು ಯಾರಿಗೂ ತಿಳಿಸಿಲ್ಲ. ನಾನು ಮತ್ತೆ ಮತ್ತೆ ಒತ್ತಿ ಕೇಳಿದ್ದರಿಂದ ನನಗೆ ತಿಳಿಸಿದ್ದಾಳೆ. ಅವಳಿಗೊಬ್ಬ ಸ್ನೇಹಿತನಿದಾನೆ. ಅವನ್ಯಾರು ಅಂತ ನಿಮಗೆ ಗೊತ್ತೆ?"

ಮುಕುಂದ ಪೆಚ್ಚಾದ. "ನನಗೆ ಹೇಗೆ ಗೊತ್ತಾಗಬೇಕು? ನನಗೆ ಯಾವ ಅನುಮಾನವೂ ಇರಲಿಲ್ಲ." ಮತ್ತೆ ಆ ರೇಪ್‌ನ ಪ್ರಕರಣ ನೆನಪಾಯಿತು.

"ನಿಮ್ಮ ಸ್ನೇಹಿತ, ನಿಮ್ಮ ನಾದಿನಿಯ ಗಂಡ, ಸುರೇಶ ಎನ್ನುವವರು....ಅವರು ಸಾವಿತ್ರಿಯನ್ನು ಹೆಂಡತಿಗಿಂತ ಹೆಚ್ಚು ಪ್ರೀತಿಸ್ತಾರಂತೆ."

ಮುಕುಂದ ಧಿಗ್ಗನೆ ಎದ್ದು ನಿಂತ. ದಿಗ್ಭ್ರಮೆಯಿಂದ ಅವನು ಕಂಪಿಸುತ್ತಿದ್ದ. ಅವನ ಮುಖ ಕೆಂಪಾಗಿತ್ತು.

"ಈಗ ಸಿಟ್ಟು ಮಾಡಿಕೊಂಡರೆ ಏನೂ ಪ್ರಯೋಜನವಿಲ್ಲ. ಇದರಲ್ಲಿ ಎಲ್ಲಾ ತಪ್ಪು ಸಾವಿತ್ರಿಯದೇ... ಅವಳು ವಿಷಯವನ್ನು ಮುಂಚೆಯೇ ತಿಳಿಸಿದ್ದರೆ ಚೆನ್ನಾಗಿತ್ತು. ಹೆದರಿರಬಹುದು. ಅಜ್ಞಾನಿಯಂತೆ ಸುಮ್ಮನಿದ್ದು ಬಿಟ್ಟಳು. ಹೋಗಲಿ. ಈಗ ಈ ಸ್ಟೇಜ್‌ನಲ್ಲಿ ಏನೂ ಮಾಡುವಂತಿಲ್ಲ. ಆ ಮಕ್ಕಳು ಬೆಳೆಯಲೇಬೇಕು. ಸಾವಿತ್ರಿ ಹೆರಲೇಬೇಕು. ಈಗ ನೀವು ನಿಮ್ಮ ಸ್ನೇಹಿತನ ಹತ್ತಿರ ಮಾತನಾಡಿ ಒಪ್ಪಂದ ಮಾಡಿಕೊಳ್ಳಿ. ಒಂದು ಮಗುವನ್ನು ಸಾಕುವಂತೆ, ಒಪ್ಪಿಸಿ. ಮುಖ್ಯವಾದ ವಿಷಯವೇನೆಂದರೆ, ನನಗೆ ಆತನ ಬಗ್ಗೆ ಮಾಹಿತಿಬೇಕು. ಅವರ ಬ್ಲಡ್‌ಗ್ರೂಪ್, ಅವರ ಆರೋಗ್ಯ, ಅವರ ನಡೆವಳಿಕೆ ಯಾವುದಾದರೂ ದುಶ್ಚಟವಿದೆಯೋ, ಇದೆಲ್ಲದರ ಬಗ್ಗೆ ನನಗೆ ಮಾಹಿತಿ ಬೇಕು. ಏನಾದರೂ ತೊಂದರೆ ಇದ್ದರೆ ಈಗಲೇ ಎಚ್ಚರಿಕೆ ವಹಿಸಬೇಕು. ಇಲ್ಲದಿದ್ದರೆ ಹುಟ್ಟುವ ಮಕ್ಕಳಿಗೆ ತೊಂದರೆಯಾಗುವ ಸಾಧ್ಯತೆ ಇರುತ್ತದೆ."

ಮುಕುಂದ ಬೆವರಿದ್ದ. ಅವನು ಸಾವರಿಸಿಕೊಂಡು ನುಡಿದ.

"ನಾನೂ ಅವನೂ ತುಂಬಾ ವರ್ಷದಿಂದ ಸ್ನೇಹಿತರು. ನನಗೆ ತಿಳಿದಂತೆ

ಅವನಲ್ಲಿ ಯಾವ ದುಶ್ಚಟವೂ ಇಲ್ಲ. ಹೆಲ್ತ್ ಬಗ್ಗೆ ಯಾವ ತೊಂದರೆಯೂ ಇಲ್ಲ. ಬ್ಲಡ್‌ಗ್ರೂಪ್ ಸಹ ಇಬ್ಬರದೂ ಒಂದೇ.....ನಾವಿಬ್ಬರೂ ಇಷ್ಟು ಸ್ನೇಹಿತರಾದರೂ, ನನಗೆ ಈ ವಿಷಯ ತಿಳಿದಿರಲಿಲ್ಲ. ನನ್ನ ಮದುವೆಯ ಸಮಯದಲ್ಲಿ ಅವನು ಸಾವಿತ್ರಿಯನ್ನು ಮೊದಲು ನೋಡಿದ್ದು.... ಒಂದು ವಿಷಯ ಮಾತ್ರ ನಿಜ. ಅವಳನ್ನು ಅವನು ಪ್ರೀತಿಸುತ್ತಿದ್ದ. ಅವಳನ್ನೇ ಮದುವೆಯಾಗುವ ಆಸೆಯನ್ನು ಸಹ ಇಟ್ಟುಕೊಂಡಿದ್ದ... ಆದರೆ ನಾವುಗಳು ಅವನಿಗೆ ತಿಳುವಳಿಕೆ ಹೇಳಿ, ಅವನು ಸರಳನ್ನ ಮದುವೆಯಾಗಲು ಒಪ್ಪಿಸಿದೆವು. ಆದರೆ ಆ ನಂತರ, ಅವನು ಸಾವಿತ್ರಿಯೊಡನೆ ಸಂಬಂಧ ಇಟ್ಟುಕೊಂಡಿದ್ದ ಎನ್ನುವುದು ನಮಗ್ಯಾರಿಗೂ ತಿಳಿದೇ ಇರಲಿಲ್ಲ. ಸಾವಿತ್ರಿ ಇದುವರೆಗೂ ಯಾರೊಡನೆಯೂ ಹೇಳಿಲ್ಲ.''

''ಓ.... ಸಾಕಷ್ಟು ಏನೇನೋ ನಡೆದಿದೆ. ನೋಡೋಣ ಏನಾಗುತ್ತೆ ಅಂತ. ಹೆಲ್ತ್ ಬಗ್ಗೆ ಏನೂ ಸಮಸ್ಯೆ ಇಲ್ಲ ಅಂದರೆ, ಮಕ್ಕಳು ಸರಿಯಾಗಿ ಬೆಳೆಯುತ್ತವೆ. ಇನ್ನು ಮಕ್ಕಳ ಬಗ್ಗೆ ನೀವಿಬ್ಬರೂ ಕಾಂಪ್ರಮೈಸ್ ಮಾಡಿಕೊಳ್ಳಬೇಕು. ನಿಮ್ಮ ಸ್ನೇಹಿತರ ಹತ್ತಿರ ಮಾತನಾಡಿ, ಒಂದು ಮಗುವನ್ನು ಅವರಿಗೆ ಒಪ್ಪಿಸ್ತೀರಾ? ಅಥವಾ ಎರಡೂ ಮಕ್ಕಳನ್ನು ನೀವೇ ಸಾಕ್ತೀರಾ? ನೀವೇ ನಿರ್ಧರಿಸಿ. ಕಾನೂನಿನ ಪ್ರಕಾರ ಎರಡೂ ನಿಮ್ಮ ಮಕ್ಕಳೇ. ಆದರೆ ನಿಮ್ಮ ಮಿಸೆಸ್ ಒಂದೇ ಮಗು ಸಾಕು ಅಂತ. ಹಠ ಮಾಡಿದರೆ ಏನು ಮಾಡ್ತೀರಾ?''

''ನನಗೆ ಯೋಚಿಸಲು ಸ್ವಲ್ಪ ಸಮಯಬೇಕು. ಅಲ್ಲದೇ ಮೊದಲು ನನ್ನ ಸ್ನೇಹಿತನ ಹತ್ತಿರ ಮಾತನಾಡ್ತೀನಿ.'' ವಂದಿಸಿ ಹೊರಬಂದ. ಅವನ ಮನಸ್ಸು ಕ್ಷುಬ್ಧಗೊಂಡಿತ್ತು. ಸುರೇಶ, ಸುಕನ್ಯ, ಸಾವಿತ್ರಿ ಎಲ್ಲರ ಮೇಲೂ ಕೋಪ ಬಂದಿತ್ತು. ಎಲ್ಲರದೂ ತಪ್ಪು ಎಂದು ಅನ್ನಿಸಿದರೂ, ಒಬ್ಬರ ವಿಷಯ ಇನ್ನೊಬ್ಬರಿಗೆ ತಿಳಿಯದೇ, ಒಂದು ತರಹದ ಕ್ಷೋಭೆ ಉಂಟಾಗಿತ್ತು.

''ಸಾವಿತ್ರಿ ಒಳ್ಳೆಯ ಹುಡುಗಿ ಅಂತ ತಿಳಿದುಕೊಂಡಿದ್ದೆ. ಅವಳೇಕೆ ಹೀಗೆ ಮಾಡಿದಳು! ಅವಳು ಸುರೇಶನ ಪ್ರೀತಿಯ ಮಾತುಗಳಿಗೆ ಮರುಳಾಗಿರಬೇಕು. ಆದರೆ ಅವನ ಮದುವೆಯಾದ ಮೇಲೆ, ಆ ಪ್ರೀತಿ ಅಲ್ಲಿಗೇ ಮುಗಿದಿರಬೇಕು ಎಂದುಕೊಂಡಿದ್ದೆನಲ್ಲ. ಆದರೆ ಸರಳಿಗೆ ತಿಳಿಯದಂತೆ ಇಬ್ಬರೂ... ಛೇ'' ತಲೆ ಅಲ್ಲಾಡಿಸಿದ.

ಅವನ ಹತ್ತಿರ ಮಾತನಾಡಿ, ಅವನಿಗೆ ಚೆನ್ನಾಗಿ ಛೀಮಾರಿ ಹಾಕಬೇಕು. ಕೈ ಹಿಡಿದ ಹೆಂಡತಿಗೆ ದ್ರೋಹ ಮಾಡಿದಾನೆ. ಏನೂ ಅರಿಯದ ಸಾವಿತ್ರಿಯನ್ನು

ಮೋಸಗೊಳಿಸಿದಾನೆ. ಛೆ. ಅವನನ್ನು ಸ್ನೇಹಿತ ಅಂತ ನಂಬಿದ್ದೂ ಅಲ್ಲದೇ ಸರಳನ ಬಾಳನ್ನು ನಾನಾಗಿಯೇ ಹಾಳು ಮಾಡಿದ ಹಾಗಾಯ್ತು. ಅವನ ಬಗ್ಗೆ ನನಗೆ ಯಾವ ಸಂದೇಹವೂ ಇರಲಿಲ್ಲ. ಯಾಕೆ ಹೀಗೆ ಮಾಡಿದ? ಅವನು ಅವಳೊಡನೆ ಸಂಬಂಧ ಇಟ್ಟುಕೊಂಡಿದಾನೆ ಅಂತ ನನಗೆ ಸುಳಿವು ಸಿಕ್ಕಿದ್ದಿದ್ದರೆ ಈ ಪ್ರಯೋಗಕ್ಕೆ ಸಾವಿತ್ರಿಯನ್ನು ಖಂಡಿತಾ ಒಪ್ಪಿಸುತ್ತಿರಲಿಲ್ಲ. ಪಾಪ, ಇವರಿಬ್ಬರೂ, ತಂಗಿ ಅಂತೂ ನಿಷ್ಕಳಂಕ ಅಂತ ತಿಳಿದುಕೊಂಡಿದಾರೆ. ಈಗ ಅವರಿಗೆ ಈ ವಿಷಯ ತಿಳಿದರೆ ಏನನ್ನಿಸಬಹುದು! ಇಬ್ಬರೂ ಅವಳನ್ನು ಬೈಯಬಹುದು...ದೂರಬಹುದು. ಅವಳ ಬಗ್ಗೆ ತಿರಸ್ಕಾರ ಹುಟ್ಟಬಹುದು.... ಹುಟ್ಟಲಿರುವ ಮಕ್ಕಳ ಬಗ್ಗೆ ಅಸಹ್ಯ ಮಾಡಬಹುದು. ಇಲ್ಲದ ರಂಪ ರಾದ್ಧಾಂತವಾಗಬಹುದು. ಸರಳ ಸುರೇಶರಲ್ಲಿ ಒಡಕು ಮೂಡುತ್ತದೆ. ಇಬ್ಬರೂ ಬೇರೆ ಬೇರೆ ಆಗಬಹುದು... ಇದಕ್ಕೆಲ್ಲಾ ತಾನೇ ಕಾರಣನಾಗುತ್ತೇನೆ.... ಸಾವಿತ್ರಿ ಕುರುಡಿಯಾಗಿ ಕಷ್ಟ ಪಡುವುದಲ್ಲದೇ, ಮನೆಯವರ ನಿಂದನೆಯನ್ನು ಸಹಿಸಿಕೊಂಡು ಹೇಗಿರಬಲ್ಲಳು? ಈಗಾದರೆ ಎಲ್ಲರೂ ಅವಳ ಮೇಲೆ ವಿಶ್ವಾಸದ ಹೊನಲನ್ನೇ ಹರಿಸಿದ್ದಾರೆ.... ಈಗಿರುವ ಅಲ್ಪ ಸ್ವಲ್ಪ ನೆಮ್ಮದಿಯೂ ಹಾಳಾಗುತ್ತದೆ. ಹಾಗಾಗಬಾರದು. ಹಾಗಾಗದಂತೆ ನೋಡಿಕೊಳ್ಳಬೇಕು.....

ಬೇರೆ ಯಾರಿಗೂ, ತನಗೆ ಈ ವಿಚಾರ ತಿಳಿದಿದೆ ಎಂದು ಗೊತ್ತಾಗಲಾರದು. ಯಾರಿಗೂ ಯಾವ ಅನುಮಾನವೂ ಬರಬಾರದು. ಸುರೇಶನ ಹತ್ತಿರ ಮಾತನಾಡಿ ಇನ್ನಾದರೂ ಸಾವಿತ್ರಿಯ ಸಂಬಂಧವನ್ನು ಮರೆತು ಬಿಡು ಎಂದು ತಿಳುವಳಿಕೆ ಹೇಳಬೇಕು. ಇದೆಲ್ಲಾ ಇಲ್ಲಿಗೇ ಮುಗಿಯುವಂತೆ ಮಾಡಬೇಕು ಎಂದು ತನ್ನಲ್ಲೇ ನಿರ್ಧರಿಸಿದ.

ಭಾನುವಾರ ಸ್ನೇಹಿತನನ್ನು ಹುಡುಕಿಕೊಂಡು ಅವರ ಮನೆಗೆ ಬಂದ. ಸುರೇಶ ಎಲ್ಲಿಯೋ ಹೊರಟಿದ್ದವನು, ಸ್ನೇಹಿತನ್ನ ನೋಡಿ, "ಓ.....ನೀನಾ! ನಿನ್ನ ಮನೆಗೇ ಹೊರಟಿದ್ದೆ" ಎಂದ

"ಓಹೋ...........ನನ್ನನ್ನು ನೋಡೋಕ್ಕೋ ಅಥವಾ ಸಾವಿತ್ರೀನ ನೋಡೋಕ್ಕೋ...." ಕೆಣಕಿದ.

ಸುರೇಶ ಅಚ್ಚರಿಯಿಂದ ಸ್ನೇಹಿತನ ಮುಖ ನೋಡಿ, "ಅವಳೇಕೆ ನಿಮ್ಮ ಮನೆಯಲ್ಲಿದ್ದಾಳೆ?" ಕೇಳಿದ.

"ಅವಳು ಗರ್ಭಿಣಿ. ಅವಳಿಗೆ ಹೆರಿಗೆಯಾಗುವವರೆಗೂ ನಮ್ಮ ಮನೆ

ಯಲ್ಲಿಯೇ ಇರ್ತಾಳೆ. ಯಾಕೆ ಕೇಳಿದೆ?" ಓರೆಗಣ್ಣಿನಲ್ಲಿ ಅವನನ್ನು ನೋಡಿದ. ಸ್ನೇಹಿತನ ಹಣೆಯ ಮೇಲೆ ಬೆವರಿನ ಸಾಲುಗಳನ್ನು ಕಂಡ. "ಪಾಪ ಅವಳಿಗೆ ತುಂಬಾ ಕಷ್ಟ-ಅವಳಿ ಮಕ್ಕಳು ಹುಟ್ಟುತ್ತವಂತೆ..... ಪಾಪ ಸಾವಿತ್ರಿಗೆ ಈ ಕಷ್ಟ ಬರಬಾರದಾಗಿತ್ತು."

"ಹೌದಾ!" ಅಚ್ಚರಿಯಿಂದ ಕಣ್ಣರಳಿಸಿದ ಸುರೇಶ.

"ಆ ಮಕ್ಕಳು ಯಾರದ್ದು ಅಂತ ನಿನಗೇನಾದರೂ ಗೊತ್ತಾ?" ಕೆದಕಿ ಪ್ರಶ್ನಿಸಿದ.

"ಸಾವಿತ್ರೀನ ಕೇಳಲಿಲ್ವಾ!ಅವಳು ಏನಂದಳು?"

"ಅವಳು ಮೊದಲಿಗೆ ಏನನ್ನೂ ಹೇಳಲಿಲ್ಲ. ತಾಯಿ ರಂಪ ರಾದ್ಧಾಂತ ಮಾಡಿದ ಮೇಲೆ, ಮನೆಯಲ್ಲಿ ಯಾರೂ ಇಲ್ಲದಾಗ,ಯಾವನೋ ಬಂದು ರೇಪ್ ಮಾಡಿದ ಅಂತ ಹೇಳಿದಳಂತೆ." ಮುಕುಂದ ಸುರೇಶನನ್ನೇ ಗಮನಿಸಿದ.

"ಸುಳ್ಳು ಅವಳು ಹೇಳಿದ್ದು ಸುಳ್ಳು.....ಯಾರೂ ರೇಪ್ ಮಾಡಿಲ್ಲ" ಆವೇಶದಿಂದ ಕೂಗಿದ. ಮುಕುಂದ ನಕ್ಕ.

"ನಿನಗೇಕಯ್ಯಾ ಉದ್ವೇಗ? ರೇಪ್ ನಡೆದಿಲ್ಲ ಅಂತ ನಿನಗೆ ಹೇಗೆ ಗೊತ್ತು?" ಸುರೇಶ ಸೋತ. ಆವೇಶದಲ್ಲಿ ಮಾತನಾಡಿಬಿಟ್ಟಿದ್ದ. ತೊದಲಿದ.

"ಸಾವಿತ್ರಿ ಜತೆ ನನ್ನ ಸಂಬಂಧವಿತ್ತು.ನಾನು ಅವಳನ್ನು ಪ್ರೀತಿಸ್ತೀನಿ. ಅವಳೂ ನನ್ನನ್ನು ಪ್ರೀತಿಸ್ತಾಳೆ. ಆ ಮಕ್ಕಳು ನನ್ನವು."

"ಅಲ್ಲ. ಕಾನೂನಿನ ಪ್ರಕಾರ ಆ ಮಕ್ಕಳು ನನ್ನವು ಅನ್ನುವ ವಿಚಾರ ನಿನಗೆ ತಿಳಿಯದು"

"ನಾನ್ಸೆನ್ಸ್. ಆ ಮಕ್ಕಳ ತಂದೆ ನಾನೇ...."

"ನೋ......ಅದರಲ್ಲಿ ಒಂದು ಮಗು ಮಾತ್ರ ನಿನ್ನದು. ಇನ್ನೊಂದು ನನ್ನದು."

"ಏನು ಹೇಳ್ತಿದೀಯಾ? ಸಾವಿತ್ರಿ ನಿನ್ನ ಜತೆಯಲ್ಲಿಯೂ....."

"ಷಟಪ್. ಅಷ್ಟು ಕೀಳಲ್ಲ ನಿನ್ನ ಈ ಸ್ನೇಹಿತ.ಈಗ ನಡೆದಿರುವ ಕತೆಯೇ ಬೇರೆ.....ನೀನು ಫಾರಿನ್ನಿಗೆ ಹೋಗಿದ್ದಾಗ ನಡೆದದ್ದು...." ಎಂದು ಶುರುಮಾಡಿ, ಡಾಕ್ಟರು ನಡೆಸಿರುವ ಪ್ರಯೋಗದ ಬಗ್ಗೆ ತಿಳಿಸಿದ. "ನನಗೆ ಮುಂಚೇನೇ ತಿಳಿದಿದ್ದರೆ, ನಿನ್ನ ಪ್ರೇಯಸಿಯಾಗಿರುವ ಸಾವಿತ್ರಿಯ ಗರ್ಭದಲ್ಲಿ ನಮ್ಮ ಮಗುವನ್ನು ಬೆಳೆಯಲು ನಾನಂತೂ ಖಂಡಿತಾ ಒಪ್ಪುತ್ತಿರಲಿಲ್ಲ.....ಅಲ್ಲ, ನೀನು ಇಂತಹ ಕೆಲಸ ಮಾಡಬಹುದಾ! ನನಗೆ ಒಂದು ಮಾತು ತಿಳಿದಿದ್ದರೆ...."

"ತಿಳಿದಿದ್ದರೆ ಏನು ಮಾಡುತ್ತಿದ್ದೆ! ಈ ಸಂಬಂಧ ಅಕ್ರಮ ಎಂದು ಬುದ್ಧಿವಾದ ಹೇಳ್ತಿದ್ದೆ. ಅಷ್ಟೇ ತಾನೇ.....ನನಗೆ ಸಹಾಯ ಮಾಡ್ತೀನಿ ಎಂದವನು, ಸಾವಿತ್ರಿಯನ್ನು ಮದುವೆಯಾಗ್ತೀನಿ ಎಂದಾಗ, ಉಪದೇಶ ಮಾಡಿ, ತಪ್ಪಿಸಿದೆ.... ನಾನು ಅವಳನ್ನು ಮದುವೆಯಾಗಿ ಬಾಳನ್ನು ಕೊಡಲಾಗಲಿಲ್ಲ...... ಆಗ ನಿನ್ನ ಮಾತನ್ನು ಒಪ್ಪಿದ್ದೆ..... ಆದರೆ ಸಾವಿತ್ರಿ ನನ್ನ ಸಂಗವನ್ನು ಬಯಸಿದಳು.... ಅವಳ ಆಸೆಯನ್ನು ಪೂರೈಸಿದೆ. ಇದನ್ನು ನಿನಗೆ ತಿಳಿಸುವ ಅಗತ್ಯವಿರಲಿಲ್ಲ. ಇದನ್ನು ಯಾರಿಗೂ ತಿಳಿಸುವ ಅವಕಾಶ ಬಂದಿರಲಿಲ್ಲ. ಈಗ ಸಾವಿತ್ರಿ ನನ್ನ ಮಗುವಿನ ತಾಯಿಯಾಗಲಿದ್ದಾಳೆ..... ನಿಸ್ಸಹಾಯಕಳಾದ ಸಾವಿತ್ರಿಯನ್ನು ಈ ಕೆಲಸಕ್ಕೆ ನೀನು ಒಪ್ಪಿಸಿದ್ದು ತಪ್ಪೇ ಅಲ್ವಾ!. ನಿನ್ನ ಸ್ನೇಹಿತ ನನಗೊಂದು ಮಾತನ್ನೂ ತಿಳಿಸಿದ್ಯಾ ನೀನು?"

"ಯಾರಿಗೂ ಇದನ್ನು ತಿಳಿಸಲಿಲ್ಲ. ಇದು ಸುಕನ್ಯಳ ಯೋಜನೆ...ನನ್ನ ಮನೆಯವರಿಗೆ ತಿಳಿದರೆ, ಅನಾಹುತವೇ ಆಗುತ್ತದೆಂದು, ರಹಸ್ಯವಾಗಿಟ್ಟಿದ್ದೆವು. ನೀನು ಫಾರಿನ್ನಿಗೆ ಹೋಗಿದ್ದೆಯಲ್ಲ..... ಸಾವಿತ್ರಿ ಒಂದು ಮಾತು ತಿಳಿಸಿದ್ದರೆ, ಅಥವಾ ಒಪ್ಪದೇ ಇದ್ದಿದ್ದರೆ, ಈ ದಿನ, ಇಲ್ಲಿಯವರೆಗೂ ಮುಂದುವರೆಯುತ್ತಿರಲಿಲ್ಲ."

"ಹೌದು. ಸಾವಿತ್ರಿ ಯಾಕೆ ಒಪ್ಪಿದಳು? ಯಾರಾದರೂ ಬಲವಂತ ಮಾಡಿದ್ರಾ?"

"ಯಾರದ್ದೂ ಬಲವಂತವಿಲ್ಲ. ಆದರೆ ಸುಕನ್ಯಳದೇ ಈ ಸಲಹೆ......ಸಾವಿತ್ರಿ ಮನೆಯವಳೇ......ಅವಳ ಹೊಟ್ಟೆಯಲ್ಲಿ ಈ ಮಗು ಬೆಳೆದರೂ, ಹೊರಗಿನವರಿಗೆ, ಅದು ನಮ್ಮ ಮಗು. ಸುಕನ್ಯ ಅದರ ತಾಯಿ ಎಂದಷ್ಟೇ ಎಲ್ಲರಿಗೂ ತಿಳಿಯಬೇಕಾಗಿದ್ದುದು. ಸಾವಿತ್ರಿ ಒಪ್ಪಿದಳು. ಯಾರಿಗೋ ಹೊರಗಿನವರಿಗೆ ಕೊಡುವ ಹಣವನ್ನು ಅವಳಿಗೇ ಕೊಟ್ಟರಾಯ್ತು.ಮುಂದೆ ಅವಳಿಗೇ ಅನುಕೂಲವಾಗುತ್ತೆ ಅಂತ.ಸಾವಿತ್ರಿಗೆ ಹಣದ ಅಗತ್ಯ ಕಂಡು ಬಂದಿರಬಹುದು....."

"ಸಾವಿತ್ರಿ ಅಂತಹವಳಲ್ಲ. ಅವಳಿಗೆ ಹಣದ ಆಸೆ ಇರಲಿಲ್ಲ.ಅವಳಿಗೆ ಹಣದಿಂದ ಏನು ಉಪಯೋಗ?"

"ಆದರೇನು! ತಿಳುವಳಿಕೆ ಇದೆಯಲ್ಲ. ಯೋಚಿಸಿರಬಹುದು. ಸರಳ, ಸುಕನ್ಯ ಇಬ್ಬರೂ ಮದುವೆ ಮಾಡಿಕೊಂಡು ಅವರವರ ಪಾಡಿಗೆ ಸುಖವಾಗಿದಾರೆ. ಅವರ ಹಂಗಿನಲ್ಲಿ ಇರಬೇಕಾದ ಸ್ಥಿತಿಗೆ ಹೀನಾಯವೆನಿಸಿರಬಹುದು. ನಿನ್ನ ಬಗ್ಗೆಯೂ

ಅವಳಿಗೆ ಯಾವ ದೃಢತೆ ಇರುತ್ತೆ? ಎಷ್ಟಾಗಲೀ ನೀನು ಮದುವೆಯಾದವನು. ನಿನ್ನ ರಕ್ಷಣೆ ಸರಳಾಗೆ ಮಾತ್ರ ಸೀಮಿತ. ನೀನು ಎಷ್ಟು ಪ್ರೀತಿ ತೋರಿಸಿದರೇನು! ಅವಳು ಕೇಳಿದ್ದು ತಂದು ಕೊಟ್ಟರೇನು ಅವಳ ರಕ್ಷಣೆ ಅವಳಿಗೇ ಸೇರಿದ್ದು. ತನ್ನ ಕೈಗೇ ಒಂದಿಷ್ಟು ಹಣ ಬಂದರೆ ಮುಂದೆ ಯಾವ ತೊಂದರೆಯೂ ಇಲ್ಲದೇ ಸುರಕ್ಷಿತ ವಾಗಿರಬಹುದು ಅಂತ ಯೋಚಿಸಿರಬಹುದು."

"ಇಲ್ಲ. ಖಂಡಿತಾ ಅವಳಿಗೆ ಹಣದಾಸೆ ಇರಲಿಲ್ಲ. ನೀವೆಲ್ಲಾ ಸೇರಿ ಅವಳಿಗೆ ಆ ಆಸೆ ಹುಟ್ಟಿಸಿರಬಹುದು. ಅವಳು ಮೋಸ ಹೋಗಿದ್ದಾಳೆ.ಅವಳು ನನ್ನನ್ನು ಪ್ರೀತಿ ಸಿದ್ದಳು."

"ಅವಳಿಗೆ ಈಗಲೂ ನಿನ್ನ ಮೇಲೆ ಪ್ರೀತಿ ಇದೆ. ಸರಳನ ಮೇಲೆ ಅಕ್ಕರೆಯೂ ಇದೆ. ನಿಮ್ಮಿಬ್ಬರ ಮಧ್ಯೆ ಬಂದು ತೊಂದರೆಯಾಗಬಾರದು ಎಂದು ಆಲೋಚಿಸಿರ ಬಹುದು."

"ನನಗೊಂದು ಮಾತನ್ನೂ ತಿಳಿಸದೇ ಎಲ್ಲರೂ ಮೋಸ ಮಾಡಿದ್ರಿ..."

"ನೀನೂ ನಮಗೆ ನಿಮ್ಮಿಬ್ಬರ ಸ್ನೇಹದ ಬಗ್ಗೆ ತಿಳಿಸದೇ ಮೋಸ ಮಾಡಿದೆ... ಒಟ್ಟಿನಲ್ಲಿ, ಯಾರು ಯಾರಿಗೂ ಏನನ್ನೂ ತಿಳಿಸದೇ ನಡೆದ ಅಚಾತುರ್ಯ ಇದು. ನಿಮ್ಮಿಬ್ಬರ ಸಂಬಂಧದ ಬಗ್ಗೆ ನನಗೆ ತಿಳಿದಿದ್ದರೆ, ಈ ಪ್ರಯೋಗವನ್ನು ನಾನು ಒಪ್ಪುತ್ತಲೇ ಇರಲಿಲ್ಲ...... ಇನ್ಯಾರಿಗೂ ಏನೂ ತಿಳಿಯದು. ಸಾವಿತ್ರಿಯದೂ ತಪ್ಪು ಎನ್ನಲಾರೆ. ನೀನೂ ಫಾರಿನ್ನಿಗೆ ಹೋಗಿದ್ದೆ..... ಅವಳು ತನ್ನ ಭವಿಷ್ಯವನ್ನು ತಾನೆ ನೋಡಿಕೊಳ್ಳುವ ಆಲೋಚನೆ ಮಾಡಿರಬಹುದು. ನೀನೇನು ತಾಳಿಕಟ್ಟಿದ ಗಂಡನೇ? ನಿನ್ನನ್ನು ಒಂದು ಮಾತು ಕೇಳಿ, ತೀರ್ಮಾನವನ್ನು ತೆಗೆದುಕೊಳ್ಳಬೇಕಿತ್ತೇ?"

"ಸಾಕ್ಮಾಡು ಮುಕುಂದ. ಎಲ್ಲಾ ಸೇರಿ ಕುತಂತ್ರ ನಡೆಸಿ,ಈಗ ನನಗೆ ಸಮಜಾ ಯಿಷಿ ಹೇಳ್ತಿದೀರಿ. ನನ್ನಿಂದ ಸಾವಿತ್ರೀನ ದೂರ ಮಾಡುವ ಯೋಚನೆ ಇದು"

"ಅದೆಲ್ಲಾ ಅಲ್ಲ. ನಾವಿಬ್ಬರೂ ಸ್ನೇಹಿತರು. ಪಕ್ಕಂದಿರು. ನಮ್ಮಿಬ್ಬರಿಂದಲೂ ಸಾವಿತ್ರಿಗೆ ಹಿಂಸೆಯೇ ಆಗಿರುವುದು. ಆದರೆ ಅದನ್ನು ಅವಳಾಗಿಯೇ ತಂದು ಕೊಂಡದ್ದು....ಅವಳಾಗಿಯೇ ನಿನ್ನ ಸಂಬಂಧ ಬೆಳೆಸಿದಳು, ಅವಳಾಗಿಯೇ ಬಾಡಿಗೆ ತಾಯಿ ಯಾಗಲು ಒಪ್ಪಿದಳು. ಅವಳ ಅದೃಷ್ಟವೋ, ದುರಾದೃಷ್ಟವೋ ನಮ್ಮಿಬ್ಬರ ಮಕ್ಕಳೂ ಅವಳ ಹೊಟ್ಟೆಯಲ್ಲಿ ಬೆಳೆಯುತ್ತಿವೆ. ಈಗ ನಾವಿಬ್ಬರೂ ಒಂದು

ಇತ್ಯರ್ಥಕ್ಕೆ ಬರೋಣ. ಇಬ್ಬರೂ ಒಂದೊಂದು ಮಗುವನ್ನು ಇಟ್ಟುಕೊಳ್ಳೋಣ ಅಥವಾ ನಿನಗಿಷ್ಟವಿಲ್ಲದಿದ್ದರೆ ಹೇಳಿಬಿಡು ಸುಕನ್ಯನ್ನ ಒಪ್ಪಿಸಿ ಎರಡನ್ನೂ ನಾನೇ ಸಾಕಿಕೊಳ್ತೀನಿ"

"ಯಾವ ಮಗು ಯಾರದ್ದು ಅಂತ ಹೇಗೆ ಗೊತ್ತಾಗುತ್ತೆ?"

"ಗೊತ್ತಾಗದೇ ಏನು? ಎರಡೂ ಒಂದೇ ತರಹ ಇರುತ್ವ. ಖಂಡಿತಾ ಸಾಧ್ಯವಿಲ್ಲ. ಯಾಕೆಂದರೆ ಐಡೆಂಟಿಕಲ್ ಟ್ವಿನ್ಸ್ ಏನಲ್ಲ. ಒಂದು ನನ್ನ ಹಾಗೆ ಇರುತ್ತೆ. ಇನ್ನೊಂದು ನಿನ್ನ ಹಾಗಿರುತ್ತೆ"

"ಅಷ್ಟು ಖಡಾ ಖಂಡಿತವಾಗಿ ಹೇಗೆ ಹೇಳ್ತೀಯಾ? ಎರಡೂ ಸಾವಿತ್ರಿಯ ತರಹವೇ ಇದ್ದರೆ?" ಸುರೇಶ ವಾದ ಮಾಡಿದ.

"ಅದು ಸಾಧ್ಯವೇ ಇಲ್ಲ.ಒಂದು ಸುಕನ್ಯ ಮುಕುಂದರ ಮಗು.ಇನ್ನೊಂದು ಸುರೇಶ ಸಾವಿತ್ರಿಯರ ಮಗು. ಅಂದರೆ ಎಲ್ಲಾ ಇತ್ಯರ್ಥವಾದ ಹಾಗೇ ತಾನೇ.... ಸರಳನ್ನ ಒಪ್ಪಿಸುವ ಜವಾಬ್ದಾರಿ ನಿನ್ನದು. ಸರಳ ಒಪ್ತಾಳೆ ಅನ್ನುವ ನಂಬಿಕೆ ನನಗಿದೆ."

"ಆದರೂ ಈ ಮೊದಲೇ ನನಗೇಕೆ ಯಾರೂ ತಿಳಿಸಲಿಲ್ಲ. ತಿಳಿಸುಕ್ಕೇನಾಗಿತ್ತು?"

"ತಿಳಿಸಿದ್ದರೆ ಈ ಕತೆ ಹೀಗೆ ಮುಂದುವರೆಯುತ್ತಿರಲಿಲ್ಲ.ಒಂದಂತೂ ನಿಜ. ಇದುವರೆಗೂ ಯಾವ ಸ್ನೇಹಿತರಲ್ಲೂ ಇಂತಹ ಸಮಸ್ಯೆ ಹುಟ್ಟಿರಲಾರದು" ಮುಕುಂದ ಸ್ನೇಹಿತನ ಬೆನ್ನ ಮೇಲೆ ಒಂದು ಗುದ್ದು ಹಾಕಿ ನಕ್ಕಾಗ ಸುರೇಶ ನಕ್ಕಂತೆ ಮಾಡಿದ. ಅವನಿಗೆ ಏಕೋ ಏನೋ ಯಾವುದೂ ಸರಿಯಲ್ಲ ಅಂತನ್ನಿಸಿತ್ತು.

"ಯಾಕಯ್ಯಾ ಹಾಗೆ ಸಪ್ಪಗೆ ನಗ್ತಿದೀಯಾ....ಏನು ಚಿಂತೆ? ನಿನ್ನ ತಂದೆ ತಾಯಿಗೆ ಹೇಗೆ ತಿಳಿಸೋದು ಅಂತಾನಾ! ನಾನು ನಮ್ಮ ಮನೆಯವರಿಗೆ ಏನೋ ಒಂದು ಸುಳ್ಳು ಹೇಳ್ತಿಲ್ಲವಾ? ಹಾಗೇ ನೀನೂ ಏನಾದರೊಂದು ಹೇಳಿದ್ರಾಯ್ತು."

"ಅವರೆಲ್ಲ ಹಳ್ಳಿಲಿದಾರೆ. ಸುಕನ್ಯಂದೇ ಮಗು ಅಂತ ಅಂದರೆ ನಂಬ್ತಾರೆ. ಆದರೆ ಸರಳ, ನಮ್ಮ ಮನೆಯಲ್ಲೇ ನಮ್ಮ ಜತೇಲೇ ಇದಾಳಲ್ಲ."

"ಹಾಗಾದರೆ ಧೈರ್ಯವಿದ್ದರೆ, ಸಾವಿತ್ರಿಯ ಮಗು ನನ್ನದೇ, ನಾನು ಸಾಕ್ತೀನಿ ಎಂದು ನೇರವಾಗಿ ಹೇಳಿಬಿಡು."

"ಈಗ ಸರಳಂಗೆ ಗೊತ್ತಾದರೆ ಏನ್ಮಾಡ್ತಾಳೋ.....ಅವಳಿಗೂ ನೋವಾಗುತ್ತೆ. ಇದುವರೆಗೂ ಎಂದೂ ನಿಜವನ್ನು ಹೇಳುವ ಪ್ರಯತ್ನವನ್ನೇ ಮಾಡಿಲ್ಲ ನಾನು."

"ಅದೇನು ಮಾಡ್ತೀಯೋ ಮಾಡು ಇನ್ನು ನಿನಗೆ ಬಿಟ್ಟಿದ್ದು."

ಮಾತನಾಡುತ್ತಾ ಇಬ್ಬರೂ ಮುಕುಂದನ ಮನೆ ತನಕ ಬಂದಿದ್ದರು. "ಹೇಗೂ ಇಲ್ಲಿಯ ತನಕ ಬಂದಿದೀಯ. ಸಾವಿತ್ರೀನ ನೋಡಿ ಮಾತನಾಡಿಸಿ ಹೋಗು."

"ಇವತ್ತು ಬೇಡ. ಇವತ್ತು ಅವಳನ್ನು ಮಾತನಾಡಿಸುವ ಮೂಡ್‌ನಲ್ಲಿಲ್ಲ ನಾನು"

ಮುಕುಂದ ಮನೆಯೊಳಕ್ಕೆ ಹೋದ. ಸುರೇಶ ಹಿಂತಿರುಗಿ ತನ್ನ ಮನೆಗೆ ಬಂದವನೇ ನೇರವಾಗಿ ತನ್ನ ರೂಮನ್ನು ಸೇರಿ ಆಲೋಚನೆಗಳ ಮಡಿಲಲ್ಲಿ ಮಲಗಿದ.

ತಾವು ಐದು ಜನರಲ್ಲಿ ಎಂತಹ ಸಮಸ್ಯೆ ಉದ್ಭವಿಸಿದೆ. ಈಗ ನಿಜಾಂಶ ತಿಳಿದಿರುವುದು. ನಮ್ಮಿಬ್ಬರಿಗೆ ಹಾಗೂ ಸಾವಿತ್ರಿಗೆ. ಅಥವಾ ಅವಳಿಗೂ ತಿಳಿದಿದೆಯೋ ಇಲ್ಲವೋ.... ಸರಳಂಗೆ, ಸುಕನ್ಯಳಿಗೆ, ಒಂದು ವಿಷಯ ಮಾತ್ರ ತಿಳಿದಿದೆ. ಸರಳ ಅ ಪ್ರಯೋಗದ ಬಗ್ಗೆ ತನಗೇಕೆ ತಿಳಿಸಲಿಲ್ಲ? ತನ್ನಿಂದೇಕೆ ಮುಚ್ಚಿಟ್ಟಳು. .ಮುಕುಂದನ ಬಗ್ಗೆ ತನಗೆ ಕೆಟ್ಟ ಅಭಿಪ್ರಾಯ ಮೂಡುತೆ. ಅಂತಲೆ! ಅಥವಾ ತನಗೆ ಸಾವಿತ್ರಿಯ ಮೇಲೆ ಅನುಕಂಪ ಜಾಸ್ತಿ. ಈ ವಿಷಯ ಇಷ್ಟವಾಗುವುದಿಲ್ಲವೆಂದೇ? ಯಾವನೋ ರೇಪ್ ಮಾಡಿದ್ದರಿಂದ ಹೀಗಾಯ್ತು ಎನ್ನುವ ಸಾವಿತ್ರಿಯ ಮಾತನ್ನು ನಂಬುವಂತೆ ಹೇಳಿದರೂ, ಆಗ ತಾನೇಕೆ, ಆವ್ಯಕ್ತಿ ನಾನು ಎಂದು ಹೇಳಲಿಲ್ಲ? ಅವಳು ಹೇಳುತ್ತಿರುವುದು ಸುಳ್ಳು ಎಂದು ತಿಳಿದಿದ್ದರೂ ತಾನು ಸುಮ್ಮನಿದ್ದೆ. ತಮ್ಮಿಬ್ಬರ ಸಂಬಂಧದ ಬಗ್ಗೆ ಅರಿವಿದ್ದು, ನನ್ನನ್ನು ಪರೀಕ್ಷಿಸಲು ಹಾಗೆ ಹೇಳಿರಬಹುದೆ! ಇರಲಾರದು.

ಈಗ ತಾನಾಗಿಯೇ ಮತ್ತೆ ಕೇಳಿದರೆ ತನ್ನ ಬಗ್ಗೆ ಅನುಮಾನ ಮೂಡಿದರೆ? ಒಂದು ಪಕ್ಷ, ತನ್ನ ಬಾಯಿಂದ ನಿಜಾಂಶವನ್ನು ತಿಳಿದರೆ ಅವಳು ಏನು ಮಾಡ ಬಹುದು? ಡೈವೋರ್ಸ್ ಕೇಳಬಹುದು. ಆಗ ಸಾವಿತ್ರಿಯನ್ನು ಮದುವೆಯಾಗುವ ಅವಕಾಶ ಸಿಗಬಹುದು. ಆದರೆ ಈಗ ಸಾವಿತ್ರಿ ಒಪ್ಪುವಳೋ ಇಲ್ಲವೋ......ಈಗ ಒಂದು ಜವಾಬ್ದಾರಿಯನ್ನು ಹೊತ್ತಿರುವ ಹೆಂಗಸು ಅವಳು. ಸಧ್ಯದಲ್ಲೇ ಶ್ರೀಮಂತೆ ಯಾಗುವವಳು..ಅಥವಾ ಅವಳು ಒಪ್ಪಿದರೂ ಜನ ನಗುವುದಿಲ್ಲವೆ? ಸರಿಯಾ ಗಿರುವವಳನ್ನು ಬಿಟ್ಟು ಕುರುಡಿಯನ್ನು ಮರು ಮದುವೆಯಾದ ಎಂದು. ಸುಮ್ಮನಿದ್ದು ಮುಂದುವರೆದರೆ ಜಾಣನಾಗಬಹುದು. ಈಗ ನನ್ನ ಬಗ್ಗೆ ಯಾರಿಗೂ ಕೆಟ್ಟ ಅಭಿ ಪ್ರಾಯವಿಲ್ಲ. ನಾನಾಗಿಯೇ ಹೇಳಿದರೆ.......ನನ್ನ ಬಗ್ಗೆ ಕೀಳು ಅಭಿಪ್ರಾಯ ಬರ

ಬಹುದು. ಇನ್ನು ಒಳ್ಳೆಯವನಾಗುವುದಂತೂ ಸಾಧ್ಯವಿಲ್ಲ.

ಮದುವೆಯಾಗಿ ಎರಡು ವರ್ಷ ಕಳೆದರೂ ಸರಳಂಗೆ ಮಕ್ಕಳಾಗಲಿಲ್ಲ. ಸಾವಿತ್ರಿಗೂ ಆಗಿರಲಿಲ್ಲ. ನಾನು ಆರಾಮಾಗಿದ್ದೆ. ಆ ಕೊರತೆ ನನಗಿರಲಿಲ್ಲ. ಸಾವಿತ್ರಿ ಮೇಲಿನ ಪ್ರೀತಿಯಿಂದ ನಿನಗೆ ಮಗುವಾದರೆ ನಾನು ಸಾಕ್ತೀನಿ ಚಿಂತಿಸಬೇಡ ಎಂದಿದ್ದೆ. ಈಗ ಆ ಅವಕಾಶ ಒದಗಿದೆ. ಸಾವಿತ್ರಿಗೆ ಹೇಳಿದ ಮಾತನ್ನು ಉಳಿಸಿಕೊಂಡಂತಾಗುತ್ತದೆ. ತಪ್ಪಿತಸ್ಥ ಭಾವನೆ ಹೋಗುತ್ತದೆ. ಹೇಗೂ ಸರಳ ತಾನಾಗಿಯೇ ಒಪ್ಪಿದಾಳೆ. ಅನ್ಯಾಯವಾಗಲೀ, ಬಲವಂತವಾಗಲೀ ಯಾವುದೂ ಇಲ್ಲ. ಅಮ್ಮನನ್ನೂ ಒಪ್ಪಿಸಬಹುದು.ಅವಳಿಗೂ ಕರುಣೆ ಜಾಸ್ತಿ.....ಸುಕನ್ಯ ಮುಕುಂದ ನಡೆಸಿದ ಪ್ರಯೋಗದ ಬಗ್ಗೆ ತಿಳಿಸಿದರೆ ಅಮ್ಮ ನಂಬ್ತಾಳಾ!..... ನಂಬಿದರೂ ನಂಬಬಹುದು. ಅಮ್ಮನಿಗೆ, ಅದೆಲ್ಲ ಸರಿಯಲ್ಲ ಅನ್ನುವ ಭಾವನೆ ಏನಿಲ್ಲ. ಈ ಕಾಲದ ವಿಚಾರವನ್ನು ಒಪ್ಪಿಕೊಳ್ಳುತ್ತಾಳೆ. ಯಾರಿಗೂ ತಿಳಿಸಬೇಡ ಎಂದರಾಯ್ತು...ಅಕ್ಕಪಕ್ಕದವರು ಏನಾದರೂ ಅಂದಾರು ಅಂತನ್ನಿಸಬಹುದು........ಸರಳ ಬಸುರಿಯಲ್ಲಅಂತ ಯಾರಿಗೆ ಹೇಗೆ ಗೊತ್ತಾಗುತ್ತೆ!ಅವರುಗಳಿಗೆ ಅದೇ ಕೆಲಸವೇ......ಯಾರು ಬಸುರಿ ಅಲ್ಲ, ಯಾರು ಬಸುರಿ ನೋಡುವುದೇ?ಅಲ್ಲದೆ ಅವರಿವರಿಗೆ ತಾನೇಕೆ ಕೇರ್ ಮಾಡಬೇಕು! ಸಾವಿತ್ರಿಯೊಡನೆ ಸೇರಿದಾಗ ಹೆದರಿರಲಿಲ್ಲ.....ಹಳ್ಳಿಯಲ್ಲಿ ಹುಟ್ಟಿ ಬೆಳೆದವನು ಮುಕುಂದನೇ ಇಷ್ಟು ಮುಂದುವರೆದಿರುವಾಗ, ತಾನೇಕೆ ಹೆದರಬೇಕು, ಎಂದು ಕೊಂಡರೂ, ತಾನು ಮಾಡಿದ ಒಂದು ತಪ್ಪಿಗೆ ಇಷ್ಟು ಹೆದರಿದೀನಿ, ಏನಾಗಿ ಬಿಡುತ್ತದೋ ಎಂದು ಎಷ್ಟು ಯೋಚಿಸ್ತಿದೀನಿ.......ಸಾವಿತ್ರಿಯೊಡನೆ ಈ ಮೂರು ತಿಂಗಳಿನಿಂದ ನಾನು ಹೇಗೂ ದೂರವಾಗಿದೀನಿ... ಹಾಗೇ ಇದ್ದು ಬಿಡಬೇಕು. ಇದರಿಂದಲಾದರೂ, ಎಲ್ಲಾ ಸರಿ ಹೋಗಬಹುದು. ನಮಗೆಲ್ಲರಿಗೂ ನಿರಾತಂಕ. ನೆಮ್ಮದಿ. ತನ್ನಲ್ಲೇ ನಿಶ್ಚಯಿಸಿದ. ಆದರೂ ತಾಯಿಯೊಡನೆ ನಿಜವನ್ನು ಹೇಳಿದರೆ, ಅಥವಾ ಹೇಳದಿದ್ದರೆ..... ಏನೇನಾಗಬಹುದು ಎಂದು ಯೋಚಿಸಿ, ತಲೆಯನ್ನು ಕೆಡಿಸಿಕೊಂಡ. ಸರಿ, ಮನೆಯಲ್ಲಿ ಈ ವಿಷಯವನ್ನು ಮಾತನಾಡುವ ಮೊದಲು ಒಂದು ಸಲ, ತಾನು ಸಾವಿತ್ರಿಯ ಹತ್ತಿರ ಮನಸ್ಸು ಬಿಚ್ಚಿ ಮಾತನಾಡಬೇಕು......ತನಗೀಗ ಮುಕುಂದನ ಸಹಾಯಬೇಕು...... ಅವನ ಈ ಆಲೋಚನೆಗಳ ಬಗ್ಗೆ ಅವನಿಗೇ ಮುಜುಗರ. ತನ್ನಿಂದ ಎಷ್ಟು ತೊಂದರೆ ಎನಿಸಿತ್ತು.

ಸರಳ, ತಾಯಿ ತನ್ನೊಡನೆ ಮಾತನಾಡದಿದ್ದರೂ, ಆಗಾಗ್ಗೆ ಅಲ್ಲಿಗೆ ಹೋಗಿ,

ಮಾತನಾಡಿಸಿ, ಮನೆಗೆ ಬೇಕಾದ ವಸ್ತುಗಳನ್ನು ತಂದುಕೊಟ್ಟು ಬೇಕಾದ ಸಹಾಯವನ್ನು ಮಾಡಿ ಬರುತ್ತಿದ್ದಳು. ಸುಕನ್ಯ ಸಾವಿತ್ರಿಯನ್ನು ಆಗಾಗ್ಗೆ ಕರೆದುಕೊಂಡು ಬರುತ್ತದ್ದಳು. ಯಾರು ಬರಲಿ, ಯಾರು ಹೋಗಲಿ, ತನಗ್ಯಾವ ಸಂಬಂಧವೂ ಇಲ್ಲದಂತೆ, ಸುಮ್ಮನೆ ಕೂತಿರುತ್ತಿದ್ದ ತಾಯಿಯನ್ನು ನೋಡಿ ಬೇಸರವೆನಿಸುತ್ತಿತ್ತು. ಅಜ್ಜಿ ಸತ್ತು ಹೋದರೆ, ಆ ಪಾರ್ಕ್‌ಗೆ ಈಕೆಗೇಕೆ ಮಾತು ಹೋಗಬೇಕು ಎಂದು ನೆಂಟರೆಲ್ಲ ಅಂದುಕೊಂಡಿದ್ದರು. ಸಾವಿತ್ರಿ ಎಂದೂ ಯಾರೊಡನೆ ಬೆರೆಯದೇ ಇದ್ದುದರಿಂದ, ಸಾವಿತ್ರಿಯ ಬಗ್ಗೆ ಯಾರಿಗೂ ಅನುಮಾನ ಬಂದಿರಲಿಲ್ಲ. ಹಳ್ಳಿಯಿಂದ ಈಚೆಗೆ ಯಾರೂ ಬಂದಿರಲಿಲ್ಲ ವಾದ್ದರಿಂದ, ಈ ಮನೆಯಲ್ಲಿ ನಡೆದ ವಿದ್ಯಮಾನಗಳು ಹೊರಗಿನವರಿಗೆ ತಿಳಿದಿರಲೇ ಇಲ್ಲ...

ದಿನಗಳು ಕಳೆದರೂ, ಸುರೇಶ, ಸಾವಿತ್ರಿಯೊಡನೆ ಏಕಾಂತದಲ್ಲಿ ಮಾತನಾಡುವ ಅವಕಾಶ ಸಿಗಲೇ ಇಲ್ಲ. ಸರಳ ಹೆಚ್ಚು ತಾಯಿಯ ಮನೆಗೆ ಹೋಗತೊಡಗಿದ್ದನ್ನು ಗಮನಿಸಿದ ತಾಯಿ ಪಂಕಜಮ್ಮ ಮಗನೊಡನೆ ಆಕ್ಷೇಪವೆತ್ತಿದಳು.

"ನೀನು ಊರಿನಲ್ಲಿದ್ದರೂ, ನಿನ್ನ ಪೆಂಡತಿ ಹೆಚ್ಚಿಗೆ ಅಲ್ಲಿಯೇ ಇರ್ತಾಳಲ್ಲ, ನಿನಗೂ ಅವಳಿಗೂ ಏನಾದರು ಮನಸ್ತಾಪವೇ...?"

"ಹಾಗೇನಿಲ್ಲಮ್ಮ......ನಿನಗ್ಯಾಕೆ ಇಂಥ ಅನುಮಾನ? ಅವಳನ್ನು ನೋಡಿದರೆ ಕೆಟ್ಟವಳು ಅಂತ ಅನ್ನಿಸುತ್ತಾ? ನನಗೆ ಹೇಳಿಯೇ ಅಲ್ಲಿಗೆ ಹೋಗ್ತಾಳೆ."

"ಅದೇನು ಹಾಗೆ ಅಂತ ನಾನು ಕೇಳಿದ್ದು.....ಅವಳಿಲ್ಲಿ ನಿನ್ನ ಎದುರಿಗೆ ಇಲ್ಲದೆ, ಪದೇ ಪದೇ ಹೋದರೂ ನೀನು ಸುಮ್ಮನಿರ್ತೀಯಲ್ಲ......ನಿನಗೇನೂ ಅನ್ನಿಸುವು ದಿಲ್ಲವೆ?"

"ಅನ್ನಿಸುತ್ತೆ, ಆದರೆ, ಇದಕ್ಕಿಂತ ಅವರ ಮನೆಯ ತಾಪತ್ರಯ ಇನ್ನೂ ದೊಡ್ಡದು. ಅವರಮ್ಮನಿಗೆ ಇದ್ದಕ್ಕಿದ್ದಂತೆ ಮಾತನಾಡುವ ಶಕ್ತಿ ಹೋಗಿ ಬಿಟ್ಟಿದೆ..... ಸಾವಿತ್ರಿ..... ಬಸುರಿಯಂತೆ......" ತಲೆ ತಗ್ಗಿಸಿ ನುಡಿದ.

"ಸಾವಿತ್ರಿ ಅಲ್ಲ, ಸುಕನ್ಯ ಅನ್ನು.....ಅವಳನ್ನು ನೋಡಿಕೊಳ್ಳೋಕೆ ಅವಳ ಗಂಡನಿಲ್ಲವೆ? ಇವಳೇಕೆ ಹೋಗಬೇಕು"

"ಸುಕನ್ಯ ಅಲ್ಲ.....ಸಾವಿತ್ರೀನೇ.....ಏನೋ ಅಚಾತುರ್ಯ ನಡೆದು, ಸಾವಿತ್ರಿ ಮೋಸದಿಂದ ಬಸುರಿಯಾಗಿಬಿಟ್ಟಿದಾಳೆ ಅಂತ ಅವರುಗಳು ನಂಬಿದಾರೆ...."

"ಏನು ಹೇಳ್ತಿದೀಯ ನೀನು..... ಸಾವಿತ್ರಿಗೆ ಯಾಕೆ ಹಾಗಾಯ್ತು?"

"ಏನೋ ಗೊತ್ತಿಲ್ಲಮ್ಮ,ನಾನು ಊರಿನಲ್ಲಿರಲಿಲ್ಲವಲ್ಲ" ತಾಯಿಯ ಎದುರಿಗೆ ತಾನು ಈ ಹಿಂದೆ ತೆಗೆದುಕೊಂಡ ನಿರ್ಧಾರ ಕುಸಿದಿತ್ತು....ನಿಜವನ್ನು ಮರೆ ಮಾಚಿದ.

"ಯಾರಿರಬಹುದು?..."

"ಏನೋ ನನಗೆ ಗೊತ್ತಿಲ್ಲ.....ನಾನು ಹೇಗೆ ಹೇಳಲಿ?"

"ಇನ್ಯಾರು? ಮುಕುಂದನೇ ಇರಬಹುದು....ಹೋಗ್ತಾನೇ ಇರುತ್ತಿದ್ದನಲ್ಲ. ಹೇಗೂ ಅವನ ಹೆಂಡತಿಗೆ ಅನಾರೋಗ್ಯ......ಇವಳೋ ಕಣ್ಣು ಕಾಣದ ಹುಡುಗಿ"

"ಅಮ್ಮಾ ಸ್ವಲ್ಪ ಸುಮ್ಮನಿರ್ತೀಯಾ......ನೀನೊಳ್ಳೆ ಚೆನ್ನಾಯ್ತು.. ಹೀಗೆ ಮಾತ ನಾಡ್ತೀಯಲ್ಲ. ಮುಕುಂದ ಅಂತಹವನು ಅಂತ ನಿನಗನ್ನಿಸುತ್ತಾ? ನನ್ನ ಮೇಲೆ ನಿನಗೇಕೆ ಅನುಮಾನ ಬರಲಿಲ್ಲ.....ನಾನೂ ಹೋಗಿ ಬರುತ್ತಿದ್ದೆನಲ್ಲ....."

"ನೀನೇ ಆಗಿದ್ದಿದ್ರೆ......ಇಷ್ಟು ಸಲೀಸಾಗಿ ಇದನ್ನೆಲ್ಲ ನನ್ನ ಹತ್ತಿರ ಹೇಳು ತ್ತಿದ್ದೆಯಾ?"

ಸುರೇಶ ಬೆಪ್ಪಾದ. ತಾಯಿ ತಾಯೀನೇ, ಮಗನ ಮೇಲೆ ಸಂಶಯವೇ ಬರಲಿಲ್ಲವಲ್ಲ ಎಂದುಕೊಂಡ. ಒಂದು ಘಳಿಗೆ ಹೀನಾಯವೆನಿಸಿತು.

"ಮುಕುಂದ ಅಲ್ಲ, ಅವನು ಅಂತಹವನೂ ಅಲ್ಲ. ಒಟ್ಟಿನಲ್ಲಿ ಏನೋ ನಡೆದು ಹೋಯಿತು. ಸಾವಿತ್ರಿ ಯಾರಿಗೂ ತಿಳಿಸಲಿಲ್ಲ. ಹೆದರಿ ಸುಮ್ಮನಾಗಿದ್ದಳು. ಈಗ ಏನೂ ಮಾಡುವುದಕ್ಕಾಗುವುದಿಲ್ಲ ಎಂದರಂತೆ ಡಾಕ್ಟರು. ಒಂದಲ್ಲ ಅಂತ ಎರಡು ಮಕ್ಕಳಿವೆಯಂತೆ"

"ಅವಳಿ ಮಕ್ಕಳೇ? ಗಂಡೋ ಹೆಣ್ಣೋ....?"

"ಎರಡೂ ಗಂಡೇ ಅಂತೆ. ಸ್ಕ್ಯಾನಿಂಗ್ ಮಾಡಿ ಹೇಳಿದಾರೆ ಡಾಕ್ಟರ್ಸ್"

"ಪಾಪ ಸಾವಿತ್ರಿಗೇ ಇಂತಹ ಕಷ್ಟ ಒದಗಬೇಕೆ? ಅದಕ್ಕೇ ಹೇಳೂದು ಮನೇಲಿ ಒಂದು ಗಂಡು ದಿಕ್ಕು ಇಲ್ಲದಿದ್ರೆ ಎಷ್ಟು ಕಷ್ಟ ಅಂತ. ಮನೆ ಮಠ ಬಿಟ್ಟು ಆಕೆ ಯಾಕ್ ಟೂರ್ ಹೋಗಬೇಕಾಗಿತ್ತು? ಅದೂ ಕಣ್ಣು ಕಾಣದ ಹುಡುಗೀನ ಬಿಟ್ಟು?"

"ಆಕೆ ಟೂರ್ ಹೋಗಬೇಕು ಅಂತ ಆಸೆ ಪಟ್ಟಿರಂತೆ. ಗಂಡು ಮಕ್ಕಳಿದ್ದಿದ್ದರೆ, ಹಾಗೆ ಹೀಗೆ, ಅಂತ ಹಂಗಿಸಿ ಅನ್ನುತ್ತಿದ್ದರಂತೆ.....ನಾವೂ ಸಂಪಾದಿಸ್ತೀವಿ.ನಾವೂ ಯಾವ ಗಂಡು ಮಕ್ಕಳಿಗೂ ಕಡಿಮೆ ಇಲ್ಲ ಅಂತ, ತಡೆಯಲಾರದೆ ಒಂದು ದಿನ, ಎಷ್ಟು ಖರ್ಚಾದರೂ ಪರವಾಗಿಲ್ಲ ಅಂತ ಆಕೆನ ಬಲವಂತ ಮಾಡಿ ಇವರಿಬ್ಬರೂ ಕಳಿಸಿದಾರೆ. ಹೀಗಾಗುತ್ತೆ ಅಂತ ಅವರಿಗೇನು ಗೊತ್ತಿತ್ತು?"

"ಇದೆಲ್ಲಾ ಯಾವಾಗ ನಡೀತು? ಆಕೆ ಟೂರ್ ಹೋಗಿದ್ದಾಗ ತಾನೇ....."

"ಹುಂ ನಾನು ಫಾರಿನ್ನಿಗೆ ಹೋದಾಗ, ಸರಳ ಸುಕನ್ಯ ಇಬ್ಬರೂ ಅವಳ ಜತೆ ಅಲ್ಲಿಯೇ ಇದ್ದರಲ್ಲ. ಇಬ್ಬರೂ ಹೊರಗೆ ಹೋಗಿದ್ದಾಗ, ಸಾವಿತ್ರಿ ಒಬ್ಬಳೇ ಇದ್ದಾಗ ನಡೆದಿರಬೇಕು."

ಆಕೆ ಹಲ್ಲಿಯಂತೆ ಲೊಚಗುಟ್ಟಿದಳು. ಆದರೂ ಸರಳನಮೇಲೆ ಆಕ್ಷೇಪ ವೆತ್ತಿದರು. ಸೊಸೆಯ ಗುಣ ಒಳ್ಳೆಯದೇ ಆದರೂ.....

"ಇಷ್ಟೆಲ್ಲಾ ಹಗರಣ ನಡೆದಿದೆ, ಸಾವಿತ್ರಿಗೆ ಹೀಗಾಯ್ತು ಅಂತ, ನಿನ್ನ ಹೆಂಡತಿ ನಮಗೆ ಒಂದ್ಮಾತನ್ನೂ ತಿಳಿಸಲಿಲ್ಲ. ನಮಗೆ ತಿಳಿಯಬಾರದು ಅಂತಾನಾ?"

"ಏನೂಂತ ತಿಳಿಸ್ತಾಳೆ? ಇದ್ಯಾವ ಹೆಚ್ಚುಗಾರಿಕೆ ವಿಷಯ? ಅಕ್ಕ ತಂಗಿಯರು ಗುಟ್ಟಾಗಿ ಏನು ನಡೆಸಿದರೋ, ತಾಯಿಗೆ ತಿಳಿದು ರಂಪವಾಯಿತು.ದೊಡ್ಡ ಹಗರಣ ವಾಯಿತಂತೆ, ಇದನ್ನೆಲ್ಲ ಹೇಗೆ ಹೇಳ್ತಾಳೆ"

"ಇರಬಹುದು." ಆಕೆ ಅವನ ಮಾತನ್ನು ನಂಬಿದರು. ಸಾವಿತ್ರಿಯ ಮೇಲಿನ ಅನುಕಂಪ ಜಾಸ್ತಿಯಾಯಿತು. ಪಾಪ, ಕಣ್ಣಿಲ್ಲದ ಹುಡುಗಿಗೆ ಹೀಗಾಗ ಬಾರದಾಗಿತ್ತು. ಮುಂದೆ ಆ ಮಕ್ಕಳ ಗತಿ ಏನು?"

"ಈಗ ಪಾಪ ಅಂತೀಯಲ್ಲಮ್ಮ, ಆಗ ನಾನು ಅವಳನ್ನ ಮದುವೆಯಾಗಲು ನೀನು ಒಪ್ಪಿದ್ದರೆ, ಈ ದಿನ ಈ ಸ್ಥಿತಿ ಬರುತ್ತಿರಲಿಲ್ಲ."

"ಏನೋ ನನ್ನ ಮಗ ಸುಖವಾಗಿರಲಿ ಅಂತ...... ನೀನು ಫಜೀತಿ ಪಟ್ಟರೆ ಅದನ್ನು ನೋಡಿ ಸಹಿಸುಕ್ಕಾಗುತ್ತಿರಲಿಲ್ಲ."

"ಮುಕುಂದ ಒಂದು ಮಗುವನ್ನ ಸಾಕಿ ಕೊಳ್ತಾನಂತೆ....ಇನ್ನೊಂದನ್ನ ನೀನು ಒಪ್ಪಿದರೆ, ನಾನು ಸಾಕಿಕೊಳ್ಳೋಣ ಅಂತ. ಸರಳಾನೂ ಒಪ್ಪಿದಾಳೆ."

"ಓಹೋ,ನೀವುಗಳು ಆಗಲೇ ತೀರ್ಮಾನ ಮಾಡಿಕೊಂಡು ಈಗ ನನ್ನೊಪ್ಪಿಗೇನ ನೆಪಮಾತ್ರಕ್ಕೆ ಕೇಳ್ತಿದೀರಿ ಅಲ್ವಾ?"

"ಈಗ ನೀನು ಬೇಡ ಎನ್ನುವುದಕ್ಕೆ ಯಾವ ಕಾರಣವೂ ಇಲ್ಲ. ಮುಕುಂದ ಹಳ್ಳಿಯ ಸಂಪ್ರದಾಯಸ್ಥರ ಮನೆಯವನಾದರೂ, ಸಾವಿತ್ರಿ ಮೇಲಿನ ಅನುಕಂಪದಿಂದ ತಾನಾಗಿಯೇ ಒಪ್ಪಿಕೊಂಡಿದಾನೆ. ಹಾಗಿರುವಾಗ, ನಾನು ಯಾಕೆ ಹಿಂದೆ ಬೀಳಬೇಕು ಅಂತ ನಾನೂ ಅದನ್ನೇ ಹೇಳಿದೆ, ಸರಳ ಬೇಡವೆನ್ನಲಿಲ್ಲ. ಈಗ ನೀನೂ ಒಪ್ತೀಯ ಅನ್ನುವ ನಂಬಿಕೆ ನನಗಿದೆ." ಸುಳ್ಳಿನ ಸರವನ್ನೇ ಪೋಣಿಸಿದ. ಮುಚ್ಚು ಮರೆ ಮಾಡಲು

ಹೋಗಿ, ಹೀಗೆ ಸುಳ್ಳಿನ ಕಂತೆಯನ್ನು ಒಗೆಯುವ ಅಗತ್ಯವಿತ್ತೇ ಅಂತ ಒಂದು ಘಳಿಗೆ ಯೋಚಿಸಿದಾಗ, ಸಣ್ಣತನದ ಅರಿವಾಗಿ ನಾಚಿಕೆಯಾಯಿತು.

ಆಕೆ ಅನುಮಾನದಿಂದ ಅವನನ್ನೇ ನೋಡಿದಾಗ ಮುಗುಳ್ನಕ್ಕು ತಲೆತಗ್ಗಿಸಿ ಮತ್ತೆ ನುಡಿದ.

"ನಿನಗಿಷ್ಟವಿಲ್ಲದಿದ್ದರೆ ಈಗಲೇ ಹೇಳಿಬಿಡು,..ಆದರೆ ನೀನು ದೊಡ್ಡ ಮನಸ್ಸಿನವಳು, ಬೇಡ ಅನ್ನುವುದಿಲ್ಲ ಅಂತ ಎಲ್ಲ ತಿಳಿದಿದಾರೆ......ನೀನೀಗ ಒಪ್ಪಿದರೆ ಎಲ್ಲರೂ ನಿನ್ನನ್ನು ಹೊಗಳ್ತಾರೆ"

"ಹೊರಗಿನವರು ಹೊಗಳಿದರೆ, ಮನೆಯವರು ತೆಗೆಳ್ತಾರೆ ಅಷ್ಟೇ.....ನಿನ್ನ ಭಾವಂದಿರಿಗೆ ದೊಡ್ಡ ಹೃದಯವಿಲ್ಲ. ನಿನ್ನ ಅಕ್ಕಂದಿರೊಡನೆ ಹೇಳಿಕೊಂಡು ನಕ್ಕು ಗೇಲಿ ಮಾಡಿದರೆ?"

"ಅಮ್ಮಾ ನೀನು ಇದಕ್ಕೆಲ್ಲ ಹೆದರ್ತೀಯಾ? ಈಗೇನು ಮಾಡಲಿ? ನಾನು ಮಾತು ಕೊಟ್ಟುಬಿಟ್ಟಿದೀನಲ್ಲ"

"ಯಾರಿಗೆ?"......

"ಸಾವಿತ್ರೀಗೇ...."

"ನನ್ನನ್ನು ಒಂದು ಮಾತು ಕೇಳದೇ......ಚೆನ್ನಾಗಿದೆ, ನಿನ್ನ ತಂದೆ ಸಹ ಒಪ್ಪಬೇಡವೆ?"

"ನಿನಗೆ ಗೊತ್ತು, ನಾನು ಸಾವಿತ್ರೀನ ಪ್ರೀತಿಸ್ತಿದ್ದೆ.ಮದುವೆಯಾಗಲೂ ಸಿದ್ಧನಾಗಿದ್ದೆ. ಸಾವಿತ್ರಿಗೆ ನನ್ನಿಂದಾಗುವ ಸಹಾಯ ಮಾಡಬೇಕು ಅನ್ನುವ ಮನೋಭಾವದಿಂದ ಸರಳನ್ನ ಮದುವೆಯಾದೆ.....ಈಗ ಹಿಂಜರಿದರೆ, ನನಗೆ ನಾನೇ ವಂಚನೆ ಮಾಡಿಕೊಂಡ ಹಾಗಾಗುತ್ತೆ. ನೀನು ಒಪ್ತೀಯೇನೋ ಅಂತ ಅಂದುಕೊಂಡಿದ್ದೆ"

"ನಾನೆಲ್ಲಿ ಬೇಡ ಅಂದೆ ಈಗ? ಆದರೆ ನಾವು ಈಗಲೇ ಯಾರಿಗೂ ತಿಳಿಸುವುದು ಬೇಡ. ಸರಳ ಸಧ್ಯಕ್ಕೆ ಅಲ್ಲಿಯೇ ಇದಾಳೆ ಯಾರಾದರೂ ಕೇಳಿದರೆ ಬಾಣಂತನಕ್ಕೆ ಹೋಗಿದಾಳೆ ಅಂದ್ರಾಯ್ತು......ನಾವೇ ಹೋಗಿ ಆಗಾಗ ಮಾತನಾಡಿಸಿಕೊಂಡು ಬಂದ್ರಾಯ್ತು. ಅಲ್ಲಿಂದಲೇ ಬ್ಯಾಂಕಿಗೆ ಹೋಗಿ ಬರಲಿ. ನಿಮ್ಮ ತಂದೇನ ಈಗಲೇ ಏನೂ ಕೇಳುವುದು ಬೇಡ. ಸರಳ ಮಗುವಿನೊಂದಿಗೇ ಈ ಮನೆಗೆ ಬರಲಿ. ಅಲ್ಲಿಯವರೆಗೂ ಎಲ್ಲಾ ರಹಸ್ಯವಾಗಿಯೇ ಇರಲಿ. ಅದು ನಮ್ಮದೇ ಮಗು ಅಂತ ಎಲ್ಲರೂ ತಿಳ್ಕೋತಾರೆ."

ಸುರೇಶ ತಾಯಿಯ ಜಾಣತನಕ್ಕೆ ಉಬ್ಬಿಹೋದ. ತಾಯಿ ಹೊಸ ಆದರ್ಶಗಳಿಗೆ ಬೆಲೆ ಕೊಡ್ತಾಳೆ ಎನ್ನುವುದು ಅವನಿಗೆ ತಿಳಿದದ್ದೇ. ಆದರೂ ಸುಳ್ಳು ಹೇಳಿ ತಾಯಿಯನ್ನು ನಂಬಿಸಿದ್ದ. ಪುಸಲಾಯಿಸಿ ಒಪ್ಪಿಸಿದ್ದ, ನಿಜವನ್ನೇ ಹೇಳಿದ್ದರೆ, ಅಮ್ಮ ಒಪ್ಪುತ್ತಿದ್ದಳೇನೋ ಅಂತ ತನಗೆ ತಾನೇ ಅಂದುಕೊಂಡಾಗ, ತಾನು ಎಲ್ಲರಿಗಿಂತ ಸಣ್ಣವನಾದೆ ಎನಿಸಿ ಅವನ ಹೃದಯ ಕುಗ್ಗಿತು.

ಒಂದು ಅಪಚಾರದಿಂದ ಎಷ್ಟು ಕತೆ ಕಟ್ಟಬೇಕಾಗುತ್ತದೆ. ಮಾತಿನಿಂದ ಎಷ್ಟೊಂದು ಜನರನ್ನು ಮೆಚ್ಚಿಸಬೇಕಾಗುತ್ತದೆ,ಅಂತನ್ನಿಸಿದಾಗ ಬೇಸರವೆನಿಸಿತು. ತಾನು ಫಾರಿನ್ನಿನಿಂದ ವಾಪಸ್ಸು ಬರದೇ ಇದ್ದಿದ್ದರೆ,.....ಚೆನ್ನಾಗಿರುತ್ತಿತ್ತೆನಿಸಿತು. ತಾನು ಸಾವಿತ್ರಿಗೆ ಅನ್ಯಾಯ ಮಾಡಿದೆ. ಸರಳಂಗೆ ದ್ರೋಹ ಬಗೆದೆ. ಅಮ್ಮನಿಗೆ ಸುಳ್ಳನ್ನು ಹೇಳಿದೆ. ತಾನು ಪಾಪಿ...ತಾನೇಕೆ ಹೀಗಾದೆ? ಮತ್ತೆ ಮತ್ತೆ ತನ್ನನ್ನು ತಾನೇ ಪ್ರಶ್ನಿಸಿಕೊಂಡ. ಉತ್ತರ ಸಿಗಲಿಲ್ಲ.

ದಿನಗಳು ಉರುಳಿದವು.ತಿಂಗಳುಗಳು ಕಳೆದವು. ಸಾವಿತ್ರಿ ದಿನೇ ದಿನೇ ಉಬ್ಬಿದಳು.ಅವಳ ಆರೋಗ್ಯ ಚೆನ್ನಾಗಿತ್ತು. ತನ್ನ ಉಬ್ಬಿದ ಹೊಟ್ಟೆಯ ಮೇಲೆ ಕೈಯಾಡಿಸಿಕೊಂಡಾಗ ಸಾವಿತ್ರಿಯ ಮೈ ರೋಮಾಂಚನ ಗೊಳ್ಳುತ್ತಿತ್ತು. ಹೊಟ್ಟೆಯೊಳಗೆ ಏನೋ ಹರಿದಾಡಿದಾಗ ಮೈ ಪುಳಕಿತಗೊಳ್ಳುತ್ತಿತ್ತು. ಈ ಅನುಭವಗಳನ್ನು ಯಾರೊಡನೆಯಾದರೂ ಹಂಚಿಕೊಳ್ಳುವ ಮನಸ್ಸಾಗುತ್ತಿತ್ತು. ಆದರೆ ಯಾರ ಹತ್ತಿರ? ಸುರೇಶ ಬಂದಿದ್ದರೇ?... ಏಕೋ ಏನೋ ಸುರೇಶ ಫಾರಿನ್ನಿನಿಂದ ಬಂದ ಮೇಲೆ ತನ್ನ ಬಳಿಗೆ ಬಂದು ತನ್ನನ್ನು ಮಾತನಾಡಿಸುವ ಪ್ರಯತ್ನವನ್ನೇ ಮಾಡಿಲ್ಲ. ತಾನು ಗರ್ಭಿಣಿ ಎಂದು ತಿಳಿದು ಅವನು ಹೆದರಿರಬಹುದೆ?

ಮುಕುಂದನೊಡನೆ ಈ ಮಾತುಗಳನ್ನಾಡಲು ಸಾಧ್ಯವಿಲ್ಲ. ಮುಕುಂದ ಈಗಲೂ ನನಗೆ ಕೇವಲ ಭಾವ! ಸರಳಂಗೆ ಈ ಅನುಭವ ಎಂದೂ ಆಗಿಲ್ಲ. ಸುಕನ್ಯ ಈ ಅನುಭವದಿಂದ ವಂಚಿತಳಾಗುವುದರಿಂದ, ತನ್ನ ಅನುಭವಗಳನ್ನು ಕೇಳಿಕೊಳ್ಳುವ ಸಹನೆಯಿರುತ್ತೋ ಇಲ್ಲವೋ......

ತಾನೀಗ ಎಷ್ಟು ದಪ್ಪಗಾಗಿರಬಹುದು! ರವಿಕೆಗಳು ಬಿಗಿಯಾಗಿವೆ. ನಾನು ನೋಡುವುದಕ್ಕೆ ಹೇಗಿರಬಹುದು! ಮುಂಚೆ ಏನೋ, ಎಲ್ಲರೂ ಚೆನ್ನಾಗಿದೀಯ ಎಂದು ಹೊಗಳುತ್ತಿದ್ದರು.ಈಚೆಗೆ ಯಾರೂ ನಮ್ಮ ಮನೆಗೆ ಬಂದಂತಿಲ್ಲ. ನನ್ನನ್ನು ಅಜ್ಞಾತ ವಾಸದಲ್ಲಿಟ್ಟಿದ್ದಾರೆ. ಯಾರಿಗೂ ತಿಳಿಯಬಾರದಂತೆ. ಈಗ ನಾನು ಹೇಗಿರಬಹುದು!

ನನ್ನ ರೂಪವನ್ನೊಮ್ಮೆ ನಾನು ಕನ್ನಡಿಯಲ್ಲಿ ನೋಡಿಕೊಳ್ಳುವಂತಿದ್ದರೆ? ಈ ಬಯಕೆ ಈ ಜನ್ಮದಲ್ಲಿ ಪೂರ್ಣವಾಗುವುದಿಲ್ಲವೇನೋ....ನಾನು ಹೇಗಿದೀನಿ ಅಂತ ಯಾರನ್ನು ಕೇಳಲಿ? ನನ್ನ ಆಸೆಯನ್ನು ಹಾಗೆಯೇ ಅದುಮಿಟ್ಟುಕೊಳ್ಳಬೇಕೇ? ಒಂದೇ ಒಂದು ಸಲವಾದರೂ ಸುರೇಶ ನನ್ನೆದುರಿಗೆ ನಿಂತು ನನ್ನನ್ನು ಹೊಗಳಿದ್ದರೆ? ಮೊದಲಿ ನಂತೆ ನನ್ನೊಡನೆ ಮಾತನಾಡಿದ್ದರೆ? ಸರಳ ಏನು ಹೇಳಿದಾಳೋ, ಅವನಿಗೆ ನನ್ನ ಮೇಲೆ ಕೋಪವಿರಬಹುದೆ? ಯಾರನ್ನು ಕೇಳಲಿ! ತೊಳಲಾಡಿದಳು.

ತಾನು ಇಲ್ಲಿ ಇರುವುದರಿಂದ ಅವನು ಬಂದಿಲ್ಲ. ತನ್ನ ಮನೆಯಲ್ಲಿಯೇ ಇದ್ದಿದ್ದರೆ, ಒಂದಲ್ಲ ಒಂದು ದಿನ ಬಂದಿರುತ್ತಿದ್ದ. ಎಂದುಕೊಂಡು,ತನ್ನ ಮನೆಗೆ ಹೋಗುವ ಆಸೆಯನ್ನು ವ್ಯಕ್ತ ಪಡಿಸಿದಳು. ಸುಕನ್ಯ ಬೇಸರಿಸಿದಳು.

"ನೀನು ಅಲ್ಲಿದ್ದರೇನು? ಇಲ್ಲಿದ್ದರೇನು.......ಅಲ್ಲಿಗಿಂತ ಇಲ್ಲೇ ಸರಿ. ಇಲ್ಲಿ ನಿನಗೇನು ತೊಂದರೆ? ನಾನೂ ಅಲ್ಲಿಗೆ ಬಂದಿರುಕ್ಕೆ ಆಗುತ್ತೇನೆ!ಸುಮ್ಮನಿರು."

"ತೊಂದರೇನೇ.....ಇದು ನಿನ್ನ ಮನೆ, ನನ್ನ ಮನೆಯಲ್ಲ. ನನಗೋಸ್ಕರ ನೀನು ಅಲ್ಲಿಯೇ ಬಂದಿರು. ಇಷ್ಟು ತೊಂದರೆ ತೆಗೆದುಕೊಳ್ಳೋಕು ಆಗುಲ್ವಾ?"

ಸಾವಿತ್ರಿಗೆ ಬೇಸರ ಮಾಡಲು ಇಚ್ಛಿಸದೇ ಸುಕನ್ಯ ಅವಳನ್ನು ತಾಯಿಯ ಮನೆಗೆ ಬಿಟ್ಟು ಬಂದಳು. ಎರಡು ದಿನ ಅಡ್ಜೆಸ್ಟ್ ಮಾಡಿಕೋ. ನಾನು ನಾಡಿದ್ದು ಬರ್ತೀನಿ. ಸುಕನ್ಯ ವಾಪಸ್ಸು ಹೊರಟು ಹೋಗಿದ್ದಳು. ಆ ದಿನವೇ ಅನಿರೀಕ್ಷಿತವಾಗಿ ಸರಳ ಬಂದಳು. ಸಾವಿತ್ರಿಯ ಯೋಗಕ್ಷೇಮವನ್ನು ವಿಚಾರಿಸಿದಳು. ಸಾವಿತ್ರಿ ತಾನಾಗಿಯೇ ಮಾತು ತೆಗೆದಳು.

"ಫಾರಿನ್ನಿಂದ ನಿನಗೇನನ್ನು ತಂದಿದಾರೆ?"

"ಏನೂ ತಂದಿಲ್ಲ ಅಂತನ್ನಿಸುತ್ತೆ.ನಾನು ಕೇಳಲಿಲ್ಲ"

"ಥೂ ಎಂತಹವಳೇ ನೀನು? ನಾನೇ ಆಗಿದ್ದಿದ್ರೆ ಕೇಳಿರುತ್ತಿದ್ದೆ"

"ಹೌದು ನಾನು ನಾನೇ, ನೀನಲ್ಲವಲ್ಲ"

"ಹೋಗಲಿ ಇವತ್ತಾದರೂ ಕೇಳು. ನನಗೂ ತೋರಿಸು." ತನಗೆ ದೃಷ್ಟಿ ಇಲ್ಲ ಎನ್ನುವುದನ್ನು ಮರೆತಂತೆ ಹೇಳಿದಳು.

"ಆಗಲಿ. ಅದೇನು ದೊಡ್ಡ ವಿಷಯ?"ಸರಳ ತಾನೂ ನುಡಿದಳು.

"ಸಂಗೀತಾನೇ ಮರೆತು ಹೋದ ಹಾಗಿದೆ, ಹಾಡು ಹಾಡಲಾ?"

"ಬೇಡ ಮಹರಾಯಿತಿ. ನನಗೆ ಬಿಡುವಿಲ್ಲ. ನಿನಗೂ ಆಯಾಸವಾಗುತ್ತೆ"

"ನನಗೆ ಬೇಜಾರಾಗ್ತಿದೆ. ಹೊತ್ತೇ ಹೋಗ್ತಿಲ್ಲ"

"ಯಾವುದಾದರೂ ಕ್ಯಾಸೆಟ್ ಹಾಕ್ತೀನಿ ಕೇಳು"

"ವೆಸ್ಟನ್ ಮ್ಯೂಸಿಕ್ ಚೆನ್ನಾಗಿರುತ್ತೆ ಅಂತ ಸುಕನ್ಯ ಹೇಳುತ್ತಿದ್ದಳು."

"ಏನೋ ನನಗೆ ಗೊತ್ತಿಲ್ಲ. ನಿನಗೆ ಬೇಕಿದ್ರೆ ತರಿಸಿ ಕೊಡ್ತೀನಿ."

"ಹೂಂ ತರಿಸಿಕೊಡು" ಸರಳ ಮರೆಯದೇ ಗಂಡನೊಡನೆ ಹೇಳಿದಳು. "ಯಾವುದಾದರೂ ವೆಸ್ಟನ್ ಮ್ಯೂಸಿಕ್ ಕ್ಯಾಸೆಟ್ ತಂದುಕೊಡ್ತೀರಾ? ಸಾವಿತ್ರಿಗೆ ಬೇಕಂತೆ"

"ಎಂಥದು ಅಂತ ಗೊತ್ತಾದರೆ ತಂದು ಕೊಡ್ತೀನಿ"

"ನಂಗೊತ್ತಿಲ್ಲ. ನಾನು ಕೇಳಲಿಲ್ಲ. ನೀವೇ ಕೇಳಿ ತಿಳಿದುಕೊಂಡು ತನ್ನಿ. ಇಲ್ಲದಿದ್ದರೆ ಎಂಥದೋ ಒಂದು, ನಿಮಗೆ ತಿಳಿದಿದ್ದನ್ನು ತಂದುಕೊಡಿ"

"ಹಾಗಾದ್ರೆ ಈಗಲೇ ಹೋಗಿ ಕೇಳ್ತೀನಿ.... ನಾಳೆ ದಿನ ಆಫೀಸ್ನಿಂದ ಬರುವಾಗ ಹಾಗೇ ತರುಕ್ಕೆ ಅನುಕೂಲವಾಗುತ್ತೆ. ನೀನೂ ಬರ್ತೀಯಾ?"

"ನಾನು ಈಗ ಅಲ್ಲಿಂದಾನೇ ಬರ್ತಿದೀನಿ.ನಾನು ಮತ್ತೆ ಬರುಲ್ಲ" ಎಂದಳು.

ಸುರೇಶ ಒಬ್ಬನೇ ಹೊರಟ. ಒಂದು ನೆವದಲ್ಲಿ ಅವಕಾಶ ಸಿಕ್ಕಿದ್ದು ಸಂತೋಷ ವಾಗಿತ್ತು. ಕಿಟಕಿಯ ಬಳಿ ನಿಂತು"ಸಾವಿತ್ರಿ" ಎಂದು ಕರೆದ.

ಪರಿಚಿತ ಧ್ವನಿ ಕೇಳಿದ ಕೂಡಲೆ ಸಾವಿತ್ರಿ ಬಂದು ಬಾಗಿಲು ತೆಗೆದಳು.

"ನಿಮ್ಮ ತಾಯಿ ಇಲ್ವಾ?" ಬೇಕಂತ ಕೇಳಿದ.

"ದೇವರ ಮನೇಲಿರಬಹುದು. ಅಮ್ಮಂಗೆ ನನ್ನ ಮೇಲೆ ಸಿಟ್ಟು ಬಂದಿದೆ. ನನಗೆ ಹೀಗಾಗಿದೆ ಅಂತ, ನನ್ನಹತ್ತಿರ ಮಾತನ್ನೇ ಬಿಟ್ಟು ಬಿಟ್ಟಿದ್ದಾಳೆ"

"ಹುಂ. ಸರಳ ಎಲ್ಲಾ ಹೇಳಿದಳು......ಆದರೆ ಮುಕುಂದ ನಿಜವನ್ನು ಹೇಳಿದಾನೆ." ಸಾವಿತ್ರಿ ಒಂದು ಹೆಜ್ಜೆ ಹಿಂದೆ ಸರಿದಳು. ಸುರೇಶ ಮುಂದೆ ಬಂದು ಅವಳ ಕೈ ಹಿಡಿದ.

"ನೀನು ಸುಕನ್ಯಳ ಮಾತಿಗೆ ಒಪ್ಪಬಾರದಾಗಿತ್ತು..."

"ಈಗ ಹಾಗನ್ನಿಸ್ತಿದೆ. ಆಗ ಸುಕನ್ಯಂಗೆ ಸಹಾಯ ಮಾಡುವ ಹುಮ್ಮಸ್ಸಿನಲ್ಲಿ ಒಪ್ಪಿ ಬಿಟ್ಟೆ.ನೀವು ಫಾರಿನ್ನಿಗೆ ಹೋಗಿಲ್ಲದೇ ಇದ್ದಿದ್ದರೆ......ನಾನು ಖಂಡಿತಾ ಒಪ್ಪು ತ್ತಿರಲಿಲ್ಲ. ಸರಳ ಇದನ್ನೆಲ್ಲ ಏಕೆ ಹೇಳಿದಳು? ನಿಮಗೆ ನನ್ನ ಮೇಲೆ ಬೇಸರವಾಗಿರ ಬಹುದು ಅಲ್ವಾ?"

"ಹೌದು ಸಾವಿತ್ರಿ ಇದೆಲ್ಲ ನನಗೆ ಇಷ್ಟವಾಗಲಿಲ್ಲ.."

"ಆದರೆ....ಹೋಗಲಿ ಬಿಡಿ.ಈಗ ನಾನೇನು ಮಾಡಲಿ? ನಾನು ಹೇಗೆ ಕಾಣಿಸ್ತಿದೀನಿ? ತುಂಬಾ ದಪ್ಪಗಾಗಿದೀನಾ!"

"ಹುಂ. ಸ್ವಲ್ಪ ದಪ್ಪಗಾಗಿದೀಯ.....ಆದರೆ ಮೊದಲಿನ ಸಾವಿತ್ರಿ ತರಹ ನೀನಿಲ್ಲ. ಚಿಕ್ಕವಳಂತೆ ಕಾಣುವುದಿಲ್ಲ. ದೊಡ್ಡ ಹೆಂಗಸಿನಂತೆ ಆಗಿದೀಯ......"

"ಅಸಹ್ಯವಾಗಿ ಕಾಣ್ತೀನಾ?"

"ಅಸಹ್ಯವೇನಿಲ್ಲ. ಆದರೆ ಮೊದಲಿನಂತೆ ಚೆನ್ನಾಗಿಲ್ಲ.ಆದರೆ ನಾನು ಹೀಗಂತೆ ಅಂತ ಬೇಜಾರು ಮಾಡ್ಕೋ ಬೇಡ.ಆಮೇಲೆ ಎಲ್ಲಾ ಸರಿಹೋಗುತ್ತೆ. ಅಲ್ಲದೆ ಅವಳಿ ಮಕ್ಕಳಿವೆಯಂತೆ."

"ಹುಂ.ಸರಳ ಹೇಳಿದಳಾ? ನಿಮಗೆ ಏನನ್ನಿಸುತ್ತದೆ?"

"ಏನೂ ಅನ್ನಿಸದೇ ಇರುತ್ತಾ? ನಾನು ಊರಿನಿಂದ ಬಂದ ಮೇಲೂ ನೀನು ನನಗೆ ಸಿಕ್ಕಿಲ್ಲ. ನೀನು ನನ್ನಿಂದ ದೂರವಾಗ್ತಿದೀಯಾ ಅಂತ ಅನ್ನಿಸ್ತಿದೆ."

"ಒಂಥರದಲ್ಲಿ ನಾವೀಗ ದೂರವಾಗುವುದೇ ಒಳ್ಳೆಯದು. ಎಷ್ಟು ದಿನ ಅಂತ ಇನ್ನೊಬ್ಬರಿಗೆ ತಿಳಿಯದಂತೆ ಇರಲು ಸಾಧ್ಯವಾಗುತ್ತೆ?"

"ಪರವಾಗಿಲ್ವೆ? ಕೈಗೆ ಹಣ ಬರುವ ಮೊದಲೇ ನನ್ನಿಂದ ದೂರವಾಗುವ ಯೋಚನೆ ಮಾಡಿದೀಯ...."

"ಹಣಕ್ಕೋಸ್ಕರ ನಾನು ಈ ಕೆಲಸಕ್ಕೆ ಒಪ್ಪಿದೀನಿ ಅಂತ ಅಂದ್ಕೊಂಡ್ರಾ? ನನಗೆ ಹಣದ ಆಸೆ ಇಲ್ಲ."

"ನೀನು ಏನೇ ಹೇಳು. ಹಣ ಸಿಕ್ಕಿದ ಮೇಲೆ ಸ್ವತಂತ್ರವಾಗಿರಬಹುದು ಅಂತ ಯೋಚನೆ ಮಾಡಿದೀಯೋ ಇಲ್ಲವೋ....?"

"ಹಾಗೆ ಆಲೋಚಿಸಿದರೆ ತಪ್ಪೇನು? ನಾನು ಎಷ್ಟು ದಿನ ಅಂತ ಇನ್ನೊಬ್ಬರ ಹಂಗಿನಲ್ಲಿರಲಿ?....ಇದನ್ನು ಕೇಳಿ ಹೀಯಾಳಿಸಿ ಅನ್ನಬೇಕು ಅಂತ ಬಂದರೋ, ನನ್ನ ಮೇಲಿನ ಪ್ರೀತಿಯಿಂದ ಬಂದರೋ? ನಾನು ನಿಮಗಾಗಿ ಕಾದಿದ್ದೆ.....ಆದರೆ ನಿಮಗೆ ನನ್ನ ಮೇಲೆ ಪ್ರೀತಿ ಇಲ್ಲ."

"ಈಗ ಆ ಚರ್ಚೆ ಬೇಡ. ಯಾವುದೋ ಕ್ಯಾಸೆಟ್ಸ್ ಬೇಕು ಅಂದೆಯಂತೆ......"

"ಬೇಡ ಬಿಡಿ. ನಾನು ನಿಮ್ಮನ್ನು ನೋಡಿ ಮಾತನಾಡಿಸುವ ಆಸೆಯಿಂದ,ಸರಳ ನಿಮ್ಮನ್ನು ಕಳಿಸಲಿ ಅಂತ ಹಾಗೆ ಹೇಳಿದ್ದೆ.... ನನ್ನ ಮೇಲೆ ಅಸಮಾಧಾನಾನ?"

"ಸಾವಿತ್ರಿ, ನಾನು ಹೀಗೆ ಹೇಳ್ತೀನಿ ಅಂತ, ಸಿಟ್ಟು ಮಾಡ್ಕೋಬೇಡ.....ನಾನು ನನ್ನ ಹೃದಯದಲ್ಲಿಟ್ಟುಕೊಂಡಿದ್ದ ಸಾವಿತ್ರಿಯೇ ಬೇರೆ ಅಂತ ಅನ್ನಿಸ್ತಿದೆ. ಆ ಇನ್ನೊಂದು ಮಗುವೂ ನಿನ್ನ ಹೊಟ್ಟೆಯಲ್ಲಿರುವಾಗ, ನನ್ನ ಸಾವಿತ್ರಿ ನೀನಲ್ಲ."

ಸಾವಿತ್ರಿ ಪೆಚ್ಚಾದಳು.

"ನೀವೂ ತುಂಬಾ ಬದಲಾಯಿಸಿದ್ದೀರ. ಊರಿನಿಂದ ಬಂದ ತಕ್ಷಣ ಏಕೆ ಬರಲಿಲ್ಲ! ನಿಮಗೂ ನನ್ನ ಮೇಲಿನ ಪ್ರೀತಿ ಕಡಿಮೆಯಾಗಿದೆಯೇನೋ ಅಂತನ್ನಿಸುತ್ತದೆ. ಬಂದಿದ್ದರೆ ಎಲ್ಲಾ ಮಾತನಾಡಬಹುದಿತ್ತು....."

"ನಾನು ವಾಪಸ್ಸು ಬರುವ ಹೊತ್ತಿಗೆ, ನಿಮ್ಮ ಮನೆಯಲ್ಲಿ ಆಗಿದ್ದ ಬದಲಾವಣೆಗಳು, ನಿನ್ನನ್ನ ಏಕಾಂತದಲ್ಲಿ ಸಂಧಿಸಿ ಮಾತನಾಡುವ ಅವಕಾಶವನ್ನೇ ಕೊಡಲಿಲ್ಲ. ಅದು ನನ್ನ ತಪ್ಪಲ್ಲ...."

ಸಾವಿತ್ರಿ ತಲೆ ತಗ್ಗಿಸಿದರೂ ಏನನ್ನೂ ನುಡಿಯಲ್ಲಿಲ್ಲ. ಅವನು ಹೊರಟೇ ಬಿಡ್ತಾನೆ ಎನ್ನುವಾಗ ತಲೆತಗ್ಗಿಸಿಯೇ ನುಡಿದಳು.

"ಮತ್ತೆ ಮತ್ತೆ ಭೇಟಿಯಾಗಿ ಮಾತನಾಡುವ ಅವಕಾಶ ಸಿಗುವುದೋ, ಇಲ್ಲವೋ....ಸರಳ ಸುಕನ್ಯ ನನ್ನ ಜತೆ ಜತೆಯಲ್ಲಿಯೇ ಇರ್ತಾರೆ. ಮಾತನಾಡಲು ಆಗದಿದ್ದರೇನಂತೆ. ನನ್ನನ್ನು ನೋಡುವುದಕ್ಕಾದರೂ ಬನ್ನಿ..." ಅವಳು ದೈನ್ಯದಿಂದ ನುಡಿದಾಗ ಕರಗಿಹೋದ....

ತಗ್ಗಿದ ಅವಳ ಮುಖವನ್ನು ತನ್ನ ಕೈಗಳಿಂದ ಎತ್ತಿದ.....ಅವಳನ್ನು ತನ್ನ ಎದೆಗೆ ಒತ್ತಿಕೊಳ್ಳಬೇಕೆನ್ನುವಷ್ಟರಲ್ಲಿ ಸಾವಿತ್ರಿ ಬೆಚ್ಚಿ ಹಿಂದಕ್ಕೆ ಸರಿದಳು. ಅವಳ ಕೈಗಳನ್ನು ಹಿಡಿದ. ಅವಳು ಕೊಸರಿಕೊಂಡು, "ಅಮ್ಮ ಮನೆಯಲ್ಲೇ ಇದಾಳೆ...." ಎಂದಳು.

ಅವನು ಅತ್ತಿತ್ತ ನೋಡಿದ. ಯಾರೂ ಕಾಣಲಿಲ್ಲ. ಸಾವಿತ್ರಿ ಹೆದರಿದ್ದಾಳೆ ಎಂದುಕೊಂಡು, ಇನ್ನು ಮಾತೇನು ಇಲ್ಲ ಎನ್ನುವಂತೆ ಹೊರಟ. ಕ್ಯಾಸೆಟ್ಸ್ ವಿಷಯ ಮುಗಿದಿತ್ತು...ಸುರೇಶ ತನ್ನ ಮಗುವಿನ ಬಗ್ಗೆ ಕೇಳಲೂ ಸಹ ಹಿಂಜರಿದಿದ್ದ.

ಸಾವಿತ್ರಿಯ ಹೆರಿಗೆ ದಿನ ಸಮೀಪಿಸಿತು....ಅಕ್ಕಂದಿರಿಬ್ಬರ ಸಹಾಯದಿಂದ ನಡೆದು ಬಂದು, ಟ್ಯಾಕ್ಸಿಯನ್ನು ಹತ್ತಿದಳು. ಆಸ್ಪತ್ರೆಗೆ ಅಡ್ಮಿಟ್ ಮಾಡಿದ ಮೇಲೆ ಸರಳ, ಸುಕನ್ಯ ತಮ್ಮ ತಮ್ಮ ಗಂಡಂದಿರಿಗೆ ತಿಳಿಸಿದರು. ಸುರೇಶ ಕಾತುರಗೊಂಡರೆ, ಮುಕುಂದ ಆತಂಕಗೊಂಡಿದ್ದ.

ಏಕೋ ಏನೋ ಆ ಸಮಯದಲ್ಲಿ ಸಾವಿತ್ರಿ ಬಹಳವಾಗಿ ಹೆದರಿದ್ದಳು. ತನ್ನ ಹತ್ತಿರದವರು ಯಾರೂ ಅಲ್ಲಿ....ತನ್ನ ಕಷ್ಟವನ್ನು ತಿಳಿಯುವ ಅಮ್ಮ ಸಹ ತನ್ನಿಂದ ದೂರವಾಗಿಯೇ ಇದಾಳೆ....ತನ್ನ ಗತಿಯೇನು ಎನ್ನುವಂತೆ ಬಳಲಿದ್ದಳು. ಅವಳ ಕೆಟ್ಟ ಮುಖ ನೋಡಿ ಎಲ್ಲರಿಗೂ ಹೆದರಿಕೆ ಆಗಿತ್ತು. ಸುಕನ್ಯ, ತನ್ನ ಪ್ರಯೋಗ ಫಲಿಸಿ, ತನಗೆ ಪ್ರಯೋಜನವಾದರೆ ಸಾಕು ಎನ್ನುವಂತೆ ಕಾತುರದಿಂದ ಕಾದಿದ್ದಳು. ಸರಳ, ಸಧ್ಯ ಸಾವಿತ್ರಿ ಈ ಗ್ಲಂಡಾಂತರದಿಂದ ಪಾರಾದರೆ ಸಾಕು ಎನ್ನುವಂತೆ ಆತಂಕ ದಿಂದ ಚಡಪಡಿಸಿದ್ದಳು. ಮುಕುಂದ ಸುರೇಶರು, ತಪ್ಪಿತಸ್ಥರಂತೆ ಮುಖ ಮಾಡಿ ದ್ದರು....ಎಲ್ಲಂಗೂ ಕಡೇ ಗಳಿಗೆಯಲ್ಲಿ ಏನಾಗಿ ಬಿಡುತ್ತದೋ ಎನ್ನುವ ದಿಗಿಲು. ಇಷ್ಟಾದರೂ ಸುಭದ್ರಮ್ಮ ತನಗೆ ಸುಂಬಂಧಿಸಿದ್ದಲ್ಲವೆನ್ನುವಂತೆ, ದೇವರಧ್ಯಾನದಲ್ಲಿ ಕುಳಿತಿದ್ದಳು. ಅವಳ ಮನಸ್ಸಿನಲ್ಲಿ ಏನಿದೆ ಅಂತ ಅವಳಿಗೆ ಮಾತ್ರ ಗೊತ್ತು.

ಹೆರಿಗೆ ನೋವಿನ ಜತೆ ಜತೆಗೇ ಸಾವಿತ್ರಿಗೆ ತಲೆನೋವು, ಕಣ್ಣುನೋವು ಸಹ ಪ್ರಾರಂಭವಾಯಿತು. ಏಕೆ ಎಂದು ಯಾರಿಗೂ ತಿಳಿಯಲಿಲ್ಲ. ಬ್ಲಡ್ ಪ್ರೆಷರ್ ಸರಿ ಯಾಗಿತ್ತು. ತಕ್ಷಣ ಕಣ್ಣಿನ ಡಾಕ್ಟರನ್ನು ಸಹ ಕರೆಸಿ, ತುರ್ತು ಚಿಕಿತ್ಸೆ ಕೊಡಿಸಿದರು. ಅವಳಿಗಾಗಿರುವ ಕಣ್ಣಿನ ತೊಂದರೆಯನ್ನು ತಿಳಿಸಿ, ಮಾಡಿಸಿದ್ದ ಚಿಕಿತ್ಸೆಯ ಬಗ್ಗೆ ಸಹ ಎಲ್ಲಾ ತಿಳಿಸಿದರು. ಡಾ॥ಸರೋಜ ಸಹ ಆತಂಕಗೊಂಡಿದ್ದಳು. ಆ ತಕ್ಷಣಕ್ಕೆ ತಲೆನೋವು, ಕಣ್ಣಿನ ನೋವು ಕಡಿಮೆಯಾಗುವಂತೆ, ಡ್ರಾಪ್ಸ್ ಹಾಕಿ, ಕಣ್ಣಿಗೆ ಪಂಚೆ ಯನ್ನು ಕಟ್ಟಿದರು. ತಲೆನೋವು ಹೆಚ್ಚಿದಂತೆ ಅವಳಿಗೆ ಹೆರಿಗೆ ನೋವು ಜಾಸ್ತಿಯಾಗಿ, ಒದ್ದಾಡತೊಡಗಿದಾಗ, ಆಪರೇಷನ್‌ಗೆ ಸಿದ್ಧ ಪಡಿಸಿಕೊಳ್ಳುತ್ತಿರುವಂತೆಯೇ ಡಾಕ್ಟರರ ಪ್ರಯತ್ನದಿಂದ ಸಾವಿತ್ರಿ ಮೊದಲನೆಯ ಮಗುವನ್ನು ಹೆತ್ತಳು. ಹತ್ತು ನಿಮಿಷದ ನಂತೆ ಇನ್ನೊಂದು ಮಗುವೂ ಹುಟ್ಟಿತು. ಬಳಲಿ ಹೋಗಿದ್ದ ಸಾವಿತ್ರಿಗೆ ಜ್ಞಾನವೇ ಇರಲಿಲ್ಲ. ಡಾಕ್ಟರು ಮೈಮುಟ್ಟಿ ಎಚ್ಚರಿಸಿದರು. ಅವಳಿಗೆ ಎಚ್ಚರವಾಗಲಿಲ್ಲ. ತಕ್ಷಣ ಡಾಕ್ಟರ್ಸ್, ತುರ್ತಾಗಿ ಅಗತ್ಯವಾದ ಚಿಕಿತ್ಸೆಗಳನ್ನು ನೀಡಿ, ಆಗಾಗ್ಗೆ ಅವಳ ಹೃದಯದ ಬಡಿತ, ಬ್ಲಡ್ ಪ್ರೆಷರ್, ಪಲ್ಸ್ ಬಡಿತಗಳನ್ನು ಪರೀಕ್ಷಿಸಿ, ತನಗೆ ತಿಳಿಸುವಂತೆ, ಅಸಿಸ್ಟೆಂಟ್ ಡಾಕ್ಟರ್‌ಗೆ ಆದೇಶ ನೀಡಿ, "ಯಾರನ್ನೂ ಒಳಗೆ ಬಿಡಬೇಡಿ, ಅವಳಿಗೆ ಕಂಪ್ಲೀಟ್ ರೆಸ್ಟ್ ಬೇಕು. ಅವಳಿಗೆ ಜ್ಞಾನ ಬಂದ ಕೂಡಲೇ ನನಗೆ ತಿಳಿಸಿ" ಎಂದು ಆಕೆ ನುಡಿದು, ಲೇಬರ್ ವಾರ್ಡಿನಿಂದ ಹೊರಟು ಹೋಗಿದ್ದಳು. ಮಕ್ಕಳಿಗೆ ಸ್ನಾನ ಮಾಡಿಸಿ, ತೂಕ ನೋಡಿಸಲು, ಒಳಕ್ಕೆ ಎತ್ತಿಕೊಂಡು ಹೊರಟು ಹೋಗಿದ್ದರು.

ಹೊರಗೆ ಕಾದು ನಿಂತಿದ್ದ ಸರಳ ಸುಕನ್ಯರಿಗೆ ಗಾಭರಿ ಹೆಚ್ಚಾಗಿತ್ತು. ಯಾರೂ ಬಂದು ಏನನ್ನೂ ಹೇಳಿರಲಿಲ್ಲ. ಕೇಳಿದವರು, ಸರಿಯಾಗಿ ಉತ್ತರಿಸದೇ ಹೋಗಿದ್ದರು. ಒಂದೆರಡು ಗಂಟೆಗಳು ಕಳೆದ ನಂತರ ಹಿರಿಯ ಡಾಕ್ಟರು ಅವರುಗಳನ್ನು ಒಳಕ್ಕೆ ಕರೆಸಿದರು.

"ಮಕ್ಕಳು ಚೆನ್ನಾಗಿವೆ. ಆದರೆ ಸಾವಿತ್ರಿಯ ಕಂಡೀಷನ್ ಏನೇನೂ ಚೆನ್ನಾಗಿಲ್ಲ. ಅವಳಿಗೆ ಜ್ಞಾನ ಬರದ ಹೊರತು, ನಾವು ಏನನ್ನೂ ಹೇಳುವುದಕ್ಕಾಗುವುದಿಲ್ಲ. ನಮ್ಮ ಪ್ರಯತ್ನ ನಾವು ಮಾಡುತ್ತಿದ್ದೇವೆ. ಯಾರನ್ನೂ ಈಗಲೇ ನೋಡಲು ಬಿಡುವುದಿಲ್ಲ. ಅವರಿಗೆ ರೆಸ್ಟ್ ಬೇಕು."

ಸರಳ ಸುಕನ್ಯ ಇಬ್ಬರೂ ಮುಖ ಮುಖ ನೋಡಿಕೊಂಡರು. ಇಬ್ಬರಿಗೂ ಸೋತ ಅನುಭವ. ಅವಳಿಗೇನಾದರೂ ಆದರೆ, ನಾವಿಬ್ಬರೂ ಬದುಕಿದ್ದೂ ಸತ್ತಂತೆ. ಈ ಮಗುವಿಗೋಸ್ಕರ ಅವಳ ಬಲಿಕೊಟ್ಟಂತೆ. ಈ ಜನ್ಮದಲ್ಲಿ ನಮಗೆ ಇನ್ನು ನೆಮ್ಮದಿ ಇಲ್ಲ. ಹಾಗೇನೂ ಆಗದಿರಲಿ ಎಂದು ದೇವರಲ್ಲಿ ಪ್ರಾರ್ಥಿಸಿದರು.

ಹೊರಗೆ ನಿಂತಿದ್ದ ಮುಕುಂದನೊಡನೆ ಮಾತನಾಡುವ ಇಚ್ಛೆ ಆಗಲಿಲ್ಲ. ಸುರೇಶ ಅಲ್ಲಿರಲು ಇಚ್ಛಿಸದೇ ಹೊರಟು ಹೋಗಿದ್ದ. ಅವನಿಗೂ ಮುಕುಂದನ ಮೇಲೆ ಅಸಮಾಧಾನವುಂಟಾಗಿತ್ತು.

'ಮೊದಲಿನಿಂದಲೂ ಮುಕುಂದ ಸಾವಿತ್ರಿಯ ಬಗ್ಗೆ ಮರುಕ ಉಳ್ಳವನು. ಈಗ ಅವಳಿಗೇನಾದರೂ ಆದರೆ ತನ್ನನ್ನು ಖಂಡಿತಾ ಕ್ಷಮಿಸುವುದಿಲ್ಲ' ಎಂದು ಸುಕನ್ಯ ಹೆದರಿ ನಿಂತಿದ್ದಳು.

ಆ ರಾತ್ರಿಯೆಲ್ಲಾ ಅವರುಗಳು ಅಲ್ಲಿಯೇ ಕೂತು ನಿಂತು ಕಾಲ ಕಳೆದರು. ಸುರೇಶನೂ ಬಂದು ಅವರೊಡನೆ ಸೇರಿದ. ಎಷ್ಟೋ ಹೊತ್ತಿನ ನಂತರ, ಯಾರೋ ಒಬ್ಬ ನರ್ಸು ಮಕ್ಕಳನ್ನು ಕರೆತಂದು ತೋರಿಸಿದ್ದಳು. ಬಟ್ಟೆಯಿಂದ ಮೈಯನ್ನೆಲ್ಲಾ ಸುತ್ತಿದ್ದರಿಂದ ಎರಡು ಮಕ್ಕಳೂ ಒಂದೇ ತರಹ ಕಂಡವು. ಮುಕುಂದ ಕುತೂಹಲ ದಿಂದ ಸುರೇಶನ ಮುಖವನ್ನು ನೋಡಿದ. ಸುರೇಶ ಸರಳರಿಗೆ, ಮಕ್ಕಳು ಹೇಗೆ, ಯಾರ ಹಾಗೆ ಇದೆ ಎಂದು ನೋಡುವುದಕ್ಕಿಂತ, ಸಾವಿತ್ರಿ ಹೇಗಿದ್ದಾಳೆ ಎಂದು ತಿಳಿಯುವ ಕಾತುರ.

ಇಡೀ ರಾತ್ರಿ ನಿದ್ದೆ ಮಾಡುತ್ತಿದ್ದಂತೆ ಮಲಗಿದ್ದ ಸಾವಿತ್ರಿಗೆ ಬೆಳಗಿನ ಝಾವದ ಹೊತ್ತಿಗೆ ಮಂಪರು ಕಳೆಯಿತು. 'ಅಮ್ಮ' ಎಂದು ನರಳಿದಳು. ಅಲ್ಲಿಯೇ ಕುಳಿತಿದ್ದ

ನರ್ಸು ತಕ್ಷಣ ಎದ್ದು ಹತ್ತಿರ ಬಂದು ಮೈ ಮುಟ್ಟಿ 'ಏನು' ಎಂದಳು. 'ಯಾರು?' ಎಂದಳು ಕ್ಷೀಣವಾದ ಧ್ವನಿಯಲ್ಲಿ.

"ನಾನು, ಸಿಸ್ಟರ್...." ಎಂದಳು ನರ್ಸು ಅಲ್ಲಿಯೇ ನಿಂತು.

"ಏನೋ ಬೆಳ್ಳಗೆ ಕಾಣ್ತಿದೆ.....ಅದೇನದು!" ಎಂದು ಕೇಳಿದಳು ಸಾವಿತ್ರಿ.

"ಏನು ಕಾಣ್ತಿದೆ ! ಏನೂ ಇಲ್ಲವಲ್ಲ........."

"ಇಲ್ಲ.....ಏನೋ ಮಬ್ಬಾಗಿ ಕಾಣ್ತಿದೆ ......"

"ಏನೂ ಇಲ್ಲಮ್ಮ . ನಿಮ್ಮ ಕಣ್ಣಿಗೆ ಪಟ್ಟಿ ಕಟ್ಟಿದೆಯಲ್ಲ...."

"ಕಣ್ಣಿನ ಪಟ್ಟಿ ಬಿಚ್ಚೀರಾ ! ಹಿಂಸೆ ಆಗ್ತಿದೆ ....."

"ಡಾಕ್ಟ್ರನ್ನ ಕೇಳದೇ ಬಿಚ್ಚುವ ಹಾಗಿಲ್ಲ .... ಅವರನ್ನು ಕೇಳ್ತೀನಿ ...."

"ಹೋಗಲಿ ಬೇಡ ಬಿಡಿ ...." ಎಂದವಳು ಸುಮ್ಮನಾದಳು. ಮುಚ್ಚಿದ್ದ ಕಣ್ಣ ಮುಂದೆ ತನಗೆ ಕಂಡದ್ದೇನು ಎಂದು ಅವಳಿಗೆ ಅರ್ಥವಾಗಿರಲಿಲ್ಲ. ಕಣ್ಣುಗಳೇ ಕಾಣದ ತನಗೆ ಭ್ರಮೆ ಎಂದುಕೊಂಡಳು. ಮತ್ತೆ ನಿದ್ದೆಯಾವರಿಸಿತ್ತು.

ಆ ನರ್ಸು, ಇನ್ನೊಬ್ಬ ನರ್ಸನ್ನು ಕರೆದು, ಸಾವಿತ್ರಿಗೆ ಜ್ಞಾನ ಬಂದಿರುವ ವಿಷಯವನ್ನು ಡಾಕ್ಟ್ರಿಗೆ ತಿಳಿಸುವಂತೆ ಹೇಳಿದಳು. ಸಾವಿತ್ರಿಗೆ ಜ್ಞಾನ ಬಂದಿದೆ ಎಂದ ಕೂಡಲೇ ಡಾಕ್ಟರು ಗಡಿಬಿಡಿಯಿಂದ ಅವಳಿದ್ದ ವಾರ್ಡಿಗೆ ಬಂದಳು ....

ಚಾರ್ಟನ್ನು ವಿಶದವಾಗಿ ನೋಡಿ, ಸಾವಿತ್ರಿಯನ್ನು ಪರೀಕ್ಷಿಸಿದಳು. ನರ್ಸು, ಸಾವಿತ್ರಿ ಹೇಳಿದ್ದನ್ನು ಹೇಳಿದಾಗ ಡಾಕ್ಟರು ಚಕಿತಳಾದಳು . ತಕ್ಷಣ ಕಣ್ಣಿಗೆ ಚಿಕಿತ್ಸೆ ನೀಡಿದ್ದ ಡಾಕ್ಟರಿಗೆ ಫೋನ್ ಮಾಡಿ ಈಗಲೇ ಬರುವಂತೆ ತಿಳಿಸಿದಳು.

ಹದಿನೈದು ಇಪ್ಪತ್ತು ನಿಮಿಷಗಳಲ್ಲಿ ಕಣ್ಣಿನ ಡಾಕ್ಟರು ಬಂದರು. ಡಾಕ್ಟರು ಹೇಳಿದ್ದನ್ನೆಲ್ಲ ಕೇಳಿ, ಸಾವಿತ್ರಿಯನ್ನು ಮತ್ತೊಮ್ಮೆ ಸರಿಯಾಗಿ ಪರೀಕ್ಷಿಸಲು ಅನುವಾದರು. ಕಣ್ಣಿಗೆ ಕಟ್ಟಿದ್ದ ಪಟ್ಟಿಯನ್ನು ಬಿಚ್ಚುತ್ತಿದ್ದಂತೆ ಸಾವಿತ್ರಿಗೆ ಎಚ್ಚರ ವಾಯಿತು. ಪಟ್ಟಿಬಿಚ್ಚಿದ ಕೂಡಲೇ ಕಣ್ಣುಗಳಿಗೆ ಕೈಯನ್ನು ಅಡ್ಡ ಹಿಡಿದಳು.

"ಏನಾಗ್ತಿದೆ ಸಾವಿತ್ರಿ?" ಡಾಕ್ಟರು ಮೃದುವಾಗಿ ಕೇಳಿದಳು.

"ಏನೋ ಕಣ್ಣುಗಳನ್ನು ಚುಚ್ತಿದೆ. ಬೆಳ್ಳ ಬೆಳ್ಳಗೆ ಏನೋ ಕಾಣ್ತಿದೆ."

"ಸರಿಯಾಗಿ ನೋಡು, ಏನು ಕಾಣ್ತಿದೆ ಅಂತ ಹೇಳು"

"ಏನೂಂತ ಗೊತ್ತಾಗ್ತಿಲ್ಲ. ಬೆಳ್ಳಗೆ ಬಟ್ಟೆ ತರಹ ...."

ಕಣ್ಣಿನ ಡಾಕ್ಟರು ಪಿಸುದನಿಯಲ್ಲಿ, ಇನ್ನೊಬ್ಬರೊಡನೆ ಏನೋ ಹೇಳಿ,

"ಕಣ್ಣುಗಳಿಗೆ ಈ ಔಷಧಿಯನ್ನು ಹಾಕಿ ಮತ್ತೆ ಪಟ್ಟಿ ಕಟ್ತೇನಿ..... ನಾಳೆ ಬೆಳಿಗ್ಗೆ ವರೆಗೂ ಬಿಚ್ಚುವುದು ಬೇಡ. ಕಣ್ಣು ಚುಚ್ಚುವುದು ನಿಲ್ಲುತ್ತೆ" ಮತ್ತೆ ಪಟ್ಟಿ ಕಟ್ಟಿ, ಅವಳಿಗೆ ನಿದ್ದೆ ಬರುವ ಮಾತ್ರೆಯನ್ನು ತಿನ್ನಿಸಿ, ಮಲಗುವಂತೆ ಹೇಳಿ, ಅವಳ ತಲೆ ಸವರಿ ಹೊರಟು ಹೋದರು.

ನಂತರ, ಡಾಕ್ಟರು ಇಬ್ಬರೂ, ತಮ್ಮ ರೂಮಿನಲ್ಲಿ ತುಂಬಾ ಹೊತ್ತು,ಅವಳ ಬಗ್ಗೆಯೇ ಮಾತನಾಡಿಕೊಂಡರು. ಇಬ್ಬರಿಗೂ ಏನೋ ಆಶ್ಚರ್ಯ ಕಾದಿದೆ ಅಂತ ಅನ್ನಿಸಿತ್ತು.

ಮಲಗಿ ನಿದ್ರಿಸುತ್ತಿದ್ದ ಸಾವಿತ್ರಿಯನ್ನು ದೂರದಿಂದ ನೋಡಿ, ಸರಳ, ಸುಕನ್ಯ ಮನೆಗೆ ಹೊರಟು ಹೋದರು. ಇಡೀ ರಾತ್ರಿಯೆಲ್ಲಾ ಅಲ್ಲಿಯೇ ಕೂತಿದ್ದು ನಿದ್ದೆ ಯಿಲ್ಲದೇ ಸುಸ್ತಾಗಿತ್ತು. ನರ್ಸುಗಳು, ತಾವುಗಳು ನೋಡಿಕೊಳ್ಳುವುದಾಗಿ ಹೇಳಿ ದ್ದರಿಂದ, ಇಬ್ಬರೂ ಧೈರ್ಯವಾಗಿದ್ದರು.

ಆರಾತ್ರಿಯೆಲ್ಲಾ ಸಾವಿತ್ರಿಗೆ ಅರೆ ಎಚ್ಚರ, ಏನೇನೋ ಕನಸುಗಳು! ಏನೋ ಹೆದರಿಕೆ...ಆತಂಕ....ಆಗಾಗ್ಗೆ ನರ್ಸನ್ನು ತನ್ನ ಬಳಿಗೆ ಕರೆಯುತ್ತಿದ್ದಳು. ತಾನೆಲ್ಲಿದೇನೆ! ತನಗೇನಾಗಿದೆ? ಎಂದು ಮತ್ತೆ ಮತ್ತೆ ಕೇಳಿದಳು.

"ತನಗೆ ಮಕ್ಕಳು ಹುಟ್ಟಿವೆ ಎಂದು ತಿಳಿದಾಗ ಮುಗುಳ್ನಕ್ಕಳು. ಆ ವಿಷಯವನ್ನೇ ಮರೆತವಳಂತೆ ಮಲಗಿದ್ದಳಲ್ಲ."

"ನಾನು ಮಕ್ಕಳನ್ನು ನೋಡಲೇ ಇಲ್ಲವಲ್ಲ".....

"ಬೆಳಿಗ್ಗೆ ನೋಡೋರಂತೆ.ಈಗ ಕಣ್ಣಿಗೆ ಪಟ್ಟಿ ಕಟ್ಟಿದೆಯಲ್ಲ." ಸಾವಿತ್ರಿ ಒಂದು ತುತ್ತು ಊಟ ಮಾಡಿ ಮತ್ತೆ ಮಲಗಿದಳು.

ಬೆಳಿಗ್ಗೆ ಮತ್ತೆ ಎಲ್ಲರೂ ಕಾತುರದಿಂದ, ಸಾವಿತ್ರಿಯ ಬಗ್ಗೆ ತಿಳಿದುಕೊಳ್ಳಲು ಬಂದರು. ತಕ್ಷಣ ಅವಳ ಬಳಿಗೆ ಯಾರನ್ನೂ ಬಿಡಲಿಲ್ಲ.

ಕಣ್ಣಿನ ಡಾಕ್ಟರು ಬಂದು, ಪಟ್ಟಿಯನ್ನು ಬಿಚ್ಚಿ, ನಿಧಾನವಾಗಿ ಕಣ್ಣುಗಳನ್ನು ತೆರೆಯುವಂತೆ ಹೇಳಿ, ಅವಳ ಕಣ್ಣಿಗೆ ತಮ್ಮ ಕೈಯನ್ನು ಅಡ್ಡ ಹಿಡಿದರು.

ಕಣ್ಣುಗಳ ರೆಪ್ಪೆಯನ್ನು ನಿಧಾನವಾಗಿ ತೆರೆದ ಸಾವಿತ್ರಿ, ಕಣ್ಣ ಮುಂದೆ ಏನೋ ಅಡ್ಡ ಇದೆ ಎಂದಳು.

"ಗುಡ್, ನಿನಗೀಗ ಏನು ಏನು ಕಾಣ್ತೆದೆ!"ಎಂದು ಕೇಳುತ್ತಾ, ಅಡ್ಡ ಹಿಡಿದಿದ್ದ ಕೈಯನ್ನು ತೆಗೆದರು.

"ಮಬ್ಬು ಬೆಳಕಿನಲ್ಲಿ ಯಾರೋ ನಿಂತಿರುವಂತೆ ಕಾಣ್ತಿದೆ" ಎಂದವಳೇ ಉದ್ವೇಗದಿಂದ "ನನಗೆ ಕಣ್ಣು ಕಾಣ್ತಿದೆ.....ನನಗೆ ಕಾಣ್ತಿದೆ" ಎಂದಳು.....ಹತ್ತಿರ ನಿಂತಿದ್ದ ನರ್ಸಿನ ಕೈಯನ್ನು ಹಿಡಿದು.

"ನಿಧಾನ.....ನಿಧಾನ......ಉದ್ವೇಗಗೊಂಡರೆ ಕಣ್ಣಿಗೂ ತೊಂದರೆ, ನಿನ್ನ ಆರೋಗ್ಯಕ್ಕೂ ತೊಂದರೆ......ನಿಜವಾಗಿಯೂ ನಿನಗೆ ಎಲ್ಲಾ ಕಾಣ್ತಿದೆಯೆ?....ಏನೇನು ಕಾಣ್ತಿದೆ......ಹೇಳು....."

"ಎದುರಿಗೆ ನಿಂತಿರುವ ನೀವೆಲ್ಲಾ ಕಾಣ್ತಿದೀರಿ....." ಸಂತೋಷದಿಂದ ಅವಳ ಗಂಟಲುಬ್ಬಿ ಬಂತು.

"ಸಾವಿತ್ರಿ......ನೀನೆಷ್ಟು ಅದೃಷ್ಟವಂತೆ.... ನಿನ್ನ ಮೇಲೆ ಒಂದು ಪವಾಡವೇ ನಡೆದಿದೆ. ಹತ್ತು ವರ್ಷಗಳ ನಂತರ ನಿನಗೆ ಮತ್ತೆ ಕಣ್ಣಿನ ದೃಷ್ಟಿ ಬಂದಿದೆ. ಜೋಪಾನ ವಾಗಿ ಕಾಪಾಡಿಕೊಳ್ಳಬೇಕು. ಯಾವುದೇ ರೀತಿಯ ಉದ್ವೇಗಕ್ಕೂ ಒಳಗಾಗಬಾರದು." ಡಾಕ್ಟರು ನುಡಿದರು.

ಸಾವಿತ್ರಿ ಸಂತೋಷದಿಂದ ಹಿಗ್ಗಿದಳು.

"ಇದು ಹೇಗಾಯ್ತು ಡಾಕ್ಟರ್....ನನಗೆ ನಂಬುಕ್ಕೇ ಆಗ್ತಿಲ್ಲ...ಕನಸೇನೋ ಅಂತ ಅನ್ನಿಸ್ತಿದೆ."

"ದೇವರ ದಯೆ.....ದೇವರು ನಿನ್ನ ಕಷ್ಟಕ್ಕೆ ಮರುಗಿರಬೇಕು. ನಿನಗೆ ವರವನ್ನೇ ಕೊಟ್ಟಿದಾನೆ....."

"ಹಾಗಾದರೆ......ಇದು ನಿಜ...ತಾನೇ....ಕನಸಲ್ಲವಲ್ಲ"

"ನೀನೇ ಈಗ್ತಾನೆ ಕಣ್ಣು ಕಾಣ್ತಿದೆ.....ಅಂತಂದೆ......ಕನಸಾ ನೀನೇ ಹೇಳು"

"ನನಗೆ ಈಗಲೂ ನಂಬುಕ್ಕೆ ಆಗ್ತಾನೇ ಇಲ್ಲ. ಡಾಕ್ಟ್ರೇ......ನಮ್ಮ ಮನೆಯಿಂದ ಯಾರು ಬಂದಿದಾರೆ? ಅವರಿಗೆ ಗೊತ್ತಾಗಿದೆಯೆ? ಅವರಿಗೆ ತಿಳಿಸಬೇಕಲ್ಲ"

"ಇಲ್ಲ, ನಾವಿನ್ನೂ ಯಾರಿಗೂ ತಿಳಿಸಿಲ್ಲ. ನಿನಗೆ ಮೊದಲು ಯಾರನ್ನು ನೋಡ ಬೇಕು ಅಂತನ್ನಿಸುತ್ತೋ ಅವರನ್ನೇ ಕರೆಸ್ತೀನಿ......ಆದರೆ ಯಾವುದೇ ರೀತಿಯಿಂದ ನೀನು ಮಾತ್ರ ಆಯಾಸ ಮಾಡ್ಕೋಬಾರದು."

"ನನಗೆ ಮೊದಲು ಅಮ್ಮನ್ನ ನೋಡ್ಬೇಕು ಅಂತ ಆಸೆ...."

"ಗುಡ್..ಅವರು ಬಂದಿಲ್ಲ ಅಂತ ಕಾಣಿಸುತ್ತೆ..ಹೇಳಿಕಳಿಸಿ ಕರೆಸ್ತೀನಿ" ವಾರ್ಡಿ ನಿಂದ ಹೊರಗೆ ಬಂದ ಆಕೆ, ಹೊರಗೆ ಕಾದು ನಿಂತಿದ್ದವರನ್ನು ತನ್ನ ಬಳಿಗೆ ಕರೆದಳು.

"ಈ ಕ್ಷಣ ನಿಮ್ಮ ತಾಯಿಯನ್ನು ಕರೆದುಕೊಂಡು ಬನ್ನಿ. ....ಸಾವಿತ್ರಿ ಮೊದಲು ಅವರನ್ನ ನೋಡಬೇಕಂತೆ"ಎಲ್ಲರೂ ಗಾಭರಿಯಿಂದ ಮುಖ ಮುಖ ನೊಡಿಕೊಂಡರು. ಮುಕುಂದ ಮುಂದೆ ಬಂದು ಕೇಳಿದ....

"ಸಾವಿತ್ರಿ ಹೇಗಿದಾಳೆ? ಏನಾಯ್ತು! ಎನಿ ಕಾಂಪ್ಲಿಕೇಷನ್?"

"ನೋ...ನೋ...ಏನಿಲ್ಲ. ಅವಳಿಗೀಗ ಯಾವ ತರಹದ ಅಪಾಯವೂ ಇಲ್ಲ.. ಇನ್ನೂ ಒಂದುಗುಡ್ ನ್ಯೂಸ್ ಅವಳಿಗೆ ಕಣ್ಣಿನ ದೃಷ್ಟಿ ತಿರುಗಿ ಬಂದಿದೆ. ಎಲ್ಲಾ ಕಾಣುತ್ತಿದೆ.."

"ಆ...."ಎಂದರು ಎಲ್ಲರೂ ಒಟ್ಟಿಗೆ....ತಕ್ಷಣ ನಂಬದವರಂತೆ.

"ಎಸ್...ಒಂದು ಪವಾಡವೇ ನಡೆದಿದೆ ನಮ್ಮ ನರ್ಸಿಂಗ್ ಹೋಂನಲ್ಲಿ. ಹತ್ತು ವರ್ಷದಿಂದ ಅಂಧಳಾಗಿದ್ದ ಸಾವಿತ್ರಿಗೆ ದೃಷ್ಟಿ ಬಂದಿದೆ"

"ಇದು ಹೇಗೆ ಸಾಧ್ಯ?.... ತಮಾಷೆಯಾಗಿದೆಯಲ್ಲ......"

"ಹೌದು. ಮೊದಲು ನಮಗೂ ಹಾಗೇ ಅನ್ನಿಸ್ತು.....ಆದರೆ ಕಣ್ಣಿನ ಡಾಕ್ಟರು ಬಂದು ಸರಿಯಾಗಿ ಪರೀಕ್ಷಿಸಿದಾರೆ.....ಸಾವಿತ್ರಿ ನಿಮ್ಮನ್ನೆಲ್ಲ ಗುರುತಿಸಿದಾಗ ನಿಜ ಏನೂಂತ ನಿಮಗೇ ತಿಳಿಯುತ್ತೆ. ಮೊದಲು ನಿಮ್ಮ ತಾಯಿಯನ್ನು ಕರೆತನ್ನಿ."

"ನಿಜವಾಗಿಯೂ ದೇವರು ದೊಡ್ಡವನು. ಸಾವಿತ್ರಿ ಗೆದ್ದಳು."

"ನಿಜ,ಈಗ ಯಾರಾದರೂ ಮೊದಲು ಹೋಗಿ ನಿಮ್ಮ ತಾಯಿಯನ್ನು ಕರೆದು ಕೊಂಡುಬನ್ನಿ. ಅವಳು ಮೊದಲಿಗೆ ಅವರಮ್ಮನನ್ನು ನೋಡುವ ಆಸೆ ವ್ಯಕ್ತ ಪಡಿಸಿ ದಾಳೆ"

"ನಾನು ಕರೆದುಕೊಂಡು ಬರುತ್ತೀನಿ"ಎಂದು ಮುಕುಂದ ಹೊರಟಾಗ, ಸರಳನೂ ಅವನ ಜತೆ ಹೊರಟಳು.

"ಅಮ್ಮಂಗೆ ಇಬ್ಬರೂ ಹೇಳಿದರೆ , ನಂಬಿಕೆ ಬರಬಹುದು" ನಿತ್ಯದಂತೆ ದೇವರ ಧ್ಯಾನ ಮಾಡುತ್ತಾ ಕುಳಿತಿದ್ದ ತಾಯಿಯ ಬಳಿಗೆ ಬಂದ ಸರಳ ಆಕೆಯ ಕೈಗಳನ್ನು ಹಿಡಿದಳು. ಮುಕುಂದನೂ ಹಿಂದೆ ಬಂದು ನಿಂತಿದ್ದ.

"ಅಮ್ಮಾ..ಸಾವಿತ್ರಿ ನಿನಗೆ ಹೇಳಿ ಕಳಿಸಿದಾಳೆ...ಅವಳು ನಿನ್ನನ್ನು ನೋಡ ಬೇಕಂತೆ...."

ಆಕೆ, ಏನು , ಏಕೆ ಎಂದು ಕೇಳದೇ ಸುಮ್ಮನಿದ್ದಳು. ಹಿಂದೆ ನಿಂತಿದ್ದ ಮುಕುಂದ ಮುಂದೆ ಬಂದು ನುಡಿದ....

"ಸಾವಿತ್ರಿಗೆ ಕಣ್ಣುಗಳು ಕಾಣ್ತಿವೆ.ಅವಳು ಮೊದಲು ನಿಮ್ಮನ್ನು ನೋಡ ಬೇಕಂತೆ."

ಅವಳು ಮುಚ್ಚಿದ್ದ ಕಣ್ಣುಗಳನ್ನುತೆರೆದು ಅವನನ್ನೇ ನೋಡಿದಳು.

"ನಿಜ ಅಮ್ಮ.... ಸಾವಿತ್ರಿಗೆ ದೃಷ್ಟಿ ಬಂದಿದೆ.ನೀನೇ ಬಂದು ನೋಡೂವಂತೆ ಬಾ" ಸರಳ ಮತ್ತೆ ನುಡಿದಾಗ, ಸುಭದ್ರಮ್ಮ ಎದ್ದು ನಿಂತು ದೇವರಿಗೆ ಕೈ ಮುಗಿದು ಅವರುಗಳ ಜತೆಯಲ್ಲಿ ಹೊರಟಳು.

ಅಮ್ಮ ಬರುತ್ತಾಳೋ ಇಲ್ಲವೋ ಎಂದು ಅನುಮಾನ ಪಡುತ್ತಿದ್ದ ಸುಕನ್ಯ ತಾಯಿಯನ್ನು ಕಂಡು ಓಡಿ ಬಂದಳು. ಆಕೆ ಏನನ್ನು ಕೇಳಲಿಲ್ಲ. ಅವರಿಬ್ಬರ ಹಿಂದೆ ವಾರ್ಡಿನೊಳಕ್ಕೆ ಬಂದಳು. ನರ್ಸು ಸಂಭ್ರಮದಿಂದ ಸಾವಿತ್ರಿಯನ್ನು ಎಚ್ಚರಿಸಿದಳು.

"ಯಾರು ಬಂದಿದ್ದಾರೆ ಅಂತ ನೋಡು...." ಸಾವಿತ್ರಿ ಕಣ್ಣು ಬಿಟ್ಟಳು. ಸಂತೋಷದಿಂದ "ಅಮ್ಮಾ...." ಎಂದು ಕರೆದಳು. ಸುಭದ್ರಮ್ಮ ಎಲ್ಲಾ ದುಗುಡ ವನ್ನು ಮರೆತಳು.

"ಅಂತೂ ದೇವರು ಇವತ್ತಿಗೆ ಕಣ್ಣು ಬಿಟ್ಟ....ನಿನಗೆ ಕಣ್ಣು ಬಂತು" ಆನಂದ ದಿಂದ ಆಕೆ ಅಳತೊಡಗಿದಳು.

"ಅಳಬೇಡಿ ಅಮ್ಮ.... ನೀವು ಅತ್ತರೆ ಅವರೂ ಅಳ್ತಾರೆ. ಕಣ್ಣಿಗೆ ಒಳ್ಳೇದಲ್ಲ"

ಸುಭದ್ರಮ್ಮ ಕಣ್ಣೊರೆಸಿಕೊಂಡಳು.... ಸಾವಿತ್ರಿಯ ಕೈ ಹಿಡಿದಳು.

"ಅಮ್ಮ.... ನನ್ನ ಮಕ್ಕಳನ್ನು ನೋಡುಲ್ವಾ?" ಸಾವಿತ್ರಿ ಕೇಳಿದಾಗ ಆಕೆ ದುಗುಡದಿಂದ ನಿಟ್ಟುಸಿರನ್ನು ಬಿಟ್ಟಳು. ಮಕ್ಕಳ ಬಗ್ಗೆ ಯಾವ ಉತ್ಸಾಹವನ್ನೂ ತೋರಲಿಲ್ಲ. ಏನನ್ನೂ ಕೇಳಲಿಲ್ಲ. ಸುಮ್ಮನೇ ಅತ್ತಿತ್ತ ನೋಡಿದಳು.

"ಸಿಸ್ಟರ್... ಮಕ್ಕಳನ್ನು ಕರೆತನ್ನಿ.... ನಾನೇ ಇನ್ನೂ ನೋಡಿಲ್ಲ...." ಎಂದಳು ಸಾವಿತ್ರಿ ಚಟುವಟಿಕೆಯಿಂದ. ಸುಕನ್ಯ ಸರಳ ಮುಖ ಮುಖ ನೋಡಿಕೊಂಡರು.

ನರ್ಸು ಎರಡೂ ಮಕ್ಕಳನ್ನು ಅಪ್ಪಿಕೊಂಡು ಬಂದಳು. ಸಾವಿತ್ರಿ ತಾಯಿಯ ಕೈಗೆ ಕೊಡುವಂತೆ ತಿಳಿಸಿ, "ನಿನ್ನ ಮೊಮ್ಮಕ್ಕಳನ್ನು ನೋಡು" ಎಂದಳು.

ಸುಭದ್ರಮ್ಮ ನೋಡಲಿಲ್ಲ. ಮುನಿಸಿನಿಂದ ಕುಳಿತಿದ್ದಳು.

"ಏನಮ್ಮ... ಅಜ್ಜಿಯಾಗಿದೀರಾ... ಅದೂ ಒಟ್ಟಿಗೇ ಎರಡು ಮಕ್ಕಳಿಗೆ... ಅವು ಹುಟ್ಟಿರುವ ಘಳಿಗೆ ಎಂತಹುದು ನೋಡಿ... ತಾಯಿಯ ಕಾರ್ಪಣ್ಯವೆಲ್ಲಾ ತೀರಿದೆ" ನರ್ಸು ನುಡಿದಳು.

"ಎಂತಹ ಒಳ್ಳೆಯ ಮಾತನ್ನಾಡಿದೆ ನರ್ಸಮ್ಮಾ.... ನನ್ನ ಕಾರ್ಪಣ್ಯವೆಲ್ಲಾ ತೀರಿ ಹೋಯಿತು. ಇನ್ನು ಮೇಲೆ ನಾನು ಹೊಸಾ ಮನುಷ್ಯಳು" ಸಾವಿತ್ರಿ ಗೆಲುವಿನ ನಗೆ ನಕ್ಕಳು.

"ಹೌದಮ್ಮ....ಇನ್ನು ನೀವು ಮಲಗಿ. ಹೆಚ್ಚಿಗೆ ಆಯಾಸ ಮಾಡಿಕೋಬಾರದು ಅಂತ ಡಾಕ್ಟ್ರಮ್ಮ ಹೇಳಿಲ್ವಾ? ಗೊತ್ತಾದ್ರೆ ಬೈತಾರೆ."

ಸರಳ ಸುಕನ್ಯ ಇಬ್ಬರೂ ಒಂದೊಂದು ಮಗುವನ್ನೆತ್ತಿಕೊಂಡು, ಮುದ್ದಿಸಿ ಸಾವಿತ್ರಿಯ ಮುಂದೆ ಹಿಡಿದರು. ಸಾವಿತ್ರಿ ಕಣ್ತುಂಬಾ ತನ್ನ ಮಕ್ಕಳನ್ನು ನೋಡಿದಳು. ತಾಯಿಯ ಮುಂದೆ ಮಕ್ಕಳನ್ನು ಹಿಡಿದಾಗ, ಆಕೆ ನೋಡಿದಂತೆ ಮಾಡಿ, ಎದ್ದು ವಾರ್ಡಿನಿಂದ ಆಚೆ ಬಂದಳು.

"ಅಮ್ಮನ ಸಿಟ್ಟು ಇನ್ನೂ ಕಮ್ಮಿ ಆಗಿಲ್ಲ" ಸುಕನ್ಯ ನುಡಿದಾಗ, ಇಬ್ಬರೂ ನಕ್ಕರು.

"ಯಾಕ್ರಮ್ಮ ಸಿಟ್ಟು!... ಮುತ್ತಿನಂತಹ ಗಂಡು ಮಕ್ಕಳನ್ನು ನೋಡಿಯೂ ಅವರಿಗೆ ಹೃದಯ ಕರಗಲಿಲ್ವಾ?"

"ಅವರಿಗೆ, ಹೆಣ್ಣು ಮಕ್ಕಳಾಗಲಿ ಅಂತ ಆಸೆ ಇತ್ತು... ಯಾಕೆ ಅಂದ್ರೆ ನಾವೂ ಹೆಣ್ಣಾಗಿ ಹುಟ್ಟಿದ್ದೆವಲ್ಲ.... ಹೆಣ್ಣು ಮಕ್ಕಳು ಹುಟ್ಟಿದ್ದರೆ ಸಂತೋಷ ಪಡುತ್ತಿದ್ದರು" ಸುಕನ್ಯ ನುಡಿದಳು.

"ಏನ್ರಮ್ಮ ನೀವು ಹೇಳೋದು....ಯಾರಾದ್ರು ಹೆಣ್ಣು ಮಕ್ಕಳು ಹುಟ್ಲಿ ಅಂತ ಬಯಸ್ತಾರಾ?"

"ನಿಮಗೆ ಗೊತ್ತಿಲ್ಲ ಸಿಸ್ಟರ್... ನಮ್ಮ ತಾಯಿದು ತುಂಬಾ ದೊಡ್ಡ ಹೃದಯ... ಹೆಣ್ಣು ಮಕ್ಕಳು ಅಂದ್ರೆ ಅವರಿಗೆ ಪ್ರಾಣ."

"ಷ್.... ಸುಮ್ಮನೇ ಬಾರೆ..." ಸರಳ ಅವಳ ಕೈ ಚಿವುಟಿದಳು. ನರ್ಸು ಎರಡೂ ಮಕ್ಕಳನ್ನು ಎತ್ತಿಕೊಂಡು ವಾಪಸ್ಸು ಹೋದಳು. ಸರಳ ಸುಕನ್ಯ ಆಚೆ ಬಂದರು. ತಾಯಿ ಅಲ್ಲೆಲ್ಲೂ ಕಾಣಲಿಲ್ಲ. ಅತ್ತಿತ್ತ ನೋಡಿದರು. ಹೊರಗಿನಿಂದ ಒಂದಿಷ್ಟು ಬಾಳೆ ಹಣ್ಣುಗಳನ್ನು ಕೈಲಿ ಹಿಡಿದು ಬಂದ ಸುಭದ್ರಮ್ಮ ಮಕ್ಕಳಿಗೆ ಹೇಳಿದಳು.

"ಇವತ್ತು ಸಾವಿತ್ರಿ ಜತೆ ನಾನಿಲ್ಲೇ ಇರ್ತೀನಿ... ನೀವೆಲ್ಲಾ ಎರಡು ಮೂರು ದಿನದಿಂದ ಇಲ್ಲಿಯೇ ಇದ್ದು ಆಯಾಸವಾಗಿರಬಹುದು. ಮನೆಗೆ ಹೋಗಿ

ಚೆನ್ನಾಗಿ ಊಟ ಮಾಡಿ, ಒಳ್ಳೆ ನಿದ್ದೆ ಮಾಡಿ."

ತಕ್ಷಣ ಯಾರೂ ಒಪ್ಪಲಿಲ್ಲ. ಅಮ್ಮ, ಸಾವಿತ್ರಿಗೆ, ಮಕ್ಕಳಿಗೆ ಏನಾದರೂ ತೊಂದರೆ ಮಾಡಿದರೆ ಎನ್ನುವ ಭಯ ಇಣುಕಿತು.

"ಯಾರೂ ಭಯ ಪಡಬೇಡಿ. ಹೋಗಿ ನಾನು ಸಾವಿತ್ರಿಗೆ ಏನೂ ಮಾಡುಲ್ಲ. ಅವಳನ್ನು ಕ್ಷಮಿಸಿದೀನಿ"

"ಅಬ್ಬಾ" ಎಂದರು ಸರಳ ಸುಕನ್ಯ ಒಟ್ಟಿಗೇ. ಎಲ್ಲರೂ ಉಲ್ಲಾಸದಿಂದ ಮನೆಗೆ ಹೊರಟರು.

ಸುರೇಶ ಮನೆಗೆ ಬಂದವನು, ಸಾವಿತ್ರಿಗೆ ಕಣ್ಣು ಬಂದ ವಿಷಯವನ್ನು ತಾಯಿಗೆ ತಿಳಿಸಿದ. ಪಂಕಜಮ್ಮ ಸಂತೋಷಗೊಂಡಳು. "ಸಧ್ಯ ಸಾವಿತ್ರಿಯ ಕಷ್ಟವೆಲ್ಲಾ ಬಗೆಹರಿಯಿತು" ಎಂದಳು.

ಮುಕುಂದ ತನ್ನ ತಂದೆ ಮನೆಯವರಿಗೆ ಒಂದು ಮಾರುದ್ದ ಕಾಗದ ಬರೆದ. "ಸುಕನ್ಯ ಹೆತ್ತಿದ್ದಾಳೆ. ಗಂಡು ಮಗು. ಇಬ್ಬರೂ ಆರೋಗ್ಯವಾಗಿದ್ದಾರೆ. ಇದೇ ಸಮಯದಲ್ಲಿ ಸರಳ ಸಹ ಗಂಡು ಮಗುವನ್ನು ಹೆತ್ತಿರುವುದರಿಂದ ಯಾರಿಗೂ ಬಿಡುವಿಲ್ಲ. ಇನ್ನೂ ಹತ್ತು ದಿನ ಕಳೆದ ನಂತರ, ನಾವೇ ಅಲ್ಲಿಗೆ ಬರುತ್ತಿದ್ದೇವೆ. ನಾಮಕರಣವನ್ನು ಹಳ್ಳಿಯಲ್ಲೇ ಮಾಡಬೇಕೆಂಬ ಆಸೆ, ನನಗೆ. ಆದ್ದರಿಂದ ಯಾರೂ ಬರುವ ತೊಂದರೆ ತಗೋಬೇಡಿ. ಮುಂಚೆಯೇ ತಿಳಿಸದೇ ಇದ್ದುದಕ್ಕೆ ಕಾರಣವನ್ನು ತಿಳಿಸಿದ್ದ.... ಸುಕನ್ಯಳ ಅನಾರೋಗ್ಯದ ಕಾರಣ ಹೆರಿಗೆಯಾಗುವವರೆಗೂ ಯಾರಿಗೂ ತಿಳಿಸುವ ಇಷ್ಟವಿರಲಿಲ್ಲ. ಕ್ಷಮಿಸಿ" ಎಂದು ಕ್ಷಮೆ ಕೋರಿದ್ದ.

ಕಾಗದ ತಲುಪಿದ ಕೂಡಲೇ ಮುಕುಂದನ ಮನೆಯಲ್ಲಿ ಸಂಭ್ರಮ, ಗದ್ದಲ. ಯಾರಾದರೂ ಹೋಗಿ ಮಗು, ಬಾಣಂತಿಯನ್ನು ನೋಡಿ ಬರುವ ಆಸೆ. ಆದರೆ ಮುಕುಂದ ಬೇಡವೆಂದು ಬರೆದಿರುವಾಗ, ಹೋದರೆ ಏನಂತಾನೋ ಅನ್ನುವ ಅನುಮಾನ. ನಮ್ಮ ಮನೆಯ ಮಗುವನ್ನು ನೋಡಲು ನಾವುಗಳು ಹೋದರೆ ತಪ್ಪೇನು? ಹೋಗೋಣ ಎಂದುಕೊಂಡರೂ, ಇನ್ನು ಹತ್ತು ದಿನ ತಾನೇ... ಅಲ್ಲಿಗೆ ಹೋದರೆ ಆಸ್ಪತ್ರೆ ಮೈಲಿಗೆ ಅಂಟುತ್ತೆ. ಅವನೇ ಅತ್ತೆ ಮನೇಲಿದಾನೋ ಏನೋ.... ಹುಟ್ಟಿದ್ದು ಗಂಡು ಮಗು ಎಂದು ತಿಳಿದುದರಿಂದ, ಉದಾರವಾಗಿ ಅವನನ್ನು ಕ್ಷಮಿಸಿ ಅವನ ತಪ್ಪನ್ನು ಮನ್ನಿಸಿದ್ದರು. ನಾವುಗಳು ಈಗ ಹೋದರೆ ಎಲ್ಲರಿಗೂ ಕಷ್ಟವೇ... ಸರಳನೂ ಬಾಣಂತಿಯಾದರೆ, ಯಾರೂ ಸಹಾಯಕರಿರುವುದಿಲ್ಲ. ನಾವುಗಳು ಹೋಗಿ

ಅವರಿಗೆ ತೊಂದರೆಯನ್ನುಂಟು ಮಾಡಬಾರದು. ಮುಕುಂದ ಬರೆದಿರುವಂತೆ, ತಾವುಗಳು ಈಗ ಹೋಗದಿರುವುದೇ ಸರಿ ಎಂದು ತೀರ್ಮಾನಿಸಿಕೊಂಡರು.

ಆದರೂ ಮುಕುಂದ ಅಂಜಿದ್ದ. ಅನಿರೀಕ್ಷಿತವಾಗಿ ಯಾರಾದರೂ ಬರಬಹುದು ಎಂದು ಭಾವಿಸಿದ್ದ. ಬಂದರೇನು ಮಾಡಬೇಕೆಂದು ಹಲವಾರು ಉಪಾಯಗಳನ್ನು ಹುಡುಕಿದ್ದ. ಆದರೆ ಹಾಗಾಗಲಿಲ್ಲ.

"ಅಂತೂ ನಿಮ್ಮ ಮನೆಯ ಜನಕ್ಕೆ ಅಲ್ಪ ಸ್ವಲ್ಪ ಬುದ್ಧಿ ಬಂದಿದೆ." ಸುಕನ್ಯ ಕೆಣಕಿ ನುಡಿದಿದ್ದಳು.

"ಶುದ್ಧ ಹಳ್ಳೀಜನ ಅಂತ ನೀನು ಆಡಿಕೊಳ್ತೀಯಲ್ಲ ಅದಕ್ಕೇ ಬರಲಿಲ್ಲ ವೇನೋ"

"ನಿಮ್ಮ ತಾತಾನೇ ಬಂದು ಬಿಡ್ತಾರೇನೋ ಅಂತ ಅಂದ್ಕೊಂಡಿದ್ದೆ"

"ಬಂದರೂ ಬರಬಹುದು. ಸ್ವಲ್ಪ ಹುಶಾರಾಗಿರು"

"ಬಂದರೆ, ಇನ್ನೇನೇನು ನಾಟಕಗಳನ್ನಾಡಬೇಕಾಗುತ್ತದೋ...?"

"ನಾಟಕ ಆಡಿ ಆಡಿ, ನಾವುಗಳೂ ಎಷ್ಟು ಅನುಭವಸ್ಥರಾಗಿ ಬಿಟ್ಟಿದೀವಿ ಅಂದ್ರೆ, ನಾವುಗಳು ಸೇರಿ ಒಂದು ನಾಟಕದ ಕಂಪೆನೀನೇ ಶುರು ಮಾಡಬಹುದು." ಸುಕನ್ಯ ಬಾಯ್ತುಂಬಾ ನಕ್ಕಳು.... ಮುಕುಂದ ಗಂಭೀರನಾದ.

"ನಿಜ ಹೇಳು ಸುಕನ್ಯ, ನೀನು ಸಂತೋಷವಾಗಿದೀಯಾ?"

"ಯಾಕೆ? ನನ್ನ ಮುಖದಲ್ಲಿ ಅಸಂತೋಷಾನ ಕಂಡ್ರಾ?"

"ಹಾಗಲ್ಲ. ನಿನ್ನಿಂದ ಆಗದ್ದನ್ನು ಸಾವಿತ್ರಿ ಸಾಧಿಸಿದಳಲ್ಲ. ನಿನಗೇನಾದರೂ, ಬೇಜಾರು, ಅಸಮಾಧಾನವಾಯಿತೇನೋ ಅಂತ."

"ಈಚೆಗೆ, ಸಾವಿತ್ರೀನ ನೋಡಿದಾಗ ಅಸೂಯೆಯಾಗ್ತಿದ್ದುದು ನಿಜ, ಹಾಗಿದ್ದಳು ಅವಳು. ನನಗಿಲ್ಲದ ಆನಂದ, ಅನುಭವ ಅವಳಿಗೆ ಆಗ್ತಿದೆಯಲ್ಲ ಅಂತ ತಳಮಳವಾಗುತ್ತಿತ್ತು..... ಆದರೆ ಈಗ ಸಾವಿತ್ರಿಗೆ ದೃಷ್ಟಿ ಬಂದಮೇಲೆ, ಹಾಗೆ ಅನ್ನಿಸ್ತಿಲ್ಲ. ಒಂದು ತರಹದಲ್ಲಿ ಇದೇ ಕಾರಣದಿಂದ ಸಾವಿತ್ರಿಗೆ ಅನುಕೂಲವೇ ಆಗಿದೆ.. ಅಂತ ಅನ್ನಿಸಿದಾಗ, ನಾವೂ ಗೆದ್ದೆವು, ನಮ್ಮ ಈ ಪ್ರಯೋಗದಿಂದ ಸಾವಿತ್ರಿಗೆ ಒಳ್ಳೆಯದೇ ಆಯ್ತು ಅಂತ ಹೆಮ್ಮೆ ಆಗ್ತಿದೆ."

"ಅದಕ್ಕೆ ಆಗುವದೆಲ್ಲಾ ಒಳ್ಳೆದಕ್ಕೆ ಅಂತ ಹೇಳ್ತಾರೇನೋ..."

"ನಿಮಗೆ ಬೇಜಾರೇನಿಲ್ಲ ತಾನೇ...ನಾನು ನಿರಾಶೆ ಮಾಡಿದೆ ಅಂತ."

"ಖಂಡಿತಾ ಇಲ್ಲ. ಮತ್ತೆ ಹಳೇ ರಾಗ ಹಾಡಬೇಡ... ನಮ್ಮ ಮಗೂಗೆ ಏನು ಹೆಸರನ್ನಿಡೋಣ ಹೇಳು"

"ಏನಾದ್ರೂ ಸರಿ. ನಾಮಕರಣಕ್ಕೆ ಇನ್ನೂ ಸಮಯವಿದೆಯಲ್ಲ."

ಹಳ್ಳಿಯಿಂದ ಕಾಗದ ಬಂದಿತ್ತು. ಮುಕುಂದ ಕಾಗದವನ್ನು ಓದಿ ಚಿಂತಿತನಾದ. "ಚಿಕ್ಕ ಮಗುವನ್ನು ಕರೆದುಕೊಂಡು ಈಗ ಬರಬೇಡಿ ದಿನಗಳು ಚೆನ್ನಾಗಿಲ್ಲ. ಅಲ್ಲದೇ ಮಳೆಗಾಳಿ ಶೀತಧಿಂದ ಮಗೂ ಬಾಣಂತಿಗೆ ಏನಾದರೂ ಆದೀತು, ಮೂರನೇ ತಿಂಗಳಿನಲ್ಲಿ ನಾಮಕರಣ ಶಾಸ್ತ್ರ ಮಾಡೋಣ ಅಂತ ತಾತ ಹೇಳಿರುವುದರಿಂದ, ಅದೇ ಸರಿ. ಅಲ್ಲದೇ ಅಲ್ಲಿಯವರೆಗೂ ಯಾವುದೇ ಪ್ರಶಸ್ತವಾದ ದಿನಗಳಿಲ್ಲ" ಅಂತ.

ಆದರೂ ಭಯವಾಗಿತ್ತು. ಯಾರಾದರೂ ದಿಢೀರನೇ ಹಳ್ಳಿಯಿಂದ ಬಂದರೂ ಬಂದರೇ.... ಆಗೇನು ಮಾಡುವುದು ಅಂತ... ಅದಕ್ಕೂ ಏನಾದರೂ ಉಪಾಯವನ್ನೂ ಕಂಡು ಹಿಡಿಯಬೇಕಾಗಿತ್ತು..

ಸಾವಿತ್ರಿ ಎದ್ದು ಚೆನ್ನಾಗಿ ಓಡಾಡುವ ಸ್ಥಿತಿಗೆ ಬರಲು ಹತ್ತಾರು ದಿನಗಳು ಬೇಕಾದವು. ಎದ್ದು ನಿಂತರೆ ತಲೆಭಾರ, ಏನೋ ಅನುಭವವಾಗುತ್ತಿತ್ತು... ಅದೆಲ್ಲ ಕಡಿಮೆಯಾಗಲು ಇನ್ನೂ ಕೆಲವಾರು ದಿನಗಳು ಬೇಕಾಗುತ್ತವೆ ಎಂದು ಡಾಕ್ಟರು ಹೇಳಿದ್ದರು. ಈ ಕಾರಣದಿಂದ ಮಕ್ಕಳಿಗೆ ಮೊದಲಿನಿಂದಲೇ ಬಾಟಲಿನ ಹಾಲನ್ನು ಕುಡಿಯುವ ಅಭ್ಯಾಸ ಮಾಡಿಸಿದ್ದರು. ಸಾವಿತ್ರಿಗೆ ಹೆಚ್ಚಿಗೆ ಹಾಲೂ ಬಂದಿರಲಿಲ್ಲ. ಬಂದಿದ್ದ ಹಾಲೂ ಬತ್ತಿ ಹೋಗುವ ಸ್ಥಿತಿಯಲ್ಲಿತ್ತು. ಹೆಚ್ಚು ಹೊತ್ತು ಕೂತು ಎರಡೆರಡು ಮಕ್ಕಳಿಗೆ ಹಾಲನ್ನು ಕುಡಿಸುವುದು ಅವಳಿಂದ ಸಾಧ್ಯವಿಲ್ಲವೆಂದರಿತ ಡಾಕ್ಟರ್ ಅದನ್ನು ನಿರಾಕರಿಸಿದ್ದರು.

ಹದಿನೈದು ದಿನಗಳು ಕಳೆದರೂ ಸಾವಿತ್ರಿ ನರ್ಸಿಂಗ್ ಹೋಂನಲ್ಲಿಯೇ ಇದ್ದಳು. ಔಷಧ ಪಥ್ಯದ ಜತೆಗೆ, ತಡವರಿಸದಂತೆ, ಎದ್ದು ಓಡಾಡಲು ನರ್ಸುಗಳು ಸಹಾಯ ಮಾಡುತ್ತಿದ್ದರು. ಮಕ್ಕಳನ್ನು ಆಸ್ಪತ್ರೆಯವರೇ ನೋಡಿಕೊಳ್ಳುತ್ತಿದ್ದರು. ಮಕ್ಕಳನ್ನು ಯಾರೂ ಸರಿಯಾಗಿ ನೋಡಿರಲಿಲ್ಲ. ಸುರೇಶನಿಗಾಗಲೀ ಮುಕುಂದನಿಗಾಗಲೀ, ತಮ್ಮ ಮಗು ಯಾವುದೆಂದು, ಪರೀಕ್ಷಿಸಿ ನೋಡಲು ಮುಜುಗರವೆನಿಸಿತ್ತು. ಸುರೇಶನ ತಂದೆ ತಾಯಿ ಆಸ್ಪತ್ರೆಗೇ ಬಂದು ಸಾವಿತ್ರಿಯನ್ನು ಮಾತನಾಡಿಸಿ, ಮಕ್ಕಳನ್ನು ನೋಡಿಕೊಂಡು ಹೋಗಿದ್ದರು.

ಅವಳನ್ನು ಡಿಸ್ಚಾರ್ಜ್ ಮಾಡಿದ ದಿನ, "ಹೆಚ್ಚಿಗೆ ಎದ್ದು ಓಡಾಡಿ ಆಯಾಸ ಮಾಡಿಕೊಳ್ಳಬೇಡಿ, ಬಿದ್ದು ಎದ್ದು ಪೆಟ್ಟು ಮಾಡಿಕೊಳ್ಳಬೇಡಿ, ಹೆಚ್ಚಿಗೆ ಓದುವುದಾಗಲೀ, ನೋಡುವುದಾಗಲೀ ಈಗಲೇ ಮಾಡಬೇಡಿ, ಕ್ರಮೇಣ ಒಂದೊಂದಾಗಿ ಹೊಂದಿಕೊಳ್ಳಬೇಕು. ಯಾಕೆಂದರೆ, ಆಕಸ್ಮಿಕವಾಗಿ ಮತ್ತೇನಾದರೂ ಆದರೆ ಹೆಚ್ಚಿನ ತೊಂದರೆಗಳುಂಟಾಗುವ ಪರಿಸ್ಥಿತಿ ಒದಗಬಹುದು." ಎಂದು ಕಣ್ಣಿನ ಡಾಕ್ಟರು ಉಪದೇಶ ನೀಡಿದ್ದರು ಸಾವಿತ್ರಿ ತಲೆ ಆಡಿಸಿದ್ದಳು.

ಟ್ಯಾಕ್ಸಿಯನ್ನು ಮಾಡಿಕೊಂಡು ಸಾವಿತ್ರಿಯೊಡನೆ ಮಕ್ಕಳನ್ನು ಕರೆದುಕೊಂಡು ಮನೆಗೆ ಬಂದರು. ಅಕ್ಕಪಕ್ಕದವರು ಕುತೂಹಲದಿಂದ ಇಣುಕಿ ನೋಡಿದರು. ನಡೆಸಿಕೊಂಡು ಹೋದ ಸಾವಿತ್ರಿಯನ್ನು ಮಾತ್ರ ಕಂಡರು.

ಈಚೆಗೆ ಇವರ ಮನೆಯಲ್ಲಿ, ಈ ಹುಡುಗೀರ ಓಡಾಟ ಜಾಸ್ತಿಯಾಗಿದೆ ಎಂದು ತಮ್ಮ ತಮ್ಮಲ್ಲೇ ಮಾತನಾಡಿಕೊಂಡರೂ, ಕೇಳುವ ಧೈರ್ಯವಿರಲಿಲ್ಲ. ಒಂದಲ್ಲ ಒಂದು ದಿನ ತಾನಾಗಿಯೇ ತಿಳಿಯುತ್ತದೆ ಅಂತ ಕುತೂಹಲವನ್ನು ಅದುಮಿಟ್ಟುಕೊಂಡರು.

ಮನೆಗೆ ಮಕ್ಕಳು ಬಂದ ಸಂಭ್ರಮಕ್ಕಿಂತ, ಸಾವಿತ್ರಿಗೆ ಕಣ್ಣು ಬಂದ ಹಿಗ್ಗಿನಿಂದ ಸುಭದ್ರಮ್ಮ ಹಬ್ಬದ ಅಡಿಗೆ ಮಾಡಿದಳು. ಸುರೇಶನ ತಂದೆ ತಾಯಿ ಸಹ ಬಂದರು. ಹದಿನೆಂಟು ದಿನಗಳಿಂದ ಆಸ್ಪತ್ರೆ ಮನೆಗೆ ತಿರುಗಾಡಿ ಎಲ್ಲರಿಗೂ ಒಂದು ತರಹದ ಆಯಾಸ, ಸುಸ್ತು ಆರಾಮವಾಗಿ ಕಾಲು ಚಾಚಿ ಕೂತುಕೊಳ್ಳುವ ಬಯಕೆ. ಯಾರೊಡನೆ ಮಾತನಾಡುವುದಕ್ಕೂ ಸಮಯವಿರಲಿಲ್ಲ. ಮಕ್ಕಳು ಹೇಗಿವೆ ಎಂದು ಸರಿಯಾಗಿ ನೋಡಲು ಸಹ ಆಗಿರಲಿಲ್ಲ.

ಊಟದ ನಂತರ, ಸುರೇಶನ ತಂದೆ ತಾಯಿಗಳು ಮನೆಗೆ ವಾಪಸ್ಸು ಹೊರಟು ಹೋಗಿದ್ದರು. ಸುಭದ್ರಮ್ಮ ದೇವರ ಮನೆ ಸೇರಿದ್ದಳು. ಸರಳ, ಸುಕನ್ಯ ಮಾತನಾಡುತ್ತಾ ಕೂತಿದ್ದವರು, ಕುಳಿತಲ್ಲೇ ತೂಕಡಿಸಿ ಮಲಗಿದ್ದರು. ಸಾವಿತ್ರಿ ಆರಾಮವಾಗಿ ಮಲಗಿದ್ದಳು. ಸುರೇಶ, ಮುಕುಂದ ಮಾತನಾಡುತ್ತಾ ಕೂತಿದ್ದವರು, ಮಕ್ಕಳು ಅತ್ತ ಸದ್ದಿಗೆ ಮಾತು ನಿಲ್ಲಿಸಿ, ಪರಸ್ಪರ ನೋಡಿದರು. ಮಂಚದ ಮೇಲ ಮಲಗಿಸಿದ್ದ ಎರಡೂ ಮಕ್ಕಳನ್ನು ಎತ್ತಿ ತಂದು ಆಚೆ, ತಮ್ಮ ತೊಡೆಯ ಮೇಲೆ ಮಲಗಿಸಿಕೊಂಡು ಎವೆ ಇಕ್ಕದೇ ನೋಡಿದರು.

ಎರಡು ಮಕ್ಕಳೂ ಮುದ್ದಾಗಿದ್ದವು. ಆದರೆ ಒಂದೇ ತರಹ ಇರಲಿಲ್ಲ. ಒಂದು ಮಗು ಬೆಳ್ಳಗೆ ಉದ್ದವಾಗಿದ್ದರೆ, ಇನ್ನೊಂದು ಮಗು ಕೆಂಪಗೆ ಗುಂಡು ಗುಂಡಗೆ

ಇತ್ತು. ಒಂದು ಮಗುವಿಗೆ ಕರಿಯ ಗುಂಗುರು ಕೂದಲು. ಇಬ್ಬರೂ ಪರಸ್ಪರ ನೋಡಿ ನಕ್ಕೊಂಡರು.

"ಈಗ ಯಾವ ಮಗು ಯಾರದ್ದೆಂದು ಪತ್ತೆ ಹಚ್ಚಬೇಕಲ್ಲ!"

"ಸರಳನ್ನ, ಸುಕನ್ಯಳನ್ನ ಕೇಳೋಣ. ಯಾರಿಗೆ ಯಾವ ಮಗು ಇಷ್ಟವೋ ಅದು ಇರಲಿ. ಸರಿಯಾಗಿ ದಿಟ್ಟಿಸಿ ನೋಡಿದರೆ, ನಮ್ಮ ನಮ್ಮ ಹೋಲಿಕೆ ನಮ್ಮ ನಮ್ಮ ಮಗುವಿಗೆ ಕಂಡರೂ ಕಾಣಬಹುದು."

"ಹೌದಲ್ವಾ! ನೀನು ನಿನ್ನ ತಾತ, ತಂದೆ, ಚಿಕ್ಕಪ್ಪ, ನಿನ್ನ ಅಣ್ಣ ತಮ್ಮ ಯಾರ ಹೋಲಿಕೆ ಈ ಮಗುವಿನಲ್ಲಿ ಕಾಣುತ್ತೆ ಹುಡುಕು. ನಾನು ನನ್ನ ತಂದೆ, ಮಹೇಶ ಅವನ ಮಗುವಿನ ಹೋಲಿಕೆಯನ್ನು ಇವನಲ್ಲಿ ಹುಡುಕ್ತೀನಿ"

"ಗುಡ್ ಐಡಿಯಾ... ಒಂದಲ್ಲ ಒಂದು ಹೋಲಿಕೆ ಇದ್ದೇ ಇರುತ್ತೆ. ನಮ್ಮ ತಾತ ಮೂರನೇ ತಿಂಗಳಿನಲ್ಲಿ ನಾಮಕರಣ ಮಾಡೋಣ ಅಂತ ಬರೆದಿದಾರೆ. ಅಷ್ಟರೊಳಗೆ ಒಂದು ಇತ್ಯರ್ಥವಾಗಿ ಬಿಡಬೇಕು. ಆಮೇಲೆ ನಮ್ಮ ತಾತಯ್ಯನ ಕಪಿ ಮುಷ್ಟಿಯಿಂದ ಕಿತ್ತು ಕೊಳ್ಳಕ್ಕೇ ಆಗುಲ್ಲ" ಇಬ್ಬರೂ ಜೋರಾಗಿ ನಕ್ಕರು. ಸರಳ ಸುಕನ್ಯರಿಗೆ ಎಚ್ಚರವಾಯಿತು.

"ನಾನು ಸಾವಿತ್ರೀನ ಮಾತನಾಡಿಸಿ, ಥ್ಯಾಂಕ್ಸ್ ಹೇಳಿ, ಕಂಗ್ರಾಟ್ಸ್ ಮಾಡಿ ಬರ್ತೀನಿ" ಸುರೇಶ ಎದ್ದ.

"ನೀನು ಬರೀ ಥ್ಯಾಂಕ್ಸ್ ಹೇಳಿ ಬರುವ ಮನುಷ್ಯನಲ್ಲ. ನಾನೂ ನಿನ್ನ ಜತೆಗೆ ಬರ್ತೀನಿ" ಮುಕುಂದನೂ ಹೊರಟ. ಕಳ್ಳರಂತೆ ಮಕ್ಕಳನ್ನು ಎತ್ತಿಕೊಂಡು ಹೊರಟ ಇಬ್ಬರನ್ನೂ ಹೆಂಡತಿಯರು ತಡೆದರು.

"ಮಕ್ಕಳನ್ನು ಸರಿಯಾಗಿ ಎತ್ತಿಕೊಳ್ಳೋಕ್ಕೆ ಬರುತ್ತೋ ಇಲ್ಲವೋ ಬೀಳಿಸಿ ಪೆಟ್ಟು ಮಾಡಿದರೆ ಏನು ಗತಿ?"

"ನೋಡಯ್ಯ....ಸಾವಿತ್ರೀನೇ ಸುಮ್ಮನಿರುವಾಗ ಈ ತಾಯಂದಿರು ಹೇಗಾಡ್ತಿದಾರೆ?" ಮುಕುಂದ ನಗೆಯಾಡಿದ.

"ಇಲ್ಲಿ ತಂದೆಯರಿಗೆ ಏನು ಕೆಲಸ?" ಇಬ್ಬರನ್ನು ಅಟ್ಟಿದರು.. ಸಾವಿತ್ರಿಗೂ ಎಚ್ಚರವಾಗಿತ್ತು. ಹೊರಗೆ ಅಡಿಯಿಡುತ್ತಿದ್ದ ಸುರೇಶನ ಬೆನ್ನು ಕಂಡು ಬಂತು. ತನನ್ನು ನೋಡಿ ಮಾತನಾಡಲು ಬಂದಿದ್ದನೇನೋ ಎಂದುಕೊಂಡಳು.

ಕಣ್ಣುಗಳು ಕಾಣಿಸುವಂತಾದ ನಂತರ ದೂರದಿಂದ ಅವನನ್ನು ನೋಡಿದ್ದಳು.

ಅವನಾಗಲೀ, ಮುಕುಂದನಾಗಲೀ, ವಾರ್ಡಿನೊಳಕ್ಕೆ ಎಂದೂ ಬಂದಿರಲಿಲ್ಲ. ಧ್ವನಿಯಿಂದ, ಅವನ್ಯಾರು, ಮುಕುಂದ ಯಾರಿರಬಹುದು ಎಂದು ಊಹಿಸಿದ್ದಳು. ಅನಂತರವೂ ಮುಕುಂದ ಆಗಾಗ್ಗೆ ಆಸ್ಪತ್ರೆಗೆ ಬರುತ್ತಿದ್ದುದರಿಂದ, ಅವನ ಪರಿಚಯವಾಗಿತ್ತು. ಆದರೆ ಅವನೊಡನೆ ಎಂದೂ ಸಲುಗೆಯಿಂದ ಮಾತನಾಡಿದವಳಲ್ಲ. ಮಾತನಾಡಲು ಆಗಿರಲಿಲ್ಲ.

ಸುರೇಶ ದೂರದಿಂದ ಹಾಗೇ ನೋಡಿ ಹೋಗಿದ್ದ. ಎಲ್ಲರೆದುರು ಅವಳೊಡನೆ ಮಾತನಾಡುವ ಧೈರ್ಯವಿಲ್ಲದವನಂತೆ ವರ್ತಿಸಿದ್ದ. ಅಪರಿಚಿತನಂತೆ ಕಂಡು ಬಂದ... ಅವನ ಬಗ್ಗೆ ಯಾವ ಭಾವನೆಯೂ ಬೆಳೆಯಲಿಲ್ಲ. ಕಣ್ಣಿಲ್ಲದೇ ಕುರುಡಿಯಾಗಿದ್ದಾಗ ತನ್ನ ಕುರುಡು ಬಯಕೆ ಅವನನ್ನು ಆಕರ್ಷಿಸಿತ್ತು. ಈಗ ಕಣ್ಣಿನಿಂದ ಎಲ್ಲವನ್ನೂ ನೋಡಿ, ತಿಳಿಯುವ ಶಕ್ತಿ ಬಂದಿರುವಾಗ, ತನಗೂ ಅವನಿಗೂ ತುಂಬಾ ಅಂತರವಿದೆ ಅಂತ ಅನ್ನಿಸ್ತಿದೆಯಲ್ಲ ಏಕೆ? ಅವನು ಅದೇ ಸುರೇಶನಿರಬಹುದು. ಅವನಿಗೆ ಅದೇ ಪ್ರೀತಿ ಇರಬಹುದು..... ಆದರೆ ತಾನೀಗ ಅದೇ ಸಾವಿತ್ರಿಯಲ್ಲ. ತನ್ನಲ್ಲೀಗ ಅನೇಕ ಬದಲಾವಣೆಗಳು ಆಗಿವೆ. ತಾನೀಗ ಮತ್ತೆ ಆ ಕುರುಡು ಪ್ರೀತಿಯನ್ನು ಬಯಸಿದರೆ, ಕಣ್ಣಿದ್ದು ಕುರುಡಿಯಂತೆ ಆಗುತ್ತದೆ ತನ್ನ ಸ್ಥಿತಿ!

ತಾನೀಗ ಸ್ವತಂತ್ರಳು; ತನಗೀಗ ಯಾರ ಅವಲಂಬನೆಯೂ ಬೇಕಿಲ್ಲ. ಹೊಸ ಹೊಸ ಅನುಭವಗಳಿಂದ ಹೊರ ಪ್ರಪಂಚವನ್ನು ನೋಡುವ ಶಕ್ತಿ ತನಗೆ ಬಂದಿದೆ. ಒಂದು ಕೋಣೆಯಲ್ಲಿ ಕುಳಿತು, ಕತ್ತಲೆಯ ಬದುಕಿನಲ್ಲಿ, ಸುರೇಶನ ಆಗಮನವನ್ನು ಎದುರು ನೋಡುತ್ತಿದ್ದ ಸಾವಿತ್ರಿ ಎಂದೋ ಸತ್ತು ಹೋದಳು ಎಂದುಕೊಂಡಳು.

ಒಂದು ಕಾಲದಲ್ಲಿ ತನಗೆ ಅತ್ಯಂತ ಪ್ರಿಯನಾಗಿದ್ದವನು.... ಅವನನ್ನು ನಿರಾಕರಿಸುವುದು, ಸುಲಭವಲ್ಲ.... ಅವನು ತನ್ನ ಬಳಿಗೆ ಬಂದರೆ.... ತನ್ನ ಆಸೆಯನ್ನು ಬಿಟ್ಟು, ಬಿಡು ಎಂದು ಕೇಳಿಕೊಳ್ಳಬೇಕು ಎಂದೆಲ್ಲಾ ಅಂದುಕೊಂಡಿದ್ದಳು. ಆದರೆ, ಈಗ ತನಗೆ ತಿಳಿಯದಂತೆ, ತಾನು ಮಲಗಿದ್ದ ರೂಮಿಗೆ ಬಂದು, ಕಳ್ಳನಂತೆ ತನ್ನನ್ನು ನೋಡಿ ಹೋದ ಅವನ ಬಗ್ಗೆ ಬೇರ್‍ಯಾವ ಭಾವನೆಯೂ ಉದಿಸಲಿಲ್ಲ. ಇನ್ನು ಮುಂದೆ, ಮುಕುಂದನಂತೆ, ಅವನೂ ನನಗೆ ಭಾವ ಎಂದುಕೊಂಡಳು.

ಇಪ್ಪತ್ತೊಂದನೆಯ ದಿನ, ದಿನ ಚೆನ್ನಾಗಿದ್ದುದರಿಂದ, ಸುರೇಶನ ತಂದೆ ತಾಯಿ ಮಗುವಿಗೆ ನಾಮಕರಣ ಮಾಡಿ ತಮ್ಮ ಮನೆಗೆ ಕರೆದುಕೊಂಡು ಹೋಗುವ ಯೋಜನೆಯನ್ನು ಹಾಕಿದರು. ಸುರೇಶನಿಗೆ ಅದು ಒಪ್ಪಿಗೆಯಾಯಿತು.

ಮದುವೆಯನ್ನು ಸರಳವಾಗಿ ಮಾಡಿಕೊಂಡಿದ್ದರೂ, ನಾಮಕರಣವನ್ನು ಅದ್ಧೂರಿಯಾಗಿ ನಡೆಸಲು ಯೋಚಿಸಿದ. ಸರಳಳನ್ನು ಕೇಳಿದಾಗ ನಿಮ್ಮಿಷ್ಟ ಎಂದಿದ್ದಳು. ಸರಳನ ಒಪ್ಪಿಗೆ ಸಿಕ್ಕಿದ ಮೇಲೆ, ಸುರೇಶ ತನ್ನ ಸ್ನೇಹಿತರನ್ನೂ, ತನ್ನ ಅಕ್ಕ ತಂಗಿ, ಭಾವಂದಿರಿಗೂ ತಿಳಿಸಿ ಆಹ್ವಾನಿಸಿದ. ಹಳ್ಳಿಯಿಂದ ಬಂದು ಹೋಗುವಂತೆ ಮುಕುಂದನ ಮನೆಯವರನ್ನು ಆಹ್ವಾನಿಸಿದ್ದ.

ಒಂದು ದಿನದ ಸಮಾರಂಭ. ಅನುಕೂಲವಾದವರು ಬಂದು ಸೇರಿದ್ದರು. ಮೈಸೂರಿನಿಂದ ಮಹೇಶ, ಅವನ ಹೆಂಡತಿ ರತ್ನ ಬಂದಿದ್ದರು. ಅತ್ತಿಗೆಯ ಕೈಲಿದ್ದ ಎರಡು ವರ್ಷದ ಮಗುವನ್ನು ನೋಡಿ ಸುರೇಶ ಚಕಿತನಾದ. ತನ್ನ ಮಗು ಆ ಮಗುವನ್ನೇ ಹೋಲುತ್ತಿದೆ! ಒಂದು ಘಳಿಗೆ ಗಾಭರಿಯೂ ಆಯಿತು. ಆದರೆ ರಹಸ್ಯ ತನ್ನ ಮೂವರ ಹೊರತು ಇನ್ಯಾರಿಗೂ ತಿಳಿದಿಲ್ಲವೆಂದು ಸಮಾಧಾನಗೊಂಡ. ಮುಕುಂದನಿಗೆ ಮಾತ್ರ ಆ ವಿಷಯವನ್ನು ತಿಳಿಸಿದ.

ಹಳ್ಳಿಯಿಂದ ಮುಕುಂದನ ತಾತ, ಅವರ ಜತೆಗೆ ಚಿಕ್ಕಪ್ಪ ಬಂದಿದ್ದರು. ತಾತ, ಬೇಕಾದ, ಬೇಡವಾದ ಮಾತುಗಳಿಂದ, ಕೆಲವರನ್ನು ಹೊಗಳಿ, ಕೆಲವರನ್ನು ತೆಗಳಿ ಬೇಜಾರು ಮಾಡಿದರು. ಮುಕುಂದ ಸಿಡಿಮಿಡಿಗೊಂಡು, ಅವರುಗಳು ಹೊರಟರೆ ಸಾಕೆಂದು ಕಾದ.

ಸರಳನ ತೊಡೆಯ ಮೇಲಿದ್ದ ಮಗುವನ್ನೇ ಎಲ್ಲರೂ ನೋಡಿದರು. ಎಷ್ಟು ಮುದ್ದಾಗಿ ಚೆನ್ನಾಗಿದೆ ಅಂದರು. ಕೆಲವರು ಮಹೇಶನ ಮಗು, ಮಗುವಾಗಿದ್ದಾಗ ಹೀಗೇ ಇತ್ತು ಎಂದರು. ಸರಳ ಅವರ ಮಾತುಗಳನ್ನು ಆಲಿಸಲಿಲ್ಲ. ಸುರೇಶ ಮಾತ್ರ ಆಗಾಗ್ಗೆ ಸರಳೆಯನ್ನು ಸಾವಿತ್ರಿಯನ್ನು ನೋಡುತ್ತಿದ್ದ. ಮುಕುಂದ ಬಂದು ಗದರಿಸಿದ.

"ನಿನ್ನ ಮುಖ ನೋಡಿದರೆ, ಇವತ್ತು ಎಲ್ಲರಿಗೂ ರಹಸ್ಯ ತಿಳಿದು ಬಿಡುತ್ತೆ"

"ಅಲ್ಲಾ.... ನನ್ನ ಕಳ್ಳತನಾನ ಬಹಿರಂಗ ಮಾಡುಕ್ಕೆ ನನ್ನ ಮಗ ಹಾಗೇ ಏಕೆ ಇರಬೇಕಾಗಿತ್ತು ನೀನೇ ಹೇಳು....?"

"ಹೌದು ಮತ್ತೆ.... ನಿನ್ನ ಅಪರಾಧ ನಿನಗೆ ಮತ್ತೆ ಮತ್ತೆ ನೆನಪಿಗೆ ಬರು ತ್ತಿದ್ದರೆ... ನೀನು ಮತ್ತೆ ಮತ್ತೆ ಇಂತಹ ಅಪರಾಧಕ್ಕೆ ಕೈ ಹಾಕುಲ್ಲ. ಸರಳ ಒಳ್ಳೆಯ ಹುಡುಗಿ. ಒಂದು ಸಲಕ್ಕೆ ಅವಳು ನಿನ್ನನ್ನು ಕ್ಷಮಿಸಬಹುದು.... ಆದರೆ ಮತ್ತೆ ಮತ್ತೆ ಕ್ಷಮಿಸ್ತಾಳಾ?"

"ಸರಳಿಂಗೆ ಎಲ್ಲಾ ಹೇಳಿಬಿಡ್ಲಾ ಅಂತ ಅನ್ನಿಸ್ತಿದೆ."

"ಮೂರ್ಖ! ಅಂತಹ ಕೆಲಸ ಮಾತ್ರ ಮಾಡಬೇಡ.... ನೀನು ಮತ್ತೆ ಸಾವಿತ್ರಿಯ ತಂಟೆಗೆ ಹೋಗಬೇಡ. ನೀನು ಹೋದರೂ ಅವಳು ಮೊದಲಿನಂತೆ ನಿನ್ನನ್ನು ಪ್ರೀತಿಸುಲ್ಲ. ಅವಳು ಬದಲಾಗಿದಾಳೆ ಅಂತ ಅನ್ನಿಸುಲ್ವಾ ನಿನಗೆ?"

"ಹೌದು. ಅವಳು ಬದಲಾಗಿದಾಳೆ. ಅವಳಿಗೀಗ ಕಣ್ಣು ಬಂದಿದೆ.... ಹಣ ಸಿಕ್ಕಿದೆ. ನನ್ನ ಪ್ರೀತಿ ಏಕೆ ಬೇಕು? ಅವಳನ್ನು ಮೆಚ್ಚಿ ಯಾರಾದರೂ ಮದುವೆ ಯಾಗ್ತಾರೆ. ಆ ಕನಸನ್ನು ಕಾಣ್ತಿದಾಳೆ ಅವಳು"

"ನಿನಗೇಕಯ್ಯಾ ಸಂಕಟ? ಹೌದು... ಅವಳಿಗೂ ಜೀವನದಲ್ಲಿ ನೆಮ್ಮದಿಯಾಗಿ ಸುಖವಾಗಿರಬೇಕು ಅನ್ನುವ ಆಸೆ ಇಲ್ವಾ? ಅದರಿಂದ ನಮ್ಮೆಲ್ಲರಿಗೂ ಒಳ್ಳೆಯದೇ.... ನಿನ್ನ ಮಗುವಿನ ಮೇಲೆ ಸಾಕ್ಷಿ ಇಟ್ಟುಕೊಂಡು ಪ್ರತಿಜ್ಞೆ ಮಾಡಿಕೋ.... ಇವತ್ತಿನಿಂದ ಸಾವಿತ್ರಿಯ ಮೇಲಿನ ಮೋಹ ಕಡಿಮೆಯಾಗಬೇಕು ನಿನಗೆ...."

"ಪ್ರಯತ್ನ ಪಡ್ತೀನಿ.... ನಿನ್ನ ಸಲಹೆಗೆ ತುಂಬಾ ಥ್ಯಾಂಕ್ಸ್"

ಮಗುವಿಗೆ 'ಸುಹಾಸ್' ಎಂದು ನಾಮಕರಣ ಮಾಡಿದರು. ಸುರೇಶನ ಮಗ ಸುಹಾಸ್ ತುಂಬಾ ಚೆನ್ನಾಗಿದೆ ಹೆಸರು.. ಮಹೇಶ ಹೊಗಳಿದ್ದ. ಸುರೇಶ ಮೌನಿಯಾದ. ಹೆಸರನ್ನು ಆಯ್ಕೆ ಮಾಡಿದ್ದವಳು ಸಾವಿತ್ರಿಯೇ. ಅವಳು ಆ ಹೆಸರನ್ನು ಸೂಚಿಸಿದಾಗ ಯಾರೂ ಬೇಡವೆಂದಿರಲಿಲ್ಲ. ಸರಳ ಸಹ ಒಪ್ಪಿಗೆ ಕೊಟ್ಟಿದ್ದಳು.

ಸಮಾರಂಭ ಮುಗಿಯಿತು. ಬಂದಿದ್ದವರು, ಮಗುವನ್ನು ಆಶೀರ್ವದಿಸಿ ಉಡುಗೊರೆಗಳನ್ನಿತ್ತು, ಫಲತಾಂಬೂಲಗಳೊಂದಿಗೆ ನಿರ್ಗಮಿಸಿದ್ದರು. ಸರಳ ಬಾಣಂತಿಯಂತೆ ಕಟ್ಟು, ನಿಟ್ಟಾಗಿರದೇ ನಿರಾಳವಾಗಿ ಓಡಾಡಿಕೊಂಡಿದ್ದಳು. ಎಲ್ಲರಿಗೂ ಆಶ್ಚರ್ಯ. ಸುಕನ್ಯ ಸಹ ಹಾಗೇ ಇದ್ದಳಲ್ಲ. ತಡೆಯದೇ ಮುಕುಂದನ ಚಿಕ್ಕಪ್ಪ ಕೇಳಿದ್ದರು

"ಏನಮ್ಮಾ ಹೀಗೆ ಆರಾಮವಾಗಿ ಓಡಾಡಿಕೊಂಡಿದೀರಲ್ಲ.... ಮಕ್ಕಳಿಗೇನಾದರೂ ಆದರೆ...." ಮಕುಂದ ಅವಳಿಗೆ ಸಹಾಯಕನಾಗಿ ಬಂದಿದ್ದ.

"ಹಾಗೇನೂ ಆಗುಲ್ಲ ಬಿಡಿ ಚಿಕ್ಕಪ್ಪ.... ಈಗೆಲ್ಲಾ ಡಾಕ್ಟರ್ಸ್ ಹೇಳುವುದೇ ಈ ತರಹ. ಮುಂಚಿನ ಹಾಗೆ ಕತ್ತಲೆ ಕೋಣೆಯಲ್ಲಿ ಕುಳಿತಿರುವುದಕ್ಕೆ ಒಪ್ಪಲ್ಲ"

"ಏನೋಪ್ಪ... ಮಗು ಬಾಣಂತಿ ಚೆನ್ನಾಗಿದ್ದರೆ ಸಾಕು"

"ಚೆನ್ನಾಗಿರ್ತಾರೆ. ನಿಮಗೇನೂ ಆತಂಕಬೇಡ."

ತಾತ, ತನ್ನ ಮರಿಮಗನನ್ನು ಎತ್ತಿಕೊಂಡು ಮುದ್ದಾಡಿದ್ದರು. ತಮ್ಮ ಕತ್ತಿನಲ್ಲಿದ್ದ ಒಂದೆಳೆ ಸರವನ್ನು ಮಗುವಿನ ಕತ್ತಿಗೆ ಹಾಕಿದ್ದರು. ಮರೆಯದೇ ತಮ್ಮ

ಜತೆಯಲ್ಲಿ ತಂದಿದ್ದ ತನ್ನ ಹೆಂಡತಿಯ ಬಳೆಗಳನ್ನು ಸುಕನ್ಯಳ ಕೈಗಿತ್ತರು.

ಸುಕನ್ಯಳ ಮುಖ ಚಿಕ್ಕದಾಯಿತು. ಮುಕುಂದನ ಕಡೆ ನೋಡಿದಳು. ಮುಕುಂದನಿಗೆ ಆ ದಿನದ ಘಟನೆ ನೆನಪಿಗೆ ಬಂತು.... ಆದರೂ ಈ ದಿನ ಎಲ್ಲವನ್ನೂ ಮರೆತು ತಾತನಿಗೆ ಸಂತೋಷವನ್ನುಂಟು ಮಾಡುವ ಮೂಡ್‌ನಲ್ಲಿದ್ದ. ಒಪ್ಪಿಗೆಯ ಸಮ್ಮತಿಯುನ್ನು ಸೂಚಿಸಿದ ಕಣ್ಣುಗಳಲ್ಲೇ.... ಸುಕನ್ಯ ಏನನ್ನೂ ಆಡದೆ ಬಳೆಗಳನ್ನು ಕೈಗೆತ್ತಿಕೊಂಡಳು.

ಅವರಿಬ್ಬರನ್ನು ಮುಕುಂದ ಬಸ್ಸಿಗೆ ಹತ್ತಿಸಿ ಬಂದ. ಸುಕನ್ಯ ಅವನನ್ನೇ ಕಾದಿದ್ದವಳಂತೆ ನುಡಿದಳು.

"ಆ ಬಳೆಗಳನ್ನು ನನ್ನ ಕಣ್ಣ ಮುಂದೆ ಹಿಡಿದು, ನನ್ನ ಮನಸ್ಸನ್ನೇ ಕೆಡಿಸಿಬಿಟ್ಟರು. ನಿಮ್ಮ ತಾತ. ನನಗೆ ಆ ಬಳೆಗಳು ಬೇಕಿಲ್ಲ. ಅವರಿಗೆ ವಾಪಸ್ಸು ಕೊಟ್ಟುಬಿಡಿ"

"ಯಾಕೆ? ನಿನಗೆ ಏನಾದರೂ ಅಳುಕಾ? ಏನೋ ಮುಚ್ಚು ಮರೆ ಮಾಡಿದೀವಿ ಅನ್ನುವ ಕೊರತೇನಾ? ಅಥವಾ ಇನ್ನೇನು ಅನುಮಾನ?"

"ನಾನು ಈ ಮಗುವನ್ನು ಹೆತ್ತಿಲ್ಲ... ಹೌದು. ಈ ವಿಚಾರ ನಿಮ್ಮ ತಾತನಿಗೆ ತಿಳಿದರೆ, ಮತ್ತೆ ನನ್ನ ಕೈನಿಂದ ಈ ಬಳೆಗಳನ್ನು ಕಿತ್ಕೋತಾರೆ. ನನಗೆ ಬೇಡ"

"ಹೇಗೆ ತಿಳಿಯುತ್ತೆ ನೀನೇ ಹೇಳು....? ಆದರೆ ಈ ಭಾವನೆ ನಿನ್ನಿಂದ ಇನ್ನೂ ಮರೆಯಾಗಿಲ್ಲ ಅಂತ ಅರ್ಥ. ಹೋಗಲಿ ಬಿಡು. ನಿನಗೆ ಅಳುಕು ಕಡಿಮೆಯಾಗುವವರೆಗೂ, ನೀನು ಈ ಬಳೆಗಳನ್ನು ಹಾಕಿಕೊಳ್ಳಲೇ ಬೇಡ. ಅಥವಾ ನಿನಗೆ ಬೇಡವಾಗಿದ್ದರೆ... ನನ್ನ ಸೊಸೆಗೆ ಕೊಡ್ತೀನಿ." ಮುಕುಂದ ಅವಳ ಕೈಗಳಿಂದ ಬಳೆಗಳನ್ನು ತೆಗೆದುಕೊಂಡು ತನ್ನ ಪ್ಯಾಂಟಿನ ಜೇಬಿಗಿಳಿಸಿಬಿಟ್ಟ.

ಅಲ್ಲೇ ಕೂತಿದ್ದ ಸರಳ ನಕ್ಕಳು.

"ಸುಕನ್ಯಾ.... ಪರವಾಗಿಲ್ವೆ ನಿನ್ನ ಮಗ! ತಾತನಿಂದ ತನಗೊಂದು ಸರವನ್ನು ಗಿಟ್ಟಿಸಿದ ತನ್ನ ಮಡದಿಗೆಂದು ಬಳೆಗಳನ್ನು ಪಡೆದ. ಎಷ್ಟು ಲಕ್ಕೀ...."

ಸುಭದ್ರಮ್ಮನಿಗೆ ಮಾತ್ರ ಮನಸ್ಸಿನಲ್ಲಿ ಏನೋ ಕಹಿ. ಸಾವಿತ್ರಿಗೆ ತಿಳಿಯದೇ ಯಾರಿಂದಲೋ ಆದ ಅನ್ಯಾಯಕ್ಕೆ ಹುಟ್ಟಿದ ಮಕ್ಕಳನ್ನು ಇವರುಗಳೆಲ್ಲ ಹೇಗೆ ಮರೆಸುತ್ತಿದಾರೆ? ಹಾಗಾದರೆ ಈ ಕಾಲದರಿಗೆ ಮಾನ ಅಪಮಾನ, ತಪ್ಪು ಒಪ್ಪು ಯಾವುದರ ಬಗ್ಗೆಯೂ ಚಿಂತೆಯೇ ಇಲ್ಲವೆ! ಅಥವಾ ಏನಾದರೂ ಆಗಲಿ, ಯಾರಿಗೂ ಕೇರ್ ಮಾಡುಲ್ಲ ಅನ್ನುವ ಧೋರಣೆಯೆ? ಅಥವಾ ನಿಜವಾಗಿಯೂ.... ಆಗಿರುವ ಅನ್ಯಾಯ

ವನ್ನು ಸರಿಪಡಿಸುವಂತಹ ದೊಡ್ಡ ಹೃದಯದವರೇ....?

ಇವರಂತೂ ಅಕ್ಕತಂಗಿಯರು! ಆದರೆ ಹುಡುಗರು? ಹೆಂಡತಿಯ ಮಾತುಗಳಿಗೆ ಅಷ್ಟು ಮನ್ನಣೆ ಕೊಡ್ತಾರೆಯೆ! ಹಾಗಾದರೆ ನನ್ನ ಮಕ್ಕಳು ಅದೃಷ್ಟವಂತರೇ ಸರಿ. ಸಾವಿತ್ರಿ ಏನು ಪಾಪ ಮಾಡಿದ್ದಳೋ...ಹಾಗಾಗಿತ್ತು. ಇವರೆಲ್ಲರ ದೊಡ್ಡ ಹೃದಯ ದಿಂದ ಅವಳ ಪಾಪ ಕಳೆದು ಹೋಯಿತು. ನಿಜಕ್ಕೂ ಪುಣ್ಯವಂತೆ.

ಹೆಣ್ಣಾಗಿ ಹುಟ್ಟಿದಾಗ ತಾನೆಷ್ಟು ಬೈದಿದ್ದುಂಟು. ಒಂದು ದಿನವಾದರೂ ಪ್ರೀತಿ ಯಿಂದ ಮಮತೆಯಿಂದ ಎತ್ತಿಕೊಂಡವಳಲ್ಲ. ಇನ್ನು ಹೆಣ್ಣು ಮಕ್ಕಳು ಸಾಕು ಎನ್ನುವಂತೆ ಸಾವಿತ್ರಿ ಎಂದು ಹೆಸರನ್ನಿಟ್ಟಾಗಿತ್ತು. ತಿಳುವಳಿಕೆ ಬಂದ ಮೇಲೆ ಬೇಜಾರು ಮಾಡಿಕೊಂಡಿದ್ದಳು. "ಇದೆಂತಹ ಹಳೆಯ ಹೆಸರು? ಅವರ ಹೆಸರು ಮಾತ್ರ ಚೆನ್ನಾಗಿದೆ ಅಂತ" ಆದರೀಗ? ಸಾವಿತ್ರಿ ಎನ್ನುವ ಹೆಸರು ಅವಳಿಗೆ ಒಪ್ಪಿದೆ. ಸಾವಿತ್ರಿ ಅಪವಿತ್ರಳು ಅಂತ ಯಾರಿಗೂ ಅನ್ನಿಸುತ್ತಲೇ ಇಲ್ಲ. ಅವಳಿಂದ ತಮ್ಮ ಜೀವನ ಉದ್ಧಾರವಾಗಿದೆ ಎನ್ನುವಂತೆ, ಸುಕನ್ಯ ಮುಕುಂದ ಅವಳನ್ನು ಎಚ್ಚರಿಕೆಯಿಂದ ನೋಡಿಕೊಂಡಿದಾರೆ. ಸುರೇಶ ಸರಳಾನೂ ಅಷ್ಟೇ.... ಅವಳಿಗೆ ಉಪಕಾರ ಮಾಡಿ ಅವಳನ್ನು ಪ್ರೀತಿಯಿಂದ ನೋಡಿಕೊಂಡಿದಾರೆ. ಕಾರಣವೇನು? ಈಗೇನೋ ಸರಿ. ಮುಂದೆ ಅವರಿಗೇ ಸ್ವಂತ ಮಕ್ಕಳಾದರೆ ಇದೇ ಪ್ರೀತಿ, ಇದೇ ವಿಶ್ವಾಸ ಇರುತ್ತೆ? ಆಗ ಸಾವಿತ್ರಿಯ ಬಗ್ಗೆ ಹೀನಾ ಯವಾಗಿ ಮಾತನಾಡಿದರೆ? ಆಗ ಅವಳು ಏನು ಮಾಡಬಲ್ಲಳು? ಅದೆಲ್ಲಾ ಶುರು ವಾಗುವ ಮೊದಲೇ ಅವಳಿಗೆ ಒಂದು ಮದುವೆ ಮಾಡಿಬಿಡಬೇಕು.. ಅವಳ ಮನೆಗೆ ಅವಳು ಹೊರಟು ಹೋದರೆ ನಿಶ್ಚಿಂತೆ... ಆಮೇಲೆ ತಾನು ಬದುಕದಿದ್ದರೂ ಪರವಾ ಗಿಲ್ಲ. ಸಾವಿತ್ರಿ ಕಳಂಕಿನಿ ಎನ್ನುವುದು ತಪ್ಪಿದರೆ ಸಾಕು.

ಎಲ್ಲರೂ ಜೋರು ಜೋರಾಗಿ ನಗುತ್ತಾ ಮಾತನಾಡುತ್ತಿದ್ದುದು ಆಕೆಯ ಗಮನಕ್ಕೆ ಬಂತು. ತಾನೂ ಆ ಮಾತಿನಲ್ಲಿ ಪಾಲ್ಗೊಳ್ಳಲು ಮನಸ್ಸು ಇಷ್ಟ ಪಡಲಿಲ್ಲ. ದೇವರ ಮನೆ ಸೇರಿದಳು.

ಮಕ್ಕಳಿಗೆ ಎರಡು ತಿಂಗಳು ತುಂಬುತ್ತಿದ್ದಂತೆಯೇ ಹಳ್ಳಿಯಿಂದ ಕಾಗದ ಬಂದಿತ್ತು. ನಾಮಕರಣದ ದಿನವನ್ನು ಗೊತ್ತು ಮಾಡಿ, ಎಲ್ಲರೂ ಬರುವಂತೆ ಬರೆ ದಿದ್ದರು. ಹಾಗೇ ಸುರೇಶನ ತಂದೆ ತಾಯಿಗಳಿಗೂ ಆಹ್ವಾನ ಕೊಟ್ಟಿದ್ದರು.

"ಇಲ್ಲೇ ಮಾಡಿದ್ರೆ ಚೆನ್ನಾಗಿತ್ತು. ಮತ್ತೆ ಆ ಹಳ್ಳಿಗೆ ಹೋಗಬೇಕಾ?" ಸುಕನ್ಯ ಮೂಗು ಮುರಿದಳು.

"ಈಗ ನೀನು ಏನನ್ನೂ ಹೇಳಬೇಡ. ನಿನಗಿಷ್ಟವಿಲ್ಲದಿದ್ರೆ ಸಾವಿತ್ರೀನ ಕರೆದುಕೊಂಡು ಹೋಗ್ತೀನಿ" ಮುಕುಂದ ಹೆದರಿಸಿದ.

"ಸಾವಿತ್ರೀನ, ಸರಳನ್ನ, ಇನ್ನು ಯಾರ್ಯಾರನ್ನ ಬೇಕೋ ಕರೆದುಕೊಂಡು ಹೋಗಿ. ಇವರಲ್ಲಿ ನಿನ್ನ ಹೆಂಡತಿ ಯಾರು ಅಂತ ನಿಮ್ಮ ತಾತ ಕೇಳಿದರೆ ಏನು ಹೇಳ್ತೀರಿ!"

"ಅಂದ್ರೆ.... ಅವರಿಗೆಲ್ಲಾ ಹಳ್ಳಿ ಇಷ್ಟ. ನಿನಗಿಲ್ಲ ಅಲ್ವಾ?"

"ಹೂಂ. ಸೆಗಣಿ ವಾಸನೆ ನೆನಸಿಕೊಂಡರೆ, ಇಲ್ಲೇ ವಾಕರಿಕೆ ಬರುತ್ತೆ"

"ಈಗ ವಾಕರಿಕೆ, ವಾಂತಿಯಾದ್ರು ಯಾರೂ ಅನುಮಾನ ಪಡುಲ್ಲ"

"ನಿಮಗೇ ಅದೇ ಧ್ಯಾನ. ನನ್ನ ಕಷ್ಟ ನನಗೆ...ಹಳ್ಳೀಗೆ ಹೊರಡೂದೂ ಅಂದ್ರೇ..."

"ಹಾಗಾದರೆ ಒಂದು ಕೆಲಸ ಮಾಡೋಣ. ಒಂದು ಚೀಟೀಲಿ, ತೀರ್ಥಹಳ್ಳಿ ಅಂತ, ಇನ್ನೊಂದು ಚೀಟೀಲಿ ಬೆಂಗಳೂರು ಅಂತ ಬರೆದು ಎತ್ತಿಸೋಣ. ಯಾವ ಊರು ಬರುತ್ತೋ ಆ ಊರು, ... ಬೆಂಗಳೂರು ಬಂದರೆ ನಮ್ಮ ಮನೆಯವರನ್ನು ಒಪ್ಪಿಸ್ತೀನಿ. ಹಳ್ಳಿ ಅಂತ ಬಂದ್ರೆ ಬಾಯಿ, ಮೂಗು ಮುಚ್ಚಿಕೊಂಡು ಬರಬೇಕು"

ಸುಕನ್ಯ ಒಪ್ಪಿದಳು ತಂಗೀನ ಕರೆದು ಕೇಳಿದಳು.

"ಸಾವಿತ್ರಿ ನೀನು ಚೀಟೀಲಿ ಹೆಸರುಗಳನ್ನು ಬರೀತೀಯಾ?" ಸಾವಿತ್ರಿ ಸಂತಸದಿಂದ ಒಪ್ಪಿದಳು.

ಸುಕನ್ಯಂಗೆ ಬುದ್ಧಿ ಕಲಿಸಬೇಕು ಎನ್ನುವ ತಮಾಷೆಗೆ, ಅಲ್ಲದೇ ತಾನು ಹಳ್ಳಿಯನ್ನು ನೋಡಬೇಕೆನ್ನುವ ಆಸೆಗೆ, ಸಾವಿತ್ರಿ ಎರಡೂ ಚೀಟಿಗಳಲ್ಲೂ ತೀರ್ಥಹಳ್ಳಿಯ ಹೆಸರನ್ನು ಬರೆದಳು. ಚೀಟಿಯನ್ನು ಚಿಕ್ಕದಾಗಿ ಮಡಿಸಿದ ಮೇಲೆ, ಮುಕುಂದ, ಸಾವಿತ್ರಿಗೇ ಒಂದು ಚೀಟಿಯನ್ನು ಎತ್ತುವಂತೆ ಹೇಳಿದ ಸಾವಿತ್ರಿ ಕಣ್ಣು ಮುಚ್ಚಿ ಒಂದು ಚೀಟಿಯನ್ನು ಎತ್ತಿ ಅವನ ಕೈಗೆ ಕೊಟ್ಟಳು. ಮುಕುಂದ ಬಿಚ್ಚಿ ಓದಿ ಹೇ.... ಎಂದ ಸಂತೋಷದಿಂದ. ಸುಕನ್ಯ ಕಿತ್ತುಕೊಂಡು ಓದಿ 'ಥೂ' ಎಂದು ಹುಬ್ಬು ಗಂಟಿಕ್ಕಿದಳು.

"ಏನು ಥೂ....? ಈಗ ಮೆಜಾರಿಟಿ ನಮ್ಮದೇ. ನಾನು, ನನ್ನ ಮಗ ಇಬ್ಬರೂ ಹಳ್ಳಿಯವರೇ ನೀನೇನೂ ಮಾಡುವ ಹಾಗಿಲ್ಲ. ನಿನಗೊಬ್ಬಳಿಗೇ ಹೀಗೆ ಬೇಜಾರು. ಸರಳ ನಿನ್ನ ತರಹ ಖಂಡಿತಾ ಬೇಜಾರು ಮಾಡಿಕೊಳ್ಳುತ್ತಿರಲಿಲ್ಲ."

"ಹೌದು. ನಾನು ಸರಳ ಅಲ್ಲ... ಸುಕನ್ಯ..."

"ಸುಕನ್ಯ ಅಂದರೆ ಒಳ್ಳೆಯ ಹುಡುಗಿ ಅಂತ ಅರ್ಥ. ನೀನು ಒಳ್ಳೆಯ ಹುಡುಗಿ ಅಲ್ವಾ? ನಾನು ಹೇಳಿದ ಹಾಗೆ ಕೇಳಬೇಕು" ಪುಸಲಾಯಿಸಿದ.

"ಹಾಗಾದರೆ.... ನೀವೂ... ನಾನು ಒಂದ್ಮಾತು ಹೇಳ್ತೀನಿ. ಅದನ್ನು ಕೇಳಬೇಕು. ಮುಂದುಗಡೆಯ ರೂಮಿಗೆ ಒಂದು ಅಟ್ಯಾಚ್ಡ್ ಬಾತ್ ರೂಂ ಕಟ್ಟಿಸುವಂತೆ ತಿಳಿಸಿ ಕಾಗದ ಬರೆಯಿರಿ. ನಾನು ಆ ಬಚ್ಚಲು ಮನೆ ತನಕ ಹೋಗುವುದು ತಪ್ಪುತ್ತೆ"

"ಓ. ಕೇ. ಇಷ್ಟೇ ತಾನೇ... ಮಗು ಬಾಣಂತಿಗೆ ಕಷ್ಟ ಆಗುತ್ತೆ ಅಂದ್ರೆ ನಮ್ಮ ಚಿಕ್ಕಪ್ಪ ನಾಳೇನೇ ಕಟ್ಟಿಸಿ ಬಿಡ್ತಾರೆ"

"ಹಾಗಾದರೆ ಇನ್ನೊಂದು ವಾರ ಬಿಟ್ಟು ಬರ್ತೀನಿ ಅಂತ ನಾಳೇನೇ ಕಾಗದ ಬರೆದು ಹಾಕಿ" ಮುಕುಂದ ಹಾಗೆಯೇ ಕಾಗದ ಬರೆದು ಹಾಕಿದ.

ಎರಡು ಟ್ಯಾಕ್ಸಿ ಮಾಡಿಕೊಂಡು, ಸುರೇಶನ ಮನೆಯವರೂ, ಸುಭದ್ರಮ್ಮ ಸಾವಿತ್ರಿಯರೂ ಸಹ ಹೊರಟರು. ಹಳ್ಳಿಯಲ್ಲಿ ಅವರೆಲ್ಲರಿಗೂ ಭಾರಿ ಸ್ವಾಗತವೇ ಕಾದಿತ್ತು. ಮೊಮ್ಮಗನ-ಮಗ ಮನೆಗೆ ಬರುತ್ತಿದಾನೆಂದು ಮನೆಯ ಮುಂದೆ ದೊಡ್ಡ ಚಪ್ಪರ ಹಾಕಿಸಿ, ತಳಿರು ತೋರಣ ಕಟ್ಟಿಸಿದ್ದರು. ಮನೆಯವರೆಲ್ಲರೂ ಸಂಭ್ರಮದಿಂದ ಅವರುಗಳನ್ನು ಎದುರುಗೊಳ್ಳಲು ಚಪ್ಪರದಡಿಯಲ್ಲಿ ಕಾದಿದ್ದರು. ಟ್ಯಾಕ್ಸಿಯ ಹಾರನ್ನಿನ ಸದ್ದು ಕೇಳಿದೊಡನೆ ಆರತಿ ತಟ್ಟೆಯನ್ನು ಕೈಗೆತ್ತಿಕೊಂಡರು.

ಎರಡು ಮಕ್ಕಳಿಗೂ ಆರತಿಯನ್ನು ಎತ್ತಿ ಒಳಕ್ಕೆ ಕರೆದುಕೊಂಡರು. ಎಲ್ಲರೂ ಒಬ್ಬೊಬ್ಬರಾಗಿ ಮನೆಯೊಳಕ್ಕೆ ನಡೆದರು. ಸಾವಿತ್ರಿ ಮಾತ್ರ ಇಳಿದವಳು ಅತ್ತಿತ್ತ ನೋಡುತ್ತಾ ನಿಂತಿದ್ದಳು. ಅವಳನ್ನ ಗಮನಿಸಿದವನು ರಾಜೇಂದ್ರ.

ಇದೇ ತಾನೇ ಮಗುವನ್ನೆತ್ತಿಕೊಂಡು ಒಳನಡೆದ ಸರಳ ಮತ್ತೆ ಇಲ್ಲಿ ಬಂದು ಯಾಕೆ ಹೀಗೆ ನಿಂತಿದ್ದಾಳೆ ಎಂದುಕೊಂಡು ಅವಳ ಬಳಿಗೆ ಬಂದ. ಅವನನ್ನು ನೋಡಿ ಸಾವಿತ್ರಿ ಗಂಭೀರವಾದಳು. ಅಷ್ಟರಲ್ಲಿ ಸುರೇಶ ಮತ್ತೆ ಹಿಂದಕ್ಕೆ ಬಂದಿದ್ದ. ರಾಜೇಂದ್ರ ಸಾವಿತ್ರಿಯ ಬಳಿ ನಿಂತದ್ದು ಅವನಿಗೆ ಸಹಿಸಲಿಲ್ಲ. "ಒಳಗೆ ಬಾ ಸಾವಿತ್ರಿ" ಎಂದ. ಅವಳು ಅವನ ಹಿಂದೆ ನಡೆದಳು.

ಒಳಗಿನಿಂದ ಬಂದ ಮುಕುಂದ ಟ್ಯಾಕ್ಸಿಯವನಿಗೆ ಹಣ ಎಣಿಸಿ ಕೊಟ್ಟ. ಟ್ಯಾಕ್ಸಿಗಳು ಹೊರಟು ಹೋದವು. ಅವನ ಹಿಂದೆಯೇ ನಿಂತಿದ್ದ ರಾಜೇಂದ್ರ ಕೇಳಿದ್ದ.....

"ಈ ಸಾವಿತ್ರಿ ಯಾರು?"

"ಅವಳು ಸುಕನ್ಯಳ ತಂಗಿ" ಚುಟುಕಾಗಿ ಉತ್ತರಿಸಿದ ಮುಕುಂದ.

"ಇನ್ನೊಬ್ಬಳು ತಂಗಿ ಇದಾಳೆ ಅಂತ ಹೇಳಿಯೇ ಇರಲಿಲ್ಲ... ಎಲ್ಲಿ, ಏಕೆ ಮುಚ್ಚಿಟ್ಟಿದ್ದರು ಇವಳನ್ನು?"

"ನಿನ್ನಂತಹವನ ಕಣ್ಣಿಗೆ ಬೀಳದಿರಲಿ ಅಂತ ಮುಚ್ಚಿಟ್ಟಿದ್ದರು"

"ಯಾಕೆ? ಚೆನ್ನಾಗಿರುವವರನ್ನು ನನ್ನಂತಹವರು ನೋಡಿದ್ರೆ ತಪ್ಪೇನು?"

"ಅವರ ಗ್ರಹಚಾರ ಕೆಟ್ಟಿರುತ್ತೆ" ಎಂದುಕೊಂಡ ತನ್ನಲ್ಲೇ ಉತ್ತರಿಸಲಿಲ್ಲ.

"ಅವಳಿಗೆ ಮದುವೆಯಾಗಿದೆಯಾ?" ಏನೋ ಆಸೆಯಿಂದ ಕೇಳಿದ್ದ.

"ಇಲ್ಲ. ಆದರೆ ನೀನು ಅವಳ ಬಗ್ಗೆ ಯಾವ ಆಸೆಯನ್ನು ಇಟ್ಟುಕೊಳ್ಳಬೇಡ"

"ಯಾಕೆ? ಅವಳೂ ಯಾರನ್ನಾದರೂ ಲವ್ ಮಾಡ್ತಿದಾಳಾ? ಅವಳ ಅಕ್ಕಂದಿರ ತರಹ"

"ತಲೆ ಹರಟೆ ಆಡಬೇಡ. ಅವಳನ್ನೇನೂ ಕೇಳಬೇಡ"

"ನನಗೂ ನಿನಗೂ ವ್ಯತ್ಯಾಸವಿದೆ. ವಿಮಲ ಮಧೂಗೆ ಮೊದಲು ಮದುವೆ ಆಗಲಿ."

"ಮದುವೆ ಬಗ್ಗೆ ನಾನೆಲ್ಲಿ ಆಡಿದೆ? ಈಗೇನು ಮಾತಾಡಿದೆ ನಾನು! ಏನೋ ಕೇಳಿದ್ರೆ ಏನೋ ಹೇಳ್ತೀಯ ನೀನು? ನಿನ್ನ ಜಂಭ ನನ್ನ ಹತ್ತಿರ ನಡೆಯುಲ್ಲ" ರಾಜೇಂದ್ರ ಗುರುಗುಟ್ಟಿದ.

"ನಿನ್ನ ಹಣೇ ಬರಹವೇ ಇಷ್ಟು" ಮುಕುಂದ ಸಿಡುಕುತ್ತಾ ಒಳನಡೆದ. ರಾಜೇಂದ್ರ ಗತ್ತಿನಿಂದ ಅವನ ಹಿಂದೆ ನಡೆದ.

ಒಳಗೆ ಎಲ್ಲರೂ ತಮತಮಗೆ ಅನ್ನಿಸಿದ್ದನ್ನು ಮಾತನಾಡುತ್ತಿದ್ದರು. ಮನೆಯೆಲ್ಲಾ ಸಂಭ್ರಮದ ಗದ್ದಲದಿಂದ ತುಂಬಿ ಹೋಗಿತ್ತು. ವಿಮಲ ಮಧು ಮಕ್ಕಳ ಮುಂದೆ ಕುಳಿತು, ಅವುಗಳ ಅಂದ ಚೆಂದವನ್ನೇ ಕಣ್ತುಂಬಾ ಸವಿಯುತ್ತಿದ್ದರು. ಸುರೇಶನ ತಂದೆ ತಾತನೊಡನೆ ಮಾತನಾಡುತ್ತಿದ್ದರು. ಸುಭದ್ರಮ್ಮ ಪಂಕಜಮ್ಮ ಸುಮ್ಮನೇ ಕುಳಿತಿದ್ದರು. ಸಾವಿತ್ರಿ, ಸುಕನ್ಯ ಸರಳ ಕೆಳಗಿನ ದನಿಯಲ್ಲಿ ತಮ್ಮಲ್ಲೇ ಏನನ್ನೋ ಮಾತನಾಡಿಕೊಳ್ಳುತ್ತಿದ್ದರು. ಬಿಸಿಯಾದ ಕಾಫಿಯನ್ನು ಎಲ್ಲರಿಗೂ ತಂದು ಕೊಟ್ಟವರು ಚಿಕ್ಕಪ್ಪ ಚಿಕ್ಕಮ್ಮ. ಮುಕುಂದ ಅಡಿಗೆ ಮನೆಯಲ್ಲಿ ತಾಯಿಯೊಡನೆ ಮಾತನಾಡುತ್ತಿದ್ದ.

ಚಿಕ್ಕಪ್ಪ ಕುತೂಹಲವನ್ನು ತಾಳಲಾರದೇ ಸುಕನ್ಯನ್ನ ಕೇಳಿದ್ದರು.

"ಈ ಹುಡುಗಿ ಯಾರು! ಈ ಮೊದಲು ನೋಡಿದಂತೆ ಅನ್ನಿಸುವುದಿಲ್ಲ."

"ನನ್ನ ತಂಗಿ ಸಾವಿತ್ರಿ ಅಂತ. ಬೇರೆ ಊರಿನಲ್ಲಿ ಓದುತ್ತಿದ್ದಳು."

"ಮದುವೇಲೂ ಬಂದಿರಲಿಲ್ಲ." ಚಿಕ್ಕಮ್ಮ ಪ್ರಶ್ನಿಸಿದ್ದಳು.

"ಹೌದು. ಆಗ ಅವಳಿಗೆ ಪರೀಕ್ಷೆ ನಡೆಯುತ್ತಿತ್ತು. ಸುಕನ್ಯ ಸಲೀಸಾಗಿ ಸುಳ್ಳು ಹೇಳಿ ಆಕೆಯನ್ನು ನಂಬಿಸಿದ್ದಳು.

"ಸರಳ ಒಬ್ಬಳೇ ತಂಗಿ ಅಂತ ಅಂದುಕೊಂಡಿದ್ದೆವು. ನಮಗೆ ತಿಳಿದೇ ಇರಲಿಲ್ಲ. ಮುಕುಂದನೂ ತಿಳಿಸಿರಲಿಲ್ಲ"

ಆ ಮಾತಿಗೆ ಅವಳು ಏನನ್ನೂ ನುಡಿಯಲಿಲ್ಲ. ನಕ್ಕಂತೆ ಮಾಡಿದಳು. ಚಿಕ್ಕಪ್ಪನ ತನಿಖೆ ಅವಳಿಗೆ ಬೇಜಾರಾಗಿತ್ತು. ಚಿಕ್ಕಪ್ಪ ಆ ಕಡೆ ಹೋದಮೇಲೆ ಸುಕನ್ಯ ಗೊಣಗಿದ್ದಳು.

"ಅದಕ್ಕೇ ಈ ಹಳ್ಳಿಗೆ ಬರುಕ್ಕೆ ಬೇಜಾರು! ಏನಿದು ತನಿಖೆ? ಅಲ್ಲಿ ಒಬ್ಬರ ಸುದ್ದಿಗೆ ಇನ್ನೊಬ್ಬರು ಬರರು."

"ಕೇಳಲಿ ಬಿಡು. ತಪ್ಪೇನು! ಒಬ್ಬೊಬ್ಬರು ಒಂದೊಂದು ತರಹ ಇರ್ತಾರೆ. ನಮ್ಮದೇ ತಪ್ಪು. ಸಾವಿತ್ರಿಗೆ ಕಣ್ಣಿಲ್ಲ ಅಂತ, ನಾವೂ ಅವಳನ್ನು ಯಾರಿಗೂ ಪರಿಚಯಿಸಿರಲಿಲ್ಲ."

"ನೀನು ಏನೇ ಅನ್ನು, ನಿನ್ನ ಅತ್ತೆ ಮನೆಯವರಷ್ಟು ದೊಡ್ಡ ಹೃದಯದವರಲ್ಲ ಇವರುಗಳು."

"ಛೆ. ಛೆ. ಆ ಮಾತೆಲ್ಲಾ ಈಗೇಕೆ? ಇವರುಗಳೇನು ಕೆಟ್ಟವರಲ್ಲ"

ಒಳಗೆ, ಮುಕುಂದ, ಅವನ ತಾಯಿಯ ಮಾತುಕತೆ ನಡೆದಿತ್ತು. ಆಕೆಯ ಸಂಭ್ರಮ ಮಿತಿ ಮೀರಿತ್ತು. ಮನೆಯ ಮೊದಲ ಮೊಮ್ಮಗ, ಅದ್ಧೂರಿಯಾಗಿ ನಾಮಕರಣ ಮಾಡಬೇಕೆಂದು ಎಲ್ಲಾ ತಯಾರಿ ನಡೆದಿದೆ. ಆದರೆ ಮನೆಯ ಹಿರಿಮಗ ಆನಂದನೂ ಇದ್ದಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತೆನಿಸಿತ್ತು.

"ಯಾರ್‍ಯಾರೋ ಬರ್ತಾರೆ, ಹೋಗ್ತಾರೆ. ನಮ್ಮ ಮನೆಯವನು, ಆನಂದ ಮಾತ್ರ ನಮ್ಮನ್ನೆಲ್ಲ ತೊರೆದೇ ಬಿಟ್ಟ. ಬೀಗರುಗಳಿಗೆ ತಿಳಿದರೆ ಏನಂತಾರೆ? ಈಗಲಾದರೂ ಬರುವ ಮನಸ್ಸು ಮಾಡ್ತಾನೋ ಏನೋ, ಹೋಗಿ ಕರೆದು ಬಾ. ಹೋಗಿ ಬರ್ತೀಯಾ ತಾನೇ....?"

"ನಾನು ಕರೆದು ಬರುಕ್ಕೆ ಏನು ಕಷ್ಟ? ಅವನು ಬರದಿದ್ದರೆ, ನೀನು ಮುಖ

ಚಿಕ್ಕದು ಮಾಡ್ಕೋಬಾರದು"

ಹನ್ನೆರಡು ವರ್ಷದಿಂದ ಇದೇ ಆಗಿದೆ. ಈಗಲಾದರೂ ಈ ವನವಾಸ ಮುಗಿದರ ಚೆನ್ನ. ನಾವುಗಳೂ ಮುದುಕರಾಗ್ತಾ ಬಂದಿದೀವಿ"

"ತಾತ, ನಿನಗಿಂತ ಮುದುಕರು ಅವರೇ ಕಲ್ಲಾಗಿಲ್ವಾ? ಕರಗೇ ಇಲ್ಲ"

"ಕಲ್ಲೋ, ಮಣ್ಣೋ ನಮ್ಮ ಕಷ್ಟ ಅವರಿಗೇನು ಗೊತ್ತಾಗುತ್ತೆ! ಈಗ ಬರದಿದ್ರೆ....ಅದು...ಇನ್ನು ಅವನು ನನ್ನ ಮುಖ ನೋಡುಕ್ಕೆ ಬರಬಾರದು ನೋಡು ಹಾಗಾಗುತ್ತೆ"

"ಛೆ... ನೋಡೋಣ... ನಾನು ಸುರೇಶನ್ನೂ ಜತೆಗೆ ಕರೆದುಕೊಂಡು ಹೋಗಿ ಮಾತನಾಡಿಸಿ ಒಪ್ಪಿಸ್ತೀನಿ. ಬರುತ್ತಾನೆ ಅಂತ ನಂಬೋಣ"

"ನಿನ್ನ ಮಗ ಹುಟ್ಟಿದ ಹೊತ್ತಿನಿಂದಲಾದರೂ ನಮ್ಮ ಮನೇಲಿ ಒಳ್ಳೆಯ ದಾಗಲಿ ಅಂತ ಕಣೋ"

"ಅಷ್ಟೊಂದು ತುಂಬಾ ಆಸೆಯನ್ನಿಟ್ಟುಕೊಳ್ಳಬೇಡ. ನಿರಾಶೆಯಾದರೆ ತಡೆದು ಕೊಳ್ಳುವುದು ಕಷ್ಟವಾಗುತ್ತೆ ನಾನಂತೂ ಹೋಗಿ, ಹೇಳೂದನ್ನು ಹೇಳ್ತೀನಿ. ಇನ್ನು ಅವನ ಇಷ್ಟ. ಅವನೂ ತಾತನಷ್ಟೇ ಕಠಿಣ"

"ಈ ತೊಯ್ದಾಟದಲ್ಲಿ ನಾವುಗಳು ಎಷ್ಟು ಮೆತ್ತಗಾಗಿದೀವಿ ಗೊತ್ತಾ? ನಿಮ್ಮಪ್ಪ ಬಾಯಲ್ಲಿ ಏನೂ ಹೇಳು... ಒಳಗೇ ಕೊರಗ್ತಾರೆ"

"ಅಪ್ಪಾನೂ ಏನೂ ಚಿಕ್ಕವರಲ್ಲ. ಬಾಯಿಬಿಟ್ಟು ಮಾತನಾಡುವುದಕ್ಕೆ ಏನು ಹೆದರಿಕೆ? ಚಿಕ್ಕಪ್ಪನಾದರೂ ಆಡಬಹುದಾಗಿತ್ತು. ಸರಿ ಅಡಿಗೆ ಆಗಿದ್ದರೆ ಎಲ್ಲರಿಗೂ ಊಟಕ್ಕೆ ಬಡಿಸು"

'ಹುಂ' ಎಂದಳು ಆಕೆ.

"ಊಟ ಮಾಡಿ ನಾನು ಹೋಗಿ ಬರ್ತೀನಿ" ಹೊರಗೆ ಹೊರಟವನಿಗೆ ಹೇಳಿದಳು.

"ವಿಮಲನ್ನ, ಮಧೂನ್ನ, ಒಳಕ್ಕೆ ಕಳಿಸು. ಎಲೆಗಿಲೆ ಹಾಕಲಿ.."

ಮುಕುಂದ, ವಿಮಲಂಗೆ ಹೋಗುವಂತೆ ಹೇಳಿ, ಸುಕನ್ಯಳ ಪಕ್ಕದಲ್ಲಿ ಕುಳಿತ.

"ನೀನೂ ಏನಾದರೂ ಕೆಲಸ ಮಾಡುವುದಾದರೆ ಒಳಗೆ ಹೋಗಿ ಕೇಳು."

"ನಾನಾ?" ಕತ್ತು ಕೊಂಕಿಸಿ ಅವಳು ಕೇಳಿದಾಗ

"ಏನೂ ಬೇಡ ನಾವೆಲ್ಲಾ ಇದೀವಲ್ಲ" ವಿಮಲ ನುಡಿದಳು. ಸುಕನ್ಯ

ಸಮಾಧಾನದ ನಿಟ್ಟುಸಿರನ್ನ ಬಿಟ್ಟಳು.

ಊಟದ ಸಮಯದಲ್ಲಿ ಮುಕುಂದ ಸುರೇಶನಿಗೆ ವಿಷಯವನ್ನು ತಿಳಿಸಿ 'ಬರ್ತೀಯಾ' ಅಂತ ಕೇಳಿದ.

'ಹೂಂ'' ಅಂತ ಸುರೇಶ ಒಪ್ಪಿದ. ಊಟವಾದ ನಂತರ ಇಬ್ಬರೂ ಬೈಕ್ ಹತ್ತಿದರು.

ಬಾಗಿಲು ತೆಗೆದ ಅತ್ತಿಗೆ ಮುಕುಂದನನ್ನು ನೋಡಿ 'ಬನ್ನಿ' ಎಂದು ಒಳಕ್ಕೆ ಕರೆದಳು. ಮನೆಯಲ್ಲಿ ಮಕ್ಕಳಾಗಲೀ, ಆನಂದನಾಗಲೀ ಕಾಣಲಿಲ್ಲ. ಅವರ ಮನೆ ತುಂಬಾ ದೊಡ್ಡದೇನಲ್ಲ.

"ಅತ್ತಿಗೆ, ಆನಂದ ಎಲ್ಲಿ?" ಕೇಳಿದ ಲಕ್ಷ್ಮಿ ಸಪ್ಪಗೆ ನುಡಿದಳು.

"ತಿಂಗಳಾಯಿತು ಮಲಗಿ. ಹುಷಾರಿಲ್ಲ"

"ಏನಾಗಿದೆ? ತಿಂಗಳಿಂದ ನರಳಿದ್ದರೂ ಯಾರಿಗೂ ತಿಳಿಸಿಲ್ವಲ್ಲ ನೀವು. ಡಾಕ್ಟರಿಗಾದರೂ ತೋರಿಸಿದೀರೋ ಇಲ್ಲವೋ" ಬೇಸರದಿಂದ ಕೇಳಿದ.

"ಯಾರಿಗೂ ತಿಳಿಸುವುದು ಬೇಡ ಅಂತ ಅವರದೇ ಹಠ. ನಮ್ಮೂರಿನ ಡಾಕ್ಟರು ಔಷಧಿ ಕೊಡ್ತಾನೇ ಇದಾರೆ...."

"ಆದರೂ ವಾಸೀನೇ ಆಗಿಲ್ಲ. ಅಲ್ಲವೆ? ಈ ಕೊಂಪೆಯ ಔಷಧಿಯಲ್ಲಿ ಏನು ವಾಸಿಯಾಗುತ್ತೆ?.... ಎಲ್ಲಿ ಅವನು?"

"ಮಲಗಿದಾರೆ..." ಮುಕುಂದ ಅವನು ಮಲಗಿದ್ದಲ್ಲಿಗೇ ಹೋದ. ಹಾಸಿಗೆ ಹಿಡಿದು ಮಲಗಿದ್ದ ಅವನನ್ನು ಕಂಡು ಬೇಸರವೆನಿಸಿತು.

"ಈಗಲೂ ನಿನಗೆ ಹಠಾನ? ಮನೆಯವರಿಗೆ ಒಂದ್ಮಾತು ತಿಳಿಸಬಾರದಾಗಿತ್ತಾ? ಶಿವಮೊಗ್ಗಾಕ್ಕೆ ಕರೆದುಕೊಂಡು ಹೋಗಿ, ಸರಿಯಾದ ಡಾಕ್ಟರಿಗೆ ತೋರಿಸೋಣ... ನಡೀ ಹೊರಡು... ಏನಾಗಿದೆ ಅಂತಲಾದ್ರೂ ತಿಳಿಯುತ್ತೆ"

"ಏನೂ ಇಲ್ಲ. ಹುಶಾರಾಗಿದೀನಿ. ಅವಳಿಗೆ ಗಾಭರಿ ಅಷ್ಟೇ. ಶಾಂತಿಯ ಗಂಡ ಆಗಾಗ ಬಂದು ನೋಡಿಕೊಂಡು ಹೋಗ್ತಾರೆ."

"ಶಾಂತಿಯ ಗಂಡ ಮಾತ್ರ ನಿಮ್ಮವರು, ನಾವ್ಯಾರೂ ಅಲ್ಲಾ ಅಲ್ವಾ? ಸುಮ್ಮನೆ, ಈಗೇನೂ ಚರ್ಚೆ ಬೇಡ. ಎಲ್ಲಾ ಹೊರಡಿ ಆ ಮನೆಗೆ..."

ಆನಂದ ಉತ್ತರಿಸದೇ ಇದ್ದಾಗ ಸುರೇಶನಿಗೂ ಬೇಜಾರಾಯಿತು.

"ಹೌದು....ಮುಕುಂದ ಹೇಳಿದಂತೆ ಆ ಮನೆಗೇ ಎಲ್ಲರೂ ಬಂದು ಬಿಡಿ.

ಮನೆ ತುಂಬಾ ಜನ ಇರ್ತಾರೆ. ಇಲ್ಲಿ ಇವರೊಬ್ಬರೇ ಹೇಗೆ ನೋಡಿಕೊಳ್ತಾರೆ?"

"ಅಯ್ಯೋ.... ನಿಮಗೆ ಗೊತ್ತಿಲ್ಲ ಬಿಡಿ. ನಾನು ಈಗ ಬಂದು ಏನಾಬೇಕಾಗಿದೆ? ನಾನು ಇಲ್ಲದೇ ಹನ್ನೆರಡು ವರ್ಷ ಕಳೆದಿದ್ದಾರೆ."

"ಆ ಮಾತೆಲ್ಲ ಯಾಕೆ ಈಗ? ಟ್ಯಾಕ್ಸಿ ತರಿಸ್ತೀನಿ. ಹೊರಟು ಬಿಡಿ. ಮಕ್ಕಳು ಎಲ್ಲಿ?" ಅತ್ತಿಗೆಯನ್ನು ಕೇಳಿದ.

"ಶಾಂತಿ ಕರೆದುಕೊಂಡು ಹೋಗಿದಾಳೆ"

"ಶಾಂತಿಗೆ ಮಕ್ಕಳನ್ನು ಅಲ್ಲಿಗೇ ಕರೆದುಕೊಂಡು ಬರುಕ್ಕೆ ತಿಳಿಸಿದರಾಯ್ತು. ಸಿದ್ಧತೆ ಮಾಡ್ಕೊಳ್ಳಿ"

"ಇಲ್ಲ. ಮುಕುಂದ ನಿನ್ನ ಮಾತಿಗೆ ಒಪ್ಪಿ ನಾನು ಬರುವುದಿಲ್ಲ. ಇಷ್ಟು ವರ್ಷಗಳಲ್ಲಿ ನನ್ನನ್ನು ಯಾರೂ ಬಂದು ಹೇಗಿದೀಯಾ ಅಂತ ವಿಚಾರಿಸಿಲ್ಲ. ಈಗ ಹೇಗೆ ಬರಲಿ?"

"ಅಮ್ಮಂಗೆ ನಿನ್ನದೇ ಧ್ಯಾನ. ಅವಳೇ ಹೇಳಿ ಕಳಿಸಿದಾಳೆ"

"ಅವಳು ಹೇಳಿ ಕಳಿಸಿದಾಗ ಮಾತ್ರ ನೀನು ಬರ್ತೀಯ. ಈ ಸಲವೂ ಏನೋ ಸಮಾರಂಭವಿರಬೇಕು. ಅದಕ್ಕೇ ಕರೆಯುಕ್ಕೆ ಬಂದಿದೀಯಾ..."

"ನನ್ನ ಮಗುವಿನ ನಾಮಕರಣ. ಕರೆದು ಹೋಗೋಣ ಅಂತ ಬಂದೆ. ಆದರೆ ಈಗ ನಿನ್ನ ಸ್ಥಿತಿ ನೋಡಿದರೆ, ನೀನು ಮನೆಗೆ ಬರುವುದೇ ಸರಿ ಅಂತ ಅನ್ನಿಸ್ತಿದೆ."

"ನೋಡಿದ್ಯಾ? ಏನೂ ಕಾರಣವಿಲ್ಲದೇ ನೀವುಗಳು ಬರುವುದಿಲ್ಲ. ಈಗ ಈ ನೆಪದಲ್ಲಿ ಬಂದಿದೀಯ.. ಇಲ್ಲದಿದ್ದರೆ, ನಾನು ಆಸ್ಪತ್ರೇಲಿದ್ದರೂ, ನಿಮಗ್ಯಾರಿಗೂ ತಿಳಿಯುತ್ತಿರಲಿಲ್ಲ"

"ಆ ಮಾತೆಲ್ಲ ಯಾಕೆ? ನೀನೀಗ ಹೊರಡು"

"ಇಲ್ಲ. ಆ ಮನೆಗೆ ನಾನು ಬರಲ್ಲ. ತಾತ ಬದುಕಿರುವವರೆಗೂ ಖಂಡಿತಾ ಬರಲ್ಲ. ತಾತನ್ನ ಎದುರಿಸಿ ನನ್ನ ಬಗ್ಗೆ ಒಂದು ಮಾತನಾಡುವ ಧೈರ್ಯವಿಲ್ಲ ಯಾರಿಗೂ, ನನ್ನನ್ನು ಬಂದು ನೋಡುವ ಇಷ್ಟವಿಲ್ಲ ಯಾರಿಗೂ... ಅಂತಹ ಮನೆಗೆ ನಾನು ಬರಲ್ಲ."

"ನಾನು.... ಬಂದಿಲ್ವೆ ಈಗ?"

"ನೀನೂ ಅಲ್ಲಿಲ್ಲ. ಬಂದ ಕೆಲಸ ಮುಗಿದ ಮೇಲೆ ಹೊರಟು ಹೋಗ್ತೀಯಾ.... ಹೌದು ತಾನೇ....?"

"ಹೋಗಲಿ ನಮ್ಮ ವಿಚಾರ ಬಿಡು. ನನ್ನ ಮಗು ಏನೂ ಅರಿಯದ ಕೂಸು. ಅದಕ್ಕೆ ಆಶೀರ್ವಾದ ಮಾಡುಕ್ಕಾದರೂ ಬಾ."

"ಇಲ್ಲಿಗೇ ಕರೆದುಕೊಂಡು ಬಾ.. ಬಾಯ್ತುಂಬಾ ಹರಸ್ತೀನಿ."

"ನೀನು ಶುದ್ಧ ಮೊಂಡ. ತಾತನೇ ಬಂದು ಕರೆದರೂ ಬರುಲ್ಲವೇನೋ...."

"ನನ್ನ ಬಂದು ಬಾ ಅಂತ ಕರೀತೀಯಲ್ಲ. ಧೈರ್ಯವಿದ್ದರೆ, ತಾತನ್ನ ಹೋಗಿ ಅವನನ್ನು ಕರೆದುಕೊಂಡು ಬನ್ನಿ ಅಂತ ಹೇಳು ನೋಡೋಣ."

ಮುಕುಂದನಿಗೆ ಈ ಮಾತು ಸವಾಲಿನಂತೆ ತೋರಿತು.

"ತಾತನ್ನ ಒಪ್ಪಿಸ್ತೀನಿ. ಆಗಲಾದ್ರೂ ಬರ್ತೀಯಾ?"

"ಹೂಂ ನೋಡೋಣ. ಮೊದಲು ಅದಾಗುತ್ತಾ ನೋಡು" ತಮಾಷೆಯೆಂಬಂತೆ ನುಡಿದ.

ಹೂಂ. ಪ್ರಯತ್ನ ಮಾಡೇ ಬಿಡ್ತೀನಿ. ಈ ಸಲಕ್ಕಾದರೂ ಈ ಹಠ ಮೊಂಡುತನ, ಕಷ್ಟ ನೀಗಲೇಬೇಕು" ಮುಕುಂದ ಎದ್ದು ನಿಂತ. ಸುರೇಶನೂ ಎದ್ದು ನಿಂತ.

ಲಕ್ಷ್ಮಿ "ಏನಾದರೂ ಕುಡಿಯುಕ್ಕೆ ಕೊಡ್ತೀನಿ" ಎಂದಳು.

"ಏನೂ ಬೇಡಿ ಅತ್ತಿಗೆ, ಈ ಕಲಹ ಒಂದು ಮುಗಿಯಲಿ. ನಿಮ್ಮ ಕೈಲಿ ಪಾಯಸ ಮಾಡಿಸ್ಕೊಂಡು ಕುಡೀತೀನಿ"

"ಸುಮ್ಮನೇ ಇಲ್ಲದ ಹಗರಣ ಬೇಡ ಮುಕುಂದ. ನಿಮ್ಮ ಪಾಡಿಗೆ ನೀವು ಸಮಾರಂಭ ಮುಗಿಸಿಕೊಂಡು ಹೊರಡಿ. ಇದು ಈ ಜನ್ಮದಲ್ಲಿ ಮುಗಿಯುವುದಿಲ್ಲ... ಬಗೆಯರಿಯುವುದಲ್ಲ. ಇಬ್ಬರೂ ತಮ್ಮ ತಮ್ಮ ಹಠ ಬಿಡುವುದಿಲ್ಲ. ನೀವು ನಗು ನಗುತ್ತಾ ಊರಿಗೆ ವಾಪಸ್ಸು ಹೊರಡಿ..." ಲಕ್ಷ್ಮಿ ನುಡಿದಳು.

"ಅತ್ತಿಗೇ, ನೀವಾದರೂ ಅವನಿಗೆ ಬುದ್ಧಿ ಹೇಳಬಾರದಾ? ಹನ್ನೆರಡು ವರ್ಷದಿಂದ ಅವನ ಹಠಕ್ಕೆ ನೀವೂ ಬೆಂಬಲ ಕೊಡ್ತಿದೀರಿ. ಇದು ಸರಿಯಲ್ಲ."

"ಖಾಯಿಲೆ ಮಲಗಿದ ಮೇಲೆ ನಾನೆದಷ್ಟೋ ಹೇಳಿದೆ, ಜಗ್ಗಲಿಲ್ಲ."

"ಅವನಿಗೆ ತಿಳಿಯದಂತೆ ಯಾರ ಕೈಲಾದರೂ ಹೇಳಿ ಕಳುಹಿಸಬೇಕಾಗಿತ್ತು." ಅವಳು ಏನೂ ಉತ್ತರಿಸಲಿಲ್ಲ.

"ಸರಿ.. ಅವನಿಗೆ ಹೆದರಿದೀರಿ ನೀವು... ಇರಲಿ. ನಾನು ಈಗಲೇ ತಾತನಿಗೆ ಎಲ್ಲಾ ತಿಳಿಸ್ತೀನಿ. ಏನಾದರೂ ಸರಿ. ನೀವುಗಳು ಹೊರಟರೆ ಸರಿ"

"ಲಕ್ಷ್ಮಿ.. ಅವನಿಗೆ ಹೇಳು, ತಾತ ಒಪ್ಪುಲ್ಲ.. ಈ ಜನ್ಮದಲ್ಲಿ ನನಗೆ ಮತ್ತೆ

ಆ ಮನೆಯ ದರ್ಶನವಿಲ್ಲ ಅಂತ. ಅಮ್ಮನೇ ಬಂದರೆ ನಾನು ಅವಳನ್ನು ನೋಡ್ತೀನಿ. ನನಗೂ ಅವಳನ್ನು ನೋಡಬೇಕೆನಿಸಿದೆ."

ಮುಕುಂದ ಸುರೇಶನೊಡನೆ ವಾಪಸ್ಸು ತೀರ್ಥಹಳ್ಳಿಗೆ ಬಂದ. ಮನೆ ತಲುಪಿದಾಗ ಸಾಯಂಕಾಲವಾಗುವುದರಲ್ಲಿತ್ತು. ಎಲ್ಲರೂ ಆಯಾಸ ಪರಿಹಾರ ಮಾಡಿಕೊಳ್ಳುತ್ತಿದ್ದರು. ಮುಕುಂದ ಸೀದಾ ತಾತ ಮಲಗಿದ್ದೆಡೆಗೆ ಬಂದ. ಸುರೇಶನೂ ಜತೆಯಲ್ಲಿದ್ದ.

"ತಾತಾ, ನಿಮಗೆ ನಾನು ಹೆಚ್ಚೋ.. ನಿಮ್ಮ ಮಗ ಹೆಚ್ಚೋ.."

"ಏನೋ ಇದು ಹುಚ್ಚು ಪ್ರಶ್ನೆ? ಎಲ್ಲಿಗೆ ಹೋಗಿದ್ದೆ?"

"ನನ್ನ ಪ್ರಶ್ನೆಗೆ ಉತ್ತರ ಹೇಳಿ... ಆಮೇಲೆ ನಾನು ಹೇಳ್ತೀನಿ"

"ಮೊದಲು ನನಗೆ ನನ್ನ ಮಗ... ಆಮೇಲೆ ನೀನು..."

"ಆಮೇಲೆ ನಾನಾ?... ಆನಂದ ಯಾಕಲ್ಲ?"

"ಅವನು ತಲೆ ತಿರುಕ... ಅವನ ಹೆಸರನ್ನು ಎತ್ತಬೇಡ"

"ಅವನು ತಲೆ ತಿರುಕ ಆದದ್ದು ನಿಮ್ಮಿಂದಲೇ.. ಒಂದು ಕಾಲದಲ್ಲಿ ಅವನನ್ನು ತಲೆಯ ಮೇಲೆ ಕೂರಿಸಿಕೊಂಡು, ಆಮೇಲೆ ಕೆಳಗೆ ಬಿಸ್ಹಾಕಿದೀರಿ."

"ಏನಾಗಿದೆ ನಿನಗೆ! ನಿನಗೂ ಏನಾದರೂ ತಲೆ ತಿರುಗುತ್ತಿದ್ದೆಯೇನು?"

"ಇಲ್ಲ. ನಾನು ಸರಿಯಾಗಿಯೇ ಇದೀನಿ. ನಿಮ್ಮ ಮಾತಿನಿಂದ ತಮ್ಮ ಮಗನನ್ನು ದೂರ ಮಾಡಿದಾರಲ್ಲ ನಮ್ಮಪ್ಪ. ಅವರ ತಲೆ ಸರಿಯಿಲ್ಲ."

"ಚೆನ್ನಾಗಿದೆ... ಚೆನ್ನಾಗಿದೆ. ದೊಡ್ಡೋರನ್ನು ಅನ್ನುವಷ್ಟು ಧೈರ್ಯ ಬಂತಾ ನಿನಗೆ?" ಅಬ್ಬರಿಸಿ ಕೇಳಿದರು.

"ಆಗಲೇ ನನಗೆ ಇಷ್ಟು ಧೈರ್ಯವಿದ್ದಿದ್ದರೆ, ಆನಂದ ಈ ಮನೆಯಿಂದ ಹೊರಗೆ ಹೋಗುವುದನ್ನು ತಡೆಯುತ್ತಿದ್ದೆ. ಈ ಮನೆಯಲ್ಲಿ ನಮಗೆಲ್ಲರಿಗೂ ಎಷ್ಟು ಹಕ್ಕು ಇದೆಯೋ, ಅಷ್ಟು ಹಕ್ಕು ಅವನಿಗೂ ಇದೆ."

"ಅಷ್ಟು ಹಕ್ಕು ಇದ್ದವನು ಹೇಡಿಯಂತೆ, ಹೆಂಡತಿ ಹಿಂದೆ ಏಕೆ ಓಡಿ ಹೋದ? ಮನೆ ಮಠ ಅಪ್ಪ, ಅಮ್ಮನ ಜ್ಞಾನವಿರಬೇಡವೆ ಅವನಿಗೆ?"

"ಅದಕ್ಕೂ ನೀವೇ ಕಾರಣ. ಅವನಿಗೆ ಸಮನಲ್ಲದ ಹುಡುಗಿಯನ್ನು ಏನೋ ಆಸೆಯಿಂದ ಮದುವೆ ಮಾಡಿಸಿದವರು ನೀವು. ಮೊದಲು ನಿಮ್ಮ ಮಾತನ್ನು ಕೇಳಿದ. ಆಮೇಲೆ ಹೆಂಡತಿಯ ಮಾತನ್ನು ಕೇಳಿದ ಅಷ್ಟೇ...."

"ಅವನು ಹೆಣ್ಣಿಗ. ಹೆಂಡತಿ ಮಾತಿಗೆ ಮಣಿದು ಹೋಗ್ತೀನಿ ಅಂತ ಹೊರಟ ವನ ಕಾಲು ಹಿಡಿದು ತಡೀ ಬೇಕಿತ್ತಾ? ಮನೆಯವರು ನಾವು ಅನ್ನುವ ಪರಿಜ್ಞಾನ ಬೇಡವೇ ಅವನಿಗೆ?"

"ಅವನಿಗೂ ನಿಮ್ಮಷ್ಟೇ ಜಬರ್ದಸ್ತು, ನಿಮ್ಮಷ್ಟೇ ಪೊಗರು ಜಂಭ."

ಅವನ ನುಡಿಗೆ ತಾತ ಪೆಚ್ಚಾದರು. ಆದರೂ ನುಡಿದರು.

"ನಾನು ಹೋಗು ಅಂದ್ರೆ ಹೊರಟೇ ಹೋದ. ಅವನಿಗೆ ಇರಬೇಡವೆ ಅಪ್ಪ ಅಮ್ಮನ ಮೇಲೆ ಮೋಹ? ಅವನಿಗೆ ಜಂಭ. ಅಹಂಕಾರ!"

"ಅವನಿಗೂ ನಿಮ್ಮಷ್ಟೇ ದರ್ಪ ಜೋರು,.. ಹೊರಟು ಹೋದ. ಆದರೆ ಇವತ್ತು ಏನಾಗಿದಾನೆ ಗೊತ್ತೆ? ಖಾಯಿಲೆಯಿಂದ ನರಳ್ತಾ ಮಲಗಿದಾನೆ. ನೋಡು ವವರ್‍ಯಾರಿಲ್ಲ. ಅತ್ತಿಗೆ ಒಬ್ಬಳೇ ಏನು ಮಾಡಬಲ್ಲಳು? ಇಲ್ಲೇ ಮನೆಯಲ್ಲಿದ್ದರೆ ಯಾರಾದರೂ ನೋಡಿಕೊಳ್ಳುತ್ತಿದ್ದರು. ಈಗ ಅವನಿಗೆ ಏನಾದರೂ ಹೆಚ್ಚು ಕಡಿಮೆ ಆದರೆ, ಅಮ್ಮ ನಿಮ್ಮನ್ನು ಖಂಡಿತಾ ಕ್ಷಮಿಸೋಲ್ಲ. ಅವಳ ಕಣ್ಣೀರು ನಿಮಗೆ ಶಾಪವಾಗಿ ಪರಿಣಮಿಸುತ್ತೆ"

"ದೊಡ್ಡದಾಗಿ ಬಂದ ಬುದ್ಧಿ ಹೇಳೋಕ್ಕೆ, ಸುಮ್ಮನೇ ಕೆಲಸ ನೋಡು ಹೋಗು" ತಾತ ತಿರಸ್ಕಾರವಾಗಿ ನುಡಿದರು.

"ಒಂದು ಇತ್ಯರ್ಥವಾದ ಮೇಲೇ ನಾನು ಹೋಗೂದು. ಆನಂದ ಬಂದರೆ, ಈ ಸಮಾರಂಭ, ಇಲ್ಲದಿದ್ದರೆ ನಾನು ಬೆಂಗಳೂರಿಗೆ ವಾಪಸ್ಸು ಹೊರಟು ಹೋಗ್ತೀನಿ. ಮತ್ತೆಂದೂ ಈ ಮನೆಗೆ ಬರುಲ್ಲ. ಹೀಗೇ ಒಬ್ಬೊಬ್ಬರಾಗಿ ಹೊರಟು ಹೋಗ್ತಾರೆ. ಒಂಟಿಯಾಗಿ ಬಿಡ್ತೀರಾ.... ನೀನೇ ಅಂತ ಕೇಳೋರು ಯಾರಿಲ್ಲ ಕಡೆಗೆ...."

ಮಧ್ಯೆ ಅವನ ಅಪ್ಪ ಬಂದು ಬಾಯಿ ಹಾಕಿದರು.

"ಸಾಕು ಸುಮ್ಮನಿರೋ... ಹಿರಿಯವರು ಅನ್ನುವ ಮರ್ಯಾದೆ ಇಲ್ಲದೇ ಎಷ್ಟು ಮಾತನಾಡ್ತೀಯಾ?"

"ನೋಡಿದ್ರಾ ತಾತಾ? ನಿಮ್ಮ ಪರವಹಿಸಿಕೊಂಡು ಮಾತನಾಡ್ತಿದಾರೆ.. ನೀವು, ಅವರ ಮನಸ್ಸಲ್ಲಿ ಏನಿದೆ ಅಂತ ಎಂದಾದರೂ ಯೋಚಿಸಿದೀರಾ?.. ನೀವು ಹೇಗೆ ಅಪ್ಪ ಮಗ ಜತೆಯಾಗಿದೀರ, ಹಾಗೇ ಅವರಿಗೂ ತಮ್ಮ ಮಕ್ಕಳು ತಮ್ಮ ಜತೆ ಯಲ್ಲಿರಲಿ ಅಂತ ಆಸೆಯಾಗುಲ್ವೆ?"

"ಹೋಗಲಿ ಬಿಡೋ ತಾತನ ಹಠ ಇಷ್ಟು ವರ್ಷ ಕಳೆದರೂ ಕಮ್ಮಿ ಆಗಿಲ್ಲ.

ಆನಂದನಿಗೆ ಹುಶಾರಿಲ್ಲವೆಂದ ಮೇಲೆಯೂ, ಅವರ ಮನಸ್ಸು ಕರಗದಿದ್ದ ಮೇಲೆ, ಅವರು ಮನುಷ್ಯರೇ ಅಲ್ಲ. ಕಲ್ಲು ಬಂಡೆ."

"ಹೌದ್ಹೌದು... ನಾನು ಮನುಷ್ಯ ಅಲ್ಲ. ಕಲ್ಲು ಬಂಡೆ. ನನಗೆ ಹೃದಯವಿಲ್ಲ, ಮಮತೆ ವಾತ್ಸಲ್ಯವಿಲ್ಲ. ನಾನು ಎತ್ತಿ ಆಡಿಸಿದ ಮಗು ಕಣೋ ಅವನು... ಈ ಮನೆಯ ಮೊದಲ ಮೊಮ್ಮಗ ಅವನು... ಅವನ ಮೇಲೆ ನನಗೆಷ್ಟು ಪ್ರೀತಿ ಇರಲಿಲ್ಲ? ನನ್ನ ಮಾತಿಗೆ ಅವನು ಕೋಪಿಸ್ಕೊಂಡು ಹೋದರೆ ನಾನು ಏನು ಮಾಡಲಿ? ನಾನು ಅವನ ತಾತ....! ನನಗೆಷ್ಟು ಕೋಪವಿರಬೇಡ? ಆದರೂ, ಇಷ್ಟು ವರ್ಷಗಳಲ್ಲಿ ನಾನೆಷ್ಟು ನೊಂದಿದೀನಿ ಅಂತ ಅವನಿಗ್ಹೇಗೆ ತಿಳಿಯಬೇಕು? ಒಂದು ಸಲ, ಒಂದೇ ಒಂದು ಸಲ ಬಂದು ತಾತಾ...... ಅಂತ ಕರೆದಿದ್ರೆ, ನಾನು ಅವನ ತಪ್ಪುಗಳನ್ನೆಲ್ಲ ಕ್ಷಮಿಸಿ ಬಿಡ್ತಿದ್ದೆ. ಅವನೆಲ್ಲಿ ಬಂದ?"

ತಾತಾ ಒಂದೇ ಸಮನೆ ಮಾತನಾಡಿ ಏದುಸಿರು ಬಿಡಲು ತೊಡಗಿದಾಗ ಎಲ್ಲರಿಗೂ ಗಾಭರಿಯಾಗಿತ್ತು. ಎಲ್ಲರೂ ಮುಕುಂದನನ್ನು ದೂಷಿಸುವವರೇ... ಸುರೇಶನಿಗೂ ಗಾಭರಿಯಾಗಿತ್ತು. ಬೆಂಗಳೂರಿನಿಂದ ಖುಷಿಯಾಗಿ ಇಲ್ಲಿಗೆ ಬಂದು ಇಲ್ಲಿ ಇನ್ನು ಏನೇನು ಕಾಣಬೇಕೋ ಎಂದುಕೊಂಡ. ಮುಕುಂದನೇ ಕೂಡಲೇ ಸಮೀಪದ ಹಳ್ಳಿಯಲ್ಲಿದ್ದ ಡಾಕ್ಟರನ್ನು ಕರೆದುಕೊಂಡು ಬಂದ.

ಡಾಕ್ಟರು ತಾತನನ್ನು ಪರೀಕ್ಷಿಸಿ, "ಏನಿಲ್ಲ, ಚೆನ್ನಾಗಿಯೇ ಇದಾರೆ... ಉದ್ವೇಗ ದಿಂದ ಸ್ವಲ್ಪ ಸುಸ್ತಾಗಿದಾರೆ ಅಷ್ಟೇ.. ಈ ವಯಸ್ನಲ್ಲಿ ಅವರಷ್ಟು ಬಲವಾಗಿರುವವರು ಅಪರೂಪವೇ..." ಅಂದರು. ತಾತ ಮೀಸೆಯಡಿಯಲ್ಲಿಯೇ ನಕ್ಕರು. ಡಾಕ್ಟರು ಹೊರಡುತ್ತೇನೆಂದಾಗ ತಾತ ಹೇಳಿದರು...

"ಡಾಕ್ಟರ್... ನನ್ನ ಮೊಮ್ಮಗನಿಗೆ ಹುಶಾರಿಲ್ಲವಂತೆ... ಅವನನ್ನು ಸ್ವಲ್ಪ ನೋಡಬೇಕಲ್ಲ"

"ಹೌದಾ? ಎಲ್ಲಿ ಅವರು..?"

"ಹೋಗೋ ಮುಕುಂದ, ಆನಂದನ ಮನೆಗೆ ಇವರನ್ನು ಬೈಕ್‌ನಲ್ಲಿ ಕರೆದು ಕೊಂಡು ಹೋಗೋ... ನಾನು ಗಾಡಿ ಕಟ್ಟಿಸಿಕೊಂಡು ಬರ್ತೀನಿ. ಅದೇನು ಬದುಕಿ ದಾನೋ ಇಲ್ಲವೋ ನೋಡೇ ಬಿಡ್ತೀನಿ"

ತಾತನ ಮಾತಿನ ವೈಖರಿ ಇದು. ಮುಕುಂದ ಡಾಕ್ಟರನ್ನ ಕರೆದುಕೊಂಡು ಹೊರಟ. ಸುರೇಶ ರಾಜೇಂದ್ರನ ಹಳೆಯ ಸ್ಕೂಟರನ್ನು ತೆಗೆದುಕೊಂಡು ಅವನನ್ನು

ಹಿಂಬಾಲಿಸಿದ. ಅಳುತ್ತಿದ್ದ ತಾಯಿಯನ್ನು ಎಲ್ಲರೂ ಸಮಾಧಾನಗೊಳಿಸುತ್ತಿದ್ದರು.

"ನೀನು ಅಳಬೇಡ ಜಾನಕಿ, ನಾನು ಹೀಗೆ ಹೋಗಿ ಹಾಗೆ ಕರೆದುಕೊಂಡು ಬಂದು ಬಿಡ್ತೀನಿ ಆ ಅಯೋಗ್ಯನ್ನ... ಏನೂಂತ ತಿಳಿದುಕೊಂಡಿದಾನೆ ಅವನು ನನ್ನನ್ನ?" ತಾತ ಸ್ವಾಭಿಮಾನವನ್ನು ಬದಿಗಿಟ್ಟು ಹೊರಟಿದ್ದು ಎಲ್ಲರಿಗೂ ಮುಜುಗರವಾಗಿತ್ತು.

ಗಾಡಿಯನ್ನು ಕಟ್ಟಿಸಿದರು. "ಯಾರ್‍ಯಾರಿಗೆ ಎತ್ತಿನ ಗಾಡಿ ಸವಾರಿ ಇಷ್ಟವೋ, ಎಲ್ಲಾ ಬನ್ನಿ" ತಾತ ಕರೆದ ಕೂಡಲೇ ವಿಮಲ,ಮಧು ಹೊರಟರು. ಸಾವಿತ್ರಿಯನ್ನೂ ಹೊರಡಿಸಿದರು. ಸಾವಿತ್ರಿ ಹೊರಟಿದ್ದನ್ನು ಕಂಡು ರಾಜೇಂದ್ರನೂ ಹೊರಟ. ಅವನು ಜತೆಗಿದ್ದುದರಿಂದ ಅಪ್ಪ, ಚಿಕ್ಕಪ್ಪ ಹಿಂದೆ ಉಳಿದರು.

ಆನಂದನ ಮನೆ ತಲುಪಿದಾಗ ಕತ್ತಲಾಗುತ್ತಾ ಬಂದಿತ್ತು. ಈ ಮುಂಚೆಯೇ ತಿಳಿಸಿದ್ದರಿಂದ ಆನಂದ ತಾತನಿಗಾಗಿ ಕಾಯುತ್ತಿದ್ದ. ಖಾಯಿಲೆಯಿಂದ ಕಂಗೆಟ್ಟಿದ್ದ ಅವನ ಮುಖ ಕಂಡು ತಾತ ತತ್ತರಿಸಿ ಹೋದರು. ಆನಂದನಿಗೂ ಅಚ್ಚರಿ!!

"ಏನೋ ಬಡ್ಡೀ ಮಗನೇ ನನ್ನ ಮೇಲೇ ಪೈಪೋಟಿ ನಡೆಸ್ತೀಯಾ? ನಾನು ಮುದುಕ... ಇನ್ನೆಷ್ಟು ದಿನ ಬದುಕೇನು? ಮರಿಮಗನ ಮುಖ ನೋಡಿಯಾಯ್ತು, ಇನ್ನು ನನಗೀ ಭೂಮಿ ಮೇಲೇನು ಕೆಲಸ? ನೀನು...? ನೀನ್ಯಾಕೋ ಹೀಗಾಗಿದೀಯ? ಹೀಗೆ ಮಲಗಿದರೆ ನಿನ್ನ ಹೆಂಡತಿ ಮಕ್ಕಳ ಗತಿಯೇನು? ಅವಳಿಗೆ ತಿಳುವಳಿಕೆ ಹೇಳಬೇಕಾದವನು ನೀನು... ನಡೀ ಮನೆಗೆ ಹೋಗೋಣ. ಏಳು... ಅಷ್ಟಾದರೂ ಆನಂದನಿಗೆ ಹಠ.

"ತಾತ, ನನ್ನನ್ನು ಕ್ಷಮಿಸಿಬಿಡು. ನಾನು ಅಲ್ಲಿಗೆ ಬರುಲ್ಲ"

"ಯಾಕೋ ಬರುಲ್ಲ? ಯಾಕೆ ಬರುಲ್ಲ ಅಂತೀನಿ? ನೀನು ಬರದಿದ್ದರೆ ಗಾಡಿಗೆ ಕಟ್ಟಿ ಎಳೆದೊಯ್ಯುವ ಶಕ್ತಿ ನನಗಿಲ್ಲ... ಅಲ್ಲದೇ ನೀನೂ ಶಕ್ತಿವಂತನಾಗಿಲ್ಲ. ನೀನು ಒಪ್ಪುವವರೆಗೂ ನಾನು ನಿನ್ನ ಮನೆ ಮುಂದೆ ಉಪವಾಸ ಸತ್ಯಾಗ್ರಹ ಮಾಡ್ತೀನಿ. ಅದೇನಾಗುತ್ತೋ ಆಗಿ ಹೋಗಲಿ"

ತಾತ ಆಡಿದಂತೆ ಮಾಡುವವರೇ ಎಂದು ಎಲ್ಲರಿಗೂ ತಿಳಿದಿತ್ತು. ಎಲ್ಲರಿಗೂ ಗಾಭರಿಯಾಯ್ತು. ಎಲ್ಲಿಂದ ಎಲ್ಲಿಗೆ ಹೊರಡತ್ತಪ್ಪಾ ಈ ಮಾತುಗಳು ಎನಿಸಿತ್ತು.

"ನಮ್ಮ ಮನೇಲಿ ಹೀಗೇನೇ.. ಹಗರಣವಿಲ್ಲದೇ ಒಂದು ಕೆಲಸವೂ ಆಗುವಂತಿಲ್ಲ" ರಾಜೇಂದ್ರ ಸುರೇಶನಿಗೆ ಹೇಳಿದ ಸಾವಿತ್ರಿಯ ಮುಖ ನೋಡುತ್ತಾ.

"ಹೋಗಲಿ ಬಿಡಿ ತಾತ. ನೀವು ಈ ವಯಸ್ನಲ್ಲಿ ಉಪವಾಸ ಮಾಡು ಕ್ಕಾಗುತ್ತಾ?" ಸುರೇಶ ಹೇಳಿದ.

"ನೀನು ಸುಮ್ಮನಿರಪ್ಪಾ... ನನಗೆ, ಕಲ್ಲುಬಂಡೆ ಅಂತ ಅನ್ನಿಸಿದನಲ್ಲವೇ ನಿನ್ನ ಸ್ನೇಹಿತ ಕಲ್ಲು ಬಂಡೆ ಈ ಉಪವಾಸದಿಂದ ಕರಗಿ ಹೋಗಲಿ"

ಒಳಗಿದ್ದ ಲಕ್ಷ್ಮಿಗೆ ಒಂದು ತರಹ ನಾಚಿಕೆ ಎನಿಸಿತ್ತು. ಅಕ್ಕಪಕ್ಕದ ಗುಡಿಸಿಲಿನವರು ಬಂದು ನಿಂತಿದ್ದರು. ಡಾಕ್ಟರು ಸಹ ಇವರುಗಳ ಜಗಳದ ಮಾತನ್ನು ಆಲಿಸುತ್ತಾ ನಿಂತಿದ್ದರು. ಆನಂದನಿಗೆ ಮಲೇರಿಯಾ ಆಗಿರಬಹುದೆಂದು ಶಂಕಿಸಿದ್ದರು. ಆದಷ್ಟು ಬೇಗ ಅವನಿಗೆ ಶಿವಮೊಗ್ಗಾದ ಆಸ್ಪತ್ರೆಯಲ್ಲಿ ಶುಶ್ರೂಷೆ ಕೊಡಿಸಬೇಕೆಂದು ಸಲಹೆ ಕೊಟ್ಟರು.

ಗಂಡನನ್ನು ಆಸ್ಪತ್ರೆಗೆ ಸೇರಿಸಬೇಕಾಗುತ್ತೋ ಏನೋ. ಈಗ್ಯಾಕೆ ಶುರುವಾಯಿತೋ ಈ ಹಗರಣ ಎಂದೆನಿಸಿ, ಗಂಡನಿಗೆ ಹೇಳಿದಳು ಲಕ್ಷ್ಮಿ.

"ಮೊದಲೇ ನಮ್ಮ ಗ್ರಹಚಾರ ಚೆನ್ನಾಗಿಲ್ಲ. ನಿಮ್ಮ ತಾತನಿಗೆ ಏನಾದರೂ ಆದರೆ, ಊರವರೆಲ್ಲಾ ನಿಮ್ಮನ್ನೇ ಅನ್ನುತ್ತಾರೆ. ಬಾಳಿ ಬದುಕಿದವರು, ಕಡೆಯಲ್ಲಿ ಮೊಮ್ಮಗನ ಮನೆ ಬಾಗಿಲಿನಲ್ಲಿ ಬಿದ್ದಿದ್ದರು ಅನ್ನುವ ಆರೋಪ ನಮಗೇಕೆ ಒಂದು ಹೊತ್ತಿನ ಮಟ್ಟಿಗೆ ಹೋಗಿ ಸಮಾರಂಭ ಮುಗಿದ ಕೂಡಲೇ, ಶಿವಮೊಗ್ಗಾಕ್ಕೆ ಹೋಗಿ ಬಿಡೋಣ... ಅಲ್ಲಿಯ ಡಾಕ್ಟರಿಗೆ ತೋರಿಸಿ ಅಂತ ಹೇಳಿದಾರೆ"

ಆನಂದ ಹೆಂಡತಿಯ ಮೇಲೆ ಹರಿಹಾಯ್ದ.

"ನಿನ್ನ ಮಾತನ್ನು ಕೇಳಿಕೊಂಡು, ತಾತನ ಹತ್ತಿರ ಮನಸ್ತಾಪ ಮಾಡಿಕೊಂಡಿದ್ದು. ಈಗ ಹೀಗಂತೀಯಲ್ಲ... ನನಗೇನು ನಾಚಿಕೆ ಇಲ್ಲವೆ? ಬೇಕಿದ್ದರೆ ನೀನೇ ಹೇಳು. ನಾನು ಹೇಳುಲ್ಲ."

ಲಕ್ಷ್ಮಿ ಮುಕುಂದನ್ನ ಕರೆಸಿ ಅವನ ಎದುರಿಗೆ ಗಂಡನನ್ನು ಒಪ್ಪಿಸಿದಳು. ತಾತನಿಗೂ ವಿಷಯ ತಿಳಿಯಿತು. ಎದ್ದು ನಿಂತರು.

"ಲಕ್ಷ್ಮಿ ಈಗಲೇ ಹೊರಟು ಬಿಡೋಣ. ನಿಮ್ಮ ಮನೆಯ ಗಾಡಿಯನ್ನು ಕಟ್ಟಿಸು" ಅತಿ ಗಂಭೀರವಾಗಿ ನುಡಿದರು. ಲಕ್ಷ್ಮಿ ತಲೆ ತಗ್ಗಿಸಿದಳು.

"ಆಗಲಿ... ಅಡಿಗೆ ಮಾಡ್ತೀನಿ. ಎಲ್ಲರೂ ಊಟ ಮಾಡೋರಂತೆ"

"ಏನು ಅಡಿಗೆ ಮಾಡ್ತೀಯೋ ಅದನ್ನು ಮಾಡಿ ಬುತ್ತಿಕಟ್ಟು. ಬೆಳದಿಂಗಳು ಚೆನ್ನಾಗಿದೆ. ದಾರಿಯಲ್ಲಿ ಎಲ್ಲಾದರೂ ತಿನ್ನೋಣ. ಆನಂದನಿಗೆ ಒಂದಿಷ್ಟು ಬಿಸಿ

ಗಂಜಿ ಮಾಡಿ ಫ್ಲಾಸ್ಕ್‌ಗೆ ಹಾಕ್ಕೋ...." ತಾತ ಅಪ್ಪಣೆ ಕೊಡಿಸಿದರು.

ಲಕ್ಷ್ಮಿ ಕಣ್ಣನ್ನೊರೆಸಿಕೊಂಡು ಎದ್ದಳು. ಅವಳಿಗೆ ಸಹಾಯ ಮಾಡಲು ವಿಮಲ ಎದ್ದಳು. ಸಾವಿತ್ರಿ ಮಧುರವರ ಮಾತನ್ನಾಲಿಸುತ್ತಾ ರಾಜೇಂದ್ರ ನಿಂತ.

"ಹೋಗು ಗಾಡಿಯಲ್ಲಿ ಮೆತ್ತನೆ ಹಾಸಿಗೆ ಹಾಸಿ, ದಿಂಬುಗಳನ್ನಿಡಿಸು. ಗಾಡಿ ಅಲುಗಾಡಿದಾಗ ಆನಂದನಿಗೆ ಶ್ರಮವಾಗಬಾರದು" ತಾತ ರಾಜೇಂದ್ರನಿಗೆ ಕೆಲಸ ಹೇಳಿ ಹೊರಗೆ ಕಳಿಸಿದರು.

ಮುಂದಿನ ಅರ್ಧ ಮುಕ್ಕಾಲು ಗಂಟೆಯಲ್ಲಿ ಎಲ್ಲರೂ ಗಾಡಿ ಹತ್ತಿದರು. ಆನಂದನನ್ನು, ಮುಕುಂದ ಸುರೇಶ ನಿಧಾನವಾಗಿ ನಡೆಸಿಕೊಂಡು ಬಂದು, ಎತ್ತಿ ಗಾಡಿಯಲ್ಲಿನ ಹಾಸಿಗೆಯ ಮೇಲೆ ಮಲಗಿಸಿದರು. ಅವನ ಜತೆಯಲ್ಲಿ ಲಕ್ಷ್ಮಿ, ಮುಕುಂದ ಕುಳಿತರು.

ರಾಜೇಂದ್ರನ ಸ್ಕೂಟರನ್ನು ಡಾಕ್ಟರು ತೆಗೆದುಕೊಂಡು ಹೋಗಿದ್ದರಿಂದ, ರಾಜೇಂದ್ರ ಬೈಕ್ ಹತ್ತಿದ.

"ಬರ್ತೀರೇನ್ರಿ ಸಾವಿತ್ರಿ? ಬೈಕ್‌ನಲ್ಲಿ ಜಾಗ ಇದೆ" ಅವನು ಸಾವಿತ್ರಿಯನ್ನು ಕರೆದಾಗ, ಅವಳು ಸುರೇಶನ ಮುಖವನ್ನು ನೋಡಿದಳು. ಸುರೇಶ ವಿಮಲಾಗೆ ಹೇಳಿದ.

"ವಿಮಲ ನೀವು ಬೈಕಿನಲ್ಲಿ ಬರ್ತೀರಾ?"

"ಇಲ್ಲಪ್ಪಾ.. ಅವನು ತುಂಬಾ ಜೋರಾಗಿ ಓಡಿಸ್ತಾನೆ. ಭಯವಾಗುತ್ತೆ"

"ನಾನು ಬರಲಾ?" ಮುಕುಂದ ನಗುತ್ತಾ ಕೇಳಿದ.

"ನೀನು ಅತ್ತಿಗೆ ಜೊತೆ ಗಾಡೀಲೇ ಕೂತ್ಕೊಂಡು ಬಾ... ನಾನೂ, ಸುರೇಶ ಬೈಕಿನಲ್ಲಿ ಬರ್ತೀವಿ"

ಖಾಯಿಲೆಯವನ ಜತೆ ಕುಳಿತುಕೊಳ್ಳಲು ರಾಜೇಂದ್ರ ಹೆದರಿದ. ಬೈಕ್ ಸ್ಟಾರ್ಟ್ ಮಾಡಿ, ಸಾವಿತ್ರಿ ಕೂತಿದ್ದ ಗಾಡಿಯ ಹಿಂದೆ ನಿಧಾನವಾಗಿ ಓಡಿಸತೊಡಗಿದ.

ಬೆಳದಿಂಗಳು ಮನೋಹರವಾಗಿತ್ತು. ಹತ್ತಿರದಲ್ಲಿ ಹರಿಯುತ್ತಿದ್ದ ತೊರೆಯ ಹತ್ತಿರ ಗಾಡಿಗಳನ್ನು ನಿಲ್ಲಿಸಿ ಕೈ ಕಾಲು ತೊಳೆದು, ಎಲ್ಲರೂ ದೊನ್ನೆಗಳಲ್ಲಿ ಕಲಸಿದ ಅನ್ನವನ್ನು ಉಂಡರು. ಸಾವಿತ್ರಿಗೆ ಹೊಸರುಚಿ, ಹೊಸ ಅನುಭವ. ಸುರೇಶ ಅವಳು ತಿನ್ನುತ್ತಿದ್ದುದನ್ನೇ ಗಮನಿಸಿದ... ಮೆಲ್ಲಗೆ ಕೇಳಿದ.

"ಏನೂ! ಪರವಾಗಿಲ್ವೆ? ಎಲ್ಲಾ ತಿಂದು ಬಿಟ್ಟೆಯಲ್ಲಾ... ಏನಾದರೂ ಹೆಚ್ಚು ಕಡಿಮೆ ಆದರೆ?"

"ನೀವೆಲ್ಲಾ ಇದೀರಲ್ಲ... ನೋಡ್ಕೊಂತೀರಿ. ನನಗೇನು ಭಯ?"

"ಯಾವುದಕ್ಕೆ ಭಯ ಪಡದಿದ್ದರೂ ಇಲ್ಲಿಯ ಹುಳು ಹುಪ್ಪಟೆಗಳಿಗೆ ಭಯ ಪಡಬೇಕು" ರಾಜೇಂದ್ರ ಹೆದರಿಸಿದ.

"ಹುಳು ಹುಪ್ಪಟೆಗಳು ನಮಗೆ ಹೆದರಿ ಹೋಗುತ್ವೆ. ಹೋಗು ಅಂತ ಬೈದರೂ ಹೋಗದೇ ಮೊಂಡುತನ ಮಾಡುವವನು ಮನುಷ್ಯನೇ..." ವಿಮಲ ಅವನನ್ನು ಕೆಣಕಿ ನುಡಿದಳು.

"ಏನು? ಎಲ್ಲರೂ ಬೆಂಬಲವಾಗಿದಾರೆ ಅಂತ ನೀನೂ ಮಾತಿಗೆ ಶುರು ಮಾಡಿ ಬಿಟ್ಟಿದೀಯಾ.." ರಾಜೇಂದ್ರನೂ ಹಂಗಿಸಿದ.

"ಏಳಿ....ಏಳಿ... ಹೊತ್ತಾತು.." ತಾತ ಹೊರಡಿಸಿದರು. ಚಿಕ್ಕ ಹುಡುಗರಂತೆ ಓಡಾಡುತ್ತಿದ್ದ ತಾತನನ್ನು ಕಂಡು ಸುರೇಶನಿಗೆ ಅಚ್ಚರಿ. ಮುಕುಂದನಿಗೆ ಬೆರಗು.

"ನಿಮ್ಮ ತಾತ ತುಂಬಾ ಗಟ್ಟಿಗರು."

"ಈಗೇನು ಕಂಡೆ? ಒಂದು ವಯಸ್ನಲ್ಲಿ ಅವರನ್ನು, ಹಳ್ಳಿಯ ಯಾವ ಪಂದ್ಯ ಗಳಲ್ಲಿ ಮೀರಿಸುವವರ್‍ಯಾರೂ ಇರಲಿಲ್ಲವಂತೆ. ಅವರಿಗೆ ಬಂದ ಬಹುಮಾನ ಗಳು ಈಗಲೂ ಅವರ ರೂಮಿನಲ್ಲಿವೆ. ನೋಡೂವಂತೆ"

"ಬಿಡುವಾದಾಗ ತೋರಿಸು ನೋಡೋಣ"

ಮತ್ತೆ ಎಲ್ಲರೂ ಹೊರಟರು. ಗಾಡಿಯ ಚಕ್ರಗಳು ಹೊರಳುತ್ತಿದ್ದಂತೆ ಎಲ್ಲರಿಗೂ ತೂಕಡಿಕೆ ಬರುವಂತಾಯಿತು. ಗಾಡಿ ಹೊಡೆಯುತ್ತಿದ್ದವನು ಮೆಲ್ಲಗೆ ಹಳ್ಳಿಯ ಪದ ಒಂದನ್ನು ಹಾಡಲು ಶುರು ಮಾಡಿದ. ಮುಂದಿನ ಗಾಡಿಯವನು ಅವನ ಹಾಡಿಗೆ ದನಿ ಸೇರಿಸಿದ. ಎಲ್ಲರೂ ನಕ್ಕರು.

"ಕೆಟ್ಟದಾಗಿ ಕಿರುಚ್ಕೋ ಬೇಡ... ಕೇಳುಕ್ಕಾಗ್ತಿಲ್ಲ. ನಮಗೆಲ್ಲಾ ನಿದ್ದೆ ಬರ್ತಿದೆ" ರಾಜೇಂದ್ರ ಸಿಡುಕಿದ.

"ಪ್ರಾಣಿಗಳು ಹತ್ತಿರ ಸುಳಿಯದಿರಲಿ ಅಂತ ಹಾಡ್ತಿದೀನಿ. ನಾವುಗಳು ತೂಕಡಿ ಸ್ಕೆ ಶುರು ಮಾಡಿದ್ರೆ ಚಿರತೆ, ಕಿರುಬ ಹತ್ತಿರ ಬಂದಾವು"

"ಈ ಆಸುಪಾಸಿನಲ್ಲಿ ಎಲ್ಲೂ ಕಾಡು ಪ್ರಾಣಿಗಳಿಲ್ಲ ಸುಮ್ಮನಿರು"

"ಅವು ರಾತ್ರಿ ಹೊತ್ತಿನಾಗೇ ಎಲ್ಲಿ ಅಂದರೆ ಅಲ್ಲಿ ತಿರುಗ್ತಿರುತ್ತವೆ. ನಾವೇನು ದಿನಾ ತಿರುಗ್ತೀವಾ? ನಮಗೇನು ಗೊತ್ತು?"

"ಲಾಂದ್ರದ ಬೆಳಕಿಗೆ ಓಡಿ ಹೋಗುತ್ತವೆ ಬಿಡು"

"ಬೆಳದಿಂಗಳ ಬೆಳಕಿನಲ್ಲಿ ಮೋಹಿನಿಯೂ ಅಡ್ಡ ಬರುತ್ತಾಳೆ" ಗಾಡಿಯವನು ಮತ್ತೆ ಹೆದರಿಸಿದ.

"ಮೋಹಿನಿ ಯಾರು?" ಸಾವಿತ್ರಿ ಕೇಳಿದಾಗ ಎಲ್ಲರೂ ನಕ್ಕರು. ಅವಳು ನಾಚಿಕೆಯಿಂದ ಕೆಂಪಾದಳು.

"ಮೋಹಿನಿ ಬಂದರೂ, ನಿಮಗೆ ಹೆದರಿ ಓಡಿ ಹೋಗ್ತಾಳೆ ಬಿಡಿ" ರಾಜೇಂದ್ರ ನಗುತ್ತಾ ನುಡಿದ.

"ಯಾಕೆ? ನಾನು ಅಷ್ಟು ಕುರೂಪಿನಾ?"

"ಛೆ. ಛೆ. ಶಾಂತಂ ಪಾಪಂ..."

"ಮೋಹಿನಿ,... ಶಾಕಿನಿ ಮಾತೆಲ್ಲಾ ಯಾಕೆ? ಹೆಣ್ಣು ಮಕ್ಕಳು ಹೆದರ್‍ತಾರೆ. ನೀನು ಸುಮ್ಮನೆ ಹಾಡು...." ತಾತ ಗಾಡಿಯವನಿಗೆ ಹಾಡಲು ಹೇಳಿದರು.

"ತಾತಾ ಸಾವಿತ್ರಿ ತುಂಬಾ ಚೆನ್ನಾಗಿ ಹಾಡ್ತಾಳೆ..." ಮುಕುಂದ ನುಡಿದ.

"ಹೌದೇನು ಮಗಾ! ಹಾಗಾದ್ರೆ ನೀನೇ ಹಾಡು..."

ಸಾವಿತ್ರಿ ನಾಚಿದಳು. ಸುರೇಶ ಒತ್ತಾಯ ಮಾಡಿದ.

"ಹಾಡು ಸಾವಿತ್ರಿ... ನಾನು ನಿನ್ನ ಹಾಡುಗಳನ್ನು ಕೇಳಿ ಎಷ್ಟೋ ದಿನಗಳಾಯಿತು." ಅವನ ಒಲವಿನ ಮಾತಿಗೆ ಸಾವಿತ್ರಿ ಮಣಿದಳು.

ಮೊದಲಿಗೆ ಒಂದು ಜನಪದಗೀತೆಯನ್ನು ಹಾಡಿದಳು. ಎತ್ತಿನ ಕೊರಳಿಗೆ ಕಟ್ಟಿದ ಗಂಟೆಯ ನಾದದೊಂದಿಗೆ ಬೆರೆತ, ಗೀತೆಯ ನಿನಾದ ಕಾಡಿನ ಗಿಡ ಮರಗಳನ್ನು ತಲುಪಿದವು. ಎಲ್ಲವೂ ಗೀತ ಲಹರಿಯಲ್ಲಿ ಬೆರೆತು ಹೋದವು.

ಇನ್ನೊಂದು, ಮತ್ತೊಂದು ಎಂದು ಎರಡು ಮೂರು ಜಾನಪದ ಗೀತೆಗಳನ್ನೂ, ಬೆಳದಿಂಗಳ ತಂಗಾಳಿಗೆ ಸರಿಹೊಂದುವಂತಹ ಭಾವಗೀತೆಗಳನ್ನು ಹಾಡಿ ಎಲ್ಲರನ್ನೂ ತನ್ಮಯರನ್ನಾಗಿ ಮಾಡಿಬಿಟ್ಟಳು.

"ತುಂಬಾ ಚೆನ್ನಾಗಿ ಹಾಡ್ತೀಯಮ್ಮಾ. ದೇವರು ನಿನ್ನನ್ನು ಚೆನ್ನಾಗಿಟ್ಟಿರಲಿ" ತಾತ ಹರಸಿದರು. ಸುರೇಶನಿಗೆ ಸಂತೋಷವಾಯಿತು. ಎದೆ ತುಂಬಿ, ಸುಶ್ರಾವ್ಯವಾಗಿ ಇಂದಿನಂತೆ ಎಂದೂ ಹಾಡಿರಲಿಲ್ಲವೆಂದೆನಿಸಿತ್ತು. ಈ ಮಾಧುರ್ಯ, ಈ ಇಂಪು... ಈ ಹಿಂದೆಂದೂ ಇರಲಿಲ್ಲವೆಂದೆನಿಸಿತ್ತು.

"ನೋಡ್ರೇ... ನೀವೂ ಇದೀರಾ ಅನ್ನದಂಡಕ್ಕೆ, ಇದ್ರೆ ನೋಡಿ ಸಾವಿತ್ರಿಯ ಹಾಗಿರಬೇಕು" ರಾಜೇಂದ್ರ ತಂಗಿಯನ್ನು ತೆಗಳಿ, ಸಾವಿತ್ರಿಯನ್ನು ಹೊಗಳಿದ್ದ.

ಸಾವಿತ್ರಿಯ ಕಡೆ ತಿರುಗಿ ಆ ಹುಡುಗಿಯರು ಮುಗುಳ್ನಕ್ಕರು. ಅವನ ಮಾತಿಗೆ ಅವರು ಕೋಪಗೊಂಡಿರಲಿಲ್ಲ.

ಗಾಡಿಯ ತೂಗುಯ್ಯಾಲೆಯ ತಾಳಕ್ಕೆ ತನ್ನ ಶೃತಿಯನ್ನು ಸೇರಿಸಿ ಸಾವಿತ್ರಿ ಹಾಡಿದ್ದಳು. ಆ ಕಾಡಿನ ರಸ್ತೆ ಸವೆದದ್ದು ಯಾರ ಅರಿವಿಗೂ ಬಂದಿರಲಿಲ್ಲ. ಗಾಡಿ ಹೊಡೆಯುವವನು ಕೂಡಾ "ಭೋ ಚೆಂದಾಗಿ ಹಾಡ್ತೀರಿ ನನ್ನವ್ವಾ.... ನಂಗೊಂ ದೆರಡು ಹೇಳ್ಕೊಡಿ" ಎಂದಿದ್ದ. ಎಲ್ಲರೂ ನಕ್ಕಿದ್ದರು.

"ಆಗಲಿ... ನಿನ್ನ ಹೆಸರೇನು?" ಸಾವಿತ್ರಿ ಮೃದುವಾಗಿ ಕೇಳಿದಳು.

"ಅವನ ಹೆಸರು ಗಿಡ್ಡ.... ಆದರೆ ಅವನು ಎಷ್ಟು ಉದ್ದಕ್ಕಿದಾನೆ ಗೊತ್ತಾ? ಎಲ್ಲಿ ಎದ್ದು ನಿಂತ್ಕೋ.." ಮಧು ನುಡಿದಾಗ ಮುಕುಂದ 'ಷ್' ಎಂದು ಬೆದರಿಸಿದ. ಗಿಡ್ಡ ತನ್ನಲ್ಲೇ ನಕ್ಕಿದ್ದು ಯಾರಿಗೂ ಕಾಣಲಿಲ್ಲ.

ಮಧ್ಯರಾತ್ರಿಯ ಹೊತ್ತಿಗೆ ಎಲ್ಲರೂ ಮನೆ ತಲುಪಿದರು. ಆತಂಕದಿಂದ ಕಾಯುತ್ತಾ ಕುಳಿತಿದ್ದವರೆಲ್ಲಾ ಗಾಡಿಯ ಸದ್ದಿಗೆ ಎದ್ದು ನಿಂತರು. ಗಾಡಿಗಳು ನಿಂತೊಡನೆ ಅದರ ಬಳಿಗೆ ಧಾವಿಸಿದರು. ತಾತ ಮೊದಲಿಗೆ ಇಳಿದು ನಿಂತರು. ಎಲ್ಲರೂ ಗಾಭರಿಯಿಂದ ಅವರನ್ನೇ ನೋಡಿದರು.

"ಜಾನಕಮ್ಮಾ, ಬಾ ಇಲ್ಲಿ. ನಿನ್ನ ಮಗನ್ನ ನಿನಗೆ ತಂದು ಒಪ್ಪಿಸಿದೀನಿ" ಎಂದರು. ಎಲ್ಲರ ಗಂಟಲುಬ್ಬಿ ಬಂತು. ಜಾನಕಿಯ ಕಣ್ಣುಗಳು ತೇವಗೊಂಡವು.

ಮುಕುಂದ, ಸುರೇಶನ ನೆರವಿನಿಂದ ಗಾಡಿಯಿಂದ ಇಳಿದ ಮಗನನ್ನೇ ನೋಡಿ ದಳು. ಅವಳ ಕಣ್ಣುಗಳಿಂದ ನೀರು ಹರಿದವು... ಸೆರಗನ್ನು ಉಂಡೆ ಮಾಡಿ ಬಾಯಿಗಿಟ್ಟು ಕೊಂಡಳು.

"ಷ್ ಅಳಬೇಡ. ಅಳುವುದು ಇವತ್ತಿಗೆ ಮುಗಿಯಿತು" ಎಂದರು ತಂದೆ ಸಮಾಧಾನದಿಂದ. ಆನಂದನ ಹಿಂದೆ ಪೆಚ್ಚಾಗಿ ನಿಂತಿದ್ದ ಲಕ್ಷ್ಮಿಯನ್ನು, ಸರಸ್ವತಿ ಮೈದಡವಿ ಮಾತನಾಡಿಸಿದಳು..."ಮಕ್ಕಳೆಲ್ಲೇ ಲಕ್ಷ್ಮಿ?"

"ಶಾಂತಿಯ ಮನೇಲಿದಾರೆ. ಅವಳು ಬಂದಿದ್ದಾಗ ಕರೆದುಕೊಂಡು ಹೋದಳು."

"ಎಲ್ಲಾ ನಡೀರಿ ಒಳಕ್ಕೆ" ಚಿಕ್ಕಪ್ಪ ಅವಸರಿಸಿದರು. ಒಳಮನೆಯಲ್ಲಿ ನಿಂತಿದ್ದ ಸುರೇಶನ ತಂದೆ ತಾಯಿ, ಸುಭದ್ರಮ್ಮ ಅವರುಗಳನ್ನು ಕಂಡು ಹೀನಾಯವೆನಿಸಿತ್ತು.

"ನಿಮಗೆಲ್ಲಾ ನಮ್ಮಿಂದ ನಿದ್ದೆ ಇಲ್ಲವಾಯ್ತು. ಹೋಗಿ ಮಲಗಿ ಚಿಕ್ಕಪ್ಪ

ತಂದೆ ಇಬ್ಬರೂ ನುಡಿದರು. ಸುಕನ್ಯ, ಸರಳ ಇಣುಕಿ ನೋಡಿದ್ದರು.

ಆನಂದನ್ನ ಸೀದಾ ತಾತನ ರೂಮಿಗೇ ಕರೆದುಕೊಂಡು ಹೋದರು. ತಾತನ ಮಂಚದ ಮೇಲೇ ಮಲಗಿಸಿದರು. ಲಕ್ಷ್ಮಿ ಬಾಗಿಲಿನಲ್ಲೇ ನಿಂತಳು.

"ನಿಮ್ಮದೆಲ್ಲಾ ಊಟವಾಯ್ತೋ ಇಲ್ಲವೋ, ನಮಗೆಲ್ಲಾ ಚೆನ್ನಾಗಿ ಆಯ್ತು. ಲಕ್ಷ್ಮಿ ಏನು ಚೆನ್ನಾಗಿ ಅಡಿಗೆ ಮಾಡ್ತಾಳೆ ಅಂತೀಯ"ತಾತ ಹೊಗಳಿದರು.

ತಂದೆ, ತಾಯಿ ಚಿಕ್ಕಪ್ಪ, ಚಿಕ್ಕಮ್ಮ ಊಟ ಮಾಡದೇ ಅವರುಗಳಾಗಿ ಕಾದು ಕುಳಿತಿದ್ದರು. ಹಸಿವು ಇಲ್ಲವಾಗಿತ್ತು. ಮಧ್ಯರಾತ್ರಿಯಲ್ಲೇನು ಊಟ ಎಂದುಕೊಂಡು ಎಲ್ಲರೂ ನೀರು ಕುಡಿದು ಮಲಗಿದರು. ಯಾರಿಗೂ ನಿದ್ದೆ ಬರಲಿಲ್ಲ. ಕೆಲವೇ ಗಂಟೆಗಳಲ್ಲಿ ಕತ್ತಲೆ ಹರಿಯಿತು. ಬೆಳಕು ಮೂಡಿತು.

ನಿತ್ಯದಂತೆ ಬೆಳಿಗ್ಗೆ ಬೇಗ ಏಳುವವರು ಎದ್ದು ಮನೆಯ ಕೆಲಸ ಕಾರ್ಯಗಳಲ್ಲಿ ತೊಡಗಿದರು. ಬೆಂಗಳೂರಿನಿಂದ ಬಂದವರಿಗೆಲ್ಲಾ ಉಪಚಾರವಾಯಿತು. ತಿಂಡಿ ಕಾಫಿಯ ನಂತರ, ಆನಂದನನ್ನು ಟ್ಯಾಕ್ಸಿಯಲ್ಲಿ ಶಿವಮೊಗ್ಗಾಕ್ಕೆ ಕರೆದುಕೊಂಡು ಹೊರಟರು. ಮುಕುಂದ, ಸುರೇಶ, ವಿಮಲ, ಮಧು ಹೊರಟಾಗ ಅವರೊಡನೆ ಸಾವಿತ್ರಿಯೂ ಹೊರಟಳು. ವಿಮಲನಿಗೆ, ಕೊಂಡು ತರುವ ಸಾಮಾನಿನ ಒಂದು ದೊಡ್ಡ ಪಟ್ಟಿಯನ್ನೇ ಬರೆದು ಕೊಟ್ಟಿದ್ದಳು ಜಾನಕಮ್ಮ. ಸಾವಿತ್ರಿಗೆ, ತಾನು ಎಷ್ಟೋ ವರ್ಷಗಳಿಂದ ನೋಡದಿದ್ದ ಕಳೆದುಕೊಂಡಿದ್ದ ನೋಟಗಳನ್ನೆಲ್ಲ ನೋಡಬೇಕು. ಮನಸ್ಸು, ಕಣ್ಣು ತಣಿಯಬೇಕು ಅನ್ನುವ ಆಸೆ. ಅವಳ ಆಸೆಗೆ ಯಾರೂ ಅಡ್ಡಿ ಬರಲಿಲ್ಲ. ಸುಭದ್ರಮ್ಮನಿಗೆ ಮಾತ್ರ ಏನೋ ತಳಮಳ.

ಟ್ಯಾಕ್ಸಿಯಲ್ಲಿ ಜಾಗ ಸಾಲದಾದ್ದರಿಂದ ಮಧು ಹಿಂದುಳಿದಳು. "ರಾಜಾ ನನ್ನನ್ನು ಕರೆದುಕೊಂಡು ಹೋಗ್ತೀಯೇನೋ ಬೈಕ್‌ನಲ್ಲಿ?" ಆಸೆಯಿಂದ ಕೇಳಿದಳು.

"ಸಾವಿತ್ರಿ ಬರ್ತಾಳಾ ಕೇಳು. ಅವಳು ಬಂದರೆ, ಆಗ ನಿನಗೆ ಟ್ಯಾಕ್ಸಿಯಲ್ಲಿ ಜಾಗ ಸಿಗುತ್ತೆ"

"ಯಾವ ಹುಡುಗೀರನ್ನ ಕಂಡರೂ ಅವನೇಕೆ ಹೀಗೆ ಬಾಯಿ ಬಾಯಿ ಬಿಡ್ತಾನೆ?" ಚಿಕ್ಕಪ್ಪ ಕೇಳಿದಾಗ, ಚಿಕ್ಕಮ್ಮ ಉತ್ತರಿಸಿದ್ದಳು.

"ಸಾವಿತ್ರಿ ಚೆನ್ನಾಗಿದಾಳೆ ಅಲ್ವಾ? ಅವಳನ್ನು ಮದುವೆಯಾಗುವ ಆಸೆಯೋ ಏನೋ..."

"ಸಾವಿತ್ರಿ ಅವನನ್ನು ಒಪ್ಪಬೇಕಲ್ಲ...."

ಅವರ ಮಾತುಗಳನ್ನು ಕೇಳಿಸಿಕೊಂಡಿದ್ದ ರಾಜೇಂದ್ರ ಗುರುಗುಟ್ಟಿದ.

"ಯಾಕೆ ಒಪ್ಪುವುದಿಲ್ಲ. ಅವಳು ಒಪ್ಪುವಂತೆ ಮಾಡದಿದ್ದರೆ ನನ್ನ ಹೆಸರು ರಾಜೇಂದ್ರನೇ ಅಲ್ಲ." ತನ್ನಲ್ಲೇ ಹೇಳಿಕೊಂಡ.

ಶಿವಮೊಗ್ಗಾದಲ್ಲಿ ಡಾಕ್ಟರರ ಹತ್ತಿರ ಕೆಲಸ ಮುಗಿದ ಕೂಡಲೇ ವಾಪಸ್ಸು ಹೊರಟರು. ತಾಯಿಗೆ ಬೇಕಾಗಿದ್ದ ಕೆಲವಾರು ವಸ್ತುಗಳನ್ನು ಖರೀದಿಸಿದರು. ಅಲ್ಲಿಂದ ಸೀದಾ ಶಾಂತಿ ವಾಸವಾಗಿದ್ದ ಹಳ್ಳಿಗೆ ಬಂದರು. ಅನಿರೀಕ್ಷಿತವಾಗಿ ಬಂದ ಅತಿಥಿಗಳನ್ನು ಕಂಡು ಶಾಂತಿಗೆ ಸಂಭ್ರಮ. ಎಲ್ಲರಿಗೂ ಆತಿಥ್ಯ ನೀಡಿದಳು. ಆನಂದ ಮತ್ತೆ ತನ್ನ ಮನೆಯನ್ನು ಸೇರುವಂತಾದದ್ದು ಅವಳಿಗೆ ಖುಷಿಯೋ ಖುಷಿ. ಸಾವಿತ್ರಿಯನ್ನು ನೋಡಿ ಸರಳಾ ಎಂದೇ ಭಾವಿಸಿ.

"ಹೇಗಿದೀರಿ, ಜ್ಞಾಪಕವಿದೆಯಾ?" ಎಂದು ವಿಚಾರಿಸಿದಳು. ವಿಮಲ ನಿಜಾಂಶ ವನ್ನು ತಿಳಿಸಿದಾಗ ಶಾಂತಿ ನಾಚಿಕೆಯಿಂದ ಕ್ಷಮಾಪಣೆಯನ್ನು ಕೇಳಿದಳು. ಮುಕುಂದ ತನ್ನ ಮಗುವಿನ ನಾಮಕರಣ ಸಮಾರಂಭಕ್ಕೆ ಆಹ್ವಾನವಿತ್ತಾಗ ಆಶ್ಚರ್ಯವನ್ನು ವ್ಯಕ್ತ ಪಡಿಸಿದಳು.

"ಇದೇನೋ? ದಿಢೀರನೇ ಯಾವಾಗ ಹುಟ್ಟೋ ಮಗು? ಯಾರೂ ಈ ಸುದ್ದಿಯನ್ನು ಹೇಳಿದ ನೆನಪೇ ಇಲ್ಲ"

"ದಿಢೀರನೇ ಹುಟ್ಟಿದ್ದೇನಲ್ಲ. ತನಗೆ ಬೇಕಾದ ಸಮಯ ತಗೊಂಡೇ ಹುಟ್ಟಿ ದಾನೆ.... ಮೊದಲು ಮೂರು ನಾಲ್ಕು ಸಲ ಏನೋ ತೊಂದರೆಯಿಂದ ಆಗಿರಲಿಲ್ಲ. ಅದಕ್ಕೇ ಈ ಸಲ ಯಾರಿಗೂ ತಿಳಿಸಲೇ ಇಲ್ಲ. ಅವನು ಹುಟ್ಟುವ ತನಕ ರಹಸ್ಯ ವಾಗಿಯೇ ಇಟ್ಟಿದ್ದೆವು."

"ಈಗ ನಿನ್ನ ಹೆಂಡತಿ ಹುಶಾರಾಗಿದಾಳೆ ತಾನೇ..."

"ಹುಂ ಅದೇ ಸಮಯದಲ್ಲಿ ಅವಳ ತಂಗಿ ಸರಳಾಗೂ ಮಗುವಾಯ್ತು"

"ಮಾತಾಡಿಕೊಂಡು ಒಟ್ಟಿಗೇ ಮಕ್ಕಳಾಗಿವೆ ಅವಳೀ ಮಕ್ಕಳ ತರಹ" ಶಾಂತಿ ನಸುನಕ್ಕಳು. ಸಾವಿತ್ರಿ ಗಂಭೀರವಾಗಿದ್ದಳು. ಅವಳು ಹೊರಗೆ ತಿರುಗಾಡುವಾಗ ಮಕ್ಕಳ ಬಗ್ಗೆ ಮರೆತೇ ಬಿಡುತ್ತಿದ್ದಳು. ಅವಳು ಹೊರಗೆ ತಿರುಗಾಡುವಾಗ ಮಕ್ಕಳ ಬಗ್ಗೆ ಮರತೇ ಬಿಡುತ್ತಿದ್ದಳು. ಹೆಚ್ಚಿಗೆ ವಾತ್ಸಲ್ಯವನ್ನು ಬೆಳೆಸಿಕೊಳ್ಳದಂತೆ ದೂರ ದೂರವೇ ಇಡುತ್ತಿದ್ದಳು. ಆಸ್ಪತ್ರೆಯಲ್ಲಂತೂ ಅವಳು ಮಕ್ಕಳ ಕಡೆ ಸರಿಯಾಗಿ ನೋಡಿರಲೇ ಇಲ್ಲ. ಸರಳ ಸುಕನ್ಯರೇ ಸಾಕಿ, ಬೆಳೆಸಿ, ಅವರುಗಳೇ ಎಲ್ಲವನ್ನು ನೋಡಿಕೊಂಡಿದ್ದರು.

ಸುರೇಶ ತನಗೆಂದು ಒಂದು ಮಗುವನ್ನು ಆಯ್ಕೆ ಮಾಡಿದಾಗ ಮಾತ್ರ ಸಾವಿತ್ರಿ ಸ್ವಲ್ಪ ಕುತೂಹಲದಿಂದ ನೋಡಿದ್ದಳು. ಇನ್ನೊಂದು ಮಗುವಿನ ಕರ್ತವ್ಯ ತಾನು ಹೆತ್ತಾಗಲೇ ಮುಗಿಯಿತು ಎಂಬಂತೆ ಸುಮ್ಮನಾಗಿದ್ದಳು. ಯಾರೂ ಅವಳಿಗೆ ಅದನ್ನು ನೆನಪಿಸುತ್ತಿರಲಿಲ್ಲ. ಈಗ ಶಾಂತಿಯ ಮಾತುಗಳು ಅವಳಿಗೆ ಬೇಸರವೆನಿಸಿದವು. ಸುರೇಶ ಅವಳನ್ನೇ ಗಮನಿಸುತ್ತಿದ್ದ. ಸಾವಿತ್ರಿ ಅಸಹನೆಯಿಂದ ಎದ್ದು ನಿಂತಾಗ ಮುಕುಂದನಿಗೆ ಅರಿವಾಗಿತ್ತು.

"ಶಾಂತಿ ನಾವಿನ್ನು ಬರ್ತೀವಿ. ನೀನು ಇವತ್ತು ಸಾಯಂಕಾಲವೇ ನಿನ್ನ ಗಂಡ ಮಕ್ಕಳೊಡನೆ ಬಂದು ಬಿಡು. ನಾಳೇನೇ ನಾಮಕರಣ. ಹಳ್ಳಿಯ ನಮ್ಮ ಪರಿಚಯದವರನ್ನೆಲ್ಲ ಕರೆದಾಗಿದೆ"

"ನಿನ್ನ ಭಾವ ಬರುವವರೆಗೂ ಇದ್ದಿದ್ದರೆ ಚೆನ್ನಾಗಿತ್ತು. ಅವರು ಬೇಗ ಬಂದರೆ ಇವತ್ತೇ ಬರ್ತೀನಿ. ಇಲ್ಲದಿದ್ದರೆ ನಾಳೆ ಬೆಳಿಗ್ಗೆ ಬರ್ತೀನಿ"

ಟ್ಯಾಕ್ಸಿಯಲ್ಲೇ ಮಲಗಿದ್ದ ಆನಂದನನ್ನು ವಿಚಾರಿಸಿದಳು.

"ಒಳ್ಳೇದಾಯ್ತು ಬಿಡು. ಹಗೆತನ ಮುಗೀತಲ್ಲ. ನಿನ್ನ ಮಗ ಹುಟ್ಟಿದ ಘಳಿಗೆ ಎಷ್ಟು ಚೆನ್ನಾಗಿದೆ ನೋಡು... ದೂರ ಹೋಗಿದ್ದವರನ್ನು ಮತ್ತೆ ಹತ್ತಿರ ಸೇರಿಸಿದ..."

ಶಾಂತಿಯ ಮಾತುಗಳಿಂದ ತಪ್ಪಿಸಿಕೊಂಡು ಎಲ್ಲರೂ ತಮ್ಮ ಮನೆಯ ಕಡೆಗೆ ಪ್ರಯಾಣ ಬೆಳೆಸಿದರು.

ಮನೆಯಲ್ಲಿ ಆಗಲೇ ಸಂಭ್ರಮದ ಕಳೆ ಏರಿತ್ತು. ತೋಟದಿಂದ ಹಣ್ಣುಗಳು, ಬಾಳೆ ಎಲೆ ರಾಶಿರಾಶಿಯಾಗಿ ಬಂದು ಬಿದ್ದಿದ್ದವು. ತೋಟದಿಂದ ಕೆಡವಿಸಿ ತಂದ ತೆಂಗಿನಕಾಯನ್ನು ಸುಲಿಸಿ, ಒಂದು ಕಡೆ ಸೇರಿಸಿಟ್ಟಿದ್ದರು. ಅಕ್ಕಿ, ಬೇಳೆ, ತರಕಾರಿಗಳೆಲ್ಲ ಕೇಜಿಗಟ್ಟಲೆ ಬಂದು ಬಿದ್ದಿದ್ದವು.

ಅಡಿಗೆ ಮನೆಯಲ್ಲಿ ಜಾನಕಮ್ಮ, ಸರಸ್ವತಿಯ ಜತೆಗೆ ಪಂಕಜಮ್ಮ ಸುಭದ್ರಮ್ಮನೂ ಸೇರಿದ್ದರು.

"ನಮಗೆ ಇದೆಲ್ಲಾ ಅಭ್ಯಾಸ. ಹಬ್ಬ ಹುಣ್ಣಿಮೆ ಎಂದರೆ ನಮ್ಮ ಮನೆಗೆ ಬರೋರು ಹೋಗೋರು ಬಹಳ. ನಿಮಗೆ ಗಾಭರಿಯಾಗಿರಬೇಕು."

"ಮಾಡೋರು ನೀವುಗಳು ಇರುವಾಗ ನಮಗೇಕೆ ಗಾಭರಿ! ನಮ್ಮಿಂದ ಏನು ಸಹಾಯಬೇಕೋ, ಹೇಳಿ ಮಾಡ್ತೀವಿ"

"ರಾತ್ರಿಯ ಹೊತ್ತಿಗೆ ಅಡಿಗೆಯವರು ಬರ್ತಾರೆ. ಅವರು ನೋಡ್ಕೋತಾರೆ.

ಈ ಹೊತ್ತಿನ ಕೆಲಸವಷ್ಟೇ ನಮ್ಮದು. ನೀವು ಅಪರೂಪಕ್ಕೆ ಬಂದವರು, ನಿಮ್ಮ ಹತ್ತಿರ ಕೆಲಸ ತೆಗೆಯುವುದೇ ! ಎಲ್ಲಾದರೂ ತಿರುಗಾಡಿ ಬರುವುದಾದರೆ ಹೋಗಿ ಬನ್ನಿ. ಈ ಹಳ್ಳಿಯಲ್ಲಿ ಬರೀ ಕಾಡು ಮೇಡು, ಬೆಟ್ಟ ಗುಡ್ಡ ಅಷ್ಟೇ. ನಮಗೆಲ್ಲ ದಿನದ ನೋಟ. ಹೊರಗಿನವರಿಗೆ ಇಷ್ಟ. ಹಾಗೇ ಒಂದು ದೇವಸ್ಥಾನವಿದೆ. ಹೋಗಿ ಬರುವುದಾದರೆ ಹೊರಟು ಬಿಡಿ. ಕತ್ತಲಾದ ಮೇಲೆ ಕಷ್ಟ. ಬೀದಿದೀಪವಿಲ್ಲ."

ಸುರೇಶನ ತಂದೆ ತಾಯಿ ಸಿದ್ಧರಾಗಿ ಹೊರಟರು. ಸುಭದ್ರಮ್ಮ ಮನೆಯಲ್ಲೇ ಉಳಿದರು ಸುರೇಶ, ಸರಳ, ಮುಕುಂದ, ಸುಕನ್ಯ ತಮ್ಮ ತಮ್ಮ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವುದರಲ್ಲಿ ನಿರತರಾಗಿದ್ದರು. ಮುಂಚಿನಂತಾಗಿದ್ದರೆ ಸರಳ ಹೊರಟಿರುತ್ತಿದ್ದಳು. ಆದರೆ ಈಗ ಮಗುವಿನ ಪೋಷಣೆ. ಸಾವಿತ್ರಿಗೆ ಬಿಡುವು ಇದ್ದುದರಿಂದ ಅವಳು ಹೊರಟಳು. ಅವಳು ತನ್ನ ಜತೆಗೆ ಮಧುವನ್ನು ಹೊರಡಿಸಿದಳು. ವಿಮಲ ಹೊರಡಲಿಲ್ಲ. ಕೂತಲ್ಲಿಂದಲೇ ಇದನ್ನೆಲ್ಲ ಗಮನಿಸಿದ್ದ ರಾಜೇಂದ್ರ ಕಳ್ಳನಂತೆ ಎದ್ದು ಸಿದ್ಧನಾಗಿ ಹುಡುಗಿಯರನ್ನು ಹಿಂಬಾಲಿಸಿದ. ಸ್ವಲ್ಪ ಹೊತ್ತಿನಲ್ಲಿ ಅವರ ಜತೆಯನ್ನು ಸೇರಿದ.

"ಊರು ನೋಡುಕ್ಕೆ ಹೊರಟ್ರಾ? ಹಿಂದೆ ಸರಳ ಇಲ್ಲಿಗೆ ಬಂದಿದ್ದಾಗ ನಾನೂ ಸರಳ ದೇವಸ್ಥಾನದ ತನಕ ಹೋಗಿ ಬಂದಿದ್ದೆವು... ವಿಜಯ ದಶಮಿಯ ದಿನ. ದೇವಸ್ಥಾನ ತುಂಬಾ ಚೆನ್ನಾಗಿದೆ ಬನ್ನಿ. ನಾನೂ ಬರ್ತೀನಿ ಜತೆಗೆ ಇಲ್ಲದಿದ್ದರೆ ಈ ಹಳ್ಳಿಯ ರಸ್ತೆ ತುಂಬಾ ಅಪಾಯ" ಅವನ ಮಾತಿಗೆ ಏನನ್ನು ಉತ್ತರಿಸದೇ ನಸುನಕ್ಕಳು ಸಾವಿತ್ರಿ. ಮಾತನಾಡುತ್ತಾ ಎಲ್ಲರೂ ದೇವಸ್ಥಾನದ ಬಳಿಗೆ ಬಂದರು.

"ಒಳಗೆ ಹೋಗಿ ನಿಮಗೇನು ಬೇಕೋ ಅದನ್ನು ಬೇಡಿಕೊಳ್ಳಿ. ಖಂಡಿತಾ ಈಡೇರುತ್ತೆ. ಸರಳ ಬಂದಾಗ ಸುರೇಶನ ಬಗ್ಗೆ ಬೇಡಿಕೊಂಡಿರಬಹುದು. ಅದಕ್ಕೇ ನೋಡಿ ಅವರಿಬ್ಬರ ಮದುವೆ ಎಷ್ಟು ಬೇಗ ನಡೆದು ಹೋಯಿತು."

ಅದುವರೆಗೂ ಸುಮ್ಮನಿದ್ದ ಸಾವಿತ್ರಿ ನುಡಿದಳು.

"ಹೋಗು ಮಧು, ನಿನಗೇನು ವರಬೇಕೋ ಬೇಡಿಕೋ, ಹಾಗೇನೇ ನಾಳೇನೇ ವಿಮಲನ್ನ ಕರೆದುಕೊಂಡು ಬಂದು, ಅವಳಿಗೂ ಬೇಕಾದ್ದನ್ನು ಬೇಡುವಂತೆ ಹೇಳು.. ನಿಮ್ಮಿಬ್ಬರ ಮನಸ್ನಲ್ಲಿ ಅದೇನು ಇದೆಯೋ ನೆರವೇರುತ್ತೆ."

ರಾಜೇಂದ್ರನ ಮುಖ ಕೆಂಪಗಾಯಿತು.

"ನಿಮಗೆ ತಮಾಷೆ. ಹೋಗೇ ಮಧು ಅವರು ಬರದಿದ್ದರೆ ಪರವಾಗಿಲ್ಲ.

ಅವರಿಗೆ ನಂಬಿಕೆ ಇಲ್ಲವೇನೋ, ನೀನು ಹೋಗಿ ಕೇಳಿಕೊಂಡು ಬಾ. ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸ್‌ನಲ್ಲಿ ಪಾಸಾಗುತ್ತೆ ಖಂಡಿತಾ'' ಮಧು ತಾನೂ ಛೇಡಿಸಿದಳು.

''ರಾಜಾ ಮತ್ತೆ ನೀನೇಕೆ ಫೇಲಾದೆ? ದೇವಸ್ಥಾನಕ್ಕೆ ಆಗಾಗ್ಗೆ ಬರ್ತಿದ್ದೆ.''

''ತಲೆ ಹರಟೆ ಹೋಗು ಸುಮ್ಮನೆ'' ಮಧು ಮರೆಯಾದ ಕೂಡಲೇ ಅವಳ ಬಳಿಗೆ ಸರಿದ. ''ನನ್ನನ್ನು ಮದುವೆಯಾಗ್ತೀರಾ ಸಾವಿತ್ರಿ?'' ದಿಢೀರನೇ ಕೇಳಿದ.

ಇದಕ್ಕೆ ಇಷ್ಟೆಲ್ಲಾ ನಾಟಕ ಎಂದುಕೊಂಡ ಸಾವಿತ್ರಿ ನುಡಿದಳು.

''ಮದುವೆಗೆ ಅರ್ಜೆಂಟೇನಿಲ್ಲ ನನಗೆ. ಅಲ್ಲದೇ ನಿಮ್ಮ ಮನೆಯಲ್ಲೂ ಅಷ್ಟೇ. ಮೊದಲು ವಿಮಲ, ಮಧುಮತಿಯರ ಮದುವೆಯಾಗಬೇಡವೆ? ನಿಮಗೇನು ಆತುರ?''

''ಆಗುತ್ತೆ ಬಿಡಿ ನಿಧಾನವಾಗಿ. ನಿಮ್ಮ ಮನಸ್ಸಿನಲ್ಲಿ ಏನಿದೆ ಹೇಳಿ.''

''ನಾನು ಯೋಚಿಸಬೇಕು. ಇನ್ನೆಂದಾದರೂ ನಿಧಾನವಾಗಿ ಮಾತನಾಡೋಣ''

''ಮನೆಯಲ್ಲಿ ಮಾತನಾಡಲು ನನಗೆ ಇಷ್ಟವಿಲ್ಲ ಸಾವಿತ್ರಿ. ಮನೆಯಿಂದ ದೂರ ಎಲ್ಲಾದರೂ ಸೇರಿ ಮಾತನಾಡೋಣ. ಇಬ್ಬರೇ ಕೂತು ಮಾತನಾಡಿದರೆ ಚೆನ್ನ ಅಲ್ಲವಾ?''

''ಯಾಕೆ? ಏನು ಕಾರಣ? ಯಾರಿಗೂ ತಿಳಿಯದಂತೆ ನನ್ನನ್ನು ಮದುವೆ ಆಗ್ತೀರಾ? ಅದರಲ್ಲೇನು ಮಜಾ?''

''ನನಗೆ ನಿಮ್ಮಂತಹ ಓದಿರುವ ಹುಡುಗಿಯರನ್ನು ಕಂಡರೆ ಇಷ್ಟ. ಸರಳನನ್ನು ಮೆಚ್ಚಿದ್ದೆ. ಮುಕುಂದ ತಪ್ಪಿಸಿಬಿಟ್ಟ. ಈಗಲೂ ಹಾಗೇ ಮಾಡ್ತಾನೇನೋ ಅಂತ. ನಾವು ನಾವು ಒಪ್ಪಿದ ಮೇಲೆ ಅವನೇನೂ ಮಾಡುಕ್ಕೆ ಆಗುಲ್ಲ. ಅದಕ್ಕೆ....''

''ಯಾಕೆ! ಮುಕುಂದನಿಗೆ ನೀವು ಮದುವೆಯಾಗುವುದು ಇಷ್ಟವಿಲ್ಲವೆ?''

''ನೀವು ಅವನ ನಾದಿನಿ. ಅದಕ್ಕೇ ಬೇಡವೆನ್ನಬಹುದು. ಅವನಿಗೆ ನನ್ನನ್ನು ಕಂಡರೇ ಆಗುಲ್ಲ. ಹಳ್ಳೀಲೇ ಇದ್ದುಕೊಂಡು ಬಿಟ್ಟಿ ಊಟ ತಿಂತಿದೀನಿ ಅನ್ನುವ ತರಹ ಆಡ್ತಾನೆ. ನಾನೊಬ್ಬನೇ ಇಂಜನಿಯರು ಎನ್ನುವ ತರಹ ಜಂಭ ಆಡ್ತಾನೆ''

''ಛೆ. ಛೆ. ನಾನು ಭಾವಂಗೆ ಹೇಳ್ತೀನಿ ಬಿಡಿ. ನಿಮ್ಮ ಬಗ್ಗೆ ಅವರಿಗೆ ಏನೋ ತಪ್ಪು ಭಾವನೆ. ಹಳ್ಳೀಲಿದ್ರೇನು, ಮೈ ಮುರಿದು ಕೆಲಸ ಮಾಡುಲ್ವಾ ನೀವು?''

''ನಿಮಗೆ ಹಳ್ಳಿ ಅಂದ್ರೆ ಇಷ್ಟಾನಾ? ಸಾವಿತ್ರಿ!'' ರಾಜೇಂದ್ರ ಉತ್ತೇಜಿತನಾದ.

''ಹಳ್ಳಿ ದಿಳ್ಳಿ, ಎಲ್ಲಾ ಇಷ್ಟ. ನಾನೆಲ್ಲಿರ್ತೀನೋ ಆ ಜಾಗ ನನಗೆ ಇಷ್ಟ''

''ನಿಮಗೆ ಹಳ್ಳಿ ಇಷ್ಟವಿಲ್ಲದಿದ್ದರೆ, ನಾನೂ ಬೆಂಗಳೂರಿಗೇ ಬಂದು ಬಿಡ್ತೀನಿ.

ನನಗೆ ನೀವು ಅಂದ್ರೆ ಇಷ್ಟ" ಎನ್ನುತ್ತಾ ಅವಳ ಸೊಂಟವನ್ನು ಬಳಸಿದ.

"ಷ್ ಮದುವೆಗೆ ಮುಂಚೆ ಇಂಥದೆಲ್ಲ ನನಗಿಷ್ಟವಿಲ್ಲ" ದೂರ ಸರಿದಳು.

ರಾಜೇಂದ್ರ ಪೆಚ್ಚಾದ. ಮಧುವನ್ನು ಕಂಡೊಡನೆ ಸಾವಿತ್ರಿ ಅವಳ ಬಳಿಗೆ ಓಡಿದಳು. "ನಡೀ ಮಧು ಹೊರಡೋಣ. ಇನ್ನು ಇಲ್ಲಿರುವುದು ಅಪಾಯ"

ರಾಜೇಂದ್ರ ಹಲ್ಲು ಕಡಿದ. "ಸಾವಿತ್ರಿ ನೀನೇ ಜಾಣೆ ಅಂತ ತಿಳಿದುಕೊಳ್ಳಬೇಡ. ನಿನ್ನನ್ನು ಹೇಗೆ ಒಲಿಸಿಕೊಳ್ಳಬೇಕು ಅನ್ನುವ ಪ್ಲಾನ್ ನನ್ನ ಹತ್ತಿರವಿದೆ" ತನ್ನಲ್ಲೇ ನುಡಿದುಕೊಂಡ.

"ಬರ್ತೀಯೇನೋ ರಾಜಾ" ಕೇಳಿದಳು ಮಧು.

"ನೀವುಗಳು ಹೋಗಿ, ನಾನು ಆಮೇಲೆ ಬರ್ತೀನಿ"

"ಚೆನ್ನಾಗಿ ಕತ್ತಲಾಗಿದೆಯಲ್ಲಾ ಮಧು, ಪರವಾಗಿಲ್ವಾ?"

"ನನಗೆ ರಸ್ತೆ ಗೊತ್ತಿದೆ. ಅವನು ಸ್ನೇಹಿತರ ಜತೆ ಸೇರಿ ಸಿಗರೇಟು ಸೇದಿ ಬರುವ ಹೊತ್ತಿಗೆ ಮಧ್ಯರಾತ್ರಿಯಾಗಿರುತ್ತೆ. ಅವನಿಗೆ ಕಾದರೆ ಆಗುಲ್ಲ ಬನ್ನಿ"

"ಸಿಗರೇಟು ಸೇದ್ತಾರಾ? ಹೋಗಲಿ ನಮ್ಮ ಜತೆ ಏಕೆ ಬರಬೇಕಿತ್ತು?"

"ನೀವು ಹೊಸಬರು ಅಂತ ನಿಮ್ಮ ಜತೆ ಬಂದಿದಾನೆ. ಇಲ್ಲದಿದ್ದರೆ ನಾವುಗಳು ಎಲ್ಲಿಗೆ ಕರೆದರೂ ಬರುವುದಿಲ್ಲ. ಸದಾ ಸ್ನೇಹಿತರು.. ಇಸ್ಪೀಟೂ ಆಡ್ತಾನೆ."

"ಯಾರೂ ಬುದ್ಧಿವಾದ ಹೇಳಿಲ್ವಾ? ನೋಡ್ಕೊಂಡೂ ಸುಮ್ಮನಿದಾರಾ?"

"ದೊಡ್ಡವರಿಗೆಲ್ಲ ಗೊತ್ತೇ ಇಲ್ಲ. ನಾವುಗಳು ಹೇಳಿದ್ರೆ ಇವನು ಕೇಳ್ತಾನಾ? ಹೇಳಬೇಡಿ ಅಂತ ಹೆದರಿಸ್ತಾನೆ. ಬೈತಾನೆ. ಲಂಚಕೊಡ್ತಾನೆ."

"ಅದು ತುಂಬಾ ತಪ್ಪು ಮಧು. ಯಾರಾದ್ರೂ ಹೇಳಲೇಬೇಕು"

"ನೀವು ಹೇಳಿದ್ರೆ ಕೇಳಬಹುದು. ಹೇಳ್ತೀರಾ?"

"ನಾನಾ? ನಾನು ಹೊಸಬಳು. ಅಪರೂಪಕ್ಕೆ ಬಂದು ಅವರ ವೈಯುಕ್ತಿಕ ವಿಚಾರದಲ್ಲಿ ತಲೆ ಹಾಕಲು ನನಗಿಷ್ಟವಿಲ್ಲ. ಅದು ಸರಿಯಲ್ಲ."

"ಮದುವೆ ಮಾಡಿದ್ರೆ ದಾರಿಗೆ ಬರ್ತಾನೆ ಅಂತ ಅಮ್ಮನ ಆಸೆ. ಆದರೆ ವಿಮಲನ ಮದುವೆ ಮೊದಲಾಗಬೇಕು"

ಮದುವೆಯ ಮಾತು ಸಾವಿತ್ರಿಗೆ ಇಷ್ಟವಾಗಲಿಲ್ಲ. ಸರಸರನೆ ಹೆಜ್ಜೆ ಹಾಕಿ ನುಡಿದಳು. "ನಡೀ ಮಧು, ಬೇಗ ಹೋಗೋಣ. ಬೇಗ ಬೇಗ ಹೆಜ್ಜೆ ಹಾಕು"

ಬಾಗಿಲಿನಲ್ಲೇ ಕಾದು ನಿಂತಿದ್ದ ವಿಮಲ ತಂಗಿಯನ್ನು ಗದರಿದಳು.

“ಎಷ್ಟು ಹೊತ್ತೇ ಬರುವುದು? ಅವನೆಲ್ಲಿ?”

“ಸ್ನೇಹಿತರ ಕಟ್ಟೆ... ನಮಗೇನೂ ಹೆದರಿಕೆ ಆಗಲಿಲ್ಲ.”

“ಬೆಂಗಳೂರಿನಿಂದ ಬಂದವರು ಬಲು ಸೂಕ್ಷ್ಮ. ಅವರ ತಾಯಿಗೆ ಆತಂಕ ಮಗಳು ಹಳ್ಳಿಯಲ್ಲಿ ಎಲ್ಲಿ ಕಳೆದು ಹೋಗ್ತಾಳೋ ಅಂತ ಸಧ್ಯ ಬಂದ್ರಲ್ಲ”

ಶಾಂತಿ ನುಡಿದಳು. ಅದೇ ತಾನೇ ಊರಿನಿಂದ ಬಂದಿದ್ದಳು. ಮಧು ಅವಳ ಬಳಿಗೆ ಓಡಿದಳು. ಸಾವಿತ್ರಿ ಅಲ್ಲಿಯೇ ನಿಂತಳು.

ಎಲ್ಲರ ಊಟ ಮುಗಿದ ಮೇಲೆ, ರಾಜೇಂದ್ರ ಕಳ್ಳನಂತೆ ಒಳಗೆ ಬಂದ. ಸಾವಿತ್ರಿಯ ಕಡೆ ನೋಡಿದ. ಎಲ್ಲರೂ ಅವರವರ ಪಾಡಿಗೆ ಇದ್ದುದನ್ನು ಕಂಡು ಧೈರ್ಯ ಬಂತು. ಅಡಿಗೆ ಮನೆಗೆ ಹೋಗಿ ಊಟಕ್ಕೆ ಕುಳಿತ. ತಾಯಿ ಕೆಳದನಿಯಲ್ಲಿ ಏನೋ ಗದರಿದರು.

ಆ ರಾತ್ರಿ ಬೆಂಗಳೂರಿನಿಂದ ಬಂದ ಅತಿಥಿಗಳೆಲ್ಲ ರೂಮಿನಲ್ಲಿ ಮಲಗಿದರು. ಮನೆಯವರೆಲ್ಲ, ಹಾಲ್‌ನಲ್ಲಿ, ವರಾಂಡದಲ್ಲಿ, ಊಟದ ಮನೆಯಲ್ಲಿ ಮಲಗಲು ಅನುಕೂಲಗಳನ್ನು ಮಾಡಿಕೊಂಡರು. ಏನೋ ಮಾತುಕತೆ, ಏನೋ ಕೆಲಸದ ನಡುವೆ ಹಿರಿಯರು ಮಲಗಿರಲೇ ಇಲ್ಲ. ಸಾವಿತ್ರಿ ಎಲ್ಲಿ ಮಲಗಿದ್ದಾಳೆಂದು ತಿಳಿಯುವ ಕುತೂಹಲವಾಗಿತ್ತು ರಾಜೇಂದ್ರನಿಗೆ. ಆದರೆ ತಿಳಿಯಲಿಲ್ಲ.

ಮಾರನೇ ದಿನವೇ ನಾಮಕರಣ ಸಮಾರಂಭ. ಸಮಾರಂಭ ತಾತನ ಮನದಾಸೆ ಯಂತೆ ಅದ್ಧೂರಿಯಾಗಿ ನಡೆಯಿತು. ಮಗುವಿಗೆ, ದೇವರ ಹೆಸರು, ಹಿರಿಯರ ಹೆಸರುಗಳನ್ನಿಟ್ಟಾದ ಮೇಲೆ, ವ್ಯವಹಾರ ನಾಮ ಏನಿಡೋಣ ಎಂದು ಕೇಳಿದಾಗ ಮುಕುಂದ ‘ಸಾಹಸ್’ ಎಂದು ಇಡೋಣ ಎಂದ. ಎಲ್ಲರೂ ಮುಖ ಮುಖ ನೋಡಿಕೊಂಡರು.

“ಎಂತಹ ಹೆಸರೋ ಇದು!...” ಶಾಂತಿ ಕೇಳಿದಳು.

“ಈಗಲೇ ಏನು ಸಾಹಸ ಮಾಡಿದಾನೆ?” ರಾಜೇಂದ್ರ ಗೇಲಿ ಮಾಡಿದ. ಮುಕುಂದ ಗಂಭೀರವಾಗಿ ಹೇಳಿದ.

“ನಾನೆಲ್ಲಾ ಯೋಚಿಸಿಯೇ ಇಟ್ಟಿದೀನಿ. ಅವನು ಹುಟ್ಟಿ ಬಂದದ್ದೇ ಒಂದು ಸಾಹಸ. ಹನ್ನೆರಡು ವರ್ಷದಿಂದ ಅಜ್ಞಾತವಾಸದಲ್ಲಿದ್ದ ದೊಡ್ಡಪ್ಪನ್ನ ಸ್ವಸ್ಥಾನಕ್ಕೆ ಸೇರಿಸಿದ್ದು ಸಾಹಸವಲ್ಲದೇ ಮತ್ತೇನು?”

ಎಲ್ಲರೂ ತಮತಮಗೆ ತಿಳಿದ ರೀತಿಯಲ್ಲಿ ಅರ್ಥೈಸಿಕೊಂಡರು.

ಸುಕನ್ಯ ಈ ಮಗುವನ್ನು ಹಡೆಯಲು ಶ್ರಮಪಟ್ಟಿದ್ದಾಳೆ ಎಂದು ಎಲ್ಲರಿಗೂ ಗೊತ್ತಿತ್ತು. ಜತೆಗೆ ಆನಂದ ಮನೆಗೆ ವಾಪಸ್ಸಾದದ್ದು, ಮಗು ಹುಟ್ಟಿದ ಗಳಿಗೆಯ ದೆಸೆಯಿಂದ ಎಂದೂ ನಂಬಿದ್ದರು. ಯಾರೂ ಮಾತನಾಡಲಿಲ್ಲ. ಒಪ್ಪಿಗೆ ಎಂಬಂತೆ ತಲೆಯಾಡಿಸಿದರು.

"ಹೆಸರು ಚೆನ್ನಾಗಿದೆಯಾ ಸಾವಿತ್ರಿ?" ಮುಕುಂದ ಅವಳನ್ನು ಕೇಳಿದ ಅವಳು ಗಲಿಬಿಲಿಗೊಂಡರೂ "ಚೆನ್ನಾಗಿದೆ" ಎಂದುತ್ತರಿಸಿದಳು.

'ಸುಹಾಸ್, ಸಾಹಸ್' ಎಂದು ಹೆಸರೂ ಚೆನ್ನಾಗಿದೆ ಎಂದುಕೊಂಡರು ಎಲ್ಲರೂ. ಆಶೀರ್ವಾದ, ಉಡುಗೊರೆಗಳ ಗದ್ದಲ ಮುಗಿದ ಮೇಲೆ, ಪಂಕ್ತಿ, ಪಂಕ್ತಿಯಾಗಿ ಊಟದ ಕಾರ್ಯಕ್ರಮ. ಊಟಕ್ಕೆ ಬಂದಿದ್ದ ಜನಗಳನ್ನು ನೋಡಿ, ಸುರೇಶನ ತಂದೆ ತಾಯಿ ಗಾಭರಿಗೊಂಡರು. ಒಂದು ಮದುವೆ ಮನೆಗೆ ಬರುವಷ್ಟು ಜನ!

"ದಿನಾ ಒಬ್ಬರನ್ನೊಬ್ಬರು ನೋಡುತ್ತಲೇ ಇರ್ತೀವಿ. ಕರೀಲೇ ಬೇಕಾಗುತ್ತೆ. ಅವರುಗಳ ಮನೆ ಸಮಾರಂಭಕ್ಕೆ ನಾವೂ ಹೋಗ್ತೀವಿ" ಚಿಕ್ಕಪ್ಪ ನುಡಿದಿದ್ದರು. ಮೂರು ಗಂಟೆಯ ಹೊತ್ತಿಗೆ ಎಲ್ಲರ ಊಟ ಮುಗಿದಿತ್ತು.

"ಎಲ್ಲಾ ಒಂದು ಘಳಿಗೆ ಸುಧಾರಿಸಿಕೊಂಡು ಎದ್ಬಿಡಿ. ಸಾಯಂಕಾಲ ಮಕ್ಕಳಿಗೆ ಆರತಿ ಮಾಡಬೇಕು ಯಾರೂ ಎಲ್ಲೂ ಹೋಗಬೇಡಿ" ಸರಸ್ವತಿ ಹೇಳಿದ್ದಳು.

"ಆರುಗಂಟೆಯ ಹೊತ್ತಿಗೆ ಎಲ್ಲಾ ರೆಡಿಯಾಗಿರಬೇಕು" ಶಾಂತಿ ತನ್ನ ಸ್ವರ ಸೇರಿಸಿದ್ದಳು.

ಎಲೆ ಅಡಿಕೆ ತಟ್ಟೆ ಖಾಲಿಯಾಗುವ ಹೊತ್ತಿಗೆ ಕಾಫಿ ಬಂತು. ಎಲ್ಲರೂ ಕಾಫಿ ಕುಡಿದು ಎದ್ದರು. ಮುಖ ತೊಳೆದು ತಲೆ ಬಾಚಿ ಅಲಂಕರಿಸಿಕೊಳ್ಳಬೇಕಾಗಿತ್ತು.

ನಡುಮನೆಯಲ್ಲಿ ಒಂದು ಕಡೆ ಎರಡು ಹಸೆಮಣೆಗಳನ್ನು ಹಾಕಿ, ರಂಗೋಲಿ ಇಟ್ಟು, ಕಾಲುದೀಪಗಳನ್ನು ಹಚ್ಚಿಟ್ಟರು.

ಸುಕನ್ಯ, ಸರಳ, ಸಾವಿತ್ರಿ ಒಂದೇ ರೀತಿಯ ಬೇರೆ ಬೇರೆ ಬಣ್ಣದ ಸೀರೆಗಳನ್ನುಟ್ಟು, ತಮಗೆ ಒಪ್ಪುವಂತೆ ಅಲಂಕರಿಸಿಕೊಂಡು ಬಂದಾಗ, ಎಲ್ಲರ ದೃಷ್ಟಿಯೂ ಅವರ ಮೇಲೇಯೇ. ರಾಜೇಂದ್ರ ನೋಡಿಯೇ ನೋಡಿದ.

ಸುರೇಶನಿಗೂ ಒಂದುಗಳಿಗೆ, ಸಾವಿತ್ರಿ ಸರಳರಲ್ಲಿ ವ್ಯತ್ಯಾಸವೇ ಗೊತ್ತಾಗಲಿಲ್ಲ. ಹಾಗೇ ಒಂದೇ ತರಹ ಅಲಂಕರಿಸಿಕೊಂಡಿದ್ದರು. ಸರಳನ ಹಿಂದೆ ನಿಂತು, ಸಾವಿತ್ರಿ

ಎಂದು ಕರೆದಿದ್ದ ಮೆಲ್ಲಗೆ. ಸರಳ ನಗುತ್ತಾ ಹಿಂದಿರುಗಿ ನೋಡಿದ್ದಳು. "ಸಾವಿತ್ರಿಗೆ ಏನಾಗಬೇಕಾಗಿತ್ತು?"

"ಓ... ನೀನಾ? ನಾನು ಸಾವಿತ್ರಿ ಎಂದುಕೊಂಡಿದ್ದೆ" ಪೆಪ್ಪಾಗಿ ನುಡಿದ.

"ಸಧ್ಯ ಅವಳ ಹಿಂದೆ ಹೋಗಿ, ನಾನು ಅಂತ ಅಂದ್ಕೊಂಡು ಪೆಚ್ಚಾಗಿಲ್ವಲ್ಲಾ"

"ಒಂದು ಪ್ರಯತ್ನ ಮಾಡ್ಲಾ?" ತಮಾಷೆಯಿಂದ ಕೇಳಿದ.

"ಹೂಂ. ಮಾಡಿ ಮನೆಯವರೆಲ್ಲ ಕಲ್ಲು ತಗೊಂಡು ಹೊಡೀತಾರೆ"

"ನೀನೇನು ಮಾಡ್ತೀಯಾ?"

"ತಿಳೀದೇ ಮಾಡಿದ್ದಾದರೆ ಕ್ಷಮಿಸಿ ಬಿಡ್ತಿದ್ದೆ. ತಿಳಿದೇ ಮಾಡಿದ್ರೆ.... ಡೈವೋರ್ಸ್..."

ಸುರೇಶ ಬೆಚ್ಚಿದ. "ಅಬ್ಬಾ! ಇವಳು ಖಂಡಿತಾ ಸರಳಾ ಅಲ್ಲ."

"ಹಾಗಾದ್ರೆ ನೀನು ಸರಳ ಅಲ್ಲ. ಸಾವಿತ್ರೀನೇ" ನಗುತ್ತಾ ನುಡಿದ.

"ಸರಳ ಯಾವ ಕಾಲಕ್ಕೂ ಮೆತ್ತಗಿರಲು ಸಾಧ್ಯವಿಲ್ಲ.. ಹಾಗೇ ಸಾವಿತ್ರೀನೂ ಸದಾಕಾಲವೂ ಜೋರಾಗಿರಲು ಸಾಧ್ಯವಿಲ್ಲ."

ವಿನಾಕಾರಣ ಜೋರಾಗಿ ನಕ್ಕ. "ಮುಕುಂದನಿಗೆ ಈ ತಾಪತ್ರಯವೇ ಇಲ್ಲ. ಸುಕನ್ಯ ಒಬ್ಬರೇ ಬೇರೆತರಹ ಅಲ್ವಾ?"

"ಸಧ್ಯ... ಅವಳೂ ನಮ್ಮ ಹಾಗೇ ಇದ್ದು, ಮೂರು ಜನವೂ ಒಂದೇ ತರಹ ಇದ್ದಿದ್ರೆ ಏನೇನು ಫಜೀತಿ ಆಗ್ತಿತ್ತೋ.." ಎಲ್ಲರೂ ಇವರುಗಳ ಕಡೆಗೆ ನೋಡ್ತಿದ್ದರು. ಸರಳ ನಾಚಿ ಹೊರಗೆ ಬಂದಳು.

ಆರತಿಗೆ ಎಲ್ಲಾ ಸಿದ್ಧವಾಗಿತ್ತು. ಯಾರೋ ಹಿರಿಯ ಮುತ್ತೈದೆ, ಹಸೆಗೆ ಕರೆದ ಹಾಡನ್ನು ಕೆಳದನಿಯಲ್ಲಿ ಶುರು ಮಾಡಿದಳು.

ಸರಳ, ಸುಕನ್ಯ ಇಬ್ಬರನ್ನೂ ಹಸೆಮಣೆ ಮೇಲೆ ಕೂರಿಸಿ, ಮಕ್ಕಳನ್ನು ತೊಡೆಯ ಮೇಲೆ ಮಲಗಿಸಿದರು. ಆಕೆ ಹಾಡು ಮುಗಿಸುವುದನ್ನೇ ಕಾದಿದ್ದ ವಿಮಲ ಸಾವಿತ್ರಿಯನ್ನು ಕೇಳಿಕೊಂಡಳು.

"ರೀ, ಸಾವಿತ್ರಿ, ನೀವೊಂದೆರಡು ಹಾಡನ್ನು ಹೇಳಿ, ಎಷ್ಟು ಚೆನ್ನಾಗಿ ಹಾಡ್ತೀರಾ. ಮನೆಯವರೆಲ್ಲ ಕೇಳಲಿ" ಸಾವಿತ್ರಿ ನಾಚಿದಳು. ಸುರೇಶ ಅವಳ ಬಳಿಗೆ ಬಂದ.

"ಸಾವಿತ್ರಿ, ಹಾಡು... ಇಂತಹ ಅವಕಾಶ ನಿನಗೆ ಮತ್ತೆ ಸಿಗುವುದಿಲ್ಲ"

ಅವನ ನುಡಿಯಲ್ಲಿದ್ದ ಪ್ರೀತಿ ಸಹಿತ ಪ್ರೋತ್ಸಾಹವನ್ನು ಗುರುತಿಸಿದ

ಸಾವಿತ್ರಿ ಹಾಡಲು ಪ್ರಾರಂಭಿಸಿದಳು.

ಮಾತುಕತೆ ನಡೆಸುತ್ತಿದ್ದವರೆಲ್ಲಾ ಮೌನವಾಗಿ ಅವಳ ಕಡೆಗೆ ತಿರುಗಿದರು. ರಾಜಗಾಂಭೀರ್ಯದಿಂದ ಕುಳಿತು, ಕಂಚಿನ ಕಂಠದಲ್ಲಿ ಹಾಡುತ್ತಿದ್ದ ಸಾವಿತ್ರಿಯನ್ನೇ ತದೇಕಚಿತ್ತದಿಂದ ನೋಡಿದರು. ಸಂಗೀತದಲ್ಲಿ ಅಭಿರುಚಿ ಇದ್ದವರೂ, ಇಲ್ಲದಿದ್ದವರೂ, ಅವಳ ಹಾಡಿನ ಮೋಡಿಗೆ ಒಳಗಾಗಿದ್ದರು.

ಎರಡು ಕೀರ್ತನೆ, ಎರಡು ದೇವರ ನಾಮಗಳನ್ನು ಹಾಡಿ ಎಲ್ಲರನ್ನೂ ರಂಜಿಸಿದ್ದಳು. ವಿಮಲ ಮಧುಮತಿಯರ ಕೋರಿಕೆಯ ಮೇಲೆ ಮತ್ತೆರಡು ಭಾವ ಗೀತೆಗಳನ್ನು ಹಾಡಿದಳು. ಹಾಡು ಮುಗಿದ ಮೇಲೆ ಸಭಿಕರ ಭಾರಿ ಚಪ್ಪಾಳೆ ಅವಳನ್ನು ಅಭಿನಂದಿಸಿತು.

ಸುರೇಶ ಮುಕುಂದ ಒಟ್ಟಾಗಿ ಅವಳನ್ನು ಶ್ಲಾಘಿಸಿದರು.

ಎಲ್ಲರ ಆಕರ್ಷಕ ಬಿಂದುವಾಗಿದ್ದ ಸಾವಿತ್ರಿ, ಉದ್ವೇಗ, ಸಂತೋಷ ನಾಚಿಕೆಗಳಿಂದ ಗುಲಾಬಿ ವರ್ಣಕ್ಕೆ ತಿರುಗಿದ್ದಳು. ತಾತ ಕುಳಿತಲ್ಲಿಂದಲೇ ಜೋರಾಗಿ ಹೇಳಿದ್ದರು.

"ಜಾನಕೀ, ಮಕ್ಕಳಿಗೆ ದೃಷ್ಟಿ ನೀವಾಳಿಸಿ ತೆಗೆಯುವಾಗ ಮರೆಯದೇ ಈ ಹುಡುಗಿಗೂ ನೀವಾಳಿಸಿ ತೆಗಿ. ಎಷ್ಟು ಜನರ ದೃಷ್ಟಿ ತಗುಲಿದೆಯೋ"

ಸುಭದ್ರಮ್ಮನಿಗೆ ಮುಜುಗರವೆನಿಸಿತು.

"ಹಾಡು ಅಂತ ಅಂದಿದ್ದೇ ಸಾಕು ಅಂತ, ಅದೆಷ್ಟು ಹಾಡಿದ್ದು. ಸ್ವಲ್ಪನಾದ್ರೂ ಘನ ಗಂಭೀರ ಬೇಡವೇ?" ಪಕ್ಕದಲ್ಲಿ ನಿಂತು ಕೇಳಿದಳು.

"ಹಾಡಿದ್ರೆ ಗಂಭೀರ ಕಡಿಮೆಯಾಗುತ್ತೆ ಅಂತ ನೀನು ಒಬ್ಬಳೇ, ಅದೂ ಇವತ್ತಿನ ದಿನ ನುಡಿದಿದ್ದು. ನಿನಗೆ ನಾನು ಖುಷಿಯಾಗಿರುವುದನ್ನು ಕಂಡರೇ ಆಗುವುದಿಲ್ಲ" ಸಾವಿತ್ರಿ ಮುನಿಸಿನಿಂದ ನುಡಿದಳು.

"ಯಾರ್‍ಯಾರ ಕಣ್ಣು ಹೇಗಿರುತ್ತೋ, ಎಲ್ಲರ ಕಣ್ಣು ಕುಕ್ಕುವ ಹಾಗೆ ಅಲಂಕರಿಸಿಕೊಂಡಿರುವುದು ಸಾಲದು ಅಂತ ಹಾಡು ಹೇಳಿ ಎಲ್ಲರನ್ನು ನಿನ್ನ ಕಡೆಗೇ ಆಕರ್ಷಿಸಿಕೊಂಡಿದೀಯ.... ನಿನಗೇನಾದರೂ ಆದರೆ....?

"ಇನ್ನೇನೇನು ಆಗುಕ್ಕೆ ಸಾಧ್ಯ? ಏನೇನು ಆಗಬೇಕಾಗಿತ್ತೋ ಅದೆಲ್ಲಾ ಆಗಿ ಹೋಯ್ತಲ್ಲಾ. ಇನ್ನೇನೂ ಬಾಕಿ ಇಲ್ಲ. ನಾನೀಗ ಶಾಪಮುಕ್ತೆ"

"ಶ್ ಮೆಲ್ಲಗೆ, ಆ ಮಾತನ್ಯಾಕೆ ಆಡ್ತೀಯಾ! ಯಾರಿಗಾದ್ರೂ ಕೇಳಿಸೀತು."

ನೀನೇ ಶುರು ಮಾಡಿದ್ದು. ನನಗೇನೂ ಅದನ್ನೆಲ್ಲ ಆಡುವ ಆಸೆ ಇಲ್ಲ"

ಆರತಿ ಮುಗಿದ ಮೇಲೆ, ಸರಳ ಸಾವಿತ್ರಿಯ ಹತ್ತಿರ ಬಂದು 'ಶಾಭಾಸ್' ಎಂದು ಹೊಗಳಿದ್ದಳು. ಸುಕನ್ಯಳ ಮನಸ್ಸು ಕಲಕಿ ಹೋಗಿತ್ತು. ತನ್ನ ಗಂಡನ ಮನೆಯಲ್ಲಿ ಅವಳು ಎಲ್ಲರ ಕೇಂದ್ರ ಬಿಂದುವಾದದ್ದು ಅವಳಿಗೆ ಹಿತವಾಗಿರಲಿಲ್ಲ.

"ಯಾರಾದ್ರೂ ಹಾಡು ಅಂತ ಹೇಳಿ ಬಿಟ್ರೆ ಸಾಕು, ಬಾಯಿ ತೆಗೆದೇ ಬಿಡ್ತೀಯಲ್ಲಾ"

"ಹೇಳಿದರೆ ತಪ್ಪೇನು? ಕಲಿತಿರುವುದೇ ಅದಕ್ಕಲ್ವಾ?" ಸರಳ ಕೇಳಿದಳು.

"ಸರಿಯಾಗಿದೀಯಾ ನೀನೂನೂ, ನೀನೂ ಏಕೆ ಹಾಡಲಿಲ್ಲ?"

"ಬಾ...ಈಗ ನಾವಿಬ್ಬರೂ ಹಾಡೋಣ" ಸರಳ ನಕ್ಕಳು.

"ನಿನಗೆ ತಮಾಷೆ ಆಮೇಲೆ ಈ ಹಳ್ಳಿ ಜನರು ಆಡಿಕೊಂಡು ನಕ್ಕರೆ?"

"ನಕ್ಕರೆ ನಗಲಿ. ಇಲ್ಲಿ ನಾವ್ಯಾರೂ ಇರಬೇಕಾಗಿಲ್ಲವಲ್ಲ. ಅಲ್ಲದೇ ಸಾವಿತ್ರಿಯೇನೂ ಅಷ್ಟು ಕಳಪೆಯಾಗಿ ಹಾಡಲಿಲ್ಲವಲ್ಲ"

"ನಿನಗೆ ಅವಳನ್ನು ಹೊಗಳುವುದು ಅಂದರೆ ಎರಡೆರಡು ಬಾಯಿ"

"ಅವಳು ಹೊಗಳಿಸಿಕೊಳ್ಳುವಂತೆಯೇ ಹಾಡಿದಾಳೆ"

"ನನಗೋಸ್ಕರ ಈ ವಾದ ಏಕೆ? ಸುಮ್ಮನಿರಿ." ಸಾವಿತ್ರಿ ಮಧ್ಯೆ ನುಡಿದಳು.

ಜಾನಕಮ್ಮ ಮಕ್ಕಳಿಗೆ ದೃಷ್ಟಿ ತೆಗೆಯುವಾಗ ಮರೆಯದೇ ಸಾವಿತ್ರಿಗೂ ತೆಗೆಯಲು ಅನುವಾದಳು. ಆದರೆ ಎಲ್ಲರ ಎದುರಿಗಲ್ಲ. ಬಚ್ಚಲುಮನೆಯಲ್ಲಿ ಪೊರಕೆ ಕಡ್ಡಿಗಳನ್ನು ಹಚ್ಚಿದಳು.

"ಬೇಡಾ ಬೇಡಾ. ಪ್ಲೀಸ್" ಸಾವಿತ್ರಿ ಗೋಗರೆದಳು. "ನಾನು ದೊಡ್ಡವಳು. ಅಲ್ಲದೇ ನಾನಿದನ್ನೆಲ್ಲ ನಂಬುಲ್ಲ."

"ತಾತ ಹೇಳಿದ ಮೇಲೆ ಮುಗಿಯಿತು" ಚಿಕ್ಕಮ್ಮ ನುಡಿದಳು.

ಅಷ್ಟರಲ್ಲಿ ಮುಕುಂದ ಬಂದು ಸಾವಿತ್ರಿಯನ್ನು ಹೊರಕ್ಕೆ ಎಳೆದ. ತಾಯಿಯ ಕೈಗಳಿಂದ ಉರಿಯುತ್ತಿದ್ದ ಪೊರಕೆ ಕಡ್ಡಿಗಳನ್ನು ಕಿತ್ತುಕೊಂಡು ಆರಿಸಿದ.

"ಯಾವ ಕಾಲದಲ್ಲಿ ಇದೀಯಾ ನೀನು....? ಅವರೆಲ್ಲಾ ನಗ್ತಾರೆ. ತಾತ ಹೇಳಿದ ಎಲ್ಲಾ ಮಾತುಗಳನ್ನು ಕೇಳ್ಬೇಕೇ ನೀನು?" ಸಾವಿತ್ರಿ ಓಡಿ ಹೋದಳು.

"ಯಾರು ಏನೇ ಹೇಳಲಿ ಬಿಡಲಿ, ಇವಳೂ ಹಾಗೇ ಇದಾಳೆ ಕಣೋ"

"ಬಂದವರ ಕಣ್ಣೆಲ್ಲಾ ಇವಳ ಮೇಲೇ... ನಮ್ಮ ಕಡೆ ಯಾರಿದಾರೆ ಇಂತಹ

ವಳು ನೀನೇ ಹೇಳು... ಎಲ್ಲಾ ರಾಜೇಂದ್ರನ ಹೆಂಡತಿಯಾಗುವವಳೇ ಅಂತ ಕೇಳು ವವರೇ...?"

"ಸಧ್ಯ, ಹೌದು ಅಂತ ಅನ್ನಲಿಲ್ಲ ತಾನೇ ನೀನು...?"

"ನಾನು ಅನ್ನಲಿಲ್ಲ. ಅವಳು ಅವನನ್ನು ಒಪ್ಪಬೇಕಲ್ಲ"

"ಅಷ್ಟಾದರೂ ತಿಳಿತಲ್ಲ. ಅವನನ್ನು ಮದುವೆಯಾಗುವ ಬದಲು, ಅವಳು ಹಾಳು ಬಾವಿಗೆ ಬೀಳುವುದು ಲೇಸು."

"ಯಾಕೋ ಹಾಗಂತೀಯಾ? ಅವನೂ ನಿನ್ನ ತಮ್ಮನೇ ತಾನೇ. ಅವನನ್ನು ಸರಿ ಮಾರ್ಗಕ್ಕೆ ತರಬೇಡವೆ?"

"ಅದಕ್ಕೆ ಈ ಸಾವಿತ್ರಿ ತಕ್ಕವಳಲ್ಲ. ಈ ಹಳ್ಳಿಯಲ್ಲಿ ಅವನನ್ನು ಮಾರ್ಗಕ್ಕೆ ತರುವ ಯಾವುದಾದರೂ ಹುಡುಗಿಯಿದ್ದರೆ, ಅವರಲ್ಲಿ ಒಬ್ಬರನ್ನು ಹುಡುಕಿ ಅವನಿಗೆ ಗಂಟು ಹಾಕು... ಅವನು ಹೋಗುವ ದಾರಿ ನಿನಗೇ ತಿಳಿಯುತ್ತೆ."

"ನನಗಂತೂ ಅರ್ಥವಾಗ್ತಿಲ್ಲ ನಿನ್ನ ಮಾತು. ಹಳ್ಳಿಯ ಹುಡುಗಿ ಬೇಡವಂತೆ ಅವನಿಗೆ."

"ದೇವಲೋಕದ ಹುಡುಗಿ ಬೇಕಂತಾ ಈ ದೇವೇಂದ್ರನಿಗೆ? ಅವನಿಗೆ ಮದುವೆ ಒಂದು ಕೇಡು. ಮೊದಲು ಅವರಿವರ ಸಹವಾಸ ಬಿಟ್ಟು, ನೇರವಾಗಿವುದನ್ನು ಕಲಿಯಲಿ. ಮುಕುಂದ ಹೊರಗೆ ಬಂದ. ಹೊರಗೆ ಅವರುಗಳ ಮಾತನ್ನಾಲಿಸುತ್ತಿದ್ದ ರಾಜೇಂದ್ರ ಮುಕುಂದನನ್ನು ಕಂಡೊಡನೆ ಹಿಂದಕ್ಕೆ ಸರಿದ. ಅವನ ಮೇಲೆ ಹಲ್ಲುಗಳನ್ನು ಮಸೆದ.

ನಿಟ್ಟುಸಿರು ಬಿಟ್ಟು, ಜಾನಕಮ್ಮ ತನ್ನ ಕೆಲಸದ ಕಡೆಗೆ ಗಮನ ಕೊಟ್ಟಳು. ರಾಜೇಂದ್ರ ಸಾವಿತ್ರಿ ಎಲ್ಲಿದಾಳೆ ಎಂದು ಅರಸುತ್ತಾ ನಡೆದು ಹೆಂಗಸರ ನಡುವೆ ಕುಳಿತು ತನಗೆ ಬೇಕಾದುದನ್ನು ಕೇಳಿ ತಿಳಿದುಕೊಳ್ಳುತ್ತಿದ್ದ ಅವಳನ್ನೇ ನೋಡುತ್ತಾ ಮರೆಯಲ್ಲಿ ನಿಂತ. ಸಾವಿತ್ರಿ... ಸಾವಿತ್ರೀ... ಅವನ ಮನಸ್ಸು ಅವಳನ್ನು ಬಯಸಿತು. ಮೈ ಬಿಸಿ ಯಾಯಿತು. ಕೆಂಗಣ್ಣಿನಿಂದ ಅವಳನ್ನೇ ನೋಡುತ್ತಿದ್ದವನನ್ನು ಚಿಕ್ಕಪ್ಪ ಎಚ್ಚರಿಸಿದರು.

"ಇದೇನು ಇಲ್ಲಿ ಮರೇಲಿ ನಿಂತು ಏನು ಮಾಡ್ತಿದೀಯಾ... ದನಗಳಿಗೆ ಹುಲ್ಲು ಹಾಕಿ ಬಾ.. ಹೊತ್ತಾಗುತ್ತೆ."

ಚಿಕ್ಕಪ್ಪನ್ನೇ ದುರು ದುರು ನೋಡಿ ಅಲ್ಲಿಂದ ಸರಿದ.

ತೀರ್ಥಹಳ್ಳಿಗೆ ಹತ್ತಿರದಲ್ಲಿದ್ದ ಆಗುಂಬೆಯಲ್ಲಿ ಸೂರ್ಯಾಸ್ತಮಾನ, ಗಾಜ

ನೂರಿನ ಡ್ಯಾಂ, ಮಂಡಗದ್ದೆ ಬಿಳಿಯ ಪಕ್ಷಿಧಾಮ, ಸಮೀಪದ ಪಾರ್ಕ್‌ನಲ್ಲಿನ ಟೈಗರ್ ಸಫಾರಿಗೆ, ಹೀಗೆ ಸುತ್ತಾಡಿ ಬರಲು ಕಾರ್ಯಕ್ರಮವನ್ನು ಹಾಕಿಕೊಂಡರು. ಅದರಂತೆ ಮಾರನೇ ದಿನ, ಒಂದು ಮೆಟಡೋರ್ ವ್ಯಾನ್‌ನನ್ನು ಗೊತ್ತು ಮಾಡಿಕೊಂಡು, ಆಸೆ ಇದ್ದವರು, ಅನುಕೂಲವಾದವರು ಎಲ್ಲರೂ ಹೊರಟರು.

ಸರಳ ಸುಕನ್ಯ, ಹೊರಡುವುದೋ ಬೇಡವೋ, ಎಂದು ಇನ್ನೂ ವಾದ ವಿವಾದ ಮುಗಿಸಿರಲಿಲ್ಲ. ಅಷ್ಟರಲ್ಲಿ ಲಕ್ಷ್ಮಿ ಹೇಳಿದ್ದಳು.

ಮತ್ತೆ ಮತ್ತೆ, ಅವರುಗಳೆಲ್ಲ ಬಂದು ಸುತ್ತಾಡಿ ನೋಡುಕ್ಕೆ ಆಗುತ್ಯೆ? ಒಂದು ದಿನದ ಕಾರ್ಯಕ್ರಮ ತಾನೇ, ಹೇಗೂ ಮಕ್ಕಳಿಗೆ ಮೇಲಿನ ಹಾಲು,... ನಾವುಗಳು ನೋಡಿಕೊಳ್ತೀವಿ ಪರವಾಗಿಲ್ಲ. ಅವರುಗಳು ಹೋಗಿ ಬರಲಿ. ಆ ಮಾತನ್ನು ಶಾಂತಿಯೂ ಅನುಮೋದಿಸಿದಳು. ಹಾಗಾಗಿ, ಸರಳ ಸುಕನ್ಯರೂ ಹೊರಟರು. ಮುಂಚೆಯೇ ವ್ಯಾನ್‌ಗೆ ಬುಕ್ ಮಾಡಿದ್ದರಿಂದ, ವ್ಯಾನ್ ಮನೆ ಬಾಗಿಲಿಗೇ ಬಂದು ನಿಂತಿತ್ತು.

ಬೆಂಗಳೂರಿನವರೆಲ್ಲರ ಜತೆಗೆ, ರಾಜೇಂದ್ರ ವಿಮಲ, ಮಧುಮತಿ, ಹಾಗೂ ಚಿಕ್ಕಮ್ಮ ಚಿಕ್ಕಪ್ಪ ಸಹ ಸೇರಿಕೊಂಡರು. ಸರಸ್ವತಿಯನ್ನು ಬಲವಂತದಿಂದ ಹೊರಡಿಸಿದ್ದ ಮುಕುಂದ. ಶಾಂತಿ ಮನೆಯಲ್ಲಿಯೇ ಇದ್ದು ತಾಯಿಯೊಡನೆ ಮಾತನಾಡುತ್ತಾ ಕಾಲ ಕಳೆಯುವ ಹಂಬಲವನ್ನು ವ್ಯಕ್ತಪಡಿಸಿದ್ದಳು. ತಾಯಿಗೆ ದೂರವಿದ್ದ ಮಕ್ಕಳು ಹತ್ತಿರ ಬಂದಿದ್ದಾಗ, ಬಾಯ್ತುಂಬಾ ಮಾತನಾಡುವ ಆಸೆ.

ಊಟ, ತಿಂಡಿ, ಕಾಫಿ, ಬಿಸ್ಕತ್ತು ಹಣ್ಣುಗಳನ್ನು ಸಾಕಷ್ಟು ಚೀಲಗಳಲ್ಲಿ ತುಂಬಿಸಿಕೊಂಡು ಸಿದ್ಧರಾಗಿದ್ದರು. ವ್ಯಾನು ಹೊರಟಿತು.

ಸರಳ, ಸಾವಿತ್ರಿ ಕಿಟಕಿ ಬದಿಯ ಸೀಟಿನಲ್ಲಿ ಕುಳಿತು, ಹೊರಗಿನ ದೃಶ್ಯಗಳನ್ನು ನೋಡಲು ಆಸೆ ಪಟ್ಟರು. ಸುಕನ್ಯಳಿಗೆ ಆ ಆಸಕ್ತಿ ಇಲ್ಲ. ಮುಕುಂದನೊಡನೆ ಏನೇನೋ ಮಾತನಾಡುವ ಚಪಲ. ಹಿಂದಿನ ಸಾಲಿನ ಸೀಟಿನಲ್ಲಿ ಕುಳಿತ ರಾಜೇಂದ್ರ ಸರಳ ಸಾವಿತ್ರಿಯರನ್ನೇ ಗಮನಿಸುತ್ತಿದ್ದ. ಸರಳ ಈಗ, ಸುರೇಶನ ಪತ್ನಿ. ಅಲ್ಲದೇ ಒಂದು ಮಗುವಿನ ತಾಯಿ.... ಎಲ್ಲರೂ ಒಪ್ಪಿದ್ದರೆ, ತನ್ನ ಹೆಂಡತಿಯಾಗ ಬಹುದಾಗಿತ್ತು.... ಈಗ ಸಾವಿತ್ರಿ.... ನೋಡಿದರೆ ಸರಳನಷ್ಟು ಮೃದುವಲ್ಲ ಅಂತನ್ನಿಸುತ್ತೆ... ಆದರೇನು ಚೆಲುವಿನ ಖನಿ! ಒಂದು ಸಲ ಅವಳು ತನ್ನವಳಾಗಿ ಬಿಟ್ಟರೆ ಸಾಕು... ಆಮೇಲೆ ಅವಳು ತನಗೇ ದಕ್ಕಿದಂತೆ....ಆಗ ಈ ಮುಕುಂದನೂ ಏನೂ ಮಾಡಲಾರ....

ಸುರೇಶನೂ ಏನೂ ಅನ್ನಲಾರ...ಈ ಸುರೇಶ ಯಾಕೆ ಸಾವಿತ್ರಿಯ ಹಿಂದೆ ಹಿಂದೆ ತಿರುಗುತ್ತಾನೆ? ಅವಳ ಬಾಡೀಗಾರ್ಡೇ.... ಸಾವಿತ್ರಿಯನ್ನು ತಾನು ಹೇಗೆ ವಶಪಡಿಸಿ ಕೊಳ್ಳಬೇಕು ಎಂದು ಯೋಚಿಸುತ್ತಿದ್ದ.

ಪ್ರಕೃತಿ ಸೌಂದರ್ಯದ ಸೊಬಗನ್ನು ತನ್ನ ಕಣ್ಣುಗಳಲ್ಲಿ ತುಂಬಿಕೊಳ್ಳುತ್ತಿದ್ದಳು ಸಾವಿತ್ರಿ. ಒಂದು ಬದಿಯಲ್ಲಿ ಆಕಾಶವನ್ನು ಮುಟ್ಟುತ್ತಿರುವಂತಹ ಬೆಟ್ಟದ ಸಾಲು ಗಳಾದರೆ, ಇನ್ನೊಂದೆಡೆ ಪ್ರಪಾತ. ಮನಮೋಹಕವಾಗಿ ಕಾಣುವ ವೃಕ್ಷಗಳ ಸಾಲು... ಬೆಟ್ಟಗಳಿಂದ ಇಳಿಯುವ ಸಣ್ಣ ಸಣ್ಣ ಝರಿಗಳು, ತೊರೆಗಳು... ಎಲೆ ಮರಗಳ ಮರೆಯಲ್ಲಿ ಅಡಗಿ ಕುಳಿತ ಮೃಗಗಳು...ವಾಹನದ ಇಂಜನ್ನಿನ ಸದ್ದಿಗೆ ಸರ್ರನೆ ಸರಿಯುವ ದೃಶ್ಯ.... ಕಣ್ಣು ಮುಚ್ಚದೇ ಹೊರಗಿನ ದೃಶ್ಯ.... ಮರಗಳ ಮೇಲೆ ಕುಳಿತಿರುವ ಪಕ್ಷಿಗಳು ಪುರ್ರನೆ ಹಾರಿಹೋಗುವುದನ್ನು ಕಂಡು ಸಾವಿತ್ರಿಗೆ ಏನೋ ಆನಂದ. ಕಣ್ಣು ಮುಚ್ಚದೇ ಹೊರಗಿನ ದೃಶ್ಯಗಳನ್ನು ನೋಡಿಯೇ ನೋಡಿದಳು. ಅವಳಿಗಂತೂ ಇವೆಲ್ಲಾ ಹೊಸ ನೋಟಗಳು. ಹೊಸ ಅನುಭವಗಳು!

ಮೊದಲು ಗಾಜನೂರಿಗೆ ಬಂದರು. ಅಣೆಕಟ್ಟೆಯಲ್ಲಿ ಹರಿದು ಹೋಗುತ್ತಿರುವ ನೀರಿನ ಸಿರಿಯನ್ನು ನೋಡಿ, ಕೆಳಗಿಳಿದು ಬಂದು ತಿಂಡಿ ತಿನ್ನಲು ಬುತ್ತಿಗಳನ್ನು ಬಿಚ್ಚಿದರು. ಜಮಖಾನ ಹಾಸಿಕೊಂಡು ಎಲ್ಲರೂ ಕುಳಿತರು.

ಸಜ್ಜಿಗೆ, ಇಡ್ಲಿ ಚಟ್ನಿ ತಿಂಡಿಯನ್ನು ತಿಂದು ಕಾಫಿ ಕುಡಿದರು. ತಿಂಡಿ ತಿಂದ ಪಾತ್ರೆಗಳನ್ನು ತೊಳೆದು ಬರಲು ವಿಮಲ ನದಿಗೆ ಇಳಿದಳು. ಸಾವಿತ್ರಿ ತಾನೂ ಜತೆ ಯಲ್ಲಿ ಬಂದು ಇಳಿದು, ನೀರಿನಲ್ಲಿ ಕಾಲಾಡಿಸುತ್ತಾ ಕುಳಿತಳು.

ಎಷ್ಟು ಹೊತ್ತಾದರೂ ಅವರಿಬ್ಬರು ವಾಪಸ್ಸು ಬಂದಿದ್ದಾಗ, ಸರಳ ಗಾಭರಿ ಗೊಂಡು ಹುಡುಕಿಕೊಂಡು ಬಂದಳು. ಆರಾಮವಾಗಿ ಕಾಲಾಡಿಸುತ್ತಾ ಕೂತವಳ ಮೇಲೆ ರೇಗಿದಳು.

"ಎಷ್ಟು ಹೊತ್ತು ನೀರಿನಲ್ಲಿ ಆಟ? ಶೀತವಾಗುತ್ತೆ ಎದ್ದು ಬಾ... ಸಣ್ಣ ಮಗು ತರಹ ಆಡ್ತಿದೀಯಲ್ಲ"

"ನಾನೇನೂ ಚಿಕ್ಕ ಮಗುವಲ್ಲ. ನನಗೇನೂ ಆಗುಲ್ಲ. ಎಷ್ಟು ಚೆನ್ನಾಗಿದೆ ನೀರು. ಇಲ್ಲೇ ಇದ್ದು ಬಿಡೋಣ ಅಂತ ಅನ್ನಿಸ್ತಿದೆ. ನೀನು ಬಾ. ಬೇಕಾದರೆ"

"ಜಲದೇವತೆ ಬಂದು ಎಳೆದುಕೊಂಡು ಹೋದಾಳು ಅಂತ ಹೆದರಿಕೆ ನಿಮ್ಮಕ್ಕನಿಗೆ, ನಡೀರಿ...." ವಿಮಲ ನಕ್ಕಳು.

"ಜಲದೇವತೇನಾ ನೋಡಿದೀರಾ ವಿಮಲ! ಹೇಗಿರ್ತಾಳೆ....? ಸಾವಿತ್ರಿ ಮುಗ್ಧಳಂತೆ ಕೇಳಿದಳು.

"ಜಲದೇವತೆಯೂ ಇಲ್ಲ. ನದೀದೇವತೆಯೂ ಇಲ್ಲ. ಎಲ್ಲಾ ಬರೀ ಕಲ್ಪನೆ. ಒಂದು ವೇಳೆ ಇದ್ದರೂ, ಈಗಿನ ಕಾಲದ ಈ ನರರಾಕ್ಷಸರಿಗೆ ಹೆದರಿ ಅವರುಗಳು ನದೀ ತಳದಲ್ಲಿ ಅಡಗಿ ಕುಳಿತಿರ್ತಾರೆ. ನಿನಗೆಲ್ಲಿ ಕಾಣ್ತಾರೆ.. ನಡೀ ನಡೀ..." ಸರಳ ಅವಸರಿಸಿದಳು.

ನೀರಿನಿಂದ ಒದ್ದೆಯಾದ ಸೀರೆಯನ್ನು ಸ್ವಲ್ಪ ಮೇಲೆತ್ತಿ ಬರುತ್ತಿದ್ದ ಸಾವಿತ್ರಿಯನ್ನೇ ಹದ್ದಿನ ನೋಟದಿಂದ ರಾಜೇಂದ್ರನನ್ನೇ ಗಮನಿಸಿ ಅವನಿಗೆ ಅಡ್ಡವಾಗಿ ನಿಂತ ಸುರೇಶ. ಈ ಸಾವಿತ್ರಿಗೇಕೆ ತಿಳಿಯುವುದಿಲ್ಲ! ತನ್ನಲ್ಲೇ ಪ್ರಶ್ನಿಸಿಕೊಂಡ.

ಅಲ್ಲಿಂದ ಎಲ್ಲರೂ ಪಕ್ಷಿಧಾಮಕ್ಕೆ ಬಂದರು. ದೇಶದ ನಾನಾ ಮೂಲೆಗಳಿಂದ ಬಂದಿದ್ದ ನಾನಾ ಜಾತಿಯ ಪಕ್ಷಿಗಳು.... ಸುಂದರವಾದ....ವಿಚಿತ್ರವಾದ ಪಕ್ಷಿಗಳು... ನಾನಾ ರೀತಿಯ ಭಂಗಿಗಳಲ್ಲಿ ಕುಳಿತು ಕಲರವವನ್ನೆಬ್ಬಿಸಿದ್ದವು. ಮರಗಿಡಗಳ ಮೇಲೆ ಕುಳಿತಿರುವ, ಗೂಡುಗಳನ್ನು ಕಟ್ಟುತ್ತಿರುವ, ಮೊಟ್ಟೆಗಳಿಗೆ ಕಾವು ಕೊಡುತ್ತಿರುವ, ಮರಿಗಳಿಗೆ ಆಹಾರವನ್ನು ತಿನ್ನಿಸುತ್ತಿರುವ, ಪಕ್ಷಿಗಳೋ ಪಕ್ಷಿಗಳು... ಮರಿಗಳು... ಒಂದೇ ಎರಡೇ....ಎಲ್ಲೆಲ್ಲೂ ಪಕ್ಷಿಗಳೇ... ನೋಡಿ ಸುಸ್ತಾಗಿ ಅಲ್ಲಿಂದ ಹೊರಟರು.

ನೇರವಾಗಿ ಮೃಗಾಲಯಕ್ಕೆ ಬಂದರು. ಪಂಜರಗಳಲ್ಲಿ ಸಪ್ಪೆಯಾಗಿ ನಿದ್ರಿಸುವ ಭಂಗಿಯಲ್ಲಿ ಮಲಗಿರುವ, ನರಳುತ್ತಿರುವ ಕೆಲವು ಪ್ರಾಣಿಗಳನ್ನು ನೋಡಿ ಟೈಗರ್ ಸಫಾರಿಗೆ ಹೊರಟರು. ಮರಗಳ, ಪೊದೆಗಳ ಹಿಂದೆ ಎಲ್ಲಿಯೋ ಅಡಗಿ ಕುಳಿತಿರುವ ಹುಲಿಗಳನ್ನು ದೂರದಿಂದಲೇ ನೋಡಿ ತೃಪ್ತಿಪಟ್ಟುಕೊಳ್ಳಬೇಕಾಯ್ತು. ರಸ್ತೆ ಬಿಟ್ಟು ಅವುಗಳ ಹತ್ತಿರ ಹೋಗುವಂತಿಲ್ಲ... ಹಳದಿ ಕಪ್ಪು ಪಟ್ಟೆಯನ್ನು ಕಂಡು ಅದನ್ನೇ ಹುಲಿ ಎಂದು ಭಾವಿಸಿದರು ಕೆಲವರು.

ಮಧ್ಯಾಹ್ನ ಮೀರಿದ್ದುದರಿಂದ ಎಲ್ಲರೂ ಪಾರ್ಕಿನಲ್ಲೇ ಊಟ ಮುಗಿಸುವುದೆಂದು ತೀರ್ಮಾನಿಸಿದರು. ಮತ್ತೊಮ್ಮೆ ಜಮಖಾನವನ್ನು ಹಾಸಿ ಎಲ್ಲರೂ ಕುಳಿತರು. ಚಿಕ್ಕಮ್ಮ, ವಿಮಲ ಎಲ್ಲರಿಗೂ ದೊನ್ನೆಗಳಲ್ಲಿ ಹುಳಿಯನ್ನ, ಮೊಸರನ್ನವನ್ನು ಬಡಿಸಿ ಕೊಟ್ಟರು. ಜತೆಗೆ ನೆಂಜಿಕೊಳ್ಳಲು ಉಪ್ಪಿನಕಾಯಿ, ಹಲಸಿನ ಹಪ್ಪಳ....ಊಟ ತುಂಬಾ ರುಚಿಯಾಗಿದ್ದಿತು. ಹೊಟ್ಟೆಭಾರದಿಂದ ಆಯಾಸವಾದವರಂತೆ ಅಲ್ಲಲ್ಲೇ ಒರಗಿ ಕುಳಿತರು ಕೆಲವರು.

ಸರಳ, ಸುರೇಶ, ಮುಕುಂದ, ಸುಕನ್ಯ ಜತೆ ಜತೆಯಾಗಿ ಅಲ್ಲಲ್ಲೇ ತಿರುಗಾಡಿ ಬರಲು ಹೊರಟರು. ಸಾವಿತ್ರಿ, ವಿಮಲ, ಮಧು ಮತ್ತೊಂದು ಕಡೆಗೆ ಹರಟುತ್ತಾ ನಡೆದರು. ಅವರ ಹಿಂದೆ ರಾಜೇಂದ್ರ ಬೆನ್ನಿಗೆ ಕೈ ಕಟ್ಟಿ ಹೆಜ್ಜೆ ಹಾಕಿದ ಕಳ್ಳನಂತೆ.

ಒಂದು ಮರದ ಕೆಳಗೆ, ಹಾಸನ್ನು ಹಾಸಿದಂತೆ ಕಂಡ, ಉದುರಿದ ಹೂವನ್ನು ಗಮನಿಸಿ ಸಾವಿತ್ರಿ ನಿಂತಳು. ಹೊಸದಾಗಿ ಉದುರಿದ್ದ ಹೂಗಳನ್ನು ಆರಿಸಿ ತನ್ನ ಮಡಿಲಿಗೆ ತುಂಬಿಕೊಂಡಳು. ತಿಂಡಿ ತಿನಿಸುಗಳಿಗೆ ಕಟ್ಟಿದ್ದ ದಾರಗಳನ್ನು ಸೇರಿಸಿ ಹೂಗಳನ್ನು ಕಟ್ಟಲು ಅನುವಾದಳು. ಕಲ್ಲು ಬೆಂಚಿನ ಮೇಲೆ ಕುಳಿತು, ಹೂಗಳನ್ನು ಜೋಡಿಸಿ ಕಟ್ಟುತ್ತಿದ್ದ ಅವಳ ಕೈ ಚಳಕವನ್ನೇ ನೋಡುತ್ತಾ ನಿಂತ ರಾಜೇಂದ್ರ ಅಲ್ಲಿಯೇ ನಿಂತ.

ದಾರ ಮುಗಿಯುವವರೆಗೂ ಸಾವಿತ್ರಿ ಹೂಗಳನ್ನು ಕಟ್ಟಿ, ಒಂದು ಹಾರವನ್ನು ಸಿದ್ಧಪಡಿಸಿದಳು. ಕೈಯಲ್ಲಿ ಹಾರ ಹಿಡಿದು ಎದ್ದು ನಿಂತಳು. ತಿರುಗಾಡಲು ಹೊರಟವರೆಲ್ಲರೂ ಅವಳ ಎದುರಿಗೆ ಬಂದು ನಿಂತಿದ್ದರು. ಸಾವಿತ್ರಿ ಕೆಂಪಾದಳು.

ವನದೇವತೆಯೊಬ್ಬಳು, ವನಮಾಲೆ ಹಿಡಿದು, ತಾನು ವರಿಸಲಿರುವವನನ್ನು ಕಾಯುತ್ತಾ ನಿಂತಿರುವಂತೆ ಭಾಸವಾಯಿತು ಮುಕುಂದನಿಗೆ. ಆ ಭಂಗಿಯನ್ನು ಕಂಡು, ಕ್ಯಾಮೆರಾ ತಂದಿದ್ದರೆ ಎಷ್ಟು ಚೆನ್ನಾಗಿತ್ತೆನಿಸಿತ್ತು. ಅವಳನ್ನು ಮೊದಲ ಬಾರಿಗೆ ಕಂಡವನಂತೆ ಮುಗುಳ್ನಗೆಯಿಂದ, ನೋಡಿ,

"ಯಾರಿಗಾಗಿ ಈ ಹಾರ ಸಾವಿತ್ರೀದೇವಿ...?" ತಮಾಷೆಯಾಗಿ ಕೇಳಿದ ಸಾವಿತ್ರಿ ನಾಚಿ, ಸುರೇಶನ ಕಡೆ ನೋಡಿದಳು. ಸುರೇಶ ಗೆಲುವಿನ ನಗೆಯನ್ನು ನಕ್ಕ. ಅವರುಗಳ ಹಿಂದೆ ನಿಂತಿದ್ದ ರಾಜೇಂದ್ರ ತನ್ನ ಕೊರಳನ್ನು ಸವರಿಕೊಂಡು, ಷರಟಿನ ಕಾಲರನ್ನು ಎತ್ತಿಕೊಳ್ಳುತ್ತಾ ಮುಂದೆ ಬಂದ ಸುರೇಶನಿಗೆ ತಾನು ಅವಳನ್ನು ಮೊದಲ ದಿನ ನೋಡಿದ ಘಳಿಗೆ ನೆನಪಿಗೆ ಬಂತು. "ಸಾವಿತ್ರೀ ಸ್ವಯಂವರ" ಎಂದು ಚಪ್ಪಾಳೆ ತಟ್ಟಿದ. ರಾಜೇಂದ್ರ ನಕ್ಕು ತಾನೂ ಚಪ್ಪಾಳೆ ತಟ್ಟಿದ. ಇಬ್ಬರಿಗೂ ಅವನ ಆಗಮನ ಸರಿ ಎನಿಸಲಿಲ್ಲ. ಸಾವಿತ್ರಿ ಬೆಚ್ಚಿ ಆ ಹಾರವನ್ನು ಕೈ ಬಿಟ್ಟಳು. ಹಾರ ನೆಲವನ್ನು ಸೇರಿತು. ಸುರೇಶ ಅಲ್ಲಿ ನಿಂತಿದ್ದ ರಾಜೇಂದ್ರನ ಮೇಲೆ ಹಲ್ಲು ಕಡಿದ.... ಸಾವಿತ್ರಿ ಅಲ್ಲಿ ನಿಲ್ಲದೇ ಸರಳ ಸುಕನ್ಯ ನಿಂತಿದ್ದೆಡೆಗೆ ಬಂದಳು. ಎಲ್ಲರೂ ಅವಳು ನಾಚಿದಳೆಂದೇ ಭಾವಿಸಿದರು. ಸರಳ ತಂಗಿಯ ಭುಜವನ್ನು ಒತ್ತಿ ಹಿಡಿದಳು. ಸುಕನ್ಯ ಸಾವಿತ್ರಿಯನ್ನೇ ದುರು ದುರು ನೋಡಿ ಮೌನಿಯಾದಳು. ಎಲ್ಲರೂ, ಉಳಿದವರು ಕುಳಿತಿ

ದ್ದಡೆಗೆ ಹೆಜ್ಜೆ ಹಾಕಿದರು. ರಾಜೇಂದ್ರ ಹಿಂದೆ ಉಳಿದು, ಬಗ್ಗಿ, ನೆಲದ ಮೇಲೆ ಬಿದ್ದಿದ್ದ ಹಾರವನ್ನು ಕೈಗೆತ್ತಿಕೊಂಡು, ಮೂಸಿ ನೋಡಿ, ತನ್ನ ಪ್ಯಾಂಟಿನ ಜೇಬಿನೊಳಕ್ಕೆ ತುರುಕಿದ.

ಎಲ್ಲರೂ ಮತ್ತೆ ವ್ಯಾನ್ ಹತ್ತಿದರು. ಶಿವಪ್ಪ ನಾಯಕ ಸರ್ಕಲಿನ ಬಳಿಗೆ ಬಂದಾಗ ಎಲ್ಲರಿಗೂ ಬಿಸಿ ಬಿಸಿ ಕಾಫಿಯನ್ನು ಕುಡಿಯುವ ಮನಸ್ಸಾಯಿತು. ಎಲ್ಲರೂ ಇಳಿದು ಹತ್ತಿರದ ಹೋಟೆಲನ್ನು ಹೊಕ್ಕರು. ಕಾಫಿ ಕುಡಿದು, ವ್ಯಾನು ಹತ್ತಿದಾಗ ಬಿಸಿಲಿನ ತಾಪ ಇಳಿಮುಖವಾಗಿತ್ತು. ಅಲ್ಲಿಂದ ಆಗುಂಬೆಯ ಕಡೆಗೆ ತಿರುಗಿತು ವ್ಯಾನು.

ಸೂರ್ಯಾಸ್ತಮಾನಕ್ಕೆ ಇನ್ನೂ ಸ್ವಲ್ಪ ಸಮಯವಿದೆವೆನ್ನುವಾಗಲೇ ಆಗುಂಬೆ ತಲುಪಿದರು. ಸೂರ್ಯಸ್ತಮಾನವನ್ನು ನೋಡಲೆಂದು ಮಾಡಿದ್ದ ತಾಣಕ್ಕೆ ಎಲ್ಲರೂ ನಡೆದು ಬಂದರು. ಸೂರ್ಯ ತನ್ನ ತಾಪವನ್ನು ಕಡಿಮೆ ಮಾಡಿಕೊಂಡು ತಂಪಾಗಿದ್ದ. ಶೆಕೆ ಇದ್ದರೂ ಗಾಳಿ ಬೀಸುತ್ತಿದ್ದುದರಿಂದ ಹಿತವಾಗಿತ್ತು. ನಯನ ಮನೋಹರವಾದ ನಿಸರ್ಗ ಸೌಂದರ್ಯವನ್ನು ನೋಡುತ್ತಾ ನಿಂತರು ಎಲ್ಲರೂ. ಎಲ್ಲರ ಆಯಾಸವೂ ಒಮ್ಮೆಗೇ ಪರಿಹಾರವಾದಂತೆನಿಸಿತು.

ಬೆಟ್ಟಗಳ ಮಧ್ಯೆ ಇಳಿದು ಹೋಗಲು ಸಿದ್ಧನಾಗಿದ್ದ ಸೂರ್ಯ... ತನ್ನ ಹೊಂಬಣ್ಣದ ಕಿರಣಗಳ ರಥವನ್ನೇರಿ. ಹೊಂಬಣ್ಣದ ಹಿನ್ನೆಲೆಯಲ್ಲಿ ಗಗನದ ಎತ್ತರಕ್ಕೂ ಬೆಳೆದು ನಿಂತಿದ್ದ ಮರಗಳು ಚಿತ್ರದಲ್ಲಿ ಬರೆದಂತೆ ಕಂಡು ಬಂದವು. ಬೆಟ್ಟದ ಸಾಲುಗಳು, ಗೆರೆಗಳನ್ನು ಹಾಕಿ ಬರೆದಂತೆ ಗೋಚರಿಸುತ್ತಿದ್ದವು.

ಒಬ್ಬೊಬ್ಬರೂ, ಆಹಾ! ಬ್ಯೂಟಿಫುಲ್, ವಂಡರ್‌ಫುಲ್ ಎಂದು ಉದ್ಗಾರ ವೆತ್ತಿದ್ದರು. ಆ ಕಡೆ ತಿರುಗದೇ ಸ್ಥಿರವಾಗಿ ನಿಂತಿದ್ದರು. ಅವರುಗಳು ನೋಡು ತ್ತಿದ್ದಂತೆಯೇ, ಸೂರ್ಯದೇವ ಗಿಡಮರಗಳ ಹಿಂದಿನಿಂದ, ಬೆಟ್ಟದ ಅಂಚಿನಿಂದ ಕೆಳ ಗಿಳಿಯ ತೊಡಗಿದ. ಕೆಂಪನೆಯ ಗೋಲಾಕಾರದ ವಸ್ತುವೊಂದು ಪ್ರಪಂಚದ ಅದ್ಭುತ ಗಳಲ್ಲಿ ಒಂದೋ ಎಂಬಂತೆ ತೋರಿತು. ಎಲ್ಲರ ಮನಸ್ಸನ್ನು ಸೆರೆಹಿಡಿದು, ಮಂತ್ರ ಮುಗ್ಧರನ್ನಾಗಿ ಮಾಡಿ, ಮರೆಯಾಗಿ ಹೊರಟೇ ಹೋದನು, ಸೂರ್ಯದೇವ.

ಅವನು ಹೋದ ಮೇಲೆ ತನ್ನಗಿನ್ನೇನು ಕೆಲಸ ಎಂಬಂತೆ ವನಶ್ರೀಯೂ, ಕೆಂಪನೆಯ ಸೆರಗನ್ನು ಹೊದ್ದು, ಕತ್ತಲೆಯಲ್ಲಿ ಕರಗಿ ಹೋಗಲು ಅನುವಾದಳು. ಸಂಧ್ಯಾ ದೀಪದ ಬೆಳಕಿನಲ್ಲಿ ಮಾಯವಾಗಲಿದ್ದ ವನಶ್ರೀಯು, ತನ್ನ ಸೊಬಗನ್ನು ನೋಡುತ್ತಿದ್ದವರ ನೋಟಕ್ಕೆ ನಾಚಿದಳೋ ಎಂಬಂತೆ ಸಂಜೆಯ ಮುಸುಕಿನಲ್ಲಿ

ಮರೆಯಾಗಿ ಹೊರಟೇ ಹೋದಳು. ಆ ಒಂದು ಘಳಿಗೆಯಲ್ಲಿ ಎಲ್ಲವೂ ಸ್ತಬ್ಧ ಚಿತ್ರದಂತೆ ತೋರಿಬಂತು. ಒಡನೆಯೇ ಗೂಡಿಗೆ ಮರಳಿ ಬರುತ್ತಿರುವ ಹಕ್ಕಿಗಳ ಚಿಲಿಪಿಲಿ ನಾದ ಅವರನ್ನು ಎಚ್ಚರಿಸಿತು. ನಿಧಾನವಾಗಿ ಆವರಿಸುತ್ತಿದ್ದ ಕತ್ತಲೆಗೆ ತಲೆಬಾಗಿ, ಒಂದು ವಿಸ್ಮಯ ಲೋಕಕ್ಕೆ ಹೋಗಿ ಬಂದವರಂತೆ ಮಾತಿಲ್ಲದೇ ಎಲ್ಲರೂ ದಿಬ್ಬವನ್ನಿಳಿದು ರಸ್ತೆಗೆ ಬಂದರು.

ವ್ಯಾನನ್ನು ಹತ್ತುವಾಗ, ಆ ಗಡಿಬಿಡಿಯಲ್ಲಿ ರಾಜೇಂದ್ರ ಸಾವಿತ್ರಿಯ ಕೈಗಳನ್ನು ಬಲವಾಗಿ ಎಳೆದ. ಸಾವಿತ್ರಿ ಕಿರುಚಿದಳು. ಎಲ್ಲರೂ ಗಾಭರಿಯಿಂದ "ಏನಾಯ್ತು... ಏನಾಯ್ತು..." ಎಂದು ಕೇಳುವವರೇ. ಅಷ್ಟರಲ್ಲಿ ರಾಜೇಂದ್ರ ಹಿಂದೆ ಸರಿದಿದ್ದ.

"ಏನೋ ಗೊತ್ತಾಗ್ಲಿಲ್ಲ. ಏನೋ ಎಳೆದ ಹಾಗಾಯ್ತು" ಹೇಳಿದಳು.

"ಇಷ್ಟು ಹೊತ್ನಲ್ಲಿ ಕಾಡು ಪ್ರಾಣಿಗಳು ಹೊರಗೆ ಬಂದರೂ ಬರುತ್ತವೆ. ಹಾವೂ ಚೇಳುಗಳೂ ಇರುತ್ತವೆ. ಬೇಗ ಇಲ್ಲಿಂದ ಹೊರಡೋಣ." ಡ್ರೈವರ್ ಅವಸರ ಮಾಡಿದ.

ಸಾವಿತ್ರಿ ಹೆದರಿದ್ದಳು. ಅದು ಒಬ್ಬ ಗಂಡಸಿನ ಕೈ ಎಂದು ಅವಳಿಗೆ ತಿಳಿದಿತ್ತು. ಇದು ರಾಜೇಂದ್ರನ ಚೇಷ್ಟೆಯೇ ಎಂಬ ಅನುಮಾನವೂ ಇತ್ತು. ಸುರೇಶ ಅಲ್ಲವೆಂದು ತಿಳಿದಿತ್ತು. ಮುಕುಂದ ಎಂದೂ ಹಾಗೆ ಮಾಡಿದವನಲ್ಲ. ಕತ್ತಲೆಯಲ್ಲಿ ರಾಜೇಂದ್ರನ ಕಡೆ ನೋಡಿದಳು. ಅವನ ಮುಖದ ಭಾವನೆ ತಿಳಿಯಲಿಲ್ಲ. ಅವನು ತನ್ನಲ್ಲೇ ನಗುತ್ತಿದ್ದುದನ್ನು ಅವಳು ಕಾಣಲಿಲ್ಲ.

ರಾಜೇಂದ್ರನ ಕೀಳು ಬುದ್ಧಿಗೆ ಬೇಸರವಾಗಿತ್ತು. ಆದರೆ ಅವನ ಬಗ್ಗೆ ಯಾರಿಗೂ ಏನನ್ನು ಹೇಳಬಾರದೆಂದು ತನ್ನಲ್ಲೇ ನಿಶ್ಚಯಿಸಿಕೊಂಡಳು.

ತಣ್ಣನೆಯ ಗಾಳಿ ಬೀಸತೊಡಗಿದಾಗ ಎಲ್ಲರಿಗೂ ತೂಕಡಿಕೆ ಪ್ರಾರಂಭವಾಯ್ತು. ಡ್ರೈವರನ ಪಕ್ಕ ಕುಳಿತಿದ್ದ ಸುರೇಶನ ತಂದೆ, ಅವನ ಮೇಲೆ ವಾಲಿದಾಗ ಅವನು ಅವರನ್ನು ಎಚ್ಚರಿಸಿದ.

"ಏಳಿ ಸಾರ್! ಎಲ್ಲರೂ ನಿದ್ದೆ ಮಾಡಿದರೆ ಹೇಗೆ? ನನಗೂ ನಿದ್ದೆ ಬಂದು ಬಿಡುತ್ತದೆ ಅಷ್ಟೇ.... ಆಮೇಲೆ ದೇವರೇ ಗತಿ. ಎಲ್ಲಾ ಏನಾದ್ರೂ ಮಾತನಾಡಿ. ಭಜನೆ ಮಾಡಿ... ಹಾಡನ್ನು ಹೇಳಿ... ಕತೆ ಹೇಳಿ.... ಸುಮ್ಮನೇ ಮಾತ್ರ ಇರಬೇಡಿ" ನಾನು ಎಚ್ಚರವಾಗಿದ್ದರೆ, ನಿಮ್ಮನ್ನು ಸುರಕ್ಷಿತವಾಗಿ ಮನೆ ತಲುಪಿಸ್ತೀನಿ"

"ಕ್ಯಾಸೆಟ್ ಇದ್ದರೆ ಹಾಕಯ್ಯಾ...." ಮುಕುಂದ ನುಡಿದ.

ನಮ್ಮದು ಹಳೇ ಗಾಡಿ ಸಾರ್...., ಕೆಟ್ಟಿದ್ದನ್ನ ಸರಿ ಮಾಡಿಸಿಲ್ಲ.... ನೀವೇ ರೇಡಿಯೋ ತಂದಿದ್ರೆ ಚೆನ್ನಾಗಿತ್ತು... ನೀವೇ ಯಾರಾದ್ರೂ ಹಾಡನ್ನು ಹೇಳಿ"

ಎಲ್ಲರೂ ಒಟ್ಟಿಗೇ "ಸಾವಿತ್ರಿ...ಸಾವಿತ್ರೀ...." ಎಂದರು ಜೋರಾಗಿ.

ಸರಳ ಸಾವಿತ್ರಿಯ ಕೈ ತಿವಿದು ಹೇಳಿದಳು. "ಶುರುಮಾಡೇ..."

"ನಾನೊಬ್ಬಳೇ ಹೇಳಲ್ಲ. ನೀನೂ ಹೇಳು..."

ಸರಳಂಗೂ ಏನೋ ಉತ್ಸಾಹ. ಸಾವಿತ್ರಿಯ ಜತೆ ದನಿಗೂಡಿಸಲು ಒಪ್ಪಿಕೊಂಡಳು. ಸುರೇಶಂಗೆ ಆಶ್ಚರ್ಯ. ಅವಳು ಎಂದೂ ಹಾಡಿದ್ದನ್ನು ಕೇಳಿರಲಿಲ್ಲ. ಕಂಡಿರಲಿಲ್ಲ. ಹೆಂಡತಿಯ ಬಗ್ಗೆ ಹೆಮ್ಮೆ ಎನಿಸಿತು. ಇಬ್ಬರೂ ಹಾಡಲು ಪ್ರಾರಂಭಿಸಿದಾಗ ಸುಕನ್ಯ ಗೊಣಗಿದಳು.

"ಅದೇನು ಬೇಜಾರಿಲ್ಲದೇ ಹಾಡ್ತಾಳೋ.... ಅವಳಿಗೆ ಸರಿಯಾಗಿದಾಳೆ ಇವಳು"

"ನೀನೂ ನಿನ್ನ ದನಿ ಸೇರಿಸು. ಇವತ್ತಾದ್ರೂ ಕೇಳೋಣ ನಿನ್ನ ಹಾಡು ಹೇಗಿರುತ್ತೆ ಅಂತ"

"ನನಗೆ ಬರುವುದಿಲ್ಲ. ಬಂದರೂ ಹಾಡುವುದಿಲ್ಲ"

"ಸರಿ. ಸುಮ್ಮನಿರು. ನೀನು ಹಾಡದಿದ್ದ ಮೇಲೆ, ಅವರ ಮೇಲೇಕೆ ಸಿಟ್ಟು! ಎಲ್ರೂ ಅವಳನ್ನು ಹೊಗಳ್ತಾರೆ ಅಂತ ನಿನಗೆ ಅಸೂಯೆಯಲ್ವಾ?"

"ಹೌದು ಮತ್ತೆ. ಸಾವಿತ್ರೀ.... ಸಾವಿತ್ರಿ... ಎಲ್ಲರ ಬಾಯಲ್ಲೂ ಅವಳೇ... ನನಗೆ ಸಹಾಯ ಮಾಡಿ ಅವಳು ಉದ್ಧಾರವಾಗಿ ಬಿಟ್ಟಳು... ಇಲ್ಲದಿದ್ದರೆ ಅವಳು ಈ ದಿನ ಇದನ್ನೆಲ್ಲ ನೋಡುವ ಅವಕಾಶ ಎಲ್ಲಿರುತ್ತಿತ್ತು?"

"ಏಯ್...ಏಯ್... ಅವಳು ನಿನ್ನ ತಂಗಿ ಕಣೇ... ಅವಳ ಮೇಲೇಕೆ ಹೊಟ್ಟೆ ಉರಿ?"

"ನಿಮಗೂ ಅಷ್ಟೇ. ನನಗಿಂತ ಅವಳನ್ನೇ ಕಂಡರೆ ಇಷ್ಟ ನಿಮಗೆ"

"ತಪ್ಪೇನೀಗ? ಚೆನ್ನಾಗಿರುವವರನ್ನು ಇಷ್ಟ ಪಟ್ಟರೆ ತಪ್ಪೇನೀಗ?"

"ನೋಡಿದ್ರಾ? ನಾಚಿಕೆಯಿಲ್ಲದೇ, ಚೆನ್ನಾಗಿದಾಳೆ ಅಂತ ನನ್ನೆದುರಿಗೇ ಹೇಳ್ತೀದೀರಲ್ಲ. ನಾಚಿಕೆಯಾಗುಲ್ವಾ ನಿಮಗೆ?" ಸಿಟ್ಟಿನಿಂದ ತೊಡೆ ಚಿವುಟಿದಳು.

ಮುಕುಂದ ಮೇಲಿನಿಂದ 'ಹ್ಹಾ'... ಎಂದು ಉದ್ಗಾರವೆತ್ತಿದ.

ಇಬ್ಬರೂ ಹಾಡುವುದನ್ನು ನಿಲ್ಲಿಸಿದರು.

"ಈಗ ಯಾರನ್ನು ಏನು ಕಚ್ತ್ತಪ್ಪಾ?..." ರಾಜೇಂದ್ರ ಹಾಸ್ಯವಾಗಿ ಕೇಳಿದ.

'ಪಟಪ್' ಎಂದ ಮುಕುಂದ.

"ಸೈಲೆನ್ಸ್ ಪ್ಲೀಸ್" ಎಂದರು. ಸುರೇಶನ ತಂದೆ. ಅವರಿಗೆ ಗಾಭರಿ. ಎಲ್ಲರೂ ಸುಮ್ಮನಾದರು. ತೀರ್ಥಹಳ್ಳಿಯ ತಿರುವು ಕಾಣುವವರೆಗೂ ಸರಳಾ ಸಾವಿತ್ರಿ ಒಟ್ಟಾಗಿ ಹಾಡಿದರು. ಭಾವಗೀತೆ, ಭಕ್ತಿಗೀತೆ, ದೇವರನಾಮ... ಎಲ್ಲವನ್ನು ಹಾಡಿದರು.

"ಯಾವುದಾದರೂ ಸಿನಿಮಾ ಹಾಡನ್ನು ಹಾಡಿ" ರಾಜೇಂದ್ರ ತನ್ನ ಆಸೆಯನ್ನು ವ್ಯಕ್ತಪಡಿಸಿದ, ಮಧ್ಯದಲ್ಲಿ.

ಸಾವಿತ್ರಿ ಸುಮ್ಮನಿದ್ದಳು. ಸರಳ "ನಮಗೆ ಬರುಲ್ಲ. ನಿಮಗೆ ಬಂದರೆ ಹಾಡಿ. ನಾವೂ ಕೇಳ್ತೀನಿ" ಎಂದಳು.

"ಮಧೂಗೆ ಬರುತ್ತೆ. ಹೇಳೇ ಮಧೂ.." ವಿಮಲ ತಂಗಿಯನ್ನು ಹುರಿದುಂಬಿಸಿದಳು. ಮಧು ಒಂದೆರಡು ಸಿನಿಮಾ ಹಾಡುಗಳನ್ನು ಹಾಡಿದಳು. ಎಲ್ಲರೂ ಚಪ್ಪಾಳೆ ತಟ್ಟಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಮನೆಯ ಮುಂದೆ ವ್ಯಾನು ನಿಂತೊಡನೆ, ಒಬ್ಬೊಬ್ಬರಾಗಿ ಇಳಿದರು. ಮನೆಯೊಳಗೆ ಬಂದವರು, ಫ್ಯಾನಿನ ಕೆಳಗೆ ಕೂತು ನೀರು ಕುಡಿದು ಆಯಾಸವನ್ನು ಪರಿಹಾರ ಮಾಡಿಕೊಂಡರು.

"ಈಗಿನ ಕಾಲದವರು ನೀವು ಮಕ್ಕಳನ್ನು ಮರತೇ ಬಿಟ್ಟಿದೀರಿ. ಇನ್ನೂ ನಿಮ್ಮ ನಿಮ್ಮ ಮಗುವನ್ನು ನೀವೇ ಸುಧಾರಿಸಿಕೊಳ್ಳಿ" ಶಾಂತಿ, ಲಕ್ಷ್ಮಿ, ಸರಳ, ಸುಕನ್ಯಳ ಕೈಗೆ ಮಕ್ಕಳನ್ನು ತಂದುಕೊಟ್ಟರು.

"ನಿಜ ಶಾಂತಿ...ನಾವು ಮಕ್ಕಳನ್ನು ಮರತೇ ಬಿಟ್ಟಿದ್ದೆವು."ಸರಳ ನಿಜವನ್ನೂ ಹಾಸ್ಯವಾಗಿ ನುಡಿದಳು.

"ಅಷ್ಟು ಸುಲಭಾನಾ? ನಿಮ್ಮ ನಿಮ್ಮ ಗಂಡಂದಿರು ಸುಮ್ಮನಿರ್ತಾರೈ?"ಶಾಂತಿ ಮತ್ತೆ ಕೇಳಿದ್ದಳು.

"ಅವರುಗಳಿಗೆ ಇವರೇ ಜ್ಞಾಪಿಸಬೇಕು. ಎಷ್ಟೇ ಆಗಲೀ ಗಂಡಸರು. ಅಲ್ಲವೇನ್ರಿ!"ಲಕ್ಷ್ಮಿ ಕೇಳಿದಳು. ಇಬ್ಬರೂ ನಕ್ಕಂತೆ ಮುಖ ಮಾಡಿದರು.

ತಾವಿಬ್ಬರೂ ಈ ಮಕ್ಕಳಿಗಾಗಿ ಶ್ರಮ ಪಟ್ಟಿರಲಿಲ್ಲ ನಿಜ,ಅದನ್ನು ಇವರುಗಳು ಎತ್ತಿ ಆಡಿ ತೋರಿಸುತ್ತಿದಾರೇನೋ ಎನಿಸಿತು. ಹಾಗಾದರೆ ಸಾವಿತ್ರಿಗೆ ಎಂತಹ ಅನುಭವವಾಗಿರಬಹುದು? ಅವಳೂ ಎಲ್ಲವನ್ನೂ ಮರೆತು ಹಾಯಾಗಿದ್ದಳಲ್ಲ

ಅಥವಾ ಮರೆತಂತೆ ನಟಿಸಿದ್ದಳೋ....? ಅವಳನ್ನ ಕೇಳುವುದು ಹೇಗೆ?....

ಸಾವಿತ್ರಿಗೆ ಆ ಮಾತು ಬೇಡವೆನಿಸಿತ್ತು, ಗಂಡ ಮಕ್ಕಳು, ಈ ಮಾತುಗಳನ್ನು ಬಿಟ್ಟು ಬೇರೆ ಮಾತುಗಳಿಲ್ಲವೆ ಈ ತಾಯಂದಿರಿಗೆ? ತನ್ನಲ್ಲೇ ಕೇಳಿಕೊಂಡಳು.

"ಸುಮ್ಮನೆ ತಮಾಷೆ ಮಾಡಿದೆವು ಅಷ್ಟೇ.... ಅಪರಂಜಿಯಂತಹ ಮಕ್ಕಳು ನಮಗೇನೂ ಕಷ್ಟವಾಗಲಿಲ್ಲ." ಶಾಂತಿ ಹೊಗಳಿ ನುಡಿದಾಗ ಸಾವಿತ್ರಿ ಆಕಳಿಸಿದಳು. ಆದರೂ ಮೂರು ಜನ ಅಕ್ಕತಂಗಿಯರ ಮನಸ್ಸು ತಳಮಳಗೊಂಡಿತ್ತು.

ಸರಳ ಸುಕನ್ಯರ ಮನಸ್ಸು ಅಳುಕಿತ್ತು. ತಾವಿಬ್ಬರೂ ತಮಗೆ ಮಕ್ಕಳಿವೆ ಎಂಬುದನ್ನು ಹಚ್ಚಿಕೊಂಡಂತೆ ಇಲ್ಲ ಎನ್ನುವುದನ್ನು ಅವರುಗಳು ಹಂಗಿಸಿ ಆಡು ತ್ತಿದ್ದಾರೆಯೇ ಎಂಬ ಅನುಮಾನ ಇಣುಕಿತ್ತು. ಸಾವಿತ್ರಿಗೂ ಅಷ್ಟೇ.......ತಾನು ಹೆತ್ತ ಮಕ್ಕಳು ಅವು... ಅದನ್ನು ಮರೆತು ತಿರುಗಾಡಿದ್ದಳು...ಮಕ್ಕಳ ಮನಸ್ಸನ್ನು ಅರಿಯು ವಂತಿದ್ದರೆ.....? ಇದ್ದಕ್ಕಿದ್ದಂತೆ ಎಲ್ಲರೂ ಸುಮ್ಮನಾದಾಗ ಶಾಂತಿ ಪೆಚ್ಚಾಗಿ ಎದ್ದು ಒಳ ನಡೆದಳು. ಎಷ್ಟಾಗಲೀ ನಾವು ಹಳ್ಳಿಯವರು, ನಮ್ಮ ಮಾತು ಬೇಸರ ತಂದಿರ ಬಹುದು ಎಂದು ಊಹಿಸಿದಳು.

ನಾಮಕರಣ ಮಹೋತ್ಸವದ ಸಮಾರಂಭ ಮುಗಿದಿತ್ತು. ಹತ್ತಿರದ ಸ್ಥಳ, ನೋಡುವ ಜಾಗವನ್ನೆಲ್ಲಾ ನೋಡಿಯಾಗಿತ್ತು. ಇನ್ನು ವಾಪಸ್ಸು ಬೆಂಗಳೂರಿಗೆ ಹಿಂತಿರುಗುವ ಮನಸ್ಸಾಗಿತ್ತು ಎಲ್ಲರಿಗೂ. ಮುಕುಂದ ಸುಕನ್ಯರೂ ವಾಪಸ್ಸು ಹೊರಡುವುದೆಂದು ಮಾತನಾಡಿಕೊಂಡಿದ್ದರು. ಈ ನಾಲ್ಕಾರು ದಿನಗಳನ್ನು ಅವಳು ಕಳೆದುದೇ ಹೆಚ್ಚು ಎನ್ನುವಂತೆ, ತುದಿಗಾಲಿನಲ್ಲಿ ಹೊರಟು ನಿಂತಿದ್ದಳು. ಇನ್ನೇನು ಇಲ್ಲಿದ್ದು ಏನು ಮಾಡಬೇಕು ಎಂದು ಅವಳ ಅನ್ನಿಸಿಕೆ. ಆದರೆ ಮನೆಯವರೆಲ್ಲಾ ಮುಕುಂದನ್ನ ತುಂಬಾ ಒತ್ತಾಯ ಮಾಡಿದರು.

"ಪದೇ ಪದೇ ಏನೂ ಬರುಲ್ಲ. ಇನ್ನು ಮೇಲೆ ಮಗೂನ ಕಟ್ಟಿಕೊಂಡು ಪ್ರಯಾಣ ಮಾಡುವುದೂ ಕಷ್ಟವೇ.....ಇನ್ನೂ ಒಂದೆರಡು ದಿನ ಇದ್ದು ಹೋಗಿ"

ಮುಕುಂದ ಒಪ್ಪಿದ. ಸುಕನ್ಯ ಮುಖ ಸಿಂಡರಿಸಿದಾಗ ಸರಳ ಸಮಾಧಾನ ಹೇಳಿದ್ದಳು.

"ಇದು ನಿನ್ನ ಗಂಡನ ಮನೆ. ಸುಮ್ಮನೇ ಇನ್ನೆರಡು ದಿನ ಇದ್ದು ಬಾ... ಇಲ್ಲದಿದ್ದರೆ ಜಂಭ ಅಂದ್ಕೊಳ್ತಾರೆ. ಬ್ಯಾಂಕಿಗೆ ರಜ ಇದ್ದಿದ್ರೆ, ನಾನೂ ಇರ್ತಿದ್ದೆ"

"ಹಾಗಾದ್ರೆ ಸಾವಿತ್ರೀನಾದ್ರೂ ಬಿಟ್ಟು ಹೋಗಿ. ಇಲ್ಲದಿದ್ದರೆ, ಇವರುಗಳ

ನಡುವೆ ನಾನು ಒಂಟಿ ಅಂತ ಅನ್ನಿಸುತ್ತೆ. ಹುಚ್ಚು ಹಿಡಿದು ಬಿಡುತ್ತೆ"

"ನಿನ್ನ ಗಂಡ ಇರ್ತಾರಲ್ಲೇ........ಅವಳ್ಯಾಕೆ?" ಸುಭದ್ರಮ್ಮ ನುಡಿದಳು.

ಅಲ್ಲಿಯೇ ಇದ್ದ ಸಾವಿತ್ರಿ ಸಂಭ್ರಮದಿಂದ ನುಡಿದಳು.

"ಇದ್ದು ಬರ್ತೀನಮ್ಮಾ.....ನಾನು ಮತ್ತೆ ಈ ಹಳ್ಳಿಗೆ ಬರುಕ್ಕಾಗುತ್ತಾ?"

ಮುಕುಂದನೂ, ಸಾವಿತ್ರಿ ಇರಲಿ ಎಂದು ಕೇಳಿದಾಗ, ಅದೇ ತೀರ್ಮಾನ ವಾಯಿತು. ಸುರೇಶ ಮಾತ್ರ ಕಸಿವಿಸಿಗೊಂಡ. ಸಾವಿತ್ರಿ ಇಲ್ಲಿ ಇರಲು ಒಪ್ಪಬಾರ ದಾಗಿತ್ತು ಅಂತ ಅನ್ನಿಸಿ ಸರಳಂಗೆ ಹೇಳಿದ.

"ಸರಳಾ.... ಸಾವಿತ್ರಿಗೆ ಸ್ವಲ್ಪ ಹುಷಾರಾಗಿರಲು ಹೇಳು. ರಾಜೇಂದ್ರನ ನಡವಳಿಕೆ ಸರಿ ಇಲ್ಲ."

"ಮನೆಯವರೆಲ್ಲಾ ಇರ್ತಾರಲ್ಲ. ರಾಜೇಂದ್ರ ಏನು ಮಾಡ್ತಾನೆ? ಅವಳು ಇದುವರೆಗೂ ನಮ್ಮಗಳನ್ನು ಅವಲಂಬಿಸಿ ಇದ್ದಳು. ಇನ್ನು ಮೇಲೆ ತನ್ನ ಪಾಡಿಗೆ ತಾನು ಸ್ವತಂತ್ರವಾಗಿ ಇರುವುದನ್ನು ಕಲಿಯಲಿ. ಅವಳಿಗೆ ಯಾರಿಂದಲೂ ಅಪಾಯ ವಿರುವುದಿಲ್ಲ."

"ಈಚೆಗೆ ಅವಳ ಸಂಗೀತಾಭ್ಯಾಸ ನಿಂತೇ ಹೋಗಿದೆಯಲ್ಲ"

"ಬಂದ ಮೇಲೆ ಮುಂದುವರೆಸುತ್ತಾಳೆ, ನನಗೇ ಅವಳ ಚಿಂತೆ ಕಡಿಮೆಯಾಗಿದೆ ಇನ್ನು ನಿಮಗ್ಯಾಕೆ?"

"ಸುಕನ್ಯಂಗೂ ಒಂದು ಮಾತು ಹೇಳಿಬಿಡು. ಅವಳ ಮೇಲೆ ನಿಗಾ ಇಡಲಿ"

"ಅಬ್ಬಾ! ಚೆನ್ನಾಗಿದೆ! ಅವಳೇನು ನಿಮ್ಮ ತಂಗೀನಾ? ನಿಮ್ಮ ಹೆಂಡತೀನಾ? ನನಗಿರುವಷ್ಟೇ ಆತಂಕ ಸುಕನ್ಯಂಗೂ ಇರುಲ್ವೆ?"

ಸರಳ ಹಾಗೆ ಹೇಳಿದರೂ, ಏನೋ ನಡೆಯಲಿದೆ ಎಂಬ ಅನುಮಾನ ಅವನಿಗೆ. ತಾನು ಅವಳ ಬೆಂಗಾವಲಿಗೆ ನಿಲ್ಲುವಂತಿದ್ದರೆ....? ಎನಿಸಿತ್ತು. ಆದರೆ ಅದನ್ನು ಕೇಳಿ ದವರು ಅವನನ್ನು ಹುಚ್ಚ ಎನ್ನುತ್ತಾರೆ ಎನ್ನುವುದೂ ಅರಿವಾಗಿತ್ತು. ಆದರೂ ಸಮಯ ಸಾಧಿಸಿ ಸಾವಿತ್ರಿಗೆ ಹೇಳಿದ್ದ.

"ನೀನು ಒಬ್ಬಳೇ ಎಲ್ಲೂ ಹೋಗಬೇಡ. ಆದಷ್ಟೂ ವಿಮಲ, ಮಧುಮತಿ ಯರ ಜತೆಯಲ್ಲೇ ಇರು. ನಿನಗೆ ಹಳ್ಳಿಯಲ್ಲಿ ಏನೂ ಗೊತ್ತಿಲ್ಲ."

"ಏನೋ ಅನುಮಾನ ನಿಮಗೆ....ನನ್ನನ್ನು ನಾನು ನೋಡಿಕೊಳ್ತೀನಿ. ಇನ್ನು ಮೇಲೆ ನನಗೆ ಯಾರ ಸಹಾಯವೂ ಬೇಡ. ಹಳ್ಳಿಯ ಜನರೇನೂ ಕೆಟ್ಟವರಲ್ಲ."

ಈ ಮಾತು ಅವನನ್ನು ತಿವಿಯಿತು. ಸಾವಿತ್ರಿ ತನ್ನನ್ನು ಅಪಹಾಸ್ಯ ಮಾಡುತ್ತದಾಳೆಂದು ಭಾವಿಸಿದ. ಒರಟಾಗಿ ಮಾತನಾಡುತ್ತಿದ್ದಾಳೆಂದು ಅನ್ನಿಸಿತ್ತು.

"ಹಳ್ಳಿಯ ಜನರೆಲ್ಲಾ ಒಳ್ಳೆಯವರಲ್ಲ. ನಿನ್ನ ಸಹಾಯಕ್ಕೆ ಯಾರೂ ಬರಲಾಗದ ದಿನ ಒದಗೀತು ಅಂತ ಎಚ್ಚರಿಕೆ ಹೇಳಿದೆ. ನೀನು ಬೆಳೆದು ಇಷ್ಟು ದೊಡ್ಡವಳಾಗಿದೀಯ ಅಂತ ನಾನು ಅಂದುಕೊಂಡಿರಲಿಲ್ಲ."

"ಸಾರಿ, ಮಿಸ್ಟರ್ ಸುರೇಶ್.....ಕಣ್ಣು ಕಾಣದೇ, ಮನೆಯೊಳಗೇ ಕುಳಿತು ಅವರಿವರ ಮಾತಿಗೆ ಮರುಳಾದ ಸಾವಿತ್ರಿ ನಾನಲ್ಲ. ಇನ್ನು ಮೇಲೆ ನನ್ನ ಜೀವನ ನನ್ನ ಕೈಲಿದೆ. ನನ್ನ ಭವಿಷ್ಯ ನನ್ನ ಮುಂದಿದೆ. ಅದಕ್ಕೇ ನನಗೆ ಯಾರ ನೆರವೂ ಬೇಕಿಲ್ಲ."

"ಸಾವಿತ್ರಿ...ನೀನು ನನಗೆ ಅವಮಾನ ಮಾಡ್ತಾ ಇದೀಯಾ..."

"ಅವಮಾನ ಇಲ್ಲ.ನನ್ನ ನಿಲುವನ್ನು ತಿಳಿಸಿದೆ ಅಷ್ಟೇ....ನಾನೂ ಇನ್ನು ಮೇಲೆ ಸರಳ ಸುಕನ್ಯರಂತೆ , ನನ್ನ ಪಾಡಿಗೆ ನಾನು ಇರುವ ಆಸೆ...."

"ಹಾಗಾದರೆ..... ಈ ಹಳ್ಳೀಲೇ ಇರುವ ತೀರ್ಮಾನ ಮಾಡಿದೀಯೋ ಹೇಗೆ?"

"ಮಾಡಿದರೂ ಮಾಡಿದೆ....ಆಶ್ಚರ್ಯವೇನಿಲ್ಲ....."ಅವಳು ಹಾಗೆ ನುಡಿದಾಗ ಸುರೇಶ ಸಿಟ್ಟಿನಿಂದ ಅವಳನ್ನು ನೋಡಿ ದೂರ ಹೋಗಿದ್ದ. ಆನಂತರ ಸಾವಿತ್ರಿಗೆ ಬೇಸರವೆನಿಸಿತ್ತು. ತಾನು ವಿನಾಕಾರಣ ಸುರೇಶನಿಗೆ ಬೇಸರ ಮಾಡಿದೆನೇನೋ ಎಂದುಕೊಂಡಳು. ತಾನು ಅವನೊಡನೆ ಹಾಗೇಕೆ ಮಾತನಾಡಿದೆನೆಂದು ಅವಳಿಗೇ ಅರ್ಥವಾಗಿರಲಿಲ್ಲ.

ಆದರೆ ಈಚೆಗೆ, ಇನ್ನು ಮೇಲೆ ತಾನು ಸುರೇಶನಿಂದ ದೂರ ದೂರವೇ ಇರಬೇಕೆಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಿದ್ದಳು. ಅವನು ಈಗಲೂ ಪ್ರಿಯನಾದವನೇ, ಆದರೆ ಮೊದಲಿನಂತೆ ಅವನೊಡನೆ ಸಂಬಂಧವನ್ನಿಟ್ಟುಕೊಳ್ಳುವುದು, ಯಾವರೀತಿಯಿಂದಲೂ ಸರಿಯಲ್ಲವೆಂದು ತನಗೆ ತಾನೇ ಹೇಳಿ ಕೊಳ್ಳುತ್ತಿದ್ದಳು. ಅವನೊಡನೆ ಒಲವಿನಿಂದ ಮಾತನಾಡಿದರೆ ಅವನು ಮತ್ತೆ ತನ್ನಿಂದ ದೂರವಾಗುವುದಿಲ್ಲ....ಆಗ ಅವನನ್ನು ದೂರ ಕಳಿಸುವ ಚೈತನ್ಯ ತನ್ನಲ್ಲಿರುವುದಿಲ್ಲ ವೆಂದು ಮನಸ್ಸನ್ನು ಕಠಿಣ ಮಾಡಿಕೊಳ್ಳುತ್ತಿದ್ದಳು. "ತನ್ನ ಮೇಲೆ ಅಕ್ಕರೆಯುಳ್ಳ ಸುರೇಶನನ್ನು ತಾನು ನೋಯಿಸಿದೆ" ಎಂದು ಮನಸ್ಸಿನಲ್ಲಿಯೇ ಮರುಗಿದಳು. ಯಾರಿಗೂ ಕಾಣದಂತೆ ಕಣ್ಣುಗಳನ್ನು ಒರೆಸಿಕೊಂಡಿದ್ದಳು. ಮತ್ತ ಸುರೇಶನಿಗೆ ಮುಖ ತೋರಿಸುವ ಧೈರ್ಯ

ಬರಲಿಲ್ಲ. ಎಲ್ಲರೂ ಹೊರಟಾಗಲೂ ಹೊರಗೆ ಬರಲಿಲ್ಲ.

ಸಾವಿತ್ರಿ ಎಲ್ಲಿಯೂ ಕಾಣದಾದಾಗ ಸುರೇಶ ನಿರಾಶನಾದ. ಏನೂ ಅರಿಯದ ಮುಗ್ಧ ಸಾವಿತ್ರಿ ತನ್ನ ಪ್ರೀತಿಗೆ ಒಲಿದಿದ್ದಳು. ಹಾಗೇ ಈಗ ರಾಜೇಂದ್ರನ ಕಾಮಕ್ಕೆ ಮಣಿದು, ಅವನ ಧಾಳಿಗೆ ಒಳಗಾದರೆ ಎಂದು ಮನಸ್ಸು ಚಡಪಡಿಸುತ್ತಿತ್ತು. ಟ್ಯಾಕ್ಸಿ ಮುಂದೆ ಚಲಿಸಿದಾಗ ಸುರೇಶ ಪೆಚ್ಚಾದ. ಸಾವಿತ್ರಿ ತನಗೆ ಕೊಟ್ಟ ಕಾಣಿಕೆ ತನ್ನ ತೊಡೆಯ ಮೇಲೆ ಮಲಗಿತ್ತು. ಮೃದುವಾಗಿ ಮಗುವಿನ ಕೆನ್ನೆಯನ್ನು ನೇವರಿಸಿದ. ಇನ್ನು ಸಾವಿತ್ರಿಗೆ ತಾನು ಬೇಕಿಲ್ಲ....ತಾನೂ ಅವಳಿಂದ ದೂರವಿರುವ ಮನಸ್ಸನ್ನು ಮಾಡಬೇಕು ಎಂದು ಕೊಂಡ.ಆದರೆ? ಸಾವಿತ್ರಿಯನ್ನು ಮರೆಯಲು ತನ್ನಿಂದ ಸಾಧ್ಯವೇ....ಇಲ್ಲ, ಇಲ್ಲ ಎಂದುಕೊಂಡ.

ಸಾವಿತ್ರಿ ಉಳಿದುಕೊಂಡಿದ್ದು ಎಲ್ಲರಿಗೂ ಸಂತೋಷವೇ. ಅದರಲ್ಲೂ ರಾಜೇಂದ್ರನಿಗೆ. ಸುಕನ್ಯ ಮುಕುಂದ ತಮ್ಮ ಲೋಲಾಪ್ತಿಯಲ್ಲಿರುತ್ತಾರೆ. ವಿಮಲ ಮಧು ಕಾಲೇಜಿಗೆ ಹೋದಾಗ ಸಾವಿತ್ರಿ ತನ್ನ ಕೈಗೆ ಒಂಟಿಯಾಗಿ ಸಿಕ್ಕೇ ಸಿಗ್ತಾಳೆ ಎಂದು ಲೆಖ್ಖ ಹಾಕತೊಡಗಿದ. ಒಂದೆರಡು ದಿನಗಳು ಕಳೆದವು. ವಿಮಲ, ಮಧು ಕಾಲೇಜಿಗೆ ಹೋಗದೇ ಮನೆಯಲ್ಲಿಯೇ ಉಳಿದಿದ್ದರು.

ಅದೇ ಸಮಯದಲ್ಲಿ ಅವರ ಮನೆಯ ಒಂದು ಹಸು, ಕರುವನ್ನು ಹಾಕಿತು. ಮನೆಯವರೆಲ್ಲರಿಗೂ ಮನೆಯಲ್ಲಿ ಒಂದು ಮಗು ಹುಟ್ಟಿದಷ್ಟೇ ಸಂಭ್ರಮ. ಸಾವಿತ್ರಿ ಯಂತೂ ಪುಟ್ಟ ಕರುವನ್ನು ನೋಡಿದ್ದೇ ನೋಡಿದ್ದು.

ಆ ಕ್ಷಣದಲ್ಲಿ ತನ್ನ ಮಕ್ಕಳ ನೆನಪಾಗಿತ್ತು. ಕಣ್ಣು ಮುಚ್ಚಿ, ಬೆಚ್ಚಗೆ ಮಲಗಿದ್ದ ಮಕ್ಕಳು ಅವಳ ಬಳಿಗೆ ತಾವಾಗಿಯೇ ಬಂದಿರಲಿಲ್ಲ. ನರ್ಸು ಎತ್ತಿಕೊಂಡು ಬಂದು ತೋರಿಸಿದ್ದಳು. ಆದರೆ ಈ ಕರು! ಹುಟ್ಟಿದ ಕೆಲವೇ ನಿಮಿಷಗಳಲ್ಲಿ ತೂರಾಡುತ್ತಾ ಎದ್ದು ನಿಲ್ಲಲು ಪ್ರಯತ್ನಿಸುತ್ತಿತ್ತು. ಹೂಂ ಕರಿಸುತ್ತಾ,ತನ್ನ ಬಳಿಗೆ ಬಂದ ಕರುವನ್ನು ತಾಯಿ ನೆಕ್ಕಿತು. ಕೆಲವೇ ಗಂಟೆಗಳಲ್ಲಿ ಕರು ಸರಿಯಾಗಿ ನಿಂತು ಹಸುವಿನ ಕೆಚ್ಚಲಿಗೆ ಬಾಯಿ ಹಾಕಿತ್ತು. ನೊರೆ ನೊರೆ ಹಾಲನ್ನು ಕುಡಿಯಲು ಪ್ರಾರಂಭಿಸಿತ್ತು. ಸೃಷ್ಟಿಯ ವೈಚಿತ್ರ್ಯಕ್ಕೆ ಸಾವಿತ್ರಿ ಬೆರಗಾಗಿದ್ದಳು. ಮನುಷ್ಯ ಮಗುವಿನಿಂದಲೇ ಅವಲಂಬನೆಯ ದಾಸನಾಗುತ್ತಾನೆ. ಆದರೆ ಪ್ರಾಣಿಗಳು....ಹುಟ್ಟಿದ ಕೂಡಲೇ ಸ್ವತಂತ್ರ. ತಾನೂ ಹೀಗೆಯೇ ಯಾವುದೋ ಪ್ರಾಣಿಯೋ, ಪಕ್ಷಿಯೋ ಆಗಿ ಹುಟ್ಟಿದ್ದರೆ ಎಷ್ಟು ಚೆನ್ನಾಗಿತ್ತು? ಎಲ್ಲಿ ಅಂದರೆ ಅಲ್ಲಿ ಯಾರ ಹೆದರಿಕೆಯೂ ಇಲ್ಲದೇ ಧೈರ್ಯವಾಗಿ

ತಿರುಗಾಡಬಹುದಾಗಿತ್ತು ಅಥವಾ ಎಷ್ಟು ಎತ್ತರವಾದ ಮರವನ್ನಾದರೂ ಸರಿ, ಹಾರಿ ಹತ್ತಿ ಕುಳಿತಿರಬಹುದಾಗಿತ್ತು.....ಗಲ್ಲಕ್ಕೆ ಕೈ ಕೊಟ್ಟು ಕರುವನ್ನೇ ನೋಡುತ್ತಿದ್ದವಳನ್ನು ಚಿಕ್ಕಮ್ಮ ಎಚ್ಚರಿಸಿದಳು. "ಸಾವಿತ್ರಿ ಊಟಕ್ಕೆ ಬಾ......." ಕರೆದಳು.

ಮಾರನೇ ದಿನದ ಹೊತ್ತಿಗೆ ಛಂಗನೆ ನೆಗೆದು ಕುಣಿಯಲು ಪ್ರಾರಂಭಿಸಿದ ಕರು ಯಾರಿಗೂ ಸಿಗದೇ ತಪ್ಪಿಸಿಕೊಳ್ಳುತ್ತಿತ್ತು. ಸಾವಿತ್ರಿ ಅದನ್ನು ಹಿಡಿಯುವ ಸಾಹಸ ಮಾಡಿ ದಣಿದಳು. ಸುಸ್ತಾಗಿ ನಿಂತ ಅವಳನ್ನೇ ನೋಡಿ ರಾಜೇಂದ್ರ ನಕ್ಕ.

"ಕರೂನ ನಾನು ಹಿಡಿದು ಕೊಡ್ತೀನಿ....ನನಗೇನು ಕೊಡ್ತೀರಾ?" ಸಾವಿತ್ರಿ ಬೆಚ್ಚಿ ಸುಮ್ಮನೇ ನಿಂತಳು. ಕೊರಳಿನಲ್ಲಿದ್ದ ಗಂಟೆಯ ಗಿಲ ಗಿಲ ಸದ್ದು ಮಾಡುತ್ತಾ, ನೆಗೆಯುತ್ತಾ ಕರು ಹೊರಟೇ ಹೋಯ್ತು.

"ಕರು ಹೊರಟೇ ಹೋಯ್ತು" ಎಂದ. ಸಾವಿತ್ರಿ ಏನನ್ನೂ ಹೇಳಲಿಲ್ಲ.

"ನಿಮಗೆ ನಮ್ಮ ಹಳ್ಳಿ, ದನಗಳು ಎಲ್ಲಾ ಇಷ್ಟವಾಯ್ತು ಅಲ್ವಾ?" ಕೇಳಿದ.

"ಹೌದು. ಬೆಂಗಳೂರಿನಲ್ಲಿ ಇದನ್ನೆಲ್ಲ ನಾನು ನೋಡಿರಲೇ ಇಲ್ಲ."

"ನೀವು ಮನಸ್ಸು ಮಾಡಿದರೆ, ಈ ಹಳ್ಳೀಲೇ ಇರಬಹುದು. ಒಪ್ತೀರಾ?" ಅವನ ಮಾತಿನ ಇಂಗಿತ ಅರ್ಥವಾಯಿತು. ಮಾತನಾಡದೇ ಸುಮ್ಮನೇ ನಿಂತಳು.

"ನನ್ನನ್ನು ಮದುವೆ ಆಗ್ತೀರಾ ಅಂತ ಅವತ್ತೇ ಕೇಳಿದ್ದೆ. ನೀವು ಇದುವರೆಗೂ ಉತ್ತರಾನೇ ಹೇಳಲಿಲ್ಲ." ಸಾವಿತ್ರಿ ಈಗ ಮಾತನಾಡಲೇ ಬೇಕಾಗಿತ್ತು.

"ನನ್ನ ಬಾಳಿನಲ್ಲಿ ನಡೆದ ಕೆಲವು ಘಟನೆಗಳನ್ನು ನಿಮಗೆ ತಿಳಿಸ್ತೀನಿ. ಆಮೇಲೂ ನೀವು ನನ್ನನ್ನು ಒಪ್ಪಿದರೆ , ನಾನೂ ಒಪ್ಪಬಹುದೇನೋ......"

"ಹಾಗಂದರೆ ಹೇಗೆ? ಒಂದು ವೇಳೆ ಯಾರೂ ಒಪ್ಪದಿದ್ದರೆ ಹೀಗೇ ಇದ್ದು ಬಿಡ್ತೀರಾ?"

"ಹುಂ. ನನಗೆ ಬೇಜಾರೇನಿಲ್ಲ. ಮನುಷ್ಯನಿಗೆ ಮದುವೆ ಒಂದೇ ಮುಖ್ಯವಲ್ಲ ಅನ್ನುವುದು ನನ್ನ ಅರಿವಿಗೆ ಬಂದಿದೆ. ಒಂಟಿಯಾಗಿ ಎಷ್ಟೋ ವರ್ಷ ಕಾಲ ಕಳೆದಿದೀನಿ. ಮುಂದೆಯೂ ಹಾಗೇ ಇರ್ತೀನಿ"

"ಎಲ್ಲಿದ್ರಿ? ಏನಾಗಿತ್ತು ನಿಮಗೆ?" ಸಂಶಯದಿಂದ ಕೇಳಿದ.

"ಎಲ್ಲಾ ಹೇಳ್ತೀನಿ ಆಮೇಲೆ ನೀವು ಯೋಚನೆ ಮಾಡಿ, ಒಂದು ಇತ್ಯರ್ಥಕ್ಕೆ ಬನ್ನಿ. ನೀವು ಒಪ್ಪದಿದ್ದರೂ ನನಗೆ ನಿರಾಶೆಯೇನಿಲ್ಲ. ಆದರೆ ನನ್ನನ್ನು ಮದುವೆ ಯಾಗಲು ಬಯಸುವವರಿಗೆ ಈ ವಿಷಯವನ್ನು ತಿಳಿಸದೇ ಇರುವುದು ಸರಿಯಲ್ಲ

ಎಂದು ನನ್ನ ಅನ್ನಿಸಿಕೆ."

"ಓ...ಹಾಗಾದ್ರೆ ಏನೋ ಭಾರಿ ನಡೆದಿದೆ.ಇಲ್ಲಿ ಬೇಡ. ಕೊಟ್ಟಿಗೆಯ ಹಿಂದೆ ಒಂದು ಮೈದಾನವಿದೆ. ಅಲ್ಲಿ ಹುಲ್ಲಿನ ಬಣವೆಗಳಿವೆ. ಬಣವೆ ಹಿಂದೆ ಕುಳಿತು ಮಾತನಾಡಿದರೆ, ಯಾರಿಗೂ ಕಾಣಿಸುವುದಿಲ್ಲ."

"ಯಾಕೆ? ನಾವು ಮಾತನಾಡುವುದನ್ನುಯಾರೂ ನೋಡಬಾರದಾ?"

"ಹಾಗಲ್ಲ. ಇದು ನಮ್ಮ ವಿಷಯ. ನಮ್ಮಿಬ್ಬರಲ್ಲೇ ಇರಲಿ ಅಂತ ಎಲ್ಲರಿಗೂ ಏಕೆ ತಿಳಿಯಬೇಕು?"

"ಸರಿ.ನಿಮ್ಮಿಷ್ಟ." ಸಾವಿತ್ರಿ ಅವನ ಹಿಂದೆ ನಡೆದಳು.

"ನನ್ನ ಬಗ್ಗೆ ನಿಮ್ಮ ಅಭಿಪ್ರಾಯವೇನು?" ತಾನಾಗಿಯೇ ಕೇಳಿದ.

"ಮುಕುಂದನಷ್ಟು ಒಳ್ಳೆಯವರಲ್ಲ ಅಂತ ಅನ್ನಿಸುತ್ತೆ. ನೇರವಾದ ಮಾತ ನಾಡಿದ್ದಳು.

"ಅವನು ಎಷ್ಟೋ ವರ್ಷದಿಂದ ಸಿಟಿಯಲ್ಲೇ ಇದಾನೆ.ನಯವಾಗಿ ಮಾತ ನಾಡ್ತಾನೆ. ಇಲ್ಲಿ ಹಳ್ಳಿಯವರ ಜತೆ ನಯವಾಗಿ ಮಾತನಾಡಿದರೆ ಕೆಲಸ ಸಾಗ ಬೇಕಲ್ಲ.... ಒರಟಾಗಿ ಮಾತನಾಡಿದ್ರೇ ಅವರಿಗೆ ಅರ್ಥವಾಗುವುದು. ಹಾಗಾಗಿ ನಾನೂ ಮಾತಿನಲ್ಲಿ ಒರಟು ಅಷ್ಟೇ..."

"ನೀವು ನಯವಾಗಿ ಮಾತನಾಡಿ. ಅವರಿಗೂ ಹೇಳಿಕೊಡಿ, ಅವರೂ ಕಲಿಯುತ್ತಾರೆ"

"ಅಷ್ಟು ಸುಲಭವಲ್ಲ. ಅವರು ಮನುಷ್ಯರೇ ಅಲ್ಲ. ದನಗಳು"

"ಒಬ್ಬ ಮನುಷ್ಯನೇ.... ಇನ್ನೊಬ್ಬರನ್ನು ಮನುಷ್ಯರಲ್ಲ ಅನ್ನುವಾಗ ಇಲ್ಲಿ ಯಾರು ಯಾರು ಯಾವ ಯಾವ ಪ್ರಾಣಿ?" ಸಾವಿತ್ರಿ ವ್ಯಂಗ್ಯವಾಗಿ ಕೇಳಿದಾಗ ಅವನು, ಸಿಟ್ಟಿನಿಂದ ಹೇಳಿದ.

"ನೀವು ನನಗೆ ಅವಮಾನ ಮಾಡ್ತಿದೀರಿ ಸಾವಿತ್ರಿ....."

"ಇಲ್ಲ. ಜೋಕ್ ಮಾಡಿದೆ. ಅಷ್ಟೇ....ನಿಮಗೆ ಅರ್ಥವಾಗಲಿಲ್ಲ"ಇಬ್ಬರೂ ಬಣವೆಯ ಹತ್ತಿರ ಬಂದರು.

"ನೋಡಿ ಇಲ್ಲಿ ಕೂತರೆ ಯಾರಿಗೂ ಕಾಣುವುದಿಲ್ಲ. ಏನು ಬೇಕಾದರೂ ಮಾಡಬಹುದು" ರಾಜೇಂದ್ರ ಕೆಟ್ಟದಾಗಿ ನಕ್ಕ.

ಸಾವಿತ್ರಿ ಸಂದೇಹದಿಂದ ಅವನನ್ನೇ ನೋಡಿದಳು. ಹುಲ್ಲಿನ ಮೇಲೆ ಕುಳಿತ

ರಾಜೇಂದ್ರ ಅವಳ ಕೈ ಹಿಡಿದೆಳೆದ. ಸಾವಿತ್ರಿ ಕೊಸರಿಕೊಂಡಳು.

"ನನಗೆ ಇದೆಲ್ಲಾ ಇಷ್ಟವಿಲ್ಲ...ರಾಜೇಂದ್ರ. ದೂರ ನಿಂತು ಮಾತನಾಡೋಣ" ಹಿಂದೆ ಸರಿದಳು.

"ನೀವು ಸಿಟಿಯವರು. ನಿಮಗೆ ಇದೆಲ್ಲಾ ಅಭ್ಯಾಸವಿರುತ್ತೆ ಅಂತ ಅಂದುಕೊಂಡೆ. ಅದೇನು ಹೇಳ್ತೀರೋ ಹೇಳಿ ಬಿಡಿ" ಕೈ ಕೊಡವಿಕೊಂಡ.

"ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ, ಆಕ್ಸಿಡೆಂಟ್‌ನಲ್ಲಿ ನನ್ನ ಕಣ್ಣುಗಳು ಹೋಗಿದ್ದವು. ಆಗ ನಾನು ಓದನ್ನು ಬಿಟ್ಟು ಸಂಗೀತ ಅಭ್ಯಾಸವನ್ನು ಪ್ರಾರಂಭಿಸಿದೆ. ನನ್ನ ಸಂಗೀತವನ್ನು ಮೆಚ್ಚಿ ನನ್ನನ್ನೊಬ್ಬರು ಪ್ರೀತಿಸಿದರು. ಅವರ ಪ್ರೀತಿಗೆ ಒಲಿದು ಅವರವಳಾದೆ. ಅವರಿಗೆ ಮದುವೆ ಆಗಿತ್ತು. ಆದರೂ ನಾನೂ ಅವರನ್ನು ಪ್ರೀತಿಸಿದೆ. ಯಾರಿಗೂ ನಮ್ಮಿಬ್ಬರ ವಿಷಯ ತಿಳಿದಿರಲಿಲ್ಲ. ಆಮೇಲೆ ನನಗೆ ಒಂದು ಮಗು ಸಹ ಹುಟ್ಟಿತು. ಅದನ್ನು ಮಕ್ಕಳಿಲ್ಲದ ದಂಪತಿಗಳು ಸಾಕಿಕೊಂಡರು. ಆದರೆ, ಅದೇನು ಚಮತ್ಕಾರವೋ ಹೆರಿಗೆಯ ಸಮಯದಲ್ಲಿ ನನ್ನ ದೃಷ್ಟಿ ವಾಪಸ್ಸು ಬಂದಿತ್ತು. ಹಾಗಾಗಿ ನಾನು ಈಗ, ನಾನು ಪ್ರೀತಿಸಿದವನಿಂದ ದೂರವಾಗಿ ಇರಲು ಬಯಸುವೆ. ನನ್ನ ಮಗುವೂ ನನ್ನ ಬಳಿಯಲ್ಲಿಲ್ಲ. ಇದನ್ನೆಲ್ಲ ತಿಳಿಸದೇ ಮುಚ್ಚಿಟ್ಟು ಮದುವೆಯಾಗುವ ಆಸೆ ನನಗಿಲ್ಲ..." ರಾಜೇಂದ್ರ ಗೊಂದಲಕ್ಕೆ ಸಿಕ್ಕಿಬಿದ್ದ.

ಸಾವಿತ್ರಿ ನಸು ನಕ್ಕಳು.

"ಬಹುಶಃ ನೀವು ಒಪ್ಪುವುದಿಲ್ಲವೆಂದು ನನಗೆ ಗೊತ್ತಾಗ್ತಾ ಇದೆ. ಏಕೆಂದರೆ ನೀವು ಮದುವೆಯಾಗುವ ಹೆಣ್ಣು ಪರಿಶುದ್ಧಳಾಗಿರಬೇಕು... ಅಲ್ಲವೆ?"

"ನಾನು ಯೋಚಿಸಬೇಕು..." ಎಂದ ತೊದಲುತ್ತಾ.

"ಯೋಚಿಸಲು ಏನಿದೆ? 'ಹೂಂ' ಅಥವಾ 'ಇಲ್ಲ'. 'ಹೂಂ' ಎನ್ನಲು ಆಸೆಯಿಲ್ಲ. ಇಲ್ಲ ಎನ್ನಲು ಧೈರ್ಯವಿಲ್ಲ.. ಅಲ್ಲವೆ?" ಅವನನ್ನು ಕೆಣಕಿದಳು.

"ಹಾಗಲ್ಲ ಸಾವಿತ್ರಿ. ನಿನ್ನನ್ನು ಕಂಡಾಗಿನಿಂದ ನಿನ್ನ ಮೇಲಿನ ಆಸೆ ನನಗಾಗಿದೆ. ಒಂದು ಸಲ ನೀನು ನನ್ನವಳಾಗು. ಆಮೇಲೆ ನಾನು ಎಲ್ಲರನ್ನು ಒಪ್ಪಿಸ್ತೀನಿ" ಎದ್ದು ನಿಂತ ರಾಜೇಂದ್ರ ಅವಳ ಮೇಲೆ ಬಾಗಿದ.

"ಛೀ.. ದೂರ ಸರಿಯಿರಿ...ನಾನು ಅಷ್ಟು ಕಳಪೆ ಅಂದ್ಕೊಂಡ್ರಾ..! ನಾನು ಹೇಳಿದ ನಿಜಕ್ಕೆ ಮನ್ನಣೆ ಇತ್ತು, ನನಗೆ ಗೌರವ ಕೊಟ್ಟು, ನನ್ನನ್ನು ಮದುವೆಯಾದರೆ, ನಾನು ದಿನಾ ನಿಮ್ಮವಳಾಗ್ತೀನಿ"

"ಮದುವೆ ಬಗ್ಗೆ ಆತುರವೇಕೆ? ಹೇಗೂ ನಿನಗೆ ಅನುಭವವಿದೆ. ಸಂಕೋಚವಿಲ್ಲದೇ ಬಾ. ನಾನು ನಿನ್ನನ್ನು ರಾಣಿಯ ತರಹ ನೋಡಿಕೊಳ್ತೀನಿ" ಮತ್ತೆ ಅವಳನ್ನು ಹಿಡಿಯಲು ಮುಂದಾದ.

"ರೀ ರಾಜೇಂದ್ರ.. ದೂರ ನಿಲ್ಲಿ. ನಿಮ್ಮ ಬಲೆಗೆ ಬೀಳುವವಳಲ್ಲ ನಾನು. ನಾನು ಪ್ರೀತಿಸಿದವನಿಗೆ ನಾನು ಮೈ ಕೊಟ್ಟೆ. ಆದರೆ, ಹಾಗೆ ಅಂತ ಕೇಳಿ ಕೇಳಿದವರಿಗೆಲ್ಲಾ ನಾನು ಸಿಗುವುದಿಲ್ಲ. ನನಗೆ ಇದೆಲ್ಲಾ ಸರಿ ಹೋಗುವುದಿಲ್ಲ."

"ಓಹೋ.. ಮಹಾ ಗರತಿ ನೀನು? ನಿನಗೆ ಏನು ಮಾಡಬೇಕು ಅಂತ ನನಗೆ ಗೊತ್ತು" ಎನ್ನುತ್ತಾ ಅವಳ ಸೀರೆಗೆ ಕೈ ಹಾಕಿದ. ಅವಳು ಅವನ ಕೈ ಹಿಡಿದು ಜೋರಾಗಿ ತಳ್ಳಿದಳು.

"ಹುಷಾರ್! ನನ್ನ ತಂಟೆಗೆ ಬಂದರೆ, ನಿಮ್ಮ ಮನೆಯವರನ್ನೆಲ್ಲಾ ಈಗಲೇ ಸೇರಿಸಿ ನಿಮಗೆ ಅವಮಾನ ಮಾಡ್ತೀನಿ. ಇದೇನು ಭಂಡತನ ನಿಮ್ಮದು?"

"ಯಾರು ಬಂದರೂ ನನಗೀಗ ಹೆದರಿಕೆ ಇಲ್ಲ. ನಿನ್ನ ಕತೇನ ಹೇಳಿ ನೀನೇ ನನ್ನನ್ನು ಕರೆದೆ ಅಂತ ಹೇಳ್ತೀನಿ ಎಲ್ರೂ ನಂಬ್ತಾರೆ" ಕೆಟ್ಟ ನಗೆಯೊಂದಿಗೆ ಅವಳನ್ನು ಹಂಗಿಸಿದ.

"ಹೇಳಿ. ಹೇಳಿ.. ನಾನೇನು ನಿಮ್ಮ ಹಾಗೆ ಹೇಡಿಯಲ್ಲ. ಗುಟ್ಟಾಗಿ ಕರೆದು ಮೋಸ ಮಾಡುವಷ್ಟು ಕೆಟ್ಟವಳಲ್ಲ. ನಾನು ನಿಮಗೆ ಹೇಳಿದ್ದನ್ನು ಅವರಿಗೂ ಹೇಳುತ್ತೇನೆ" ರಾಜೇಂದ್ರ ಸಿಟ್ಟಾದ.

"ನನ್ನನ್ನು ಹೇಡಿ ಅಂತೀಯೇನೇ..." ಎನ್ನುತ್ತಾ ಕೈಗೆ ಸಿಕ್ಕಿದ ಹುಲ್ಲಿನ ಕಂತೆಯೊಂದನ್ನು ಅವಳ ಮೇಲೆ ಒಗೆದ. ಅನಿರೀಕ್ಷಿತ ಧಾಳಿಗೆ ಹೆದರಿ ಅವಳು ಅವನೆಡೆಗೆ ತಿರುಗಿದಳು. ಅವಳನ್ನು ನೆಲದ ಮೇಲೆ ಕೆಡವಿ, ಹುಲ್ಲಿನ ಕಂತೆಯಿಂದ ರಪರಪನೆ ರಾಚಿದ. ಮುಖ ಮೂತಿ ನೋಡದೇ... ಸಾವಿತ್ರಿ ಹೆದರಿ ಕಂಗಾಲಾಗಿದ್ದಳು. ಕಿರುಚಲೂ ಆಗದಂತೆ ಭೀತಳಾಗಿದ್ದಳು.

"ಯಾರೇ ಹೇಡಿ?.. ನಿನಗೇನು ಮಾಡ್ತೀನಿ ನೋಡು" ಎನ್ನುತ್ತಾ ಅವಳನ್ನು ಸಮೀಪಿಸುವುದರಲ್ಲಿದ್ದ. ಅಷ್ಟರಲ್ಲಿ ಹಿಂದಿನಿಂದ ಚಿಕ್ಕಮ್ಮ ಕೂಗಿದ್ದಳು.

"ಏಯ್. ಯಾರೋ ಅದು" ರಾಜೇಂದ್ರ ಹೆದರಿ, ತಿರುಗಿ ನೋಡದೇ ಮರೆಯಾಗಿ ಬಣವೆಯ ಹಿಂದೆ ನಿಂತ. ಕೆಳಗೆ ಬಿದ್ದಿದ್ದ ಸಾವಿತ್ರಿಯ'ಬಳಿಗೆ ಬಂದ ಚಿಕ್ಕಮ್ಮ ಹೆದರಿದಳು. ಸಾವಿತ್ರಿಯನ್ನು ಎಬ್ಬಿಸಿದಳು. ಬಣವೆಯ ಹಿಂದೆ ನಿಂತಿದ್ದ

ರಾಜೇಂದ್ರನನ್ನು ಎಳೆದು ಅವನ ಕೆನ್ನೆಗೆ ಎರಡೇಟು ಬಿಗಿದಳು.

"ನೀನು ಸಭ್ಯ ಅಲ್ಲ ಅಂತ ಗೊತ್ತಿತ್ತು. ಆದರೆ ಮನೆಗೆ ಬಂದ ಪರರ ಮನೆ ಹುಡುಗೀನ ಕೆಡಿಸುಕ್ಕೆ ನೋಡಿದೀಯಾ ಚಂಡಾಲ... ತಪ್ಪಾಯ್ತು ಅಂತ ಕೇಳಿಕೋ... ಇಲ್ಲದಿದ್ರೆ ಊರು ಹೊಲಗೇರಿ ಒಂದು ಮಾಡಿ ಬಿಡ್ತೀನಿ."

"ಥೂಡು ನನಗೇನು? ನಾನು ಸಭ್ಯನಲ್ಲ? ಆದರೆ ಇವಳೂ ಸರಿ ಇಲ್ಲ. ಗಯ್ಯಾಳಿ. ಅವಳನ್ನೇ ಕೇಳು. ಅವಳ ಕತೆ ಹೇಳ್ತಾಳೆ"

"ಮನೆಗೆ ಬಂದವರಿಗೆ ಹೀಗೆಲ್ಲಾ ಅವಮಾನ ಮಾಡಿದರೆ ನಿನ್ನ ಗತಿ ನೆಟ್ಟಗಾಗುವುದಿಲ್ಲ. ಪಂಚಾಯಿತಿ ಕಟ್ಟೆ ಹತ್ತಿಸ್ತೀನಿ" ರಾಜೇಂದ್ರ ಅವಳ ಕೈ ಬಿಡಿಸಿಕೊಂಡು ಓಡಿಹೋದ. ಚಿಕ್ಕಮ್ಮ ಬೈಯುತ್ತಲೇ ಇದ್ದಳು.

"ಹೋಗಲಿ ಬಿಡಿ. ನೀವು ಬಂದು ನನಗೆ ಉಪಕಾರ ಮಾಡಿದಿರಿ. ನನ್ನಿಂದ ಅವರಿಗೆ ಅವಮಾನವಾಗಬಾರದು. ನಾನು ನಾಳೇನೇ ಊರಿಗೆ ಹೊರಟು ಹೋಗ್ತೀನಿ. ದಯವಿಟ್ಟು ಯಾರಿಗೂ ಏನನ್ನೂ ತಿಳಿಸಬೇಡಿ." ಸಾವಿತ್ರಿ ಬೇಡಿಕೊಂಡಳು.

"ನಿನಗೆ ಗೊತ್ತಿಲ್ಲ. ನಮ್ಮ ಮನೆತನದ ಮರ್ಯಾದೆ ಕಳೆಯುಕ್ಕೆ ಹುಟ್ಟಿದಾನೆ ಇವನು. ನೀನು ದೊಡ್ಡ ಮನಸ್ಸು ಮಾಡಿ, ಇವನನ್ನು ಮದವೆಯಾದರೆ, ಇವನೂ ದಾರಿಗೆ ಬರಬಹುದು."

"ಅದು ನಿಮ್ಮ ಕಲ್ಪನೆ... ಅವರಿಗೆ ನನ್ನನ್ನು ಮದುವೆಯಾಗುವ ಆಸೆ ಇಲ್ಲ. ಹಾಗಿದ್ದಿದ್ರೆ ಪತ್ನಿಯಾಗುವವಳ ಜತೆ ಯಾರಾದ್ರೂ ಹೀಗೆ ನಡೆದುಕೊಳ್ತಾರಾ?... ನೀವೇ ಹೇಳಿ..." ಸಾವಿತ್ರಿ ತಲೆತಗ್ಗಿಸಿದ್ದಳು.

"ಹೋಗಲಿ ಬಿಡು, ಅವನು ನಿನಗೆ ತಕ್ಕವನಲ್ಲ. ಅವನನ್ನು ಕ್ಷಮಿಸಿಬಿಡು. ಮುಕುಂದನಿಗೆ ಏನನ್ನು ಹೇಳಬೇಡ. ಅವನಿಗೆ ಮೊದಲೇ ಇವನ ಮೇಲೆ ಸಂದೇಹ"

ಚಿಕ್ಕಮ್ಮನ ಆಸರೆಯಿಂದ ಸಾವಿತ್ರಿ ಎದ್ದು ನಿಂತು, ಸಾವರಿಸಿಕೊಂಡಳು. ಹುಲ್ಲಿನ ಕಂತೆಯ ಹೊಡೆತದಿಂದ ಮೈ, ಕೈಯೆಲ್ಲ ಬಾಸುಂಡೆಯಿಂದ ತುಂಬಿ ಹೋಗಿತ್ತು. ನೋವು ಉರಿಗಳನ್ನು ತಾಳಲಾರದೇ ನರಳಿದಳು.

"ಈಗಲೇ ಡಾಕ್ಟರ ಹತ್ತಿರ ಕರೆದುಕೊಂಡು ಹೋಗ್ತೀನಿ" ಎನ್ನುತ್ತಾ ಅವಳನ್ನು ನಿಧಾನವಾಗಿ ನಡೆಸಿಕೊಂಡು ಬಂದಳು. ಎಲ್ಲರೂ ಅವಳನ್ನು ಸುತ್ತುವರೆದು ಏನಾಯ್ತು? ಏನಾಯ್ತು ಎಂದು ಗಾಭರಿಯಿಂದ ಕೇಳಿದರು.

ಸಾವಿತ್ರಿ ಕಷ್ಟ ಪಟ್ಟು ನಗುತ್ತಾ ಹೇಳಿದಳು.

"ಕರೂನ ಹಿಡಿಯುಕ್ಕೆ ಅಂತ, ಅದರ ಹಿಂದೆ ಹಿಂದೆ ಓಡುತ್ತಿದ್ದೆ. ಹುಲ್ಲಿನ ಬಣವೆ ಹತ್ತಿರ ನಿಂತಿದ್ದ ಹಸು ನನ್ನನ್ನು ತಿವಿದು ಬೀಳಿಸಿತು. ಸಮಯಕ್ಕೆ ಸರಿಯಾಗಿ ರಾಜೇಂದ್ರ ಬಂದು ಹಸುವನ್ನು ಹಿಡಿಯದಿದ್ದರೆ ನನ್ನ ಗತಿ ಏನಾಗ್ತಿತ್ತೋ .. ಏನೋ..." ಜಾನಕಮ್ಮ ಆ ಮಾತನ್ನು ಆಲಿಸಲಿಲ್ಲ.

"ರಾಜೇಂದ್ರ ಎಲ್ಲಿ?" ಮುಕುಂದ ಅನುಮಾನದಿಂದ ಕೇಳಿದ.

"ಹಸೂನ ಹೊಡೆದುಕೊಂಡು ಹೋಗಿದಾನೆ.. ನೀನೀಗಲೇ ಹೋಗಿ ಡಾಕ್ಟರನ್ನು ಕರೆದುಕೊಂಡು ಬಾ" ಮುಕುಂದ ತಕ್ಷಣ ಬೈಕ್ ಹತ್ತಿದ.

ಸುಕನ್ಯ ತಂಗಿಯ ಮೇಲೆ ಗದರಿದಳು.

"ಇನ್ನೇನಾಗುತ್ತೆ ಅಷ್ಟು ಕುಣಿದರೆ? ಕರೂನ ಹಿಂದೆ ಹಿಂದೆ ಸುತ್ತಿದರೆ ಹಸೂಗೆ ಸಿಟ್ಟು ಬಾರದೇ ಇರುತ್ತಾ? ಸರಿಯಾಗಿ ಮಾಡ್ತು ಬಿಡು"

"ಪ್ಲೀಸ್, ಸುಮ್ಮನಿರು. ಮೊದಲೇ ಗಾಯ ಉರೀತಿದೆ. ನೀನು ಅಂದು ಹೊಟ್ಟೆ ಉರಿಸಬೇಡ" ಜಾನಕಮ್ಮ ತನ್ನ ಅನುಮಾನವನ್ನು ವ್ಯಕ್ತ ಪಡಿಸಿದಳು.

"ಮೊನ್ನೆ ದಿನ ಚೆನ್ನಾಗಿ ದೃಷ್ಟಿ ತಗುಲಿದೆ. ದೃಷ್ಟಿ ನೀವಾಳಿಸಿ ತೆಗೆಯಲು ಮುಕುಂದ ಬಿಡಲಿಲ್ಲ. ಯಾರ್‍ಯಾರ ಕಣ್ಣು ಬಿದ್ದಿತ್ತೋ.. ಬಿಸಿಲ್ನಲ್ಲಿ ಅಲೆದಾಡುತ್ತಿದ್ದ ಯಾವ ಗಾಳಿ ಬಂದು ಅಡರಿಕೊಂಡಿತೋ..?" ಜಾನಕಮ್ಮ ಲೊಚಗುಟ್ಟಿದಳು.

"ಈ ಕಾಲದಲ್ಲಿ ಅದನ್ನೆಲ್ಲ ಯಾರು ನಂಬ್ತಾರೆ?" ಚಿಕ್ಕಮ್ಮ ಕೇಳಿದಳು.

"ಮಟ ಮಟ ಮಧ್ಯಾಹ್ನ, ಒಂಟಿ ಹೆಂಗಸ್ರು.. ಸುತ್ತಾಡಿದ್ರೇ.... ಹೀಗೇನಾದ್ರೂ ಆಗುತ್ತೆ ಅಂತ ಹಿಂದೇನೂ ಯಾರೋ ಹೇಳಿದ್ರು.. ಅಲ್ವೇನೇ ಸರಸು..?" ಜಾನಕಮ್ಮ ಕೇಳಿದಳು.

ಸರಸು ನಕ್ಕಳು.

ಮಧ್ಯಾಹ್ನದ ಹೊತ್ತು ಆ ಹೆಂಗಸರಿಗೆ ಯಾವ ಗಾಳಿ ಬಡಿದಿತ್ತು ಎನ್ನುವುದು ಸರಸುವಿಗೆ ಅರ್ಥವಾಗಿತ್ತು.

ಡಾಕ್ಟರು ಬಂದು ನೋಡಿ, ಇಂಜೆಕ್ಷನ್ ಕೊಟ್ಟು, ಹಚ್ಚಿಕೊಳ್ಳಲು ಕ್ರೀಂನ್ನು ಬರೆದು ಕೊಟ್ಟರು. ನಾಳೆ ಹೊತ್ತಿಗೆ ಊತ, ಉರಿ, ಎಲ್ಲಾ ಕಡಿಮೆ ಆಗುತ್ತೆ. ಏನೂ ಭಯವಿಲ್ಲ" ಎಂದರು.

"ಥಳಥಳನೆ ಹೊಳೆಯುತ್ತಾ ಇದ್ದ ಹುಡುಗಿಗೆ ಎಂಥ ಸ್ಥಿತಿ ಬಂತು? ಚೆನ್ನಾಗಿ ವಾಸಿ ಆದಮೇಲೆ ಇವಳನ್ನು ಊರಿಗೆ ಕಳಿಸೋಣ." ತಂದೆ ನುಡಿದಾಗ ಎಲ್ಲರೂ

ಅದನ್ನೇ ಅನುಮೋದಿಸಿದರು.

ಎಲ್ಲರೂ ಅಭಿಮಾನದಿಂದ ಸಾವಿತ್ರಿಯನ್ನು ಉಪಚರಿಸಿದಾಗ ಸುಕನ್ಯಳಿಗೆ ರೇಗಿ ಹೋಯ್ತು.

"ನಾಳೇನೇ ಈ ಊರಿನಿಂದ ಹೋಗಿ ಬಿಡೋಣ ಸಾಕಾಯ್ತು ಈ ಸಹವಾಸ" ಮುಕುಂದನೊಡನೆ ಹೇಳಿದಳು.

"ಅವಳು ನರಳ್ತಾ ಮಲಗಿದ್ದಾಗಲೂ ಅವಳ ಮೇಲೆ ರೇಗ್ತೀಯಲ್ಲಾ?"

"ಅವಳ ಚೆಲ್ಲಾಟ ಜಾಸ್ತಿಯಾಯ್ತು. ಇನ್ನು ಇಲ್ಲೇ ಇದ್ದರೆ ನನಗೆ ಕೆಟ್ಟ ಹೆಸರು ಬರುತ್ತೆ. ನನ್ನ ಮೈಯೆಲ್ಲಾ ಉರಿದು ಹೋಗ್ತಿದೆ."

ಕಳ್ಳನಂತೆ, ಬೆಕ್ಕಿನ ಹೆಜ್ಜೆ ಇಡುತ್ತಾ ಒಳಸೇರಿದ್ದ ರಾಜೇಂದ್ರನ ಮೇಲೆ ಮುಕುಂದನಿಗೆ ಅನುಮಾನ. ಹಗರಣವೆಲ್ಲ ಮುಗಿದು, ಆನಂದ ಮತ್ತೆ ಮನೆ ಸೇರಿದ್ದ. ಈಗ ಮತ್ತೆ ಏನಾದರೂ ಹಗರಣವಾಗಿ ರಾಜೇಂದ್ರ ಮನೆ ಬಿಟ್ಟು ಹೋದರೆ...? ಅಲ್ಲದೇ ಸಾವಿತ್ರಿ ಅವನ ಮೇಲೆ ಯಾವ ಅನುಮಾನ ಬರುವಂತೆ ಮಾತನ್ನಾಡಿರಲಿಲ್ಲ. ತಾನಾಗಿಯೇ ಈಗ ಕೇಳಿದರೆ, ಸುಮ್ಮನೆ ಹಳ್ಳೀಗೆಲ್ಲ ತಿಳಿಯುತ್ತೆ ಎನಿಸಿ ತನ್ನ ಕೋಪವನ್ನು ಅದುಮಿಟ್ಟುಕೊಂಡ.

ರಾಜೇಂದ್ರನಿಂದ ಸಾವಿತ್ರಿಗೆ ಏನಾಗಿಲ್ಲ ಎನ್ನುವುದು ಖಚಿತವಾಗಬೇಕಾಗಿತ್ತು. ಚಿಕ್ಕಮ್ಮನ ಒತ್ತಾಯ ಮಾಡಿ, ಎಲ್ಲಾ ಕೇಳಿ ತಿಳಿದುಕೊಂಡ.

"ಇವನಂಥವನಿಂದ ಮರ್‍ಯಾದೆ ಬರುವುದಿಲ್ಲ. ಯಾವುದಾದ್ರೂ ಹುಡುಗೀನ ಅವನ ತಲೆಗೆ ಕಟ್ಟಿ. ಎತ್ಲಾಗಾದ್ರೂ ಹಾಳಾಗಿ ಹೋಗಲಿ" ಬೈದ. ಸಾವಿತ್ರಿಯೇ ನಾದರೂ ಅವನ ಮೇಲೆ ಹೇಳಿದ್ದಿದ್ರೆ, ಸುಕನ್ಯ ತನ್ನನ್ನು ಸುಮ್ಮನೇ ಬಿಡುತ್ತಿದ್ದಳಾ? ಸುಕನ್ಯ ಹೇಳಿದ್ದು ಸರಿ. ಸಾಕಾಯ್ತು ಈ ಹಳ್ಳಿ ಸಹವಾಸ. ನಾವು ನಾಳೇನೇ ಹೊರಡ್ತೀವಿ" ಮುಕುಂದ ಬೇಸರದಿಂದ ನುಡಿದ.

ಅದರಂತೆ ಮಾರನೇ ದಿನವೇ ಊರಿಗೆ ಹೊರಟರು. ಸಾವಿತ್ರಿ ಎಲ್ಲರಿಗೂ ಹೋಗಿ ಬರ್ತೀನಿ ಎಂದು ತಿಳಿಸಿ, ನಮಸ್ಕರಿಸಿದಳು. ತಾತ ವಾತ್ಸಲ್ಯದಿಂದ ಅವಳ ತಲೆ ಸವರಿ,

"ಏನಮ್ಮಾ ಎಷ್ಟು ಹೆದರಿಸಿ ಬಿಟ್ಟಿದ್ದೆ.... ನಿನಗೇನಾದ್ರೂ ಹೆಚ್ಚು ಕಡಿಮೆ ಆಗಿದ್ದಿದ್ರೆ, ನಿಮ್ಮ ತಾಯಿಗೆ ಏನುತ್ತರ ಹೇಳಬೇಕಾಗಿತ್ತು ನಾವು? ಇನ್ನು ಒಂದೆರಡು ದಿನ ಇದ್ದು ಸುಧಾರಿಸಿಕೊಂಡು ಹೋಗಬಹುದಲ್ಲಾ?"

"ನಿಮ್ಮಂಥವರ ಮನೆಯಲ್ಲಿ ಯಾರಿಗೂ ಏನೂ ಆಗುವುದಿಲ್ಲ ತಾತಾ, ... ನಿಮ್ಮ ಪುಣ್ಯ ನನ್ನನ್ನು ಕಾಪಾಡಿದೆ. ನಿಮ್ಮ ಮನೆಯವರ ಉಪಕಾರ, ಸಹಕಾರ, ಸದಾ ನನ್ನ ನೆನಪಿನಲ್ಲಿರುತ್ತೆ. ಊರಿನಲ್ಲೇ ಸುಧಾರಿಸಿಕೊಳ್ತೀನಿ" ಸಾವಿತ್ರಿ ಅವರ ಕಾಲುಗಳನ್ನು ಮುಟ್ಟಿ ನಮಸ್ಕರಿಸಿದಳು.

"ಬಹಳ ದೊಡ್ಡ ಮಾತನಾಡಿದೆ ತಾಯಿ... ಬೇಗ ಮದುವೆಯಾಗಿ ಸುಖ ವಾಗಿರು." ತಾತ ಹರಿಸಿದರು.

"ನಿಮ್ಮ ಅಭಿಮಾನದಿಂದ, ಆಶೀರ್ವಾದದಿಂದ ನಾನು ಸುಖವಾಗಿರ್ತೀನಿ" ಸಾವಿತ್ರಿ ಮರು ನುಡಿದಳು.

ಜಾನಕಮ್ಮ ಸಾವಿತ್ರಿಗೆ ಸೀರೆ, ಕುಪ್ಪಸವನ್ನು ಓದಿಸಿದರು.

"ಮುಕುಂದನ ಮದುವೇಲಿ ನಿನಗೆ ಕೊಟ್ಟಿರಲಿಲ್ಲ. ಬೇಡ ಅನ್ನಬೇಡ" ಸಾವಿತ್ರಿ ಸಂಕೋಚದಿಂದ ತೆಗೆದುಕೊಂಡಳು.

ಟ್ಯಾಕ್ಸಿ ಮನೆ ಬಾಗಿಲಿಗೆ ಬಂದು ನಿಂತ ಮೇಲೆ, ಸಾವಿತ್ರಿ ಅತ್ತ ಇತ್ತ ನೋಡಿದಳು. ಎರಡು ದಿನಗಳಿಂದ ರಾಜೇಂದ್ರ ಅವಳ ಕಣ್ಣಿಗೆ ಬಿದ್ದಿರಲಿಲ್ಲ. ಅವನ ಧ್ವನಿ ಕೂಡಾ ಕೇಳಿಸಿರಲಿಲ್ಲ.

"ರಾಜೇಂದ್ರ ಎಲ್ಲಿ? ಕಾಣಿಸ್ತಿಲ್ಲ?" ವಿಮಲನ್ನ ಕೇಳಿದಳು ಅವರೊಬ್ಬರಿಗೆ ಇನ್ನೂ ಹೇಳಿಲ್ಲ."

"ತಾತನ ರೂಮಿನಲ್ಲಿದಾನೆ. ಮಲಗಿದಾನೆ. ಹುಶಾರಿಲ್ಲವಂತೆ"

ಅವನ ಮನಸ್ಸಿಗೆ ಹುಶಾರಿಲ್ಲ ಎಂದುಕೊಂಡು, ತನ್ನಲ್ಲೇ ನಕ್ಕಳು. ಅವನು ಇದ್ದಲ್ಲಿಗೇ ಹೋದಳು. ಬಾಗಿಲ ಬಳಿ ನಿಂತು ಇಣುಕಿ ನೋಡಿದಳು. ರಾಜೇಂದ್ರ ಕಿಟಕಿಯ ಬಳಿ ನಿಂತು ಆಚೆ ಕಡೆ ನೋಡುತ್ತಿದ್ದ. ಸಾವಿತ್ರಿ ಒಳಕ್ಕೆ ಕಾಲಿಟ್ಟಳು. ಹೆಜ್ಜೆಯ ಸಪ್ಪಳಕ್ಕೆ ಅವನು ತಿರುಗಿದ್ದ.

"ನಿಮಗೆ ಹುಶಾರಿಲ್ಲ ಅಂತ ವಿಮಲ ಹೇಳಿದಳು. ಅದಕ್ಕೆ ಇಲ್ಲಿಗೇ ಬಂದೆ. ನಾನು ಊರಿಗೆ ವಾಪಸ್ಸು ಹೊರಟಿದೀನಿ. ಹೇಳಿ ಹೋಗೋಣ ಅಂತ ಬಂದೆ. ಬೇಗ ಹುಶಾರಾಗಿ" ರಾಜೇಂದ್ರ ಕಲ್ಲಿನಂತೆ ಅಲುಗಾಡದೇ ನಿಂತಿದ್ದ.

"ನನಗೆ ನಿಮ್ಮ ಬಗ್ಗೆ ಮರುಕ ಉಂಟಾಗುತ್ತೆ.... ನನ್ನ ಮೇಲೆ ನಿಮಗೆ ಎಂತಹ ಭಾವನೆ ಇದೆ ಎಂದು ನನಗೆ ಅರ್ಥವಾಗಿದೆ. ನಿಮಗುಂಟಾದ ನಿರಾಸೆ, ಸೇಡಿನ ರೂಪ ವನ್ನು ತಾಳಿದೆ. ಒಳೊಳಗೇ ಉರಿದು ಹೋಗುತ್ತಿದೀರಿ...ದಯವಿಟ್ಟು ಹಾಗೆ ಹಾಳಾಗ

ಬೇಡಿ. ಅದರಿಂದ ನಿಮಗೂ ಕೇಡು...ನಿಮ್ಮ ಮನೆಯವರಿಗೂ ಕೇಡು... ಎಲ್ಲವನ್ನೂ ಮರೆತು ನಿಮ್ಮನ್ನು ಪ್ರೀತಿಸುವ, ನಿಮಗೆ ಸರಿಹೊಂದುವಂತಹ ಹುಡುಗಿಯನ್ನು ಮದುವೆಯಾಗಿ, ಸುಖವಾಗಿರಲು ಪ್ರಯತ್ನಿಸಿ. ನನ್ನ ಶುಭ ಹಾರೈಕೆ ಸದಾ ನಿಮಗಿದೆ... ಹ್ಞಾಂ. ಇನ್ನು ಒಂದು ಮಾತು.. ಎಲ್ಲಕ್ಕಿಂತ ಮೊದಲು ಒಬ್ಬ ಒಳ್ಳೆಯ ಸ್ನೇಹಿತನಾಗುವುದನ್ನು ಕಲಿಯಿರಿ... ನಾನಿನ್ನು ಬರ್ತೀನಿ" ಅವನಿಂದ ಉತ್ತರವನ್ನೇನೂ ನಿರೀಕ್ಷಿಸಿರಲಿಲ್ಲವಾದ್ದರಿಂದ ಹಿಂತಿರುಗಿ, ರೂಮಿನ ಹೊರಕ್ಕೆ ಅಡಿ ಇಟ್ಟಳು.

ಹಿಂದಿರುಗಿ ನೋಡದೇ ಸರಸರನೇ ನಡೆದು ಹೋದವಳ ಬೆನ್ನನ್ನೇ ದಿಟ್ಟಿಸಿದ ರಾಜೇಂದ್ರ. ಎಷ್ಟೋ ಹೊತ್ತಿನ ತನಕ ಹಾಗೇ ನಿಂತಿದ್ದ. ಟ್ಯಾಕ್ಸಿ ಹೊರಟ ಸದ್ದು ಕೇಳಿಸಿದರೂ ಕಿಟಕಿಯಿಂದ ಇಣುಕಿ ನೋಡುವ ಸಾಹಸವನ್ನು ಮಾಡಲಿಲ್ಲ.

ಟ್ಯಾಕ್ಸಿ ಹತ್ತಿ, ಕಿಟಕಿಯ ಬಳಿ ಕುಳಿತ ಸಾವಿತ್ರಿ ಎಲ್ಲರಿಗೂ ಕೈ ಬೀಸಿದಳು. ವಿಮಲ, ಮಧು, ಟಾ..ಟಾ.. ಬೈ..ಬೈ.. ಎಂದು ಕೂಗಿದ್ದು ಕೇಳಿಸಿತು. ಟ್ಯಾಕ್ಸಿಯ ಇಂಜನ್ನಿನ ಸದ್ದು ಸಹ ಕೇಳಿಸದಂತಾದಾಗ ರಾಜೇಂದ್ರ ಕಟಕಟನೆ ಹಲ್ಲುಗಳನ್ನು ಕಡಿದ.... ಸಾವಿತ್ರಿಯ ನಗುಮುಖ ಅವನ ಕಣ್ಣ ಮುಂದೆ ತೇಲಿಬಂತು. ಅವಳು ಅಪಹಾಸ್ಯ ಮಾಡಿ ನಕ್ಕಂತೆ ಅನ್ನಿಸಿದಾಗ ಕಣ್ಣುಗಳನ್ನು ತನ್ನ ಕೈಗಳಿಂದ ಬಲವಾಗಿ ಮುಚ್ಚಿಕೊಂಡ.

ಟ್ಯಾಕ್ಸಿ ಮುಂದಕ್ಕೆ ಚಲಿಸಿತ್ತು. ಯಾವ ಭಾವನೆಗಳಿಗೂ ಎಡೆ ಮಾಡಿಕೊಡದೆ ಅಲ್ಲಿ ನಿಂತಿದ್ದವರ ಕಡೆಗೆ ತಿರುಗಿ ಕೈ ಆಡಿಸಿದ್ದಳು ಸಾವಿತ್ರಿ... ಅವಳ ಮನಸ್ಸು ಕಲಕಿ ಹೋಗಿತ್ತು... ರಾಜೇಂದ್ರ ಮೃಗದಂತೆ ವರ್ತಿಸದೇ ಇದ್ದಿದ್ದರೇ... ಮುಕುಂದ, ಸುಕನ್ಯ ತನ್ನನ್ನು ಈ ರೀತಿ ತಮ್ಮ ಕೆಲಸಕ್ಕಾಗಿ ಬಳಸಿಕೊಳ್ಳದೇ ಇದ್ದಿದ್ದರೇ... ಸುರೇಶ, ಪ್ರೀತಿಯ ಸೋಗಿಗೆ ತನ್ನನ್ನು ಎಳೆಯದೇ ಇದ್ದಿದ್ದರೇ... ಛೆ... ನನ್ನ ಜೀವನದಲ್ಲಿ ಒಂದು ನಿಲುಗಡೆ ಎನ್ನುವುದು ಇಲ್ಲವಾಯಿತೇ... ಇದಕ್ಕೆಲ್ಲ ಕಾರಣ ಏನು? ಕಾರಣ ಯಾರು! ಛೆ. ನನಗೆ ಸಾವಿತ್ರಿ ಎಂದು ಯಾಕಾದರೂ ನಾಮಕರಣ ಮಾಡಿದರೋ....? ಸಾವಿತ್ರಿಯಂತೆ ಕಷ್ಟಗಳಿಗೆ ಗುರಿಯಾಗಬೇಕಾಯ್ತು?... ನಾನೇಕೆ ಅಪಘಾತಕ್ಕೆ ಗುರಿಯಾಗಿ ಕಣ್ಣುಗಳನ್ನು ಕಳೆದುಕೊಳ್ಳಬೇಕಾಗಿತ್ತು?! ಅದರಿಂದಲೇ ಇಷ್ಟೆಲ್ಲಾ... ಇಷ್ಟು ಚಿಕ್ಕವಯಸ್ಸಿಗೇ ಯಾರಿಗೂ ಇಷ್ಟು ಅನುಭವಗಳು ಖಂಡಿತಾ ಉಂಟಾಗಿರ ಲಾರದು.. ನನಗೇ ಏಕೆ ಹೀಗಾಯಿತು?.... ಕಣ್ಣುಗಳನ್ನು ಬಲವಾಗಿ ಮುಚ್ಚಿ ಕೊಂಡಳು. ಆದರೂ ಕಲಕಿದ ಚಿತ್ತದ ಭಿತ್ತಿಯಲ್ಲಿ ನಡೆದು ಹೋದ ಘಟನೆಗಳ ಚಿತ್ರಗಳೇ ಒಂದರ ಹಿಂದೆ

ಇನ್ನೊಂದರಂತೆ ಕಾಣಲಾರಂಭಿಸಿದಾಗ... ಭೀತಿಯಿಂದ ಮತ್ತೆ ಕಣ್ಣು ತೆರೆದಳು. ತೆರೆದ ಕಣ್ಣುಗಳ ಮೂಲಕ ತನ್ನ ಮನಸ್ಸಿನ ಭಾವನೆಗಳು ತುಳುಕಿ, ಜತೆಯಲ್ಲಿರುವವರಿಗೆ ತಿಳಿದೀತು ಅಂತ ಅನ್ನಿಸಿದಾಗ, ತನ್ನ ಪರ್ಸಿನೊಳಗಿನಿಂದ ಕಪ್ಪು ಕನ್ನಡಕವನ್ನು ತೆಗೆದು ಧರಿಸಿಕೊಂಡಳು.

ತೀಕ್ಷ್ಣವಾದ ಬೆಳಕಿನ ಪ್ರಖರ ಕಡಿಮೆಯಾದಂತೆ, ಕೆರಳಿದ ಭಾವನೆಗಳೂ ತಗ್ಗಿದವು. ಕಿಟಕಿಯಿಂದ, ಆಚೆಗೆ ಕಂಡು ಬರುವ ದೃಶ್ಯಗಳನ್ನು ನೋಡತೊಡಗಿದಳು. ಗಾಡಿ ಮುಂದೆ ಮುಂದೆ ಹೋದಂತೆ, ಅದಕ್ಕಿಂತ ವೇಗವಾಗಿ, ದೃಶ್ಯಗಳು ಹಿಂದೆ ಹಿಂದೆ ಸರಿಯುತ್ತಿದ್ದವು.

ಹಿಂದೆ ಸರಿದು ಹೋಗುವ ದೃಶ್ಯಗಳನ್ನು ಹಿಂದಕ್ಕೇ ಬಿಟ್ಟು ಬಿಡಬೇಕು. ತಿರುಗಿ ನೋಡಬಾರದು. ಮುಂದೆ ಮುಂದೆ ಕಾಣುವ ದೃಶ್ಯಗಳನ್ನು ಮಾತ್ರ ನೋಡಬೇಕು... ಆಗ ಶ್ರಮವೆನ್ನಿಸುವುದಿಲ್ಲ.... ಹಾಗೇ ಇನ್ನು ಮುಂದೆ ತಾನೇನು ಮಾಡಬೇಕು ಎನ್ನುವುದನ್ನು ಕುರಿತು ಚಿಂತಿಸಬೇಕು... ಹಿಂದಿನ ಘಟನೆಗಳ ಬಗ್ಗೆ ತಲೆಕೆಡಿಸಿಕೊಳ್ಳಬಾರದು....ಎಂದು ತನ್ನಲ್ಲೇ ನಿರ್ಧರಿಸಿಕೊಂಡಳು. ಇನ್ನು ಮುಂದೆ ತನ್ನ ಭವಿಷ್ಯವನ್ನು ತಾನೇ ಹೇಗೆ ರೂಪಿಸಿಕೊಳ್ಳಬೇಕು ಎನ್ನುವುದರ ಬಗ್ಗೆ ಚಿಂತಿಸತೊಡಗಿದಳು.

✧ ✧ ✧



ಕಣ್ಣು ಕಾಣದ ಸುಂದರ ಗಾಯಕಿ ಸಾವಿತ್ರಿಯ ಬಾಳಲ್ಲಿ ಪ್ರವೇಶಿಸಿದ ಗಂಡಸರು ಅವಳಿಗೆ ಕೊಟ್ಟದ್ದು ಕೇವಲ ನೋವು, ದುಃಖ.
ಬದಲಿಗೆ ಅವಳು ಅವರಿಗೆ ಅತ್ಯಮೂಲ್ಯವಾದ ಕಾಣಿಕೆಗಳನ್ನು ಹಿಂದಿರುಗಿಸಿದಳು!
ಅವರ ಜೀವನದಲ್ಲಿ ಪ್ರಾತಃಸ್ಮರಣೀಯಳಾದಳು....

ಪದ್ಮಾಶ್ರೀಧರ್ ಕಾದಂಬರಿ

ಸತ್ಯವಾನನಿಲ್ಲದ ಸಾವಿತ್ರಿ

ಭಾಗೀರಥಿ ಪ್ರಕಾಶನ
190 (ಮಹಡಿ ಮೇಲೆ), 3ನೇ ಅಡ್ಡರಸ್ತೆ,
2ನೇ ಮುಖ್ಯ ರಸ್ತೆ, ಹನುಮಂತನಗರ,
ಬೆಂಗಳೂರು - 560 019.